ISSN: 2249-2429 Volume : 13, Issue : 1, Pages 96, 7th June 2023 Annual Subscription ₹.750/-

RNI REG.NO.KARKAN/2011/38712

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನಾ ಪತ್ರಿಕೆ

**SHIKSHAN SOUDHA** *A Quarterly Education and Research Journal*

Listed in U.G.C. Care List

APPROVED BY UGC CARE

बेटी बचाओ बेटी पढ़ाओ

## ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಯೋಜನೆಗಳು

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣ





## ಮಾಧ್ಯಮ, ತಂತ್ರಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ

# ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

U.G.C. Care Listed Journal

7ನೇ ಜೂನ್ 2023 ಸಂಪುಟ : 13 ಸಂಚಿಕೆ : 1

ಪ್ರಕಾಶಕರು :

**ಡಾ|| ಜಯದೇವ ಮೈ. ಮೆಣಸಗಿ**

ವಿದ್ಯಾನಿಧಿ ಪ್ರಕಾಶನ, ಗದಗ

ಮಾಜಿ ಸಿಂಡಿಕೇಟ್ ಸದಸ್ಯರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಪಾದಕರು :

**ಡಾ. ಎಸ್. ಬಿ. ಯಾದವಾಡ**

ಸಹಸಂಪಾದಕರು :

**ಡಾ. ಪ್ರಕಾಶ ಕೆ. ಬಡಿಗೇರ**



ಸಂಪಾದಕ ಮಂಡಳಿ

- **ಪ್ರೊ. ಎಸ್.ಎಸ್. ಪಾಟೀಲ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಪ್ರೊ. ಬಿ.ಎಲ್. ಲಕ್ಕಣ್ಣವರ**
  ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕ.ರಾ.ಅ.ಮ.ವಿ,ವಿಜಯಪುರ ಮತ್ತು ಕುಲಸಚಿವರು, ಕ.ರಾ.ಗ್ರಾ.ಅ.
  ಮತ್ತು ಪಂ.ರಾ. ವಿಶ್ವವಿದ್ಯಾಲಯ, ಗದಗ.
- **ಪ್ರೊ. ಕೆ.ಎಂ. ಮೇತ್ರಿ**
  ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಬುಡಕಟ್ಟು ಅಧ್ಯಯನ ವಿಭಾಗ,
  ಕನ್ನಡ ವಿಶ್ವವಿದ್ಯಾಲಯ, ಹಂಪಿ.
- **ಡಾ. ಎನ್. ಲಕ್ಷ್ಮೀ**
  ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು.
- **ಡಾ. ಜಗನ್ನಾಥ ಕೆ. ಡಾಂಗೆ**
  ಮುಖ್ಯಸ್ಥರು ಮತ್ತು ಸಹ ಪ್ರಾಧ್ಯಾಪಕರು, ಶಿಕ್ಷಣ ಅಧ್ಯಯನ ವಿಭಾಗ,
  ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ
- **ಡಾ. ರಾಜಪ್ಪ ದಳವಾಯಿ**
  ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ,
  ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- **ಡಾ. ಭೀಮಪ್ಪ ರಂಗಣ್ಣವರ**
  ಸಹ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕೇಂದ್ರೀಯ ವಿಶ್ವವಿದ್ಯಾಲಯ,
  ತಮಿಳುನಾಡು, ನಿಲಕುಡಿ, ತಿರುವರುರ್.
- **ಡಾ. ಹುಚ್ಚೇಗೌಡ**
  ಸಹ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ,
  ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.



**Shikshan Soudha**

*A Quarterly Education and Research Journal*

**VIDYANIDHI PRAKASHANA®** Since:1973

**SRI SIVAKUMAR AGENCY®**

Station Road, Near Mahendrakar Circle,
GADAG-582 101 Dist. : Gadag
Karnataka State (India)
Phone : 08372-200527
email : shikshansoudha@gmail.com



The views expressed in the articles side are the individual opinions of the authors and they in no way represent or reflect the opinion of SHIKSHAN SOUDHA nor does SHIKSHAN SOUDHA subscribe to these views in no way. All disputes are subject to the jurisdiction of Gadag court only.



**ಶಿಕ್ಷಣ ಸೌಧ** ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ


## ಅಂತರಂಗ Inside

### ಸೈದ್ಧಾಂತಿಕ (Articles)


**06** ಪ್ರಸ್ತುತವಾಗಿ ಕರ್ನಾಟಕ ಸರ್ಕಾರ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಯೋಜನೆಗಳು : ಒಂದು ಅವಲೋಕನ – ಡಾ. ದೀಪಕ್‌ಕುಮಾರ್

**10** ಬೆಸಗರಹಳ್ಳಿ ರಾಮಣ್ಣ ಮತ್ತು ಬೊಮ್ಮನಾಯಕನಹಳ್ಳಿ ಕೃಷ್ಣಪ್ಪನವರ ಸಣ್ಣ ಕಥಾ ಸಾಹಿತ್ಯದ ವಸ್ತುವಿನ ತೌಲನಿಕ ವಿವೇಚನೆ – ಡಾ. ಪ್ರಸನ್ನ ಎಂ.ಎಸ್.

**13** ಕಪ್ಪೆ ಅರಭಟ್ಟನ ಶಾಸನ : ಷ. ಶೆಟ್ಟರ್ ಚಿಂತನೆಗಳು – ಡಾ, ಲಕ್ಷ್ಮೀಕಾಂತ ಪಂಚಾಳ

**15** ಡಾ. ನರೇಂದ್ರ ರೈ ದೇರ್ಲರ ಬರಹಗಳಲ್ಲಿ ಪರಿಸರ ಪ್ರಜ್ಞೆ– ಡಾ. ಹಂಪೇಶ್ ಕೆ.ಎಸ್.

**21** ಕನ್ನಡ ವೃತ್ತಿ ರಂಗಭೂಮಿಯ ರಂಗಗೀತೆಗಳು : ಕಂದಪದ್ಯಗಳ ಹೊಸ ಶೋಧ – ಡಾ. ಮಲ್ಲಯ್ಯ ಸಂಡೂರ

**25** 'ಕಾಡು' ಕಾದಂಬರಿ ಮತ್ತು ಚಲನಚಿತ್ರದಲ್ಲಿ ಮಹಿಳಾ ಸಂವೇದನೆ – ಶರ್ಮಿಳಾ ವಿ.ಎನ್.

**28** ಅಮೀನಪುರದ ಸಂತೆ : ಗ್ರಾಮ್ಯ ನೆಲೆಯ ಚಹರೆಗಳು – ಡಾ. ಅಂದಯ್ಯ ಅರವಟಗಿಮಠ

**29** ಮುಳುಗುಂದ ನಾಡಿನ ಸ್ಮಾರಕ ಶಿಲ್ಪಗಳು ಮುಳುಗುಂದ ನಾಡಿನ ಸ್ಮಾರಕ ಶಿಲ್ಪಗಳು – ಡಾ. ಬಿ. ಸುರೇಶ

**31** ರನ್ನನ ಮೇಲೆ ಪಂಪನ ಋಣ – ಶ್ರೀನಿವಾಸ ಎನ್.

**34** ಒಡಲಾಳ : ಹಸಿವು, ಮೌನ ಮತ್ತು ಪ್ರತಿಭಟನೆ – ಡಾ. ವೆಂಕಟಗಿರಿ ದಳವಾಯಿ

**38** ಸಾಮಾಜಿಕ ವಿಜ್ಞಾನಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ : ಒಂದು ಅವಲೋಕನೆ – ಶಶಿಕುಮಾರ್ ಡಿ.ಎನ್.

**41** ಆತ್ಮಹತ್ಯೆಗೆ ಕಾರಣ ಮತ್ತು ಪರಿಹಾರಗಳು : ಒಂದು ವಿಶ್ಲೇಷಣೆ – ಪ್ರೊ. ಪುನೀತಾ ಕೆ.

**45** ಶರಣರ ವಚನಗಳಲ್ಲಿ ಜೀವನ ಮೌಲ್ಯಗಳು – ಚಂದ್ರಪ್ಪ ಬಾರಂಗಿ

**50** ಮಾನವ ಅಭಿವೃದ್ಧಿ ಮತ್ತು ಶಿಕ್ಷಣ – ಡಾ. ಮಂಜಯ್ಯ

**55** ಗಿಡಮೂಲಿಕೆ ಔಷಧಿಗಳ ಐತಿಹಾಸಿಕ ದೃಷ್ಟಿಕೋನಗಳು ಮತ್ತು ಭವಿಷ್ಯದ ಪ್ರಾಮುಖ್ಯತೆ – ಡಾ. ಕುಮಾರ್ ಎಂ.ಎಸ್., ಚಿತ್ರಶ್ರೀ ಜಿ.ಸಿ.

**57** ಮಹಿಳಾ ಅಭಿವೃದ್ಧಿ ದೃಷ್ಟಿಕೋನಗಳು – ಡಾ. ಯರ್ರಿಸ್ವಾಮಿ ಈ.

**60** ನಾಡೋಜ ಪಂಪ : ಪರಿಚಯಾತ್ಮಕ ಅವಲೋಕನ – ಕುರುಬರ ಗಾದಿಲಿಂಗಪ್ಪ

**63** ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ ದೊಡ್ಡಾಟ – ಶ್ವೇತ ಜೆ.

**67** ಮಾಧ್ಯಮ, ತಂತ್ರಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ – ಲಾಡ್ಲೇಮಶಾಕ ಪೀ. ನದಾಫ್

**70** ನಾನು ಹಿರಿಯವ ನಾ ? ಒಂದು ವೈಜ್ಞಾನಿಕ ವಿಶ್ಲೇಷಣೆ ಮತ್ತು ವಿಮರ್ಶೆ ! – ಡಾ.ಸತೀಶ್ ಎಲ್.ಎ., ಪ್ರೊ. ಜ್ಯೋತಿ ಅರಹುಣಸಿ

**74** ಪ್ಲೇಸ್ಮೆಂಟ್ ಸೆಲ್ : ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಕ್ಯಾಂಪಸ್ ಇಂಟರ್ವ್ಯೂ – ಡಾ. ಜ್ಯೋತಿ ಬಿ. ಪಂತ್

**76** ಇತಿಹಾಸ ಅಧ್ಯಯನದಲ್ಲಿ ಶಾಸನಗಳ ಪ್ರಾಮುಖ್ಯತೆ – ಎಮ್.ಎ. ಖವಾಸ

**77** ಉತ್ತಮ ಆರೋಗ್ಯ ಜೀವನಕ್ಕೆ ಯೋಗ.....! – ಡಾ. ಶಂಕರ ಬಾರಿಕೇರ

: ಸೂಚನೆ :

ಲೇಖನ ಹಾಗೂ ಸಂಶೋಧನಾ ಲೇಖನಗಳನ್ನು ಕಳಿಸುವವರು ಕಡ್ಡಾಯವಾಗಿ ಪತ್ರಿಕೆಯ ಸದಸ್ಯತ್ವ ಪಡೆದವರಾಗಿರಬೇಕು. ಲೇಖನವಾದಲ್ಲಿ 1500 ಶಬ್ದಗಳನ್ನು ಮೀರಬಾರದು ಹಾಗೂ ಸಂಶೋಧನಾ ಲೇಖನವಾದಲ್ಲಿ 2000 ಶಬ್ದಗಳನ್ನು ಮೀರಿರಬಾರದು. ಹೆಚ್ಚಿನ ಸಂಖ್ಯೆಯಲ್ಲಿ ಪತ್ರಿಕೆಗೆ ಚಂದಾದಾರರಾಗಿ ಪತ್ರಿಕೆಯನ್ನು ಪ್ರೋತ್ಸಾಹಿಸಿರಿ. ಉತ್ತಮ ಲೇಖನ ಅಥವಾ ಸಂಶೋಧನಾ ಲೇಖನಗಳನ್ನು ಕಳಿಸಿರಿ.

**80** ಬರಗೂರರ ಬೆಂಕಿ ಕಾದಂಬರಿಯಲ್ಲಿ ಮಹಿಳಾ ಸಂವೇದನೆ
– ರಶ್ಮಿ ರಾ. ಚಂದ್ರಗಿರಿ, ಡಾ. ಬಿ.ಎಸ್. ಭಜಂತ್ರಿ

**83** ವಿ.ಎಸ್. ಕಾಂತನವರ ಕಾವ್ಯದಲ್ಲಿ ಛಂದಸ್ಸು
– ಕು. ಸಿದ್ದಮ್ಮ ಅಂಬಿಗೇರ, ಡಾ. ಬಿ.ಎಸ್. ಭಜಂತ್ರಿ

**ಸಂಶೋಧನೆ (Reserch)**

**87** ವಿದ್ಯಾರ್ಥಿಗಳ ಕ್ರೀಡಾ ಪ್ರಗತಿಗೆ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಕೊಡುಗೆಗಳು ; ಒಂದು ಅಧ್ಯಯನ – ದೇವಾನಂದ ಎ.ಸಿ., ಡಾ. ಎ.ಟಿ. ಶಿವರಾಮು

**ಶಿಕ್ಷಣ ತಜ್ಞರು (Education Thinkers)**

**92** ಭಾರತದ ಸಂವಿಧಾನ ಶಿಲ್ಪಿ ಮತ್ತು ಅತ್ಯುತ್ತಮ ಶಿಕ್ಷಣ ಚಿಂತಕರಾಗಿ ಡಾ. ಬಿ.ಆರ್. ಅಂಬೇಡ್ಕರ್' – ಡಾ. ರವಿ ಹೆಚ್.

## ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ

*ಚಂದಾ ವಿವರ:*

| | | |
|---|---|---|
| ವಾರ್ಷಿಕ ಚಂದಾ | ₹ 750/- | ☐ |
| ತ್ರೈವಾರ್ಷಿಕ ಚಂದಾ | ₹ 2100/- | ☐ |
| ಆಜೀವ ಸದಸ್ಯತ್ವ | ₹ 7000 /- | ☐ |

*ಚಂದಾದಾರರು :*
**ಶಿಕ್ಷಣ ಸೌಧ**
ಈ ಹೆಸರಿನ ಮೇಲೆ ಡಿಡಿ ತೆಗೆಯಿಸಬೇಕು.

*Bank Detils :*
**SHIKSHANA SOUDHA**
Indian Overseas Bank
J.T. Math Road, Gadag Branch
A/c.No.: 285402000000179
IFSC : IOBA0002854

ಡಿ.ಡಿ. ಕಳುಹಿಸಬೇಕಾದ ವಿಳಾಸ :

**ಶಿಕ್ಷಣ ಸೌಧ**
ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
**ವಿದ್ಯಾನಿಧಿ ಪ್ರಕಾಶನ**
ಸ್ಟೇಶನ್ ರೋಡ ಮತ್ತು 'ನನಸು' ಜೆ.ಟಿ.ಮಠ ರೋಡ,
ಗದಗ – 582101. ಕರ್ನಾಟಕ ರಾಜ್ಯ
ಫೋನ್ : 08372–200527
Email : shikshansoudha@gmail.com

## ಶಿಕ್ಷಣ ಸೌಧ

ತ್ರೈಮಾಸಿಕ ಶಿಕ್ಷಣ ಮತ್ತು ಸಂಶೋಧನ ಪತ್ರಿಕೆ
ಯು.ಜಿ.ಸಿ. ಕೇರ್‌ನ ಮಾನ್ಯತೆ ಪಡೆದಿರುವ ಪತ್ರಿಕೆ
ನೂತನ ಚಂದಾದಾರರ ನೋಂದಣಿ ಪ್ರತಿ

Date :

Name : ____________________

Designation : ____________________

Institution : ____________________

Address : ____________________

____________________

Phone Cell Nos.: ____________________

e-mail : ____________________

D.D. No. : ____________ Dated : ________

Amount : ________ Bank : ____________

*Institution's Signature*

# ಸಂಪಾದಕೀಯ

# ಉನ್ನತ ಶಿಕ್ಷಣ

**ಉನ್ನತ ಶಿಕ್ಷಣದ ಅರ್ಥ**

- "And investment in knowledge pays the best interest" ***- Benjamin Franklin***
- "Encouragement of higher education for our youth his critical to the success of our collective feature" ***- Charles B. Rangel***
- "The mark of Higher Education is not the knowledge you accumulate in your head. It is the skills you gain about how to learn" ***- Adam Grant***

ದೋಚಲಾಗದ ಏಕೈಕ ಆಸ್ತಿ ಜ್ಞಾನ. ವ್ಯಕ್ತಿ ಮತ್ತು ರಾಷ್ಟ್ರದ ರೂಪಾಂತರದಲ್ಲಿ ಶಿಕ್ಷಣದ ಪಾತ್ರ ಅಪಾರ. ಮಾನವನ ಮೂಲಭೂತ ಅವಶ್ಯಕತೆಗಳು ಯಾವವು ? ಅನ್ನ, ಅರಿವೇ ಆಶ್ರಯ ಆರೋಗ್ಯ, ಅಕ್ಷರ, ಆಧ್ಯಾತ್ಮ... ಇದರಲ್ಲಿ ಅಕ್ಷರ ಒಂದು ದೊರೆತರೆ ಉಳಿದೆಲ್ಲವೂ ತಂತಾನೆ ಬರುತ್ತದೆ. ಶಿಕ್ಷಣ ಎಂದರೆ ಅಕ್ಷರ ಮತ್ತು ಮಾಹಿತಿಯ ಕಲಿಕೆ ಮಾತ್ರ ಅಲ್ಲ, ಅದು ಜೀವನದ ಕಲಿಕೆ....ಜೀವಮಾನದ ಕಲಿಕೆ. ಸಾಮಾನ್ಯ ಮಾನವನನ್ನು ಮಾನವ ಸಂಪನ್ಮೂಲವಾಗಿ ಬದಲಾಯಿಸುವ ಮಾಂತ್ರಿಕತೆ ಶಿಕ್ಷಣಕ್ಕಿದೆ.

ಸಾಮಾನ್ಯವಾಗಿ ಉನ್ನತ ಶಿಕ್ಷಣ ಎಂದರೆ ಪದವಿಪೂರ್ವ ಶಿಕ್ಷಣದ ನಂತರ ವಿದ್ಯಾರ್ಥಿಗಳಿಗೆ ನೀಡುವಂತಹ ಶಿಕ್ಷಣ. ಅಂದರೆ ಏಳು ವರ್ಷದ ಪ್ರಾಥಮಿಕ ಶಿಕ್ಷಣ 3+2 ವರ್ಷದ ಪ್ರೌಢ ಶಿಕ್ಷಣವು ಸೇರಿದಂತೆ ಒಟ್ಟು 12 ವರ್ಷಗಳ ಶಾಲಾ ಶಿಕ್ಷಣ ನಂತರದ ಶಿಕ್ಷಣಕ್ಕೆ ಸಾಮಾನ್ಯವಾಗಿ ಈ ಹೆಸರನ್ನು ಬಳಸುತ್ತೇವೆ. ಬೋಧನೆ, ಸಂಶೋಧನೆ ವಿಸ್ತರಣೆ – ಈ ಸಾಂಪ್ರದಾಯಿಕ ಅಂಶಗಳು ಉನ್ನತ ಶಿಕ್ಷಣದ ಕರ್ತವ್ಯಗಳಾಗಿವೆ. ಇಲ್ಲಿ ವ್ಯಕ್ತಿ ತನಗೆ ಇಷ್ಟವಿರುವ ಕ್ಷೇತ್ರದಲ್ಲಿ ವಿಶೇಷ ಮತ್ತು ಆಳವಾದ ಜ್ಞಾನವನ್ನು ಪಡೆಯುವ ಮೂಲಕ ತನ್ನ ಕೌಶಲಗಳಲ್ಲಿ ಹೆಚ್ಚಿನ ಗುಣಮಟ್ಟ ಮತ್ತು ದಕ್ಷತೆಯನ್ನು ರೂಢಿಸಿಕೊಂಡು ಸಮಷ್ಟಿಯ ಸುಧಾರಣೆ ಮತ್ತು ಅಭಿವೃದ್ಧಿಯಡೆಗೆ ಕ್ರಿಯಾತ್ಮವಾಗಿ ಕಾರ್ಯನಿರ್ವಹಿಸಲು ಅನುವಾಗುತ್ತಾನೆ. ಇದು ವಿಶ್ವವಿದ್ಯಾಲಯಗಳಲ್ಲಿ ಅದರ ಅಂಗಿಕ ಮತ್ತು ಅಂಗೀಕೃತ ಕಾಲೇಜುಗಳಲ್ಲಿ ಸ್ನಾತಕೋತ್ತರ ವಿಭಾಗ ಅಥವಾ ಕೇಂದ್ರಗಳಲ್ಲಿ ಮತ್ತು ಇತರ ವಿಶಿಷ್ಟ ಶಿಕ್ಷಣ ಸಂಸ್ಥೆಗಳಲ್ಲಿ ವ್ಯವಸ್ಥೆಗೊಂಡಿದೆ. ಇದು ಶಿಕ್ಷಣ ತರಬೇತಿ ಶಾಲೆಗಳು, ಜೂನಿಯರ್ ಕಾಲೇಜುಗಳು, ತಂತ್ರಜ್ಞಾನ ಸಂಸ್ಥೆಗಳನ್ನು ಸಹ ಒಳಗೊಂಡಿದೆ. ಇದು ಮಾನವಿಕ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಕಾನೂನು, ವೈದ್ಯಕೀಯ, ವ್ಯಾಪಾರ, ಸಂಗೀತ, ಕಲೆ, ಸಮಾಜವಿಜ್ಞಾನ, ಸಾರ್ವಜನಿಕ ಆಡಳಿತ, ಶಿಕ್ಷಣ, ಪತ್ರಿಕೋದ್ಯಮ, ಅರ್ಥಶಾಸ್ತ್ರ.... ಮುಂತಾದ ಕ್ಷೇತ್ರಗಳನ್ನು ಒಳಗೊಂಡಿದೆ. ಉನ್ನತ ಶಿಕ್ಷಣವನ್ನು ಪಡೆಯಲು ಕನಿಷ್ಠ ಅರ್ಹತೆ ಎಂದರೆ ಮಾಧ್ಯಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದು ಮತ್ತು 18 ವರ್ಷಕ್ಕಿಂತ ಮೇಲ್ಪಟ್ಟ ಪ್ರವೇಶ ವಯಸ್ಸು. ಕಳೆದ ಎರಡು ದಶಕಗಳಲ್ಲಿ ಭಾರತದ ಉನ್ನತ ಶಿಕ್ಷಣ ಆಗಾಧವಾಗಿ ಬೆಳವಣಿಗೆ ಕಂಡಿದೆ. ಚೀನಾ ಮತ್ತು ಅಮೇರಿಕ ಬಿಟ್ಟರೆ ಭಾರತದಲ್ಲಿ ಜಗತ್ತಿನಲ್ಲೇ ಹೆಚ್ಚಾಗಿ ಉನ್ನತ ಶಿಕ್ಷಣವನ್ನು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಸುಮಾರು 380 ವಿವಿಗಳು, 23 ಸಾವಿರ ವಿವಿಧ ಪದವಿ ಕಾಲೇಜುಗಳು, 80–100 ಸ್ವಾಯತ್ತ ವಿವಿಗಳು, 140–150 ಉನ್ನತ ಸಂಶೋಧನಾ ಸಂಸ್ಥೆಗಳು ದೇಶದಾದ್ಯಂತ ಕಾರ್ಯನಿರ್ವಹಿಸುತ್ತವೆ. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುವ ವೇತನ ಮತ್ತು ಹಣಕಾಸಿನ ಸ್ಥಿತಿಯಅಂತರವು ಉದ್ಯೋಗದ ಪ್ರೊಫೈಲ್‌ಗಳಿಂದ ಎಂಬುದು ಸ್ಪಷ್ಟ. ಪದವಿ ಸ್ನಾತಕೋತ್ತರ ಪದವಿ ಪೂರೈಸಿದ ಜನರು ಹೈಸ್ಕೂಲ್ ಶಿಕ್ಷಣ ಮಾತ್ರ ಪೂರೈಸಿದ ವ್ಯಕ್ತಿಗಳಿಂದ ಉತ್ತಮ ಕಾರ್ಯ ನಿರ್ವಹಣೆಯ ಮತ್ತು ಉತ್ತಮ ವೇತನವನ್ನು ಪಡೆಯುತ್ತಾರೆ. ವಿದ್ಯಾವಂತ ಜನರು ಆರೋಗ್ಯ ಮತ್ತು ಜೀವ ವಿಮೆ ಅಂತಹ ಬಹು ಸಂಪನ್ಮೂಲಗಳ ಪ್ರಯೋಜನವನ್ನು ಪಡೆಯುತ್ತಾರೆ. ಉನ್ನತ ಶಿಕ್ಷಣ ವಿತ್ತೀಯ ಪ್ರಯೋಜನಗಳನ್ನು ತರುತ್ತದೆ.

ಉದ್ಯೋಗ ಮಾರುಕಟ್ಟೆಯ ಪ್ರಸ್ತುತ ಸನ್ನಿವೇಶ ನೋಡಿದರೆ ತೀವ್ರ ಬದಲಾವಣೆ ಮತ್ತು ಬೆಳವಣಿಗೆಯನ್ನು ನಾವು ಗಮನಿಸುತ್ತೇವೆ. ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ವಿಶ್ವವನ್ನು ಸರ್ವಾಂತರ್ಯಾಮಿಯಾಗಿ ವ್ಯಾಪಿಸಿಕೊಂಡಿದೆ. ಆ ಕ್ಷೇತ್ರಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಲು ಅತ್ಯಾಧುನಿಕ ಶಿಕ್ಷಣ ಪಡೆದ ತಂತ್ರಜ್ಞರ ಪಾತ್ರ ಅಪಾರ. ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯ ತಂತ್ರಗಳ ಬಗ್ಗೆ ಸುಧಾರಿತ ತಿಳ್ಕೊಳ್ಳಕ್ಕೆ ಹೊಂದಿರುವ ವಿದ್ಯಾರ್ಥಿಗಳು ಮುಂಬರುವ ವರ್ಷಗಳಲ್ಲಿ ಭಾರಿ ಬೇಡಿಕೆಯಲ್ಲಿ ಇರುತ್ತಾರೆ. ಅದರಿಂದ ಉನ್ನತ ಶಿಕ್ಷಣದಲ್ಲಿ ಹೂಡಿಕೆ ಮಾಡುವುದು ಮತ್ತು ಅಗತ್ಯ ಕೌಶಲ್ಯಗಳನ್ನು ಸಾಧಿಸುವುದು ನಿರ್ಣಾಯಕವಾಗಿದೆ.

ಉನ್ನತ ಶಿಕ್ಷಣವು ವ್ಯಕ್ತಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ತರ್ಕ ಕೌಶಲ್ಯಗಳನ್ನು ಕಲಿಸುತ್ತದೆ. ಸಮಸ್ಯೆಪರಿಹರಿಸುವ ಆಲೋಚನೆಗಳಿಗೆ ಪ್ರೇರಿತವಾದ ಈ ಶಿಕ್ಷಣ ನಿಜ ಜೀವನದ ಬಿಕ್ಕಟ್ಟುಗಳನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿರುವ ಉತ್ತಮ ಜನರನ್ನು ರೂಪಿಸುತ್ತದೆ.

ಹೆಚ್ಚಿನ ಜ್ಞಾನ ಮತ್ತು ಕೌಶಲ್ಯಗಳನ್ನು ಉಚ್ಚಮಟ್ಟದಲ್ಲಿ ಸಾಧಿಸುವ ಮೂಲಕ ಹೆಚ್ಚಿನ ಆತ್ಮವಿಶ್ವಾಸದೊಂದಿಗೆ ನಿಗದಿತ ಕ್ಷೇತ್ರದ ಸಂಶೋಧನೆ, ಸುಧಾರಣೆ ಮತ್ತು ಅಭಿವೃದ್ಧಿ ಎಡೆಗೆ ಹೆಜ್ಜೆ ಇಡುವ ಮೂಲಕ ವೃತ್ತಿಯಲ್ಲೂ ಕೂಡ ಉನ್ನತ ಮಟ್ಟಕ್ಕೆ ಏರಲು ಉನ್ನತ ಶಿಕ್ಷಣ ಅನುಕೂಲವಾಗಿದೆ.

The more you study the more you broad on your Horizon ಎಂಬಂತೆ ಉನ್ನತ ಶಿಕ್ಷಣ ನಮ್ಮ ದೃಷ್ಟಿಕೋನಗಳನ್ನು ಬದಲಿಸುವಲ್ಲಿ ಗಂಭೀರವಾದ ಪಾತ್ರವನ್ನು ವಹಿಸುತ್ತದೆ. ಉನ್ನತ ಶಿಕ್ಷಣವನ್ನು ಪೂರೈಸಿದ ವ್ಯಕ್ತಿ ಸಾಮಾಜಿಕ ಪ್ರಗತಿಯ ಅತ್ಯುಚ್ಚ ಆಲೋಚನೆ ಮತ್ತು ದೃಷ್ಟಿಕೋನಗಳನ್ನು ರೂಪಿಸಿಕೊಳ್ಳುವುದರ ಮೂಲಕ, ಹೊಸ ಅನ್ವೇಷಣೆಗಳೊಂದಿಗೆ ಸಮರ್ಥವಾಗಿ ಮಾನವ ಸಂಪನ್ಮೂಗಳನ್ನು ಬಳಸಿಕೊಳ್ಳುವ ಮೂಲಕ ನಾಗರಿಕ ಸ್ನೇಹಿ ರಾಷ್ಟ್ರವನ್ನು ಕಟ್ಟಲು ನೆರವಾಗುತ್ತಾನೆ/ಳೆ.

**– ಡಾ. ಎಸ್.ಬಿ. ಯಾದವಾಡ**
**ಸಂಪಾದಕರು**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪ್ರಸ್ತುತವಾಗಿ ಕರ್ನಾಟಕ ಸರ್ಕಾರ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಜಾರಿಗೆ ತಂದಿರುವ ಯೋಜನೆಗಳು : ಒಂದು ಅವಲೋಕನ

✍ **ಡಾ. ಟಿ. ದೀಪಕ್‌ಕುಮಾರ್,** ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಿಳಾ ಸರ್ಕಾರಿ ಕಾಲೇಜು, (ಸ್ವಾಯತ್ತ) ಮಂಡ್ಯ.

ಪ್ರತಿಯೊಬ್ಬ ಮನುಷ್ಯನ ವಿಶೇಷ ವ್ಯಕ್ತಿಯಾಗಿದ್ದು ತನ್ನದೇ ಆದ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಹೊಂದಿದ್ದು ಯಾರೂ ಮತ್ತೊಬ್ಬ ವ್ಯಕ್ತಿಗಿಂತ ಕಡಿಮೆಯೂ ಅಲ್ಲ ಅಥವಾ ಹೆಚ್ಚು ಅಲ್ಲ ಎಂಬುದನ್ನು ಮಾನವ ಹಕ್ಕುಗಳು ಗುರುತಿಸುತ್ತದೆ. ಎಲ್ಲಾ ಮಾನವರೂ ಮುಕ್ತವಾಗಿ ಹಾಗೂ ಸಮಾನವಾಗಿ ಜನಿಸಿರುವರೆಂಬುದು ಮಾನವ ಹಕ್ಕುಗಳ ವಿಚಾರದ ತಳಹದಿಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಘನತೆಯಿಂದ ಜೀವಿಸಲು ಅರ್ಹತೆ ಹೊಂದಿದ್ದು ರಾಜ್ಯವಾಗಲೀ, ಸಮುದಾಯವಾಗಲೀ, ಕುಟುಂಬವಾಗಲಿ, ಸಮಾಜವಾಗಲಿ ನ್ಯಾಯ ಸಮ್ಮತವಲ್ಲದ ಅಥವಾ ಪಕ್ಷಪಾತದಿಂದ ನೋಡಲು ಯಾರಿಗೂ ಹಕ್ಕಿಲ್ಲ. ಮಾನವ ಹಕ್ಕುಗಳ ಅಂತರಾಷ್ಟ್ರೀಯ ಪದ್ಧತಿಯು ಹಾಗೂ ನಮ್ಮ ಸಂವಿಧಾನವು ಎಲ್ಲಾ ವ್ಯಕ್ತಿಗಳ ಮಾನವ ಹಕ್ಕುಗಳನ್ನು ಸಮಾನವಾಗಿ ನೋಡಬೇಕೆಂದು ಒತ್ತಾಯಿಸುತ್ತದೆ.

ಇಂದಿನ ಮಕ್ಕಳೇ ನಾಳೆಯ ಪ್ರಭುಗಳು ಎನ್ನುವಂತೆ ಭಾರತದ ಭವ್ಯ ಭವಿಷ್ಯದ ಕನಸನ್ನು ಸಾಕಾರಗೊಳಿಸುವ ಇಂದಿನ ಮಕ್ಕಳ ರಕ್ಷಣೆಯಾಗಲಿ, ಅಭಿವೃದ್ಧಿಯಾಗಲಿ, ಅವರಿಗೆ ಶಿಕ್ಷಣ ಒದಗಿಸುವುದಾಗಲಿ, ಅವರ ಬೆಳವಣಿಗೆಯಾಗಲಿ ಅತೀ ಮುಖ್ಯವಾದುದ್ದಾಗಿದೆ. ಮಕ್ಕಳನ್ನು ಅಕ್ರಮವಾಗಿ ಬಂಧಿಸುವುದು, ಅನೈತಿಕ ಚಟುವಟಿಕೆಗಳಿಗೆ ತೊಡಗಿಸುವುದು, ಕಠಿಣ ಕಾರ್ಖಾನೆಗಳಲ್ಲಿ ದುಡಿಸಿಕೊಳ್ಳುವುದನ್ನು ಕಾನೂನುಬದ್ಧವಾಗಿ ನಿಷೇಧಿಸಿದ್ದರು ಸಹ ಅಲ್ಲಲ್ಲಿ ಈ ರೀತಿಯ ಮಕ್ಕಳ ಅವ್ಯವಹಾರಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಈ ರೀತಿಯ ಅವ್ಯವಹಾರಗಳನ್ನು ಹೋಗಲಾಡಿಸಿ ಮಕ್ಕಳಿಗೆ ಉತ್ತಮ ಶಿಕ್ಷಣ ವ್ಯವಸ್ಥೆ ಕಲ್ಪಿಸಿ ಅವರ ಬೆಳವಣಿಗೆಯನ್ನು ಸಾಧಿಸುವ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ತನ್ನ 27 ನೇ ವಿಶೇಷ ಅಧಿವೇಶನದಲ್ಲಿ ಮಕ್ಕಳ ಅಭಿವೃದ್ಧಿಗಾಗಿ 10 ಮೇ 2002 ರಂದು ಹಲವಾರು ಘೋಷಣೆಗಳನ್ನು ಹೊರಡಿಸಿದ್ದು, ಈ ಘೋಷಣೆಯು ಮಕ್ಕಳ ರಕ್ಷಣೆ ಹಾಗೂ ಅವರ ಅಭಿವೃದ್ಧಿಯ ಧ್ಯೋತಕವಾಗಿದೆ. ಉದಾಹರಣೆಗೆ ಮಕ್ಕಳಿಗೆ ಮೊದಲ ಆದ್ಯತೆ, ಯಾವುದೇ ಮಗುವನ್ನು ಹಿಂದೆ ಸರಿಯಲು ಬಿಡಬೇಡಿ, ಪ್ರತಿ ಮಗುವಿಗೂ ಶಿಕ್ಷಣ, ಮಕ್ಕಳನ್ನು ಅಪಾಯ ಮತ್ತು ಶೋಷಣೆಯಿಂದ ರಕ್ಷಿಸಿ, ಮಕ್ಕಳು ಹೇಳುವುದನ್ನು ಕೇಳಿ ಮತ್ತು ಅವರ ಭಾಗವಹಿಸುವಿಕೆಯನ್ನು ಖಾತರಿಪಡಿಸಿಕೊಳ್ಳಿ, ಭೂಮಂಡಲವನ್ನು ಮಕ್ಕಳಿಗಾಗಿ ರಕ್ಷಿಸಿ, ಇನ್ನೂ ಮುಂತಾದ ಘೋಷಣೆಗಳನ್ನು ಅಳವಡಿಸಿದೆ.

"ಮನುಷ್ಯ ಚಿರಂಜೀವಿಯಾಗಲಾರ. ಆದರೆ ಆತನ ಚಿಂತನೆಗಳು ಚಿರಂಜೀವಿಯಾಗಿ ಉಳಿಯುತ್ತವೆ" ಎಂಬ ಅಂಬೇಡ್ಕರ್‌ರವರ ನುಡಿಯಂತೆ ಭಾರತದ ಮುಂದಿನ ಭವ್ಯಭವಿಷ್ಯ ಇಂದಿನ ಪೀಳಿಗೆಯ ಮಕ್ಕಳ ಮೇಲೆ ನಿಂತಿರುವುದರಿಂದ ಅವರ ಉತ್ತಮ ಬೆಳವಣಿಗೆಯ ಕಡೆ ಗಮನ ಹರಿಸುವುದು ಅತೀ ಜರೂರಾಗಿದೆ. ಚೀನಾ ದೇಶವು ಜನಸಂಖ್ಯೆ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮಕ್ಕಳ ಜನನ ಪ್ರಮಾಣ ತಗ್ಗಿಸಿ, ನಾವಿಬ್ಬರು ನಮಗೊಬ್ಬರು ಎಂಬ ಸಂದೇಶ, ಒಬ್ಬರಿಗಿಂತ ಹೆಚ್ಚಿನ ಮಕ್ಕಳನ್ನು ಹೊಂದುವುದು ಅಪರಾಧ, ಅವರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತಹ ಕಟ್ಟು ನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿದರ ಪರಿಣಾಮ ಇಂದು ಚೀನಾ ದೇಶದಲ್ಲಿ ಯುವಕರ ಪ್ರಮಾಣ ಬಹಳ ಕಡಿಮೆಯಿದ್ದು,




ವಯಸ್ಸಾದ ವೃದ್ಧರ ಪ್ರಮಾಣ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಭಾರತ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. 2011ರ ಜನಗಣತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿನ 0 ಯಿಂದ 6 ವರ್ಷ ವಯೋಮಿತಿಯಲ್ಲಿನ ಮಕ್ಕಳ ಸಂಖ್ಯೆ 11.2 ರಷ್ಟಿದ್ದು, ಮಕ್ಕಳ ಸರ್ವತೋಮುಖ ಬೆಳವಣಿಗೆ, ಲಿಂಗ ಪ್ರಮಾಣವನ್ನು ಹೆಚ್ಚಿಸುವುದು, ಶಿಶು ಮರಣ ಪ್ರಮಾಣವನ್ನು ಇಳಿಸುವ, ಆರೋಗ್ಯ, ಪೌಷ್ಟಿಕ ಮತ್ತು ಶಾಲಾ ಪೂರ್ವ ಶಿಕ್ಷಣವನ್ನು ನೀಡುವುದು, ಮಕ್ಕಳ ಹಕ್ಕುಗಳನ್ನು ರಕ್ಷಿಸುವ, ಮಕ್ಕಳ ವಿರುದ್ಧ ದೌರ್ಜನ್ಯವನ್ನು ಹೋಗಲಾಡಿಸಿ ಮಕ್ಕಳ ಪಾಲನೆ ಮತ್ತು ಪೋಷಣೆ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಒಳಗೊಂಡಂತೆ ಹಲವಾರು ಯೋಜನೆಗಳನ್ನು, ನೀತಿಗಳನ್ನು ಮತ್ತು ವಿವಿಧ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದ್ದು, ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

## 1. ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐ.ಸಿ.ಡಿ.ಎಸ್.)

"ಮಕ್ಕಳಿಗೆ ಉತ್ತಮ ಭವಿಷ್ಯವೇ ಭಾರತದ ಭವಿಷ್ಯ" ಎಂಬ ದೂರದೃಷ್ಟಿಯೊಂದಿಗೆ ಕರ್ನಾಟಕ ರಾಜ್ಯದಲ್ಲಿ ಐ.ಸಿ.ಡಿ.ಎಸ್.ಯನ್ನು ಪ್ರಾಯೋಗಿಕವಾಗಿ 2 ಅಕ್ಟೋಬರ್ 1975ರಂದು ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಪ್ರಾರಂಭಿಸಲಾಯಿತು. ಪ್ರಸ್ತುತ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಈ ಯೋಜನೆಗಳನ್ನು ವಿಸ್ತರಿಸಲಾಗಿದೆ. ಈ ಯೋಜನೆಯ ಮುಖ್ಯ ಗುರಿ ಮತ್ತು ಉದ್ದೇಶವೆಂದರೆ– ಕಿಶೋರಿಯರು ಮತ್ತು 6 ವರ್ಷ ಒಳಗಿನ ಮಕ್ಕಳ ಆರೋಗ್ಯ, ಪೌಷ್ಟಿಕ ಮಟ್ಟವನ್ನು ವೃದ್ಧಿಸುವುದು, ಮಕ್ಕಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಕ್ಕಳಲ್ಲಿ ಸಾವು, ಅನಾರೋಗ್ಯ, ಅಪೌಷ್ಠಿಕತೆ, ಶಾಲಾ ಬಿಡುವಿಕೆಯನ್ನು ಕಡಿಮೆ ಮಾಡುವುದಾಗಿದೆ. ರಾಜ್ಯದ ಎಲ್ಲಾ 225 ತಾಲ್ಲೂಕುಗಳಲ್ಲಿ 204 ಶಿಶು ಅಭಿವೃದ್ಧಿ ಯೋಜನೆಗಳ ಮುಖಾಂತರ ಒಟ್ಟು 62,580 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಈ ಯೋಜನೆ ಅಡಿಯಲ್ಲಿ ಸಿಬ್ಬಂದಿ ವೇತನ, ಗೌರವಧನ, ಉಸ್ತುವಾರಿ ಮತ್ತು ಮೌಲ್ಯಮಾಪನ, ಅಂಗನವಾಡಿ ಕಟ್ಟಡ ಬಾಡಿಗೆ, ಶಾಲಾ ಪೂರ್ವ ಶಿಕ್ಷಣ ಕಿಟ್, ಮೆಡಿಸಿನ್ ಕಿಟ್, ಸಮವಸ್ತ್ರ ಹಾಗೂ ಬ್ಯಾಡ್ಜ್ ಖರೀದಿ ಖರ್ಚನ್ನು ಆಡಳಿತದ ವೆಚ್ಚದ ಅಡಿಯಲ್ಲಿ ಭರಿಸಲಾಗುತ್ತದೆ. ಸದರಿ ವೆಚ್ಚಗಳನ್ನು 60:40ರ ಅನುಪಾತದಲ್ಲಿ ಅನುಕ್ರಮವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ.

## 2. ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ

ಈ ಯೋಜನೆಯನ್ನು ಶೇ. 100ರಷ್ಟು ರಾಜ್ಯ ಸರ್ಕಾರವೇ ಭರಿಸುತ್ತದೆ. 2007–08ನೇ ಸಾಲಿನಲ್ಲಿ ಈ ಹೊಸ ಯೋಜನೆಯನ್ನು ಕರ್ನಾಟಕ ಸರ್ಕಾರದಿಂದ ಪ್ರಾರಂಭಿಸಲಾಗಿದ್ದು, ತೀವ್ರ ನ್ಯೂನಪೋಷಣೆಗೊಳಗಾದ ಮಕ್ಕಳ ಪೌಷ್ಠಿಕ ಮಟ್ಟ ಸುಧಾರಿಸಿ ಸಾಮಾನ್ಯ ದರ್ಜೆಗೆ ತರಲು ವೈದ್ಯಾಧಿಕಾರಿಗಳ ಸೂಚನೆಯಂತೆ ಔಷದೋಪಚಾರ ಹಾಗೂ ಚಿಕಿತ್ಸಾ ಆಹಾರಕ್ಕಾಗಿ ಪ್ರತಿ ಮಗುವಿಗೆ ವರ್ಷಕ್ಕೆ ರೂ.2000ಗಳನ್ನು ನೀಡಲಾಗುತ್ತಿದೆ. (2017–18ನೇ ಸಾಲಿನಲ್ಲಿ ತೀವ್ರ ನ್ಯೂನಪೋಷಣೆಗೊಳಗಾದ 16757 ಮಕ್ಕಳ ಔಷಧೋಪಚಾರ ವೆಚ್ಚಕ್ಕಾಗಿ 335.15 ಲಕ್ಷಗಳ ವೆಚ್ಚ ಮಾಡಲಾಗಿದೆ.)

## 3. ಕಿಶೋರಿ ಶಕ್ತಿ ಯೋಜನೆ (ಕೆ.ಎಸ್.ವೈ.)

ಒಡಿಸ್ಸಾದಲ್ಲಿ 31 ಆಗಸ್ಟ್ 2007ರಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಈ ಯೋಜನೆಯ ವೆಚ್ಚವನ್ನು 60:40ರ ಅನುಪಾತದಲ್ಲಿ ಕ್ರಮವಾಗಿ ಕೇಂದ್ರ ಮತ್ತು ಸರ್ಕಾರದಿಂದ ಭರಿಸಲಾಗುತ್ತಿದೆ. “ಸಬಲಾ” ಯೋಜನೆ ಅನುಷ್ಠಾನಗೊಳ್ಳುತ್ತಿರುವ ಜಿಲ್ಲೆಗಳನ್ನು ಹೊರತುಪಡಿಸಿ ಕಿಶೋರಿ ಶಕ್ತಿ ಯೋಜನೆಯು ಉಳಿದ 10 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಪ್ರತಿ ವರ್ಷ ಐ.ಸಿ.ಡಿ.ಎಸ್. ಯೋಜನೆಯಡಿ 150 ಪ್ರಾಯ ಪೂರ್ವ ಬಾಲಕಿಯರಿಗೆ ವರ್ಷದ 300 ದಿನ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತದೆ. (2017–18ನೇ ಸಾಲಿನಲ್ಲಿ 40.96 ಲಕ್ಷಗಳ ಅನುದಾನ ಬಿಡುಗಡೆಯಾಗಿದೆ.)

## 4. ಪ್ರಾಯ ಪೂರ್ವ ಬಾಲಕಿಯರ ಯೋಜನೆ/ ಸಬಲಾ (ಎಸ್.ಎ.ಜಿ.)

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಕ್ರಮವಾಗಿ 60:40ರ ಅನುಪಾತದಲ್ಲಿ ಈ ಯೋಜನೆಗೆ ತಗುಲುವ ವೆಚ್ಚವನ್ನು ಭರಿಸುತ್ತವೆ. ಕಿಶೋರಾವಸ್ಥೆಯು ಮಾನಸಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಗೆ ಸಂಬಂಧಿಸಿದಂತೆ ಒಂದು ಪ್ರಮುಖ ಘಟ್ಟವಾಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಸೌಲಭ್ಯ ಒದಗಿಸುವುದಕ್ಕಾಗಿ ಹೊಸ ಚಿಂತನೆಯ ರೂಪದಲ್ಲಿ ಕಿಶೋರಿ ಶಕ್ತಿ ಯೋಜನೆ ಹಾಗೂ ಪ್ರಾಯಪೂರ್ವ ಬಾಲಕಿಯರಿಗೆ ಪೌಷ್ಠಿಕ ಆಹಾರ ಕಾರ್ಯಕ್ರಮ (ಎನ್.ಪಿ.ಎ.ಜಿ.) ಈ ಎರಡು ಯೋಜನೆಗಳನ್ನು ವಿಲೀನಗೊಳಿಸಿ ಕೇಂದ್ರ ಸರ್ಕಾರವು “ಸಬಲ” ಎಂಬ ಹೊಸ ಯೋಜನೆಯನ್ನು ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ. ಸದರಿ ಯೋಜನೆಯಡಿ ರಾಜ್ಯದ 9 ಜಿಲ್ಲೆಗಳನ್ನು (ಕಲಬುರಗಿ, ಕೋಲಾರ, ಬೆಂಗಳೂರು, ವಿಜಯಪುರ, ಬಳ್ಳಾರಿ, ಧಾರವಾಡ, ಚಿಕ್ಕಮಗಳೂರು, ಉತ್ತರ ಕನ್ನಡ, ಕೊಡಗು) ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದೆ.

2017–18ನೇ ಸಾಲಿಗೆ ಸದರಿ ಯೋಜನೆಯನ್ನು ಪ್ರಾಯಪೂರ್ವ ಬಾಲಕಿಯರ ಯೋಜನೆಯನ್ನಾಗಿ ಹೆಸರಿಸಿ ಇನ್ನೂ 11 ಜಿಲ್ಲೆಗಳಿಗೆ ವಿಸ್ತರಿಸಲಾಯಿತು. (ಬಾಗಲಕೋಟೆ, ಬೀದರ್, ಬೆಳಗಾವಿ, ಚಿಕ್ಕಬಳ್ಳಾಪುರ, ಕಲಬುರಗಿ, ಯಾದಗಿರಿ, ಗದಗ, ಕೊಪ್ಪಳ, ಶಿವಮೊಗ್ಗ, ಹಾವೇರಿ, ದಾವಣಗೆರೆ) ಪ್ರಸ್ತುತ ರಾಜ್ಯದ 20 ಜಿಲ್ಲೆಗಳಲ್ಲಿ ಪ್ರಾಯ ಪೂರ್ವ ಬಾಲಕಿಯರ ಯೋಜನೆಯನ್ನು ಅನುಷ್ಠಾನಗೊಳಿಸಿದೆ.

ಈ ಯೋಜನೆಯಡಿ ಪೂರಕ ಪೌಷ್ಠಿಕ ಆಹಾರ (ಎಸ್.ಎನ್.ಪಿ.) ಪೌಷ್ಠಿಕೇತರ ಅಂಶ (ಎನ್.ಎನ್.ಸಿ.)ಗಳ ಸೇವೆಯನ್ನು ಕಿಶೋರಿಯರಿಗೆ ನೀಡಲಾಗುತ್ತಿದೆ. ಎಸ್.ಎನ್.ಪಿ. ಯನ್ನು 11 ರಿಂದ 14 ವರ್ಷದ ಶಾಲೆಯಿಂದ ಹೊರಗೆ ಉಳಿದ ಕಿಶೋರಿಯರಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸಲು ಕೇಂದ್ರ ಸರ್ಕಾರ ನಿರ್ದೇಶನ ನೀಡಿರುತ್ತದೆ. ನಾನ್ ಎನ್.ಪಿ.ಯಡಿ ಕಿಶೋರಿಯರಿಗೆ ಆರೋಗ್ಯ ತಪಾಸಣೆ, ಪೌಷ್ಠಿಕತೆ ಮತ್ತು ಆರೋಗ್ಯ ಶಿಕ್ಷಣ (ಎನ್.ಎಚ್.ಇ.), ಕುಟುಂಬ ಕಲ್ಯಾಣ, ಮಕ್ಕಳ ಪಾಲನೆ, ಗೃಹ ನಿರ್ವಹಣೆ, ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ, ಜೀವನ ಕೌಶಲ್ಯ ಶಿಕ್ಷಣ, ವೃತ್ತಿಪರ ಅಥವಾ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಲಾಗುತ್ತಿದೆ. 2017–18ನೇ ಸಾಲಿಗೆ ರೂ.145.84 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿದ್ದು, ರೂ. 109.73 ಲಕ್ಷಗಳ ವೆಚ್ಚ ಭರಿಸಲಾಗಿದೆ.

## 5. ಪಾಲನೆ ಮತ್ತು ಪೋಷಣೆ ಅಗತ್ಯವಿರವ ಮಕ್ಕಳಿಗೆ ಯೋಜನೆ (ನಿರ್ಗತಿಕ ಮಕ್ಕಳ ಕುಟೀರ)

ಅನಾಥ ಮತ್ತು ನಿರ್ಗತಿಕ ಮಕ್ಕಳ ಪಾಲನೆ ಮತ್ತು ಪೋಷಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಸದರಿ ಯೋಜನೆಯನ್ನು ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಡಿ ಜಾರಿಗೆ ತರುತ್ತಿದ್ದು, ಕನಿಷ್ಠ ಮೂರು ವರ್ಷ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ 25 ಮಕ್ಕಳ ಒಂದು ಘಟಕದಂತೆ ಪಾಲನೆ ಹಾಗೂ ಪೋಷಣೆಗೆ ನಿರ್ಗತಿಕ ಮಕ್ಕಳ ಕುಟೀರವನ್ನು ತೆರೆಯಲು ಅನುಮತಿಯೊಂದಿಗೆ ಧನ ಸಹಾಯವನ್ನು ನೀಡಲಾಗುವುದು. ಈ ಯೋಜನೆಯ ರೂಪು–ರೇಷೆಗಳ ಪ್ರಕಾರ ಅನುಮೋದಿತ ವೆಚ್ಚದ ಶೇ.90 ರಷ್ಟನ್ನು ರಾಜ್ಯ ಸರ್ಕಾರದಿಂದ ಅನುದಾನದ ರೂಪದಲ್ಲಿ ನೀಡಲಾಗುತ್ತಿದೆ. ಉಳಿದ ಶೇ. 10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುವುದು. ಈ ಯೋಜನೆಯಡಿ ಪ್ರತಿ ಮಗುವಿನ ನಿರ್ವಹಣೆಗಾಗಿ ಮಾಸಿಕ ರೂ. 1000ಗಳ ಅನುದಾನವನ್ನು ನೀಡಲಾಗುತ್ತದೆ. ರಾಜ್ಯದಲ್ಲಿ 145 ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ 267 ಕುಟೀರಗಳು ಕಾರ್ಯನಿರ್ವಹಿಸುತ್ತಿವೆ.

## 6. ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ಐ.ಸಿ.ಪಿ.ಎಸ್.)

ಕೇಂದ್ರ ಸರ್ಕಾರವು ಹಾಲಿ ಇರುವ ಯೋಜನೆಗಳಾದ ಬಾಲ ನ್ಯಾಯ ಕಾಯ್ದೆಯ ಅನುಷ್ಠಾನ, ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ತಂಗುದಾಣಗಳು, ದತ್ತು ಕಾರ್ಯಕ್ರಮ ಮತ್ತು ಮಕ್ಕಳ ಸಹಾಯವಾಣಿ ಸೇವೆಗಳ ಕಾರ್ಯಕ್ರಮಗಳನ್ನು ಒಟ್ಟುಗೂಡಿಸಿ ನೂತನವಾದ ಕೇಂದ್ರ ಪುರಸ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು 2009–10 ರಿಂದ ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯದಲ್ಲೂ ಸಹ ಜಾರಿಗೆ ತರಲಾಗಿದೆ. 22, ಮಾರ್ಚ್ 2010 ರಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಸದರಿ ಐ.ಸಿ.ಪಿ.ಎಸ್.ಯೋಜನೆಯ ಅನುಷ್ಠಾನದ ಬಗ್ಗೆ ಎಂ.ಓ.ಯು. ಸಹಿಯಾಗಿರುತ್ತದೆ. ಕರ್ನಾಟಕ ಸಂಘ ನೋಂದಣಿ ಕಾಯಿದೆ 1960ರ ಅನ್ವಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯನ್ನು (ಕೆ.ಎಸ್.ಐ.ಸಿ.ಪಿ.ಎಸ್.) 5, ಫೆಬ್ರವರಿ 2011 ರಂದು ನೋಂದಣಿ ಮಾಡಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ನಿರ್ಲಕ್ಷತೆಗೊಳಗಾದ, ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ, ಶೋಷಣೆಗೊಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಮತ್ತು ಸಂಕಷ್ಟದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುತ್ತದೆ.

ಐ.ಸಿ.ಪಿ.ಎಸ್.ಯೋಜನೆಯಡಿ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ತೆರೆದ ತಂಗುದಾಣಗಳು, ದತ್ತು ಕಾರ್ಯಕ್ರಮ, ಮಕ್ಕಳ ಸಹಾಯವಾಣಿ, ಪ್ರಾಯೋಜಕತ್ವ ಕಾರ್ಯಕ್ರಮ ಇನ್ನೂ ಮೊದಲಾದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

## 7. ರಾಜ್ಯ ಮಕ್ಕಳ ರಕ್ಷಣಾ ಘಟಕ

ರಾಜ್ಯ ಮಕ್ಕಳ ರಕ್ಷಣಾ ಘಟಕವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಯೂನಿಸೆಫ್ ಹೈದರಾಬಾದ್‌ನ ಸಹಯೋಗದೊಂದಿಗೆ ರಾಜ್ಯದಲ್ಲಿ 2008–09ರಲ್ಲಿ ಅಸ್ತಿತ್ವಕ್ಕೆ ಬಂದಿದೆ. ಮಕ್ಕಳ ರಕ್ಷಣೆಗೆ ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸಹಕರಿಸುವ ಉದ್ದೇಶ ಹೊಂದಿರುತ್ತದೆ. ರಕ್ಷಣಾ ಯೋಜನೆಯ ಅನುಷ್ಠಾನದಲ್ಲಿ ಬೆಂಬಲ ಘಟಕವಾಗಿ ಕಾರ್ಯ ನಿರ್ವಹಿಸುತ್ತಿದೆ.

## 8. ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಐ.ಸಿ.ಪಿ.ಎಸ್. ಮಾರ್ಗಸೂಚಿಯನ್ವಯ ಪ್ರತಿ ಜಿಲ್ಲೆಗಳಲ್ಲಿ (30 ಜಿಲ್ಲೆಗಳಲ್ಲಿ) ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳನ್ನು ಮಕ್ಕಳ ರಕ್ಷಣೆಗೆ ಹೆಚ್ಚು ಒತ್ತು ನೀಡುವ ದೃಷ್ಟಿಯಲ್ಲಿ ರಚಿಸಲಾಗಿದ್ದು, ಅವುಗಳು ಕಾರ್ಯನಿರ್ವಹಿಸುತ್ತಿವೆ. ಈ ಘಟಕಗಳು ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣಾ ಕಾಯ್ದೆಗಳು, ರಾಜ್ಯ ಮಕ್ಕಳ ಕ್ರಿಯಾ ಯೋಜನೆ ಹಾಗೂ ಮಕ್ಕಳಿಗೆ ಸಂಬಂಧಿಸಿದ ಇತರ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸುತ್ತದೆ.

## 9. ರಾಷ್ಟ್ರೀಯ ಶಿಶು ಪಾಲನಾ ಕೇಂದ್ರ ಯೋಜನೆ

ರಾಷ್ಟ್ರೀಯ ಶಿಶು ಪಾಲನಾ ಕೇಂದ್ರ ಯೋಜಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಪಾಲು ಅನುಕ್ರಮವಾಗಿ 60:30:10ರ ಅನುಪಾತದಂತೆ ಅನುದಾನವನ್ನು ಒದಗಿಸಲಾಗಿರುತ್ತದೆ. ನವೀಕೃತಗೊಂಡ ಈ ಯೋಜನೆಯು 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಪ್ರಾರಂಭಿಕ ಬಾಲ್ಯಾವಸ್ಥೆಯ ಸೇವೆಗಳನ್ನು ನೀಡುವಲ್ಲಿ ಮಹತ್ವಪೂರ್ಣ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುತ್ತದೆ. ಉದ್ಯೋಗಸ್ಥ ತಾಯಂದಿರು ತಮ್ಮ ಕೆಲಸದ ಅವಧಿಯಲ್ಲಿ ಮಕ್ಕಳ ಸಮಗ್ರ ಪೋಷಣೆಗಾಗಿ ಶಿಶು ಪಾಲನಾ ಕೇಂದ್ರದಲ್ಲಿ ತಮ್ಮ ಮಕ್ಕಳನ್ನು ಕಳುಹಿಸಲು ಅನುಕೂಲವಾಗುತ್ತದೆ.

## ಈ ಯೋಜನೆಯ ಉದ್ದೇಶಗಳೆಂದರೆ

- ಉದ್ಯೋಗಸ್ಥ ತಾಯಂದಿರ 6 ತಿಂಗಳಿಂದ 6 ವರ್ಷದ ಮಕ್ಕಳನ್ನು ದಿನಪೂರ್ತಿ ಸುರಕ್ಷಿತವಾಗಿ ನೋಡಿಕೊಳ್ಳುವುದು.
- ಮಕ್ಕಳ ಪೌಷ್ಠಿಕ ಹಾಗೂ ಆರೋಗ್ಯ ಮಟ್ಟವನ್ನು ಸುಧಾರಿಸುವುದು.
- ಮಕ್ಕಳ ಭೌತಿಕ, ಸಾಮಾಜಿಕ, ಭಾವನಾತ್ಮಕ ಬೆಳವಣಿಗೆಯನ್ನು ಉತ್ತೇಜಿಸುವುದು.
- ಮಕ್ಕಳನ್ನು ಕಾಳಜಿಯಿಂದ ನೋಡಿಕೊಳ್ಳುವಂತೆ ತಾಯಂದಿರಿಗೆ ಹಾಗೂ ಪೋಷಕರಿಗೆ ಶಿಕ್ಷಣ ನೀಡುವುದು.

## 10. ಭಾಗ್ಯಲಕ್ಷ್ಮೀ ಯೋಜನೆ

ಭಾಗ್ಯಲಕ್ಷ್ಮೀ ಯೋಜನೆಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಂದು ಪ್ರಮುಖ ಯೋಜನೆಯಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಹೆಣ್ಣು ಮಗುವಿನ ಜನನವನ್ನು ಪ್ರೋತ್ಸಾಹಿಸುವ ಮೂಲಕ ಲಿಂಗಾನುಪಾತವನ್ನು ಉತ್ತಮಗೊಳಿಸುವ ಗುರಿಯನ್ನು ರಾಜ್ಯವು ಹೊಂದಿರುತ್ತದೆ. ಮತ್ತು ಇದಕ್ಕೆ ಪ್ರತಿಯಾಗಿ ಸಾಮಾಜಿಕ ಪಿಡುಗುಗಳಾದ ಬಾಲಕಾರ್ಮಿಕತೆ, ಹೆಣ್ಣು ಮಕ್ಕಳ ಭ್ರೂಣ ಹತ್ಯೆ, ಬಾಲ್ಯ ವಿವಾಹ, ಮಕ್ಕಳ ಸಾಗಾಣಿಕೆಯ ನಿರ್ಮೂಲನೆಗೆ ಸತತ ಪ್ರಯತ್ನಿಸಲಾಗುತ್ತಿದೆ. ಮಕ್ಕಳಿಗೆ ಆರ್ಥಿಕ ಸೌಲಭ್ಯವನ್ನು ನೀಡಲಾಗುವುದು.

ಈ ಆರ್ಥಿಕ ಸೌಲಭ್ಯದ ಮೊಬಲಗನ್ನು 2006–07 ರಿಂದ 2019–20ರ ಅವಧಿಯಲ್ಲಿ, ಪಾಲುದಾರ ಹಣಕಾಸು ಸಂಸ್ಥೆಯಾದ ಭಾರತೀಯ ಜೀವ ವಿಮಾ ನಿಗಮದಲ್ಲಿ ಮಗುವಿನ ಹೆಸರಿನಲ್ಲಿ ಠೇವಣಿ ಹೂಡಿ ಮಗುವಿಗೆ 18 ವರ್ಷ ತುಂಬಿದ ನಂತರ ಬಡ್ಡಿ ಸಮೇತ ಪರಿಪಕ್ವ ಮೊತ್ತವನ್ನು ನೀಡಲಾಗುವುದು.

ಭಾಗ್ಯಲಕ್ಷ್ಮೀ ಯೋಜನೆಯಡಿಯಲ್ಲಿ ಬರುವ ಫಲಾನುಭವಿಗಳ ದಾಖಲೆಗಳನ್ನು 18 ವರ್ಷದವರೆಗೆ ನಿಗಾವಹಿಸಲು ಚೈಲ್ಡ್ ಟ್ರ್ಯಾಕಿಂಗ್ ಪದ್ಧತಿಯ ತಂತ್ರಾಂಶವನ್ನು ಎನ್.ಐ.ಸಿ. ಸಂಸ್ಥೆಯ ಸಹಕಾರದೊಂದಿಗೆ ಅಭಿವೃದ್ಧಿ ಪಡಿಸಲಾಗಿರುತ್ತದೆ. ಈ ಸಾಫ್ಟ್‌ವೇರ್‌ನಲ್ಲಿ ಮಗುವಿನ ಆರೋಗ್ಯ, ಶಿಕ್ಷಣ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಮತ್ತು ಬೇರೆ ಇಲಾಖೆಗಳಿಂದ ಪಡೆದುಕೊಂಡ ಇನ್ನಿತರೆ ಸೌಲಭ್ಯಗಳನ್ನು ಮಗುವಿಗೆ 18 ವರ್ಷ ತುಂಬುವವರೆಗೆ ವೀಕ್ಷಿಸಬಹುದಾಗಿದೆ. 24 ಫೆಬ್ರವರಿ 2018ರ ಸರ್ಕಾರದ ಆದೇಶದ ಮಾನದಂಡದಂತೆ ಈ ಯೋಜನೆಯ ಸೌಲಭ್ಯಕ್ಕಾಗಿ ನೋಂದಾಯಿಸಿಕೊಳ್ಳಲು ಮಗು ಜನಿಸಿದ 2 ವರ್ಷಗಳ ಅವಧಿಯವರೆವಿಗೂ ಕಾಲಾವಕಾಶವನ್ನು ನೀಡಲಾಗಿರುತ್ತದೆ.

## 11. ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ

ಬಿ.ಜೆ.ಪಿ. ಸರ್ಕಾರ "ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ" ಎಂಬ ಹೊಸ ಯೋಜನೆಯನ್ನು 22, ಜನವರಿ 2015ರಂದು ರಾಷ್ಟ್ರೀಯ ಮಟ್ಟದಲ್ಲಿ ಜಾರಿಗೆ ತಂದಿದೆ. ಕುಸಿಯುತ್ತಿರುವ ಮಕ್ಕಳ ಲಿಂಗ ಅನುಪಾತವನ್ನು ಉತ್ತಮ ಪಡಿಸುವುದು ಹಾಗೂ ಮಹಿಳೆಯರನ್ನು ಸಬಲೀಕರಣಗೊಳಿಸುವವು, ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು, ಮಕ್ಕಳ ಲಿಂಗಾನುಪಾತ ಇಳಿಮುಖವಾಗುತ್ತಿರುವ ಭಾರತದ 100 ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಇದರಲ್ಲಿ ಕರ್ನಾಟಕ ರಾಜ್ಯದ ವಿಜಯಪುರ ಜಿಲ್ಲೆಯು ಒಂದಾಗಿದೆ. ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯಗಳ ಸಹಕಾರದಿಂದ ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಯನ್ನು 2018–19ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯ ಜೊತೆಗೆ 4 ಜಿಲ್ಲೆಗಳಾದ ಬಾಗಲಕೋಟೆ, ಹಾವೇರಿ, ಗದಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

### ಈ ಯೋಜನೆಯ ಉದ್ದೇಶವೆಂದರೆ

- ಲಿಂಗ ಪಕ್ಷಪಾತ ಮತ್ತು ಲಿಂಗ ಆಯ್ಕೆ ಮಾಡುವುದನ್ನು ತಡೆಗಟ್ಟುವುದು
- ಹೆಣ್ಣು ಮಕ್ಕಳ ಉಳಿವು ಮತ್ತು ಅವರ ರಕ್ಷಣೆಯನ್ನು ಖಾತ್ರಿಗೊಳಿಸುವುದು
- ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಖಾತ್ರಿಗೊಳಿಸುವುದು.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

### 12. ಉಜ್ವಲ ಯೋಜನೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯವು ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ತಡೆಗಟ್ಟಲು ಹಾಗೂ ಸಾಗಾಣಿಕೆಗೆ ಹಾಗೂ ವಾಣಿಜ್ಯ ಲೈಂಗಿಕ ದುರುಪಯೋಗಕ್ಕೆ ಒಳಪಟ್ಟವರನ್ನು ರಕ್ಷಿಸಲು, ಇವರಿಗೆ ಪುನರ್‌ವಸತಿ ಕಲ್ಪಿಸಲು ಮತ್ತು ಕುಟುಂಬದವರೊಂದಿಗೆ ಪುನರ್ ವಿಲೀನಗೊಳಿಸಲು ಉಜ್ವಲ ಎಂಬ ಸಮಗ್ರ ಯೋಜನೆಯನ್ನು ರೂಪಿಸಿದೆ.

### ಯೋಜನೆಯ ಉದ್ದೇಶಗಳು

- ಸಮಾಜವನ್ನು ಸಜ್ಜುಗೊಳಿಸಿ, ಸ್ಥಳೀಯ ಸಮುದಾಯವನ್ನು ತೊಡಗಿಸಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಸಾರ್ವಜನಿಕ ಸಭೆಗಳನ್ನು ನಡೆಸಿ, ಕಾರ್ಯಗಾರ/ವಿಚಾರ ಗೋಷ್ಠಿಗಳ ಮೂಲಕ ಹಾಗೂ ನವೀನ ಚಟುವಟಿಕೆಗಳ ಮೂಲಕ ಮಹಿಳೆಯರು ಮತ್ತು ಮಕ್ಕಳು ವಾಣಿಜ್ಯ ಲೈಂಗಿಕ ದುರುಪಯೋಗಕ್ಕಾಗಿ ಸಾಗಾಣಿಕೆಯಾಗುವುದನ್ನು ತಡೆಯಲು ಕ್ರಮಕೈಗೊಳ್ಳುವುದು.
- ಸಾಗಾಣಿಕೆಗೆ ಒಳಗಾದವರನ್ನು ಶೋಷಣೆ ಸ್ಥಳದಿಂದ ರಕ್ಷಿಸಿ ಸುರಕ್ಷಿತ ಸ್ಥಳದಲ್ಲಿ ಇಡಲು ಸಹಾಯ ಮಾಡುವುದು.
- ಸಾಗಾಣಿಕೆಗೆ ಒಳಗಾದವರಿಗೆ ಮೂಲಭೂತ ಸೌಲಭ್ಯ, ಆಶ್ರಯ, ಆಹಾರ, ವಸ್ತ್ರ, ಸಮಾಲೋಚನೆ ಒಳಗೊಂಡಂತೆ ವೈದ್ಯಕೀಯ ಸೌಲಭ್ಯ, ಕಾನೂನಿನ ನೆರವು ಮತ್ತು ಮಾರ್ಗದರ್ಶನ ಹಾಗೂ ವೃತ್ತಿ ತರಬೇತಿ ಸೇರಿದಂತೆ ತಕ್ಷಣ ಮತ್ತು ದೀರ್ಘಕಾಲಿಕ ಪುನರ್ವಸತಿ ಸೇವೆಯನ್ನು ಒದಗಿಸುವುದು.
- ಸಾಗಾಣಿಕೆಗೆ ಒಳಗಾದವರನ್ನು ಕುಟುಂಬದೊಂದಿಗೆ ಮತ್ತು ಸಮಾಜದಲ್ಲಿ ವಿಲೀನಗೊಳಿಸಲು ಸಹಾಯ ಮಾಡುವುದು.
- ಗಡಿ ಪ್ರದೇಶವನ್ನು ದಾಟಿ ಬಂದಂತಹ ಸಾಗಾಣಿಕೆಗೆ ಒಳಗಾದವರನ್ನು ತನ್ನ ಮೂಲ ರಾಷ್ಟ್ರಕ್ಕೆ ಕಳುಹಿಸಿಕೊಡಲು ಸಹಾಯ ಮಾಡುವುದು.

### 13. ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿ

ಮಕ್ಕಳ ಕಲ್ಯಾಣ/ಅಭಿವೃದ್ಧಿ/ರಕ್ಷಣೆ ಕ್ಷೇತ್ರದಲ್ಲಿ ನಿರತವಾಗಿರುವ ವ್ಯಕ್ತಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಅವಿರತ ಸೇವೆಗಳನ್ನು ಗುರುತಿಸಿ, ಪ್ರಶಸ್ತಿ ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದು, 2018–19ನೇ ಸಾಲಿನಿಂದ ನೇರವಾಗಿ ಆನ್‌ಲೈನ್ ಮುಖಾಂತರ ಕೇಂದ್ರ ಸರ್ಕಾರದ ಇಲಾಖಾ ಮಂತ್ರಾಲಯದ ಮುಖಾಂತರ ಅರ್ಜಿಯನ್ನು ಆಹ್ವಾನಿಸಿ ಅವರೇ ಆಯ್ಕೆ ಮಾಡಿ ಸನ್ಮಾನಿಸುತ್ತಾರೆ.

### 14. ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಬಾಲಶಕ್ತಿ ಪುರಸ್ಕಾರ

ಕ್ರೀಡೆ, ಕಲೆ, ಸಾಂಸ್ಕೃತಿಕ, ನಾವಿನ್ಯತೆ, ತಾರ್ಕಿಕ, ಸಮಾಜಸೇವೆ, ಸಂಗೀತ ಮತ್ತು ಕೇಂದ್ರ ಆಯ್ಕೆ ಸಮಿತಿಯ ನಿರ್ಧಾರದ ಪ್ರಕಾರ ಮಾನ್ಯತೆಗೆ ಯೋಗ್ಯವಾದ ಯಾವುದೇ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದಂತಹ ಮಕ್ಕಳಿಗೆ ರಾಷ್ಟ್ರ ಪ್ರಶಸ್ತಿಯನ್ನು ನೀಡುವ ಯೋಜನೆಯನ್ನು ಭಾರತ ಸರ್ಕಾರ ಜಾರಿಗೆ ತಂದಿದೆ. ಈ ಪ್ರಶಸ್ತಿಗೆ ಅಸಾಧಾರಣ ಸಾಧನೆಯನ್ನು ಮಾಡಿರುವ 5 ರಿಂದ 18 ವರ್ಷದೊಳಗಿನ ಮಕ್ಕಳನ್ನು ಆಯ್ಕೆ ಮಾಡಲಾಗುವುದು. ರಾಷ್ಟ್ರ ಮಟ್ಟದಲ್ಲಿ ಒಂದು ಮಗುವಿಗೆ ಚಿನ್ನದ ಪದಕ ಮತ್ತು ಪ್ರತಿ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಒಂದು ಮಗುವಿಗೆ ಬೆಳ್ಳಿ ಪದಕ ನೀಡಲಾಗುವುದು. ಚಿನ್ನದ ಪದಕ ಪಡೆದ ಮಗುವಿಗೆ ರೂ.20,000 ನಗದು, ರೂ.10000 ಮೌಲ್ಯದ ಪುಸ್ತಕ ವೋಚರ್ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. ಬೆಳ್ಳಿ ಪದಕ ಪಡೆದ ಮಕ್ಕಳಿಗೆ ರೂ. 10000 ನಗದು, ರೂ. 3000 ಮೌಲ್ಯದ ಪುಸ್ತಕ ವೋಚರ್ ಹಾಗೂ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುವುದು.

### ಭಾರತದಲ್ಲಿ ಮಕ್ಕಳ ವಾಸ್ತವಿಕ ಸ್ಥಿತಿಗತಿ

ರಾಜ್ಯದ ಕೆಲವು ಪ್ರಮುಖ ಸೂಚಕಗಳೆಂದರೆ ನವಜಾತ ಶಿಶುಗಳ ಮರಣ ಪ್ರಮಾಣವು 1000 ಜೀವಂತ ಜನನಗಳಿಗೆ 19 ಆಗಿದೆ ಮತ್ತು 100,000 ಜೀವಂತ ಜನನಗಳಿಗೆ 133 ರ ಹೆಚ್ಚಿನ ತಾಯಿಯ ಮರಣ ಅನುಪಾತವಿದೆ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 4 ರ ಪ್ರಕಾರ, ಐದು ವರ್ಷದೊಳಗಿನ ಮಕ್ಕಳ ಕುಂಠಿತವು ಶೇಕಡಾ 36 ಮತ್ತು ಐದು ವರ್ಷದೊಳಗಿನ ಶೇಕಡಾ 26 ರಷ್ಟು ಮಕ್ಕಳು ವ್ಯರ್ಥವಾಗುತ್ತಾರೆ ಮತ್ತು ಶೇಕಡಾ 10.5 ರಷ್ಟು ಮಕ್ಕಳು ತೀವ್ರವಾಗಿ ವ್ಯರ್ಥವಾಗುತ್ತಾರೆ. ರಾಜ್ಯದಲ್ಲಿ ಗ್ರಾಮೀಣ ನೈರ್ಮಲ್ಯ ವ್ಯಾಪ್ತಿ ಶೇಕಡಾ 86 ರಷ್ಟಿದೆ.

ಶಿಕ್ಷಣದ ವಾರ್ಷಿಕ ಸ್ಥಿತಿ ವರದಿ 2016 ರ ಸಂಶೋಧನೆಗಳು 10 ವರ್ಷಗಳ ನಂತರ, ಆರಂಭಿಕ ತರಗತಿಗಳಲ್ಲಿ ಸಾರ್ವಜನಿಕ–ಅನುದಾನಿತ ಶಾಲೆಗಳಲ್ಲಿ ಓದುವಿಕೆ ಮತ್ತು ಅಂಕಗಣಿತದ ಅಂಕಗಳು ಸುಧಾರಿಸಿದೆ ಎಂದು ತೋರಿಸುತ್ತದೆ. NFHS–4 ಪ್ರಕಾರ, 20–24 ವರ್ಷ ವಯಸ್ಸಿನ 23.2 ಪ್ರತಿಶತ ಮಹಿಳೆಯರು 18 ವರ್ಷಕ್ಕಿಂತ ಮುಂಚೆಯೇ ಮದುವೆಯಾಗುತ್ತಾರೆ.

2021–22ನೇ ಸಾಲಿನಲ್ಲಿ ದಾಖಲಾದ 2,819 ದೂರುಗಳ ಪೈಕಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು 2,401 ಬಾಲ್ಯ ವಿವಾಹಗಳನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದು, 419 ವಿವಾಹಗಳು ನಡೆದಿವೆ. ಮದುವೆಗೆ ಸಂಬಂಧಿಸಿದಂತೆ ಪೊಲೀಸರು 389 FIRಗಳನ್ನು ದಾಖಲಿಸಿದ್ದಾರೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ, ದೂರುಗಳ ಸಂಖ್ಯೆ ಕಡಿಮೆಯಾದರೂ, ಬಾಲ್ಯ ವಿವಾಹಗಳ ಸಂಖ್ಯೆ ದ್ವಿಗುಣಗೊಂಡಿದೆ ಎಂದು ಅಂಕಿಅಂಶಗಳು ತೋರಿಸುತ್ತವೆ.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷೆ ಕೃಪಾ ಆಳ್ವ ಮಾತನಾಡಿ, ನಿರುದ್ಯೋಗ ಮತ್ತು ಆರ್ಥಿಕ ಅಭದ್ರತೆಯಿಂದಾಗಿ ಬಾಲ್ಯ ವಿವಾಹಗಳು ವಿಪರೀತವಾಗಿ ಹೆಚ್ಚಿವೆ. "ಕೋವಿಡ್ 19 ರ ನಂತರ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ ಮತ್ತು ಅದೇ ರೀತಿ ಬಾಲ್ಯವಿವಾಹಗಳು ಸಹ ಹೆಚ್ಚಾಗುವುದನ್ನು ನೀವು ನೋಡಿದರೆ. ಗ್ರಾಮೀಣ ಪ್ರದೇಶಗಳಲ್ಲಿನ ಪೋಷಕರಲ್ಲಿ ಸಂಕಟವಿದೆ, ಇದು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸದಿರಲು ಅವರನ್ನು ತಳ್ಳಿದೆ, ಏಕೆಂದರೆ ಕೆಲವರು ಶಿಕ್ಷಣವನ್ನು ಭರಿಸುವುದರ ಜೊತೆಗೆ ಅವರಿಗೆ ಮದುವೆ ಮಾಡಲು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, "ಎಂದು ಆಳ್ವ ಹೇಳಿದರು.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಮಕ್ಕಳ ಮತ್ತು ಕಾನೂನು ಕೇಂದ್ರದ ಹಿರಿಯ ಸಹವರ್ತಿ ನಿರಂಜನ್

*– 24ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬೆಸಗರಹಳ್ಳಿ ರಾಮಣ್ಣ ಮತ್ತು ಬೊಮ್ಮನಾಯಕನಹಳ್ಳಿ ಕೃಷ್ಣಪ್ಪನವರ ಸಣ್ಣ ಕಥಾ ಸಾಹಿತ್ಯದ ವಸ್ತುವಿನ ತೌಲನಿಕ ವಿವೇಚನೆ

✍ **ಡಾ. ಪ್ರಸನ್ನ ಎಂ.ಎಸ್.** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ತೌಲನಿಕ ಸಾಹಿತ್ಯ ಸಾಹಿತ್ಯಧ್ಯಯನದಲ್ಲೇ ಒಂದು ವ್ಯಾಪಕವೂ ಸಮೃದ್ಧವೂ ಆದ ಅಧ್ಯಯನ ಕ್ಷೇತ್ರ. ಸಾಹಿತ್ಯದಲ್ಲೂ ಇದು ಕಿರಿದು–ಹಿರಿದು, ಮುಖ್ಯ–ಅಮುಖ್ಯ ಎಂಬ ಪಕ್ಷಪಾತ ತೋರುವುದಿಲ್ಲ. ಚುಟುಕದಿಂದ ಮಹಾಕಾವ್ಯದವರೆಗೆ, ಸಣ್ಣ ಕಥೆಯಿಂದ ಕಾದಂಬರಿಯವರೆಗೆ, ಏಕಾಂಕದಿಂದ ಎಪಿಕ್ ಥಿಯೇಟರ್‌ವರೆಗೆ ಎಲ್ಲವನ್ನೂ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ಹೋಲಿಕೆ, ವ್ಯತ್ಯಾಸಗಳ ಪರಿಶೀಲನೆಗೆ ಇದು ಸೃಜನಶೀಲ ಸಾಹಿತ್ಯದಂತೆ ಕಾವ್ಯ ಮೀಮಾಂಸೆ, ಸಾಹಿತ್ಯ ವಿಮರ್ಶೆ ಇದನ್ನೂ ಒಳಗೊಳ್ಳುವುದರಿಂದ ಇದರ ವಸ್ತು ಬಹುಮುಖ ವಾಗಿರುವುದಲ್ಲದೆ, ವ್ಯಾಪಕವಾದುದೂ ಆಗಿರುತ್ತದೆ. ತೌಲನಿಕ ಅಧ್ಯಯನದಲ್ಲಿ ಕೃತಿಗಳ ಹೋಲಿಕೆಯಷ್ಟೇ ಆಗಬೇಕಿಲ್ಲ, ಬೇರೆ ಬೇರೆ ಭಾಷೆಗಳನ್ನಾಡುವವರ ನಡುವಣ ಸಾಹಿತ್ಯಿಕ ಬಾಂಧವ್ಯಗಳು, ಸಂಪರ್ಕಗಳೂ ಈ ಅಧ್ಯಯನಕ್ಕೆ ಸೇರುತ್ತವೆ. ಎಂದರೆ ಅನುವಾದ, ಆಧಾರಿತ ಕೃತಿ, ಸ್ವೀಕರಣ ಇವೆಲ್ಲಾ ಈ ಹರಿವಿನಲ್ಲಿ ಸೇರುತ್ತವೆ. ವೈದೃಶ್ಯ,ಸಾದೃಶ್ಯ, ಪ್ರಭಾವ, ಮೂಲ ಇವುಗಳ ಪರಿಶೀಲನೆಯು ತೌಲನಿಕ ಅಧ್ಯಯನಕ್ಕೆ ಅಡಿಗಲ್ಲುಗಳು.

ತೌಲನಿಕ ಸಾಹಿತ್ಯದಲ್ಲಿ ಒಂದೇ ಪ್ರದೇಶಕ್ಕೆ ಸೇರಿದ ಹಲವು ಸಾಹಿತಿಗಳನ್ನು ಅಧ್ಯಯನಕ್ಕೆ ಅಳವಡಿಸಬಹುದು.ಒಂದೇ ಪ್ರಾದೇಶಿಕ ವರ್ಗಕ್ಕೆ ಸೇರಿದ ಸಾಹಿತಿಗಳಲ್ಲಿ ಇರುವ ಸಾದೃಶ್ಯ, ವೈದೃಶ್ಯಗಳನ್ನು ತುಲನೆ ಮಾಡಬಹುದು. ಇದರಿಂದ ಆ ಪ್ರದೇಶದಲ್ಲಿನ ಭಿನ್ನ ವಸ್ತು, ಆಶಯಗಳನ್ನು ಸಾಹಿತ್ಯ ಕೃತಿಗಳಲ್ಲಿ ಗುರುತಿಸಬಹುದು. ಸಾಹಿತ್ಯದ ವಸ್ತು ಒಂದೇ ಆದರೂ ಅದನ್ನು ಭಿನ್ನ ನೆಲೆಯಲ್ಲಿ ಅಭಿವ್ಯಕ್ತಪಡಿಸಿರುವ ಮಾರ್ಗವನ್ನು ವಿವೇಚಿಸಬಹುದು. ಒಂದೇ ಕಾಲಮಾನದಲ್ಲಿ ಸಾಹಿತಿಗಳು ಸಾಹಿತ್ಯವನ್ನು ರಚಿಸಿದ್ದರೂ ಅವರ ಸಾಹಿತ್ಯದ ಪ್ರೇರಣೆ–ಪ್ರಭಾವಗಳು ಭಿನ್ನವಾಗಿರುತ್ತವೆ. ಹಾಗಾಗಿ ಒಂದೇ ಕಾಲಮಾನದಲ್ಲಿ ರಚನೆಯಾದ ಸಾಹಿತ್ಯದಲ್ಲೂ ಹಲವು ಸಮಾನ, ವಿರುದ್ಧ ಅಂಶಗಳ ನೆಲೆಗಳನ್ನು ಗುರುತಿಸಬಹುದು.ಒಂದೇ ಪ್ರದೇಶಕ್ಕೆ ಸೇರಿದ ಸಾಹಿತಿಗಳ ಸಾಹಿತ್ಯದಲ್ಲಿ ಭಿನ್ನ ಆಶಯಗಳನ್ನು, ಸಂಕೀರ್ಣ ವಸ್ತುವಿನ ನಿರ್ವಹಣೆಯನ್ನು ತುಲನೆ ಮಾಡಬಹುದು. ಒಬ್ಬ ಸಾಹಿತಿಯ ಸಾಹಿತ್ಯವನ್ನು ಅದೇ ಪ್ರದೇಶಕ್ಕೆ ಸೇರಿದ ಮತ್ತೊಬ್ಬ ಸಾಹಿತಿಯ ಸಾಹಿತ್ಯದೊಡನೆ ತುಲನೆ ಮಾಡುವುದರಿಂದ ಅವರ ಸಾಹಿತ್ಯದ ಸತ್ವವನ್ನು, ಆಶಯವನ್ನು ತಿಳಿದು ಮೌಲ್ಯ ನಿರ್ಧರಿಸಬಹುದು.ಒಂದೇ ಪ್ರದೇಶದ ಭಿನ್ನ ಸಾಂಸ್ಕೃತಿಕ ಅಂಶಗಳನ್ನು, ಸಾಮಾಜಿಕ ಸ್ಥಿತ್ಯಂತರಗಳನ್ನು, ಪರಿಸರದ ಒಡನಾಟವನ್ನು, ವ್ಯಕ್ತಿಗಳ ಮನೋವ್ಯಾಪಾರವನ್ನು ಇಲ್ಲಿ ವಿವೇಚಿಸಬಹುದು.

ಸಣ್ಣ ಕಥಾ ಸಾಹಿತ್ಯದಲ್ಲಿ ಕಥೆಯ ವಸ್ತು, ಆಶಯ, ಭಾಷೆ, ಶೈಲಿ ಮತ್ತು ತಂತ್ರಗಳನ್ನು ಅನುಲಕ್ಷಿಸಿ ತುಲನೆ ಮಾಡಬಹುದು. ಕಥೆಗಳ ಮೇಲೆ ಬೀರಿರುವ ಪ್ರೇರಣೆ–ಪ್ರಭಾವಗಳು, ಅನುಕರಣೆ, ಸ್ವೀಕರಣೆ, ಮೂಲಗಳನ್ನು ತೌಲನಿಕವಾಗಿ ವಿವೇಚಿಸಬಹುದು. ಕಥೆಯ ವಸ್ತು ಪಡೆದಿರುವ ವಿಭಿನ್ನ ಮನೋಧರ್ಮವನ್ನು, ಕಥೆಯ ಭಾಷೆ–ಶೈಲಿ–ತಂತ್ರಗಳು ಪಡೆದಿರುವ ವಿಭಿನ್ನ ಅಭಿವ್ಯಕ್ತಿಯನ್ನು ತೌಲನಿಕ ವಿವೇಚನೆಗೆ ಅಳವಡಿಸಬಹುದು. ಸಮಾನ ಅಂಶಗಳಿರುವ ಹಲವು ಕಥೆಗಳನ್ನು ಒಂದೇ ಸೂರಿನಡಿ ತಂದು ಅವುಗಳ ಸಾಹಿತ್ಯದ ತಿರುಳನ್ನು ಅರಿಯಬಹುದು. ಪ್ರತಿಯೊಬ್ಬ ಸಾಹಿತಿಯ ಬರಹದಲ್ಲೂ ಅಡಗಿರುವ ಪ್ರಾದೇಶಿಕತೆಯ ಸೊಗಡನ್ನು ಗುರುತಿಸಬಹುದು. ತಮ್ಮ ಸಾಹಿತ್ಯದ ಅಭಿವ್ಯಕ್ತಿಯ ಮಾರ್ಗದಲ್ಲಿ ಪ್ರತಿಯೊಬ್ಬ ಲೇಖಕನು ಮಣ್ಣಿನ ವಾಸನೆಯ ಕಂಪನ್ನು ಬೀರಿರುತ್ತಾನೆ. ಇದರ ಹಿನ್ನೆಲೆಯಲ್ಲಿ ಒಂದೇ ಸೀಮೆಗೆ ಸೇರಿದ ಸಾಹಿತಿಗಳ ಸಾಹಿತ್ಯವನ್ನು ತೌಲನಿಕವಾಗಿ ವಿಶ್ಲೇಷಿಸಬಹುದು.ಒಂದೇ ಪ್ರಾದೇಶಿಕ ವರ್ಗಕ್ಕೆ ಸೇರಿದ ಸಾಹಿತಿಗಳು ಅಭಿವ್ಯಕ್ತಿಸಿರುವ ಭಾಷೆಯು ಒಂದೇ ಆದರೂ ಅದರಲ್ಲಿ ಅವರು ಬೆಳೆದು ಬಂದ ಪರಿಸರದ ಹಿನ್ನೆಲೆಯಲ್ಲಿ ಭಿನ್ನತೆಯನ್ನು ಗುರುತಿಸಬಹುದು. ಪ್ರಾದೇಶಿಕ ಕಥೆಗಾರರಲ್ಲಿರುವ ಸಮಾನ ಮತ್ತು ವಿಶಿಷ್ಟ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದು. ಈ ಹಿನ್ನೆಲೆಯಲ್ಲಿ ನಮ್ಮ ಭಾಷೆಯ ವಿವಿಧ ಲೇಖಕರ ಸಾಹಿತ್ಯದ ಅಂತಃಸತ್ತ್ವವನ್ನು ತೌಲನಿಕವಾಗಿ ಅಧ್ಯಯನ ಮಾಡಬಹುದು.

ಬೆಸಗರಹಳ್ಳಿ ರಾಮಣ್ಣ ಮತ್ತು ಬೊಮ್ಮನಾಯಕನಹಳ್ಳಿ ಕೃಷ್ಣಪ್ಪನವರು ಇಬ್ಬರು ಬಯಲು ಸೀಮೆಗೆ ಸೇರಿದ ಕಥೆಗಾರರಾಗಿದ್ದು ತಮ್ಮ ಕಥೆಗಳಲ್ಲಿ ಬಯಲು ಸೀಮೆಯ ಜೀವನದ ಸೊಬಗನ್ನು, ಕಷ್ಟ–ಕಾರ್ಪಣ್ಯಗಳನ್ನು, ಅಂತಃಕರಣದ ನೆಲೆಗಳನ್ನು ಅಭಿವ್ಯಕ್ತಿಸಿದ್ದಾರೆ. ಬೊಮ್ಮನಾಯಕನಹಳ್ಳಿ ಮತ್ತು ಬೆಸಗರಹಳ್ಳಿ ಗ್ರಾಮಗಳ ನಡುವೆ 12 ಕಿ. ಮೀಟರ್‌ಗಳ ಅಂತರವಿದ್ದು ಇಬ್ಬರು ತಾವು ಜನಿಸಿದ ಸ್ಥಳಗಳಿಂದ ಬಾಲ್ಯದ ದ್ರವ್ಯವನ್ನು ಪಡೆದು ಕಥೆಗಳನ್ನು ರಚಿಸಿದ್ದಾರೆ. ಇಬ್ಬರು ಕಥೆಗಾರರು ಗ್ರಾಮೀಣ ಸಂವೇದನೆ ಮತ್ತು ಶೋಷಿತರ ಪರ ದನಿಯನ್ನು ತಮ್ಮ ಕಥೆಗಳ ಮೂಲ ಸೆಲೆಯಾಗಿಸಿಕೊಂಡಿದ್ದಾರೆ. ನಿಸರ್ಗದ ಒಡನಾಡಿಯಾದ ರೈತನ ಬದುಕು ಮತ್ತು ಭಾವನೆಗಳನ್ನು ತಮ್ಮ ಕಥೆಗಳಲ್ಲಿ ನವಿರಾಗಿ ಚಿತ್ರಿಸಿದ್ದಾರೆ. ಹಲವು ಸಾಮಾಜಿಕ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ಬಿಂಬಿಸಿದ್ದಾರೆ. ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಜಾತಿವ್ಯವಸ್ಥೆಯ ಒಳನೋಟಗಳನ್ನು ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ತಾವು ಒಬ್ಬ ಮಾನವರಾಗಿ ಇತರರನ್ನು ಸಹಜೀವಿಗಳಂತೆ ನೋಡುವ ಇವರಿಬ್ಬರ ದೃಷ್ಟಿಕೋನವು ಕಥೆಗಳಲ್ಲಿ ನಿಚ್ಚಳವಾಗಿ ಮೂಡಿದೆ.

ನೆಲದ ಒಡಲು, ಗರ್ಜನೆ, ಹರಕೆಯ ಹಣ, ಒಂದು ಹುಡುಗನಿಗೆ ಬಿದ್ದ ಕನಸು, ನೆಲದ ಸಿರಿ, ಕೊಳಲು ಮತ್ತು ಖಡ್ಗ ಬೆಸಗರಹಳ್ಳಿ ರಾಮಣ್ಣನವರ ಕಥಾ ಸಂಕಲನಗಳು. ಬೊಮ್ಮನಾಯಕನ ಹಳ್ಳಿ ಕೃಷ್ಣಪ್ಪನವರು 'ಮಣ್ಣಿನ ಬದುಕು', 'ರಣಹದ್ದುಗಳು', 'ಒಂದು ಆತ್ಮಹತ್ಯೆಯ ಕಥೆ', 'ಗಾಂಧಿಯ ನಾಡಲ್ಲಿ ಹುಟ್ಟಿದವರು' ಎಂಬ ನಾಲ್ಕು ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕೃಷ್ಣಪ್ಪ ಮತ್ತು ರಾಮಣ್ಣನವರು ತಮ್ಮ ಕಥೆಗಳಲ್ಲಿ ಉಳ್ಳವರ ಕ್ರೌರ್ಯ, ದಬ್ಬಾಳಿಕೆ, ದರ್ಪ ಮತ್ತು ಶೋಷಣೆಯ ವಿವಿಧ ಮುಖಗಳನ್ನು ತೆರೆದಿಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಗೊಂಡಿರುವ ದ್ವೇಷ, ಈರ್ಷ್ಯೆ, ಮತ್ಸರಗಳಿಂದ ಉಂಟಾಗುವ ದುಷ್ಪರಿಣಾಮಗಳನ್ನು ತಮ್ಮ ಕಥೆಗಳಲ್ಲಿ ವಾಸ್ತವದ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ. ಇಬ್ಬರೂ ಕಥೆಗಾರರು ತಮ್ಮ ವಿಭಿನ್ನ ರೀತಿಯ ನಿರೂಪಣಾ ತಂತ್ರದಿಂದ ಕಥೆಗಳನ್ನು ನೇಯ್ದು ಸಹೃದಯರ ಮನಗೆದ್ದಿದ್ದಾರೆ. ತಮ್ಮ ಕಥೆಗಳಲ್ಲಿ ಆ ಪ್ರದೇಶಕ್ಕೆ ಸೀಮಿತವಾದ ಗ್ರಾಮ್ಯ ಭಾಷೆಯನ್ನು ಬಳಸಿ ಕಥೆಗಳನ್ನು ಹೊಸೆದಿರುವುದರಿಂದ ಆ ಕಥೆಗಳಲ್ಲಿ ಪ್ರಾದೇಶಿಕತೆಯ ಸೊಗಡು ಎದ್ದು ಕಾಣುತ್ತದೆ. ಇವರಿಬ್ಬರ ಹಲವು ಕಥೆಗಳ ವಸ್ತು ಒಂದೇ ಆಗಿದ್ದರೂ ಆಶಯವು ವಿಭಿನ್ನವಾಗಿದೆ. ಕೃಷ್ಣಪ್ಪನವರ ಕಥೆಗಳ ಮೇಲೆ ರಾಮಣ್ಣನವರ ಕಥೆಗಳ ಪ್ರಭಾವ ಗಾಢವಾಗಿ ಆಗಿದೆ ಎಂಬುದನ್ನು ಸ್ವತಃ ಕೃಷ್ಣಪ್ಪನವರೇ ಒಪ್ಪಿಕೊಂಡಿದ್ದಾರೆ. ಇಬ್ಬರು ಕಥೆಗಾರರು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸ್ವಸ್ಥ ಸಮಾಜದ ನಿರ್ಮಾಣದ ಆಶಯವನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ.ಕೃಷಿ ಸಂಸ್ಕೃತಿಯು ಇವರ ಕಥೆಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದು, ರೈತಪರ ಕಾಳಜಿಯನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಸಮಾಜದಲ್ಲಿ ನಡೆಯುತ್ತಿರುವ ನೀತಿ ರಹಿತ ವ್ಯವಸ್ಥೆಯ ಶೋಷಣೆಯನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಶೈಲಿಯ ದೃಷ್ಟಿಯಿಂದಲೂ ಇಬ್ಬರು ಕಥೆಗಾರರು ವಿಶಿಷ್ಟ ಅಭಿವ್ಯಕ್ತಿಯನ್ನು ತಮ್ಮ ಕಥೆಗಳಲ್ಲಿ ತೋರ್ಪಡಿಸಿದ್ದಾರೆ. ವಿಭಿನ್ನ ರೀತಿಯ ಶೈಲಿಯಿಂದಾಗಿ ಇವರ ಕಥೆಗಳು ಓದುಗರನ್ನು ಆಕರ್ಷಿಸಿವೆ.

ಕೃಷ್ಣಪ್ಪನವರ ಕಥೆಗಳ ಮೇಲೆ ಬೆಸಗರಹಳ್ಳಿ ರಾಮಣ್ಣನವರ ಕಥೆಗಳ ಪ್ರಭಾವಿದೆ. ಈ ಹಿನ್ನೆಲೆಯಲ್ಲಿ ಕೃಷ್ಣಪ್ಪನವರ ಪ್ರಾರಂಭದ ಕಥೆಗಳ ವಸ್ತು ಮತ್ತು ಬೆಸಗರಹಳ್ಳಿ ರಾಮಣ್ಣನವರ ಕಥೆಗಳ ವಸ್ತು ಒಂದೇ ಆಗಿದೆ.ಇಬ್ಬರೂ ಕಥೆಗಾರರು ಮೌಢ್ಯಗಳನ್ನು ಧಿಕ್ಕರಿಸುವ, ವೈಚಾರಿಕ ಪ್ರಜ್ಞೆಯನ್ನು ಬೆಳೆಸುವ ಕಥೆಗಳನ್ನು ರಚಿಸಿದ್ದಾರೆ. ವ್ಯವಸ್ಥೆಯಲ್ಲಿರುವ ಲೋಪ ದೋಷಗಳನ್ನು ವಿಡಂಬಿಸಿದ್ದಾರೆ. ಶೋಷಿತರ ಪರ ಧ್ವನಿಯನ್ನು ಅಭಿವ್ಯಕ್ತಿಸುತ್ತಾ ಸಮನಾದ ಬಾಳು ಮತ್ತು ಸಮನಾದ ಅವಕಾಶಗಳು ಎಲ್ಲರಿಗೂ ದೊರೆಯಬೇಕೆಂಬ ಸದಾಶಯವನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಲೇಖನದಲ್ಲಿ ಇಬ್ಬರೂ ಕಥೆಗಾರರ ಪ್ರಾತಿನಿಧಿಕ ಸಣ್ಣ ಕಥೆಗಳ ವಸ್ತುವನ್ನು ತೌಲನಿಕವಾಗಿ ವಿವೇಚಿಸುವ ಪ್ರಯತ್ನ ಮಾಡಿದ್ದೇನೆ.

ಸಣ್ಣ ಕಥೆಯ ವಸ್ತುವನ್ನು ಕಥೆಯಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲವಾದರೂ ವಿಚಾರದ ಅನುಕೂಲಕ್ಕಾಗಿ ಅದನ್ನು ಒಂದು ಭಿನ್ನ ವಿಶಿಷ್ಟವೆಂದು ಪರಿಭಾವಿಸಿ ನೋಡಬಹುದು; ತಾನು ಆಕಾರಕ್ಕಿಂತ ಪೂರ್ಣ ಭಿನ್ನವಲ್ಲದಿದ್ದರೂ ದ್ರವ್ಯವು ಸೀಮಿತ ಆಕಾರವಷ್ಟೇ ಅಲ್ಲದೆ ಅದಕ್ಕಿಂತ ಹೆಚ್ಚು ಸಾಂದ್ರವಾಗಿರುವಂತೆ, ಕಥಾವಸ್ತುವು ಕಥೆಗಿಂತ ಹೆಚ್ಚು ಸಾಂದ್ರವೂ, ಘನಿಷ್ಠವೂ ಆಗಿರುತ್ತದೆ. ಕಥೆಗಾರರು ಆಯ್ಕೆಮಾಡಿಕೊಂಡ ವಸ್ತು ಯಾವುದೇ ಇದ್ದರೂ ಅದಕ್ಕೆ ಹೊದಿಸುವ ಕಥಾ ಹಂದರದ ಮೇಲೆ ಆ ಕಥೆಯ ಏಳು–ಬೀಳು ಅವಲಂಬಿಸಿರುತ್ತದೆ.ವಸ್ತು ನಮ್ಮ ಸುತ್ತಮುತ್ತ ಕೈಗೆಟುಕುವ ಹಾಗೆ ಇದ್ದರೂ ಅದಕ್ಕೆ ಕಲಾತ್ಮಕ ರೂಪ ಕೊಡುವುದು ಮುಖ್ಯ.ಅದನ್ನು ಯಥಾವತ್ತಾಗಿ ಬರೆದರೆ ವರದಿಯಾಗುತ್ತದೆ.ಆದ್ದರಿಂದ ಅದನ್ನು ಸೃಜನಾತ್ಮಕವಾಗಿ ವಿವರಿಸುವುದು ಬರಹಗಾರನ ಜವಾಬ್ದಾರಿಯಾಗಿರುತ್ತದೆ. ಕಥೆಯ ಮೂಲಕವೇ ಕಥಾವಸ್ತುವನ್ನು ನಾವು ಅರಿಯಬೇಕು.

ಬೆಸಗರಹಳ್ಳಿ ರಾಮಣ್ಣನವರ 'ಸುಗ್ಗಿ' ಕಥೆಯ ಪ್ರಭಾವ ಕೃಷ್ಣಪ್ಪನವರ 'ರಾಜಿ' ಕಥೆಯ ಮೇಲೆ ಆಗಿದೆ. ಇವೆರಡೂ ಕಥೆಗಳ ವಸ್ತು ಸಹಬಾಳ್ವೆ ಮತ್ತು ಸಾಮರಸ್ಯದ ಬದುಕು. 'ಸುಗ್ಗಿ' ಕಥೆಯಲ್ಲಿ ಒಂದು ಕುಟುಂಬದ ಬದುಕಿನಲ್ಲಾಗುವ ಪಲ್ಲಟಗಳ ವಿಪರೀತತೆ ಮೇರೆ ಮೀರಿದಾಗ ಆಗುವ ಸಂಬಂಧಗಳ ವಿಪ್ಲವಗಳನ್ನು ಕಾಣಬಹುದು. ತನ್ನ ಒಡಲೊಳಗೆ ಸಂಬಂಧಗಳನ್ನು ಕಾಪಾಡಿಕೊಳ್ಳುವ ಗ್ರಾಮೀಣ ಅಸ್ಮಿತೆಯನ್ನು, ಸಹಬಾಳ್ವೆಯ ಮಹತ್ವವನ್ನು ಕಥೆ ಕಟ್ಟಿಕೊಡುತ್ತದೆ. ಕೂಡು ಕುಟುಂಬದ ಅಣ್ಣ ತಮ್ಮಂದಿರಾದ ಶಿವರಾಮಣ್ಣ ಮತ್ತು ಪುಟ್ಟಸ್ವಾಮಣ್ಣರ ನಡುವೆ ಮರಿದಿಮ್ಮ ಮತ್ತು ಕೆಂಪಣ್ಣ ಇಲ್ಲಸಲ್ಲದ ವಿಚಾರಗಳನ್ನು ಪುಟ್ಟಸ್ವಾಮಿಗೆ ಹೇಳಿ ಅವರ ಮನದ ಮಧ್ಯೆ ಬಿರುಕು ಮೂಡಿಸುತ್ತಾರೆ. ಇದರಿಂದ ಪ್ರಚೋದಿತನಾದ ತಮ್ಮ ಪುಟ್ಟಸ್ವಾಮಣ್ಣ ತನಗೆ ಮನೆ, ಆಸ್ತಿಯಲ್ಲಿ ಪಾಲುಬೇಕೆಂದು ಪಟ್ಟು ಹಿಡಿಯುತ್ತಾನೆ. ಮನೆಯ ಮಧ್ಯೆ ಗೋಡೆ ಕಟ್ಟುವುದನ್ನು ತಡೆಯಲು ಬಂದ ಹೆಂಡತಿ ತುಂಬು ಗರ್ಭಿಣಿ ಸರೋಜಳನ್ನ ಪುಟ್ಟಸ್ವಾಮಿ ನೂಕುತ್ತಾನೆ. ಇದರಿಂದ ಕೋಪಗೊಂಡ ಶಿವರಾಮಣ್ಣ ತಮ್ಮನಿಗೆ ಕಪಾಳಕ್ಕೆ ಹೊಡೆಯುತ್ತಾನೆ. ಹೀಗೆ ಅಣ್ಣ–ತಮ್ಮಂದಿರ ನಡುವೆ ಶುರುವಾಗುವ ವಿರಸಕ್ಕೆ ಮರಿದಿಮ್ಮ ಮತ್ತು ಕೆಂಪಣ್ಣ ಎಣ್ಣೆ ಹಾಕಿ ಪ್ರಜ್ವಲಿಸುವಂತೆ ಮಾಡುತ್ತಾರೆ.

ಪುಟ್ಟ ಸ್ವಾಮಿಯನ್ನು ಬಿಟ್ಟು ಉಳಿದ ಯಾರಿಗೂ ಮನೆ ಇಬ್ಭಾಗವಾಗುವುದು ಇಷ್ಟವಿರಲಿಲ್ಲ. ಭಿನ್ನತೆಗಳಿದ್ದರೂ ಸೋದರರಿಬ್ಬರೂ ತಾವು ಹಿಂದೆ ಬೆಳೆದ ಸಹಬಾಳ್ವೆ–ಸಾಮರಸ್ಯ ಜೀವನದ ಸಿಹಿ ನೆನಪುಗಳನ್ನು ಮಾಡಿಕೊಳ್ಳುತ್ತಾರೆ. ಎಂಟು ಕಂಬದ ತೊಟ್ಟಿ ಮನೆ ಹೋಳಾಗುತ್ತದೆ ಎಂಬ ಆತಂಕ ಶಿವರಾಮಣ್ಣನಿಗಾದರೆ, ಪುಟ್ಟಸ್ವಾಮಿ ಏಕಾಏಕಿ ತನ್ನ ಪರಂಪರೆಯ ಸಂಬಂಧಗಳ ಮೌಲ್ಯಗಳನ್ನು ಧಿಕ್ಕರಿಸುವ ಹುಂಬ ಧೈರ್ಯವನ್ನು ತೋರುತ್ತಾನೆ. ಆದರೆ ಮುಂದೆ ಅದಕ್ಕೆ ತಲೆ ಬಾಗುತ್ತಾನೆ. ಜೊತೆಗೆ ತನ್ನ ಕುಟುಂಬದವರ ಮನೋವ್ಯಾಕುಲತೆಗೆ ಕಾರಣನಾದೆ ಎಂಬ ಪಾಪಪ್ರಜ್ಞೆಗೂ ಸಿಲುಕಿ ತನ್ನ ನಿರ್ಧಾರವನ್ನು ಸಡಿಲಿಸಿಕೊಳ್ಳುತ್ತಾನೆ. ಸುಗ್ಗಿಯ ದಿನದಂದು ಭತ್ತದ ರಾಶಿ ಪೂಜೆ ಮಾಡುವ ಮೊದಲು ಪುಟ್ಟಸ್ವಾಮಿ ತನ್ನ ಮತ್ತು ಅಣ್ಣ ಶಿವರಾಮಣ್ಣನ ಹಿಂದಿನ ಬಾಲ್ಯದ ಆಟಗಳು ಮತ್ತು ಅವಿನಾಭಾವ ಸಂಬಂಧವನ್ನು ನೆನೆದು ಮೃದುವಾಗುತ್ತಾನೆ. ಕೊನೆಗೆ ಪರಿಸ್ಥಿತಿ ತಿಳಿಯಾಗಿ ಪುಟ್ಟಸ್ವಾಮಿ ತನ್ನ ಅಣ್ಣ ಶಿವರಾಮಣ್ಣನ ಕೈಯಲ್ಲೇ ರಾಶಿ ಪೂಜೆ ಮಾಡಿಸುವ ಮೂಲಕ ಕಥೆ ಸುಖಾಂತ್ಯಗೊಳ್ಳುತ್ತದೆ.ಈ ಕಥೆ ಸಹಬಾಳ್ವೆ ಮತ್ತು ಸಾಮರಸ್ಯದ ಬದುಕಿನ ಪ್ರತೀಕವಾಗಿ ನಿಲ್ಲುತ್ತದೆ.

ರಾಮಣ್ಣನವರ 'ಸುಗ್ಗಿ' ಕಥೆಯ ವಸ್ತುವಿಗೆ ಹೋಲಿಕೆ ಹೊಂದುವ ಕಥೆ ಕೃಷ್ಣಪ್ಪನವರ 'ರಾಜಿ' ಕಥೆ. ಇಲ್ಲೂ ಸಹ ಸಹಬಾಳ್ವೆ ಮತ್ತು ಸಾಮರಸ್ಯದ ಬದುಕಿನ ವಸ್ತುವನ್ನು ಗುರುತಿಸಬಹುದು. ಮಾನವೀಯ ಅಂತಃಕರಣದ ನೆಲೆಯನ್ನು ಈ ಕಥೆ ಹೊಂದಿದೆ. ಸಣ್ಣೂರಿನ ಬೋರೇಗೌಡರ ಮಕ್ಕಳಾದ ಅಣ್ಣ ರಾಮಲಿಂಗ ಮತ್ತು ತಮ್ಮ ಸಣ್ಣಪ್ಪನ ನಡುವೆ ಗದ್ದೆಯ ತೆವರಿಯ ಮಾತಿಗೆ ಮೂಡಿದ ವಿರಸವು ಕ್ರಮೇಣ ಬೆಳೆಯುತ್ತಾ ಸಾಗುತ್ತದೆ. ಉಡಾಳನಾದ ಸಣ್ಣಪ್ಪನಿಗೆ ಶ್ರೀಕಂಠ ಇಲ್ಲಸಲ್ಲದನ್ನು ತುಂಬಿ ಅಣ್ಣ–ತಮ್ಮಂದಿರ ಭೂವ್ಯಾಜ್ಯ ನ್ಯಾಯಾಲಯದ ಮೆಟ್ಟಿಲೇರುವ ಹಾಗೆ ಮಾಡುತ್ತಾನೆ. ಇತ್ತ ಸಭ್ಯನಾದ ರಾಮಲಿಂಗನನ್ನು ಸಿದ್ಧಲಿಂಗ, ಪುಟ್ಟರಾಮ ಎತ್ತಿಕಟ್ಟುತ್ತಾರೆ. ಇವರ ಉದ್ದೇಶ ದೊಡ್ಡ ಹಟ್ಟಿಯ ಅಧಃಪತನ. ಇವರೆಲ್ಲರ ಚಿತಾವಣೆಯಿಂದ ಅಣ್ಣ–ತಮ್ಮಂದಿರಿಬ್ಬರೂ ವ್ಯಾಜ್ಯದ ಭೂಮಿಯ ಬಿಟ್ಟು ಉಳಿದೆಲ್ಲವನ್ನೂ ಕಳೆದುಕೊಳ್ಳುತ್ತಾರೆ.

ರಾಮಲಿಂಗ ಮತ್ತು ಸಣ್ಣಪ್ಪರಿಬ್ಬರಿಗೂ ರಾಜಿ ಮಾಡಿಕೊಳ್ಳಲು ಇಚ್ಛೆ ಇದ್ದರೂ ಇತರರು ಅದಕ್ಕೆ ಅವಕಾಶ ಕೊಡುವುದಿಲ್ಲ. ರಾಮಲಿಂಗ ನಾಟಿ ಹಾಕಿ ಬಂದಿದ್ದ ಗದ್ದೆಯನ್ನು ಸಣ್ಣಪ್ಪ ಮತ್ತು ಅವನ ಕಡೆಯವರು ರಾತ್ರಿಯೇ ಹೋಗಿ ಉತ್ತು ಬಂದಿದ್ದರು. ತನ್ನ ತಮ್ಮ ತಿನ್ನುವ ಅನ್ನಕ್ಕೂ ಕಲ್ಲು ಹಾಕಿದನೆಂದು ರಾಮಲಿಂಗ ನೊಂದುಕೊಂಡ. ರಾಮಲಿಂಗ ಮತ್ತು ಸಣ್ಣಪ್ಪರಿಬ್ಬರು ಈ ವ್ಯಾಜ್ಯದಿಂದ ಮನನೊಂದು ಪಶ್ಚಾತ್ತಾಪಪಟ್ಟಿದ್ದರು. ಕೊನೆಗೆ ಅಣ್ಣ ರಾಮಲಿಂಗನೆ ತನ್ನ ತಮ್ಮ ಸಣ್ಣಪ್ಪನ ಮನೆಗೆ ಹೋಗಿ ಕ್ಷಮೆಕೇಳಲು, ಸಣ್ಣಪ್ಪನು ಪಶ್ಚಾತ್ತಾಪದ ಬೇಗುದಿಯಲ್ಲಿ ಬೆಂದು ತನ್ನ ತಪ್ಪನ್ನು ಒಪ್ಪಿಕೊಂಡು ಇಬ್ಬರು ಒಂದಾಗುತ್ತಾರೆ. ರಾಮಲಿಂಗ ಅಣ್ಣನಾದರೂ ತಾನೇ ಸೋತು ಸಹಬಾಳ್ವೆಯ, ಸಾಮರಸ್ಯದ ಬದುಕಿಗೆ ನಾಂದಿ ಹಾಡುತ್ತಾನೆ. ಅಣ್ಣ–ತಮ್ಮಂದಿರ ನಡುವೆ ಎಷ್ಟೇ ಮನಸ್ತಾಪಗಳಿದ್ದರೂ ಅವರಲ್ಲಿರುವ ಮಾನವೀಯ ಅಂತಃಕರಣದ ತುಡಿತ ಮತ್ತೆ ಅವರನ್ನು ಒಂದಾಗಿಸುತ್ತದೆ.

'ಸುಗ್ಗಿ' ಮತ್ತು 'ರಾಜಿ' ಕಥೆಗಳಲ್ಲಿ ಕೌಟುಂಬಿಕ ವಿಘಟನೆಗೆ ಒಳಗಾಗಿ ಮತ್ತೆ ಒಂದಾಗುವ ಪ್ರಕ್ರಿಯೆಯು ಸಹಜವಾಗಿ ಬಿಂಬಿತವಾಗಿದೆ.'ಸುಗ್ಗಿ' ಕಥೆಯಲ್ಲಿ ತಮ್ಮ ಪುಟ್ಟಸ್ವಾಮಿಗೆ ತನ್ನ ತಪ್ಪಿನ ಅರಿವಾಗಿ ಸುಖಾಂತ್ಯಕ್ಕೆ ಕಾರಣನಾದರೆ 'ರಾಜಿ' ಕಥೆಯಲ್ಲಿ ಯಾವುದೇ ತಪ್ಪನ್ನು ಮಾಡದ ರಾಮಲಿಂಗನೇ ಮುಂದಾಗಿ ಸಾಮರಸ್ಯದ ಜೀವನಕ್ಕೆ ಕಾರಣನಾಗುತ್ತಾನೆ. 'ಸುಗ್ಗಿ' ಕಥೆಯಲ್ಲಿ ಜಾನಪದ ರೂಪಕಗಳನ್ನು ರಾಮಣ್ಣನವರು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. 'ರಾಜಿ' ಕಥೆಯಲ್ಲಿ ಕೃಷ್ಣಪ್ಪನವರು ಪ್ರಾದೇಶಿಕ ಭಾಷೆಯ ಸೊಗಡಿನ ಕಂಪನ್ನು ಬೀರಿದ್ದಾರೆ. ಒಕ್ಕಲು ಮಕ್ಕಳ ಸುಖ–ದುಃಖ, ರಾಗ–ದ್ವೇಷಗಳು ಮಾನಸಿಕ ತಾಕಲಾಟಗಳನ್ನು ಎರಡೂ ಕಥೆಗಳಲ್ಲಿ ಗುರುತಿಸಬಹುದು.ಗ್ರಾಮೀಣ ಸಂವೇದನೆ, ಮಾನವನ ಅಂತಃಕರಣದ ವರ್ತನೆಗಳು ಎರಡೂ ಕಥೆಗಳಲ್ಲಿ ಮುಖ್ಯ ನೆಲೆಯಾಗಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸ್ತ್ರೀಶೋಷಣೆಯು ಆನಾದಿಕಾಲದಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಲಿಂಗ ತಾರತಮ್ಯವು ಶೋಷಣೆಯ ವಿವಿಧ ಮುಖಗಳನ್ನು ತೆರೆದಿಟ್ಟಿದೆ. ಈ ಹಿನ್ನೆಲೆಯಲ್ಲಿ ರಾಮಣ್ಣನವರ 'ಬಾವಿಗೆ ಬಿದ್ದದ್ದು ದೆವ್ವ !' ಮತ್ತು ಕೃಷ್ಣಪ್ಪನವರ 'ಒಂದು ಆತ್ಮಹತ್ಯೆಯ ಕತೆ' ಸ್ತ್ರೀಶೋಷಣೆಯ ವಸ್ತುವನ್ನು ಮುಖ್ಯ ನೆಲೆಯಾಗಿಸಿಕೊಂಡು ರಚನೆಯಾಗಿರುವ ಕಥೆಗಳಾಗಿವೆ. ಸಮಾಜದ ನಿಂದನೆಗೆ ಅಪಮಾನಕ್ಕೆ ಹೆದರಿ 'ಬಾವಿಗೆ ಬಿದ್ದದ್ದು ದೆವ್ವ !' ಕಥೆಯ ಸುಶೀಲಮ್ಮ, 'ಒಂದು ಆತ್ಮಹತ್ಯೆಯ ಕತೆ'ಯ ಮಾನಿಂಗಕ್ಕ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.ಒಂದು ಹೆಣ್ಣು ಸಮಾಜದಲ್ಲಿ ಅಸಹಾಯಕಳಾಗಿ, ಗಂಡಿನ ನೆರವಿಲ್ಲದೆ ಬದುಕುವಾಗ ಆಕೆ ಅನುಭವಿಸುವ ತಲ್ಲಣಗಳನ್ನು ಇವೆರಡೂ ಕಥೆಗಳು ಸ್ಥಾಯಿಯಾಗಿ ಹೊಂದಿವೆ. ಸಮಾಜ ತನ್ನ ಸ್ವಾರ್ಥಕ್ಕೆ ಆಕೆ ಸಹಕರಿಸುತ್ತಿಲ್ಲವೆಂದು ತಿಳಿದಾಗ ಆಕೆಯ ನೈತಿಕ ಸ್ಥೈರ್ಯವನ್ನು ಕುಗ್ಗಿಸಿ ಶೋಷಣೆಗೊಳಪಡಿಸುವುದನ್ನು ಈ ಕಥೆಗಳಲ್ಲಿ ಕಾಣಬಹುದು.

'ಬಾವಿಗೆ ಬಿದ್ದದ್ದು ದೆವ್ವ !' ಕಥೆಯ ಕೇಂದ್ರ ಪಾತ್ರ ಸುಶೀಲಮ್ಮ.ಈಕೆ ಮೂರನೇ ಹೆಂಡತಿಯಾಗಿ ಕೃಷ್ಣಪ್ಪನನ್ನು ಬಡತನದ ಕಾರಣದಿಂದ ವರಿಸಿದಳು.ಮಗಳು ಮಂಗಳ ಹುಟ್ಟಿದ ಮೇಲೆ ಕೃಷ್ಣಪ್ಪ ಕಾಲರಾ ಬಂದು ಸಾವನ್ನಪ್ಪಿದ. ಇತ್ತ ಕೃಷ್ಣಪ್ಪ ಸತ್ತ ನಂತರ ಸುಶೀಲಮ್ಮ ಮಲ್ಲಿಕಾರ್ಜುನಪ್ಪನ ಜೊತೆ ಅನೈತಿಕ ಸಂಬಂಧ ಹೊಂದಿ ಮಗ ನಾರಾಯಣನನ್ನು ಪಡೆದಳು. ಇದರಿಂದ ತಾನು ಬದುಕಿ ಬಾಳುತ್ತಿದ್ದ ಸಮಾಜದಲ್ಲಿ ತಿರಸ್ಕೃತಳಾದಳು. ಮಗಳು-ಅಳಿಯ ಇದರಿಂದ ದೂರಾದರು. ಈಕೆ ಕೆರೆಯಲ್ಲಿ ಪಾತ್ರೆ ಬೆಳಗುವಾಗ ಎರಡು ವರ್ಷದ ನಾರಾಯಣ ಆಕಸ್ಮಿಕವಾಗಿ ಕಾಲುಜಾರಿ ಕೆರೆಗೆ ಬಿದ್ದು ಸತ್ತ. ಎಲ್ಲರೂ ಈಕೆಯೆ ಕತ್ತು ಮುರಿದು ಸಾಯಿಸಿದಳೆಂದು ಅಪವಾದ ಹೊರಿಸಿದರು. ಇವಳಿಗೆ ದೊರಕಬೇಕಾದ ಆಸ್ತಿಯನ್ನು ಸವತಿ ಮಗಳು ಸರೋಜಾ ಲಪಟಾಯಿಸಿದಳು. ಇದರಿಂದ ನೊಂದ ಸುಶೀಲಮ್ಮ ಮನೆಬಿಟ್ಟು ಹುಚ್ಚಿಯಾದಳು. ಬೇರೆಯವರ ಮನೆಯಲ್ಲಿ ಉಂಡು ದೇವಸ್ಥಾನದಲ್ಲಿ ಮಲಗಿ ಕಾಲ ಕಳೆಯುತ್ತಿದ್ದಳು. ಕೊನೆಗೆ ಊರಿನವರ ನಿಂದನೆ, ಅಪಹಾಸ್ಯ ಹೆಚ್ಚಾದಾಗ ವೇದನೆ ಸಹಿಸದೆ ಕೆರೆಯ ಬಳಿಯಿರುವ ಸಿಹಿನೀರಿನ ಬಾವಿಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ.

ಸುಶೀಲಮ್ಮ ತನ್ನ ಜೀವನದಲ್ಲಿ ಮಾಡಿದ ಒಂದು ತಪ್ಪಿಗೆ ಅನಾಥಳಾಗಿ, ಹುಚ್ಚಿಯಾಗಿ ಜೀವನ ಸಾಗಿಸಬೇಕಾಗುತ್ತದೆ. ರಾಮಣ್ಣನವರು ಚೇಳು, ನೆರಳು, ಅಂತ್ಯವೆಂಬ ಮೂರು ಉಪಶೀರ್ಷಿಕೆಗಳಡಿ ಈ ಕಥೆಯನ್ನು ನೇಯ್ದಿದ್ದಾರೆ. 'ಚೇಳು' ಉಪಶೀರ್ಷಿಕೆಯಲ್ಲಿ ಆಕೆಯನ್ನು ಸಮಾಜ ದೂಷಿಸುವ ಪರಿಯನ್ನು ಕಟ್ಟಿಕೊಟ್ಟಿದ್ದಾರೆ. 'ನೆರಳು'ಉಪಶೀರ್ಷಿಕೆಯಲ್ಲಿ ಸುಶೀಲಮ್ಮ ಹಿಂದೆ ಮಾಡಿದ ತಪ್ಪು ಇಂದು ಅವಳನ್ನು ನೆರಳಾಗಿ ಕಾಡುತ್ತಿರುವ ಪರಿಯನ್ನು ಬಣ್ಣಿಸಿದ್ದಾರೆ. 'ಅಂತ್ಯ' ಉಪಶೀರ್ಷಿಕೆಯಲ್ಲಿ ಆಕೆ ತಾನು ಹಿಂದೆ ಮಾಡಿದ ತಪ್ಪನ್ನು ನೆನೆದು ಸಮಾಜದ ನಿಂದನೆಯನ್ನು ಸಹಿಸಲಾರದೆ ಆತ್ಮಹತ್ಯೆಗೆ ಶರಣಾಗುವುದನ್ನು ಚಿತ್ರಿಸಿದ್ದಾರೆ. ಸುಶೀಲಮ್ಮ ತನ್ನ ಗಂಡ ಸತ್ತ ನಂತರ ಅನೈತಿಕ ಸಂಬಂಧದಿಂದ ಪಡೆದ ಮಗು ಆಕಸ್ಮಿಕವಾಗಿ ಸತ್ತರೂ ಆಕೆಯೇ ಬೇಕಂತಲೇ ಸಾಯಿಸಿದ್ದಾಳೆಂಬ ಅಪವಾದವನ್ನು ಹೊರಿಸುತ್ತಾರೆ. ಗಂಡು ದಿಕ್ಕಿಲ್ಲದ ಹೆಣ್ಣಿನ ಮಾನಸಿಕ ತಾಕಲಾಟಗಳನ್ನು, ಹೋರಾಟಗಳನ್ನು ಹೆಂಗರುಳಿನ ರಾಮಣ್ಣನವರು ನೈತಿಕ ನೆಲೆಯಲ್ಲಿ ಕಂಡರಿಸಿದ್ದಾರೆ.

ಕೃಷ್ಣಪ್ಪನವರ 'ಒಂದು ಆತ್ಮಹತ್ಯೆಯ ಕತೆ'ಯು ಸ್ತ್ರೀ ಶೋಷಣೆಯನ್ನು ವಸ್ತುವನ್ನಾಗಿರಿಸಿಕೊಂಡಿರುವ ಕಣ್ಣೀರಿನ ಕಥೆ. ಸಮೃದ್ಧ ಬದುಕು ಸಾಗಿಸುತ್ತಿದ್ದ ಮಾನಿಂಗಕ್ಕ ಗಂಡನನ್ನು ಕಳೆದುಕೊಂಡ ನಂತರ ಅಬಲೆಯಾಗುತ್ತಾಳೆ. ಇತ್ತ ಮಾನಿಂಗಕ್ಕನ ಒಬ್ಬಳೇ ಮಗಳು ಗಂಡ ಸತ್ತ ಮೇಲೆ ಗಂಡನ ಮನೆಯವರು ಇಲ್ಲಸಲ್ಲದ ಅಪವಾದ ಹೊರಿಸಿ ಊರಿಗೆ ತಂದು ಬಿಡುತ್ತಾರೆ. ಮಾನಿಂಗಕ್ಕನ ಗಂಡ ಸತ್ತ ನಂತರ ಆಕೆಯ ಹೊಲವನ್ನು ಚಿಕ್ಕೀರಣ್ಣ ಪಾಲಿಗೆ ಮಾಡಿಕೊಂಡು ಹೋಗುತ್ತಿದ್ದವನು ಆ ಜಮೀನು ನನ್ನದೇ ಎಂದು ಘೋಷಿಸಿಕೊಳ್ಳುತ್ತಾನೆ. ಮಾನಿಂಗಕ್ಕ ಈ ವಿಚಾರವಾಗಿ ಮೊಡಣ್ಣನ ಸಹಾಯ ಪಡೆದು ಕೋರ್ಟಿನಲ್ಲಿ ಕೇಸ್ ಹಾಕುತ್ತಾಳೆ. ಕೋರ್ಟಿನಲ್ಲಿ ಜಮೀನು ಮಾನಿಂಗಕ್ಕನ ಕಡೆಗೆ ಆಗುತ್ತದೆ ಎಂದು ಗೊತ್ತಾದಾಗ ಎಲ್ಲರೂ ಸೇರಿಕೊಂಡು ಮೊಡ್ಡಣ್ಣನಿಗೂ ಮಾನಿಂಗಕ್ಕನಿಗೂ ಅನೈತಿಕ ಸಂಬಂಧ ಕಟ್ಟುತ್ತಾರೆ. ಯಾರ ಬಾಯಲ್ಲಿ ನೋಡಿದರೂ ಅವರಿಬ್ಬರ ಹೆಸರು ಬರತೊಡಗಿದಾಗ ಮಾನಿಂಗಕ್ಕ ನೈತಿಕ ಸ್ಥೈರ್ಯ ಕುಸಿಯುತ್ತದೆ.

ಮಾನಿಂಗಕ್ಕನ ಮಗಳ ಜೊತೆ ಮೊಡ್ಡಣ್ಣನ ಮಗ ಅನೈತಿಕ ಸಂಬಂಧ ಹೊಂದಿದ್ದಾನೆಂದು ಪುಕಾರು ಹಬ್ಬಿಸುತ್ತಾರೆ. ಈ ವಿಚಾರವಾಗಿ ಪಂಚಾಯಿತಿಗೆ ನೀನು ಬರಬೇಕೆಂಬ ವಿಚಾರವನ್ನು ಕೇಳಿ ಮಾನಿಂಗಕ್ಕ ಕುಸಿದು ಬೀಳುತ್ತಾಳೆ. ಕೊನೆಗೆ ತಾನು ತನ್ನ ಮಕ್ಕಳು ಎಲ್ಲರೂ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಮಾನಿಂಗಕ್ಕ ಮಾನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮಾನಿಂಗಕ್ಕ ಮತ್ತು ಆಕೆಯ ಮಗಳು ಯಾವುದೇ ಅನೈತಿಕ ಸಂಬಂಧವನ್ನು ಹೊಂದಿರದಿದ್ದರೂ ಅವರು ಸಮಾಜದ ನಿಂದನೆಗೆ ಒಳಗಾಗಬೇಕಾಗುತ್ತದೆ. ಇಂತಹ ಹೇಯ ಕಾರ್ಯಗಳು ಇಂದಿಗೂ ಎಗ್ಗಿಲ್ಲದೆ ನಡೆಯುತ್ತಿವೆ. ಕಥೆಗಾರರು ಒಂದು ಹೆಣ್ಣನ್ನು ಸಹ ಜೀವಿಯಾಗಿ ನೋಡಬೇಕೆಂಬ ಆಶಯವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಪ್ರಾಣಕ್ಕಿಂತ ಮಾನ ದೊಡ್ಡದು ಎಂಬ ನಮ್ಮ ಸಂಸ್ಕೃತಿಯ ನಿಲುವನ್ನು ಮಾನಿಂಗಕ್ಕನ ಪಾತ್ರ ಬಿಂಬಿಸುತ್ತದೆ. ಅಸಹಾಯಕಳಾದ ಮಾನಿಂಗಕ್ಕನ ಸ್ವತ್ತನ್ನು ತನ್ನದಾಗಿಸಿಕೊಳ್ಳಲು ಆಕೆಯನ್ನು ಶೋಷಣೆಗೆ ಈಡು ಮಾಡಲಾಗುತ್ತದೆ. ಕಥೆಗಾರರು ಓದುಗರಲ್ಲಿ ಅನುಕಂಪ ಹುಟ್ಟುವ ರೀತಿಯಲ್ಲಿ ಭಾವುಕರಾಗಿ ಸ್ತ್ರೀ ಶೋಷಣೆಯನ್ನು ಚಿತ್ರಿಸಿದ್ದಾರೆ.

ಸಮಾಜದ ಅಪನಿಂದನೆಗೆ, ಪರಿಹಾಸ್ಯಕ್ಕೆ ಸುಶೀಲಮ್ಮ ಮತ್ತು ಮಾನಿಂಗಕ್ಕ ಬಲಿಯಾಗುತ್ತಾರೆ. 'ಬಾವಿಗೆ ಬಿದ್ದದ್ದು ದೆವ್ವ !' ಕಥೆಯಲ್ಲಿ ರಾಮಣ್ಣನವರು ಸುಶೀಲಮ್ಮನ ಪಾತ್ರವನ್ನು ಸಮಾಜ ನೋಡುವ ಪರಿಯಲ್ಲಿ ಚಿತ್ರಿಸಿದ್ದಾರೆ. ಸುಶೀಲಮ್ಮ ಇಲ್ಲಿ ಅನೈತಿಕ ಹಾದಿಯನ್ನು ತುಳಿದು ಸಾವನ್ನಪ್ಪಿದರೆ. ಮಾನಿಂಗಕ್ಕ ನೈತಿಕ ಹಾದಿಯಲ್ಲಿ ಸಾಗಿದರೂ ಸಮಾಜದ ನಿಂದನೆಗೆ ಗುರಿಯಾಗಿ ಸಾವನ್ನಪ್ಪುತ್ತಾಳೆ. ಒಂದು ಹೆಣ್ಣಿನ ಅಸಹಾಯಕ ಪರಿಸ್ಥಿತಿಯನ್ನು, ಗಂಡು ದಿಕ್ಕಿಲ್ಲದ ಸಂದರ್ಭವನ್ನು ಎರಡೂ ಕಥೆಗಳಲ್ಲಿ ಸಮಾಜ ದುರುಪಯೋಗಪಡಿಸಿಕೊಳ್ಳುತ್ತದೆ. ಸುಶೀಲಮ್ಮನ ಜೊತೆ ಅನೈತಿಕ ಸಂಬಂಧವನ್ನು ಬಯಸುವ ಅದಕ್ಕೆ ಆಕೆ ಸಹಕರಿಸದಿದ್ದಾಗ ಆಕೆಯನ್ನು ಅದೇ ಸಮಾಜ ನಿಂದನೆಗೆ ಗುರಿಮಾಡುತ್ತದೆ. ಮಾನಿಂಗಕ್ಕ ತನ್ನ ಹೊಲ, ಮನೆ, ಆಸ್ತಿ ಹೋದರೂ ಚಿಂತಿಸುತ್ತಿರಲಿಲ್ಲ. ಆದರೆ ಯಾವಾಗ ಆಕೆಯ ಮಾನಕ್ಕೆ ಸಂಚಕಾರ ಬಂತೋ ಆಗ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಒಬ್ಬರ ಮೇಲೆ ಅನೈತಿಕ ಸಂಬಂಧದ ಆರೋಪವನ್ನು ಹೊರಿಸಿ ಅವರ ಮನೋವ್ಯಾಕುಲತೆಯನ್ನು ಹೆಚ್ಚಿಸುವ ಸಮಾಜದ ನಡೆಯನ್ನು ಈ ಇಬ್ಬರೂ ಲೇಖಕರು ವಿರೋಧಿಸುತ್ತಾರೆ. ಸಮಾಜದ ಕಟುಕಿನ ನುಡಿಯಿಂದ ಸುಶೀಲಮ್ಮ,ಮಾನಿಂಗಕ್ಕ ಸಾವನ್ನಪ್ಪುವುದನ್ನು ಎರಡು ಕಥೆಗಳ ಸಾದೃಶ್ಯದ ಹಿನ್ನೆಲೆಯಲ್ಲಿ ಕಾಣಬಹುದು. ಈ ಇಬ್ಬರೂ ಕಥೆಗಾರರು ಹೆಣ್ಣಿನ ಮನೋವ್ಯಾಪಾರವನ್ನೂ, ಆಕೆಯ ವೇದನೆಯನ್ನು, ತಾಕಲಾಟಗಳನ್ನು ಹೆಂಗರುಳಿನ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ಬೆಸಗರಹಳ್ಳಿ ರಾಮಣ್ಣ (2011)** : ಕಣಜ ಬೆಸಗರಹಳ್ಳಿ ರಾಮಣ್ಣ ಅವರ ಸಮಗ್ರ ಕಥಾ ಸಾಹಿತ್ಯ ಬಳ್ಳಾರಿ ಲೋಹಿಯಾ ಪ್ರಕಾಶನ.
- **ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ (2011)** : ಬಯಲು ಸೀಮೆಯ ಕಥೆಗಳು (ಸಮಗ್ರ ಕಥೆಗಳ ಸಂಕಲನ) ಬೊಮ್ಮನಾಯಕನಹಳ್ಳಿ ರಂಗಮ್ಮ ಪ್ರಕಾಶನ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕಪ್ಪೆ ಅರಭಟ್ಟನ ಶಾಸನ : ಷ. ಶೆಟ್ಟರ್ ಚಿಂತನೆಗಳು

✍ **ಡಾ. ಲಕ್ಷ್ಮೀಕಾಂತ ಪಂಚಾಳ,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ರಾಂಪೂರ–587207 ತಾ. ಜಿ. ಬಾಗಲಕೋಟ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಾದಾಮಿ ಶಾಸನ ಮಹತ್ವದ ಸ್ಥಾನ ಪಡೆದಿದೆ. ಇದರಲ್ಲಿ ಕನ್ನಡದ ಛಂದಸ್ಸಿನ ತಾಯಿ ಬೇರಾದ ತ್ರಿಪದಿಯ ಮೊದಲ ಪ್ರಯೋಗವಿದ್ದು, ಕಪ್ಪೆ ಅರಭಟ್ಟನೆಂಬ ವ್ಯಕ್ತಿಯ ಉದಾತ್ತ ವ್ಯಕ್ತಿತ್ವದ ಚಿತ್ರಣವಿದೆ. ಈ ಶಾಸನವು 1881ರಲ್ಲಿ ಜೆ. ಎಫ್. ಫ್ಲೀಟ್‌ಅವರಿಂದ ಬೆಳಕು ಕಂಡಿತ್ತು. ಚಾಲುಕ್ಯರ ರಾಜ್ಯಧಾನಿಯಾದ ಬಾದಾಮಿ ಯತಟ್ಟುಕೋಟೆಯ ಒಂದು ಕಡಿದಾದ ಬಂಡೆಯ ಕಲ್ಲಿನಲ್ಲಿ ಈ ಶಾಸನವನ್ನು ಕಂಡಿರಿಸಿದೆ.ಈ ಶಾಸನವನ್ನು ಕುರಿತು ಸೇಡಿಯಾಪು ಕೃಷ್ಣಭಟ್ಟ, ಎಂ. ಎಂ. ಕಲಬುರ್ಗಿ, ಟಿ. ವಿ. ವೆಂಕಟಾಚಲಶಾಸ್ತ್ರಿ, ಬಾ. ರಾ. ಗೋಪಾಲ, ಎಚ್. ಎಸ್. ಗೋಪಾಲರಾವ್ ಮೊದಲಾದವರು ಸಂಶೋಧನಾತ್ಮಕ ವಿಶ್ಲೇಷಣೆಯನ್ನು ಕೈಗೊಂಡಿದ್ದಾರೆ. ಇವುಗಳನ್ನು ಪುನರ್‌ಪರಿಶೀಲಿಸಿ ಷ. ಶೆಟ್ಟರ್ ಅವರು ತಮ್ಮ ಮೌಲಿಕವಾದ ಶೋಧಕಾರ್ಯ ಕೈಗೊಂಡಿರುವುದು ಹಲವು ಕಾರಣದಿಂದ ವಿಶೇಷತೆಯನ್ನು ಪಡೆದಿದೆ. 'ತ್ರಿಪದಿಯ ಕವಿ **ಅಕ್ಷರ ಮೇರು**ವಿನ ಕಲಿಯುಗ ವಿಪರೀತನ್ ಒಂದು ಶಾಸನ ಕಾವ್ಯ' (ಕ್ರಿ. ಶ. ಸು. 740) ಎನ್ನುವ ಬರಹವೇ ನಮ್ಮ ವಿಶೇಷ ಗಮನ ಸೆಳೆಯುತ್ತದೆ. ಈ ಲೇಖನ ಖ್ಯಾತ ಶಾಸನ ತಜ್ಞರಾದ ಷ. ಶೆಟ್ಟರ್ ಅವರ ಬಾದಾಮಿ ಶಾಸನದ ಕುರಿತು ಕೈಗೊಂಡಿರುವ ಸಂಶೋಧನೆಯ ಕೆಲವು ಹೊಸ ವಿಚಾರಗಳ ಬಗ್ಗೆ ಬೆಳಕು ಚೆಲ್ಲಲಿದೆ.

ಬಾದಾಮಿ ಶಾಸನವನ್ನು ಕುರಿತು ಇಲ್ಲಿಯವರೆಗೆ ನಡೆದ ಚಿಂತನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಷ. ಶೆಟ್ಟರ್‌ಅವರು ಹಲವು ವಿದ್ವಾಂಸರ ಗಮನಿಸದ ವಿಚಾರಗಳ ಬಗ್ಗೆ ಚರ್ಚಿಸುತ್ತಾರೆ. ***ಉಬ್ಬುಶಿಲ್ಪ:*** ನವಿರಾದ ಈ ಉಬ್ಬು ಶಿಲ್ಪವು ಬಹುತೇಕ ವಿದ್ವಾಂಸರ ನಿರ್ಲಕ್ಷ್ಯಕ್ಕೆ ಒಳಗಾಗಿದೆ ಎಂಬುವುದನ್ನು ದಾಖಲಿಸುತ್ತಾ, ಇದನ್ನುಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. 'ಒಂದು ಸುಂದರವಾದ ಚಕ್ರವನ್ನುಅದರ ಕೆಳಗೆ ಮನಮೋಹಕವಾಗಿ ವ್ಯಾಪಿಸಿರುವ ಪುಷ್ಕರವನ್ನು ಕಾಣುವೆವು'[1] ಎಂಬುದನ್ನು ಸುದೀರ್ಘವಾಗಿ ಚರ್ಚಿಸಿದ್ದಾರೆ.ಕನ್ನಡ ಸಾಹಿತ್ಯದಲ್ಲಿ ಚಕ್ರವನ್ನು ಬಳಸಿದ ಹಲ್ಮಿಡಿ ಶಾಸನ, ಪಾಳ ಶಾಸನ, ಆಡೂರು ಶಾಸನಗಳನ್ನು ಉಲ್ಲೇಖಿಸುತ್ತಾರೆ. ಮುಂದುವರೆದು ಇದರರ್ಥವನ್ನು 'ಪ್ರಫುಲ್ಲಮಾನ ಪುಷ್ಕರದ ಮೇಲಿರುವ ತಟ್ಟುಕೋಟೆಯ ಚಕ್ರವು ಹೊಸ ಯುಗವನ್ನೋ, ಚಲನೆಯನ್ನೊ ಸಾರುತ್ತಿದೆ ಎಂದು ಅರ್ಥ. ಇಲ್ಲಿ ಚಕ್ರರವಿಯನ್ನು, ಮತ್ಸ್ಯಗಳು ಚಲನೆಯನ್ನು, ಪುಷ್ಕರವು ದಿನದಾಗಮನವನ್ನು ಸೂಚಿಸುವುವು' ಎಂಬುದನ್ನು ಸೂಚಿಸುತ್ತಲ್ಲೇ ಈ ಬಗೆಯ ಶಿಲ್ಪಚಾಲುಕ್ಯ ಕಲೆಯ ದೇವಾಲಯಗಳು ಜಾಲಂಧ್ರಗಳಲ್ಲಿ ಬಳಕೆಯಲ್ಲಿರುವುದಕ್ಕೆ ಎರಡನೆಯ ಗುಹಾಲಯ, ಜಂಬುಲಿಂಗೇಶ್ವರ ದೇವಾಲಯು, ಲಾಡಖಾನ ದೇವಾಲಯುಗಳಲ್ಲಿ ಉಬ್ಬುಶಿಲ್ಪ ಬಳಕೆಗೊಂಡಿರುವ ನಿದರ್ಶನವನ್ನು ನೀಡುತ್ತಾರೆ.

## ಶಾಸನದ ಸ್ವರೂಪ

ಷ. ಶೆಟ್ಟರ್‌ಅವರು ಕಟ್ಟಿಕೊಡುವ ಶಾಸನದ ಸ್ವರೂಪಇಲ್ಲಿ ವಿವರಿಸಲಾಗಿದೆ. ಬಾದಾಮಿ ಶಾಸನವು ಹತ್ತು ಸಾಲುಗಳಲ್ಲಿ (ಸು.50 ಪದ) ಕಂಡಿರಿಸಿದ ಶಾಸನವಾಗಿದ್ದು, ಶಾಸನದ ಮೂರನೇ ಮತ್ತು ನಾಲ್ಕನೇ ಸಾಲುಗಳು ಬಿಟ್ಟು ಉಳಿದವುಗಳು ಕನ್ನಡ ಭಾಷೆಯಲ್ಲಿವೆ. ನೆಲದಿಂದಹತ್ತು ಹನ್ನೆರಡು ಅಡಿಗಳ ಎತ್ತರದಲ್ಲಿ ನೈಜ (ಕೆಂಪು ಉಸುಗಿನ ಕಲ್ಲು) ಬಂಡೆಗಲ್ಲಿನ ಮೇಲೆ $3'4''$ ಅಡಿ ಎತ್ತರ, $2'1''$ ಅಡಿ ಅಗಲ ವ್ಯಾಪ್ತಿ ಹೊಂದಿದೆ. ಇದನ್ನು ಕನ್ನಡ ಮತ್ತು ಸಂಸ್ಕೃತ ಭಾಷೆಯನ್ನು ಬಲ್ಲ, ನಾಗರೀ ಲಿಪಿ ತಿಳಿದುಕೊಂಡ ಸಮರ್ಥ ಲಿಪಿಕಾರ ನಿಂದ ಕಂಡರಿಸಲಾಗಿದೆ[2] ಎಂಬುದನ್ನು ವಿವರಿಸುತ್ತಾರೆ. ಸುಮಾರು ಐವತ್ತು ಪದಗಳಲ್ಲಿ 18 ಸಂಸ್ಕೃತ 12 ಸಂಸ್ಕೃತ ಮಿಶ್ರಿತ ಕನ್ನಡ 19 ಪದಗಳು ಕನ್ನಡ ಒಂದೆರಡರಲ್ಲಿ ಪ್ರಾಕೃತ ಮೂಲವಿರುವುದು ಗುರುತಿಸಿರುವುದು ವಿಶೇಷವಾಗಿದೆ. ಅವುಗಳ ಪಟ್ಟಿ ಈ ಕೆಳಕಂಡಂತೆ ಕೊಟ್ಟಿದ್ದಾರೆ.[3] ಶಾಸನದ 7ನೇ ಮತ್ತು 9ನೇ ಸಾಲಿನಲ್ಲಿ ಸಂಸ್ಕೃತ ಪದಗಳಿಲ್ಲದಿರುವುದು ಮತ್ತು 2ನೇ ಮತ್ತು 5ನೇ ಸಾಲಿನಲ್ಲಿ ಕನ್ನಡ ಶಬ್ದಗಳಿಲ್ಲದಿರುವುದು ದಾಖಲಿಸಿದ್ದಾರೆ.

ಅವುಗಳೆಂದರೆ – ***1. ಶುದ್ಧ ಸಂಸ್ಕೃತ ಪದಗಳು :*** ಶಿಷ್ಟಜನ, ಕಷ್ಟಜನ, ಕಲಿಯುಗ, ವರನ್–ತೇಜಸ್ವಿನೋ, ಮೃತ್ಯುರ್ನತು, ಮಾನವಖಂಡನಂ, ಮೃತ್ಯುಸ್, ತಕ್ಷಣಿಕೋ, ದುಃಖಮ್, ಮಾನಭಂಗನ್, ದಿನೇದಿನೇ, ಸಾಧು, ಮಾಧುರ್ಯಮ್, ಕಲಿಯುಗ ವಿಪರೀತನ್, ಮಾಧವನ್, ವಿಪರೀತ, ಪುರಾಕೃತಮ್, ಅವಿಚಾರಂ, ***2. ಕನ್ನಡಾಂತ್ಯ ಸಂಸ್ಕೃತ ಪದಗಳು*** .ಅರಭಟ್ಟನ್, ಪ್ರಿಯನ್, ವಿಪರೀತನ್, ವರ್ಜಿತನ್, ಸಾಧುಗೆ, ಮಾಧುರ್ಯ್ಯನ್, ಕಲಿಗೆ, ಇತ್ತಿ, ವಿಪರೀತನ್, ಅಹಿತರ್ಕ್ಕಳ್ ***3. ಕನ್ನಡ ಪದಗಳು*** .ಕಪ್ಪೆ, ಬಾದಿಪ್ಪ, ಈತನ್, ಪೆನಲ್ಲ, ಒಳಿತ್, ಕೆಯ್ಯೋರ, ಸೊಲ್ಲದುಮ್, ಅದರಂತೆ, ಬಲ್ಲಿತ್ತು, ಸಂದಿಕ್ಕುಮ್–ಅದು, ಬಂದು,ಕಟ್ಟಿದ, ಸಿಂಘಮನ್, ಕೆಟ್ಟೋಡ್, ಏನ್–ಎಮಗೆಂದು, ಬಿಟ್ಟವೊಲ್, ಕೆಟ್ಟರ್, ಮೇಣ್, ಸತ್ತರ್***4. ಪ್ರಾಕೃತಪದ:*** ಸಿಂಘ.

## ಶಾಸನದ ರೂವಾರಿ

ಈ ಶಾಸನದರೂವಾರಿ***'ಶ್ರೀ ಅಕ್ಷರ ಮೇರು ಶ್ರೀದಾಮೋದರನ್'*** ಎಂಬುದನ್ನು ತಿಳಿಸುತ್ತಾ ಅಕ್ಷರ ಮೇರು ಎಂಬ ವಿಶೇಷಣದಿಂದ ಗುರುತಿಸಿಕೊಂಡ ಶಾಸನಕವಿ, ಲಿಪಿಕಾರ ಹಾಗೂ ವಾಸ್ತುಶಿಲ್ಪಿ, ಶ್ರೀದಾಮೋದರ ಎಂಟನೇ ಶತಮಾನದ ಚಾಲುಕ್ಯರ ಹೆಸರಾಂತ ರೂವಾರಿ ಎಂಬುದನ್ನು, ಅಲ್ಲದೆ, ಈತ ಲಿಪಿಕಾರ, ಕವಿಯೂ, ಶಿಲ್ಪಿಯೂ ಆಗಿದ್ದ ಎಂಬ ವಿಚಾರ ಕುರಿತು ಹೊಸ ನೋಟ ಬೀರಿದ್ದಾರೆ.

**ಶಾಸನದ ಕಾಲ :** ಇಲ್ಲಿವರೆಗಿನ ಅಧ್ಯಯನಗಳು ಶಾಸನದ ಕಾಲವನ್ನು 6ನೇ ಶತಮಾನದಿಂದ 8ನೇ ಶತಮಾನದವರೆಗೆ ಎಂಬುವುದನ್ನು ಈ ಶಾಸನದ ಕಾಲ ಗುರುತಿಸಿದ್ದಾರೆ. ಬಹುತೇಕರು ಕ್ರಿ. ಶ. ಸು 700 ಎಂದು ಒಪ್ಪಿ ಅದನ್ನು ಅಭ್ಯಾಸ ಮಾಡುತ್ತ ಬರುತ್ತಿದ್ದೇವೆ. ಈ ವಿಚಾರವಾಗಿ ಷ. ಶೆಟ್ಟರ್ ಅವರು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಶಿಲ್ಪಿಯಾದ ಶ್ರೀದಾಮೋದರನೇ, ಈ ಶಾಸನದ ಲಿಪಿಕಾರ ಆಗಿರುವುದರಿಂದ ಕ್ರಿ.ಶ. 740 ಇದರ ಕಾಲ ಎಂಬುದನ್ನುಖಚಿತವಾಗಿ ತಿಳಿಸಿದ್ದಾರೆ.

**ಕಪ್ಪೆ ಅರಭಟ್ಟ :** ಕಪ್ಪೆಅರಭಟ್ಟ ಎಂಬ ಅಕ್ಷರ ಸಂಯೋಜನೆ ಕುರಿತು ಇರುವ ಸಂದೇಹವನ್ನು ಕುರಿತು ಅವರು ಚರ್ಚಿಸುತ್ತ, ಈ ಪದ ಸಂಧಿ ಬಿಡಿಸಿ, ಕಪ್ಪೆ–ಅರ>ಕಪ್ಪೆಯರ ಎಂದಾಗಲೀ ಅರ–ಭಟ್ಟ>ಅರಸುಭಟ್ಟ ಎಂದಾಗಲೀ ಸರಿಪಡಿಸಿಕೊಳ್ಳುವ ಅವಶ್ಯಕತೆಯೇ ಇಲ್ಲವೆನಿಸುವುದು. ಈ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕಾರಣದಿಂದ ಇದನ್ನು ಬರೆದಂತೆ ಓದುವುದೇ ಸರಿ. ಈ ಶಾಸನವೀರನ ಹೆಸರು ಕಪ್ಪೆಸರ ಭಟ್ಟ ಎಂದಾಗಿತ್ತೆನ್ನಲು ಮತೆರಡು ಶಾಸನಗಳ ಬೆಂಬಲ ಈಗ ದೊರೆತಿರುವುದರಿಂದ ಅದನ್ನು'ಕತ್ತಿಯರ'ಎಂದಾಗಲೀ **'ಕಾಶ್ಯಪ'** ಎಂದಾಗಲೀ **'ಕಪ್ಪಡಿಗ'** ಎಂದಾಗಲೀ **'ಆರ್ಯಭಟ'** ನೆಂದಾಗಲೀ ಊಹಿಸಿ ವಾದಿಸುವ ಅವಶ್ಯಕತೆ ಉಳಿದಿಲ್ಲ. ಅಂದರೆ **'ಕಪ್ಪೆ ಅರಭಟ್ಟ'** ನೆಂಬವನು ಒಬ್ಬ ಚಾಲುಕ್ಯ ವೀರನೆಂಬುವುದು ಸ್ಪಷ್ಟಗೊಂಡಂತಾಗಿ, ಈ ಬಗ್ಗೆ ಇನ್ನೂ ಹೆಚ್ಚಿನ ಚೌಕಾಶಿಯ ಅವಶ್ಯಕತೆ ಇಲ್ಲ[4] ಎಂದು ಅರ್ಥೈಸಿದ್ದಾರೆ. ಹೀಗೆ ಷ. ಶೆಟ್ಟರ್ ಅವರು ಮಾಡಿರುವಂತಹ ಬಾದಾಮಿ ಶಾಸನದ ಕುರಿತ ಚಿಂತನೆಗಳು ಸ್ಪಷ್ಟೀಕರಣವನ್ನು ಒದಗಿಸಿರುವುದು ಕಂಡುಬರುತ್ತದೆ.

**ಶಾಸನ ಪಾಠದ ಮರುಪರಿಶೀಲನೆ–ಭಾಷಾಂತರ :** ವಿದೇಶಿ ವಿದ್ವಾಂಸ ಜೆ.ಎಫ್. ಫ್ಲೀಟ್ ಇಂಗ್ಲಿಷಿಗೆ ಭಾಷಾಂತರಿಸಿದ ನಂತರ ಈ ಶಾಸನವನ್ನು ಮತ್ತೊಮ್ಮೆ ಭಾಷಾಂತರಿಸದಿದ್ದರೂ,ಕನ್ನಡ ವಿದ್ವಾಂಸರು ಪಾಠದಲ್ಲಿರುವ ಕೆಲವು ಅನುಮಾನಗಳನ್ನು ಪರಿಹರಿಸಲು ಪ್ರಯತ್ನಿಸಿರುವರು. ಇವುಗಳ ಲಾಭ ಪಡೆದುಕೊಂಡು ನಾನೊಂದು ಗದ್ಯಪದ್ಯ ಪಾಠವನ್ನು ಸಿದ್ಧಪಡಿಸಲು ಪ್ರಯತ್ನಿಸಿದ್ದು ಅದು ಹೀಗಿದೆ ಎಂದು ಹೇಳುತ್ತಾರೆ.

## ಶಾಸನ ಪಠ್ಯ

ಕಪ್ಪೆಅರಭಟ್ಟನ್ ಶಿಷ್ಟಜನ ಪ್ರಿಯನ್
ಕಷ್ಟಜನ ವರ್ಜಿತನ್‌ಕಲಿಯುಗ ವಿಪರೀತನ್
ವರನ್‌ತೇಜಸ್ವಿನೋ ಮೃತ್ಯುರ್ನತು ಮಾನಾವಖಂಡನಮ್
ಮೃತ್ಯುಸ್ತತ್ಕ್ಷಣಿಕೋದುಃಖಮ್ಮಾನಭಙ್ಗನ್ ದಿನೇದಿನೇ
ಸಾಧುಗೆ ಸಾಧು ಮಾಧೂರ್ಯನ್ಗೆ ಮಾಧೂರ್ಯಮ್ ಬಾದಿಪ್ಪ
ಕಲಿಗೆ ಕಲಿಯುಗ ವಿಪರೀತನ್ – ಮಾಧವನೀತನ್ ಪೆಱನಲ್ಲ
ಒಳ್ಳಿತ್ತ ಕೆಯ್ವೊರಾರ್ಪ್ಪೊಲ್ಲದುಮ್ಅದರನ್ತೆ ಬಲ್ಲಿತ್ತು ಕಲಿಗೆ
[ವಿ]ಪರೀತ ಪುರಾಕೃತಮಿಲ್ಲಿ ಸನ್ದಿಕ್ಕುಮ್ಅದು ಬಂದು
ಕಟ್ಟಿದ ಸಿಂಘಮನ್ ಕೆಟ್ಟೊಡೇನ್ ಎಮಗೆನ್ದು ಬಿಟ್ಟವೋಲ್ ಕಲಿಗೆ ವಿ
[ಪ]ರೀತನ್ಗ್–ಅಹಿತರ್ಕಳ್ ಕೆಟ್ಟರ್ ಮೇಣ್ ಸತ್ತರ್ಅವಿಚಾರಮ್

## ಶಾಸನದ ಅರ್ಥ

ಶಿಷ್ಟಜನರ ಪ್ರೀತಿಗೆ ಪಾತ್ರನಾದಕಪ್ಪೆಅರಭಟ್ಟನು

ಕಲಿಯುಗಕ್ಕೆ ಅಪವಾದಿ ಎನಿಸಿದವನು; ದುಷ್ಟಜನರನ್ನು ದೂರಿರಿಸಿದವನು.

ಉಜ್ವಲ ಪುರುಷನಿಗೆ ಮಾನಭಂಗಕ್ಕಿಂತ ಸಾವು ಲೇಸು;

ಸಾವಿನ ನೋವು ಕ್ಷಣಿಕ, ಅವಮಾನಿತ ಬಾಳು ಅನುದಿನವೂ ಬಾಧಕವು.

ಸಾಧುವಾದವನಿಗೆ ಸಾಧು, ಮಾಧೂರ್ಯ (ಅಥವಾ ಮಹಾಧುರ್ಯ)ನಿಗೆ ಮಧುರ (ಅಥವಾ ವೀರಾಗ್ರಣಿ);

ಕಾಡುವ ಕಲಿಗೆ ಕಲಿಯುಗ ವಿಪರೀತನೀತನು, [ಚಕ್ರಧಾರಿ] ಮಾಧವನಲ್ಲದೆ, ಈತನು ಮತ್ತೊಬ್ಬನಲ್ಲ.

ಕಲಿಗೆ ಯಾರು ಒಳಿತನ್ನು ಮಾಡುವರೋಯಾರುಕೆಡುಕನ್ನು ಮಾಡುವರೋ,

ಅವರವರ ಆದಿಮ ಕರ್ಮಗಳೆಲ್ಲವೂ ಬಂದಿಲ್ಲಿ ಸಂಗಮಗೊಳ್ಳುವುವು.

ಕಟ್ಟಿಹಾಕಿದ ಸಿಂಹವನ್ನು ಬಿಚ್ಚಿಬಿಟ್ಟರೆ ಅದರಿಂದ ನಮಗೇನು ಕೆಡುಕು? ಎಂದು

ಕಲಿಗೆ ವಿಪರೀತನಾದವನ ಶತ್ರುಗಳು [ಅದನ್ನು] ಬಿಟ್ಟುಕೆಟ್ಟರು, ಮಾತ್ರವಲ್ಲ ಸತ್ತರು[5]

ಶಾಸನದ ಪ್ರತಿ ಮಾಡಿ ತುಂಡರಿಸಿದ ವಿಚಾರವನ್ನು ಕುರಿತು ಒಂದು ವಿಶೇಷ ಅಂಶವನ್ನು ಗುರುತಿಸುತ್ತಾರೆ. ಭಾರತದ ಶಾಸನ ಇತಿಹಾಸದಲ್ಲಿ ಒಂದು ಶಾಸನದ ಪ್ರತಿ ಮಾಡಿರುವ ಉದಾಹರಣೆಗಳು ಸಿಗುತ್ತವೆ. ಆದರೆ ಈ ಶಾಸನದ ಪೂರ್ಣ ಪಠ್ಯ ಒಂದೆಡೆಯಲ್ಲಿದ್ದರೇ, ಅದನ್ನು ಐದು ಭಾಗಗಳಲ್ಲಿ ತುಂಡರಿಸಿ ಅದೇ ಪ್ರದೇಶದ ಬೇರೆ–ಬೇರೆ ಕಡೆಯಲ್ಲಿ ಕಂಡರಿಸಿದ ನಿದರ್ಶನಗಳು ಎಲ್ಲಿಯೂ ಸಿಗುವುದಿಲ್ಲ ಎನ್ನುವುದನ್ನು ತಿಳಿಸಿ ನಮ್ಮ ಗಮನ ಸೆಳೆಯುತ್ತಾರೆ. ಇದರ ಮತ್ತೊಂದು ವಿಶೇಷ ಅಂಶವೆಂದರೆ, ಚಾಳುಕ್ಯ ಲಿಪಿಯನ್ನು ಕುರಿತು ಸುದೀರ್ಘವಾದ ಅಧ್ಯಯನ ಮಾಡಿರುವುದು.

ಒಟ್ಟಾರೆಯಾಗಿ, ಕನ್ನಡದ ಮಹತ್ವದ ಶಾಸನವಾದ ಬಾದಾಮಿಯನ್ನು ಕುರಿತು ಷ. ಶೆಟ್ಟರ್ ಅವರ ಚಿಂತನೆಗಳು ಹಲವು ಹೊಸತುಗಳಿಂದ ಕೂಡಿದ್ದು, ಉಬ್ಬುಶಿಲ್ಪ, ಶಾಸನದ ಸ್ವರೂಪ, ಶಾಸನದ ರೂವಾರಿ, ಶಾಸನದ ಕಾಲ, ಕಪ್ಪೆ ಅರಭಟ್ಟನ ಹೆಸರಿನ ಕುರಿತ ಸಂದೇಹದಿಂದ ಸ್ಪಷ್ಟತೆ, ಶಾಸನದ ಪಾಠದ ಮರುಪರಿಶೀಲನೆ ವಿಚಾರಗಳು ಬಾದಾಮಿ ಶಾಸನಾಧ್ಯಯನಕ್ಕೆ ಮತ್ತಷ್ಟು ಖಚಿತತೆಯನ್ನು ಒದಗಿಸಿವೆ.

## ಅಡಿ ಟಿಪ್ಪಣಿಗಳು

1. ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ ಪು–10
2. ಅದೇ ಪು–13
3. ಅದೇ ಪು–14
4. ಅದೇ ಪು–25
5. ಅದೇ ಪು–15

## ಪರಾಮರ್ಶನ ಗ್ರಂಥಗಳು


- **ಬಾದಾಮಿ ಚಾಳುಕ್ಯರ ಶಾಸನ ಸಾಹಿತ್ಯ, ಷ.ಶೆಟ್ಟರ್, (2015) :** ಬೆಂಗಳೂರು ಅಭಿನವ ಪ್ರಕಾಶನ,
- **ಕಪ್ಪೆಅರಭಟ್ಟನ ಶಾಸನ ಸಮಗ್ರ ಅಧ್ಯಯನ, ಷ. ಶೆಟ್ಟರ್ (2020) :** ಬೆಂಗಳೂರು ಅಭಿನವ ಪ್ರಕಾಶನ.
- **ಕನ್ನಡ ಸಾಹಿತ್ಯಚಾರಿತ್ರಿಕ ಬೆಳವಣಿಗೆ, ಸಂ–1, ಸಿ.ವೀರಣ್ಣ, (1986) :** ಬೆಂಗಳೂರು ನವಕರ್ನಾಟಕ ಪ್ರಕಾಶನ.


■■


ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಡಾ. ನರೇಂದ್ರ ರೈ ದೇರ್ಲರ ಬರಹಗಳಲ್ಲಿ ಪರಿಸರ ಪ್ರಜ್ಞೆ

✍ ಡಾ. ಹಂಪೇಶ್ ಕೆ.ಎಸ್. ಸಹಾಯಕ ಪ್ರಾಧ್ಯಾಪಕ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಎಸ್.ಡಿ.ಎಂ. ಕಾಲೇಜು, ಉಜಿರೆ.

## ಪೀಠಿಕೆ

ಪರಿಸರ ಪತ್ರಿಕೋದ್ಯಮವು ಸುದೀರ್ಘ ಇತಿಹಾಸವನ್ನು ಹೊಂದಿದೆ. 19ನೇ ಶತಮಾನದ ಕೊನೆಯಲ್ಲಿ ಜಾಗತಿಕ ಮಟ್ಟದಲ್ಲಿ ಪರಿಸರ ಪತ್ರಿಕೋದ್ಯಮದ ಕುರಿತು ಚಿಂತನೆ ನಡೆಯಲು ಆರಂಭವಾಯಿತು. ಪರಿಸರ ಬರಹಗಾರರಾದ ರಾಲ್ಫ್ ವಾಲ್ಡೋ ಎಮರ್‌ಸನ್ ಮತ್ತು ಹೆನ್ರೀ ಡೇವಿಡ್ ಥೋರೋ ಪರಿಸರ ಪತ್ರಿಕೋದ್ಯಮದ ಕುರಿತು ಚಿಂತನೆ ನಡೆಸಿದವರಲ್ಲಿ ಪ್ರಮುಖರು. 20ನೇ ಶತಮಾನದ ಆರಂಭದಲ್ಲಿ ಜಾನ್ ಬರ್ರೋಸ್ ಮತ್ತು ಜಾನ್ ಮುಯಿರ್ ಪರಿಸರ ಬರಹಗಳನ್ನು ಬರೆಯುವಲ್ಲಿ ತೊಡಗಿಕೊಂಡರು. 1940ರ ದಶಕದಲ್ಲಿ ಅಲ್ಡೊ ಲಿಯೋಪೋಲ್ಡ್ ತಮ್ಮ ಬರಹಗಳಲ್ಲಿ ಪರಿಸರ ಪ್ರಜ್ಞೆಯನ್ನು ಅಳವಡಿಸಿಕೊಂಡರು.

1960 ಹಾಗೂ 1979ರ ತನಕ ಪರಿಸರ ಪತ್ರಿಕೋದ್ಯಮಕ್ಕೆ ಸರಿಯಾದ ರೂಪುರೇಷೆ ಸಿಕ್ಕಿರಲಿಲ್ಲ. ಪರಿಸರ ಚಳುವಳಿಗಳ ಬೆಳವಣಿಗೆಯೊಂದಿಗೆ ಪರಿಸರ ಪತ್ರಿಕೋದ್ಯಮವೂ ಬೆಳವಣಿಗೆ ಕಂಡಿತು. 1962ರಲ್ಲಿ ರಾಚೆಲ್ ಕಾರ್ಸನ್ ಪ್ರಕಟಿಸಿದ 'ಸೈಲೆಂಟ್ ಸ್ಪ್ರಿಂಗ್' ಮತ್ತು 1964ರಲ್ಲಿ ಕಾನೂನುಬದ್ಧವಾಗಿ ಅಂಗೀಕಾರಗೊಂಡ 'ವೈಲ್ಡರ್ನೆಸ್ ಆಕ್ಟ್' ಪರಿಸರ ಪತ್ರಿಕೋದ್ಯಮದ ಬೆಳವಣಿಗೆಗೆ ನಾಂದಿ ಹಾಡಿತು. 1960 ಮತ್ತು 1970ರ ದಶಕಗಳಲ್ಲಿ ಪರಿಸರ ಸಂಘಟನೆಗಳು ರಾಜಕೀಯದಲ್ಲೂ ಪ್ರಭಾವ ಬೀರಲಾರಂಭಿಸಿದವು. ಪರಿಸರೀಯ ಬಿಕ್ಕಟ್ಟುಗಳು ಹಾಗೂ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತಿಳಿಸಿ, ಅರಿವು ಮೂಡಿಸಿ, ಪರಿಸರಕ್ಕೆ ಪೂರಕವಾಗುವ ನೀತಿ ನಿರ್ಧಾರಗಳು ರಚನೆಯಾಗುವಲ್ಲಿ ಪ್ರಭಾವ ಬೀರಿದವು. ಇದರಿಂದಾಗಿ ಮಾಧ್ಯಮಗಳು ಪರಿಸರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸಿ ಪರಿಸರದ ಪರವಾಗಿ ಕೆಲಸ ಮಾಡಲಾರಂಭಿಸಿದವು.

ಪರಿಸರ ವರದಿಗಳ ಗುಣಮಟ್ಟ, ನಿಖರತೆ ಮತ್ತು ಗೋಚರತೆಯನ್ನು ಸುಧಾರಿಸುವ ಮೂಲಕ ಪರಿಸರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಲ್ಲಿ ಗ್ರಹಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ 1990ರಲ್ಲಿ 'ಸೊಸೈಟಿ ಆಫ್ ಎನ್ವಿರಾನ್ಮೆಂಟಲ್ ಜರ್ನಲಿಸ್ಟ್' ಸ್ಥಾಪನೆಗೊಂಡಿತು. ಇದರಿಂದಾಗಿ ಪರಿಸರ ಪತ್ರಿಕೋದ್ಯಮದ ಕ್ಷೇತ್ರವು ಕಾನೂನುಬದ್ಧಗೊಂಡಿತು. ಇತ್ತೀಚೆಗೆ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಪರಿಸರ ಪತ್ರಿಕೋದ್ಯಮದ ಸಂಪೂರ್ಣ ವಿಸ್ತಾರವನ್ನು ತಿಳಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

## ಭಾರತದಲ್ಲಿ ಪರಿಸರ ಪತ್ರಿಕೋದ್ಯಮ

ಭಾರತದಲ್ಲಿ 1920ರಲ್ಲಿ ಪರಿಸರ ಪತ್ರಿಕೋದ್ಯಮಕ್ಕೆ ಅಡಿಪಾಯ ಸಿಕ್ಕಿದಂತಾಯಿತು. ಬಳಿಕ ನಿಧಾನಗತಿಯಲ್ಲಿ ಸಾಗುತ್ತಿದ್ದ ಈ ಪತ್ರಿಕೋದ್ಯಮ 1970ರ ಸುಮಾರಿಗೆ ಮರುಹುಟ್ಟು ಪಡೆದುಕೊಂಡು, ಪರಿಸರ ಚಳುವಳಿಗಳ ಪರವಾಗಿ ನಿಂತಿತು. ಪರಿಸರ ಕಾಳಜಿ ಹಾಗೂ ಪರಿಸರ ಚಿಂತನೆಯ ಕುರಿತ ಬರಹಗಳು ಅಧಿಕವಾಗಿ ಪ್ರಕಟಗೊಂಡವು. ನರ್ಮದಾ ಕಣಿವೆ ಆಂದೋಲನ, ಚಿಪ್ಕೋ ಚಳುವಳಿ, ಮೀನುಗಾರರ ಚಳುವಳಿ ಹೀಗೆ ದೇಶಾದ್ಯಂತ ನಡೆಯುತ್ತಿದ್ದ ಪರಿಸರ ಚಳುವಳಿಗೆ ಪೂರಕವಾಗಿ ಪರಿಸರ ಪತ್ರಿಕೋದ್ಯಮ ಕಾರ್ಯನಿರ್ವಹಿಸಿತು.

ಅಹಮದಾಬಾದ್‌ನ ಶ್ಯಾಮ್ ಪರೇಖ್, ದೆಹಲಿಯ ಸುಬೀರ್ ಘೋಷ್ ಪರಿಸರ ಪತ್ರಿಕೋದ್ಯಮದಲ್ಲಿ ಗುರುತಿಸಿಕೊಂಡವರಲ್ಲಿ ಪ್ರಮುಖರು.

## ಕರ್ನಾಟಕದಲ್ಲಿ ಪರಿಸರ ಪತ್ರಿಕೋದ್ಯಮ

ಭಾರತದಲ್ಲಿ ಪರಿಸರ ಪತ್ರಿಕೋದ್ಯಮ ಬೆಳೆಯುತ್ತಿದ್ದಂತೆಯೇ ಕರ್ನಾಟಕದಲ್ಲೂ ಇದು ಬೆಳವಣಿಗೆ ಕಂಡಿತು. ಅಪ್ಪಿಕೋ ಚಳುವಳಿ, ಪಶ್ಚಿಮ ಘಟ್ಟ ಉಳಿಸಿ ಅಭಿಯಾನ, ಕಾವೇರಿ ಉಳಿಸಿ ಚಳುವಳಿ, ನೇತ್ರಾವತಿ ನದಿ ಉಳಿಸಿ ಅಭಿಯಾನ ಮುಂತಾದ ಪರಿಸರ ಪರ ಹೋರಾಟಗಳಲ್ಲಿ ಪರಿಸರ ಪತ್ರಿಕೋದ್ಯಮ ಪ್ರಮುಖ ಪಾತ್ರವಹಿಸಿತು. ಪರಿಸರ ಹೋರಾಟಗಾರರ ಚಿಂತನೆಗಳು ಬರಹ ರೂಪಕ್ಕಿಳಿದವು. ಹಲವು ಪರಿಸರ ಪರ ಹೋರಾಟಗಳಿಗೆ ಪರಿಸರ ಪತ್ರಿಕೋದ್ಯಮ ಬೆಂಬಲವಾಗಿ ನಿಂತಿತು.

ಕರ್ನಾಟಕದಲ್ಲಿ ನಾಗೇಶ್ ಹೆಗಡೆ, ಶ್ರೀ ಪಡ್ರೆ, ಶಿವಾನಂದ ಕಳವೆ, ದಿನೇಶ್ ಹೊಳ್ಳ ಹಾಗೂ ನರೇಂದ್ರ ರೈ ದೇರ್ಲ ಪರಿಸರ ಬರಹಗಳ ಮೂಲಕ ಗುರುತಿಸಿಕೊಂಡ ಪ್ರಮುಖ ಬರಹಗಾರರು. ಪರಿಸರದ ಕುರಿತಾದ ಸಂವೇದನೆಯ ಬರಹಗಳ ಮೂಲಕ ಇವರು ಜನರಲ್ಲಿ ಪರಿಸರ ಕಾಳಜಿಯನ್ನು ಮೂಡಿಸುತ್ತಿದ್ದಾರೆ.

## ಡಾ. ನರೇಂದ್ರ ರೈ ದೇರ್ಲರ ಪರಿಚಯ

ಡಾ. ನರೇಂದ್ರ ರೈ ದೇರ್ಲ ಅವರು 1964ನೇ ಇಸವಿಯ ಅಕ್ಟೋಬರ್ 14ರಂದು ಪುತ್ತೂರು ತಾಲೂಕಿನ ಕೆಯ್ಯೂರು ಗ್ರಾಮದ ದೇರ್ಲದಲ್ಲಿ ಜನಿಸಿದರು. ಇವರ ತಂದೆ ಹಾಗೂ ತಾಯಿ ಕೃಷಿಕರಾಗಿದ್ದುದರಿಂದ ಬಾಲ್ಯದಿಂದಲೇ ನರೇಂದ್ರ ರೈ ಅವರಿಗೆ ಕೃಷಿ ಹಾಗೂ ಪರಿಸರದ ಕುರಿತು ಆಸಕ್ತಿ ಮೂಡಿತ್ತು. ಕನ್ನಡದಲ್ಲಿ ಎಂ.ಎ ಪದವೀಧರರಾಗಿರುವ ದೇರ್ಲರು ಎಂ.ಫಿಲ್ ಹಾಗೂ 'ಕನ್ನಡ ಸಾಹಿತ್ಯದಲ್ಲಿ ಬೇಟೆ : ಪರಿಕಲ್ಪನೆ ಮತ್ತು ಧೋರಣೆಗಳು' ಎಂಬ ವಿಷಯದ ಕುರಿತು ಪಿ.ಎಚ್‌ಡಿ ಪದವಿಯನ್ನೂ ಪಡೆದಿದ್ದಾರೆ.

1990ರಲ್ಲಿ 'ತರಂಗ' ವಾರಪತ್ರಿಕೆಯ ಉಪಸಂಪಾದಕರಾಗಿ ಇವರು ತಮ್ಮ ವೃತ್ತಿ ಜೀವನವನ್ನು ಪ್ರಾರಂಭಿಸುತ್ತಾರೆ. 7 ವರ್ಷಗಳ ಕಾಲ ತರಂಗದಲ್ಲಿದ್ದು, ಬಳಿಕ 1997ರಲ್ಲಿ ಅಧ್ಯಾಪನವನ್ನು ವೃತ್ತಿಯಾಗಿ ಸ್ವೀಕರಿಸುತ್ತಾರೆ. ಸರಕಾರಿ ಕಾಲೇಜಿನ ಪ್ರಾಧ್ಯಾಪಕರಾಗಿ ಮೊದಲಿಗೆ ಹಾಸನ ಜಿಲ್ಲೆಯ ಜಾವಗಲ್, ಬಳಿಕ ಉಪ್ಪಿನಂಗಡಿ, ನಂತರ ಬೆಳ್ಳಾರೆಯಲ್ಲಿ ಕಾರ್ಯನಿರ್ವಹಿಸಿ, ಪ್ರಸ್ತುತ ಪುತ್ತೂರಿನ ಸರಕಾರಿ ಮಹಿಳಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಅಧ್ಯಾಪನ ವೃತ್ತಿಯೊಂದಿಗೆ ಕೃಷಿಯನ್ನೂ ಮಾಡುತ್ತಿದ್ದಾರೆ. ಜೊತೆಗೆ ಫ್ರೀಲಾನ್ಸ್ ಬರಹಗಾರರಾಗಿದ್ದು, ಪರಿಸರ ಹಾಗೂ ಕೃಷಿ ಸಂಬಂಧಿ ಬರಹಗಳನ್ನು ವಿವಿಧ ಪತ್ರಿಕೆಗಳಿಗೆ ಬರೆಯುತ್ತಿದ್ದಾರೆ. ಸಂಪನ್ಮೂಲ ವ್ಯಕ್ತಿಯಾಗಿದ್ದುಕೊಂಡು, ಹಲವು ಕಾರ್ಯಕ್ರಮಗಳಲ್ಲಿ ಉಪನ್ಯಾಸ ನೀಡುತ್ತಿದ್ದಾರೆ. ಪತ್ರಿಕೋದ್ಯಮ, ಪರಿಸರ ಹಾಗೂ ಕನ್ನಡ ಸಾಹಿತ್ಯದ ಕುರಿತು ಅತೀವ ಆಸಕ್ತಿಯುಳ್ಳ ದೇರ್ಲರು ಈ ವಿಷಯಗಳಿಗೆ ಸಂಬಂಧಿಸಿದ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ, ಸಂಪಾದಿಸಿದ್ದಾರೆ.

ಡಾ. ನರೇಂದ್ರ ರೈ ದೇರ್ಲರ ಪರಿಸರ ಪತ್ರಿಕೋದ್ಯಮದಲ್ಲಿನ ವಿಶಿಷ್ಟ ಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರಕಾರವು 2012ನೇ ಸಾಲಿನ 'ಪರಿಸರ ಪತ್ರಿಕೋದ್ಯಮ ಪ್ರಶಸ್ತಿ' ನೀಡಿ ಗೌರವಿಸಿದೆ. 2014ನೇ ಇಸವಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅಕ್ಷರ ಪ್ರತಿಷ್ಠಾನ ಪ್ರಶಸ್ತಿ'ಗೆ ಡಾ. ದೇರ್ಲರು ಭಾಜನರಾಗಿದ್ದಾರೆ. 'ಇದು ನೀರಿನ ಊರಿನ ಕಥೆ' ಎಂಬ ನುಡಿಚಿತ್ರಕ್ಕೆ ಪ.ಗೋ ಪ್ರಶಸ್ತಿಯನ್ನು ದೇರ್ಲರು ಪಡೆದುಕೊಂಡಿದ್ದಾರೆ.

## ತರಂಗ ವಾರಪತ್ರಿಕೆಯ ಉಪಸಂಪಾದಕರಾಗಿ

1990ರಲ್ಲಿ ತರಂಗ ವಾರಪತ್ರಿಕೆಯ ಉಪಸಂಪಾದಕರಾಗಿ ನರೇಂದ್ರ ರೈ ದೇರ್ಲರು ಪತ್ರಿಕೋದ್ಯಮದಲ್ಲಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸುತ್ತಾರೆ. ಕನ್ನಡದಲ್ಲಿ ಎಂ.ಎ ಪದವೀಧರರಾಗಿದ್ದ ದೇರ್ಲರಿಗೆ ಬರಹಗಳ ಕುರಿತು ವಿಶೇಷ ಒಲವಿತ್ತು. ಹಾಗಾಗಿ ತರಂಗದಲ್ಲಿ ಉಪಸಂಪಾದಕರಾಗಿ ಪತ್ರಿಕೋದ್ಯಮದ ಕುರಿತು ಕಲಿಯುತ್ತಾ, ವಿಶೇಷ ಬರಹಗಳನ್ನು ಬರೆಯುತ್ತಾ ಅವರ ಪತ್ರಿಕೋದ್ಯಮ ವೃತ್ತಿ ಪ್ರಾರಂಭವಾಯಿತು. ಆ ಸಂದರ್ಭದಲ್ಲಿ ಸಂತೋಷ್ ಕುಮಾರ್ ಗುಲ್ವಾಡಿ ಅವರು ತರಂಗದ ಸಂಪಾದಕರಾಗಿದ್ದರು. ಸಾಹಿತ್ಯ, ಸಂಸ್ಕೃತಿ, ಜನಪದ, ಕೃಷಿ ಹಾಗೂ ಪರಿಸರಕ್ಕೆ ಸಂಬಂಧಿಸಿದ ಬರಹಗಳನ್ನು ದೇರ್ಲರು ಬರೆಯುತ್ತಿದ್ದರು.

ತರಂಗದ ಉಪಸಂಪಾದಕರಾಗಿ ದೇರ್ಲರು ಹಲವಾರು ವಿಭಿನ್ನ ವಿಷಯಗಳ ಕುರಿತು ಮುಖಪುಟ ಲೇಖನಗಳು, ನುಡಿಚಿತ್ರಗಳು, ವಿಮರ್ಶಾತ್ಮಕ ಬರಹಗಳನ್ನು ಬರೆಯುತ್ತಿದ್ದರು. ಅದರಲ್ಲೂ ಇವರ ಪರಿಸರ ಹಾಗೂ ಕೃಷಿ ಸಂಬಂಧಿ ಬರಹಗಳು ವಿಶೇಷವಾಗಿದ್ದವು.

ಯಾವುದೇ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಬಳಸದೇ, ಸಾವಯವ ಕೃಷಿಯನ್ನು ಮಾಡಿ ಉತ್ತಮ ಬೆಳೆ ಪಡೆದ ಮಾದರಿ ಕೃಷಿಕರ ಕುರಿತು, ನೈಸರ್ಗಿಕ ಗೊಬ್ಬರದ ಸಹಾಯದಿಂದ ಮಣ್ಣಿಗೆ ಯಾವುದೇ ಹಾನಿಯಾಗದ ರೀತಿಯಲ್ಲಿ ಕೃಷಿ ಮಾಡಿ ಪರಿಸರ ಪ್ರೇಮವನ್ನು ಮೆರೆಯುತ್ತಿರುವ ರೈತರ ಬಗ್ಗೆ ಹಾಗೂ ಕೃಷಿ ಸಾಧ್ಯವೇ ಇಲ್ಲ ಎಂಬ ಪ್ರದೇಶಗಳಲ್ಲಿ ಅವಿರತ ಪ್ರಯತ್ನದಿಂದ ಸಮೃದ್ಧವಾಗಿ ಬೆಳೆ ಪಡೆದ ಕೃಷಿ ಸಾಧಕರ ಕುರಿತು ಹಲವಾರು ನುಡಿಚಿತ್ರಗಳನ್ನು ನರೇಂದ್ರ ರೈ ದೇರ್ಲರು 'ತರಂಗ'ದ ಉಪಸಂಪಾದಕರಾಗಿದ್ದ ಸಂದರ್ಭದಲ್ಲಿ ಬರೆದಿದ್ದರು.

ನೈಸರ್ಗಿಕ ಸೌಂದರ್ಯವುಳ್ಳ ಹಲವಾರು ಪ್ರೇಕ್ಷಣೀಯ ಸ್ಥಳಗಳು, ಹಸಿರು ವಾತಾವರಣದಿಂದಲೇ ಪ್ರವಾಸಿಗರನ್ನು ಆಕರ್ಷಿಸುತ್ತಿರುವ ಪ್ರವಾಸಿ ತಾಣಗಳು, ಪ್ರಾಕೃತಿಕ ವಿಸ್ಮಯದಿಂದಲೇ ನೋಡುಗರನ್ನು ತನ್ನೆಡೆಗೆ ಸೆಳೆಯುತ್ತಿರುವ ಪ್ರದೇಶಗಳು, ಆಧುನಿಕತೆಯ ಭರಾಟೆಗೆ ಸಿಲುಕಿ ಸಮಸ್ಯೆಗಳನ್ನು ಅನುಭವಿಸುತ್ತಿರುವ ಐತಿಹಾಸಿಕ ಜಾಗಗಳ ಕುರಿತಾದ ಬರಹಗಳನ್ನು ಬರೆದಿದ್ದರು.

ಅಭಿವೃದ್ಧಿಯ ನೆಪದಲ್ಲಿ ಪರಿಸರಕ್ಕಾಗುತ್ತಿರುವ ಹಾನಿ, ಪರಿಸರಕ್ಕೆ ಮಾರಕವಾಗಿರುವ ಯೋಜನೆಗಳಿಂದ ಕೊಡಲಿಯೇಟು ತಿನ್ನುತ್ತಿರುವ ಗಿಡ–ಮರಗಳು, ಮಾನವನ ಚಟುವಟಿಕೆಗಳಿಂದ ತೊಂದರೆಗೆ ಸಿಲುಕಿರುವ ಕಾಡು ಪ್ರಾಣಿಗಳು, ಪ್ರಕೃತಿಯ ಒಡಲಿನಲ್ಲಿ ನಡೆಯುತ್ತಿರುವ ಪರಿಸರ ವಿರೋಧಿ ಕಾಮಗಾರಿಗಳಿಂದ ತೊಂದರೆ ಅನುಭವಿಸುತ್ತಿರುವ ಕಾಡಿನ ಮೂಲ ನಿವಾಸಿಗಳು, ಆಧುನಿಕ ಯಂತ್ರೋಪಕರಣಗಳಿಂದ ಪರಿಸರಕ್ಕಾಗುತ್ತಿರುವ ದುಷ್ಪರಿಣಾಮಗಳು, ಜಾಗತಿಕ ಹಾಗೂ ಸ್ಥಳೀಯ ಪರಿಸರ ಸಮಸ್ಯೆಗಳಾದ ಅರಣ್ಯನಾಶ, ಅಂತರ್ಜಲ ಕುಸಿತ, ಕಡಲ್ಕೊರೆತ, ಭೂಸವಕಳಿ ಇತ್ಯಾದಿಗಳ ಕುರಿತು ಎಚ್ಚರಿಕೆ ನೀಡುವ ಬರಹಗಳು ಪ್ರಕಟಗೊಂಡಿದ್ದವು.

ಹಲವಾರು ಗಿಡಮೂಲಿಕೆಗಳು, ಹಣ್ಣು–ತರಕಾರಿಗಳು, ಗಿಡ–ಮರಗಳು ಹಾಗೂ ಹೂವುಗಳ ಕುರಿತು ದೇರ್ಲರು 'ತರಂಗ'ದಲ್ಲಿ ಬರೆದ ಲೇಖನದಲ್ಲಿ ಅವುಗಳ ವಿಶೇಷತೆ, ಆರೋಗ್ಯವರ್ಧಕ ಗುಣಗಳು ಹಾಗೂ ಇತರ ಉಪಯೋಗಗಳ ಕುರಿತು ಮಾಹಿತಿ ನೀಡುವುದರೊಂದಿಗೆ ಅವುಗಳ ಕುರಿತು ಇರುವ ಕುತೂಹಲಕಾರಿ ವಿಚಾರಗಳನ್ನು ವಿವರಿಸಿದ್ದಾರೆ. ಅಳಿವಿನಂಚಿನಲ್ಲಿರುವ ತಳಿಗಳ ಕುರಿತು ವಿವರಣೆ ನೀಡಿದ್ದಾರೆ.

ತಮ್ಮ ಬಾಲ್ಯದ ಅನುಭವಗಳನ್ನು ಹಂಚಿಕೊಳ್ಳುತ್ತಾ, ಹಾಸ್ಯದ ಲೇಪನದೊಂದಿಗೆ ಪರಿಸರದ ಗಂಭೀರ ಸಮಸ್ಯೆಗಳನ್ನು ಬರಹಗಳ ಮೂಲಕವಾಗಿ ಓದುಗರಿಗೆ ತಿಳಿಸಿದ್ದಾರೆ. ಹಲವಾರು ಕೃಷಿ ಸಾಧಕರನ್ನು ಹಾಗೂ ಸಾಹಿತಿಗಳನ್ನು ಸಂದರ್ಶಿಸಿದ್ದಾರೆ, ಅವರ ಕುರಿತು ಬರೆದಿದ್ದಾರೆ. 'ತರಂಗ'ದಲ್ಲಿ ಉಪಸಂಪಾದಕರಾಗಿದ್ದ ಸಂದರ್ಭದಲ್ಲಿ ಹಲವಾರು ವಿಷಯಗಳಿಗೆ ಸಂಬಂಧಿಸಿದ ಬರಹಗಳನ್ನು ದೇರ್ಲರು ಬರೆಯುತ್ತಿದ್ದರೂ ಪರಿಸರ ಹಾಗೂ ಕೃಷಿ ಸಂಬಂಧಿ ಲೇಖನಗಳು ವಿಶೇಷವಾಗಿದ್ದವು.

## ಫ್ರೀಲಾನ್ಸ್ ಪರಿಸರ ಹಾಗೂ ಕೃಷಿ ಬರಹಗಾರರಾಗಿ

1997ರಲ್ಲಿ ಅಧ್ಯಾಪನವನ್ನು ವೃತ್ತಿಯಾಗಿ ಸ್ವೀಕರಿಸಿದ ಡಾ. ನರೇಂದ್ರ ರೈ ದೇರ್ಲರು ಬಳಿಕ ಫ್ರೀಲಾನ್ಸ್ ಬರಹಗಾರರಾಗಿ ತಮ್ಮ ಹಸಿರು ಬರಹಗಳ ಪಯಣವನ್ನು ಮುಂದುವರಿಸಿದರು. ಹಲವಾರು ದಿನಪತ್ರಿಕೆಗಳು, ವಾರಪತ್ರಿಕೆಗಳು ಹಾಗೂ ಮಾಸಿಕಗಳಲ್ಲಿ ಪರಿಸರ ಹಾಗೂ ಕೃಷಿಯ ಕುರಿತಾದ ಅವರ ನುಡಿಚಿತ್ರಗಳು, ಲೇಖನಗಳು, ಪ್ರಬಂಧಗಳು ಪ್ರಕಟಗೊಳ್ಳಲಾರಂಭಿಸಿದವು.

ಫ್ರೀಲಾನ್ಸ್ ಬರಹಗಾರರಾಗಿ ಡಾ. ನರೇಂದ್ರ ರೈ ದೇರ್ಲರು ಕೃಷಿ, ಗ್ರಾಮೀಣ ಬದುಕು ಹಾಗೂ ಪರಿಸರ ಸಂಬಂಧಿ ವಿಷಯಗಳ ಬರಹಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದಾರೆ. ಆಧುನಿಕ ಜಗತ್ತಿನಲ್ಲಿ ಕೃಷಿ ಹಾಗೂ ಪರಿಸರ ಯಾವ ರೀತಿ ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ ಹಾಗೂ ಅದಕ್ಕಾಗುತ್ತಿರುವ ಸಮಸ್ಯೆಗಳ ಕುರಿತು ಬರೆದಿದ್ದಾರೆ.

ಪರಿಸರಕ್ಕಾಗುತ್ತಿರುವ ಚಿಕ್ಕ ಪುಟ್ಟ ಸಮಸ್ಯೆಗಳೇ ಮುಂದಕ್ಕೆ ಮಹಾ ಕಂಟಕವಾಗಿ ಬೆಳೆಯಬಹುದೆಂಬ ಎಚ್ಚರಿಕೆಯನ್ನು ತಮ್ಮ ಬರಹಗಳ ಮೂಲಕ ನೀಡಿದ್ದಾರೆ. ಆಧುನೀಕರಣದಿಂದ ಸಾಂಪ್ರದಾಯಿಕ ಹಾಗೂ ಸಾವಯವ ಕೃಷಿ ವಿಧಾನಗಳು ಕಣ್ಮರೆಯಾಗುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಬದಲಾವಣೆ ಕಾಣುತ್ತಿರುವ ಗ್ರಾಮ ಜೀವನದ ಕುರಿತು ವಿವರಿಸಿದ್ದಾರೆ. ನಿಸರ್ಗ ಸಂಬಂಧಿ ನೆಲ–ಜಲ ಸಮಸ್ಯೆಗಳು ಹಾಗೂ ನೆಲ ಚಿಗುರುಗಳ ಆಕ್ರಂದನವನ್ನು ಅಕ್ಷರ ರೂಪಕ್ಕಿಳಿಸಿ ಬರಹಗಳನ್ನು ಬರೆದಿದ್ದಾರೆ. ಕೃಷಿ ಪಾಠ ಹಾಗೂ ಕೃಷಿ ಸಂದೇಶವನ್ನು ಸಾರುವ ಬರಹಗಳನ್ನು ರಚಿಸಿದ್ದಾರೆ.

ಪರಿಸರ ಮಾರಕ ಯೋಜನೆಗಳಿಂದ ಪರಿಸರದ ಮೇಲಾಗುತ್ತಿರುವ ದುಷ್ಪರಿಣಾಮಗಳು, ಹೆಚ್ಚುತ್ತಿರುವ ತಾಪಮಾನವು ನೆಲ ಹಾಗೂ ಜಲದ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ವಿವರಿಸುವ ಲೇಖನಗಳು, ಜಲಸಂರಕ್ಷಣೆಯ ಅಗತ್ಯತೆಯನ್ನು ಬಿಂಬಿಸುವ ಬರಹಗಳು, ವಿನಾಶದಂಚಿನಲ್ಲಿರುವ ಸಸ್ಯ ಪ್ರಭೇಧಗಳು ಹಾಗೂ ತಳಿಗಳ ಕುರಿತು ನುಡಿಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಕೃಷಿಯಲ್ಲಿ ಉಪಯೋಗಿಸುವ ಪರಿಕರಗಳ ಕುರಿತು ಮಾಹಿತಿ ನೀಡುವ ಬರಹಗಳು, ಕೃಷಿಕರಿಗೆ ಎದುರಾಗುವ ಸವಾಲುಗಳನ್ನು ಬಿಂಬಿಸುವ ಮಾಹಿತಿಯುಕ್ತ ಲೇಖನಗಳು, ಸಹಜ ಕೃಷಿಯಲ್ಲಿಯೇ ಹೊಸ ಪ್ರಯೋಗಗಳನ್ನು ಕೈಗೊಂಡು ಯಶಸ್ಸು ಕಂಡ ರೈತರ ಯಶೋಗಾಥೆಗಳು, ಕೃಷಿಯಲ್ಲಿ ಎದುರಾಗುವ ಸಮಸ್ಯೆಗಳಿಗೆ ಕೃಷಿಕರೇ ಕಂಡುಕೊಂಡಿರುವ ಪರಿಹಾರಗಳನ್ನು ತಿಳಿಸುವ ಡಾ. ನರೇಂದ್ರ ರೈ ದೇರ್ಲರ ಬರಹಗಳು ಹಲವಾರು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

## ಪ್ರಜಾವಾಣಿಯ 'ಅಜ್ಜನ ಜಗಲಿ' ಅಂಕಣ

2009ರಲ್ಲಿ ಪ್ರಜಾವಾಣಿಯ ಮಂಗಳೂರು ಪುರವಣಿಯಲ್ಲಿ 'ಅಜ್ಜನ ಜಗಲಿ' ಎಂಬ ಅಂಕಣವನ್ನು ನರೇಂದ್ರ ರೈ ದೇರ್ಲರು ಬರೆಯಲು ಆರಂಭಿಸುತ್ತಾರೆ. ಇದು ಪ್ರತಿ ಶುಕ್ರವಾರದಂದು ಪ್ರಕಟವಾಗುತ್ತಿತ್ತು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಅಂಕಣದಲ್ಲಿ 'ಅಜ್ಜನ ಜಗಲಿ' ಎಂಬ ರೂಪಕವನ್ನು ದೇರ್ಲರು ಸೃಷ್ಟಿಸಿ, ಆ ಮೂಲಕ ಗ್ರಾಮೀಣ ಜನರ ಕಥೆಗಳನ್ನು ಓದುಗರಿಗೆ ತಿಳಿಸುತ್ತಿದ್ದರು. 'ಅಜ್ಜನ ಜಗಲಿ'ಯ ಮೂಲಕ ಅನೇಕ ರೈತರು, ಕೃಷಿ ಕಾರ್ಮಿಕರು, ಕಾಡುತ್ಪತ್ತಿಗಳನ್ನು ಸಂಗ್ರಹಿಸುವವರು, ಬುಟ್ಟಿ ಹೆಣೆಯುವವರು, ಕಾಡಿನ ವನಪಾಲಕರು, ಕಾಡು–ಬೆಟ್ಟಗಳ ನಡುವಿನ ದಾರಿಯಲ್ಲಿ ಸಾಗುವವರ ಕಥೆಗಳು ಇತ್ಯಾದಿಗಳನ್ನು ಬಹಳ ಸ್ವಾರಸ್ಯಪೂರ್ಣವಾಗಿ ಬರೆಯುತ್ತಿದ್ದರು.

ಮಣ್ಣಿನ ಮಕ್ಕಳ ಹಾಗೂ ಕೃಷಿಯೊಂದಿಗೆ ಸಂಬಂಧವನ್ನು ಹೊಂದಿರುವವರ ಯಶೋಗಾಥೆಗಳನ್ನು ಈ ಅಂಕಣದ ಮೂಲಕ ದೇರ್ಲರು ಪರಿಚಯಿಸಿದ್ದಾರೆ. ಕೃಷಿಯಲ್ಲಿ ತೊಡಗಿಕೊಂಡವರ ಬದುಕಿನ ಭಾಗ್ಯ ಹಾಗೂ ಬವಣೆಗಳನ್ನು ಬಿಂಬಿಸುವ ಬರಹಗಳು 'ಅಜ್ಜನ ಜಗಲಿ'ಯಿಂದ ಮೂಡಿ ಬಂದಿವೆ. ತಮ್ಮ ಅನುಭವಗಳನ್ನು ಹಾಗೂ ನೈಜ ಘಟನೆಗಳನ್ನು ಅರ್ಥಪೂರ್ಣವಾಗಿ ಸರಳೀಕರಿಸಿ ಓದುಗರಿಗೆ ನೀಡುತ್ತಿದ್ದರು. ಕೃಷಿಯಿಂದ ಯಶಸ್ಸುಗಳಿಸಿದವರ ಕುರಿತು ಬರಹಗಳು ಹಾಗೂ ಕೃಷಿಯಲ್ಲಿ ನಿರೀಕ್ಷಿತ ಫಸಲು ಬಾರದಿದ್ದಾಗ ಸೋತು ಶರಣಾದವರ ಕುರಿತ ಬರಹಗಳೂ ಈ ಅಂಕಣದಲ್ಲಿದ್ದವು.

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದ ಜನ ಕೃಷಿಯಿಂದ ದೂರ ಸರಿದು ನಗರೀಕರಣದೆಡೆಗಿನ ಆಕರ್ಷಣೆಯಿಂದ ಪೇಟೆಗೆ ತೆರಳುತ್ತಿರುವ ಸಂದರ್ಭದಲ್ಲಿ ಹಳ್ಳಿಗಳು ತಮ್ಮ ಕೃಷಿ ವೈಭವವನ್ನು ಕಳೆದುಕೊಳ್ಳುತ್ತಿರುವ ಸನ್ನಿವೇಶವನ್ನು ಈ ಅಂಕಣದ ಬರಹಗಳು ತಿಳಿಸುತ್ತವೆ.

'ಬೀಜ, ಬೇರು, ಚಿಗುರಿನ ಮೇಲೆ ಮೌಸ್, ಮಾನಿಟರ್, ಡಿಸ್ಕ್!' ಎಂಬ ಬರಹವು ಉಳುಮೆ ಮಾಡುತ್ತಿದ್ದ ಕೃಷಿಕನೊಬ್ಬ ತನ್ನ ಮಕ್ಕಳು ಕೃಷಿಯನ್ನು ಮುಂದುವರಿಸದೇ ಇದ್ದಾಗ ಗದ್ದೆಯನ್ನು ಸಾಫ್ಟ್‌ವೇರ್ ಕಂಪೆನಿಯೊಂದಕ್ಕೆ ಮಾರಾಟ ಮಾಡಿದ ಘಟನೆಯನ್ನು ವಿವರಿಸುವುದರಿಂದ ಈ ಬರಹ ಅತ್ಯಂತ ಪ್ರಸ್ತುತವಾಗಿದೆ. ಕೃಷಿ ಕಾರ್ಮಿಕರ ಸಮಸ್ಯೆಯಿದ್ದರೂ ಟಿಲ್ಲರ್ ಉಪಯೋಗಿಸಿ ಕೃಷಿ ಚಟುವಟಿಕೆಗಳನ್ನು ಮಾಡುತ್ತಿದ್ದ ಆತ ಅನಿವಾರ್ಯ ಕಾರಣಗಳಿಂದಾಗಿ ಕೃಷಿಯಿಂದ, ಹಸಿರು ಭೂಮಿಯಿಂದ ದೂರ ಸರಿಯುತ್ತಾನೆ. ಆದರೂ ತಾನು ಕೃಷಿ ಮಾಡುತ್ತಿದ್ದ ಜಾಗದಲ್ಲಿ ಮಣ್ಣಿನ ರಾಶಿಯೇ ಬಿದ್ದು ಅಲ್ಲಿ ದೊಡ್ಡ ಕಟ್ಟಡವೊಂದು ತಲೆಯೆತ್ತಿದಾಗ ಕಣ್ಣೀರಿಡುತ್ತಾನೆ.

ಕೃಷಿ ಚಟುವಟಿಕೆಗಳಿಗೆ ಹೊಂದಿಕೊಂಡೇ ದೈವಾರಾಧನೆಯೂ ನಡೆಯುತ್ತಿತ್ತು. ಪೈರನ್ನು ಕೊಯ್ಲು ಮಾಡುವ ಮೊದಲು ಕೋಲ ನಡೆಯುತ್ತಿತ್ತು. ಆ ಮೂಲಕ ಗ್ರಾಮದವರೆಲ್ಲಾ ಒಟ್ಟಿಗೆ ಸೇರುತ್ತಿದ್ದರು. ಆದರೆ ಕಾಂಕ್ರೀಟೀಕರಣದ ನೆಪದಲ್ಲಿ ಗದ್ದೆಗಳು ಮಾಯವಾಗುತ್ತಿವೆ, ಜೊತೆಗೆ ಮಾನವ ಸಂಬಂಧಗಳು ಕೂಡಾ ಕರಗಿಹೋಗುತ್ತಿವೆ ಎಂದು ಲೇಖಕರು ಕಳವಳ ವ್ಯಕ್ತಪಡಿಸುತ್ತಾರೆ.

'ಬಳ್ಳುವಿನ ಕಾಡಿನಲ್ಲಿ ಲಾರಿಯ ಅಸ್ಪಷ್ಟ ಧ್ವನಿ' ಎಂಬ ಬರಹದಲ್ಲಿ ಬುಟ್ಟಿ ಹೆಣೆಯುವವನೊಬ್ಬ ಭಕ್ತಿಯಿಂದ ಕಾಣುತ್ತಿದ್ದ ಕಾಡು ದಿನ ಕಳೆದಂತೆ ಕಾಡುಗಳ್ಳರ ಅಟ್ಟಹಾಸಕ್ಕೆ ಬಲಿಯಾಗುತ್ತಿರುವ ಕುರಿತ ವ್ಯಥೆ ಈ ಅಂಕಣದ ಮೂಲಕ ಪ್ರಕಟವಾಗಿತ್ತು. ತನ್ನ ಬುಟ್ಟಿ ಹೆಣೆಯುವ ಕಸುಬಿಗೆ ಉಪಯುಕ್ತವಾಗುವ ಮೂಲ ವಸ್ತುಗಳನ್ನು ನೀಡುವ ಕಾಡು ಬರಿದಾಗುತ್ತಿರುವುದನ್ನು ಕಂಡು ಆ ಬುಟ್ಟಿ ಹೆಣೆಯುವಾತ ದುಃಖಿತನಾಗುತ್ತಾನೆ.

ಮರ, ಗಿಡ ಹಾಗೂ ಬಳ್ಳಿಗಳನ್ನು ಪೂಜ್ಯ ಭಾವನೆಯಿಂದ ಕಾಣುತ್ತಿದ್ದ ಆತ, ತನಗೆ ಅಗತ್ಯವಿರುವಷ್ಟು ಬಳ್ಳಿಯನ್ನು ಮಾತ್ರ ಕೊಂಡೊಯ್ಯುತ್ತಿದ್ದ. ಅದರಿಂದಲೇ ಬುಟ್ಟಿ ಹೆಣೆದು ಅದನ್ನು ಮಾರಿ ಬಂದ ದುಡ್ಡಿನಲ್ಲಿ ಜೀವನ ಸಾಗಿಸುತ್ತಿದ್ದ. ಆದರೆ ಕಾಡುಗಳ್ಳರು ದಟ್ಟ ಕಾಡಿನ ನಡುವಿನಿಂದಲೇ ಬೆಲೆಬಾಳುವ ದೊಡ್ಡ ದೊಡ್ಡ ಮರಗಳನ್ನು ಕಡಿದು ಸಾಗಿಸುತ್ತಾರೆ. ಬೆಟ್ಟಗಳನ್ನು ಸಿಡಿಸಿ ಪುಡಿ ಮಾಡುತ್ತಾರೆ. ಇದರಿಂದ ಕಾಡು ಹಿಂದಿನಂತೆ ಉಳಿಯದೇ, ಬರಿದಾಗುತ್ತಿದೆ. ಮತ್ತೆ ಗಿಡ ಮರಗಳು ಚಿಗುರಿದಾಗ ಕಾಡು ಕಳ್ಳರು, ಖದೀಮರು ಬಂದು ಬೇಕಾಬಿಟ್ಟಿ ಅರಣ್ಯ ಸಂಪತ್ತನ್ನು ನಾಶ ಮಾಡುತ್ತಾರೆ. ಇದರಿಂದಾಗಿ, ಕಾಡನ್ನೇ ನಂಬಿರುವವರಿಗೆ ದಾರಿ ಕಾಣದಾಗಿದೆ ಎಂಬ ಕಳವಳವನ್ನು ದೇರ್ಲರು ನಮ್ಮ ಮುಂದಿಡುತ್ತಾರೆ.

ಇದೇ ಅಂಕಣದ ಮೂಲಕ ದೇರ್ಲರು ರಾಷ್ಟ್ರಕವಿ ಕುವೆಂಪು ಅವರ ಕುರಿತು ಬರೆದಿದ್ದರು. ಕುವೆಂಪು ಅವರ ಆತ್ಮಕಥೆಯನ್ನು ಮತ್ತೆ ಮತ್ತೆ ಓದಿದಾಗ ಅದು ಹೊಸ ರೀತಿಯಲ್ಲಿ ತೆರೆದುಕೊಳ್ಳುತ್ತದೆ. ಒಂದೇ ಪುಸ್ತಕದ ಪ್ರತಿಯೊಂದು ಓದು ಕೂಡಾ ವಿಭಿನ್ನ ಅನುಭವಗಳನ್ನು ನೀಡುತ್ತದೆ ಎನ್ನುತ್ತಾರೆ ದೇರ್ಲರು.

'ಬೇಟೆಗಾರ ಕುವೆಂಪು ವೈಶಿಷ್ಟ್ಯ' ಎಂಬ ಬರಹದಲ್ಲಿ ಕುವೆಂಪು ಅವರ ಪರಿಸರದೊಂದಿಗಿನ ಒಡನಾಟವನ್ನು ವಿವರಿಸುತ್ತಾ, ಕುವೆಂಪು ಅವರ ಬೇಟೆ ಹವ್ಯಾಸ ಕೇವಲ ಹವ್ಯಾಸ ಮಾತ್ರವಾಗಿ ಉಳಿಯದೆ ನಿಸರ್ಗದೊಂದಿಗೆ ಸಂಬಂಧವನ್ನು ಬೆಸೆಯುವ ಮಾಧ್ಯಮವಾಗಿತ್ತು. ಬೇಟೆಯಾಡಲು ಹೋಗಿದ್ದಾಗಲೂ ಕೃತಿಗಳನ್ನು ಒಯ್ದು ಕಾಡಿನ ಮಧ್ಯದಲ್ಲಿ ಕುಳಿತುಕೊಂಡು ಓದುತ್ತಿದ್ದರು. ತಾನು ಯಾವುದೇ ಊರಿಗೆ ಹೋದರು ಕುಪ್ಪಳ್ಳಿ, ಅಲ್ಲಿನ ಪರಿಸರ ನನ್ನನ್ನು ಮತ್ತೆ ಕರೆಯುತ್ತಿತ್ತು ಅನ್ನುವ ಪುಟ್ಟಪ್ಪನವರ ಮಾತನ್ನು ಇಲ್ಲಿ ಲೇಖಕರು ನಮ್ಮ ಮುಂದಿಡುತ್ತಾರೆ.

'ಕೃಷಿಕರ ಹೊಟ್ಟೆಗೆ ಮಣ್ಣು ತುಂಬುವವರ ಬಗ್ಗೆ ಎಚ್ಚರ' ಎಂಬ ಬರಹದಲ್ಲಿ ಮುಗ್ಧ ಗ್ರಾಮೀಣ ಕೃಷಿಕರನ್ನು ಗಿಡಮಾರುವವರು, ಗೊಬ್ಬರ ಮಾರುವವರು ಹಾಗೂ ಬೆಳೆಗೆ ಅಂಟಿದ ರೋಗ ನಿವಾರಣೆಗೆ ಔಷಧ ಮಾರುವವರು ಇವರೆಲ್ಲ ಒಟ್ಟುಸೇರಿ ಹೇಗೆ ವಂಚಿಸುತ್ತಿದ್ದಾರೆ ಅನ್ನುವುದನ್ನು ದರ್ಶಿಸಿಕೊಡುತ್ತಾರೆ.

ಕೃಷಿಯ ಕುರಿತು ಅಲ್ಪ ಜ್ಞಾನವೂ ಇಲ್ಲದವರು ಬೆಳೆಗೆ ಅಂಟಿದ ರೋಗಗಳಿಗೆ ಮದ್ದು ನೀಡಲು ಬರುವುದು ವಿಪರ್ಯಾಸವೇ ಸರಿ. ಕೇವಲ ಕಮಿಷನ್‌ಗಾಗಿ ಕಳಪೆ ಗೊಬ್ಬರ ಹಾಗೂ ಔಷಧಗಳನ್ನು ರೈತರಿಗೆ ಮಾರಿ ಹಣ ವಸೂಲಿ ಮಾಡುವುದು ಎಷ್ಟು ಸರಿ ಎಂದು ದೇರ್ಲರು ತಮ್ಮ ಅಂಕಣ ಬರಹದ ಮೂಲಕ ಪ್ರಶ್ನಿಸುತ್ತಾರೆ.

'ಟಿವಿ ಇಲ್ಲದ ಮನೆ ಸಂಭ್ರಮ' ಎಂಬ ಬರಹದಲ್ಲಿ, ಟೆಲಿವಿಷನ್ ಮನೆಗಳಿಗೆ ಬಂದ ಮೇಲೆ ಕೃಷಿ ಚಟುವಟಿಕೆಗಳಿಂದ ದೂರ ಸರಿದ ಜನ ಪ್ರಕೃತಿಯೊಂದಿಗಿನ ತಮ್ಮ ಒಡನಾಟದಿಂದ ದೂರವಾಗುತ್ತಿರುವುದನ್ನು ಕಂಡ ದೇರ್ಲರು, ಅವನ್ನು ತಮ್ಮ 'ಅಜ್ಜನ ಜಗಲಿ' ಅಂಕಣದ ಮೂಲಕ ಉದಾಹರಣೆಗಳೊಂದಿಗೆ ನಮ್ಮ ಮುಂದಿಡುತ್ತಾರೆ.

ಟಿ.ವಿ. ಇಲ್ಲದಾಗ ಮನೆಯ ಮಕ್ಕಳು ಪರಿಸರದೆಡೆಗೆ ಹೆಚ್ಚಿನ ಒಲವು ತೋರುತ್ತಾರೆ. ವಿಧ ವಿಧವಾದ ಹಣ್ಣು ಹಂಪಲುಗಳು ಹಾಗೂ ಪಕ್ಷಿಗಳ ಕುರಿತು ಕುತೂಹಲಕಾರಿ ಪ್ರಶ್ನೆಗಳನ್ನು ಕೇಳುತ್ತಾರೆ. ಅವುಗಳ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳಲು ಪ್ರಯತ್ನಿಸುತ್ತಾರೆ. ಗಿಡ, ಮರ ಮತ್ತು ಬಳ್ಳಿಗಳ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಅದೇ ರೀತಿ ಮನೆಯ ಹೆಂಗಸರು ಕೂಡಾ ಹಸಿರು ಲೋಕಕ್ಕೆ ತೆರೆದುಕೊಳ್ಳುತ್ತಾರೆ ಎಂದು ದೇರ್ಲರು ತಮ್ಮ ಅನುಭವಗಳನ್ನು ಅಂಕಣ ಬರಹದ ಮೂಲಕ ಬಿಚ್ಚಿಡುತ್ತಾರೆ.

'ಅಜ್ಜನ ಜಗಲಿ'ಯಿಂದ ಹಲವಾರು ಅನುಭವಗಳು ಹಾಗೂ ಘಟನೆಗಳು ಓದುಗರನ್ನು ತಲುಪಿವೆ. ಈ ಅಂಕಣದ ಹಸಿರು ಬರಹಗಳು ಕೃಷಿ ಜಗತ್ತಿನ ಗ್ರಾಮೀಣ ಸೊಗಡನ್ನು ಬಿಂಬಿಸುತ್ತಿದ್ದವು. ಅಭಿವೃದ್ಧಿ ಎಂಬ ನೆಪದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣುತ್ತಿರುವ ಸಂದರ್ಭದಲ್ಲಿ ಈ ಅಂಕಣ ಬರಹ ಅತ್ಯಂತ ಪ್ರಸ್ತುತವೆನಿಸುತ್ತದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ವಿಜಯವಾಣಿಯ 'ಹಸಿರು-ಉಸಿರು' ಅಂಕಣ

2010ರಲ್ಲಿ ಡಾ. ನರೇಂದ್ರ ರೈ ದೇರ್ಲರು ವಿಜಯವಾಣಿಯ ಮುಖ್ಯ ಪುರವಣಿಗೆ 'ಹಸಿರು-ಉಸಿರು' ಅಂಕಣ ಬರೆಯಲು ಪ್ರಾರಂಭಿಸುತ್ತಾರೆ. ಸುಮಾರು 7 ವರ್ಷಗಳ ಕಾಲ ಈ ಅಂಕಣದಡಿಯಲ್ಲಿ ದೇರ್ಲರ ಬರಹಗಳು ಪ್ರಕಟವಾಗುತ್ತಿತ್ತು.

ಪರಿಸರ, ಕೃಷಿ, ಗ್ರಾಮೀಣ ಬದುಕು ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದ ಬರಹಗಳನ್ನು ಈ ಅಂಕಣ ಒಳಗೊಂಡಿತ್ತು. ರಾಜ್ಯಮಟ್ಟದಲ್ಲಿ ಪ್ರಕಟವಾಗುತ್ತಿದ್ದ 'ಹಸಿರು-ಉಸಿರು' ಅಂಕಣಕ್ಕೆ ಅಗಾಧ ಪ್ರಮಾಣದ ಓದುಗರಿದ್ದರು. ಹಲವು ಬರಹಗಳನ್ನು ಓದುಗರು ಮರುಮುದ್ರಿಸಿದ್ದರು, ಅದರ ಜೆರಾಕ್ಸ್ ಪ್ರತಿಗಳನ್ನು ಮಾಡಿಸಿ ಹಂಚಿದ್ದರು, ಸಾಮಾಜಿಕ ಜಾಲತಾಣಗಳಲ್ಲಿ, ಬ್ಲಾಗ್‌ಗಳಲ್ಲಿ ಹಂಚಿಕೊಂಡಿದ್ದರು.

ಕೃಷಿಯ ಮೂಲಕವೇ ಸಾಧನೆ ಮಾಡಿದ ಹಲವಾರು ಮಾದರಿ ಕೃಷಿಕರನ್ನು ಈ ಅಂಕಣದ ಮೂಲಕ ಪರಿಚಯಿಸಲಾಗಿದೆ. ರೈತರ ಹಲವಾರು ನೂತನ ಪ್ರಯೋಗಗಳ ಕುರಿತು ವಿವರಿಸಲಾಗಿದೆ. ಸರಕಾರದ ಹಲವಾರು ಇಲಾಖೆಗಳು, ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ಆಧುನಿಕ ಕೃಷಿ ಉಪಕರಣಗಳು ಕೃಷಿಕರಿಗೆ ನಿಜವಾಗಿಯೂ ಸಹಾಯಕವಾಗಿದೆಯೇ? ಎಂದು ದೇರ್ಲರು ಪ್ರಶ್ನಿಸುತ್ತಾರೆ.

ನರೇಂದ್ರ ರೈ ದೇರ್ಲರಿಗೆ ವಿಶಾಲವಾದ ಓದಿನ ಅನುಭವವಿದೆ. ಹಾಗಾಗಿ ತಾವು ಓದಿದ ಕೃತಿಗಳಿಂದ ಜೊತೆಗೆ ತಮ್ಮ ಅನುಭವದ ವಿಚಾರಗಳನ್ನು ಉದಾಹರಣೆಯಾಗಿ ಈ ಅಂಕಣದ ಹಲವಾರು ಬರಹಗಳಲ್ಲಿ ನೀಡಿದ್ದಾರೆ. ಎಲ್ಲಾ ಬರಹಗಳಲ್ಲಿ ಅವರ ಪರಿಸರಪರ ಹಾಗೂ ಕೃಷಿಪರ ಕಾಳಜಿಗಳು ಎದ್ದು ಕಾಣುತ್ತದೆ.

ಹಳ್ಳಿ ಹಾಗೂ ಪೇಟೆಯ ಜೀವನಕ್ಕಿರುವ ವ್ಯತ್ಯಾಸ, ಕೃಷಿಯನ್ನು ಆರಾಧಿಸಿ ಬೀಜವನ್ನೇ ಧ್ಯಾನಿಸುವ ರೈತರು, ಮಾಧ್ಯಮಗಳು ಹಾಗೂ ಪತ್ರಕರ್ತರು ಪರಿಸರದ ಸುದ್ದಿಗಳಿಗೆ ನೀಡುತ್ತಿರುವ ಮಹತ್ವ, ಕೃಷಿಯ ಸಂದರ್ಭದಲ್ಲಿ ಎದುರಾಗುವ ಸಮಸ್ಯೆ ನಿವಾರಣೆಗೆ ರೈತರು ತಾವಾಗಿಯೆ ಕಂಡುಕೊಂಡಿರುವ ಉಪಾಯಗಳು, ದೊಡ್ಡ ದೊಡ್ಡ ತೋಟಗಳನ್ನು ನೋಡಿಕೊಳ್ಳುತ್ತಾ ಪಾಲಿಸುತ್ತಿರುವ ಕೂಲಿಕೆಲಸದಾಳುಗಳು, ಸಾವಯವ ಕೃಷಿ ಉತ್ಪನ್ನಗಳ ಮಾರಾಟದಲ್ಲಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತ ಬರಹಗಳು ಈ ಅಂಕಣದ ಮೂಲಕ ಓದುಗರಿಗೆ ತಲುಪಿವೆ.

ಬೆಳೆಗೆ ಸಿಂಪಡಿಸುವ ರಾಸಾಯನಿಕಗಳಿಂದಾಗಿ ಉಂಟಾಗುವ ಏರುಪೇರು ಹಾಗೂ ಫಲವತ್ತತೆ ಕಳೆದುಕೊಳ್ಳುತ್ತಿರುವ ಮಣ್ಣು, ಕೃಷಿಯಲ್ಲಿ ಯಂತ್ರಗಳನ್ನು ಉಪಯೋಗಿಸುವುದರ ಕುರಿತು ಸಾಮಾನ್ಯ ರೈತರ ಪ್ರಶ್ನೆಗಳು, ಅಧಿಕವಾಗುತ್ತಿರುವ ಬರಗಾಲ ಹಾಗೂ ಕ್ಷೀಣಿಸುತ್ತಿರುವ ಮಳೆಗಾಲಕ್ಕೆ ಕಾರಣಗಳು, ಸಾವಯವ ಕೃಷಿಯನ್ನೇ ನಂಬಿಕೊಂಡು ಬೆಳೆ ಬೆಳೆಯುತ್ತಿರುವ ಹಾಗೂ ಅದರಿಂದಲೇ ಸಫಲತೆ ಕಂಡಿರುವ ರೈತರ ಉದಾಹರಣೆಗಳನ್ನು ಹಸಿರು-ಉಸಿರು ಅಂಕಣದ ನರೇಂದ್ರ ರೈ ದೇರ್ಲರು ತಿಳಿಸಿದ್ದಾರೆ.

ಕೃಷಿಗೆ ಕುತ್ತು ತರುತ್ತಿರುವ ಸರಕಾರದ ಯೋಜನೆಗಳು, ನೇತ್ರಾವತಿ ನದಿ ತಿರುವು ಯೋಜನೆಯಿಂದಾಗುವ ಸಮಸ್ಯೆಗಳು, ನೀರಿನ ಸಮಸ್ಯೆಗೆ ಪರಿಹಾರವಾಗಿ ನಡೆಯಬೇಕಾಗಿರುವ ಹೂಳೆತ್ತುವ ಕೆಲಸ, ಕೃಷಿ ಸಾಧಕರಿಗೆ ನೀಡಲಾಗುತ್ತಿರುವ ಪ್ರಶಸ್ತಿಗಳು, ಬೆಳೆಗೆ ರೋಗ ಬಾಧಿಸಿ ಸಂಕಷ್ಟಕ್ಕೀಡಾದ ರೈತರು, ಕೃಷಿ ಹಾಗೂ ಪರಿಸರಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಚಿತ್ರ ರಚಿಸಿರುವ ಕಲಾವಿದರು ಹಾಗೂ ಸಾಹಿತಿಗಳು, ಕೃಷಿಮೇಳಗಳಿಂದ ರೈತರಿಗಾಗುತ್ತಿರುವ ಅನುಕೂಲಗಳು, ಪೇಟೆಯ ಜೀವನವನ್ನು ಬಿಟ್ಟು ಹಳ್ಳಿಗೆ ಮರಳಿ ಕೃಷಿ ಮಾಡುತ್ತಿರುವವರ ಯಶೋಗಾಥೆಗಳು, ವಿದೇಶಗಳಿಗೂ ತಲುಪಿರುವ ಭಾರತೀಯ ಕೃಷಿ ಉತ್ಪನ್ನಗಳು, ಭಾರತೀಯ ಕೃಷಿ ಪದ್ಧತಿಯ ಕುರಿತು ವಿದೇಶಿಗರಿಗಿರುವ ಅಭಿಮಾನ, ವಿಶಿಷ್ಟ ರೀತಿಯ ಸಸ್ಯಸಂಪತ್ತನ್ನು ಪರಿಚಯಿಸುವ ಬರಹಗಳನ್ನು ಈ ಅಂಕಣದಲ್ಲಿ ದೇರ್ಲರು ಬರೆದಿದ್ದಾರೆ.

ಕೃಷಿ ಉತ್ಪನ್ನಗಳಿಗಿರುವ ಮಾರುಕಟ್ಟೆ ಹಾಗೂ ಬೇಡಿಕೆ, ಬೆಳೆಗಳನ್ನು ಗುರುತಿಸಲು, ಔಷಧಿ ಸೂಚಿಸಲು, ಹವಾಮಾನದ ಮಾಹಿತಿ ನೀಡಲು ಆವಿಷ್ಕಾರಗೊಂಡಿರುವ ನೂತನ ತಂತ್ರಜ್ಞಾನಗಳು, ಕೃಷಿಯ ಕುರಿತು ಆಸಕ್ತಿಯಿಲ್ಲದ ಕೃಷಿಕರ ಮಕ್ಕಳ ಕಥೆಗಳು, ಕಾಡು ನಾಶವಾಗುತ್ತಿರುವುದರಿಂದ ತೋಟ-ಗದ್ದೆಗಳಿಗೆ ನುಗ್ಗಿ ಬೆಳೆ ನಾಶ ಮಾಡುತ್ತಿರುವ ಕಾಡು ಪ್ರಾಣಿಗಳು, ನೀರಿನ ಮಹತ್ವವನ್ನು ತಿಳಿಯದೇ ಕಟ್ಟಡಗಳನ್ನು ಕಟ್ಟಲು ಕೆರೆಗಳನ್ನು ಮುಚ್ಚುತ್ತಿರುವುದು, ಕಸ ವಿಲೇವಾರಿಯನ್ನು ನಿರ್ಲಕ್ಷಿಸುತ್ತಿರುವ ಆಡಳಿತ ವರ್ಗ, ಪರಿಸರ ಸಂಬಂಧಿ ಬರಹಗಳು ಕೃಷಿಯ ಮೇಲೆ ಬೀರುತ್ತಿರುವ ಪರಿಣಾಮಗಳು, ಜನಪದ ಸಾಹಿತ್ಯದಲ್ಲಿ ಬಿಂಬಿತವಾಗಿರುವ ಕೃಷಿ ಸಂಸ್ಕೃತಿ, ಎಳವೆಯಲ್ಲಿಯೇ ಮಕ್ಕಳಲ್ಲಿ ಪರಿಸರ ಕಾಳಜಿ ಮೂಡಿಸಬೇಕಾಗಿರುವ ಅಗತ್ಯತೆ, ಕಾಡು ನಾಶ, ಕೃಷಿ ನಾಶದಿಂದ ಕ್ಷೀಣಿಸುತ್ತಿರುವ ಪಕ್ಷಿ ಸಂಕುಲಗಳ ಕುರಿತು ಕಾಳಜಿಯುತ ಬರಹಗಳನ್ನು ಈ ಅಂಕಣ ಒಳಗೊಂಡಿತ್ತು.

ಕಾಡಿನ ಬದಿಯಲ್ಲಿ, ಘಾಟಿಗಳಲ್ಲಿ ಹೂವು, ಹಣ್ಣು, ತರಕಾರಿಗಳನ್ನು ಮಾರುವವರ ಜೀವನಶೈಲಿ, ಕಾಡಿನ ಬದಿಯಲ್ಲೇ ವಾಸಿಸುವ ರೈತರಿಗೆ ಆಗಾಗ ಎದುರಾಗುವ ಕಾಡುಪ್ರಾಣಿಗಳು, ಜಾತಿ, ಲಿಂಗ, ವಯಸ್ಸಿನ ಹಂಗಿಲ್ಲದೇ ಎಲ್ಲರೂ ಗದ್ದೆಯ ಕೆಸರಿಗೆ ಕಾಲಿಟ್ಟು ಮಾಡುವ ಬೇಸಾಯ ಚಟುವಟಿಕೆಗಳು, ಕೃಷಿಯಲ್ಲಿ ಅಧಿಕವಾಗುತ್ತಿರುವ ರಾಸಾಯನಿಕ ಗೊಬ್ಬರ, ಕೀಟನಾಶಕಗಳ ಸಿಂಪಡಣೆ ಹಾಗೂ ವಿಷಸಿಂಚನ, ವಿದ್ಯಾಭ್ಯಾಸ ಕಡಿಮೆಯಿದ್ದರೂ ಅಪಾರ ಅನುಭವಗಳನ್ನು ಹೊಂದಿರುವ ಕೃಷಿಕನ ಅನುಭವದ ಮಾತುಗಳನ್ನು ಈ ಅಂಕಣದ ಮೂಲಕ ನರೇಂದ್ರ ರೈ ದೇರ್ಲರು ತಿಳಿಸಿದ್ದಾರೆ.

ಸಾಲದ ಸುಳಿಯಲ್ಲಿ ಸಿಲುಕಿ ಅದನ್ನು ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವ ರೈತರ ಕಥೆಗಳು, ನೈಸರ್ಗಿಕ ಪ್ರಕ್ರಿಯೆಯಾದ ಆಹಾರ ಸರಪಳಿಯಿಂದ ರೈತನಿಗಾಗುತ್ತಿರುವ ಉಪಕಾರ, ಜಾಗತೀಕರಣದಿಂದಾಗಿ ಕೃಷಿ ಪ್ರಕ್ರಿಯೆ ಹಾಗೂ ಕೃಷಿ ಉತ್ಪನ್ನಗಳ ಮಾರಾಟದಲ್ಲಾದ ಬದಲಾವಣೆಗಳು, ಅಂತರರಾಷ್ಟ್ರೀಯ ಮಟ್ಟದಲ್ಲಿರುವ ಪರಿಸರ ಸಮಸ್ಯೆಗಳು, ಕಲಬೆರಕೆ ಹಾಗೂ ವಿಷಾಂಶಗಳಿಂದ ತನ್ನ ಸಾರವನ್ನು ಕಳೆದುಕೊಳ್ಳುತ್ತಿರುವ ಹಣ್ಣು, ತರಕಾರಿ ಮತ್ತು ಧಾನ್ಯಗಳು, ಜಾಗ ಬದಲಾದಂತೆ ಬದಲಾಗುವ ಕೃಷಿ ಬೆಳೆಗಳು, ನಿತ್ಯ ಹಸಿರಿನಿಂದ ಕೂಡಿರುವ ಮಲೆನಾಡು ಪ್ರದೇಶದ ಸಮಸ್ಯೆಗಳನ್ನು ಸವಿವರವಾಗಿ ತಿಳಿಸಿದ್ದಾರೆ.

'ಯುನಿವರ್ಸಿಟಿ ಗೇಟು ಮತ್ತು ಮಂದಣ್ಣನ ಕೆಸರು ಜ್ಞಾನ' ಎಂಬ ಬರಹದಲ್ಲಿ ನಿಜವಾದ ಅರ್ಥದಲ್ಲಿ ಮಣ್ಣಿನ ಮಕ್ಕಳಾದ ರೈತರು ಹಾಗೂ ಇನ್ನೊಂದೆಡೆ ಕೃಷಿ ವಿಶ್ವವಿದ್ಯಾನಿಲಯಗಳು, ಕೃಷಿ ಸಂಶೋಧನಾ ಕೇಂದ್ರಗಳ ವೈರುಧ್ಯತೆಯನ್ನು ದೇರ್ಲರು ವಿವರಿಸಿದ್ದಾರೆ. 'ನಗರಕ್ಕೆ ಬರುತ್ತಿರುವ ಕಾಡು ಖಜಾನೆಯ ಕೀಲಿಕೈ' ಎಂಬ ಬರಹದಲ್ಲಿ ನಕ್ಸಲೇಟ್ ಸಮಸ್ಯೆಯಿಂದ ಹಾಗೂ ಆಧುನೀಕರಣವನ್ನು ಬಯಸಿ ಕಾಡಿನ ಮೂಲ ನಿವಾಸಿಗಳು ನಗರ ಸೇರುತ್ತಿರುವ ಕುರಿತು ದೇರ್ಲರು ಬರೆದಿದ್ದಾರೆ.

'ಹೂವು ಬಿಟ್ಟು ಸತ್ತ ಬಿದಿರು ಮತ್ತು ಹೋಚುವ ಕಾಡ್ಗಿಚ್ಚು' ಎಂಬ ಬರಹದಲ್ಲಿ ಕಾಡ್ಗಿಚ್ಚು ಸೃಷ್ಟಿಸುತ್ತಿರುವ ಅನಾಹುತಗಳನ್ನು ದೇರ್ಲರು ವಿವರಿಸುತ್ತಾರೆ. ಮನುಷ್ಯನೆ ಕಾಡ್ಗಿಚ್ಚನ್ನು ಸೃಷ್ಟಿಸಿ ಕಾಡು ಪ್ರಾಣಿಗಳ ಓಟ ಹಾಗೂ ಒಣ ಹುಲ್ಲಿನ ಮೇಲೆ ದೋಷಾರೋಪಣೆ ಮಾಡುತ್ತಾನೆ ಎಂದು ಹೇಳುತ್ತಾರೆ ದೇರ್ಲರು. 'ಕಾನ್‌ಕೋಟೆಯ ಕೊಲ್ಲಾರ' ಎಂಬ ಬರಹದಲ್ಲಿ ಕಾಡಿನ ಮೂಲ ನಿವಾಸಿಗಳು ಯಾವ ರೀತಿ ಕಾಡುತ್ಪತ್ತಿಗಳನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿದ್ದಾರೆ, ಕಾಡನ್ನೇ ನಂಬಿಕೊಂಡಿರುವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅವರ ಸಂಸ್ಕೃತಿ ಹೇಗೆ ಭಿನ್ನವಾಗಿದೆ ಎಂದು ಬರಹದ ಮೂಲಕ ದೇರ್ಲರು ತಿಳಿಸುತ್ತಾರೆ.

'ಕಾಡು-ಕಡಲ ಒಡಲ ಪ್ರಶ್ನೆಗಳು' ಎಂಬ ಬರಹದಲ್ಲಿ ನರೇಂದ್ರ ರೈ ದೇರ್ಲರು ಕರಾವಳಿಯ ಭೂವಿನ್ಯಾಸದ ಕುರಿತು ಬರೆದಿದ್ದಾರೆ. ಇಲ್ಲಿನ ಪರಿಸರದ ಮೇಲೆ ನಡೆಯುತ್ತಿರುವ ಅನಾಚಾರಗಳು ಹಾಗೂ ಅದರಿಂದ ಬರಡಾಗುತ್ತಿರುವ ಕಾಡು ಮತ್ತು ಮಲೀನವಾಗುತ್ತಿರುವ ಜಲಮೂಲಗಳ ಕುರಿತು ವಿವರಿಸುತ್ತಾರೆ. 'ನಿಷೇಧಿಸಬೇಕಿದೆ ರಾಜಕಾರಣಿಗಳ ಸುಳ್ಳುಗಳನ್ನು' ಎಂಬ ಬರಹದಲ್ಲಿ ಅವೈಜ್ಞಾನಿಕ ಸರಕಾರಿ ಯೋಜನೆಗಳ ಕುರಿತು ರಾಜಕಾರಣಿಗಳು ಹೇಗೆ ಜನರ ದಾರಿತಪ್ಪಿಸುತ್ತಿದ್ದಾರೆ ಎಂದು ದೇರ್ಲರು ವಿವರಿಸಿದ್ದಾರೆ.

'ಎಲ್ಲಿ ಹೋದವು ಉಳುವೆಯ ಹಕ್ಕಿಗಳು' ಎಂಬ ಬರಹದಲ್ಲಿ ಈ ಹಿಂದೆ ಪಕ್ಷಿಧಾಮಕ್ಕೆ ಭೇಟಿ ನೀಡುತ್ತಿದ್ದ ಪಕ್ಷಿಗಳು ಇತ್ತೀಚೆಗೆ ವಿನಾಶದಂಚಿನಲ್ಲಿವೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ. 'ಕಾಡು ಕಾಯುವ ಕಾಡುನಂಬಿಕೆಗಳು!' ಎಂಬ ಬರಹದಲ್ಲಿ ಕಾಡಿನ ಮೂಲನಿವಾಸಿಗಳು ಹಾಗೂ ಗ್ರಾಮೀಣ ಜನರ ನಂಬಿಕೆಗಳು ಯಾವ ರೀತಿ ಕಾಡಿನಲ್ಲಿ ಅವ್ಯವಹಾರಗಳು ನಡೆಯದಂತೆ, ಕಾಡಿಗೆ ಸಮಸ್ಯೆಯಾಗದಂತೆ ತಡೆಯುತ್ತವೆ ಎಂದು ತಿಳಿಸಿದ್ದಾರೆ. 'ಉಸಿರೊಳಗೆ ವಿಷ ತುಂಬುವ ಪಟಾಕಿ' ಎಂಬ ಬರಹದಲ್ಲಿ ಪಟಾಕಿ ಸಿಡಿಸುವುದರಿಂದ ಅದರಲ್ಲಿರುವ ವಿಷಾನಿಲ ವಾಯುಮಾಲಿನ್ಯ ಹಾಗೂ ಮಾನವನ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳ ಕುರಿತು ಬರೆದಿದ್ದಾರೆ.

'ಈ ಜೀವ ಮಾತ್ರ ನಮ್ಮದು, ಜೀವನವಲ್ಲ!' ಎಂಬ ಬರಹದಲ್ಲಿ ಕೃಷಿಯಲ್ಲಿ ತೊಡಗಿಕೊಂಡಿರುವ ತಾಯಿಯೊಬ್ಬಳು ತನ್ನ ಮಗಳು ಹಸಿರು-ಕೆಸರಿನಿಂದ ದೂರ ಉಳಿಯಬೇಕೆಂದು ಇಚ್ಛಿಸುವ ಕುರಿತು ಬರೆಯುತ್ತಾರೆ. 'ಅನ್ನ ತಿನ್ನುವವರೆಲ್ಲ ಭೂಮಿಗೆ ಬರಲಿ' ಎಂಬ ಬರಹದಲ್ಲಿ ರೈತರೇ ನೇರವಾಗಿ ತಮ್ಮ ಗ್ರಾಹಕರನ್ನು ಭೇಟಿ ಮಾಡಿ ತಮ್ಮ ಕೃಷಿ ಉತ್ಪನ್ನಗಳನ್ನು, ಹಣ್ಣು ತರಕಾರಿಗಳನ್ನು ಮಾರಾಟ ಮಾಡುವ ವಿಧಾನವನ್ನು ಉತ್ತೇಜಿಸುತ್ತಾರೆ. ಹಳ್ಳಿಯ ಸಾವಯವ ಕೃಷಿಕ ಹಾಗೂ ಮಹಾನಗರದ ಬಳಕೆದಾರರ ನಡುವೆ ಶುದ್ಧ ಆಹಾರದ ಸೇತುಬಂಧವನ್ನು ನಿರ್ಮಿಸುವ ಪ್ರಯತ್ನಗಳನ್ನು ದೇರ್ಲರು ಈ ಬರಹದ ಮೂಲಕ ಬೆಂಬಲಿಸುತ್ತಾರೆ.

'ಹಸಿರು ಧ್ಯಾನದ ಅವಸರ' ಎಂಬ ಬರಹದಲ್ಲಿ ಅರಣ್ಯ ಇಲಾಖೆ ಹಾಗೂ ರೈತರ ನಡುವೆ ನಿರಂತರವಾಗಿ ನಡೆಯುತ್ತಿರುವ ತಿಕ್ಕಾಟ ಹಾಗೂ ರೈತರು ಕಾಡಿಗೆ ತೆರಳಲು ಹೇರಿರುವ ನಿರ್ಬಂಧದ ಬಗ್ಗೆ ದೇರ್ಲರು ಬರೆಯುತ್ತಾರೆ. 'ಕಾಂಕ್ರೀಟ್ ಕಾಡಿನ ಪುಟ್ಟ ಕಿಟಕಿ ಮತ್ತು ವನವಾಸ' ಎಂಬ ಬರಹದಲ್ಲಿ ರೈತರ ಸಮಸ್ಯೆಗಳು ನೂರಾರಿವೆ. ಇಂಥ ನೆಲೆಯಿಂದ ಪತ್ರಕರ್ತರು, ಬರಹಗಾರರು ಸೃಷ್ಟಿಯಾಗಬೇಕು ಎನ್ನುತ್ತಾರೆ ನರೇಂದ್ರ ರೈ ದೇರ್ಲ.

## ಪರಿಸರ ಹೋರಾಟಗಳನ್ನು ಬೆಂಬಲಿಸುವ ಬರಹಗಾರರಾಗಿ

ಡಾ. ನರೇಂದ್ರ ರೈ ದೇರ್ಲರು ಯಾವತ್ತೂ ಪರಿಸರ ಪರ ನಿಲುವನ್ನು ಹೊಂದಿದವರು. ಅಭಿವೃದ್ಧಿ ಎಂಬ ನೆಪದಲ್ಲಿ ಪರಿಸರಕ್ಕೆ ಹಾನಿಯಾಗುವ ಸಂದರ್ಭ ಬಂದಾಗ ಅದನ್ನು ತಮ್ಮ ಬರಹಗಳ ಮೂಲಕವೇ ಪ್ರಶ್ನಿಸಿದವರು. ಪರಿಸರ ವಿರೋಧಿ ಹಾಗೂ ಅವೈಜ್ಞಾನಿಕ ಯೋಜನೆಗಳನ್ನು ಬರಹಗಳ ಮೂಲಕವೇ ವಿರೋಧಿಸಿದವರು. ಕೃಷಿಕರಿಗೆ ಅನ್ಯಾಯವಾದಾಗ ಅದರ ವಿರುದ್ಧ ದನಿ ಎತ್ತಿದವರು.

ಪರಿಸರ ಹೋರಾಟಗಳು ನಡೆಯುತ್ತಿದ್ದಾಗ ದೇರ್ಲರು ತಮ್ಮ ಬರಹಗಳ ಮೂಲಕವೇ ಆ ಹೋರಾಟವನ್ನು ಬೆಂಬಲಿಸುತ್ತಾರೆ. ವಿಷಯದ ಕುರಿತು ಸ್ಥೂಲವಾಗಿ ತಿಳಿದುಕೊಂಡು ಅದನ್ನು ಓದುಗರಿಗೂ ದಾಟಿಸುತ್ತಾರೆ. ಪರಿಸರಕ್ಕೆ ಯಾವ ರೀತಿಯ ಸಮಸ್ಯೆಯಾಗುತ್ತಿದೆ ? ಪರಿಸರ ಹೋರಾಟ ಏಕೆ ನಡೆಯುತ್ತಿದೆ ? ಅವೈಜ್ಞಾನಿಕ ಯೋಜನೆಗಳು ಜಾರಿಯಾದರೆ ಅದು ಪರಿಸರದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂಬೆಲ್ಲಾ ವಿಷಯಗಳನ್ನು ಓದುಗರಿಗೆ ತಿಳಿಸುತ್ತಾರೆ. ದೇರ್ಲರ ಪರಿಸರ ಹೋರಾಟಗಳನ್ನು ಬೆಂಬಲಿಸುವ ಬರಹಗಳು ಹಲವಾರು ಪತ್ರಿಕೆಗಳಲ್ಲಿ ಬೆಳಕು ಕಂಡದ್ದಲ್ಲದೆ ಕೃತಿ ರೂಪದಲ್ಲೂ ಪ್ರಕಟಗೊಂಡಿವೆ.

ನೇತ್ರಾವತಿ ನದಿ ತಿರುವು ಯೋಜನೆ ಕರಾವಳಿಗೆ ಹೇಗೆ ಮಾರಕವಾಗಬಹುದು, ಇದರಿಂದ ಪರಿಸರಕ್ಕೆ ಯಾವ ರೀತಿಯ ಸಮಸ್ಯೆಗಳಾಗುತ್ತವೆ ಎಂಬೆಲ್ಲಾ ವಿಷಯಗಳನ್ನು ಕ್ರೋಢೀಕರಿಸಿ ಯೋಜನೆಯನ್ನು ವಿರೋಧಿಸುವಂತಹ ಹಲವಾರು ಬರಹಗಳನ್ನು ಬರೆದಿದ್ದಾರೆ.

ತರಂಗ ವಾರಪತ್ರಿಕೆಯಲ್ಲಿ ಪ್ರಕಟವಾದ 'ಎರಡು ದಡಗಳ ನಡುವೆ' ಎಂಬ ಬರಹದಲ್ಲಿ ನೇತ್ರಾವತಿ ನದಿ ತಿರುವು ಯೋಜನೆಯ ಸ್ಪಷ್ಟ ಚಿತ್ರಣವನ್ನು ದೇರ್ಲರು ನೀಡಿದ್ದಾರೆ. ಯೋಜನೆಯ ಕಾಮಗಾರಿ ಹಾಗೂ ಕಾರ್ಯಾನುಷ್ಠಾನದಿಂದ ಅದು ಪರಿಸರದ ಮೇಲೆ ಬೀರುವ ಘೋರ ಪರಿಣಾಮವನ್ನು ತಿಳಿಸಿದ್ದಾರೆ. ನದಿ ತಿರುವು ಯೋಜನೆಯ ಕುರಿತು ತಜ್ಞರ ಅಭಿಪ್ರಾಯಗಳನ್ನು ಉಲ್ಲೇಖಿಸಿದ್ದಾರೆ.

ಕರಾವಳಿಯ ಜೀವನದಿ ನೇತ್ರಾವತಿ ಇಲ್ಲಿನ ಜನರ ಕುಡಿಯುವ ನೀರಾಗಿ, ಕೃಷಿ ಹಾಗೂ ಮೀನುಗಾರಿಕೆಯಲ್ಲಿ ನೇರವಾಗಿ, ಅಂತರ್ಜಲ ಮಟ್ಟವನ್ನು ವೃದ್ಧಿಸಿ, ಹಸಿರಿಗೆ ಉಸಿರನ್ನು ತುಂಬುತ್ತಿದೆ; ಜೊತೆಗೆ ನದಿ ದಡದಲ್ಲಿಯೇ ಸಂಸ್ಕೃತಿಯೂ ಬೆಳೆದು ನಿಂತಿದೆ. ಇಂತಹ ನದಿಯನ್ನು ವಿರುದ್ಧ ದಿಕ್ಕಿಗೆ ತಿರುಗಿಸುವ ಅವೈಜ್ಞಾನಿಕ ಯೋಜನೆ ನದಿಯ ಅಸ್ತಿತ್ವಕ್ಕೇ ಮಾರಕ ಎಂದು ದೇರ್ಲರು ಹೇಳಿದ್ದಾರೆ.

ಯೋಜನೆಗೆ ತಗಲುವ ಖರ್ಚು ವೆಚ್ಚಗಳು ಹಾಗೂ ಕಾರ್ಯ ವಿಧಾನವನ್ನು ಈ ಬರಹದ ಮೂಲಕ ಚರ್ಚಿಸುವ ದೇರ್ಲರು, ಕಾಮಗಾರಿಗಾಗಿ ನಾಶವಾಗುವ ಅನೇಕ ಜೀವಸಂಪತ್ತು ಹಾಗೂ ಕಾಡುವಾಸಿಗಳಿಗಾಗುವ ಸಮಸ್ಯೆಗಳ ಕುರಿತು ಬರೆಯುತ್ತಾರೆ. ನದಿ ತಿರುಗಿಸುವುದರಿಂದ ಜನರು ಅನುಭವಿಸಿದ ಸಮಸ್ಯೆಗಳನ್ನು ಉದಾಹರಣೆಯೊಂದಿಗೆ ತಿಳಿಸಿದ್ದಾರೆ, ಇದರ ಜೊತೆಗೆ ಇಂತಹ ಯೋಜನೆಗಳ ಕುರಿತು ಮತ್ತು ಜಲಸಂರಕ್ಷಣೆಯ ಕುರಿತು ಪರಿಸರ ತಜ್ಞರ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ, ಯೋಜನೆಗಳ ವಿರುದ್ಧ ಹೋರಾಟ ನಡೆಯಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

'ಇನ್ನೂ ತಿರುಗದಿರುವ ನದಿಯೊಂದರ ತುದಿಮನಸ್ಸಿಗೆ...' ಎಂಬ ಬರಹದಲ್ಲಿ ದೇರ್ಲರು ಕರಾವಳಿ ಹಾಗೂ ಬರಪೀಡಿತ ಜಿಲ್ಲೆಗಳ ಜನರನ್ನು ಮುಖಾಮುಖಿಯಾಗಿಸಿದ್ದಾರೆ. ನೇತ್ರಾವತಿ ನದಿಯನ್ನು ತಿರುಗಿಸಿದರೆ ಕರಾವಳಿ ಬರಡಾಗುತ್ತದೆ ಎಂಬ ಆತಂಕ ಒಂದೆಡೆಯಾದರೆ, ಬಯಲುಸೀಮೆಗೆ ನೀರು ಬರುತ್ತದೆ ಎಂಬ ಆಶಾವಾದ ಇನ್ನೊಂದೆಡೆ. ಇವುಗಳ ನಡುವೆ ಈ ಅವೈಜ್ಞಾನಿಕ ಯೋಜನೆಯ ಮೂಲಕ ಸರಕಾರದ ಉದ್ದೇಶವೇನು ಎಂದು ದೇರ್ಲರು ಪ್ರಶ್ನಿಸುತ್ತಾರೆ.

ಅಮ್ಮನ ಕೈಯಲ್ಲಿ ಒಂದು ಲೋಟ ಹಾಲಿದೆ. ಒಂದೆಡೆ ಕೋಲಾರದ ಮಗು, ಇನ್ನೊಂದೆಡೆ ಮಂಗಳೂರಿನ ಮಗು ಎರಡೂ ಕಡೆಯಿಂದ ಲೋಟವನ್ನು ಎಳೆಯಲಾರಂಭಿಸಿದ್ದಾರೆ. ಲೋಟ ಬಿದ್ದು ಹಾಲು ಚೆಲ್ಲಿ, ಲೋಟವೂ ಪುಡಿಯಾದ್ರೆ ಏನು ಗತಿ ಎಂಬ ಪರಿಸರ ಹೋರಾಟಗಾರ ದಿನೇಶ ಹೊಳ್ಳ ಅವರ ರೂಪಕವನ್ನು ಈ ಬರಹದಲ್ಲಿ ಬಳಸಿದ್ದಾರೆ.

ಯೋಜನೆಯ ಕುರಿತು ಕರಾವಳಿಯ ಜನರ ನಿರ್ಲಕ್ಷ್ಯ ಮನೋಭಾವನೆಯ ಬಗ್ಗೆ ಈ ಬರಹದ ಮೂಲಕ ದೇರ್ಲರು ಕಳವಳ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವ್ಯಕ್ತಪಡಿಸಿದ್ದಾರೆ. ಯೋಜನೆಯಿಂದ ಉಂಟಾಗುವ ಅರಣ್ಯನಾಶದ ಕುರಿತು ಎಚ್ಚರಿಕೆ ನೀಡಿದ್ದಾರೆ. ಇನ್ನೊಂದೆಡೆ ಬಯಲುಸೀಮೆಯಲ್ಲಿ ಕೆರೆಗಳಲ್ಲಿ ಹೂಳು ತುಂಬಿರುವುದರಿಂದ ನೀರಿನ ಅಭಾವವಿದೆ, ಕೆರೆಗಳ ಹೂಳೆತ್ತಿದರೆ ನೀರಿನ ಸಮಸ್ಯೆ ಬಗೆಹರಿಯುತ್ತದೆ, ಆದರೆ ರಾಜಕಾರಣಿಗಳು ನದಿ ತಿರುವು ಮಾಡುವುದರಲ್ಲೇ ಹಠ ಹಿಡಿದಿದ್ದಾರೆ ಎಂದು ಪರಿಸ್ಥಿತಿಯನ್ನು ಓದುಗರಿಗೆ ಅರ್ಥೈಸಿಕೊಳ್ಳಲು ಯತ್ನಿಸಿದ್ದಾರೆ.

'ಹರಿಯುವ ನೀರು ಹರಿಯದ ಮನಸ್ಸು' ಎಂಬ ಬರಹದಲ್ಲಿ ನರೇಂದ್ರ ರೈ ದೇರ್ಲರು ನೇತ್ರಾವತಿ ನದಿ ತಿರುವು ಯೋಜನೆಯಿಂದ ಕರಾವಳಿ ಹಾಗೂ ಬಯಲುಸೀಮೆಯ ಜನರಿಗಾಗುವ ಸಮಸ್ಯೆಗಳು ಮತ್ತು ಯೋಜನೆಯ ಕುರಿತು ಇರುವ ಆತಂಕವನ್ನು ವಿವರಿಸಿದ್ದಾರೆ. ನದಿ ಹರಿಯುತ್ತಿದ್ದಂತೆ ಅದರೊಂದಿಗೆ ನಾಗರೀಕತೆಯೂ ಬೆಳೆಯುತ್ತದೆ. ಅದರೆ ನದಿಯೆ ಇಲ್ಲವಾದರೆ ನಾಗರೀಕತೆ ಏನಾಗಬಹುದು ಎಂದು ಯೋಚಿಸಿ ಪರಿಸರವಾದಿಗಳು ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ಈ ಯೋಜನೆಯಿಂದ ಪಶ್ಚಿಮ ಘಟ್ಟಕ್ಕಾಗುವ ಸಮಸ್ಯೆಗಳೇನು, ಯೋಜನೆಯಿಂದ ಯಾವೆಲ್ಲಾ ರೀತಿಯ ವಿಕೋಪಗಳು ಸಂಭವಿಸಬಹುದು ಎಂದು ಯೋಚಿಸಿ ಪರಿಸರ ಹೋರಾಟಗಾರರೊಡನೆ ಜನರೂ ಕೈ ಜೋಡಿಸಬೇಕಾಗಿದೆ ಎಂದು ದೇರ್ಲರು ಅಭಿಪ್ರಾಯಪಟ್ಟಿದ್ದಾರೆ.

'ಊರು ಜೋಡಿಸಿದ ನದಿ' ಎಂಬ ಬರಹದಲ್ಲಿ ಎತ್ತಿನಹೊಳೆ ಯೋಜನೆ ಅಥವಾ ನೇತ್ರಾವತಿ ನದಿ ತಿರುವು ಯೋಜನೆಯ ವಿರುದ್ಧ ಕರಾವಳಿಯ ಜನ ಒಂದಾಗಿ ನೀರಿಗಾಗಿ ಬಂದ್ ಮಾಡಿರುವುದರ ಕುರಿತು ನರೇಂದ್ರ ರೈ ದೇರ್ಲರು ಬರೆಯುತ್ತಾರೆ. ಮತೀಯ ಕಾರಣಗಳಿಗಾಗಿ ಧರಣಿ, ಮುಷ್ಕರಗಳನ್ನು ನಡೆಸುವ ಜನ ಜಾತಿ, ಮತ, ಧರ್ಮವನ್ನು ಮರೆತು ನದಿಗಾಗಿ ಬಂದ್ ಮಾಡಿರುವುದು ಸರಕಾರಕ್ಕೆ ಸ್ಪಷ್ಟ ಸಂದೇಶ ನೀಡಿದಂತಾಗಿದೆ ಎಂದು ಹೇಳುತ್ತಾರೆ.

ನದಿಗೆ ಯಾವುದೇ ಜಾತಿಯಿಲ್ಲ. ಅದು ಎಲ್ಲಾ ಧರ್ಮದ, ಎಲ್ಲಾ ಜಾತಿಯ, ಎಲ್ಲಾ ಪಂಗಡದವರಿಗೂ ಸೇರಿರುವಂತಹದ್ದು. ನೀರಿಗಾಗಿ ಕರಾವಳಿ ಜಾತ್ಯಾತೀತವಾದದ್ದು ನೀರೇ ನೀಡಿದ ಅತಿ ದೊಡ್ಡ ಕೊಡುಗೆ. ಹಲವು ವರ್ಷಗಳ ಹಿಂದೆಯಾಗಿದ್ದರೆ, ಬಯಲುಸೀಮೆಯ, ಕೋಲಾರದ ಹಾಗೂ ಚಿಕ್ಕಬಳ್ಳಾಪುರದ ಜನ ನೀರಿನ ಸಮಸ್ಯೆ ಎದುರಾದರೆ ಅವರೇ ನೇತ್ರಾವತಿಯ ಬಳಿಗೆ ವಲಸೆ ಬರುತ್ತಿದ್ದರೇನೋ. ಆದರೆ ಈಗ ವಿಜ್ಞಾನದ ಅಭಿವೃದ್ಧಿಯಿಂದ ನದಿಯನ್ನೇ ನೀರಿಲ್ಲದಲ್ಲಿಗೆ ಕೊಂಡೊಯ್ಯುವ ಪರಿಸ್ಥಿತಿ ಎದುರಾಗಿದೆ ಎನ್ನುತ್ತಾರೆ ದೇರ್ಲರು.

'ಇನ್ನೂ ನಿಲ್ಲದ ನೀರಾ ಚಳುವಳಿ' ಎಂಬ ಬರಹದಲ್ಲಿ ಸ್ವದೇಶೀ ಪಾನೀಯ ನೀರಾ ಹಾಗೂ ಅದನ್ನು ತಯಾರಿಸುವವರಿಗಾಗುತ್ತಿರುವ ಸಮಸ್ಯೆಗಳು ಮತ್ತು ನೀರಾಕ್ಕಾಗಿ ನಡೆಯುತ್ತಿರುವ ಚಳುವಳಿಯ ಕುರಿತು ನರೇಂದ್ರ ರೈ ದೇರ್ಲರು ಬೆಳಕು ಚೆಲ್ಲುತ್ತಾರೆ.

ತೆಂಗಿನ ಹೊಂಬಾಳೆಯಿಂದ ಜಿನುಗುವ ಸ್ವಾದಿಷ್ಟ ರಸವೇ ನೀರಾ. ಇದನ್ನು ಗಾಂಧೀಜಿಯವರು ಕೂಡಾ ಸ್ವದೇಶೀ ಪಾನೀಯ ಎಂಬ ಪರಿಕಲ್ಪನೆಯಲ್ಲಿ ಗುರುತಿಸಿದ್ದರು. ನೀರಾ ಕೆಲವೊಂದು ರೋಗ ನಿವಾರಣೆಯಲ್ಲೂ ಸಹಾಯಕ; ಜೊತೆಗೆ ಉಪ್ಪಿನಕಾಯಿ ಮತ್ತು ಬೆಲ್ಲ ತಯಾರಿಕೆಯಲ್ಲೂ ಉಪಯೋಗವಾಗುತ್ತದೆ. ನೀರಾ ತೆಗೆಯುವುದರಿಂದ ನುಸಿಪೀಡೆಯನ್ನು ಕೂಡಾ ತಗ್ಗಿಸಬಹುದು. ಇಷ್ಟೆಲ್ಲಾ ಉಪಯೋಗಗಳಿದ್ದರೂ ನೀರಾ ಇಳಿಸಲು ಸರಕಾರ ಯಾಕೆ ನಿರ್ಬಂಧ ಹೇರುತ್ತಿದೆ ಎಂದು ದೇರ್ಲರು ಪ್ರಶ್ನಿಸುತ್ತಾರೆ.

ನೀರಾ ಇಳಿಸಿ ಅದನ್ನು ಮಾರಾಟ ಮಾಡುತ್ತಿದ್ದ ರೈತರಿಗೆ ಸರಕಾರದ ನೀತಿಯಿಂದ ಆದಾಯ ತಪ್ಪಿಹೋಗಿದೆ. ಯಾರದೋ ಲಾಬಿಯಿಂದಾಗಿ ಸರಕಾರ ನೀರಾಕ್ಕೆ ಅನುಮತಿ ನೀಡದೇ ಇರುವ ಕಾರಣ ರೈತರು ಚಳುವಳಿಯನ್ನು, ಹೋರಾಟವನ್ನು ಆರಂಭಿಸಿದ್ದಾರೆ. ನೀರಾದಿಂದಾಗಿ ಹಲವರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂಬುವುದು ಲೇಖಕರ ಅಭಿಪ್ರಾಯ.

UGC CARE

## ಉಪಸಂಹಾರ

ಡಾ. ನರೇಂದ್ರ ರೈ ದೇರ್ಲ ಅವರು ಗ್ರಾಮೀಣ ಪರಿಸರದಲ್ಲೇ ಬೆಳೆದವರು. ಕೃಷಿ ಚಟುವಟಿಕೆಗಳನ್ನು ಅತ್ಯಂತ ಹತ್ತಿರದಿಂದ ಕಂಡವರು. ಹಾಗಾಗಿ ಪರಿಸರ, ಕೃಷಿ ಮತ್ತು ಗ್ರಾಮೀಣ ಬದುಕಿನ ಕುರಿತು ಸೂಕ್ಷ್ಮವಾಗಿ ತಿಳಿದವರು. ಆದ್ದರಿಂದಲೇ ಗಿಡ–ಮರಗಳು, ಕಾನನ ಹಾಗೂ ವನ್ಯಜೀವಿಗಳ ಕೂಗನ್ನು ಅರ್ಥೈಸಿಕೊಂಡವರು. ಕೃಷಿಕರ ಸಮಸ್ಯೆಗಳನ್ನು ಹಾಗೂ ಕೃಷಿಯಲ್ಲಿ ಉಂಟಾಗುವ ಬದಲಾವಣೆಗಳ ಕುರಿತು ಅರಿತವರು. ಗ್ರಾಮೀಣ ಪ್ರದೇಶಗಳ ಜೀವನಶೈಲಿಯ ಕುರಿತು ಅನುಭವ ಉಳ್ಳವರು ಆಗಿರುವುದರಿಂದ ಇಂತಹ ವಿಷಯಗಳ ಕುರಿತು ತಮ್ಮ ಬರಹಗಳಲ್ಲಿ ಬಿಂಬಿಸಿದ್ದಾರೆ.

ಎಲ್ಲರಿಗೂ ಇಷ್ಟವಾಗುವ ರೀತಿಯಲ್ಲಿ ಬರಹಗಳ ಮೂಲಕ ತಮ್ಮ ಸಂದೇಶವನ್ನು ವ್ಯಕ್ತಪಡಿಸುವ ಡಾ. ನರೇಂದ್ರ ರೈ ದೇರ್ಲ ಹಲವಾರು ಉತ್ತಮ ಪುಸ್ತಕಗಳನ್ನು ಸಮಾಜಕ್ಕೆ ನೀಡಿದ್ದಾರೆ. ತಮ್ಮ ಪರಿಸರಪರ ಅಂಕಣಗಳಿಂದ ಪರಿಸರ ಪ್ರೇಮ ವ್ಯಕ್ತಪಡಿಸಿದ್ದಾರೆ. ಜೊತೆಗೆ ತಮ್ಮ ಉತ್ತಮ ಮಾತಿನ ಕಲೆಯ ಮೂಲಕ ಜನರಲ್ಲಿ ಪರಿಸರ ಸಂವೇದನೆ ಹುಟ್ಟಿಸುವಲ್ಲಿ ಕಾರಣೀಕರ್ತರಾಗಿದ್ದಾರೆ ಎಂದು ಹೇಳಬಹುದು. ದೇರ್ಲರು ಪರಿಸರ ಸಂವೇದನೆಯನ್ನು ರೂಢಿಸಿಕೊಳ್ಳುವುದರ ಜೊತೆಗೆ ಕೃಷಿಯೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುವವರು. ಪರಿಸರ ಪ್ರೇಮಿಯಾಗಿರುವ ಇವರು ಮಾಧ್ಯಮದೊಂದಿಗೆ ಗುರುತಿಸಿಕೊಂಡು ಜೀವಪರ ಕಾಳಜಿ ಮೆರೆಯುತ್ತಿದ್ದಾರೆ. ಪರಿಸರ ಉಳಿಸುವ ಕೆಲಸಗಳೊಂದಿಗೆ ಹಾಗೂ ಬರಹಗಳೊಂದಿಗೆ ಜನರನ್ನು ತಲುಪುತ್ತಿದ್ದಾರೆ.

## ಪರಾಮರ್ಶನ ಗ್ರಂಥಗಳು


- **ರೈ ದೇರ್ಲ, ನರೇಂದ್ರ (1991) :** ತೊದಲು, ಮಾಡಾವು ಸ್ನೇಹ ಪ್ರಕಾಶನ.
- **ರೈ ದೇರ್ಲ, ನರೇಂದ್ರ (1997) :** ಸಾವಯವ ಕೃಷಿ, ಮೈಸೂರು ಪುಸ್ತಕ ಪ್ರಕಾಶನ.
- **ರೈ ದೇರ್ಲ, ನರೇಂದ್ರ (1999) :** ಇದೂ ಪತ್ರಿಕೋದ್ಯಮ, ಹಾಸನ ಪ್ರಭಾ ಪ್ರಕಾಶನ.
- **ರೈ ದೇರ್ಲ, ನರೇಂದ್ರ (1999) :** ಕಾಂಕ್ರೀಟ್ ಕಾಡಿನ ಪುಟ್ಟ ಕಿಟಕಿ, ಪುತ್ತೂರು ಸ್ನೇಹ ಪ್ರಕಾಶನ.
- **ರೈ ದೇರ್ಲ, ನರೇಂದ್ರ (2004) :** ಬೊಗಸೆ ತುಂಬಾ ಬೀಜ, ಬೆಂಗಳೂರು ಸಿವಿಜಿ ಪಬ್ಲಿಕೇಶನ್ಸ್.
- **ರೈ ದೇರ್ಲ, ನರೇಂದ್ರ (2004) :** ಕೃಷಿಕ ಕವಿ ಕಯ್ಯಾರ ಕಿಞ್ಞಣ್ಣ ರೈ, ಮಂಡ್ಯ ವಿಕಸನ.
- **ರೈ ದೇರ್ಲ, ನರೇಂದ್ರ (2007) :** ನೆಲದವರು– ಕೃಷಿ; ಕಥೆ–ವ್ಯಥೆ, ಪುತ್ತೂರು ಕನಸು ಪ್ರಕಾಶನ.
- **ರೈ ದೇರ್ಲ, ನರೇಂದ್ರ (2014) :** ಹಸಿರು ಉಸಿರು, ಪುತ್ತೂರು ಕನಸು ಪ್ರಕಾಶನ.
- **ರೈ ದೇರ್ಲ, ನರೇಂದ್ರ (2018) :** ನೆಲಮುಖಿ, ಪುತ್ತೂರು ಕನಸು ಪ್ರಕಾಶನ.
- **ರೈ ದೇರ್ಲ, ನರೇಂದ್ರ (2018) :** ಬೀಜಧ್ಯಾನ, ಪುತ್ತೂರು ಕನಸು ಪ್ರಕಾಶನ.


*– 37ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಕನ್ನಡ ವೃತ್ತಿ ರಂಗಭೂಮಿಯ ರಂಗಗೀತೆಗಳು : ಕಂದಪದ್ಯಗಳ ಹೊಸ ಶೋಧ

✍ **ಡಾ. ಮಲ್ಲಯ್ಯ ಸಂಡೂರು,** ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಜ್ಞಾನ ಸರೋವರ, ನಂದಿಹಳ್ಳಿ, ಸಂಡೂರು-583 119, ಬಳ್ಳಾರಿ ಜಿ.

## ಪ್ರಸ್ತಾವನೆ

ಕನ್ನಡ ಸಾಹಿತ್ಯವು 1500 ವರುಷಗಳ ಇತಿಹಾಸವನ್ನು ಹೊಂದಿದೆ. ಇದರಲ್ಲಿ ಚಂಪೂ ಕಾವ್ಯಕ್ಕೆ ಸಂಬಂಧಿಸಿದ ವೃತ್ತ-ಕಂದಗಳಿವೆ. ಚಂಪೂವಲ್ಲದ ಕಾವ್ಯಪರಂಪರೆಗೆ ಸಂಬಂಧಿಸಿದ ಷಟ್ಪದಿ, ಸಾಂಗತ್ಯ, ವಚನ, ತ್ರಿಪದಿ ಮತ್ತು ಚೌಪದಿಗಳಿವೆ. ಕರಾವಳಿಯ ಯಕ್ಷಗಾನ ಪಠ್ಯಗಳನ್ನು ಕುಮಾರವ್ಯಾಸನ 'ಕುಮಾರವ್ಯಾಸ ಭಾರತ' ಮತ್ತು ಲಕ್ಷ್ಮೀಶನ 'ಜೈಮಿನಿ ಭಾರತ'ಗಳಿಲ್ಲದೆ ಕಲ್ಪಿಸಿಕೊಳ್ಳುವಂತಿಲ್ಲ. ದಾಸರನ್ನು ಹಾಗೂ ಶರಣರನ್ನು ಕುರಿತ ನಾಟಕ ಮತ್ತು ಸಿನಿಮಾಗಳು, ಅವರು ರಚಿಸಿದ ವಚನ ಮತ್ತು ಕೀರ್ತನೆಗಳನ್ನು ಗೀತೆಗಳಾಗಿ ಬಳಸಿಕೊಳ್ಳುತ್ತಾ ಬಂದಿವೆ. ವೃತ್ತಿರಂಗಭೂಮಿಯ ನಾಟಕಗಳು ಪ್ರಧಾನವಾಗಿ ರಾಮಾಯಣ, ಮಹಾಭಾರತ ಮತ್ತು ಪುರಾಣದ ಪ್ರಸಂಗವನ್ನು ಆಧರಿಸಿರುವುದರಿಂದ ಈ ಸಂಬಂಧಿಯಾದ ಕನ್ನಡ ಪಠ್ಯಗಳನ್ನು ಅವು ಅನಾಮತ್ತಾಗಿ ಬಳಸಿಕೊಂಡಿವೆ. ಹೀಗಾಗಿ ಕನ್ನಡ ವೃತ್ತಿರಂಗಭೂಮಿ ರಂಗಗೀತೆಗಳಲ್ಲಿ ರಂಗಕವಿಗಳು ಬಳಸುತ್ತಿದ್ದ ಕಂದ ಪದ್ಯಗಳನ್ನು ಗುರುತಿಸಿ ಈ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಪ್ರಾಚೀನ ಕಾವ್ಯಗಳಲ್ಲಿ ಖ್ಯಾತ ಕರ್ನಾಟಕ ಎನಿಸುವ ವೃತ್ತಗಳನ್ನು ಬಿಟ್ಟರೆ ಕಂದ ಪದ್ಯಗಳು ಅಧಿಕ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತವೆ. ತ್ರಿಪದಿಗೆ ಇರುವಷ್ಟು ಜನಪ್ರಿಯತೆ ಕನ್ನಡದ ಚಂಪೂಕಾವ್ಯಗಳಲ್ಲಿ ಕಂದಪದ್ಯಗಳಿಗಿದೆ. ಪಂಪ, ರನ್ನರ ಕಾವ್ಯಗಳಲ್ಲಿ ಕಂದಪದ್ಯದ ಬಳಕೆಯನ್ನು ಕಾಣಬಹುದಾಗಿದೆ. ಅಲ್ಲದೆ ಜನ್ನನ 'ಯಶೋಧರ ಚರಿತೆ'ಯಂತಹ ಕೆಲವು ಪ್ರಾಚೀನ ಕಾವ್ಯಗಳು ಸಂಪೂರ್ಣವಾಗಿ ಕಂದಪದ್ಯದಲ್ಲಿಯೇ ರಚಿತವಾಗಿರುವುದು ಕಾಣಬಹುದು. ವಿದ್ವಾಂಸರ ಪ್ರಕಾರ ಮೂಲತಃ ಕಂದಪದ್ಯ ಕನ್ನಡದ ಛಂದಸ್ಸಲ್ಲ. ಇದರ ಮೂಲ ಕನ್ನಡದಲ್ಲಿ ದೊರೆಯುವುದಿಲ್ಲ. ಇದು ಸಂಸ್ಕೃತದಲ್ಲಿ 'ಆರ್ಯಾಗೀತಿ' ಎಂಬ ಹೆಸರಿನಿಂದ ಪ್ರಚಾರ ಮತ್ತು ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಈ 'ಆರ್ಯಾಗೀತಿ'ಯೇ ಪ್ರಾಕೃತದಲ್ಲಿ 'ಸ್ಕಂಧಕ'ವೆನಿಸಿದ್ದು ಅದು ಕನ್ನಡದಲ್ಲಿ 'ಕಂದ' ಎಂಬ ಹೆಸರಿನಿಂದ ಪ್ರಚಲಿತವಾಗಿದೆ. ಕಂದಪದ್ಯವು ಮಾತ್ರಗಣಗಳಿಂದ ಕೂಡಿರುವ ಒಂದು ಪದ್ಯ ಜಾತಿ. ನಾಗವರ್ಮನ 'ಛಂದೋಂಬುಧಿ'ಯಲ್ಲಿ ಕಂದಪದ್ಯದ ಲಕ್ಷಣವನ್ನು ಕುರಿತು ಹೀಗೆ ಹೇಳಲಾಗಿದೆ.

**ಪುರಬಾಣ ವಹ್ನಿ ಶರಗಣ**
**ಮಿರೆ ನಾಲ್ಕುಂ ಪದದೊಳೋಜೆ ಯುಗ್ಮಗಳೊಳ್ ಪ**
**ನ್ನೆರಡಿರ್ಪತ್ತೋಳಿಯ ಪ**
**ನ್ನೆರಡಿರ್ಪತ್ತಾಗೆ ಮಾತ್ರೆಗಳ್ ಮೃಗನಯನೇ**

ಇದರ ಪ್ರಕಾರ, ಕಂದಪದ್ಯದಲ್ಲಿ ನಾಲ್ಕು ಸಾಲುಗಳಿರುತ್ತವೆ. ಈ ನಾಲ್ಕು ಸಾಲುಗಳಲ್ಲಿ ಒಂದು ಮತ್ತು ಮೂರನೇ ಸಾಲುಗಳು ಒಂದು ಸಮನಾಗಿರುತ್ತವೆ. ಎರಡು ಮತ್ತು ನಾಲ್ಕನೇ ಸಾಲುಗಳು ಮತ್ತೊಂದು ಸಮನಾಗಿರುತ್ತವೆ. ಅಂದರೆ ಒಂದು ಮತ್ತು ಮೂರನೇ ಚರಣಗಳಲ್ಲಿ ನಾಲ್ಕು ಮಾತ್ರೆಯ ಮೂರು ಗಣಗಳೂ, ಎರಡು ಮತ್ತು ನಾಲ್ಕನೇ ಚರಣಗಳಲ್ಲಿ ನಾಲ್ಕು ಮಾತ್ರೆಯ ಐದು ಗಣಗಳು ಬರುತ್ತವೆ. ವಿಷಮಸ್ಥಾನದಲ್ಲಿ 'ಜಗಣ' (U – U) ಅಂದರೆ ಮಧ್ಯೆ ಗುರುವಿರುವ ಗಣ ಬರಕೂಡದು. ಆರನೇ ಸ್ಥಾನದಲ್ಲಿ ಜಗಣವಾಗಲಿ ಅಥವಾ ಸರ್ವಲಘುವಿನ (UUUU) ಗಣವಾಗಲೀ ಬರಬೇಕು. ಹಾಗೆ ಬರುವಾಗ ಆ ಗಣದ ಮೊದಲ ಹ್ರಸ್ವಾಕ್ಷರದ ಮುಂದೆ ಯತಿ ಇರಬೇಕು. ಪ್ರತಿ ಪದ್ಯದ ಕೊನೆಗೆ ಅಂದರೆ ಎಂಟನೇ ಗಣದ ಕೊನೆಯಲ್ಲಿ 'ಗುರು' ಕಡ್ಡಾಯವಾಗಿ ಬರಬೇಕು.

ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯ ರಂಗಕವಿಗಳು ತಮ್ಮ ನಾಟಕಗಳಲ್ಲಿ ಕಂದಪದ್ಯಗಳನ್ನು ರಚನೆ ಮಾಡುತ್ತಿದ್ದರು. ಕಾರಣ ಅವು ಲಲಿತವೂ ಕೇಳಲು ಇಂಪಾದವೂ ಆಗಿದ್ದವು. ಕಂದಗಲ್ಲ ಮುಂತಾದ ರಂಗಕವಿಗಳಿಗೆ ಕಂದ ಪದ್ಯದ ನಿಯಮಗಳು ತಂಬಾ ಚೆನ್ನಾಗಿ ಗೊತ್ತಿದ್ದವು. ತಮ್ಮ ನಾಟಕಗಳಲ್ಲಿ ಅವು ಬಂದ ಕಡೆ ಅವರು ಕಂದಪದ್ಯವೆಂದು ನಮೂದಿಸುವರು. ಇದರಿಂದ ನಾಟಕ ಪಠ್ಯಗಳಲ್ಲಿ ಕಂದಗಳು ಎದ್ದು ಕಾಣುತ್ತಿದ್ದವು. ಉಳಿದ ಪದ್ಯಗಳಿಗೆ ಅದರ ಛಂದಸ್ಸನ್ನು ಹಾಕದೆ ಕಂದಕ್ಕೆ ಮಾತ್ರ ಈ ಸೂಚನೆ ಹಾಕಿರುವುದು ಗಮನಾರ್ಹ. ಉತ್ತರ ಕರ್ನಾಟಕಕ್ಕೆ ಹೋಲಿಸಿದರೆ ದಕ್ಷಿಣ ಕರ್ನಾಟಕದ ವೃತ್ತಿರಂಗ ಭೂಮಿಯಲ್ಲಿ ಕಂದಪದ್ಯವನ್ನು ಹಾಡುವುದು ಮೊದಲಿನಿಂದಲೂ ಇದೆ. "ಎ. ವಿ. ವರದಾಚಾರ್ಯರು ಮೈಸೂರಿನ ರಂಗಸಂಗೀತವನ್ನು ಪರಿಷ್ಕರಿಸಿ, ಕೃತಿಯಲ್ಲಿನ ಕಂದವೃತ್ತಗಳಿಗೆ, ಅಲ್ಲಿನ ಭಾವಕ್ಕೆ ಹೊಂದುವಂತೆ ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳನ್ನು ಹೊಂದಿಸಿ, ಭಾವಕ್ಕೆ ಅಭಿವ್ಯಕ್ತಿ ಕೊಟ್ಟರು" ಎಂಬುದನ್ನು ರಂಗಚಿಂತಕರು ದಾಖಲಿಸಿದ್ದಾರೆ.[1] ಉತ್ತರ ಕರ್ನಾಟದಲ್ಲಿ ಈ ಪ್ರವೃತ್ತಿ ತುಂಬಾ ಕಡಿಮೆ ಕಂಡರೂ, ಇದು ಗರುಡ ಸದಾಶಿವರಾಯರ ಮತ್ತು ನಲವಡಿ ಶ್ರೀಕಂಠಶಾಸ್ತ್ರಿಗಳ ನಾಟಕಗಳಲ್ಲಿ ಹೆಚ್ಚಾಗಿ ಕಾಣುತ್ತದೆ. ಎಚ್.ಕೆ. ರಂಗನಾಥ ಅವರ ಪ್ರಕಾರ "ಆಗ ಕವಿಗಳು ಒಂದು ನಾಟಕದಲ್ಲಿ ಒಂದು ನೂರು ಹಾಡುಗಳು, ನಲವತ್ತು ಐವತ್ತು ಕಂದಪದ್ಯಕ್ಕಿಂತಲೂ ಕಡಿಮೆ ಬರೆಯುತ್ತಿರಲಿಲ್ಲ. ಹಾಡು ಎಂದರೆ ಪಲ್ಲವಿ ಅನುಪಲ್ಲವಿ, ಮೂರು ಚರಣಗಳಿರುತ್ತಿದ್ದವು... ಪಾತ್ರಧಾರಿಗಳಿಗೆ ಹಾಡುವ ಜ್ಞಾನವಿರಲಿ, ಇಲ್ಲದಿರಲಿ ಮಟ್ಟುಗಳನ್ನು ಕಂದಗಳನ್ನು ಹಾಡಿಯೇ ತೀರಬೇಕು"[2]. ಆದರೆ ಕಂದಪದ್ಯಗಳನ್ನು ಯಾವ ರಾಗದಲ್ಲಿ ಹಾಡುತ್ತಿದ್ದರು ಎಂಬುದರ ಸ್ಪಷ್ಟವಾಗುವುದಿಲ್ಲ. ಏಕೆಂದರೆ, ಉಳಿದ ರಂಗಗೀತೆಗಳಿಗೆ ಸೂಚನೆ ಮಾಡಿರುವ ಹಾಗೆ ರಂಗಕೃತಿಗಳಲ್ಲಿ ರಾಗ ಸೂಚನೆ ಮಾಡಿಲ್ಲ. ಬಹುಶಃ ವರದಾಚಾರ್ಯರು ಕರ್ನಾಟಕ ಸಂಗೀತದ ರಾಗಗಳನ್ನು ಹೊಂದಿಸಿದಂತೆ, ಉತ್ತರ ಕರ್ನಾಟಕದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ರಾಗಗಳನ್ನು ರಂಗಕವಿಗಳು ಹೊಂದಿಸಿರುವ ಸಾಧ್ಯತೆಯಿದೆ. ಕಾರಣ ಉತ್ತರ ಕರ್ನಾಟಕದ ರಂಗಸಂಗೀತವು ಹಿಂದೂಸ್ತಾನಿ ಸಂಗೀತದ ಹಿನ್ನೆಲೆಯಲ್ಲಿ ಅಂತರ್ಗತಗೊಂಡಿದ್ದುದು. ಕಂದಪದ್ಯಗಳನ್ನು ಯಾವ ಭಾವಗಳ ಸಂದರ್ಭದಲ್ಲಿ ಬಳಸುತ್ತಿದ್ದರು ಎಂಬುವುದನ್ನು ಈ ಕೆಳಕಂಡಂತೆ ಗಮನಿಸಬಹುದು.

ಅ) ಕಂದಪದ್ಯಗಳನ್ನು ರಂಗಕವಿಗಳು ರಂಗಗೀತೆಗಳಾಗಿ ಬಳಸುವಾಗ ಲಘುಭಾವದ ಸನ್ನಿವೇಶಗಳಿಗೆ ಹೆಚ್ಚಾಗಿ ಬಳಸುತ್ತಿದ್ದರು. ಗರುಡರ 'ಶ್ರೀಕೃಷ್ಣ ಸುಧಾಮ' ನಾಟಕದಲ್ಲಿ ಕಾವಲುಗಾರ ಸುದಾಮನ ಮುಂದೆ ಹಾಡುವ ಕಂದಪದ್ಯಗಳು ಹೀಗಿವೆ:

**ತಾಂಬೂಲಾದಿ ಹೊಗೆ ಸೊಪ್ಪನು**
**ತಿಂಬುವವನೆ ಸೊಗಸುಗಾರ ನಿಜ ಸವಿಗಾರಾ**
**ಕೆಂಬಡರಿದ ತುಟಿ ಪಲ್ಗಳು**
**ಬಿಂಬವು ದಾಳಿಂ ಬೀಜ ಸಮನಾದುದು ಕೇಳ್ ।**
**ಸುರೆಯನು ಕುಡಿಯದ ನರನು**
**ಧರುಣಿಗೆ ತಾ ಭಾರವಾಗಿ ಬಾಳಿದನೆಂದು**
**ವರೆಯುವರ್ರೈ ನಮ್ಮಂಥಾ ವರ**
**ರಸಿಕರು ಸುರೆಯ ಸಿಂಧುವಿನಲ್ಲಿ ಮುಳುಗೇಳುವರು**

ಆ) ರಂಗಕವಿಗಳು ಕಂದಪದ್ಯಗಳನ್ನು ದುಃಖ ಮತ್ತು ಸಂತೋಷದ ಭಾವಗಳಲ್ಲಿ, ದೇವರ ಪ್ರಾರ್ಥನೆಯ ಸಂದರ್ಭದಲ್ಲಿ ಬಳಸುತ್ತಿದ್ದರು. 'ಶ್ರೀ ಕೃಷ್ಣ-ಸುಧಾಮ' ನಾಟಕದಲ್ಲಿ ಸುದಾಮ ಕೃಷ್ಣನ ಮುಂದೆ ಹಾಡುವ ಕಂದ ಹೀಗಿವೆ :

ಅ) **ವರವನು ಪಾಲಿಸು ವಸುಧೆಯ**
**ಸಿರಿವಂತರಿಗೆಲ್ಲ ದರಿದ್ರ ನಾರಾಯಣರಾ**
**ವರಸೇವೆಯೊಳು ನಿರಂತರ**
**ಪರಮಾಸಕ್ತಿಯನಿತ್ತು ಉದ್ಧರಿಸು ಕರುಣಾಶರಧೆ**

ಆ) **ಸುರರಾಜ ನರಮನೆಯ । ಧಿಕ್ಕರಿಪ ದ್ವಾರಕಾಪುರಿಯ**
**ವರಮಂದಿರದಿ ಸ್ವರಮಿಗೆಯ । ಅರಸು ಭೋಗಗಳಲ್ಲಿ**
**ಮೆರೆದಾಡುವಾ ನೀನು ನಿರಭಿಮಾನವ ತಾಳ್ದೆ ಎನ್ನ ಸಲುವಾಗಿ**
**ಪರಮ ಪುರುಷನು ನೀನೆ ಪಂಕಜಾಕ್ಷಾ**
**ಪರಿಕಿಸುವ ರಾರ್ರೈಯ್ಯ ನಿನ್ನನ್ನು ಕೃಷ್ಣಾ** ॥ 1 ॥
**ಘನ ದರಿದ್ರನು ನಾನು ತಿರುಪೆಯಿಂ ಜೀವಿಸುವ**
**ತಿರುಕನ್ನೈ ಜೀರ್ಣ ಕಂಥೆಯನು ಧರಿಸಿರುವಾ**
**ದರುಶನೀಯನು ಅಲ್ಲ ಸ್ಪರ್ಶಿಸಲು ಹೇಸಿಕೆ**
**ಬರುವ ಶವಸಮನೆನ್ನ ಉಪಚರಿಸುತ್ತಿರುವೆ** ॥ 2 ॥
**ನಾನೀಗ ಭೋಗಿಸುವದನುಪಮಾನಂದವದು**
**ಆನಾಕವಾಸಿಗಳಿಗೆಂತು ಸಿಗದು**
**ದೀನನಾದೆನ್ನ ಸಲುವಾಗಿ ಕಿಂಕರಭಾವ**
**ವನ್ನು ತೋರಿಸಿದ ನೀನು ಸಾಮಾನ್ಯನೇನೈ** ॥ 3 ॥

ವಾಮನರಾವ್ ಮಾಸ್ತರರ 'ಭಕ್ತಪ್ರಹ್ಲಾದ' ನಾಟಕದಲ್ಲಿ ಹಿರಣ್ಯಕಶಿಪು ಬ್ರಹ್ಮನ ಮುಂದೆ ಹಾಡುವ ಈ ಕಂದಪದ್ಯವನ್ನು ಗಮನಿಸಬಹುದು.

ಇ) **ಭಕ್ತಾಂತರ್ಗತವಾಸನೆ ಸತ್‌ಪ್ರೇಮದಿ ।**
**ಭಕ್ತಿಗೊಲಿದೆ ಚತುರಾನನನೇ** ॥ ಪ ॥
**ಅತ್ಯಾದರದಿಂದೆನ್ನಯ । ಸತ್ಕಾಮಕೆ ವರವನಿತ್ತು ।**
**ಪೊರೆಯೋ ವಿಧಾತಾ** ॥ 1 ॥

ಹೀಗೆ ಆರ್ತ ಹಾಗೂ ದೈನ್ಯ ಭಾವದಿಂದ ಭಕ್ತಿಪಾತ್ರಗಳ ದೇವರ ಪ್ರಾರ್ಥನೆಯನ್ನು ಮಾಡುವ ಸನ್ನಿವೇಶಗಳಲ್ಲಿ ಕವಿಗಳು ಪರಿಣಾಮಕಾರಿಯಾಗಿ ಕಂದ ಪದ್ಯಗಳನ್ನು ಬಳಸುತ್ತಾರೆ ಎನ್ನುವುದು ಇಲ್ಲಿ ಮುಖ್ಯವಾಗಿದೆ.

ಇ) ಕವಿಗಳು ಅಪರೂಪಕ್ಕೆ ಸಂಭಾಷಣೆಗಾಗಿಯೂ ಕಂದಪದ್ಯವನ್ನು ಬಳಸುತ್ತಿದ್ದರು. ನಲವಡಿ ಶ್ರೀಕಂಠಶಾಸ್ತ್ರಿಗಳ 'ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ' ನಾಟಕದಲ್ಲಿ ಬರುವ ಈ ಸಂಭಾಷಣೆಯ ಸನ್ನಿವೇಶವನ್ನು ಇಲ್ಲಿ ಗಮನಿಸಬಹುದು. ನಿದರ್ಶನಕ್ಕೆ:

**ಮಲ್ಲಮ್ಮ :** ವೇಮಣ್ಣಾ, ಪರನಾರಿಯಲ್ಲಿ ಬೆರೆತ ಪಾಪಿಗೆ ನರಕವೇ ನಿತ್ಯವಾಸವಾಗುವದು. ಪರಯೋನಿಯಲ್ಲಿ ಬಿದ್ದ ಬಿಂದು ಮಾತ್ರದಿಂದ ಕೋಟಿ ಪುಣ್ಯಗಳು ಕೆಡುವವು. ವೇಶ್ಯೆಯನ್ನು ಕೂಡಿದಲ್ಲಿ ತಿಲಮಾತ್ರ ಸುಖವಿಲ್ಲ. ಅವಳಿಂದ ಸಂಸಾರ ಕೆಡುವದು. ದೇಹೇಂದ್ರಿಯಗಳ ಸಾಮರ್ಥ್ಯ ಕುಗ್ಗುವುದು ಮತ್ತು ಅವಳಿಂದ ಉಗ್ರವಾದ ಮೇಹ ರೋಗವಾದರೆ, ಯಮಯಾತನೆಯಾಗಿ ಸಾಯಬೇಕೆನಿಸುವದು. ದೇಹವು ಕ್ಷೀಣವಾಗುವದು. ಕ್ಷಯವು ಅಂಟುವದು. ಅಂತಹ ರೋಗವು ಪುತ್ರ ಪೌತ್ರಾದಿಗಳಿಗೂ ಮರಣ ಪರ್ಯಂತ ಜೋಡಾಗಿ ಬಾಯಿಬಿಡಿಸುವದು. ಆದ್ದರಿಂದ ಅಪ್ಪಾ ಮೈದುನನೇ,

**ಬಯಸದಿರು ಪರಸತಿಯ । ಬಯಸದಿರು ಪರಸತಿಯ ।**
**ಬಯಸದಿರು ಸೂಳೆಯ ಸಹವಾಸ ಕೇಳಿಯ ।**
**ಬಯಸು ಮಂಗಲ ಸತಿಯ । ರತಿಯ ಸೌಗತಿಯ ॥"**[3]

ವಾಮನರಾವ ಮಾಸ್ತರರು 'ಕೃಷ್ಣಾರ್ಜುನರ ಯುದ್ಧ' ನಾಟಕದಲ್ಲಿ ಬರುವ ಸಂಭಾಷಣಾ ಸಂದರ್ಭವನ್ನು ಇಲ್ಲಿ ಗಮನಿಸಬಹುದು:

**ಕೌಶಿಕ :** ಗಂಧರ್ವರ ಉನ್ಮತ್ತ ವೃತ್ತಿಯು ಮೇರೆದಪ್ಪಿತು- !

**ಗಾಲವ :** ಎಲ ಎಲಾ, ಏನು ಮಾಡಲೀ! (ಆಕಾಶದ ಕಡೆಗೆ ನೋಡಿ) ದುರಾತ್ಮಾ, ಕಾಮಾಂಧಾ, ನಿಲ್ಲು! ನಾನೀಗ ಕೊಡುವ ಶಾಪವನ್ನು ಸ್ವೀಕರಿಸು ! ನಿಲ್ಲು. ನಿಲ್ಲು. ಹೀಗೇಕೆ ಹೇಡಿಯಂತೆ ಓಡಿಹೋಗುವೆ? ಗಂಧರ್ವರ ದಿವ್ಯಶಕ್ತಿಯ ಹೆಮ್ಮೆ ನಿನಗಿದ್ದರೆ, ಇಂದ್ರಾದಿ ವಿಷಯಲಂಪಟ ಸಹಾಯದ ಧೈರ್ಯ ನಿಮಗಿದ್ದರೆ, ಹೀಗೇಕೆ ಓಡಿಹೋಗುವೆ ? ನಿಲ್ಲು!- ನಾನೀಗ ಕೊಡುವ ಶಾಪವನ್ನು ಕಿವಿಗೊಟ್ಟು ಕೇಳು !-

**ತಡೆ ತಡೆ ಗಂಧರ್ವಾಧಮ ॥**
**ಕೊಡುವೆನು ಪಿಡಿ ಘೋರ ಶಾಪವ ನೀಚಾತ್ಮಾ ॥**
**ಸುಡುವೆನು ಬ್ರಹ್ಮದ್ರೋಹಿಯೆ ॥**
**ಬಡಿಬಡಿಸುತೆ ಹೇಡಿಯಂತೆ ಓಡುವೆ ಏಕೇ** ॥ ಪ ॥[4]

ಗರುಡ ಸದಾಶಿವರಾಯರ 'ಚವತಿಚಂದ್ರ' ನಾಟಕದಲ್ಲಿ ಬರುವ ಈ ಸನ್ನಿವೇಶವನ್ನು ಗಮನಿಸಬಹುದು.

**ಬ್ರಾಹ್ಮಣ :** (ಬಂದು) ಎಲೋ ! ಏನೋ, ಅದು ಬಡವರ ಬಾಳು ಬಂಗಾರವಾಗುವದೆಂದು ಹೇಳಿದೆಯಲ್ಲಾ, ಅದು ಹೇಗೆ ?

**ಡಂಗುರದವ**
**ಸತ್ರಾಜಿತ ಸಹೋದರರೂ ।**
**ಪ್ರಸೇನರೆಂಬ ಯಾದವವೀರರು ।**
**ಸುವರ್ಣ ದಾನವನೆ ಮಾಡುವರೋ । ತೀವ್ರವಾಗಿ ನಡೆಯಿರೀ ॥**[5]

ವಾಮನರಾಯರು, ಗರುಡ ಸದಾಶಿವರಾಯರು ಮತ್ತು ನಲವಡಿ ಶ್ರೀಕಂಠಶಾಸ್ತ್ರಿಗಳು - ಈ ಮೂರು ಕವಿಗಳೇ ಯಾಕೆ ಹೆಚ್ಚಾಗಿ ಕಂದ ರಚನೆ ಮಾಡಿದರು ಎನ್ನುವ ಪ್ರಶ್ನೆ ಇಲ್ಲಿ ಸಹಜವಾಗಿ ಮೂಡುವುದು. ಇದಕ್ಕೆ ಕಾರಣ ಈ ಮೂರು ಜನ ರಂಗಕವಿಗಳು ಗದಗ ಸೀಮೆಗೆ ಸೇರಿದವರಾಗಿದ್ದರು ಎಂದು ಹೇಳಬಹುದು. ಆದರೂ ಇದೇ ಸೀಮೆಯ ರಂಗಕವಿಗಳು ಯಾಕೆ ಕಂದಪದ್ಯಗಳನ್ನು ಬಳಸುತ್ತಾರೆ ಎನ್ನುವುದು ಸ್ಪಷ್ಟವಾಗುವುದಿಲ್ಲ. ಬೆಳಗಾವಿ ಭಾಗದ ಚಿಕ್ಕೋಡಿ ಶಿವಲಿಂಗಸ್ವಾಮಿಗಳು ಕಂದಪದ್ಯಗಳನ್ನು ಯಾಕೆ ಬಳಸಿಲ್ಲವೆಂಬುದು ಸಹ ಅರ್ಥವಾಗುವುದಿಲ್ಲ. ಬೆಳಗಾವಿ ರಂಗಕವಿಗಳು ಹಿಂದೂಸ್ತಾನಿ ಚೀಸ್‌ಗಳಿಂದ ಹೆಚ್ಚು ಪ್ರಭಾವಿತರಾಗಿದ್ದರಿಂದ ಬಹುಶಃ ಕನ್ನಡ ಪರಂಪರೆಯ ಚಂಪೂಕಾವ್ಯದ ಕಂದಪದ್ಯಗಳು ಅವರಿಗೆ ಅಷ್ಟು ಪ್ರಿಯವಾಗಿರಲಿಲ್ಲ ಎಂದು ತೋರುತ್ತದೆ. ದಕ್ಷಿಣ ಕರ್ನಾಟಕದ ವೃತ್ತಿರಂಗಭೂಮಿ ನಾಟಕಗಳಲ್ಲಿ ಕವಿಗಳು ಹೆಚ್ಚಾಗಿ ಕಂದ ಪದ್ಯಗಳನ್ನು ಬಳಸಿದ್ದಾರೆ. ಭಾಷೆಯ ವಿಷಯದಲ್ಲಿ ಕಂದಪದ್ಯವನ್ನು ಬಳಸುವ ಕವಿಗಳು ನಡುಗನ್ನಡವನ್ನು ಹೆಚ್ಚು ಬಳಸುತ್ತಾರೆ.

ರಂಗಕವಿಗಳು ಅನೇಕ ಕಡೆ ನಾಟಕಗಳಲ್ಲಿ ಕಂದಪದ್ಯವೆಂದು ಹೇಳಿದ್ದಾರೆ. ಆದರೆ ಅಲ್ಲಿ ಕಂದಪದ್ಯದ ಲಕ್ಷಣಗಳು ಪಾಲನೆಯಾಗಿಲ್ಲ. ಆದಿಪ್ರಾಸವನ್ನು ಬಿಟ್ಟಿದ್ದಾರೆ. ಕೆಲವಡೆ ಲಘು-ಗುರುಗಳನ್ನು ಹಾಕುವುದನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮೀರಿದ್ದಾರೆ. ಛಂದೋನಿಯಮ ಹೀಗೆ ಮೀರಲು ಕಾರಣ, ಕಂದಪದ್ಯ ಮೂಲತಃ ಅಕ್ಷರ ಛಂದಸ್ಸು. ಹಾಡುವಾಗ ಒಂದು ಮಾತ್ರೆಯನ್ನು ಹೆಚ್ಚುಕಡಿಮೆ ಮಾಡಿಕೊಂಡರೆ ನಡೆಯುತ್ತದೆ ಎಂಬ ಧೋರಣೆ ಇರಬೇಕು. ಉದಾ: 'ಗದುಗಿನ ವೀರನಾರಾಯಣ' ಎಂದು ಹೇಳುವಾಗ, ಕುಮಾರವ್ಯಾಸ 'ಗದುಗಿನ ವೀರನಾರಾಯಣ' ಎಂದು ಹೇಳಿಬಿಡುತ್ತಾನೆ. ಹಾಡಿಗೆ ಅದು ಅನುಕೂಲವಾಗಲಿಕ್ಕೆ ಈ ನಿಯಮೋಲ್ಲಂಘನೆ ಮಾಡಿಕೊಂಡಿರುತ್ತಾರೆ. ಇದು ಮಾತ್ರ ಛಂದಸ್ಸಿನಲ್ಲಿರುವ ಸ್ವಾತಂತ್ರ್ಯ. ಅಕ್ಷರ ಛಂದಸ್ಸು ಹಾಡೋ ಛಂದಸ್ಸೇ ಅಲ್ಲ. ಅಲ್ಲಿ ಅಕ್ಷರ ಪಾಲನೆ ಮಾಡಬೇಕು.

ರಂಗಕೃತಿಗಳಲ್ಲಿ ಬರುವ ಕಂದಪದ್ಯಗಳಲ್ಲಿ ಸಂಸ್ಕೃತಭೂಯಿಷ್ಠ ಕನ್ನಡ ಮಿಶ್ರಣಗೊಂಡಿದೆ. ಅಪರೂಪಕ್ಕೆ ಕನ್ನಡದ ಗೀತೆಗಳಿವೆ. ಪ್ರಾರ್ಥನೆ ಗೀತೆಗಳೆಲ್ಲ ಪದ್ಯಗಳು ಸಂಸ್ಕೃತ ಪದ್ಯಗಳಾಗಿವೆ. ವಾಮನರಾವ ಮಾಸ್ತರರ 'ಭಕ್ತಪ್ರಹ್ಲಾದ' ನಾಟಕದಲ್ಲಿ ಹಿರಣ್ಯಕಶಿಪು ಬ್ರಹ್ಮನ ಮುಂದೆ ಹಾಡುವ ಈ ಗೀತೆ ಸಂಸ್ಕೃತ ಪದ್ಯಕ್ಕೆ ನಿದರ್ಶನವಾಗಿದೆ.

**ಭಕ್ತಾಂತರ್ಗತವಾಸನೆ ಸತ್‌ಪ್ರೇಮದಿ ।**
**ಭಕ್ತಿಗೊಲಿದೆ ಚತುರಾನನನೇ ॥ ಪ ॥**

**ಅತ್ಯಾದರದಿಂದೆನ್ನಯ । ಸತ್ಕಾಮಕೆ ವರವನಿತ್ತು ।**
**ಪೊರೆಯೋ ವಿಧಾತಾ ॥ 1 ॥**

ಇದರಲ್ಲಿ ಒಲಿದೆ, ಪೊರೆ, ಇತ್ತು, ಯನ್ನಯ ಎನ್ನುವ ಶಬ್ದಗಳು ಕನ್ನಡದವು. ಉಳಿದವುಗಳೆಲ್ಲವೂ ಸಂಸ್ಕೃತ ಶಬ್ದಗಳಾಗಿವೆ. ಕನ್ನಡದ ಪದಗಳೇ ತುಂಬಿರುವ ಕಂದಪದ್ಯಗಳನ್ನು ಬರೆಯುವ ಶಕ್ತಿ ರಂಗಕವಿಗಳಿಗಿತ್ತು. ಗರುಡ ಸದಾಶಿವರಾಯರ 'ಶ್ರೀಕೃಷ್ಣ ಸುದಾಮ' ನಾಟಕದಲ್ಲಿ ಬರುವ ಸನ್ನಿವೇಶವನ್ನು ಇಲ್ಲಿ ಗಮನಿಸಬಹುದು. ಉದಾ 2. : ಕಾವಲುಗಾರ ಸುದಾಮನ ಮುಂದೆ ಹಾಡುವ ಕಂದ ಹೀಗಿದೆ:

**ತಾಂಬೂಲಾದಿ ಹೊಗೆ ಸೊಪ್ಪನು**
**ತಿಂಬುವವನೆ ಸೊಗಸುಗಾರ ನಿಜ ಸವಿಗಾರಾ**
**ಕೆಂಬಡರಿದ ತುಟಿ ಪಲ್ಗಳು**
**ಬಿಂಬವು ದಾಳಿಂ ಬೀಜ ಸಮನಾದುದು ಕೇಳ್ । ..........**
**ಸುರೆಯನು ಕುಡಿಯದ ನರನು**
**ಧರುಣಿಗೆ ತಾ ಭಾರವಾಗಿ ಬಾಳಿದನೆಂದು**
**ವರೆಯುವರೈ ನಮ್ಮಂಥಾ ವರ**
**ರಸಿಕರು ಸುರೆಯ ಸಿಂಧುವಿನಲ್ಲಿ ಮುಳುಗೇಳುವರು**

ಸಾಮಾನ್ಯವಾಗಿ ಕಾವಲುಗಾರರು ಹಾಡುವ ಕಂದಪದ್ಯಗಳಲ್ಲಿ ಹೆಚ್ಚು ಕನ್ನಡವನ್ನು ಬಳಸಲಾಗಿದೆ. ಡಂಗುರದವ, ಕಾವಲುಗಾರರ ಪಾತ್ರ ಅಥವಾ ಇಂತಹ ಕೆಳ ವರ್ಗದ ಪಾತ್ರವು ಎಲ್ಲೆಲ್ಲಿ ಕಾಣಿಸಿಕೊಳ್ಳುತ್ತದೆಯೋ ಅಲ್ಲಲ್ಲಿ ಸರಳ ಕನ್ನಡ ಬಳಕೆಯಿರುವ ಕಂದ ಪದ್ಯಗಳನ್ನು ರಂಗಕವಿಗಳು ಬಳಸಿರುವರು. ಆದರೆ ಸಾಮಾಜಿಕವಾಗಿ ಮೇಲ್‌ಸ್ತರಕ್ಕೆ ಸೇರಿದ ಸುದಾಮ ಪಾತ್ರ ಬಂದಾಗ ಅವರು ಸಂಸ್ಕೃತವನ್ನು ಬಳಸುತ್ತಾರೆ. ಅಂದರೆ ಪಾತ್ರದ ಸಾಮಾಜಿಕ ಸ್ತರಕ್ಕೂ ಮತ್ತು ಅವರು ಹಾಡುವ ಕಂದಪದ್ಯಗಳಲ್ಲಿ ಸಂಸ್ಕೃತ–ಕನ್ನಡ ಬಳಕೆಯಾಗುವುದಕ್ಕೆ ಒಂದು ಸಂಬಂಧವಿದೆ. ಕಾವಲುಗಾರ ಸುದಾಮನಿಗೆ ತಮಾಷೆಯಾಗಿ ಮಾತನಾಡುವ ಸಂದರ್ಭದಲ್ಲಿ ಕನ್ನಡ ಬಂದಿದೆ. ಆದರೆ ಸುದಾಮ ಕೃಷ್ಣನಿಗೆ ಪ್ರಾರ್ಥನೆ ಸನ್ನಿವೇಶವಾಗಿರುವುರಿಂದ ಅಲ್ಲಿ ಸಂಸ್ಕೃತ ಬಂದಿದೆ. ರಂಗಗೀತೆಗಳಲ್ಲಿ ಮಾತನಾಡುವ ಪಾತ್ರ ಮತ್ತು ಸನ್ನಿವೇಶಗಳು ಲಘುವಾಗಿದ್ದಾಗ ಕನ್ನಡದ ಬಳಕೆಯಾಗುತ್ತದೆ. ಮೇಲ್‌ಸ್ತರದ ಹಾಡುವ ಪಾತ್ರ ಮತ್ತು ಸನ್ನಿವೇಶ ಗಂಭೀರವಾಗಿದ್ದಾಗ ಸಂಸ್ಕೃತ ಬಳಕೆಯಾಗುತ್ತದೆ.

ಸಾಮಾನ್ಯವಾಗಿ ರಂಗಕವಿಗಳು ನಾಟಕಗಳಲ್ಲಿ ಕಂದವನ್ನು ಬಳಸಿದ್ದಾರೆ. ಅದು ನಾಟಕದ ಸನ್ನಿವೇಶ ಅಥವಾ ಕತೆಯ ಭಾಗವಾಗಿ ಕಾಣಿಸಿಕೊಳ್ಳುತ್ತದೆ. ಗರುಡರಂತಹ ರಂಗಕವಿ ಕೆಲವೊಂದು ನಾಟಕಗಳಿಗೆ ಕಂದಪದ್ಯವನ್ನು ಬಳಸಿಕೊಂಡರೂ ತಮ್ಮ 'ಉಗ್ರಕಲ್ಯಾಣ' ನಾಟಕದಲ್ಲಿ ಮಾತ್ರ ಒಂದೇ ಒಂದು ಕಂದಪದ್ಯವನ್ನು ಮಾತ್ರ ಬಳಸುವರು. ಇದನ್ನು ಬಿಟ್ಟು ಈ ನಾಟಕದಲ್ಲಿ ಯಾವುದೇ ರಂಗಗೀತೆಗಳಿಲ್ಲ. ಗರುಡ ಸದಾಶಿವರಾಯರು ಗದ್ಯಪ್ರಧಾನವಾದ ನಾಟಕಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದರು. ಕತೆಯ ಭಾಗವಾದ ರಂಗಗೀತೆಗಳಿಗೆ ಅಷ್ಟಾಗಿ ಕೊಡುವುದಿಲ್ಲ. ಈ ಹಿನ್ನೆಲೆಯಲ್ಲಿ 'ಉಗ್ರ ಕಲ್ಯಾಣ' ನಾಟಕವೊಂದರಲ್ಲಿ ಒಂದೇ ಒಂದು ಕಂದಪದ್ಯವಿರುವುದನ್ನು ಅರ್ಥಮಾಡಿಕೊಳ್ಳಬೇಕಿದೆ. ಈ ನಾಟಕದ ಕಾಲೀಚರಣ ಪಾತ್ರವು ನವಾಜನ ಮುಂದೆ ಹೇಳುವ ಈ ಕಂದಪದ್ಯವನ್ನು ನಿದರ್ಶಿಸಬಹುದು.

**ಸಲ್ಲವು ಡಾಕಾ ವಲ್ಲಭ ।**
**ಪಲ್ಲಕ್ಕಿಯು ಗಜವು ಹಯವು ರಥ ಮೇಣಿಗಳು**
**ಬಲ್ಲಿದರಿಗಲ್ಲದೆನಗವು ಒಲ್ಲನು ವೈಭವವ ಪಿಪ್ರ ವಿದ್ಯಾಜೀವೀ**

ಈ ಕಂದಪದ್ಯಗಳ ಬಗ್ಗೆ ಚರ್ಚಿಸುವಾಗ ರಂಗಕವಿಗಳಾದ ಮ.ಬ.ಸೋಮಣ್ಣನವರು ಒಂದು ಮಾತು ಉಲ್ಲೇಖನೀಯವಾಗಿದೆ. "ಈ ರಂಗಗೀತೆಗಳು ಕಂದಪದ್ಯಗಳಾಗಿ ಕಂಡರೂ, ಈ ಪದ್ಯಗಳಿಗೆ ಪ್ರಸ್ತಾರ ಹಾಕುತ್ತಾ ಗಣ ವಿಂಗಡಣೆ ಮಾಡಿದರೆ ಕಂದಪದ್ಯದ ಲಕ್ಷಣ ಕಂಡುಬರುವುದಿಲ್ಲ. ಆದರೆ ರಂಗಕವಿಗಳು ಕಂದಪದ್ಯಗಳಿಗೆ ಕಟಿಬದ್ಧರಾಗಿ ಬರೆದವರಲ್ಲ" ಎಂದು ಅವರು ಹೇಳುವರು.[6]

## ಉಪಸಂಹಾರ

ಕನ್ನಡ ಕಾವ್ಯ ಪರಂಪರೆಯು ಚಂಪೂ, ವಚನ, ರಗಳೆ, ಷಟ್ಪದಿ, ಕೀರ್ತನೆ, ತತ್ವಪದ, ತ್ರಿಪದಿ, ಲಾವಣಿ, ದ್ವಿಪದಿ, ಸಾಂಗತ್ಯ ಜೊತೆಗೆ ಕಂದಪದ್ಯಗಳು, ಹಲವಾರು ರೂಪಗಳನ್ನು ಧಾರಣೆ ಮಾಡಿಕೊಂಡು ಬಂದಿದೆ. ಇದೊಂದು ಬಹುರೂಪಿ ಪ್ರಕಾರವಾಗಿದೆ. ಈ ಬಹುರೂಪಿ ಪ್ರಕಾರಕ್ಕೆ ಜನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಯ ರಂಗಗೀತೆಗಳು ಮತ್ತೊಂದು ಈ ಧಾರೆಯಾಗಿ ಸೇರಿಕೊಳ್ಳುತ್ತವೆ. ನಟನೆ, ಸಂಗೀತ ಮತ್ತು ವೇಷಭೂಷಣಗಳ ಆಯಾಮವಿರುವ ಈ ರಂಗಗೀತೆಗಳು ವರ್ಣರಂಜಿತವಾದವು. ಇವುಗಳ ಅಧ್ಯಯನಕ್ಕಾಗಿ ಪ್ರವೇಶ ಮಾಡಲು ಭಾಷೆ, ಸಂಗೀತ, ಸಾಹಿತ್ಯ, ರಂಗಭೂಮಿ ಕ್ಷೇತ್ರಗಳ ಸಿದ್ಧತೆ ಬೇಕಾಗಿದೆ. ಈ ಸಿದ್ಧತೆಗಳ ಮೂಲಕ ರಂಗಗೀತೆಗಳ ಪ್ರಕಾರಗಳನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ವಿಸ್ತಾರವಾದ ವಿಶ್ಲೇಷಣೆಗೆ ಒಡ್ಡಬೇಕಾಗಿದೆ. ಹಾಗೆಯೇ ತಮ್ಮನ್ನು ಒಡ್ಡಿಕೊಳ್ಳಲು ಬೇಕಾದ ಶಕ್ತಿ ಸಹ ಅವುಗಳಲ್ಲಿದೆ.

## ಕೊನೆ ಟಿಪ್ಪಣಿಗಳು

1. ಎಚ್.ಕೆ.ರಂಗನಾಥ, ಕರ್ನಾಟಕ ರಂಗಭೂಮಿ', ಪು.281.
2. ಅದೇ, ಪು.272.
3. ನಲವಡಿ ಶ್ರೀಕಂಠಶಾಸ್ತ್ರಿಗಳು, ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ, ವೃತ್ತಿರಂಗದ ಮಹತ್ತರ ನಾಟಕಗಳು, ಪು.362.
4. ವಾಮನರಾವ ಮಾಸ್ತರರು, ಕೃಷ್ಣಾರ್ಜುನರ ಯುದ್ಧ, ವಾಮನರಾವ ಸಮಗ್ರ ನಾಟಕ ಸಂ., ಪು.435.
5. ಗರುಡ ಸದಾಶಿವರಾಯರು, 'ಚವತಿಚಂದ್ರ', ಗರುಡ ಸದಾಶಿವರಾಯರ ಸಮಗ್ರ ನಾಟಕ ಸಂ.1, ಪು.240.
6. ಮ.ಬ.ಸೋಮಣ್ಣನವರ ಸಂದರ್ಶನದ ಸಂದರ್ಭದಲ್ಲಿ ಹೇಳಿದ ಮಾತಿದು. ದಿ. 18.10.2014.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಪರಾಮರ್ಶನ ಗ್ರಂಥಗಳು


- **ಅಳಗಿ ಎಸ್.ಬಿ., ಕಂದಗಲ್ಲ (1994) :** ಹಣಮಂತರಾಯರ ನಾಟಕಗಳ ಸಮೀಕ್ಷೆ, ಬೆಂಗಳೂರು ಲಿಪಿ ಪ್ರಕಾಶನ.
- **ಆಚಾರ್ ಕೆ.ವಿ (ಸಂ), ಹಂ.ಪ.ನಾಗರಾಜಯ್ಯ (ಪ್ರಸಂ) (1981) :** ರಂಗಗೀತೆಗಳು, ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು.
- **ಕರ್ಕಿ ಡಿ. ಎಸ್. (2002) :** ಕನ್ನಡ ಛಂದೋವಿಕಾಸ, ಧಾರವಾಡ ಭಾರತ ಪ್ರಕಾಶನ.
- **ಕಂದಗಲ್ಲ ಹಣಮಂತರಾಯ (1996) :** ವರಪ್ರದಾನ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ). (1988) :** ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- **ಪರಮಶಿವಯ್ಯ ಜೀ.ಶಂ., ಹ.ಕ.ರಾಜೇಗೌಡ, ಪ.ಸು. ಭಟ್ಟ (ಸಂ.), ದೇ.ಜವರೇಗೌಡ (ಪ್ರ.ಸಂ.) (1975) :** ಶ್ರೀ ಕೆ.ವಿ. ಶಂಕರಗೌಡ ಅಭಿನಂದನ ಗ್ರಂಥ ಕಬ್ಬಿನ ಹಾಲು, ಮೈಸೂರು ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್.
- **ಬಸವರಾಜ ಜಗಜಂಪಿ. (1993) :** ಗರೂಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ಗದಗ ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಸಂಸ್ಥಾನಮಠ.
- **ಬೆಳಗಲಿ ದು.ನಿಂ(ನಿರೂಪಕರು). (1999) :** ನನ್ನ ಬಣ್ಣದ ಬದುಕು('ನಾಟ್ಯಭೂಷಣ' ಏಣಗಿ ಬಾಳಪ್ಪನವರ ಆತ್ಮಕಥನ), ಹಂಪಿ ಕನ್ನಡ ವಿಶ್ವವಿದ್ಯಾಲಯ.
- **ಮಲ್ಲಯ್ಯ ಸಂಡೂರು (2016) :** ರಂಗದೊಳಗಿನ ಗೀತೆ, ಬೆಂಗಳೂರು ಅರುಣ್ ಪ್ರಕಾಶನ.
- **ಮಲ್ಲಿಕಾರ್ಜುನ ಮನ್ಸೂರ್. :** ನನ್ನ ರಸಯಾತ್ರೆ, ಬೆಂಗಳೂರು ಅಭಿನವ.
- **ರಮಾಕಾಂತ ಜೋಶಿ, ಪ್ರಕಾಶ ಗರುಡ(ಸಂ.) (2011) :** ಗರುಡ ಸದಾಶಿವರಾಯರ ಸಮಗ್ರ ನಾಟಕ (ಸಂಪುಟ:1,2), ಧಾರವಾಡ ಮನೋಹರ ಗ್ರಂಥಮಾಲಾ.
- **ರಮಾಕಾಂತ ಜೋಶಿ (2011) :** ಸವಣೂರ ವಾಮನರಾವ ಸಮಗ್ರ ನಾಟಕ ಸಂಪುಟ, ಧಾರವಾಡ ಮನೋಹರ ಗ್ರಂಥಮಾಲಾ.
- **ರಂಗನಾಥ್ ಎಚ್.ಕೆ. (2000) :** ಕರ್ನಾಟಕ ರಂಗಭೂಮಿ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ರಾಮಕೃಷ್ಣ ಮರಾಠೆ (1994) :** ಉತ್ತರ ಕರ್ನಾಟಕದ ವೃತ್ತಿರಂಗಭೂಮಿ, ಬೆಂಗಳೂರು ಇಳಾ ಪ್ರಕಾಶನ.
- **ರಾಮನಾಥ್ ಎಚ್.ಕೆ. (1990) :** ಕನ್ನಡ ರಂಗಭೂಮಿ ವಿಕಾಸ, ಮೈಸೂರು ಅಭಿನಯ ಪ್ರಕಾಶನ.


■■

*– 9ನೇ ಪುಟದಿಂದ ಮುಂದುವರೆದುದು*

ಆರಾಧ್ಯ ಅವರು ಬಾಲ್ಯ ವಿವಾಹ ಸಂಖ್ಯೆಗಳು ಹೆಚ್ಚುತ್ತಿರುವುದು ಆತಂಕಕಾರಿಯಾಗಿದೆ ಎಂದಿದ್ದಾರೆ. ಈ ಹಿಂದೆ ಉತ್ತರ ಕರ್ನಾಟಕ ಜಿಲ್ಲೆಗಳಾದ ಯಾದಗಿರಿ, ರಾಯಚೂರು, ಬಾಗಲಕೋಟೆ ಜಿಲ್ಲೆಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚು ವರದಿಯಾಗುತ್ತಿದ್ದವು ಆದರೆ ಈಗ ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿಯೂ ವರದಿಯಾಗುತ್ತಿವೆ. ಹೀಗಾಗಿ ಕರ್ನಾಟಕ ಸರ್ಕಾರ ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದಂತೆ ಯೋಜನೆಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕಾಗಿದೆ.


## ಉಪಸಂಹಾರ

"ಕಾನೂನು ಮತ್ತು ಸುವ್ಯವಸ್ಥೆ ರಾಜಕೀಯ ಎಂಬ ದೇಹಕ್ಕೆ ಔಷಧಿ ಇದ್ದಂತೆ. ಈ ರಾಜಕೀಯ ಎಂಬ ದೇಹ ಅನಾರೋಗ್ಯಕ್ಕೆ ಒಳಗಾದರೆ ಖಂಡಿತವಾಗಿಯೂ ಔಷಧಿ ನೀಡಬೇಕಾಗುತ್ತದೆ" ಎಂಬಂತೆ ಭಾರತದ ಮುಂದಿನ ಭವಿಷ್ಯದ ರೂವಾರಿಗಳನ್ನು ಕಳ್ಳ ಸಾಗಾಣಿಕೆಯಿಂದ ತಡೆಗಟ್ಟುವಿಕೆ, ನಿರ್ಗತಿಕ ಮಕ್ಕಳ ರಕ್ಷಣೆ, ಮಕ್ಕಳ ಪಾಲನೆ–ಪೋಷಣೆ, ಉತ್ತಮ ಶಿಕ್ಷಣ ಒದಗಿಸುವಲ್ಲಿ ದಿವ್ಯೌಷಧಿ ಎಂದರೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹಮ್ಮಿಕೊಳ್ಳುತ್ತಿರುವ ಯೋಜನೆಗಳೆಂದರೆ ತಪ್ಪಾಗಲಾರದು. ಮಕ್ಕಳ ಹಕ್ಕುಗಳನ್ನು ರಕ್ಷಿಸಲು, ಅವರ ಅಭಿವೃದ್ಧಿ, ರಕ್ಷಣೆಯ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಹಲವಾರು ಯೋಜನೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಈ ನಿಟ್ಟಿನಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ನಿರ್ಗತಿಕ ಮಕ್ಕಳ ರಕ್ಷಣೆ, ಮಕ್ಕಳ ಕಳ್ಳ ಸಾಗಾಣಿಕೆ ತಡೆಗಟ್ಟುವಿಕೆ, ಮಕ್ಕಳ ಪಾಲನೆ–ಪೋಷಣೆ, ಮಕ್ಕಳ ಅಸಾಧಾರಣ ಪ್ರತಿಭೆ ಗುರ್ತಿಸಿ ಅವರಿಗೆ ಪುರಸ್ಕಾರ, ಪ್ರೋತ್ಸಾಹ ನೀಡುವ ಮೂಲಕ ಮಕ್ಕಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ.

## ಪರಾಮರ್ಶನ ಗ್ರಂಥಗಳು


- **ವಾರ್ಷಿಕ ವರದಿ – (2020–21) :** ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನದ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು 560001
- **ವಿಜಯ ಕರ್ನಾಟಕ,** 2018, 9 ಡಿಸೆಂಬರ್.
- **ಮಕ್ಕಳ ಹಕ್ಕುಗಳು ಮತ್ತು ನಾವು (2003) :** ಕೊಣಿಂಲ ರಾಘವೇಂದ್ರ ಭಟ್, ದಾವಣಗೆರೆ ಕಾರ್ಮಿಕ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ.
- **ಮಕ್ಕಳ ಉದ್ದೇಶಿತ ಆಯವ್ಯಯ 2020–21.**


■■


ವಿದ್ಯಾನಿಧಿ ಪ್ರಕಾಶನ ®

ಶ್ರೀ ಶಿವಕುಮಾರ ಏಜನ್ಸಿ ®

ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು

ಸ್ಟೇಶನ್ ರೋಡ ಮತ್ತು 'ನನಸು', ಹಳೆ ಸರಕಾರಿ ಆಸ್ಪತ್ರೆ ಎದುರಿಗೆ, ಎಸ್.ಪಿ. ಗದಗ ಕಂಪೌಂಡ,

ಜೆ.ಟಿ. ಮಠ ರೋಡ, ಗದಗ-582 101 ದೂರವಾಣಿ : 08372–200527

e-mail : vidyanidhiprakashana@gmail.com.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ‘ಕಾಡು’ ಕಾದಂಬರಿ ಮತ್ತು ಚಲನಚಿತ್ರದಲ್ಲಿ ಮಹಿಳಾ ಸಂವೇದನೆ

✍ **ಶರ್ಮಿಳಾ ವಿ.ಎನ್.**, ಕನ್ನಡ ಸಹಾಯಕ ಪ್ರಾಧ್ಯಾಪಕರು, ಮಹಿಳಾ ಸರ್ಕಾರಿ ಕಾಲೇಜು (ಸ್ವಾಯತ್ತ), ಮಂಡ್ಯ

ಶ್ರೀಕೃಷ್ಣ ಆಲನಹಳ್ಳಿಯವರ ‘ಕಾಡು’ ಕಾದಂಬರಿ ತುಂಬಾ ವಿಶಿಷ್ಟವಾದ ಕೃತಿ. ಶ್ರೀಕೃಷ್ಣ ಅವರ ಮೊದಲ ಕಾದಂಬರಿಯಾದ ಇದು ಪಾತ್ರದಲ್ಲಿ ಚಿಕ್ಕದಾದರೂ ಪ್ರಭಾವಗಳು ಮಾತ್ರ ತುಂಬಾ ಗಂಭೀರವಾಗಿಯೆ ಇವೆ.

ಕಾಡು ಕಾದಂಬರಿ ನವ್ಯ ಘಟ್ಟದ ಕಾದಂಬರಿಯಾದರೂ ಕೂಡ ಇಲ್ಲಿ ನವ್ಯದ ನಗರ ಜೀವನದ ಮಧ್ಯಮ ವರ್ಗದ ಬುದ್ಧಿವಂತ ಜನಗಳ ಚಿಂತನೆಗಳು, ಮಾನಸಿಕ ತೊಳಲಾಟಗಳು ಇಲ್ಲದೆ ಕೊಪ್ಪಲು ಮತ್ತು ಹೊಸೂರು ಎಂಬ ಗ್ರಾಮಗಳ ಈ ಎರಡು ಊರುಗಳ ನಡುವಿನ ದ್ವೇಷ, ಅಸೂಯೆಯಂತಹ ಸಮಸ್ಯೆಗಳು ಮತ್ತು ಆ ಸಮಸ್ಯೆಗಳ ಪರಿಣಾಮಗಳನ್ನು ಚಿತ್ರಿಸುತ್ತಾ ಹೋಗುತ್ತದೆ.

ಕಾಡು ಕಾದಂಬರಿಯು ಮುಖ್ಯವಾಗಿ ಕ್ರೌರ್ಯವನ್ನು ಪ್ರತಿಪಾದಿಸುತ್ತದೆ. ಆದರೆ ಈ ಕ್ರೌರ್ಯದ ಅನಾವರಣಗಳು, ಪ್ರಭಾವಗಳು, ಮುಗ್ಧ ಮಗುವಿನ ಮೇಲೆ ಬೀರುವ ಪ್ರಭಾವಗಳನ್ನು ಸಂಕೇತಿಸುತ್ತ ಹೋಗುತ್ತದೆ. ಹಳ್ಳಿಯ ಎಂಟು ವರ್ಷದ ಮುಗ್ಧ ಹುಡುಗ ಕಿಟ್ಟಿ ಎಂಬ ಚಿಕ್ಕ ಹುಡುಗನ ಮೂಲಕ ಇಡೀ ಕಾದಂಬರಿಯನ್ನು ನಾವು ನೋಡಬಹುದಾಗಿದೆ.ಇದನ್ನೇ ಜಿ.ಎಸ್.ಅಮೂರರು ಈ ರೀತಿ ಹೇಳುತ್ತಾರೆ. “ನಾಗರೀಕತೆಯ ಶೋಧದಲ್ಲಿ ಮಾನವ ಬಹುದೂರ ಬಂದಿದರೂ ಅವನ ಮೂಲ ಪ್ರವೃತ್ತಿಗಳಾದ ಕಾಮ, ದ್ವೇಷ, ಕ್ರೌರ್ಯಗಳು ಇನ್ನೂ ಆದಿಮ ಸ್ಥಿತಿಯಲ್ಲಿಯೇ ಇರುವುದು ಅವನ ಜೀವನದ ಒಂದು ದುರಂತ. ಕೊನೆಯಿಲ್ಲದ ಈ ಅವಸ್ಥೆಯನ್ನೇ ಕೊಪ್ಪಲು, ಹೊಸೂರು ಇಂಥ ಕಾಡಿನ ಮಧ್ಯದ ಗ್ರಾಮಗಳ ಪರಿಸರದಲ್ಲಿ ನಡೆಯುವ ಕ್ರಿಯೆಯ ಮೂಲಕ ಆಲನಹಳ್ಳಿ ಅಭಿನಯಿಸಿ ತೋರಿಸಿದ್ದಾರೆ. ಇಂಥ ವಸ್ತುವನ್ನು ಹೊಂದಿದ ಅವರ ಕಾದಂಬರಿಗೆ ಸಾರ್ವತ್ರಿಕತೆಯನ್ನು ಹುಡುಕಿಕೊಂಡು ಹೋಗುವ ಪ್ರಸಂಗವೇ ಬರುವುದಿಲ್ಲ”.[1]

ಕಾಡು ಕಾದಂಬರಿಯ ಉದ್ದಕ್ಕೂ ಪೂರ್ತಿ ನಾವು ದುರಂತತೆಯನ್ನೇ ಕಾಣುತ್ತೇವೆ. ಮೇಲ್ನೋಟಕ್ಕೆ ಇದು ಊರುಗಳ ನಡುವಿನ ದ್ವೇಷ ಅಸೂಯೆಯಾದರೂ ಸಹ ಅದಕ್ಕೆ ಕಾರಣಗಳು ಮಾತ್ರ ಮುಖ್ಯವಾಗಿ ಕಾಮ, ಅನೈತಿಕ ಸಂಬಂಧಗಳು ಮತ್ತು ಕೊನೆಯಲ್ಲಿ ಈ ಕಾಮಕ್ಕೆ ಬಲಿಯಾದವರು ಮುಗ್ಧ ಹೆಣ್ಣು ಮಕ್ಕಳು ಮನುಷ್ಯನ ಮೂಲ ಪ್ರವೃತ್ತಿಯಾದ ಕಾಮ, ಈ ಕಾಮಕ್ಕೆ ಪೂರಕವಾಗಿ ದ್ವೇಷ ಮತ್ತು ಹಿಂಸೆಗಳು ಪ್ರಚೋದಕ ಶಕ್ತಿಗಳಾಗಿ ದುರಂತತೆಯ ಸರಮಾಲೆಯನ್ನು ಹೊತ್ತು ತರುತ್ತವೆ ಮತ್ತು ಈ ದುರಂತಕ್ಕೆ ಬಲಿಯಾದವರೆಲ್ಲ ಹೆಣ್ಣುಮಕ್ಕಳೆ ಮತ್ತು ಮುಗ್ಧ ಬಾಲಕ ಕಿಟ್ಟಿ ಎಂದು ಹೇಳಬಹುದು. ಹಾಗಾಗಿ ಇಡೀ ಕಾದಂಬರಿಯನ್ನು ನಾವು ಮಹಿಳಾ ಪಾತ್ರಗಳನ್ನು ಮುಖ್ಯವಾಗಿಟ್ಟುಕೊಂಡು ವಿಶ್ಲೇಷಿಸಬಹುದು.

ಕಾಡು ಕಾದಂಬರಿ ಹೆಸರಿಗೆ ತಕ್ಕಂತೆ ತನ್ನ ಅರ್ಥವನ್ನು ಕಾದಂಬರಿಯುದ್ದಕ್ಕೂ ಬಿಚ್ಚಿಡುತ್ತಲೇ ಹೋಗುತ್ತದೆ. ಕಾಡಿನಲ್ಲಿರುವ ಮೃಗಗಳ ಬೇಟೆಯನ್ನು ನಾವು ಒಂದು ಗ್ರಾಮೀಣ ಜೀವನದ ಅನಕ್ಷರಸ್ಥ ಮತ್ತು ಅನಾಗರೀಕವೆನಿಸುವಂತಹ ವಾಸ್ತವಿಕತೆಯನ್ನು ಈ ಕಾಡು ಕಾದಂಬರಿಯಲ್ಲಿ ಕಾಣಬಹುದು. ಇದೊಂದು ಜಮೀನ್ದಾರಿ ಪದ್ಧತಿಯ ಕ್ರೌರ್ಯ, ದಬ್ಬಾಳಿಕೆಯನ್ನು ನಿರೂಪಿಸುವ ಕಾದಂಬರಿ. ಇಲ್ಲಿ ಹಳ್ಳಿಯ ಒಳದ್ವೇಷಗಳು, ಅಕ್ರಮ ಸಂಬಂಧಗಳು, ಕತ್ತಲ ರಾತ್ರಿಯಲ್ಲಿ ಯಾರಿಗೂ ಗೊತ್ತಾಗದ ರೀತಿಯಲ್ಲಿ ಬಿಕ್ಕಳಿಸುವ ಹೆಣ್ಣಿನ ಕಣ್ಣೀರು. ಹೀಗೆ ಎಲ್ಲವನ್ನು ನಾವು ಕಿಟ್ಟಿಯ ಕಣ್ಣುಗಳಿಂದ ನೋಡುತ್ತ ಹೋಗುತ್ತೇವೆ.

ಕೊಪ್ಪಲು ಗ್ರಾಮದ ಪ್ರತಿಷ್ಠಿತ ಗೌಡ ಚಂದ್ರೇಗೌಡರ ಪತ್ನಿ ಕಮಲಮ್ಮ. ಕಮಲಮ್ಮನಿಗೆ ಮಕ್ಕಳಿಲ್ಲದ ಕಾರಣ ಚಂದ್ರೇಗೌಡನ ಅಕ್ಕನ ಮಗನಾದ ಕಿಟ್ಟಿಯನ್ನು ಇವರು ತಂದು ಸಾಕುತ್ತಾರೆ. ರಾತ್ರಿಯಾಗುತ್ತಿದ್ದಂತೆ ಚಂದ್ರೇಗೌಡರು ಜಿರಕಿ ಜೋಡು ಮೆಟ್ಟು ಬ್ಯಾಟರಿ ಹಿಡಿದು ಎಂದಿನಂತೆ ಮನೆಯಿಂದ ಹೊರಡುತ್ತಾನೆ. ಇದನ್ನು ಬಾಗಿಲ ಮರೆಗೆ ನಿಂತು ಪ್ರತಿದಿನ ಅಳುತ್ತ ನೋಡುತ್ತ ನಿಲ್ಲುವ ಕಮಲಮ್ಮ ಇಂತ ದುಃಖದ ಬದುಕಿನಲ್ಲಿ ಆಸರೆಯಾಗಿ ನಿಂತವನು ಕಿಟ್ಟಿ. ಆದ್ದರಿಂದ ಕಮಲಮ್ಮನಿಗೆ ಸ್ವಂತ ಮಗನಲ್ಲದಿದ್ದರೂ ಕಿಟ್ಟಿಗೆ ತಾಯ್ತನದ ಭರಪೂರ ಪ್ರೀತಿಯನ್ನು ಧಾರೆಯೆರೆಯುತ್ತಾಳೆ. ಕಿಟ್ಟಿಗೂ ಕೂಡ ಕಮಲಮ್ಮನನ್ನು ಕಂಡರೆ ಅಷ್ಟೇ ಪ್ರೀತಿ.

ಇಡೀ ಕಾದಂಬರಿ ವಿವಾಹ ಬಾಹಿರ ಸಂಬಂಧಗಳ ಸರಮಾಲೆಯನ್ನು ಹೊತ್ತು ನಿಂತಿದೆ. ಆದರೆ ಈ ವಿವಾಹ ಬಾಹಿರದ ಕೆಲವು ಸಂಬಂಧಗಳಿಗೆ ಜಾತಿ, ಧರ್ಮ, ಅಂತಸ್ತುಗಳ ರಕ್ಷಣೆಯಿದ್ದರೆ ಅವುಗಳಾವು ಇಲ್ಲದ ಬಡಜನರ, ದಲಿತರ ವಿವಾಹ ಬಾಹಿರ ಸಂಬಂಧಗಳು ನ್ಯಾಯ ಪಂಚಾಯ್ತಿ ಕಟ್ಟೆಯಲ್ಲಿ ಸಿಕ್ಕಿ ನರಳುತ್ತವೆ. ಇಲ್ಲಿ ನ್ಯಾಯ ಪಂಚಾಯ್ತಿಗಿಂತಲೂ ವೈಯಕ್ತಿಕ ಪ್ರತಿಷ್ಠೆ ಮತ್ತು ಊರಿನ ಪ್ರತಿಷ್ಠೆಗಳು ಹೆಚ್ಚಾಗುತ್ತವೆ. ಗಡಿಗೆ ಸುಬ್ಬನ ಹೆಂಡತಿ ದೇವಿ ಅದೇ ಊರಿನ ಕೆಂಚನ ಜೊತೆ ಅನೈತಿಕ ಸಂಬಂಧ ಹೊಂದಿದ್ದು, ಇದು ಊರ ನ್ಯಾಯ ಕಟ್ಟೆಗೆ ತೀರ್ಮಾನಕ್ಕೆ ಬಂದಿರುತ್ತದೆ. ಇಲ್ಲಿ ಕೆಂಚನಿಗೆ ಪಕ್ಕದ ಹೊಸೂರಿನ ಶಿವಗಂಗಪ್ಪ ಬೆಂಬಲವೂ ಇರುತ್ತದೆ. ಹಾಗಾಗಿ ಇಲ್ಲಿ ದೇವಿ ಮತ್ತು ಕೆಂಚ ನ್ಯಾಯ ನೆಪ ಮಾತ್ರಕ್ಕೆ ಆಗುತ್ತಿದ್ದು, ಚಂದ್ರೇಗೌಡರಿಗೆ ಪಕ್ಕದೂರಿನ ಶಿವಗಂಗಪ್ಪನ ಮೇಲಿನ ದ್ವೇಷ, ಶಿವಗಂಗಪ್ಪನಿಗೆ ಚಂದ್ರೇಗೌಡ ತಮ್ಮೂರಿನ ವಿಧವೆ ಬಸಕ್ಕನ ಸಂಬಂಧವಿರುವುದು ತಿಳಿದಿದ್ದು, ಅದನ್ನು ಎತ್ತಿಡುವ ಚಾಳಿ ಇದರ ಮಧ್ಯೆ ಗುಡಿಯ ಅಯ್ಯನೋರು ಹೊಲೇರ ಕಾಳಿಯ ಜೊತೆ ಅನೈತಿಕ ಸಂಬಂಧ ಇಟ್ಟಕೊಂಡಿದ್ದರೂ ನ್ಯಾಯ ಪಂಚಾಯಿತಿಯಲ್ಲಿ ಸಭ್ಯಸ್ಥನಂತೆ, ಗೌರವಸ್ಥನಂತೆ “ಅಲ್ಲ ಕಣೋ ಕೆಂಚ ಮಾಡೋದು ನೋಡಿದ್ರೆ ಅಂಥ ಕೆಲಸ, ಮತ್ತೆ ಮರ್ಯಾದೆ ಮೀರಿ ಮಾತಾಡೋದೇನೋ”[2] ಎಂದು ಕೇಳುತ್ತಾರೆ ಇದನ್ನು ಕೇಳಿದ ಕಿಟ್ಟಿಗೆ ತುಂಬಾ ಸಿಟ್ಟು ಬರುತ್ತದೆ. ಏಕೆಂದರೆ ಗುಡಿಯ ಅಯ್ಯನೋರು ಮತ್ತು ಹೊಲೇರಕಾಳಿ ಕಳ್ಳಿ ಬೇಲೀಲಿ ಮಲಗಿದ್ದನ್ನು ಖುದ್ದು ಕಿಟ್ಟಿಯೇ ನೋಡಿರುತ್ತಾನೆ. ಆದ್ದರಿಂದ ಅವನಿಗೆ “ಇವತ್ತು ಕೆಂಚ–ದೇವಿ ಕಳ್ಳಿ ಬೇಲೀಲಿ ಮಲಗಿದ್ರು ಅಂತ ಅವರಿಗೆ ಹೊಡಿತಾರಲ್ಲ–ಅಯ್ನೋರು ಅಂಗೆ ಮಲಗ್ಗಿದ್ದಲ್ಲ ಅವರಿಗೂ ಯಾಕೆ ಹೊಡೀದೆ ಅವರೆ”[3] ಎಂದು ಮನಸ್ಸಿನಲ್ಲಿಯೆ ಬೈಯ್ದುಕೊಳ್ಳುತ್ತಾನೆ.

ಆದರೆ ಮುಗ್ದ ಎಳೆಯ ಬಾಲಕ ಕಿಟ್ಟಿಗೆ ಈ ವಯಸ್ಕರ ಸಂಕೀರ್ಣ ಬಾಳು, ಧರ್ಮದ ಜಾತಿಯ, ಲಿಂಗದ ಹೆಸರಿನಲ್ಲಿ ನಡೆಸುವ ಈ ಅಸಮಾನತೆಗಳು, ತಮಗೆ ಬೇಕಾದ ಹಾಗೆ ಧರ್ಮ, ಕಾನೂನು ಸಮಾಜವನ್ನು ತಿದ್ದುವ ಪುರೋಹಿತಶಾಹಿ, ಪುರುಷಪ್ರಧಾನ ಧೋರಣೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅವನ ಮುಗ್ದ ಕಣ್ಣಿಗೆ ಎಲ್ಲರೂ ಸಮಾನರು, ಎಲ್ಲರಿಗೂ ಒಂದೇ ನ್ಯಾಯ ಎಂಬ ಯೋಚನೆ. ಆದರೆ ಈ ಸಮಾಜ ಹೇಗೆ ಪ್ರಭಾವಶಾಲಿಗಳ ತೆಕ್ಕೆಗೆ ಬಿದ್ದಿದೆ ಎಂಬುದು ಅವನಿಗೆ ಅರ್ಥವಾಗುತ್ತಿಲ್ಲ. ಆದ್ದರಿಂದಲೇ ಯಾರ ಉಸಿರು, ಗಾಳಿ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸೋಕಿದರೂ ಮೈಲಿಗೆಯಾಗುತ್ತದೆ ಎನ್ನುವ ಅಯ್ನೋರು ಅದೇ ಜಾತಿಯ ಹೆಣ್ಣು ಮಗಳ ಜೊತೆ ಸಂಬಂಧವಿಟ್ಟುಕೊಂಡಾಗ ಈ ಚಾತುರ್ವರ್ಣ ಪದ್ಧತಿ ಅಡ್ಡಿಬರುವುದಿಲ್ಲ ಮತ್ತು ಮುಖ್ಯವಾಗಿ ಅದನ್ನು ಯಾರು ಪ್ರಶ್ನೆ ಮಾಡುವುದಿಲ್ಲ ಮತ್ತು ಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಕೇವಲ ಧರ್ಮ ಮತ್ತು ಜಾತಿ ಮಾತ್ರವಲ್ಲ ಇಲ್ಲಿ ಪುರುಷ ಆದ್ದರಿಂದಲೂ ಯಾರೂ ಪ್ರಶ್ನೆ ಮಾಡುವುದಿಲ್ಲ. ಇದಕ್ಕೆ ಪೂರಕವಾಗಿ ಲೇಖಕರು ಇನ್ನೊಂದು ಅನೈತಿಕ ಸಂಬಂಧದ ಘಟನೆ ಕೊಡುತ್ತಾರೆ. ಅದುವೇ ಇದೇ ಗುಡಿ ಅಯ್ಯನವರ ಮನೆಯಲಿದ್ದ ಸಾವಿತ್ರಮ್ಮ ಎಂಬ ತರುಣಿ ವಿಧವೆಯಿದ್ದು ಅವಳು ಶೂದ್ರರ ಹುಡುಗರು ಹತ್ತಿರ ಸುಳಿದರೆ ಶೂದ್ರ ಮುಂಡೇದೆ ದೂರ ಎಂತಿದ್ದವಳು. ಆ ಊರಿನ ಬಡಿಗತನದ ಕೆಲಸಕ್ಕೆ ಸೇರಿದ್ದ ಭಾಸ್ಕರ ಎಂಬುವವನ ಜೊತೆ ಸಂಬಂಧವಿರಿಸಿಕೊಂಡು ಬಸುರಿಯಾಗಿ ಎಲ್ಲರಿಗೂ ಗೊತ್ತಾಗಿ ಕೊನೆಗೆ ನೇಣು ಹಾಕಿಕೊಂಡು ಸಾಯುತ್ತಾಳೆ. ಇಲ್ಲಿ ನಾವು ಮತ್ತೇ **'ಕಾಮ'** ಎಂಬುವುದು ಮನುಷ್ಯನ ಮೂಲಭೂತ ಅವಶ್ಯಕತೆಗಳಲ್ಲಿ ಒಂದು ಎಂದು ಪರಿಭಾವಿಸಿದರೂ ಅದು ಕೇವಲ ಪುರುಷನಿಗೆ ಮಾತ್ರ ಅನ್ವಯಿಸುತ್ತದೆ. ಮತ್ತೇ ಸ್ತ್ರೀ ಇಲ್ಲಿ ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ಉಳಿದ ಇಡೀ ಜೀವನವನ್ನು ಕೇವಲ ಬತ್ತಿ ಹೊಸೆಯುತ್ತ ಲೌಕಿಕ ಆಸೆಗಳನ್ನು ತ್ಯಜಿಸುತ್ತ ಮೂಲೆಯಲ್ಲಿ ಕಳೆಯಬೇಕಾಗುತ್ತದೆ. ಒಂದು ವೇಳೆ ಇದೆಲ್ಲವನ್ನು ಮೀರಿ ತನ್ನ ಆಸೆಗಳನ್ನು ಈಡೇರಿಸಿಕೊಳ್ಳಲು ಹೊರಟವಳಿಗೆ ಕೊನೆಯಲ್ಲಿ ಇಡೀ ಸಮಾಜವನ್ನು ಎದುರಿಸಲಾರದೆ ಮಾನಸಿಕವಾಗಿ ದೈಹಿಕವಾಗಿ ಕುಗ್ಗಿ ತಾನೇ ಸಾವಿನ ಬಾಗಿಲನ್ನು ತಟ್ಟುತ್ತಾಳೆ. ಹೀಗೆ ಯಾವ ಧರ್ಮ–ಯಾವ ಸಮಾಜ ಯಾವ ದೇಶವೂ ಕೂಡ ಮಹಿಳೆಯನ್ನು ಪುರುಷನಂತೆ ಒಂದು ಜೀವಿ ಎಂದು ನೋಡಲೇ ಇಲ್ಲ. ತಾನು ಯಾವುದನ್ನು ಹತ್ತಿಕ್ಕಲು ಸಾಧ್ಯವಿಲ್ಲವೋ ತಾನು ಏನನ್ನು ಮಾಡಲು ಸಾಧ್ಯವಿಲ್ಲವೋ ಅದೆಲ್ಲವೂ ಹೆಣ್ಣು ಮಾಡಬೇಕು ಎಂದು ಅದಕ್ಕೆ ಧರ್ಮ ಸಂಸ್ಕೃತಿಯ ಹೆಸರನ್ನು ಕೊಟ್ಟು ಅವಳನ್ನು ಬಂಧಿಸಿದ್ದಾರೆ.

ಹಾಗೆ ಕಿಟ್ಟಿಯ ಗೆಳತಿ ನಾಗಿಯ ಚಿಕ್ಕವ್ವನಿಗೆ ಅವಳ ಗಂಡ ದಿನಾಲು ಹೊಡೆದು ಬಡಿಯುತ್ತಿದ್ದ. ಒಂದು ದಿನ ಆಕೆ ಅವರ ಹಟ್ಟಿ ಆಳು ಹನುಮನ ಜೊತೆ ಓಡಿ ಹೋಗುತ್ತಾಳೆ. ಕಿಟ್ಟಿ ಮತ್ತು ನಾಗಿ ಇಬ್ಬರೂ ಕೂಡ ನಾಗಿಯ ಅಪ್ಪ ದಿನಾಲೂ ಬಂದು ಹೊಡೆಯುತ್ತಿದ್ದುದ್ದರಿಂದ ಅವಳು ಹೊರಟು ಹೋಗಿದ್ದಾಳೆ ಎಂದುಕೊಳ್ಳುತ್ತಾರೆ ಮತ್ತು ಕರುಣಾಮೂರ್ತಿಯಾದ ಕಮಲಮ್ಮ ಕೂಡ ಅವಳನ್ನು ಬೈಯ್ದಿದ್ದು ಕಿಟ್ಟಿಗೆ ಆಶ್ಚರ್ಯ ತರುತ್ತದೆ. ಆದರೆ ಜೊತೆಗೆ ಚಂದ್ರೇಗೌಡ ತುಂಬಾ ಸಲೀಸಾಗಿ **"ಕುಲಗೆಟ್ಟ ರಂಡೆ ಪೋದ್ರೆ ಹೋದ್ಲು ಬುಡಣ್ಣ, ಇನ್ನೊಬ್ಬಳು ಬತ್ತಾಳೆ"**[4] ಎಂದು ಹೇಳುತ್ತಾರೆ. ಅಂದರೆ ಈ ಯಜಮಾನ್ಯ ಪುರುಷ ಅಧಿಪತ್ಯವನ್ನು ಪ್ರತಿನಿಧಿಸುವ ಚಂದ್ರೇಗೌಡರಂತಹವರಿಗೆ ಹೆಣ್ಣು ಮಕ್ಕಳು ಎಂದರೆ ಯಾವುದೇ ಭಾವನೆಗಳು, ಸಂವೇದನೆಗಳಿಲ್ಲದ ವಸ್ತುಗಳಿದ್ದಂತೆ ಮತ್ತು ಹೆಣ್ಣು ಮಕ್ಕಳು ಇರುವುದೇ ಪುರುಷರ ಅಗತ್ಯ ಮತ್ತು ಆಸೆಗಳನ್ನು ಈಡೇರಿಸುವುದಕ್ಕಾಗಿ ಎಂಬ ಧೋರಣೆ. ಏಕೆಂದರೆ ಮನೆಯಲ್ಲಿ ಮಮತೆಯ ಮೂರ್ತಿ, ಸದ್ಗೃಹಿಣಿಯಾಗಿರುವಂತಹ ಕಮಲಮ್ಮಂತಹವಳನ್ನು ಬಿಟ್ಟು ಹೊಸೂರಿನ ವಿಧವೆ ಬಸಕ್ಕನ ಬಳಿ ಹೋಗುವುದು, ಮತ್ತು ಬೇರೆಯವರ ಅನೈತಿಕ ಸಂಬಂಧದ ಬಗ್ಗೆ ನ್ಯಾಯ ಪಂಚಾಯ್ತಿ ಮಾಡುವುದು. ಹೀಗೆ ಈ ಎಲ್ಲಾ ಸಂದರ್ಭಗಳಲ್ಲೂ ಆತ್ಮಸಾಕ್ಷಿಯೇ ಇಲ್ಲದಂತೆ ಕ್ರೂರ ಮೃಗವಾಗಿ ನಡೆದುಕೊಳ್ಳುತ್ತಾನೆ ಚಂದ್ರೇಗೌಡ.

ಮತ್ತು ಈ ಎಲ್ಲಾ ಸಂಬಂಧಗಳನ್ನು ಅವಲೋಕಿಸಿ ನೋಡಿದಾಗ ಮೇಲ್ವರ್ಗದ ಪುರುಷರು ಅಥವಾ ಮಹಿಳೆಯರು ಈ ಅನೈತಿಕ ಸಂಬಂಧ ಬೆಳೆಸುವುದು ಕೆಳವರ್ಗದ ಪುರುಷ ಅಥವಾ ಮಹಿಳೆಯರ ಜೊತೆ ಎಂಬುದು (ಎಲ್ಲ ಸಂದರ್ಭಗಳಲ್ಲೂ ಅಲ್ಲ) ತಿಳಿಯುತ್ತದೆ.

ಹೆಣ್ಣು ಕೇವಲ ದೌರ್ಜನ್ಯ ಮಾತ್ರ ಅನುಭವಿಸುವುದಿಲ್ಲ. ಅವಳು ತುಂಬಾ ಅಸಹಾಯಕಳಾಗಿರುತ್ತಾಳೆ ಎಂಬುದಕ್ಕೆ ಕಾದಂಬರಿಯಲ್ಲಿ ಸಿಗುವ ಬಸಕ್ಕ ಮತ್ತು ಕಮಲಮ್ಮನ ಭೇಟಿ ಸಾಕ್ಷಿಯಾಗುತ್ತದೆ. ದಿನಾಲು ರಾತ್ರಿ ಗಂಡ ತನ್ನ ಬಿಟ್ಟು ಹೊಸೂರಿನ ಬಸಕ್ಕನ ಬಳಿ ಹೋಗುತ್ತಾನೆ ಎಂಬ ಕೊರಗಿನಿಂದ ಕಣ್ಣೀರು ಸುರಿಸುವ ಮತ್ತು ಗಂಡ ಮತ್ತೇ ವಾಪಸ್ಸು ಬರಲಿ ಎಂದು ಮಾಟ ಮಂತ್ರ ಪೂಜೆ ಮಾಡಿಸುವ ಕಮಲಮ್ಮನು ಓಕಳಿಗೆ ಹೊರಟಾಗ ಬಸಕ್ಕನ ಮನೆ ಮುಂದೆ ಗಾಡಿ ನಿಂತಾಗ ಬಸಕ್ಕನೇ ಖುದ್ದು ಬಂದು ಗಾಡಿ ನಿಲ್ಲಿಸಿ ಕಮಲಮ್ಮ ಮತ್ತು ಕಿಟ್ಟಿಯನ್ನು ಮನೆಗೆ ಕರೆದುಕೊಂಡು ಹೋಗುತ್ತಾಳೆ ಮತ್ತು ಕಮಲಮ್ಮ ಏನನ್ನು ಮುಖದಲ್ಲಿ ತೋರಿಸಿಕೊಡದೆ ನಗುನಗುತ್ತಾ ಬಸಕ್ಕನ ಜೊತೆ ಮಾತನಾಡುವುದನ್ನು ಕಂಡ ಕಿಟ್ಟಿಗೆ ತುಂಬಾ ಆಶ್ಚರ್ಯವಾಗುತ್ತದೆ. ಇಲ್ಲಿ ಕಮಲಮ್ಮನ ಅಸಹಾಯಕತೆ ಗಂಡ ಚಂದ್ರೇಗೌಡರ ಮೇಲಿನ ಪ್ರೀತಿ, ಅವಳ ತಾಯ್ತನದ ಗುಣ ಎದ್ದು ಕಾಣುತ್ತದೆ. ಅದೇ ರೀತಿ ಬಸಕ್ಕ ಕೂಡ ಇಲ್ಲಿ ಕರುಣೆಗೆ ಪಾತ್ರಳಾಗಿ ಬಿಡುತ್ತಾಳೆ. ಅವಳ ವಿಧವೆಯ ಯಾವ ಸಂದರ್ಭ ಅವಳನ್ನು ಈ ಪರಿಸ್ಥಿತಿಗೆ ತಂದು ನಿಲ್ಲಿಸಿದೆಯೇ ಎಂಬ ಆಲೋಚನೆ ಹಾಗೆ ಬಂದು ಹೋಗುತ್ತದೆ. ಹಾಗಾಗಿ ಇಲ್ಲಿ ಹೆಣ್ಣು ಮಕ್ಕಳ ಅಸಹಾಯಕತೆಯ ಸ್ಥಿತಿ ಮತ್ತು ಗಂಡಸರ ದರ್ಪ ದಬ್ಬಾಳಿಕೆಗಳು ಇನ್ನಷ್ಟು ಚಿಂತಿಸುವಂತೆ ಮಾಡುತ್ತವೆ.

ಕೊನೆಯಲ್ಲಿ ಓಕುಳಿ ಆಟ ಕೊಪ್ಪಲು, ಹೊಸೂರಿನ ಜನರ ನಡುವೆ ಶುರುವಾಗುತ್ತದೆ. ಆದರೆ ಇದು ಕೇವಲ ಓಕುಳಿಯಾಟವಾಗದೆ ಚಂದ್ರೇಗೌಡ ಮತ್ತು ಶಿವಗಂಗರ ವೈಯಕ್ತಿಕ ದ್ವೇಷ ಮತ್ತು ಕೊಪ್ಪಲು ಮತ್ತು ಹೊಸೂರಿನ ನಡುವಿನ ದ್ವೇಷವಾಗಿತ್ತು. ಆಟದ ಕೊನೆಯಲ್ಲಿ ಹೊಸೂರು ಚೆನ್ನ ತಗಡಿನ ಅಂಚು ಕಟ್ಟಿದ್ದ ತನ್ನ ಹಂಡೆಯಿಂದ ಚಂದ್ರೇಗೌಡರಿಗೆ ಚರ್ಮ ಕಿತ್ತು ಬರುವ ರೀತಿ ತಿವಿದು ಬಿಡುತ್ತಾನೆ. ನಂತರ ಹೊಸೂರು ಚೆನ್ನನಿಗೆ ಕೊಪ್ಪಲು ಜನ ಸೇರಿ ಹೊಡೆಯುತ್ತಾರೆ. ಆಗ ಹೊಸೂರು ಶಿವಗಂಗ ಪೊಲೀಸ್ ಕಂಪ್ಲೇಟ್ ಕೊಡುತ್ತಾನೆ. ಪೊಲೀಸರು ಬಂದು ಚಂದ್ರೇಗೌಡನನ್ನು ಪೊಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗುತ್ತಾರೆ. ಈ ಸಂದರ್ಭದಲ್ಲಿ ರಾತ್ರಿ ಕಮಲಮ್ಮ ಕಿಟ್ಟಿ ಮತ್ತು ನಾಗಿಯನ್ನು ಕರೆದುಕೊಂಡು ದೇವಸ್ಥಾನಕ್ಕೆ ಬರುತ್ತಾರೆ. ಆಗ ಹೊಸೂರಿನ ನಾಲ್ಕೈದು ಜನ ಬಂದು ಕಮಲಮ್ಮನನ್ನು ಎಳೆದಾಡಿ ಬಾಯಿ ಮುಚ್ಚಿಸಿ ಅವರ ಮೇಲೆ ಅತ್ಯಚಾರ ನಡೆಸುತ್ತಾರೆ. ಉಳಿದ ದಾಂಡಿಗರು ನಾಗಿ ಮತ್ತು ಕಿಟ್ಟಿಯನ್ನು ದೂರಕ್ಕೆ ಕರೆದುಕೊಂಡು ಹೋಗಿರುತ್ತಾರೆ.

ಹೀಗೆ ಗಂಡಸರು ಗಂಡಸರು ನಡುವೆ ನಡೆಯುವ ದ್ವೇಷ, ಅಸೂಯೆ, ಜನಗಳಿಗೆ ಕೊನೆಗೆ ಬಲಿಯಾಗುವುದು ಹೆಣ್ಣು ಎಂಬುದು ನಿಜಕ್ಕೂ ವಿಪರ್ಯಾಸ ಯಾವ ತಪ್ಪನ್ನು ಮಾಡದ, ಎಲ್ಲರನ್ನು ಪ್ರೀತಿಸುವ ಕಮಲಮ್ಮ ಇಲ್ಲಿ ಕೊಪ್ಪಲು ಮತ್ತು ಹೊಸೂರಿನ ಒಳಜನಗಳಿಗೆ ಬಲಿಯಾಗುತ್ತಾಳೆ. ಈ ಕಾಮದ ಕಿಚ್ಚಿನಲ್ಲಿ ಬೆಂದು ಸುಟ್ಟುಹೋಗುತ್ತಾಳೆ. ನಂತರ ಚಂದ್ರೇಗೌಡರು ಬಂದು ಅಳುತ್ತಾರೆ. ಅಂದು ಮಚ್ಚು ಹಿಡಿದು ಅಲ್ಲೆಯಿದ್ದ ಟಗರನ್ನು ಕತ್ತರಿಸುತ್ತಾರೆ. ಇದನ್ನು ನೋಡಿದ ಕಿಟ್ಟಿ ಮೂರ್ಛೆ ತಪ್ಪುತ್ತಾನೆ. ನಂತರ ಕಿಟ್ಟಿಯ ಅತ್ತೆ ಕಮಲಮ್ಮ ನರಳಿ ಸಾಯುತ್ತಾರೆ. ಚಂದ್ರೇಗೌಡರು ಹೊಸೂರಿಗೆ ಹೋಗಿ ಅಲ್ಲಿ ಜನರ ಬಲಿ ತೆಗೆದು ವಾಪಸ್ ಬರುತ್ತಾರೆ.

ಹೀಗೆ ಕಿಟ್ಟಿ ಕೊನೆಯಲ್ಲಿ ತಾನು ಬಂದಾಗಿನಿಂದ ಇಲ್ಲಿಯವರೆಗಿನ ಎಲ್ಲ ಘಟನೆಗಳನ್ನು ನೆನಪಿಸಿಕೊಂಡು ಇಲ್ಲಿಂದ ತಮ್ಮೂರಿಗೆ ಹೋಗಬೇಕು ಎಂದು ತನ್ನ ಅವ್ವ ಅಜ್ಜಿಯನ್ನು ಕಾಯುತ್ತ ಕುಳಿತುಕೊಳ್ಳುತ್ತಾನೆ.

ಹೀಗೆ ಕಾಡು ಕಾದಂಬರಿಯಲ್ಲಿ ಕಾಡಿನ ಚಿತ್ರಣ ಎಲ್ಲೂ ಬರದಿದ್ದರೂ ಕೂಡ ಕಾಡಿನಲ್ಲಿರುವ ಮೃಗೀಯ ವರ್ತನೆಯನ್ನು ಈ ಎರಡೂ ಊರಿನ ಜನರಲ್ಲಿ ಕಾಣಬಹುದು. ಹೆಣ್ಣು, ಹೊನ್ನು, ಮಣ್ಣಿಗಾಗಿ ಕಾದಾಡುತ್ತಾರೆ. ಇದಕ್ಕಾಗಿ ರಕ್ತ ಸುರಿಸುತ್ತಾರೆ. ಕೆಟ್ಟ ರಾಜಕೀಯ ಮಾಡುತ್ತಾರೆ. ಮೂಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರಾಣಿ ಗೌರಿಯೆಂಬ ಕಡಸು ಪ್ರಾಣಿಯನ್ನು ಸಿಡಿ ಮದ್ದಿಲನ್ನು ಆಹಾರ ಎಂದು ತಿನ್ನೋಲು ಹೋಗಿ ಅದು ಬಾಯಲ್ಲೇ ಸಿಡಿದು ಕೆಳಭಾಗ ಕಳಚಿ ಮುದ್ದೆಯಾಗಿ ಸಾಯಲೂ ಆಗದೆ ಬದುಕಲೂ ಹಾಗದೇ ನರಳುವ ಸ್ಥಿತಿಗೆ ತರುತ್ತಾರೆ. ದ್ವೇಷಕ್ಕಾಗಿ ತಿನ್ನಲು ರಾಗಿ ಮೆದೆಗೆ ಬೆಂಕಿ ಹಚ್ಚುವುದು ಕೊನೆಗೆ ಕ್ರೌರ್ಯದ ಪರಮಾವಧಿ ಕಮಲಮ್ಮನ ಮೇಲೆ ಅತ್ಯಾಚಾರ ಇವುಗಳೆಲ್ಲವನ್ನು ಮೃಗಗಳು ಮಾಡುತ್ತವೆ ಹೊರತು ಮಾನವೀಯ ಮನುಷ್ಯರು ಮಾಡಲು ಸಾಧ್ಯವಿಲ್ಲ. ದುರಂತವೆಂದರೆ ಈ ಎಲ್ಲದಕ್ಕೂ ಬಲಿಪಶುವಾಗುವುದು ಹೆಣ್ಣು ಮಕ್ಕಳು ಎಂಬುದು ಇಂದು 21ನೇ ಶತಮಾನದಲ್ಲಿಯೂ ನಾವು ಯಾವುದೇ ರೀತಿಯ ಜಾಗತೀಕ ಪರಿಸ್ಥಿತಿಗಳಿರಲಿ ಅದರ ಕೊನೆಯ ಪರಿಣಾಮ ಮಾತ್ರ ಹೆಣ್ಣು ಮಕ್ಕಳ ಮೇಲೆ ಎಂಬುದು ನಿಜಕ್ಕೂ ದುಃಖದ ಸಂಗತಿ ಆಗಿದೆ.

ಆದರೆ ಇಲ್ಲಿ ಎಷ್ಟೇ ಘಟನೆಗಳೂ ನಡೆದರು ಎಲ್ಲೂ ಕೂಡ ಲೇಖಕರು ಭಾವವೇಷಕ್ಕೆ ಒಳಗಾಗಿಲ್ಲ. ಇದು ಹಳ್ಳಿಗಳಲ್ಲಿ ಸಹಜವೆಂಬಂತೆ ಚಿತ್ರಿಸಿರುತ್ತಾರೆ.

"ಕೃಷ್ಣರ ಕಾಡು ಕಾದಂಬರಿಯು ಅದರ ಕಥಾನಾಯಕ ಕಿಟ್ಟಿ ಎಂಬ ಸಣ್ಣ ಹುಡುಗನ ಮೂಲಕ ನಿರೂಪಿತವಾಗಿದೆ. ತನ್ನ ಸುತ್ತಲಿನ ಪ್ರಪಂಚದಲ್ಲಿ ನಡೆಯುವ ಕ್ರೌರ್ಯ ಕಿಟ್ಟಿಯ ಅನುಭವ ಲೋಕವನ್ನು ಪ್ರವೇಶಿಸುವ ಬಗ್ಗೆ ಇದರಿಂದಾಗಿ ಅವನ ಅರಿವಲ್ಲಿ ಮೂಡುವ ಸಮಾಜ ವ್ಯಕ್ತಿಗಳ ನಡುವಿನ ಸಂಬಂಧದ ತೊಡಕುಗಳು ಅತ್ಯಂತ ಚಿತ್ರವತ್ತಾಗಿ ನಿರುದ್ವೇಗದಿಂದ ಇಲ್ಲಿ ಚಿತ್ರಿತವಾಗಿದೆ"[5].

## ಕಾಡು ಸಿನಿಮಾ

20ನೇ ಶತಮಾನದ ಅದ್ಭುತ ಆವಿಷ್ಕಾರವಾದ ಚಲನಚಿತ್ರ ಇಂದು ಬಹುಮುಖ್ಯವಾದ ಮನರಂಜನೆಯ ಪಾತ್ರವನ್ನು ನಿರ್ವಹಿಸುತ್ತಿದೆ. ಸುಮಾರು 75 ವರ್ಷಗಳಿಂದಲೂ ಕನ್ನಡ ಚಲನಚಿತ್ರರಂಗ ತುಂಬಾ ಸೃಜನಾತ್ಮಕವಾಗಿ, ಕಲಾತ್ಮಕವಾಗಿ, ಕ್ರಿಯಾತ್ಮಕವಾಗಿದ್ದು, ಜಾಗತಿಕ ಚಿತ್ರೋದ್ಯಮಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಇಂದು ಕನ್ನಡ ವ್ಯಾಪಾರಿ ಚಲನಚಿತ್ರ, ಕಲಾತ್ಮಕ ಚಲನಚಿತ್ರ... ಹೀಗೆ ಎಲ್ಲ ರೀತಿಯ ಚಲನಚಿತ್ರಗಳು ಕನ್ನಡದಲ್ಲಿ ಬಂದಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮನ್ನಣೆ ಪಡೆಯುವ ಮತ್ತು ಜಾಗತೀಕ ಪ್ರಪಂಚದಲ್ಲಿ ಕನ್ನಡದ ಹೆಸರನ್ನು ಚಿರಸ್ಥಾಯಿಗೊಳಿಸುವ ಹಾಗೆ ಶ್ರೇಷ್ಠ ನಟರು, ನಿರ್ದೇಶಕರು, ತಂತ್ರಜ್ಞಾನರು ಕನ್ನಡ ಚಲನಚಿತ್ರಗಳಲ್ಲಿರುವುದು ಕನ್ನಡಕ್ಕೆ ಹೆಮ್ಮೆಯ ವಿಷಯವಾಗಿದೆ.

ಹೀಗೆ 1972 ರಲ್ಲಿ ರಾಷ್ಟ್ರೀಯಮಟ್ಟದಲ್ಲಿ ಹೆಮ್ಮೆ ಖ್ಯಾತಿಯನ್ನು ತಂದುಕೊಟ್ಟ ಕನ್ನಡ ಚಲನ ಚಿತ್ರವೆಂದರೆ ಶ್ರೀಕೃಷ್ಣ ಆಲನಹಳ್ಳಿಯವರ ಕಾಡು ಕಾದಂಬರಿಯಾಧರಿತ ಚಲನಚಿತ್ರ "ಕಾಡು ಸಿನಿಮಾ" ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡ್ ನಿರ್ದೇಶಿಸಿದ್ದು, ಈ ಸಿನಿಮಾ ಮೂರು ರಾಷ್ಟ್ರಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಗೋವಿಂದ್ ನಿಹಲಾನಿಯವರ ಛಾಯಚಿತ್ರಗ್ರಹಣ ಮತ್ತು ಬಿ.ವಿ.ಕಾರಂತರ ಸಂಗೀತವನ್ನು ಹೊಂದಿರುವ ಈ ಚಿತ್ರದಲ್ಲಿ ಹಿಂದಿಯ ಪ್ರಖ್ಯಾತ ನಟ–ಅಮರೇಶ್‌ಪುರಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ನಂದಿನಿ ಭಕ್ತವತ್ಸಲ (ಖ್ಯಾತ ನಿರ್ದೇಶಕ ಭಕ್ತವತ್ಸಲರ ಮಗಳು) ಮತ್ತು ಮಾ॥ ನಟರಾಜ್ ಕಾದಂಬರಿಯ ಕೇಂದ್ರ ಪಾತ್ರಗಳಾದ ಕಮಲಮ್ಮ ಮತ್ತು ಕಿಟ್ಟಿಯ ಪಾತ್ರದಲ್ಲಿ ಅದ್ಭುತವಾಗಿ ನಟಿಸಿ ಇಬ್ಬರೂ ಕೂಡ ಕ್ರಮವಾಗಿ ಅತ್ಯುತ್ತಮ ನಟಿ ಮತ್ತು ಅತ್ಯುತ್ತಮ ಬಾಲನಟಿ–ರಾಷ್ಟ್ರಪ್ರಶಸ್ತಿ ಪಡೆದಿದ್ದಾರೆ.ಇದೊಂದು 'ಎ' ಸರ್ಟಿಫಿಕೆಟ್ ಚಿತ್ರವಾಗಿದ್ದರೂ ಎಲ್ಲಿಯೂ ಅಶ್ಲೀಲ ಅತಿರೇಕದ ದೃಶ್ಯಗಳು ಕಾಣುವುದಿಲ್ಲ.

ಸಿನಿಮಾ ಶುರುವಾಗುವುದೇ ಚಂದ್ರೇಗೌಡ ಚಪ್ಪಲಿ ಹಾಕಿ ಬ್ಯಾಟರಿ ಹಿಡಿದು ರಾತ್ರಿ ಮನೆಯಿಂದ ಹೊರಡುವ ದೃಶ್ಯದಿಂದ ಮತ್ತು ಕಮಲಮ್ಮನ ದುಃಖದಿಂದ ಆಗ ಕಮಲಕ್ಕ ಕಿಟ್ಟಿ, ಕೆಲಸದಾಳು ಮತ್ತು ನಾಯಿ ಮೊಣ್ಣನ ಜೊತೆ ಕೆರೆಕೋಡಿಯಲ್ಲಿರುವ ದೇವಸ್ಥಾನಕ್ಕೆ ಹೋಗುತ್ತಾಳೆ. ಅಲ್ಲಿ ಕೋಳಿಯನ್ನು ಬಲಿಕೊಟ್ಟು ಚಂದ್ರೇಗೌಡನು ಹೊಸೂರಿನ ಬಸಕ್ಕನ ಮನೆಗೆ ಹೋಗದಿರಲಿ ಎಂದು ಮಾಟ ಮಂತ್ರ ಮಾಡಿಸಿ ಬರುತ್ತಾರೆ. ಕೋಳಿ ಬಲಿ ಕೊಡುವ ದೃಶ್ಯ–ಬಾಲಕ ಕಿಟ್ಟಿಯ ಮೇಲೆ ಪ್ರಭಾವ ಬೀರುವ ಮೊದಲನೇಯ ಕ್ರೌರ್ಯದ ದೃಶ್ಯವಾಗಿದೆ.

ಇಲ್ಲಿಯು ಕಮಲಕ್ಕ ಮಮತಾಮೂರ್ತಿ, ಆಳುಗಳನ್ನು ಚೆನ್ನಾಗಿ ನೋಡಿಕೊಳ್ಳುವ ತಾಯ್ತನ. ತನಗೆ ಮಕ್ಕಳಿಲ್ಲದಿದ್ದರೂ ಗಂಡನ ಅಕ್ಕನ ಮಗ ಕಿಟ್ಟಿಯನ್ನು ಹೆತ್ತ ಮಗನಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳುವ ತಾಯಿ ಅದೇ ರೀತಿ ಗಂಡ ತನ್ನ ಬಳಿಯಲ್ಲಿಯೇ ಇರಲಿ ಎಂಬ ಆಸೆಯಿಂದ ಮಾಟ–ಮಂತ್ರ ಮಾಡಿಸುವುದು ದಿನಾಲು ಚಂದ್ರೇಗೌಡ ರಾತ್ರಿ ಹೊರಗೆ ಹೋದಾಗ ಅಳುವುದು ಇದು ಅವಳ ದಿನಚರಿ. ಈ ಅಳುವಿನ ಕಾರಣ ಮಾತ್ರ ಕಿಟ್ಟಿಗೆ ಗೊತ್ತಾಗುವುದಿಲ್ಲ. ಕಿಟ್ಟಿ ತುಂಬಾ ಮುಗ್ದನಾದರೂ ಕುತೂಹಲವಿರುವ ಹುಡುಗ ಆತ ಮತ್ತು ನಾಗಿ ಸ್ಕೂಲಿನಿಂದ ಬಿಡುವಾಗ ಅವರ ಆಟ ಓಟ, ಜೀವನೋತ್ಸಾಹಗಳು ಸಂತೋಷವನ್ನು ತರುತ್ತವೆ.

ಇಡೀ ಸಿನಿಮಾಕ್ಕೆ ಹೊಸ ತಿರುವು ಬರುವುದು ಒಂದು ರಾತ್ರಿ ನಡೆದ ನ್ಯಾಯ ಪಂಚಾಯ್ತಿಯಲ್ಲಿ. ಆ ರಾತ್ರಿ ಊರಿನವರೆಲ್ಲ ಸೇರಿ ಪಂಚಾಯ್ತಿ ನಡೆಸುತ್ತಾರೆ. ವಿಷಯ ಗಡಿಗೆ ಸುಬ್ಬನ ಹೆಂಡತಿ ದೇವಿ ಕೆಂಚ ಎಂಬುವವನ ಜೊತೆ ಸಂಬಂಧವಿಟ್ಟುಕೊಂಡಿದ್ದಾಳೆ ಎಂಬುದು ಇದು ಗಡಿಗೆ ಸುಬ್ಬ ನ್ಯಾಯಾಧೀಶರ ಮುಂದೆ ಹೇಳುತ್ತಿದ್ದಾನೆ. ದೇವಿಯನ್ನು ನ್ಯಾಯಾದಲ್ಲಿರುವವರು ಕೇಳುತ್ತಾರೆ. ಆದರೆ ಆಕೆ ಏನ್ನನೂ ಹೇಳುವುದಿಲ್ಲ.

ಇಡೀ ನ್ಯಾಯ ಪಂಚಾಯ್ತಿ ಕಟ್ಟೆಯ ದೃಶ್ಯವನ್ನು ವಿಶ್ಲೇಷಿಸುವುದಾದರೆ ಇಲ್ಲಿ ನ್ಯಾಯ ಸೇರಿರುವ ಉದ್ದೇಶವಾದರೂ ಏನು ? ದೇವಿ ಮತ್ತು ಕೆಂಚನ ನಡುವೆ ಅನೈತಿಕ ಸಂಬಂಧವಿದೆ ಎನ್ನುವುದಾದರೆ ಇಲ್ಲಿ ಯಾರ ತಪ್ಪು ಒಪ್ಪುಗಳನ್ನು ಚರ್ಚೆ ಮಾಡುವುದೇ ? ಏಕೆಂದರೆ ಇದು ಅತ್ಯಾಚಾರವಲ್ಲ. ಈ ಸಂಬಂಧಕ್ಕೆ ಇಬ್ಬರ ಸಮ್ಮತಿ ಇದೆ. ಹಾಗಾಗಿ ಯಾರ ತಪ್ಪುಗಳು ಕಂಡುಬರುವುದಿಲ್ಲ. ಒಂದು ವೇಳೆ ಸೀರೆ ಆಸೆಗಾಗಿಯೇ ದೇವಿ ಕೆಂಚನ ಹಿಂದೆ ಹೋಗಿದ್ದರೆ ಅವಳ ತಪ್ಪನ್ನು ಮನ್ನಿಸಿ ಗಡಿಗೆ ಸುಬ್ಬ ಮತ್ತೇ ತನ್ನ ಮನೆ–ಮನದೊಳಗೆ ದೇವಿಯನ್ನು ಸೇರಿಸಿಕೊಳ್ಳುವನೇ? ಅಥವಾ ದೇವಿಯೇ ಅವನ ಹಿಂದೆ ಹೋಗಿದ್ದರೆ ಅವರನ್ನು ಒಟ್ಟಿಗೆ ಬಾಳಲು ಬಿಡುತ್ತಾರೆಯೇ ಕೊನೆಯಲ್ಲಿ ಪಂಚಾಯ್ತಿ ಕಟ್ಟೆ ಕೆಂಚನಿಗೆ ದಂಡಕಟ್ಟಲು ಹೇಳುತ್ತಾರೆ. ದಂಡ ಕಟ್ಟಿದರೆ ಸಮಸ್ಯೆ ಬಗೆಹರಿಯುತ್ತದೆಯೇ? ಹಾಗಿದ್ದರೆ ಮತ್ತೇ ಮತ್ತೆ ದಂಡ ಕಟ್ಟಿ ದೇವಿ ಕೆಂಚ ಸೇರಬಹುದೇ ಯಾವುದನ್ನು ಯಾವುದರ ಮಾಪನದಿಂದ ಅಳೆಯುವುದು. ಕೇವಲ ದಂಡವೊಂದೇ ಪರಿಹಾರವೇ? ಇದು ಮನಸ್ಸು ದೇಹಗಳಿಗೆ ಸಂಬಂಧಿಸಿದ್ದು, ಇದರ ತೀರ್ಮಾನವನ್ನು ಯಾರು ತೆಗೆದುಕೊಳ್ಳಬೇಕು, ಯಾರು ತೀರ್ಮಾನಿಸಬೇಕು, ಚಿಂತಿಸಬೇಕು ಎಂಬುದರ ಬಗ್ಗೆ ಇಲ್ಲಿ ಯಾರೂ ಕೂಡ ಚಿಂತಿಸುವುದಿಲ್ಲ. ಹಾಗಿದ್ದರೆ ಕೊನೆಯಲ್ಲಿ ಈ ನ್ಯಾಯ ಪಂಚಾಯ್ತಿ ಕಟ್ಟೆಯು ತೀರ್ಪಾದರೂ ಏನಾಗುತ್ತಿತ್ತು ಮತ್ತು ಇಲ್ಲಿ ನಡೆದ ಸಂಭಾಷಣೆಯನ್ನು ಗಮನಿಸದಾಗಲೂ ಕೂಡ ಹೆಣ್ಣು ಪರಪುರುಷನ ಬಳಿಗೆ ಹೋಗುವುದು ಕಾಸಿನಾಸೆಗೆ ಎಂತಲೂ ಜೊತೆಗೆ ಸ್ವತಃ ದೇವಿಯೇ ಸೀರೆ ಆಸೆಗೆ ಹೋದೆ ಎನ್ನುವುದು ಎಷ್ಟರಮಟ್ಟಿಗಿನ ಸತ್ಯ. ಕಾಸು ಮತ್ತು ಸೀರೆಯೆಂಬ ಕ್ಷುಲಕ ಕಾರಣಗಳಿಗಾಗಿ ಮಹಿಳೆ ತನ್ನ ಶೀಲ ಹಾಳು ಮಾಡಿಕೊಳ್ಳುವಳೇ ಅಥವಾ ಇದಕ್ಕಿಂತ ಬೇರೆ ಯಾರಲ್ಲೂ ಹೇಳಿಕೊಳ್ಳಲಾಗದ ಸಮಸ್ಯೆಗಳಿವೆಯೇ ಎಂಬುದು ಚಿಂತಿಸಬೇಕಾದ ವಿಷಯ ಮತ್ತು ಯಜಮಾನ್ಯ ಸಂಸ್ಕೃತಿಯ ಚಂದ್ರೇಗೌಡ ಮತ್ತು ಶಿವಗಂಗನ

*– 66ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಅಮೀನಪುರದ ಸಂತೆ : ಗ್ರಾಮ್ಯ ನೆಲೆಯ ಚಹರೆಗಳು

✍ **ಡಾ. ಅಂದಯ್ಯ ಅರವಟಗಿಮಠ,** ಕನ್ನಡ ಉಪನ್ಯಾಸಕರು, ಕೆ.ಎಲ್.ಇ. ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಗದಗ

ವಸಾಹತುಶಾಹಿಯ ಪ್ರವೇಶದಿಂದಾಗಿ ಕನ್ನಡಕ್ಕೆ ಪ್ರವೇಶ ಪಡೆದ ಸಾಹಿತ್ಯದ ಅನೇಕ ಪ್ರಕಾರಗಳು ಇಪ್ಪತ್ತನೇಯ ಶತಮಾನದಂಚಿಗೆ ಹೊಸಹಾದಿಯ ಹುಡುಕಾಟದಲ್ಲಿದ್ದವು. ಇವುಗಳಲ್ಲಿ ಸಣ್ಣಕತೆಗಳು ಮೊದಲು ಹೊಸಹಾದಿ ಕಂಡುಕೊಂಡವು. ಪೂರ್ಣಚಂದ್ರ ತೇಜಸ್ವಿಯವರು ಹೊಸದಿಗಂತದತ್ತ ತೋರಿದ ಹಾದಿ 1970ರ ದಶಕದ ಅಂತ್ಯಕ್ಕೆ ಬಂಡಾಯದ ಕಥೆಗಳ ಹುಟ್ಟಿಗೆ ಕಾರಣವಾಯಿತು. ಅಲ್ಪಸಂಖ್ಯಾತ, ತಳವರ್ಗಗಳಿಂದ ಬಂದ ಕತೆಗಾರರು ತಮ್ಮ ಸಂಸ್ಕೃತಿಯನ್ನು ಕತೆಗಳ ಮೂಲಕ ಮುಂದಿಟ್ಟರು. ಈ ಘಟ್ಟದ ಕಥೆಗಳಲ್ಲಿ ಪ್ರಾದೇಶಿಕ ಭಾಷೆಯ ಬಳಕೆ ಬಹುಮುಖ್ಯ ಬೆಳವಣಿಗೆ.

ಕನ್ನಡ ಸಣ್ಣಕತೆಗಳು ಮುಖ್ಯವಾಗಿ ಪ್ರಾರಂಭದಲ್ಲಿ ಬದುಕಿನ ವಾಸ್ತವದತ್ತ, ಪ್ರಗತಿಶೀಲರ ಸಂದರ್ಭದಲ್ಲಿ ಜನಮುಖಿಯಾಗಿ, ನವ್ಯರ ಕಾಲದಲ್ಲಿ ವ್ಯಕ್ತಿಕೇಂದ್ರಿತವಾಗಿ, ದಲಿತ ಬಂಡಾಯದ ಸಂದರ್ಭದಲ್ಲಿ ಸಾಮಾಜಿಕ ಸಮಸ್ಯೆಗಳ ಮೂಲಕ ತನ್ನ ಹರವು ಚಾಚಿಕೊಂಡಿತು. ಮಾಸ್ತಿಯವರ ಜೀವನ ಪ್ರೀತಿ ಪ್ರತಿಪಾದಿಸುವ ಕತೆಗಳಿಂದ ಹಿಡಿದು ಇತ್ತೀಚಿನ ಮುಕ್ತಚೌಕಟ್ಟಿನ ಕಥೆಗಳವರೆಗಿನ ಹಾದಿ ವಿಶಿಷ್ಟವಾದದ್ದು. ನವ್ಯೋತ್ತರ ಸಂದರ್ಭದಲ್ಲಿ ಕರ್ನಾಟಕದ ಹಲವು ಮೂಲೆಗಳಿಂದ ಮಹತ್ತರ ಸಣ್ಣಕತೆಗಳು ರಚನೆಗೊಂಡವು. ಹೀಗಾಗಿ ಅಲ್ಲಿನ ಭಿನ್ನ ಪ್ರಾದೇಶಿಕ ಭಾಷೆ, ಸಂಸ್ಕೃತಿಗಳನ್ನು ಇವು ಮೇಳೈಸಿಕೊಂಡವು. ಇಂತಹ ಭಿನ್ನ ನಡಿಗೆಯ ಸಾಲಿನಲ್ಲಿ ಮಲ್ಲಿಕಾರ್ಜುನ ಹಿರೇಮಠರ ಕಥೆಗಳು ಸೇರುತ್ತವೆ. ಪ್ರಾದೇಶಿಕ ಭಿನ್ನತೆ, ಮತ್ತು ಮನುಷ್ಯಪ್ರೀತಿಯ ಸೆಲೆಯನ್ನು ಹುಡುಕುವ ಸಂದರ್ಭದಲ್ಲಿ ಮಲ್ಲಿಕಾರ್ಜುನ ಹಿರೇಮಠರ ಕಥೆಗಳು ಮುಂಚೂಣಿಯಲ್ಲಿರುತ್ತವೆ. ದಲಿತ ಬಂಡಾಯದ ಸಂದರ್ಭದಲ್ಲಿ ಸಮಾಜವನ್ನು ಶೋಷಕ ಮತ್ತು ಶೋಷಿತ ಎಂಬೆರಡು ನೆಲೆಗಳಲ್ಲಿ ಗ್ರಹಿಸುತ್ತಿದ್ದ ಕಾಲದಲ್ಲಿ 'ಅಮೀನಪುರದ ಸಂತೆ' ಕಥಾ ಸಂಕಲನವು ಇಂತಹ ವಿಭಜನೆ ಮೀರುತ್ತದೆ. ಕೇವಲ ಶೋಷಿತರನ್ನೇ ಮುಖ್ಯವಾಗಿಟ್ಟುಕೊಂಡು ಅವರಲ್ಲಿನ ಮಾನವೀಯತೆಯನ್ನು ಹಿರೇಮಠರು ಮುನ್ನಲೆಗೆ ತರುತ್ತಾರೆ ಎನ್ನುವ ಪುರುಷೋತ್ತಮ ಬಿಳಿಮಲೆಯವರ ಅಭಿಪ್ರಾಯ ಮುಖ್ಯವಾದದ್ದು. ಕತೆಗಳಲ್ಲಿ ತಂತ್ರಗಾರಿಕೆಯೇ ಮುಖ್ಯವೆನ್ನುವ ಮಾತಿಗೆ ಅಪವಾದವೆನ್ನುವಂತೆ ಅತ್ಯಂತ ಸರಳ ನಿರೂಪಣಾ ಶೈಲಿಯಲ್ಲಿ ಮೊದಲ ಓದಿಗೆ ದಕ್ಕುವಂತೆ 'ಅಮೀನಪುರದ ಸಂತೆ'ಯ ಕಥೆಗಳು ಕನ್ನಡದ ಶ್ರೇಷ್ಟ ಕತೆಗಳ ಸಾಲಿನಲ್ಲಿ ನಿಲ್ಲುವ ರಚನೆಗಳು. ಈ ಸಂಕಲನದ ವಿಶೇಷತೆ ಇರುವುದು ಗ್ರಾಮೀಣ ಮತ್ತು ತಳವರ್ಗದ ವಸ್ತುವನ್ನು ಒಳಗೊಂಡ ಪ್ರಾದೇಶಿಕ ಭಾಷೆಯ ನಿರೂಪಣೆಯಲ್ಲಿ.

'ಅಮೀನಪುರದ ಸಂತೆ' ಕಥೆಯಲ್ಲಿ ದನದ ಸಂತೆಯ ಕುರಿತಾದ ನಿರೂಪಣೆಗಳು ಯಥಾವತ್ತಾಗಿವೆ. ದನದ ಸಂತೆಗೆ ಬರುವ ರೈತರ ಮನಸ್ಥಿತಿಯು ಕೂಡ ವಾಸ್ತವದ್ದು. ಒಂದಡೆ ಹೊಲ ಉಳುಮೆ ಮಾಡುವ ಎತ್ತನ್ನು ಬಸವಣ್ಣನೆಂದು ಪೂಜಿಸುವ ರೈತಾಪಿ ಸಂಸ್ಕೃತಿಯು ತನ್ನ ದೈವವನ್ನೇ ಮಾರಾಟಕ್ಕಿಡುವ ಸಂದರ್ಭಕ್ಕೆ ಸಿಲುಕುತ್ತದೆ. ಎಂದಿಗೂ ಕೃಷಿ ಲಾಭದಾಯಕ ಮತ್ತು ಜೀವನೋಪಾಯದ ಮಾರ್ಗವಾಗಿ ಕಂಡಿಲ್ಲ. ಲಾಭ ನಷ್ಟದ ಲೆಕ್ಕಾಚಾರದಾಚೆ ಒಕ್ಕಲುತನ ಬದುಕಿನ ಕ್ರಮವಾಗಿಯೇ ಬೇರೂರಿದೆ. ಇಂತಹ ವಾಸ್ತವ ಸತ್ಯಗಳನ್ನು ಕಥೆ ಬಲವಾಗಿ ಪ್ರತಿಪಾದಿಸುತ್ತದೆ. ಕಥೆಯೇ ಅಂತರ್ಯದಲ್ಲಿ ಹೇಳುವಂತೆ ರೈತರನ್ನು ಹೆಚ್ಚು ಶೋಷಣೆಗೆ ಒಳಪಡಿಸುವುದು ಮಧ್ಯಮ ವರ್ಗದ ದಲ್ಲಾಳಿ ಮಂದಿ. ತಮ್ಮ ಹೊಟ್ಟೆ ಬಟ್ಟೆಯ ಪ್ರಶ್ನೆಗಿಂತ ಮುಖ್ಯವಾಗಿ ದನಕರುಗಳ ಸಂಕಟವನ್ನು ನೋಡಲಾಗದೇ ಮಾರಲು ಬಂದವರನ್ನು ತನ್ನ ಬಲೆಗೆ ಸಸ್ತಾ ದರದಲ್ಲಿ ಬೀಳಿಸಿಕೊಳ್ಳಲು ತುದಿಗಾಲಿನಲ್ಲಿರುತ್ತಾನೆ.

ವರ್ತಮಾನಕ್ಕೆ ಸ್ಪಂದಿಸುವ ಮಹತ್ತರ ಜವಾಬ್ದಾರಿ ಸಾಹಿತ್ಯಕ್ಕಿದೆ. ಆಯಾಕಾಲದ ಸಂಕಟಗಳನ್ನು ಸಾಹಿತ್ಯ ತನ್ನೊಳಗಿರಿಸಿಕೊಂಡು ಬಂದಿದೆ. ಕನ್ನಡದ ಅನೇಕ ಸಣ್ಣಕತೆಗಳು ಇಂತಹ ಜವಾಬ್ದಾರಿ ನಿಭಾಯಿಸಿವೆ. ಅವುಗಳ ಸಾಲಿನಲ್ಲಿ 'ಅಮೀನಪುರದ ಸಂತೆ' ಕತೆಯು ಮುಖ್ಯವಾದದ್ದು.

ತನ್ನ ಅಂತ್ಯವನ್ನೇ ಬಯಸುವಂತಿರುವ ಇಂದಿನ ಸಮಾಜ ನೇಗಿಲು ಹಿಡಿದವನಿಗಿಂತ ಯಂತ್ರದ ಮುಂದೆ ನಿಸ್ತೇಜನಾಗಿ ಕುಳಿತಿರುವವನಿಗೆ ಹೆಚ್ಚಿನ ಮಹತ್ ನೀಡುತ್ತಿದೆ. ಬದುಕುವ ಧಾವಂತದಲ್ಲಿ ದುರ್ದರವೆನಿಸಿದ ಬೇಸಾಯದ ಬಾಳು ಅನ್ನದಾತನನ್ನು ಸಮಾಜದ ಕೊನೆಯ ಶ್ರೇಣಿಯಲ್ಲಿ ನಿಲ್ಲಿಸಿದೆ. ಇಂತಹ ನೆಲದ ನೋವನ್ನೇ ಹೇಳಹೊರಟಿರುವ ಮೊದಲ ಕಥೆ 'ಅಮೀನಪುರದ ಸಂತೆ'ಯಲ್ಲಿ ಬರಗಾಲದ್ದೇ ಮುಖ್ಯ ಪಾತ್ರ, ಕಥೆಯುದ್ದಕ್ಕೂ ಕಾಣಸಿಗುವುದು ದಾರುಣ ಬದುಕೊಂದರ ನೈಜ ಚಿತ್ರಣ, ಇಲ್ಲಿನ ಈ ಸಂತೆಯಲ್ಲಿ ಎಲ್ಲವೂ ಸಿಗುವುದು, ಜೀವಂತ ಬದುಕಿನ ಹೊರತು, ಕಥೆಯಲ್ಲಿ ಕಾಣಸಿಗುವ ಬಸಪ್ಪ ಹಾಗೂ ಚನ್ನಪ್ಪರಿಬ್ಬರೂ ಬರದ ಖಗ್ರಾಸತನಕ್ಕೆ ಸಿಕ್ಕಿ ನಲುಗಿದ ಪಯಣಿಗರು ಸೊರಗಿದ ಎತ್ತಿನ ಬವಣೆ ನೋಡಲಾಗದೇ ಊರ ಗೌಡನಲ್ಲಿ ಮೇವಿಗಾಗಿ ಎಷ್ಟು ಹಲುಬಿದರೂ ಬೆಲೆ ಸಿಗದಾಗ ಒಡಲ ಸಂಕಟವನ್ನು ಮನುಷ್ಯ ಧರ್ಮದ ನಿಯಮದಂತೆ ಕಿತ್ತುಕೊಳ್ಳುವ ಮೂಲಕ ತಣಿಸಿಕೊಳ್ಳಲು ಯತ್ನಿಸಿ ವಿಫಲನಾಗುತ್ತಾನೆ ಮರ್ಯಾದೆಯ ಜೊತೆಗೆ ಗೌಡನ ಮಗನ ಪಾಲಾಗುವ ತನ್ನ ಪ್ರೀತಿಯನ್ನು ಕಳೆದುಕೊಳ್ಳುತ್ತಾನೆ ತನ್ನ ಹಸಿವು ಬಸಪ್ಪನಿಗೆ ಸಹ್ಯವೆನಿಸಿದರೂ ಮೇವಿಲ್ಲದೇ ಬರೀ ಗೋದಲೆಯ ಮುಂದೆ ನಿಲ್ಲುವ ದೈವೀ ಸ್ವರೂಪದ ಮೂಕಪ್ರಾಣಿಯ ಹಸಿವನ್ನು ನೋಡಲಾಗಲಿಲ್ಲ. 'ಹಯನ' ಉಣ್ಣೀರಿಗೆ ಕಡಮಿ ಧಾರಣಿಗಾದ್ರೂ ಕೊಟ್ಟೇನು, ಕಟುಕರ ಪಾಲು ಮಾಡಿ ಅವುಗಳ ಪಾಪ ನಾ ಕಟ್ಟಿಕೊಳ್ಳಲಾರೆ' ಎನ್ನುವ ಚನ್ನಪ್ಪನ ಮಾತುಗಳು ಅವನು ಊಳುವ ನೆಲ ಕಲಿಸಿಕೊಟ್ಟ ಅಹಿಂಸಾ ಮನೋಧರ್ಮವಾಗಿದೆ.

ಬದುಕಿಗೆ ಆಧಾರವಾದುದನ್ನೇ ಮಾರಲು ಹೊರಟಿರುವ ಬಸಪ್ಪನಿಗೆ ಸಂತೆಯಲ್ಲಿ ಸಿಗುವ ನಿಂಗಪ್ಪನ ನೌಕರಶಾಹಿತ್ವದ ವರ್ತನೆ ಮತ್ತಷ್ಟು ಕುಗ್ಗಿಸುತ್ತದೆ. ಆತನ ಬದುಕನ್ನೇ ಖರೀದಿಸ ಹೊರಟ ದಲ್ಲಾಳಿಗಳು ಇಲ್ಲಿ ನೆಪ ಮಾತ್ರ ವಿಧಿಯ ಜೊತೆಗೆ ಬಸಪ್ಪ ನಡೆಸುವ ಚೌಕಾಸಿ ವ್ಯವಹಾರ ಆತನ ಸಾವಿನೊಂದಿಗೆ ಅಂತ್ಯವಾಗುತ್ತದೆ. ಯಾವುದೇ ಆಡಂಬರವಿಲ್ಲದೇ ಸರಾಗವಾಗಿ ಓದಿಸಿಕೊಂಡು ಹೋಗುವ ಕಥೆ ಕೊನೆಗೆ ಓದುಗನ ಮನಸ್ಸಿನಲ್ಲಿ ನೋವು ಹೆಪ್ಪುಗಟ್ಟುವಂತೆ ಮಾಡುತ್ತದೆ. ರೈತರ ಜೀವನವನ್ನು ಯಥಾವತ್ತಾಗಿ ಚಿತ್ರಿಸುವಲ್ಲಿ ಕಥೆ ಯಶಸ್ವಿಯಾಗಿದೆ. ಬಸಪ್ಪನಂತಹ ಮನೋಸ್ಥಿತಿಗಳು ಬದುಕಿನಿಂದ ಪಲಾಯನವಾದಿತನವನ್ನು ಬಯಸುತ್ತವೆ. ಅಲ್ಲದೆ ಇಲ್ಲಿನ ಸಮಸ್ಯೆ ಕೊನೆಯಲ್ಲಿ ಮತ್ತಷ್ಟು ಜಟಿಲವಾಗಿ ಅಂತ್ಯ ಕಂಡಿದೆ.

*– 49ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮುಳುಗುಂದ ನಾಡಿನ ಸ್ಮಾರಕ ಶಿಲ್ಪಗಳು

✍ **ಡಾ. ಬಿ. ಸುರೇಶ,** ಇತಿಹಾಸ ಸಹ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ–577591

ಪ್ರಾದೇಶಿಕ ಇತಿಹಾಸ ರಚನೆಯಲ್ಲಿ ಬಿಡಿಶಿಲ್ಪಗಳು/ಸ್ಮಾರಕಶಿಲ್ಪಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಯಾವುದೇ ಒಂದು ಪ್ರದೇಶದ ಇತಿಹಾಸವನ್ನು ರಚಿಸುವ ಸಂದರ್ಭದಲ್ಲಿ ಶಾಸನಗಳು, ನಾಣ್ಯಗಳು, ವಿವಿಧ ರೂಪದ ಸಾಹಿತ್ಯ ಆಕರಗಳು ಅಥವಾ ಇನ್ನಿತರೆ ಯಾವುದೇ ರೂಪದ ದಾಖಲೆಗಳು ದೊರೆಯದಿದ್ದಲ್ಲಿ, ಅಲ್ಲಿ ಪ್ರದೇಶದಲ್ಲಿ ಕಂಡುಬರುವ ಬಿಡಿಶಿಲ್ಪಗಳು/ಸ್ಮಾರಕಶಿಲ್ಪಗಳು ಅಲ್ಲಿನ ಇತಿಹಾಸ ರಚನೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಶಿಲ್ಪಗಳನ್ನು ನಿರ್ಮಿಸಲು ಬಳಸಿರುವ ಮಾಧ್ಯಮ, ಅವುಗಳ ರಚನಾ ಸ್ವರೂಪ, ಶೈಲಿ ಹಾಗೂ ಇನ್ನಿತರ ಅಂಶಗಳು ಐತಿಹಾಸಿಕ ಕಾಲಾನುಕ್ರಮವನ್ನು ನಿರ್ಧರಿಸುವುದರ ಜೊತೆಗೆ ಅಲ್ಲಿನ ಇತಿಹಾಸವನ್ನು ತಿಳಿಯಲು ಸಹಕಾರಿಯಾಗುತ್ತವೆ.

ಪ್ರಾಚೀನ ಪುಲಿಗೆರೆ–300ರ ಅಂಚಿನಲ್ಲಿದ್ದ 'ಮುಳಗುಂದ ನಾಡು' ಅಂದಿನ ಆಡಳಿತದ ವಿಭಾಗಗಳಲ್ಲಿ ಒಂದು. ಪ್ರಸ್ತುತ ಗದಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಪ್ರಾಚೀನ ಮುಳಗುಂದ ನಾಡು ಪ್ರದೇಶವು ಆಡಳಿತಾತ್ಮಕವಾಗಿ ತುಂಬಾ ಮಹತ್ವವನ್ನು ಪಡೆದಿತ್ತು. ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಇದೊಂದು ಆಡಳಿತದ ಪ್ರಮುಖ ವಿಭಾಗವಾಗಿದ್ದು, ಮುಳಗುಂದ ಪಟ್ಟಣ ಒಳಗೊಂಡಂತೆ ಹೊಸುರು, ಎಲೆಹೊಸುರು, ಕಣವಿ, ವೆಂಕಟಾಪುರ, ಹರ್ತಿ, ಕುರ್ತಕೋಟಿ, ಕಲ್ಲೂರು, ಎಳವತ್ತಿ, ಎಲಿಶಿರೂರು, ಶಿರೂರು ಹಾಗೂ ನೀಲಗುಂದ ಗ್ರಾಮಗಳನ್ನು ಒಳಗೊಂಡಿತ್ತು. ಇಲ್ಲಿರುವ ಅನೇಕ ದೇವಾಲಯಗಳು, ಶಿಲ್ಪಗಳು, ಶಾಸನಗಳು ಹಾಗೂ ಇನ್ನಿತರ ಐತಿಹಾಸಿಕ ಕುರುಹುಗಳು ಇಲ್ಲಿನ ಐತಿಹಾಸಿಕ ಮಹತ್ವವನ್ನು ತೋರಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಮುಳಗುಂದ ನಾಡಿನ ವ್ಯಾಪ್ತಿಯಲ್ಲಿ ಕಂಡುಬರುವ ಸ್ಮಾರಕಶಿಲ್ಪಗಳನ್ನು ವಿವರಣಾತ್ಮಕವಾಗಿ ಅಧ್ಯಯನವಮಾಡಲು ಪ್ರಯತ್ನಿಸಲಾಗಿದೆ. ಮುಳಗುಂದ ನಾಡಿನ ವ್ಯಾಪ್ತಿಯಲ್ಲಿ ಸುಮಾರು ಒಂದು ನೂರಕ್ಕೂ ಅಧಿಕ ಶಾಸನಗಳು ದೊರೆತಿದ್ದು ಅವುಗಳು ಎಸ್.ಅಯ್.ಅಯ್ ಸಂಪುಟ–11, ಭಾಗ 1, 2, 15 ಮತ್ತು 18 ರಲ್ಲೂ, ಎಫಿಗ್ರಾಫಿಯ ಇಂಡಿಕಾ ಸಂಪುಟ – 6, 13 ಮತ್ತು 26 ರಲ್ಲಿ ಪ್ರಕಟಿತಗೊಂಡಿವೆ. ಅವುಗಳನ್ನು ಇಲ್ಲಿ ಪೂರಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

## ಸ್ಮಾರಕ ಶಿಲ್ಪಗಳು

ಮುಳುಗುಂದ ನಾಡಿನಾದ್ಯಂತ ಸುಮಾರು ಮೂವತ್ತಕ್ಕೂ ಅಧಿಕ ಸ್ಮಾರಕಶಿಲ್ಪಗಳು ಕಂಡುಬಂದಿವೆ. ಅವುಗಳಲ್ಲಿ ಮುಳಗುಂದ, ಹೊಸೂರು, ನೀಲಗುಂದ, ಕಣವಿ, ಶಿರೂರು ಹಾಗೂ ಎಲಿಶಿರೂರುಗಳಲ್ಲಿರುವ ಸ್ಮಾರಕಶಿಲ್ಪಗಳು ಗಮನಾರ್ಹವಾಗಿದ್ದು, ಅವುಗಳನ್ನು ಈ ಪ್ರದೇಶದ ಬಹುಮುಖ್ಯ ಶಿಲ್ಪಗಳೆಂದು ಪರಿಗಣಿಸಬಹುದು. ಇಲ್ಲಿನ ಕೆಲವು ಶಿಲ್ಪಗಳು ಶಾಸನೋಲ್ಲೇಖಿತ ವಿವರಗಳನ್ನು ಒಳಗೊಂಡಿದ್ದು, ಈ ಪರಿಸರದ ಸಾಂಸ್ಕೃತಿಕ ಮಹತ್ವವನ್ನು ತಿಳಿಯುವಲ್ಲಿ ಸಹಕಾರಿಯಾಗುತ್ತವೆ.

## 1. ವೀರಗಲ್ಲುಗಳು

ಹೊಸೂರಿನ ಶಿವ ದೇವಾಲಯದ ಮುಂಭಾಗದಲ್ಲಿ ಸುಮಾರು ಐದು ಅಡಿಗಳಷ್ಟು ಎತ್ತರವಾದ ವೀರಗಲ್ಲು ಇದೆ. ಈ ಸ್ಮಾರಕಶಿಲ್ಪವು ಶಾಸನೋಕ್ತವಾಗಿದ್ದರೂ, ಅಕ್ಷರಗಳು ಸಂಪೂರ್ಣವಾಗಿ ಅಳಿಸಿ


ವೀರಗಲ್ಲು ಹೊಸೂರು


ಗೋಗ್ರಹಣ ವೀರಗಲ್ಲು ಶಿರೂರು


ಹುಲಿಬೇಟೆ ವೀರಗಲ್ಲು ಹೊಸೂರು


ವೀರಗಲ್ಲು ಮುಳಗುಂದ

ಹೋಗಿರುವುದರಿಂದ ಯಾವುದೇ ವಿವರಗಳು ಸ್ಪಷ್ಟವಾಗುವುದಿಲ್ಲ. ಶಿಲ್ಪವು ಮೂರು ಪಟ್ಟಿಕೆಗಳಿಂದ ಕೂಡಿದ್ದು, ಕೆಳಗಿನ ಹಂತದಲ್ಲಿ ಕಾದಾಟದ ದೃಷ್ಯವಿದೆ. ಇಲ್ಲಿ ವೀರನು ಬಿಲ್ಲು–ಬಾಣಗಳನ್ನಿಡಿದು ವೈರಿಪಡೆಯೊಂದಿಗೆ ಹೋರಾಡುತ್ತಿರುವನು. ವೀರನು ತನ್ನ ಕೇಶವನ್ನು ತಲೆಯ ಹಿಂಬದಿಯಲ್ಲಿ ಅಲಂಕಾರಿಕವಾಗಿ, ತುರುಬಿನೋಪಾದಿಯಲ್ಲಿ ಕಟ್ಟಿಕೊಂಡಿರುವನು. ಧೋತಿಯನ್ನು ಧರಿಸಿದ್ದು, ಸೊಂಟಪಟ್ಟಿ, ಕಂಠಾಭರಣ, ಕೈಕಡಗ–ಕಾಲ್ಕಡಗ ಹಾಗೂ ಇನ್ನಿತರ ಆಭರಣಗಳಿಂದ ಅಂಕೃತಗೊಂಡಿರುವನು. ವೀರನ ಹಿಂಬದಿಯಲ್ಲಿ ಅಶ್ವಪಡೆಯನ್ನು ತೋರಿಸಲಾಗಿದೆ. ವೈರಿಪಡೆಯಲ್ಲಿಯೂ ಸಹ ಬಿಲ್ಲು ಬಾಣ, ಭರ್ಚಿಯನ್ನಿಡಿದು ಹೋರಾಡುತ್ತಿರುವರು.

ಎರಡನೇ ಹಂತದಲ್ಲಿ, ಮಂಟಪದಲ್ಲಿ ಕುಳಿತಿರುವ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಹೊತ್ತೊಯ್ಯುತ್ತಿರುವರು. ಚಾಮರವನ್ನು ಹಿಡಿದಿರುವ ಅಪ್ಸರೆಯರ ಮೇಲ್ಭಾಗದಲ್ಲಿ ಪದ್ಮಗಳ ಅಲಂಕಾರವನ್ನು ತೋರಿಸಲಾಗಿದೆ. ಮೂರನೇ ಹಂತದಲ್ಲಿ, ಪದ್ಮಾಸನದಲ್ಲಿ ಕುಳಿತಿರುವ ವೀರನನ್ನು, ಶಿವಲಿಂಗ ಹಾಗೂ, ಲಿಂಗಕ್ಕೆ ಮುಗಿಯುತ್ತಿರುವ ಯತಿಯನ್ನೂ ಹಾಗೂ ನಂದಿಯನ್ನೂ ತೋರಿಸಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಹಾಗೂ ಚಂದ್ರರನ್ನು ತೋರಿಸಿರುವರು. ಇಲ್ಲಿ ತೋರಿಸಿರುವ ಶಿವಲಿಂಗವು ವಿಶಿಷ್ಟವಾಗಿದ್ದು, ಲಿಂಗುವಿನ ರುದ್ರಭಾಗದಲ್ಲಿ ರುದ್ರಾಕ್ಷಿ ಅಲಂಕಾರವನ್ನು ಮಾಡಲಾಗಿದೆ. ಕಾಲಮಾನ ಕ್ರಿ.ಶ 11 ನೇ ಶತಮಾನ. ಇದೇ ರೀತಿಯ ಶಿಲ್ಪಗಳು ಮುಳುಗುಂದ ಹಾಗೂ ಹರ್ತಿಯಲ್ಲಿವೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನೀಲಗುಂದ ವೀರಾಂಜನೇಯ ದೇವಾಲಯದ ಬಳಿಯಿರುವ ವೀರಗಲ್ಲು ಸಂಪೂರ್ಣವಾಗಿ ಸವೆದುಹೋಗಿದೆ. ಈ ಶಿಲ್ಪವೂ ಸಹ ಮೂರು ಹಂತಗಳಲ್ಲಿದೆ. ಕೆಳಗಿನ ಹಂತದಲ್ಲಿ ಕಾದಾಟದ ದೃಷ್ಯವನ್ನೂ, ಮಧ್ಯದ ಹಂತದಲ್ಲಿ ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ಚಿತ್ರಣವೂ, ಮೂರನೇ ಹಂತದಲ್ಲಿ ಶಿವಲಿಂಗಕ್ಕೆ ಪೂಜೆಮಾಡುತ್ತಿರುವ ಯತಿ ಹಾಗೂ ಕೈಮುಗಿದು ಕುಳಿತಿರುವ ವೀರನನ್ನು ತೋರಿಸಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಶಿಲ್ಪಗಳಿವೆ. ಇದೇ ರೀತಿಯ ಶಿಲ್ಪಗಳು ಮುಳುಗುಂದ ಹಾಗೂ ಶಿರೂರುಗಳಲ್ಲಿ ಕಂಡುಬಂದಿವೆ.

ಕಣವಿಯ ಮೈಲಾರಲಿಂಗ ಗುಡಿಯ ಮುಂಭಾಗದಲ್ಲಿ ವೀರಮಾಸ್ತಿಶಿಲ್ಪವಿದೆ. ಶಾಸನೋಕ್ತವಾಗಿರುವ ಈ ಶಿಲ್ಪವು ವಿಜಯನಗರ ಅರಸ ಹರಿಹರನನ್ನು ಹೆಸರಿಸಿದೆ. ಕಿಲಾರಿ ಸಾಯಿನಾಯಕನ ಮಗ ದೇವನಾಯಕನು ವೀರಮರಣಹೊಂದಿದಾಗ ಆತನ ಪತ್ನಿಯರಾದ ನಾಗಾಯಿ ಮತ್ತು ವೇಮಾಯಿಯರು ಸತಿಹೋದ ಬಗ್ಗೆ ಈ ಶಾಸನವು ಉಲ್ಲೇಖಿಸುತ್ತದೆ. ಈ ಶಿಲ್ಪವು ಮೂರು ಹಂತಗಳಲ್ಲಿದೆ. ಕೆಳಗಿನ ಹಂತದಲ್ಲಿ ಹೋರಾಟದ ದೃಷ್ಯವನ್ನು ತೋರಿಸಲಾಗಿದೆ. ವೀರನು ಕುದುರೆಯ ಮೇಲೆ ಕುಳಿತು ಒಂದು ಕೈಯಲ್ಲಿ ಕುದುರೆಯನ್ನೂ, ಮತ್ತೊಂದು ಕೈಯಲ್ಲಿ ಭರ್ಚಿಯನ್ನಿಡಿದು ಹೋರಾಡುತ್ತಿರುವನು. ಕುದುರೆಯು ತನ್ನ ಮುಂದಿನ ಎರಡೂ ಕಾಲುಗಳನ್ನು ಮೇಲೆತ್ತಿ ಜಿಗಿಯುತ್ತಿರುವಂತಿದೆ. ವೀರನ ಮುಂಭಾಗದಲ್ಲಿರುವ ವೈರಿಪಡೆಯನ್ನು ತೋರಿಸಲಾಗಿದೆ. ಇವರು ಬಿಲ್ಲು-ಬಾಣಗಳನ್ನಿಡಿದು ವೀರನೊಂದಿಗೆ ಕಾದಾಡುತ್ತಿರುವರು. ಎರಡನೇ ಹಂತದಲ್ಲಿ, ಮಂಟಪದಲ್ಲಿ ಕುಳಿತಿರುವ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಹೊತ್ತೊಯ್ಯುತಿರುವ ಚಿತ್ರಣವಿದೆ. ಅಪ್ಸರೆಯರು ಒಂದು ಕೈಯಲ್ಲಿ ವೀರನನ್ನು, ಮತ್ತೊಂದು ಕೈಯಲ್ಲಿ ಚಾಮರವನ್ನಿಡಿದಿರುವರು. ಮೇಲಿನ ಹಂತದಲ್ಲಿ, ಶಿವಲಿಂಗ ಹಾಗೂ ಇಬ್ಬರು ಸತಿಯರನ್ನು ತೋರಿಸಲಾಗಿದೆ.

ಎಲಿಶಿರೂರಿನ ಭೋಗೇಶ್ವರ ದೇವಾಲಯದ ಮುಂಭಾಗದಲ್ಲಿ ಶಾಸನೋಕ್ತ ವೀರಗಲ್ಲಿದೆ. ಇದರ ಅಕ್ಷರಗಳು ಅಳಿಸಿಹೋಗಿರುವುದರಿಂದ ವಿವರಗಳು ಸ್ಪಷ್ಟವಾಗುವುದಿಲ್ಲ. ಆದರೆ, ಪೊಲೆಗ ಮತ್ತು ಆತನ ಸಹೋದರ ಮಾಯಿಚರು ಈ ವೀರಗಲ್ಲನ್ನು ನಿಲ್ಲಿಸಿದ ಬಗ್ಗೆ ತಿಳಿದುಬರುತ್ತದೆ. ಮಹತ್ತರವಾದ ಕಾರ್ಯವನ್ನು ಮಾಡಿ, ತನ್ನ ಪ್ರಾಣವನ್ನು ತ್ಯಾಗಮಾಡಿದ ವೀರ ಮತ್ತು ಆತನ ಕಾರ್ಯವನ್ನು ಸ್ಮರಿಸುವ ಉದ್ದೇಶದಿಂದ ಹಾಗೂ ಈ ರೀತಿಯ ಸಾಮಾಜಿಕ ಕಾರ್ಯಗಳನ್ನು ಮಾಡಿದವರನ್ನು ಮತ್ತು ಮಾಡುವವರನ್ನು ಪ್ರೋತ್ಸಾಹಿಸಲಾಗುತ್ತಿತ್ತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಹೊಸೂರು ಗ್ರಾಮಕ್ಕೆ ಹೊಂದಿಕೊಂಡಂತೆ ಉತ್ತರದಿಕ್ಕಿನಲ್ಲಿರುವ ಹೊಲದಲ್ಲಿ ಈಶ್ವರ ದೇವಾಲಯವಿದೆ. ದೇವಾಲಯದ ಮುಂಭಾಗದಲ್ಲಿ ಹುಲಿಬೇಟೆ ವೀರಗಲ್ಲಿದೆ. ಮುಳುಗುಂದನಾಡಿನ ಪರಿಸರದಲ್ಲಿ ಕಂಡುಬರುವ ಶಿಲ್ಪಗಳಲ್ಲಿ ಇದೊಂದು ಅಪರೂಪದ ಸ್ಮಾರಕಶಿಲ್ಪವೆಂದೇ ಹೇಳಬೇಕಾಗುತ್ತದೆ. ಸುಮಾರು ನಾಲ್ಕು ಅಡಿ ಎತ್ತರವಿರುವ ಈ ಶಿಲ್ಪವು ಮೂರು ಹಂತಗಳಲ್ಲಿದೆ. ಕೆಳಗಿನ ಹಂತದಲ್ಲಿ, ವೀರನು ಹುಲಿಯೊಂದಿಗೆ ಹೋರಾಡುತ್ತಿರುವ ಚಿತ್ರಣವಿದೆ. ವೀರನು ತನ್ನ ಕೇಶವನ್ನು ತಲೆಯ ಹಿಂಬದಿಗೆ ತುರುಬಿನೋಪಾದಿಯಲ್ಲಿ ಕಟ್ಟಿಕೊಂಡಿರುವನು. ಕಾಲ್ಕಡಗ, ಕೈಕಡಗ, ಕಂಠಹಾರ, ಸೊಂಟಪಟ್ಟಿಯನ್ನು ಧರಿಸಿರುವನು. ತನ್ನ ಎಡಗೈಯಲ್ಲಿ ಉದ್ದನೆಯ ಭರ್ಚಿಯನ್ನಿಡಿದು ಹುಲಿಯನ್ನು ಕೊಲ್ಲುತ್ತಿರುವಂತೆ ಚಿತ್ರಿಸಲಾಗಿದೆ. ಈ ಹೋರಾಟದಲ್ಲಿ ವೀರನಿಗೆ ನಾಯಿಗಳು ಸಹಕರಿಸುತ್ತಿವೆ. ಪ್ರಾಯಶಃ ಈ ನಾಯಿಗಳು ಆತನ ಸಾಕುಪ್ರಾಣಿಗಳಿರಬಹುದು. ಎರಡನೇ ಹಂತದಲ್ಲಿ, ಮಂಟಪದಲ್ಲಿ ಕುಳಿತಿರುವ ವೀರನನ್ನು ಇಬ್ಬರು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುವಂತೆ ಚಿತ್ರಿಸಲಾಗಿದೆ. ವೀರನು ಕುಳಿತಿರುವ ಮಂಟಪವನ್ನು ಅಲಂಕರಿಸಿರುವುದನ್ನು ಕಾಣಬಹುದು. ಅಪ್ಸರೆಯರು ತಮ್ಮ ಒಂದು ಕೈಯಲ್ಲಿ ಮಂಟಪವನ್ನೂ ಮತ್ತೊಂದು ಕೈಯಲ್ಲಿ ಚಾಮರವನ್ನಿಡಿದಿರುವರು. ಮೇಲಿನ ಹಂತದಲ್ಲಿ, ಪದ್ಮಾಸನದಲ್ಲಿ ಕುಳಿತಿರುವ ವೀರ, ಶಿವಲಿಂಗುವಿಗೆ ಮುಗಿಯುತ್ತಿರುವ ಯತಿ ಹಾಗೂ ನಂದಿಯನ್ನು ತೋರಿಸಲಾಗಿದೆ. ಕಾಲಮಾನ ಕ್ರಿ.ಶ 11 ನೇ ಶತಮಾನ.

ಶಿರೂರಿನ ಮೈಲಾರಲಿಂಗ ಗುಡಿಯ ಮುಂಭಾಗದಲ್ಲಿರುವ ವೀರಗಲ್ಲು ಮೂರು ಪಟ್ಟಿಕೆಗಳಲ್ಲಿದೆ. ಕೆಳಗಿನ ಪಟ್ಟಿಕೆಯಲ್ಲಿ ಕಾದಾಟದ ದೃಷ್ಯವನ್ನು ಚಿತ್ರಿಸಲಾಗಿದೆ. ಇದೊಂದು ಗೋಗ್ರಹಣಕ್ಕೆ ಸಂಬಂಧಿಸಿದ ಸ್ಮಾರಕಶಿಲ್ಪವಾಗಿದೆ. ಸಾಮಾನ್ಯವಾಗಿ ಗೋವುಗಳನ್ನು ವೀರನ ಹಿಂಬದಿಯಲ್ಲಿ ತೋರಿಸಲಾಗಿರುತ್ತದೆ. ಆದರೆ ಇಲ್ಲಿ ಗೋವುಗಳನ್ನು ವೈರಿಪಡೆಯ ಹಿಂಬದಿಯಲ್ಲಿ ತೋರಿಸಿರುವುದು ವಿಶೇಷವಾಗಿದೆ. ವೀರನು ಬಿಲ್ಲಿ ಬಾಣವನ್ನಿಡಿದು ವೈರಿಪಡೆಯೊಂದಿಗೆ ಹೋರಾಡುತ್ತಿರುವನು. ಎರಡನೇ ಹಂತದಲ್ಲಿ ಮಡಿದಿರುವ ವೀರನನ್ನು ನಾಲ್ವರು ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವರು. ವೀರನ ಕೆಳಭಾಗದಲ್ಲಿ ಮದ್ದಳೆ ಮತ್ತಿತರ ವಾದ್ಯಗಳನ್ನು ನುಡಿಸುತ್ತಿರುವಂತೆ ತೋರಿಸಲಾಗಿದೆ. ವೀರನ ಮೇಲ್ಭಾಗದಲ್ಲಿ ಮೋಡಗಳು ಚದುರಿದಂತೆ ತೋರಿಸಿರುವುದೂ ಸಹ ವಿಶೇಷವೆಂದೇ ಹೇಳಬೇಕಾಗುತ್ತದೆ. ಮೂರನೇ ಹಂತದಲ್ಲಿ ವೀರನು ಸ್ವರ್ಗಸ್ಥನಾಗಿರುವಂತೆ ಹಾಗೂ ಇಲ್ಲಿ ಅಪ್ಸರೆಯರನ್ನೂ ಚಿತ್ರಿಸಲಾಗಿದೆ. ಕಾಲಮಾನ ಕ್ರಿ. ಶ. 10-11 ನೇ ಶತಮಾನ

## 2. ಮಹಾಸತಿ ಶಿಲ್ಪಗಳು

ಹೊಸೂರಿನ ಕಲ್ಮೇಶ್ವರ ದೇವಾಲಯದ ಮುಂಭಾಗದಲ್ಲಿ ಎರಡು ಮಹಾಸತಿಶಿಲ್ಪಗಳಿವೆ. ವಾಸ್ತುಶೈಲಿಯ ದೃಷ್ಟಿಯಿಂದ ಆಕರ್ಷಣೀಯ ವಾಗಿರುವ ಈ ದೇವಾಲಯದ ಮುಂಭಾಗದಲ್ಲಿ ಹಲವಾರು ಶಿಲ್ಪಗಳಿವೆ. ಅವುಗಳಲ್ಲಿ ಎರಡು ಮಹಾಸತಿಶಿಲ್ಪಗಳು ತುಂಬಾ ಆಕರ್ಷಣೀಯವಾಗಿವೆ. ಈ ಎರಡೂ ಶಿಲ್ಪಗಳು ಗಾತ್ರ ಮತ್ತು ಸ್ವರೂಪದಲ್ಲಿ ಒಂದೇ ರೀತಿಯಲ್ಲಿವೆ. ಸುಮಾರು ಐದು ಅಡಿ ಎತ್ತರವಿರುವ ಈ ಶಿಲ್ಪಗಳು ಒಂದೇ ಪಟ್ಟಿಕೆಯಲ್ಲಿದ್ದು, ಕಲ್ಯಾಣದ ಚಾಲುಕ್ಯರ ಕಾಲದ ರಚನೆಯನ್ನು ಹೋಲುತ್ತವೆ. ಮಹಾಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿದ್ದರೆ, ಎಡಗೈಯಲ್ಲಿ ನಿಂಬೆಹಣ್ಣನ್ನು ಹಿಡಿದಿರುವಳು. ಉಟ್ಟಿರುವ ಸೀರೆಯ ನೆರಿಗೆಗಳು, ಕಂಠಾಭರಣ, ಸೊಂಟಪಟ್ಟಿಕೆ ಹಾಗೂ ಕೇಶಾಲಂಕಾರಗಳು ಆಕರ್ಷಣೀಯವಾಗಿವೆ. ತಲೆಯ ಹಿಂಬದಿಯಲ್ಲಿ ಕೇದಿಗೆಯ ಅಲಂಕಾರವಿದೆ. ಕಾಲಮಾನ ಕ್ರಿ.ಶ. 12-13 ನೇ ಶತಮಾನ



ಮಹಾಸತಿ ಶಿಲ್ಪ ಹೊಸೂರು



ನಿಷಧಿ ಶಿಲ್ಪ ಹೊಸೂರು

*– 44ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ರನ್ನನ ಮೇಲೆ ಪಂಪನ ಋಣ

✍ **ಶ್ರೀನಿವಾಸ ಎನ್.** ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ವ್ಯಾಸ ಬರೆದಂತ 'ಮಹಾಭಾರತ'ವು ಭಾರತದ ಬಹುತೇಕ ಸ್ಥಳೀಯ ಭಾಷೆಗಳಿಗೆ ಅನುವಾದಗೊಂಡಿದ್ದಲ್ಲದೆ, ಜಾಗತಿಕವಾಗಿ ಇಂಗ್ಲಿಷ್, ಲ್ಯಾಟಿನ್, ಇಟ್ಯಾಲಿಯನ್ ಭಾಷೆಗಳಿಗೂ ಸಹ ಅನುವಾದಗೊಂಡಿದೆ. ವಿಶ್ವದ ಅನೇಕ ಕಾರಣಗಳಿಗೆ ಹಲವಾರು ವಿದ್ವಾಂಸರ ಅಧ್ಯಯನಕ್ಕೆ ಒಳಪಟ್ಟಂತ ಮಹಾಭಾರತದ ಸಂಖ್ಯೆಯೂ ಭಾರತದ ಮಟ್ಟಿಗೆ ಲೆಕ್ಕವಿಡಲು ಅಸಾಧ್ಯವಾದಷ್ಟು ವಿಸ್ತರಿಸಿದೆ. ಈ ರೀತಿ ವಿವಿಧ ಭಾಷೆಗಳಿಗೆ, ವಿವಿಧ ಪ್ರದೇಶಕ್ಕೆ ಮಹಾಭಾರತವು ಅನುವಾದವಾಗುವ ಸಂದರ್ಭದಲ್ಲಿ ಒಬ್ಬ ಕವಿಯೂ ಮತ್ತೊಬ್ಬ ಕವಿಯ ಪ್ರೇರಣೆಯನ್ನು ಪಡೆದರೂ ಸಹ ತಮ್ಮ ಪ್ರದೇಶ, ಸಂಸ್ಕೃತಿ, ರಾಜಕೀಯ ಬದಲಾವಣೆ ಇತ್ಯಾದಿ ಕಾರಣಗಳಿಂದ ಅನೇಕ ಮಾರ್ಪಾಡುಗಳನ್ನು ಮಾಡಿಕೊಂಡಿರುವುದು ಸಹಜವಾಗೆ ಕಾಣಸಿಗುತ್ತವೆ. ಭಾರತದಾದ್ಯಂತ ಬಹು ಪಠ್ಯಗಳಾಗಿ ಬೆಳೆದಂತ ಮಹಾಭಾರತದ ಪಠ್ಯಗಳನ್ನು ಒಂದೆಡೆ ಸೇರಿಸಿ ಅವುಗಳನ್ನು ಪರಿಷ್ಕರಿಸಿ ಏಕಪಕ್ಷೀಯವಾಗಿ ಮತ್ತು ಅಧ್ಯಯನ ಮಾಡಲು ಅನುಕೂಲವಾಗುವಂತೆ ಶ್ರಮಿಸಿ ಯಶಸ್ಸನ್ನು ಗಳಿಸಿದವರು ದಿವಂಗತ ಡಾ. ವಿ. ಎಸ್. ಸುಕ್ಥಂಕರ್ ರವರು. ಇವರು ಮತ್ತು ಇವರ ಸದಸ್ಯ ಮಂಡಲಿ ಭಾರತದಾದ್ಯಂತ ಸಂಚರಿಸಿ ಮಹಾಭಾರತಕ್ಕೆ ಸಂಬಂಧಿಸಿದ 1259 ಹಸ್ತ ಪ್ರತಿಗಳನ್ನು ಸಂಗ್ರಹಿಸುತ್ತಾರೆ. ಈ 1259 ಹಸ್ತಪ್ರತಿಗಳಲ್ಲಿ ಮಹಾಭಾರತದ ಎಲ್ಲ ಪರ್ವಗಳ ಸಂಪಾದನೆಗಾಗಿ ಕೇವಲ 738 ಹಸ್ತಪ್ರತಿಗಳ ಪಾಠಗಳಷ್ಟನ್ನೇ ಪರಿಷ್ಕರಣ ಕಾರ್ಯದಲ್ಲಿ ಬಳಸಿಕೊಳ್ಳುತ್ತಾರೆ. ಉಳಿದಂತೆ ಲಬ್ದವಾದ ಸಾವಿರಾರು ಪಾಠಾಂತರಗಳನ್ನು ಕೈಬಿಡಲಾಗಿದೆ. ಅಂಥವುಗಳಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ'ವು ಒಂದು. ಇದು ಮೂಲಕಥೆಗಿಂತ ಭಿನ್ನವಾಗಿದೆ ಎಂಬಂತಹ ಕಾರಣದಿಂದ ವಿ. ಎಸ್. ಸುಕ್ಥಂಕರ್ ರವರು ಪರಿಷ್ಕರಣ ಪಟ್ಟಿಯಿಂದ ಕೈಬಿಡುತ್ತಾರೆ. ಹೀಗೆ ನೂರಾರು ಉಪಲಬ್ಧ ಹಸ್ತ ಪ್ರತಿಗಳಷ್ಟನ್ನೂ ಪರೀಕ್ಷಿಸಿ, ಇತ್ತೀಚಿನ ಸೇರಿಕೆಗಳನ್ನು ಬೇರ್ಪಡಿಸಿ, ಪ್ರಾಮಾಣಿಕ ಪಾಠವನ್ನು ನಿರ್ಣಯಿಸುವಲ್ಲಿ ಸುಕ್ಥಂಕರ್ ರವರ ಶ್ರಮ ಬಹು ಮುಖ್ಯವಾದುದು. ಭಾರತದಲ್ಲಿ ಉಪಲಬ್ಧವಾದ ಹಸ್ತಪ್ರತಿಗಳ ಸಂಖ್ಯೆಯೇ ಇಷ್ಟಿದ್ದರೆ ಜಾನಪದ ಮಹಾಭಾರತದ ಸಂಖ್ಯೆಗಳು ಲಕ್ಷಾಂತರ ಸಂಖ್ಯೆಯನ್ನು ಮೀರಿಸುತ್ತವೆ. ಇವುಗಳನ್ನು ಗಮನಿಸಿದರೆ ಒಬ್ಬ ಕವಿಯೂ ಮತ್ತೊಬ್ಬ ಕವಿಯ ಪ್ರೇರಣೆ ಪಡೆದರೂ ಸಹ ತಮ್ಮ ಕಾವ್ಯವನ್ನು ಬರೆಯುವಾಗ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿರುವುದು ಸ್ಪಷ್ಟ.

ಮಹಾಭಾರತವು ವಿವಿಧ ಧರ್ಮಗಳ ಕವಿಗಳಿಗೆ ಸಿಕ್ಕು ಬದಲಾವಣೆಯಾಗಿದೆ ಎಂಬುವುದಕ್ಕೆ ಹೋಲ್ಟ್ಜ್‌ಮನ್ ರವರು ನಡೆಸಿದ ಅಧ್ಯಯನ ಬಹುಮುಖ್ಯ. ಇವರು 1892 ರಿಂದ 95 ರವರೆಗೆ ಬರೆದ 4 ಸಂಪುಟಗಳ ಬೃಹತ್ ಗ್ರಂಥವೊಂದರಲ್ಲಿ ತಮ್ಮ ಪಿತೃವ್ಯರ ಸಿದ್ಧಾಂತವನ್ನು ಪುಷ್ಟೀಕರಿಸುವ ಪ್ರಯತ್ನವಮಾಡಿದರು. ಆ ವಾದವನ್ನು ಹೀಗೆ ಸಂಗ್ರಹಿಸಬಹುದು "ಮೂಲ ಮಹಾಭಾರತವು ಕೌರವರ ವೈಭವವನ್ನು ಸುತ್ತಿಸುವುದಾಗಿತ್ತು. ಅಶೋಕನ ಆಸ್ಥಾನದ ಬೌದ್ಧ ಕವಿಯೊಬ್ಬನಿಂದ ಅದು ರಚಿತವಾಗಿದ್ದಿರಬೇಕು. ಕರ್ಣನೆ ಆ ಮೂಲ ಕತೆಯ ನಾಯಕ. ಧರ್ಮವು, ನ್ಯಾಯವು ಕೌರವರ ಕಡೆಗಿತ್ತು. ಅವರನ್ನು ವ್ಯಾಜ್ಯವಾಗಿ ಮಾಡಿಕೊಂಡು ಅಶೋಕನು ಸದ್ಗುಣಗಳನ್ನು ಕೀರ್ತಿಸುವುದು ಕವಿಯು ಆಶಯವಾಗಿರಬಹುದು. ಮೂಲ ಮಹಾಭಾರತವು ಸಭಾಪರ್ವದಿಂದ ದುರ್ಯೋಧನ ವಧೆಯವರೆಗೆ ಮಾತ್ರವಿತ್ತು. ಆ ಕಾಲದಲ್ಲಿ ಬೌದ್ಧ–ಶೈವ ಪಂಥಗಳ ನಡುವೆ ಸೌಹಾರ್ದ ಇದ್ದುದರಿಂದ ಅಲ್ಲಲ್ಲಿ ಶೈವಮತ ಅನುಕೂಲ ಪ್ರಕರಣಗಳು ಗ್ರಂಥದಲ್ಲಿದ್ದವು. ಆಮೇಲೆ ಬ್ರಾಹ್ಮಣ ಕವಿಗಳು ವೈಷ್ಣವ ಮತ ಅನುಕೂಲ ಭಾಗಗಳನ್ನು ವಿಪುಲವಾಗಿ ಸೇರಿಸಿದರು, ಕ್ರಮೇಣ ಗ್ರಂಥದ ಬೌದ್ಧ ಮೂಲವು ಅಗೋಚರವಾಗಿ, ಪಾಂಡವರೇ ಕಥಾನಾಯಕರು ಎಂಬ ಭಾವನೆ ಬೆಳೆಯಿತು. ಪಾಂಡವರು ಮಾಡಿದ ಕೃತ್ರಿಮಗಳನ್ನು ಅಪ್ರಧಾನಗಳೆನಿಸಿ ವೈಷ್ಣವಮತ ಅನುಕೂಲ ಭಾಗಗಳೇ ಮುಖ್ಯವೆಂಬಷ್ಟು ಮಟ್ಟಿಗೆ ಈ ಬ್ರಾಹ್ಮಣ ಕವಿಗಳು ಗ್ರಂಥವನ್ನು ಉದ್ದೇಶಪೂರ್ವಕವಾಗಿ ಸ್ವಾನುಕೂಲಕ್ಕಾಗಿ ತಿರುಗಿಸಿಕೊಂಡರು"[1] ಮೇಲಿನ ಈ ಎರಡು ಹೇಳಿಕೆಗಳು ಪ್ರಮುಖವಾಗಿ ಮಹಾಭಾರತ ಒಂದು ಸಮುದಾಯದ ಕವಿಗಳಿಂದ ಮತ್ತೊಂದು ಸಮುದಾಯದ ಕವಿಗಳಿಗೆ ಅಥವಾ ಇತರ ಧರ್ಮದ ಕವಿಗಳ ಪ್ರಭಾವಕ್ಕೆ ಸಿಕ್ಕು ವಿವಿಧ ರೀತಿಯಾಗಿ ಬೆಳೆದುದರ ಸೂಚನೆಯನ್ನು ನೀಡುತ್ತದೆ. ಭಾರತದಲ್ಲಿರುವಂತ ಅನೇಕ ಜಾತಿ, ಧರ್ಮ, ಸಮುದಾಯಗಳಿಂದ ಪಡೆದಂತ ಅನುಭವಗಳಿಂದ 'ಮಹಾಭಾರತ'ದ ಕಥೆಯನ್ನು ವಿಭಿನ್ನವಾಗಿ ನಿರೂಪಿಸಿದಂತೆ, ಕನ್ನಡದಲ್ಲಿಯೂ ಸಹ ತಮ್ಮ ಜಾತಿ, ಧರ್ಮ, ಬದಲಾದ ಸಾಮಾಜಿಕ ಸಂಗತಿ ರಾಜಕಾರಣ ಮುಂತಾದವುಗಳಿಂದ ಪಡೆದ ಜ್ಞಾನದ ಮೂಲಕ ಮಹಾಭಾರತ ಕಾವ್ಯವನ್ನು ವಿಭಿನ್ನ ನೆಲೆಯಲ್ಲಿ ನಿರೂಪಿಸಿದ್ದಾರೆ.

ಕನ್ನಡ ನಾಡಿನಲ್ಲಿ ಪರಿಚಯವಿದ್ದ ಸಂಸ್ಕೃತ ಗ್ರಂಥಗಳಾದ ಭಟ್ಟನಾರಾಯಣನ 'ವೇಣೀಸಂಹಾರ', ಭಾಸನ 'ಊರುಭಂಗ' ಮಹಾಭಾರತ ಕಥೆಯ ಒಂದೊಂದು ತುಣುಕನ್ನು ಮಾತ್ರ ಆಧರಿಸಿ ಕೃತಿ ರಚನೆಯಾಗಿದ್ದವು. ಆದರೆ ಕನ್ನಡ ಭಾಷೆಯಲ್ಲಿ ಸಂಪೂರ್ಣ ಮಹಾಭಾರತದ ಕಥೆಯನ್ನು ಬರೆದವನು ಮತ್ತು ಕನ್ನಡ ಭಾಷೆಯಲ್ಲಿ ಮಹಾಭಾರತದ ಪರಂಪರೆಯನ್ನು ಹುಟ್ಟು ಹಾಕಿದವನು ಪಂಪ. ಇವನ ನಂತರ ಬಂದ ಕನ್ನಡದ ಕವಿಗಳಾದ ರನ್ನ, ಕುಮಾರವ್ಯಾಸ, ತೆಲುಗಿನ ಕವಿಯಾದ ನನ್ನಯ್ಯಭಟ್ಟು ಮುಂತಾದವರು ಪಂಪನಿಗೆ ಋಣಿಯಾಗೆ ತಮ್ಮ ಕಾವ್ಯಗಳನ್ನು ರಚಿಸಿದ್ದಾರೆ. ವಿಕ್ರಮಾರ್ಜುನ ವಿಜಯ ಕಾವ್ಯ ಬರೆಯೂವುದಕ್ಕೂ ಮೊದಲು ಅದುವರೆಗೂ ಸಂಸ್ಕೃತದಲ್ಲಿದ್ದಂತ ಮಹಾಭಾರತವನ್ನು ಇಡೀ ಭಾರತೀಯ ಸಾಹಿತ್ಯದಲ್ಲೇ ಮೊಟ್ಟಮೊದಲು ಒಂದು ಸ್ಥಳೀಯ ಭಾಷೆಯಲ್ಲಿ ಬರೆದದ್ದು ಪಂಪ. ಇದು ಕನ್ನಡಿಗರೆಲ್ಲರೂ ಹೆಮ್ಮೆ ಪಡಬೇಕಾದ ವಿಷಯ. ಪಂಪ ಕನ್ನಡದಲ್ಲಿ ಒಂದು ಸಂಪೂರ್ಣ ಮಹಾಭಾರತವನ್ನು ಬರೆಯುವ ತನಕ ಬೇರೆ ಭಾಷೆಗಳಲ್ಲಿ ಇದು ಸಾಧ್ಯವಾಗಿರಲಿಲ್ಲ. ಉದಾಹರಣೆಗೆ ತೆಲುಗಿನಲ್ಲಿ ಬಂದಂತಹ ಮೊಟ್ಟ ಮೊದಲ ಮಹಾಭಾರತ ಕಾವ್ಯ ನನ್ನಯ್ಯಭಟ್ಟು ಕವಿ ರಚಿಸಿದಂತ 'ನನ್ನಯ್ಯ ಭಾರತ', ಇವನ ಕಾಲ ಕ್ರಿ.ಶ. 1020 ರಿಂದ 63 ಅಂದರೆ ಪಂಪನ ನಂತರದವನೆ. ತಮಿಳಿನಲ್ಲಿ ಮೊಟ್ಟ ಮೊದಲ ಭಾರತ ಪರುಂಡೇವನಾರ್ ಅನುವಾದಿಸಿದ ಭಾರತ. ಇದರ ಕಾಲ 9ನೆ ಶತಮಾನದ ಮಧ್ಯಕಾಲೀನದ ನಂತರ. ಮಲಯಾಳಂನಲ್ಲಿ ರಾಮ ಪಣಿಕ್ಕರ್ ಬರೆದಂತಹ 'ಕನ್ನಸ ಭಾರತಂ' ಮೊದಲನೆಯದು.ಇದರ ಕಾಲ 1480 ಇದಲ್ಲದೆ ಇಡೀ ಭಾರತೀಯ ಸ್ಥಳೀಯ ಭಾಷೆಗಳನ್ನು ಗಮನಿಸಿದಾಗ ಪಂಪ ಮೊಟ್ಟಮೊದಲಿಗೆ ನಿಲ್ಲುತ್ತಾನೆ. ಕನ್ನಡದಲ್ಲಿ ಪಂಪನ ನಂತರ ಬಂದಂತಹ ಕವಿಗಳು, ವ್ಯಾಕರಣಕಾರರು, ಕಾವ್ಯಮೀಮಾಂಸಕರು, ಜ್ಯೋತಿಷ್ಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ರಚನಕಾರರು ಮುಂತಾದವರೆಲ್ಲ ಪಂಪನ ಕಾವ್ಯಗಳಿಂದ ಒಂದಷ್ಟು ಪ್ರೇರಣೆಯನ್ನು ಪಡೆದವರೆ, ಅದರಲ್ಲೂ ರನ್ನ ಕವಿ ಪಂಪನನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸಿರುವುದು ಈ ಲೇಖನ ಬರೆಯಲು ಬಹು ಮುಖ್ಯ ಕಾರಣ.

ರನ್ನನ 'ಗದಾಯುದ್ಧ' ಕಾವ್ಯದ ಸ್ವೀಕರಣ ಮತ್ತು ಪ್ರೇರಣೆ ವಿಚಾರಗಳನ್ನು ಕುರಿತು ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದು, ಅವರುಗಳು ಪ್ರಮುಖವಾಗಿ ಕೆಲವು ವಾದಗಳನ್ನು ಮಂಡಿಸಿದ್ದಾರೆ.

1. ಗದಾಯುದ್ಧವು, ಪಂಪನ 'ವಿಕ್ರಮಾರ್ಜುನ ವಿಜಯ'ದ ಹದಿಮೂರು-ಹದಿನಾಲ್ಕನೆ ಆಶ್ವಾಸದ ಪ್ರೇರಣೆಯನ್ನು ಪಡೆದಿದೆ ಎಂದೂ
2. ಗದಾಯುದ್ಧವು, ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸಿದೆ ಮತ್ತು ಸ್ವಲ್ಪ ಮಟ್ಟಿಗೆ ಭಾಸ, ಭಟ್ಟನಾರಾಯಣರ ಪ್ರೇರಣೆಯನ್ನು ಪಡೆದಿದೆ ಎಂದೂ
3. ಪಂಪಭಾರತ, ವ್ಯಾಸಭಾರತ ಪ್ರೇರಣೆಯನ್ನು ಪಡೆದಿದೆ ಎಂದೂ ಕೆಲವರು ವಾದಿಸಿದ್ದಾರೆ.

ಗದಾಯುದ್ಧವನ್ನು ಪಂಪಭಾರತದ ಜೊತೆಗಿಟ್ಟು ತೌಲನಿಕವಾಗಿ ಅಧ್ಯಯನ ಮಾಡಿದಾಗ ಮೊದಲನೆ ಮತ್ತು ಮೂರನೆ ಹೇಳಿಕೆಗಿಂತ ಎರಡನೆ ಹೇಳಿಕೆಯೇ ಹೆಚ್ಚು ಸೂಕ್ತವಾಗಿದೆ. ಡಾ.ಎಂ.ರಾಮಕೃಷ್ಣ ರವರು 'ರನ್ನ ಮತ್ತು ಆತನ ಕೃತಿಗಳು' ಎಂಬ ಗ್ರಂಥದಲ್ಲಿ ರನ್ನನು ಇತರ ಕವಿಗಳಿಂದ ಪಡೆದ ಆಕರಗಳು ಮತ್ತು ಪ್ರಭಾವವನ್ನು ಕುರಿತು ಒಂದು ಅಧ್ಯಯನದಲ್ಲಿ ಸಮೀಕ್ಷಿಸಿದ್ದಾರೆ. ಇವರೇ ಹೇಳುವಂತೆ "ಪಂಪಭಾರತದ ಹದಿಮೂರನೆಯ ಆಶ್ವಾಸದ ಒಂದು ಭಾಗದ ಸುಮಾರು ಅರವತ್ತು ಎಪ್ಪತ್ತು ಪದ್ಯ ಮತ್ತು ವಚನಭಾಗದ ಕಥೆಯನ್ನು ಸುಮಾರು 582 ಪದ್ಯ ಹಾಗೂ ವಚನಭಾಗವುಳ್ಳ ಹತ್ತು ಆಶ್ವಾಸಗಳಲ್ಲಿ ವಿಸ್ತರಿಸಿದ್ದಾನೆ"[2] ಎನ್ನುತ್ತಾರೆ. ಹಾಗೆ "ಪಂಪನಿಗಿಂತ ಬೇರೆಯಾಗಿ ಸೇರಿಸಿರುವ, ಬದಲಿಸಿರುವ ಅಂಶಗಳು"[3] ಎಂದು ಹನ್ನೆರಡು ಅಂಶಗಳನ್ನು ಪಟ್ಟಿಮಾಡಿದ್ದಾರೆ. ಇಲ್ಲಿ ಇವರು ಪಂಪಭಾರತದ 13-14 ನೆ ಆಶ್ವಾಸಗಳಿಗೆ ಸೀಮಿತವಾಗಿ ಪ್ರಭಾವವನ್ನು ಗುರುತಿಸಿದ್ದಾರೆ.

ಗದಾಯುದ್ಧದಲ್ಲಿ ರನ್ನನ ಸ್ವಂತ ಅಭಿವ್ಯಕ್ತಿ ಎಂದು ಗುರುತಿಸುತ್ತಾ ರಂ.ಶ್ರೀ. ಮುಗಳಿಯವರು ಹೇಳುವ ಅಭಿಪ್ರಾಯ "ದುರ್ಯೋಧನ ಮತ್ತು ಸಂಜಯ ಇವರ ಸವಿಸ್ತಾರ ಸಂಭಾಷಣೆ, ಅದರಲ್ಲಿ ದುರ್ಯೋಧನನಿಂದ ದ್ರೋಣಾದಿಗಳ ಮೂದಲಿಕೆ, ಪಾಂಡವರ ಹಾಗೂ ಕೃಷ್ಣನ ನಿಂದೆ, ಸಂಜಯನಿಂದ ಆಯಾ ವ್ಯಕ್ತಿಗಳ ಸಮರ್ಥನೆ, ಪಾಂಡವ ಸ್ತುತಿಯಲ್ಲಿ ಸವಿಶೇಷವಾದ ಭೀಮಪ್ರಶಂಸೆ ಇವೆಲ್ಲ ಗದಾಯುದ್ಧದಲ್ಲಿ ಮಾತ್ರ ಗೋಚರವಾಗುತ್ತದೆ"[4] ಎನ್ನುತ್ತಾರೆ.

ದುರ್ಯೋಧನ ಹಾಗೂ ಸಂಜಯರ ಸವಿಸ್ತಾರ ಸಂಭಾಷಣೆ ಪಂಪಭಾರತದಲ್ಲಿ ಇಲ್ಲದಿರುವುದೇನೋ ನಿಜ. ಆದರೆ ಅಲ್ಲಿ ಆ ಭಾಗ ಸಂಕ್ಷಿಪ್ತವಾಗಿ ಬಂದಿದೆ. ರನ್ನನಲ್ಲಿ ಆ ಸಂದರ್ಭದಲ್ಲಿ ಬಂದಿರುವ ವಿವರಗಳೆಲ್ಲವೂ ಅಂದರೆ ದ್ರೋಣಾದಿಗಳ ಮೂದಲಿಕೆ ಮುಂತಾದ ಅಂಶಗಳು ಪಂಪಭಾರತದ ಬೇರೆ ಬೇರೆ ಸಂದರ್ಭಗಳಿಂದ ಎತ್ತಿದ್ದುದೇ ಆಗಿವೆ. ಉದಾಹರಣೆಗೆ ಪಂಪಭಾರತದಲ್ಲಿ ದ್ರೋಣ-ಕರ್ಣ ಹಾಗೂ ಅಶ್ವತ್ಥಾಮ-ಕರ್ಣರ ನಡುವೆ ಜಾತಿಯನ್ನು ಕುರಿತು ವಾಗ್ವಾದವಾಗುತ್ತದೆ. ಅವೇ ಮಾತುಗಳನ್ನು ರನ್ನನ ದುರ್ಯೋಧನನು ದ್ರೋಣ-ಅಶ್ವತ್ಥಾಮರನ್ನು ಹಿಯ್ಯಾಳಿಸಲು ಉಪಯೋಗಿಸುತ್ತಾನೆ.

"ರನ್ನನಿಗೆ ಸಂಗ್ರಹ ಸಮಾಸಕ್ಕಿಂತ ವ್ಯಾಸ-ವಿಸ್ತಾರ ಹೆಚ್ಚು ಪ್ರಿಯವಾದದ್ದು"[5] ಎಂದು ರಂ.ಶ್ರೀ.ಮುಗಳಿ ಯವರು ಹೇಳಿರುವ ಅಭಿಪ್ರಾಯವೇನೋ ಸರಿಯೇ. ಆದರೆ ರನ್ನನ ಈ ವ್ಯಾಸವಿಸ್ತಾರವೂ ಪಂಪನ ಆಧಾರದಿಂದಲೇ ನಡೆದಿದೆ.ಪಂಪನು ಯಾವ ಯಾವ ಸಂದರ್ಭಗಳಲ್ಲಿಯೋ ಬಳಸಿದ ಅನೇಕ ಪ್ರಯೋಗಗಳನ್ನು ರನ್ನನು ಒಂದೆಡೆ ಜೋಡಿಸುತ್ತಾನೆ. ಉದಾಹರಣೆಗೆ ಪಂಪಭಾರತದಲ್ಲಿ ಬಂದಿರುವ ಕರ್ಣನಿಗೆ ಸಂಬಂಧಪಟ್ಟ ವಿವರಗಳೆಲ್ಲವೂ 'ಗದಾಯುದ್ಧ'ದಲ್ಲಿ ದುರ್ಯೋಧನನ್ನು ಕರ್ಣನನ್ನು ನೆನೆದು ಶೋಕಿಸುವಾಗಿನ ಸಂದರ್ಭದಲ್ಲಿ ಒಂದೇ ಕಡೆ ತಂದು ಜೋಡಿಸಲಾಗಿದೆ. ಹೀಗೆ ಬೇರೆ ಬೇರೆ ಕಡೆಗಳಿಂದ, ಸಂದರ್ಭಗಳಿಂದ, ಪ್ರಸಂಗಗಳಿಂದ, ಘಟನೆಗಳಿಂದ ಪಂಪಭಾರತದಿಂದ ಎತ್ತಿ ತಂದು ಜೋಡಿಸುವಾಗ ಕೆಲವೊಮ್ಮೆ ಅನೌಚಿತ್ಯಗಳನ್ನೂ ಗಮನಿಸದೆ ಅವನ್ನೂ ಕೆಲವೊಮ್ಮೆ ಸ್ವೀಕರಿಸಿದ್ದಾನೆ.

ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ ರವರು "ಗದಾಯುದ್ಧ ಕಾವ್ಯಕ್ಕೆ ಭಾರತವೇ ಮೂಲವಾದರೂ ತನ್ನ ಅದ್ಭುತ ಪಾಂಡಿತ್ಯದಿಂದ ಕಥಾಕ್ರಮವನ್ನು ಬಹು ಸರಸವಾಗಿ ಪರಿವರ್ತಿಸಿದ್ದಾನೆ"[6] ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ರನ್ನ ಪಾಂಡಿತ್ಯದ ಕವಿ ಹೌದು ಆದರೆ 'ಗದಾಯುದ್ಧ' ಕಾವ್ಯದ ವಸ್ತುವಾಗಿರುವುದು ಮಹಾಭಾರತದ ಭೀಮ-ದುರ್ಯೋಧನರ ಗದಾಯುದ್ಧದ ಪ್ರಸಂಗವಾದರೂ ಕಾವ್ಯಕ್ಕೆ ಆಕರವಾಗಿರುವುದು ಮಾತ್ರ ಪಂಪಭಾರತವೇ ಹೊರತು ವ್ಯಾಸಭಾರತವಲ್ಲ. ರನ್ನನು ಪಂಪಭಾರತವನ್ನು ಚೆನ್ನಾಗಿ ಅಧ್ಯಯನ ಮಾಡಿರುವುದು ಹೆಜ್ಜೆ ಹೆಜ್ಜೆಗೂ ಗೋಚರವಾಗುತ್ತದೆ. ಬರಿಯ ಲೌಕಿಕ-ಆಗಮಿಕ ಎಂಬ ಕಾವ್ಯ ವಿಭಾಗಗಳಿಗೋ, ಕಥಾನಾಯಕನನ್ನು ಕಾವ್ಯ ನಾಯಕನಲ್ಲಿ ತಗುಳ್ಚಿ ಹೇಳುವುದಕ್ಕೋ, ಕಾವ್ಯ ವಸ್ತುವಿಗೋ,

ಪದ-ಪಾದ-ವಾಕ್ಯ ಇತ್ಯಾದಿಗಳ ಸ್ವೀಕರಣೆಗೋ ಮಾತ್ರ ಪಂಪನಿಗೆ ಋಣಿಯಾಗಿಲ್ಲ. ಈ ಎಲ್ಲ ಅಂಶಗಳನ್ನು ಸೇರಿಸಿ ಭಾವನೆಗಳಿಗೆ, ಯಾವ ಕಾರಣಕ್ಕೆ ತನ್ನ ಕಾವ್ಯ ನಾಯಕನನ್ನು ಆರಿಸಿಕೊಂಡೆ ಎಂಬುದಕ್ಕೆ, ತನ್ನ ಕಾವ್ಯ ನಾಯಕನನ್ನು ದೇವದೇವತೆಗಳ ಹೋಲಿಕೆಯ ರೀತಿಗೆ, ಬೇರೆ ಸಂಸ್ಕೃತ ಕವಿಗಳ ಪ್ರಭಾವ ಪಂಪನ ಮೇಲೆ ಉಂಟಾಗಿದ್ದರೆ ಅದೇ ಕವಿಯ ಪ್ರಭಾವ ರನ್ನನ ಮೇಲೂ ಆಗಿದ್ದಾಗ ಪಂಪನ ಅಭಿವ್ಯಕ್ತಿಯ ರೀತಿಯನ್ನೇ ರನ್ನನೂ ಅನುಸರಿಸಿರುವುದು ಹೀಗೆ ಪಂಪನಿಂದ ಬಿಡಿಸಿಕೊಳ್ಳಲಾಗದಂತೆ ತನ್ನನ್ನು ತಾನೇ ಬಂಧಿಸಿಕೊಂಡಿದ್ದಾನೆ. ಐ.ಶಿವರಾಮಯ್ಯ ರವರು ಪಂಪ-ರನ್ನನನ್ನು ಕುರಿತು "ರನ್ನ ಗದಾಯುದ್ಧ ಅಥವಾ ಸಾಹಸ ಭೀಮ ವಿಜಯವನ್ನು ಬರೆಯುವುದರಲ್ಲಿ, ಪಂಪನ ಪದ್ಧತಿಯನ್ನು ಬಿಡದೆ ಅನುಸರಿಸಿರುವನು. ಅವನು ಅರಿಕೇಸರಿಯನ್ನು ಭಾರತದ ಮೂಲಕ ವರ್ಣಿಸಿರುವಂತೆ ಇವನೂ ಸತ್ಯಾಶ್ರಯ, ಚಾಳುಕ್ಯ, ಮಾರ್ತಾಂಡ ಮೊದಲಾದ ಬಿರುದುಗಳುಳ್ಳ ಅಹವಮಲ್ಲದೇವನನ್ನು ಹೊಗಳಿ, ಆತನನ್ನು ಭೀಮನೊಡನೆ ಹೋಲಿಸಿ ಗ್ರಂಥವನ್ನು ಬರೆಯುವುದೇ ಇವನ ಉದ್ದೇಶವು. ಇವನೂ ಪಂಪನಂತೆಯೇ ತನ್ನ ಗ್ರಂಥದಲ್ಲಿ ಜೈನಪದ್ಧತಿಯನ್ನು ವಿಶೇಷವಾಗಿ ಸೇರಿಸಿಲ್ಲ"[7] ಎಂದು ಹೇಳಿರುವುದು ರನ್ನ ವ್ಯಾಸಭಾರತಕ್ಕಿಂತ ಪಂಪಭಾರತವನ್ನೇ ಅನುಸರಿಸಿರುವ ಹೇಳಿಕೆಗೆ ಸೂಕ್ತವಾಗಿದೆ.

ರನ್ನ 'ಗದಾಯುದ್ಧ' ಕಾವ್ಯದ ಆರಂಭದಿಂದ ಅಂತ್ಯದವರೆಗೂ ಪಂಪನ ಪ್ರೇರಣೆಯನ್ನು ಪಡೆದಿದ್ದು ಅದಕ್ಕೆ ಸಂಬಂಧಿಸಿದ ಒಂದು ಉದಾಹರಣೆಯನ್ನು ಮಾತ್ರ ವಿವರವಾಗಿ ನೋಡುವುದಾದರೆ.

ವ್ಯಾಸಭಾರತದಲ್ಲಿ ಭೀಮ ದುರ್ಯೋಧನರ ಯುದ್ಧ ನಡೆಯುತ್ತಿದ್ದಾಗ ಒಮ್ಮೆ ದುರ್ಯೋಧನನು ಹೊಡೆತ ತಿಂದು ಕೆಳಗೆ ಬೀಳುವುದೂ, ಮತ್ತೊಮ್ಮೆ ಭೀಮನು ಮೋಹಪರವಶನಾಗಿ ಮುಂದೇನೂ ತಿಳಿಯದಂತೆ ನಿಲ್ಲುವುದು ಎರಡೆರಡು ಸಾರಿ ನಡೆಯುತ್ತದೆ. ಮೂರನೆಯ ಬಾರಿ ಭೀಮನು ಮೂರ್ಛಿತವಾಗಿ ಕೆಳಗೆ ಬೀಳಲು ದುರ್ಯೋಧನನು ತನ್ನ ಸಂಪೂರ್ಣ ಶಕ್ತಿಯನ್ನು ಯೋಜಿಸಿ ಗದಾಪ್ರಹಾರ ಮಾಡಿ ಭೀಮಸೇನನ ವಜ್ರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸದೃಶವಾದ ಕವಚವನ್ನು ಭೇದಿಸಿಬಿಟ್ಟನು. ಪಾಂಡವರು ಭಯ ಪೀಡಿತರಾದರು. ಭೀಮಸೇನನು ರಕ್ತಸಿಕ್ತವಾದ ಮುಖವನ್ನು ಒರೆಸಿಕೊಳ್ಳುತ್ತಾ, ಧೈರ್ಯವನ್ನವಲಂಬಿಸಿ, ಕಣ್ಣುಗಳನ್ನು ಹೊರಳಿಸಿ ಬಲಪೂರ್ವಕವಾಗಿ ಝುರ್ಝುರಿತವಾಗಿದ್ದ ಶರೀರವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಪುನಃ ಯುದ್ಧ ಸನ್ನದ್ಧವಾಗಿ ನಿಂತನು. ದುರ್ಯೋಧನನು ಅತ್ಯಂತ ವೇಗದಿಂದ ಭೀಮಸೇನನನ್ನು ತನ್ನ ಗದೆಯಿಂದ ಅಪ್ಪಳಿಸಿದನು, ಭೀಮನು ಮೂರ್ಛೆಗೊಂಡಂತಾದನು, ಯಾತನೆಯನ್ನು ಬಹಳ ಕಷ್ಟದಿಂದ ಸಹಿಸಿದನು. ಇದರಿಂದಾಗಿ ಭೀಮನು ತನ್ನ ಗದಾಪ್ರಹಾರದಿಂದ ಪೀಡಿತನಾಗಿರುವೆನೆಂದು ದುರ್ಯೋಧನನಿಗೆ ತಿಳಿಯಲೇ ಇಲ್ಲ. ಪ್ರತಿಯಾಗಿ ತನ್ನನ್ನು ಪ್ರಹರಿಸಲು ಭೀಮಸೇನನು ಸಮಯ ಕಾಯುತ್ತಾ ನಿಂತಿರುವನೆಂದೇ ಭಾವಿಸಿದನು. ಸ್ವಲ್ಪ ಹೊತ್ತಿನಲ್ಲೇ ಭೀಮಸೇನನು ಚೇತರಿಸಿಕೊಂಡು ಸಿಂಹದಂತೆ ಗರ್ಜನೆ ಮಾಡುತ್ತಾ ದುರ್ಯೋಧನನ ತೊಡೆಗಳನ್ನು ಮುರಿಯುವನು

ಪಂಪನು ಗದಾಯುದ್ಧ ಸಂದರ್ಭವನ್ನು ಹ್ರಸ್ವಮಾಡಿದ್ದಾನೆ. ಮೇಲಿನ ವಿವರ ಯಾವುವೂ ಇಲ್ಲ. ಭೀಮನು ದುರ್ಯೋಧನನ ಹೊಡೆತದಿಂದ ಮೂರ್ಛೆ ಹೋದನೆಂದು ಆಗ ದುರ್ಯೋಧನನು ಅವನಿಗೆ ಗದೆಯಿಂದ ಗಾಳಿ ಹಾಕಿದನೆಂದು ಬದಲಾಯಿಸಿಕೊಂಡಿದ್ದಾನೆ.

ವ್ಯಾಸಭಾರತದಲ್ಲಿ ಕೃಷ್ಣನ ಸೂಚನೆಯಂತೆ ತೊಡೆತಟ್ಟಿ ಸನ್ನೆ ಮಾಡಿದ್ದು ಅರ್ಜುನ. ಭೀಮನು ಮೂರ್ಛೆಹೋದಾಗ ಅದು ದುರ್ಯೋಧನನಿಗೆ ತಿಳಿಯುವುದೇ ಇಲ್ಲ. ನಂತರ ಭೀಮನ ಹೊಡೆತದಿಂದ ತೊಡೆಮುರಿದು ಬಿದ್ದಾಗ, ಭೀಮನು ಕಿರೀಟವನ್ನು ಒದೆಯುತ್ತಾನೆ. ಅಲ್ಲದೆ ತನಗೆ ಜಯವಾದುದಕ್ಕೆ ಕುಣಿದಾಡುತ್ತಿರುತ್ತಾನೆ. ಭೀಮನ ನಡವಳಿಕೆಯನ್ನು ಧರ್ಮರಾಯನು ಖಂಡಿಸುತ್ತಾನೆ. ನಂತರ ಬಲರಾಮನೂ ಕೋಪೋದ್ರಿಕ್ತನಾಗಿ ಭೀಮನನ್ನು ಹೊಡೆಯಲು ಹೋಗುತ್ತಾನೆ.

ಪಂಪಭಾರತದಲ್ಲಿ ಕೃಷ್ಣನೇ ತೊಡೆ ತಟ್ಟಿಕೊಂಡು ಭೀಮನಿಗೆ ಸನ್ನೆಮಾಡುತ್ತಾನೆ. ಭೀಮನು ದುರ್ಯೋಧನನ ಪೆಟ್ಟಿನಿಂದ ಮೂರ್ಛೆ ಹೋದಾಗ, ಅವನು ಭೀಮನಿಗೆ ಗದೆಯಿಂದ ಗಾಳಿ ಹಾಕುತ್ತಾನೆ. ಮೂರ್ಛೆ ತಿಳಿದೆದ್ದ ಭೀಮನ ಹೊಡೆತದಿಂದ ತೊಡೆ ಮುರಿದು ದುರ್ಯೋಧನನು ಕೆಳಗೆ ಬೀಳುತ್ತಾನೆ. ನಂತರ ಭೀಮನು ಮುಕುಟವನ್ನು ಒದೆಯುತ್ತಾನೆ. ಇಲ್ಲಿ ಧರ್ಮರಾಯನು ಭೀಮನನ್ನು ಖಂಡಿಸುವ ಮಾತೇ ಇಲ್ಲ. ತನ್ನ ತಮ್ಮನ ಮನಸ್ಸನ್ನು ನೋಯಿಸಲಾರದೆ ದ್ವಾರಕೆಗೆ ಹಿಂದಿರುಗುತ್ತಾನೆ. ಈ ಸಂದರ್ಭವು ಪಂಪಭಾರತದಲ್ಲಿದ್ದಂತೆಯೇ 'ಗದಾಯುದ್ಧ'ದಲ್ಲಿಯೂ ನಿರೂಪಿತವಾಗಿದೆ.

ರನ್ನನು ಈ ಭಾಗದಲ್ಲಿ ನಿಷ್ಠೆಯಿಂದ ಪಂಪನನ್ನು ಅನುಸರಿಸಿದ್ದಾನೆ. ಒಂದು ವೇಳೆ ವ್ಯಾಸಭಾರತದ ನಿರೂಪಣೆಯನ್ನೇ ಅನುಸರಿಸಿದ್ದರೆ ತನ್ನ ಕಾವ್ಯ ನಾಯಕನಾದ ಭೀಮನ ಪಾತ್ರವನ್ನು ಮೇಲೆತ್ತಬಹುದಾಗಿತ್ತು. ಅದಕ್ಕೆ ಅವಕಾಶವೂ ಇತ್ತು. ಆದರೆ 'ಗದಾಯುದ್ಧ'ವನ್ನೇ ದೃಷ್ಟಿಯಲ್ಲಿಟ್ಟುಕೊಂಡು, ಭೀಮನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡೂ ಈ ಸಂದರ್ಭವನ್ನು ರನ್ನನು ಸರಿಯಾಗಿ ಉಪಯೋಗಿಸಿಕೊಂಡಿಲ್ಲ.ಇದಲ್ಲದೆ ರನ್ನನೂ ಸಂಜಯನ ಪ್ರಸಂಗ (ಆ–1), ದ್ರೋಣ–ಅಶ್ವತ್ಥಾಮರ ಬಗೆಗೆ (ಆ–1), ಅರ್ಜುನನ ಬಗೆಗೆ (ಆ–2), ಧೃತರಾಷ್ಟ್ರ, ಗಾಂಧಾರಿ–ದುರ್ಯೋಧನರ ಭೇಟಿ (ಆ–3), ರಣರಂಗದಲ್ಲಿ ದುರ್ಯೋಧನ ಸಂಜಯರು ನಡೆದು ಬರುವಾಗ (ಆ–4), ಮರುಳುಗಳ ಪ್ರಸಂಗ (ಆ–4), ದ್ರೋಣನ ದೇಹವನ್ನು ನೋಡಿದಾಗ (ಆ–4), ಅಭಿಮನ್ಯು ಪ್ರಸಂಗ (ಆ–4), ಲಕ್ಷಣ ಕುಮಾರ (ಆ–4), ದುಶ್ಶಾಸನ ವಧೆ (ಆ–5), ಕರ್ಣನ ಬಗೆಗೆ (ಆ–5), ದುರ್ಯೋಧನ–ಭೀಷ್ಮರ ಭೇಟಿ (ಆ–5), ವೈಶಂಪಾಯನ ಸರೋವರ ವರ್ಣನೆ (ಆ–6), ವೈಶಂಪಾಯನ ಸರೋವರ ಪ್ರವೇಶ (ಆ–6), ಭೀಮನಿಂದ ದುರ್ಯೋಧನನು ಅಡಗಿರುವ ಸ್ಥಳದ ಅರಿವು (ಆ–6), ದುರ್ಯೋಧನನು ಸರೋವರದಿಂದ ಮೇಲೇಳುವ ಪ್ರಸಂಗ (ಆ–7), ಬಲರಾಮನ ಪ್ರವೇಶ (ಆ–7), ಗದಾಯುದ್ಧ ಪ್ರಸಂಗ (ಆ–8), ಅಶ್ವತ್ಥಾಮ–ಲಕ್ಷ್ಮೀ ಪ್ರಸಂಗ (ಆ–9), ಇವುಗಳಲ್ಲಿ ಪಂಪನ ಪ್ರೇರಣೆಯನ್ನು ಪಡೆದಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಪಾಂಡಿತ್ಯ ಕವಿ ರನ್ನ ತನ್ನ 'ಗದಾಯುದ್ಧ'ದಲ್ಲಿ ಹೊಸ ಸೃ ಮಾಡಿದ್ದಾನೆಂದು ಮತ್ತು ಪಂಪನ ಅನುಕರಣೆ ಸಹಜ ಹಾಗೂ ಪೂರ್ವಕವಿಗಳ ಕೃತಿಗಳನ್ನು ಬೇಕಾದ ಹಾಗೆ ಉಪಯೋಗಿಸಿಕೊಳ್ಳುವ ಹಕ್ಕು ಉಂಟೆಂದು ಕೆಲವರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ.

ರನ್ನನು ಸ್ವತಂತ್ರವಾಗಿ ನಿರ್ವಹಿಸಿರುವ ಭಾಗ ಗದಾಯುದ್ಧದ ಭಾಗದ ಪೂರ್ವಭಾವೀ ಸಿದ್ಧತೆ, ವೈಶಂಪಾಯನ ಸರೋವರದ ಸುತ್ತಮುತ್ತಲಿನ ಭಾಗದ ವರ್ಣನೆ, ದ್ರೌಪದಿಯ ಸೌಂದರ್ಯದ ವರ್ಣನೆ, ಯುದ್ಧರಂಗದಲ್ಲಿ ನವರಸ ವರ್ಣನೆಗಳು ಜೊತೆಗೆ ಮೇಲೆ ಹೇಳಿರುವ (ಪಂಪನ ಪ್ರೇರಣೆ) ಪ್ರಸಂಗಗಳಲ್ಲಿ ಪಂಪನಲ್ಲಿ ಸಂಕ್ಷಿಪ್ತವಾದ ಭಾಗಗಳನ್ನು ವಿಸ್ತರಿಸಿ, ತನ್ನ ಪಾಂಡಿತ್ಯವನ್ನು ಮೆರೆದಿರುವುದು ಯಾರು ಅಲ್ಲಗಳೆಯುವಾಗಿಲ್ಲ. ಒಂದು ಉತ್ಕೃಷ್ಟ ಗ್ರಂಥವನ್ನು ರಚಿಸಲು ಪಂಪನನ್ನು ಒಳಗೊಂಡಂತೆ ಇತರ ಮಹಾಭಾರತಗಳನ್ನು ಬರೆದ ಕವಿಗಳು ತನಗಿಂತ ಹಿಂದಿದ್ದ ಕವಿಗಳನ್ನು ಅನುಸರಿಸಿ ಭಾರತವೆಂಬ ಒಂದೇ ಪಥ್ಯ ಬಹುಪಥ್ಯಗಳಾಗಿ ಮಾರ್ಪಾಡಾಗಿರುವ ಚರ್ಚೆಯನ್ನು ನಾನು ಲೇಖನದ ಆರಂಭದಲ್ಲೇ ಮಾಡಿದ್ದೇನೆ. ಹಾಗಾಗಿ ರನ್ನನಿಗೆ ತನಗಿಂತ ಹಿಂದಿದ್ದ ಕವಿಗಳ ಕಥೆಯನ್ನು ಅನುಕರಿಸುವ ಹಕ್ಕುಂಟು, ಆದರೆ ಪಂಪನಂತೆ "ವ್ಯಾಸಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ, ವ್ಯಾಸನೆಂಬ ಗರ್ವಮೆನಗಿಲ್ಲ"[8] (ನಾನು ವ್ಯಾಸಮಹರ್ಷಿಗಳ ವಿಸ್ತಾರವಾದ ಕಾವ್ಯವೆಂಬ ಅಮೃತ ಸಾಗರವನ್ನು ಈಜುತ್ತೇನೆ. ಆದರೆ ಕವಿ ವ್ಯಾಸನೆಂಬ ಗರ್ವ ಮಾತ್ರ ನನಗಿಲ್ಲ) ಎಂದು ತಾನು ಅನುಸರಿಸಿದ ಹಿಂದಿನ ಕವಿಯಾದ ವ್ಯಾಸನು ನೆನೆಯುವ ಹೃದಯವಂತಿಗೆ, ಔದಾರ್ಯತೆ, ಕೃತಜ್ಞತಾಭಾವ, ಪಂಪನನ್ನು ಹೆಜ್ಜೆ ಹೆಜ್ಜೆಗೂ ಅನುಸರಿಸಿ, ಪಂಪನ ಋಣದಲ್ಲಿರುವಂತ ರನ್ನನಿಗೆ ಇಲ್ಲದಿರುವುದು ಎಷ್ಟು ಸರಿ ಎಂಬುದೇ ಪ್ರಶ್ನೆ.

## ಕೊನೆಟಿಪ್ಪಣಿ


1. ಎಸ್.ಆರ್.ರಾಮಸ್ವಾಮಿ : ಮಹಾಭಾರತದ ಬೆಳವಣಿಗೆ, ಪು.ಸಂ–29, ಮು–1972.
2. ಡಾ.ಎಂ.ರಾಮಕೃಷ್ಣ : ರನ್ನ ಮತ್ತು ಆತನ ಕೃತಿಗಳು, ಪು.ಸಂ–88, ಮು–2002.
3. ಡಾ.ಎಂ.ರಾಮಕೃಷ್ಣ : ರನ್ನ ಮತ್ತು ಆತನ ಕೃತಿಗಳು, ಪು.ಸಂ–88,89, ಮು–2002.
4. ರಂ.ಶ್ರೀ.ಮುಗಳಿ : ರನ್ನನ ಕೃತಿರತ್ನ, ಪು.ಸಂ–07, ಮು–1946.
5. ರಂ.ಶ್ರೀ.ಮುಗಳಿ : ರನ್ನನ ಕೃತಿರತ್ನ, ಪು.ಸಂ–06, ಮು–1946.
6. ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ : ರನ್ನ, ಪುಸ್ತಕ–ರನ್ನ ಕವಿ ಪ್ರಶಸ್ತಿ, ಪು.ಸಂ–36, ಮೊ.ಮು–1928, ನಾ.ಮು–2009
7. ಐ.ಶಿವರಾಮಯ್ಯ : ವ್ಯಾಸಭಾರತ, ಕುಮಾರವ್ಯಾಸ ಭಾರತ, ಪಂಪ ಭಾರತ ಮತ್ತು ಗದಾಯುದ್ಧ (ತೌಲನಿಕ ಅಧ್ಯಯನ), ಪುಸ್ತಕ–ರನ್ನ ಕವಿ ಪ್ರಶಸ್ತಿ, ಪು.ಸಂ–43, ಮೊ.ಮು–1928, ನಾ.ಮು–2009.
8. ಬೆಳ್ಳಾವೆ ವೆಂಕಟನಾರಾಯಣಪ್ಪ : ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯ, ಪು.ಸಂ– 03,ಮೊ.ಮು–1973, ಮೂ.ಮು–2013


*– 37ನೇ ಪುಟಕ್ಕೆ ಮುಂದುವರೆದುದು*

APPROVED UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಒಡಲಾಳ : ಹಸಿವು, ಮೌನ ಮತ್ತು ಪ್ರತಿಭಟನೆ

✍ **ಡಾ. ವೆಂಕಟಗಿರಿ ದಳವಾಯಿ,** ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ಹೊಸಪೇಟೆ ತಾಲೂಕು ವಿಜಯನಗರ ಜಿಲ್ಲೆ, ಕರ್ನಾಟಕ

ಒಡಲಾಳ ದೇವನೂರು ಮಹಾದೇವ ಅವರ ಮೊದಲ ಕಾದಂಬರಿ. ಇದು 34 ಪುಟಗಳನ್ನೊಳಗೊಂಡ ಒಂದು ಕಿರು ಕಾದಂಬರಿಯಾಗಿದೆ. ಒಂದು ದಿನದ ಘಟನೆಗಳ ಸುತ್ತ ಈ ಕಥೆ ಹೆಣೆದುಕೊಂಡಿದೆ. ಸಾಕವ್ವನದು ನಾಲ್ಕು ಕಂಬದ ತೊಟ್ಟಿ ಮನೆ. ಅವಳು ಗಂಡಸಿಗಿಂತಲೂ ಮಿಗಿಲಾಗಿ ದುಡಿದು ತನ್ನ ಸ್ವಂತ ಪರಿಶ್ರಮದಿಂದ ಆ ತೊಟ್ಟಿಮನೆಯನ್ನು ಕಟ್ಟಿಸಿದ್ದಾಳೆ. ಅಂತಹ ಮನೆ ಈಗ ಅವಳ ಮಕ್ಕಳ ಕಾಲದಲ್ಲಿ ಅವನತಿಯ ಹಾದಿ ಹಿಡಿದಿದೆ. ಸಾಕವ್ವನ ಖಾಸ ಹುಂಜವೊಂದು ಕಳೆದು ಹೋಗಿದೆ. ಅದಕ್ಕಾಗಿ ಅವಳು ಹುಡುಕಾಟ ಪ್ರಾರಂಭಿಸಿದ್ದಾಳೆ. ಆ ಹುಂಜ ದೇವರಿಗೆ ಬಿಟ್ಟಿದ್ದು. ದೇವರು ತನ್ನ ದೃಢವನ್ನು ಪರೀಕ್ಷಿಸುತ್ತಿರಬೇಕೆಂದು ಅವಳ ನಂಬಿಕೆ. ಹೀಗೆ ಸಾಕವ್ವ ತನ್ನ ಹುಂಜಕ್ಕಾಗಿ ಹಲುಬುತ್ತಿದ್ದಾಳೆ. ಇವಳ ಮಕ್ಕಳಾದ ಕಾಳಣ್ಣ, ಸಣ್ಣಯ್ಯ, ಗುರುಸಿದ್ದು, ಗೌರಮ್ಮ, ಪುಟಗೌರಿ ಹಾಗೂ ಸೊಸೆಯಂದಿರು ಹುಂಜದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಇದರಿಂದ ಸಾಕವ್ವನ ದುಃಖ ಹೆಚ್ಚಾಗುತ್ತದೆ. ಊರು ಏಳುವುದಕ್ಕೆ ಮೊದಲೇ ಎದ್ದ ಸಾಕವ್ವ ತನ್ನ ಹುಂಜದ ಶೋಧನೆಯಲ್ಲಿ ತೊಡಗಿದ್ದಾಳೆ. ಹುಂಜ ರಾತ್ರಿಯೇ ಬಂದು ಮನೆ ಸೇರಿರಬಹುದೆಂದು ಮನೆಯ ಮೂಲೆ ಮೂಲೆಯಲ್ಲಿಯೂ 'ಬಾ... ಬಾ... ಕೊ... ಕೊ...' ಎನ್ನುತ್ತ ನಡೆಯುತ್ತಿದ್ದಾಗ ಸಿಟ್ಟಿಗೆದ್ದ ಹಿರಿಯ ಮಗ ಕಾಳಣ್ಣ ಬೆಳಕು ಮೂಡಿದ ಮೇಲೆ ನೋಡಿದರಾಯ್ತು ಈಗ ಮಲಗು ಎನ್ನುತ್ತಾನೆ. ಇದರಿಂದ ಕೋಪಗೊಂಡ ಸಾಕವ್ವ, ಹೊತ್ತು ಮೂಡಿ ಎರಡು ಮಾರು ಬಂದರೂ ನೀನು ಮಲಗುತ್ತಿದ್ದರಿಂದಲೇ ನನ್ನ ಮನೆ ಈ ಸ್ಥಿತಿಗೆ ಬಂದದ್ದು ಎಂದು ಜಾಡಿಸುತ್ತಾಳೆ. ಕಾಳಣ್ಣ ತೆಪ್ಪಗೆ ಮಲಗುತ್ತಾನೆ. ಚುರುಕು ಬುದ್ಧಿಯ ಸಾಕವ್ವ ತನ್ನ ಹುಂಜವನ್ನು ಯಾರಾದರೂ ತಿಂದಿದ್ದರೆ ಅದರ ಸುಳಿವು ದೊರೆಯಬಹುದೆಂದು ಊರಹೊರಗಿನ ತಿಪ್ಪೆಗಳಲ್ಲಿ ಅನ್ವೇಷಣೆ ಪ್ರಾರಂಭಿಸುತ್ತಾಳೆ. ಬಿಸಿಲಿನ ಜಳ ಹೆಚ್ಚಿ ಯಾವುದೇ ಸುಳಿವು ದೊರೆಯದೆ ಹಟ್ಟಿಗೆ ಹಿಂದಿರುವಾಗ ದಾರಿಯುದ್ದಕ್ಕೂ ಜನರ ಅಪಹಾಸ್ಯಕ್ಕೆ ಗುರಿಯಾಗುತ್ತಾಳೆ. ಸಿಟ್ಟಿನಲ್ಲಿ ಹಟ್ಟಿಗೆ ಬಂದ ಸಾಕವ್ವ ನನ್ನ ಕೋಳಿ ತಿಂದವರ ಮನೆ ಮಣ್ಣಾಗ್ಲಿ ಎಂದು ಹಿಡಿ ಶಾಪಹಾಕುತ್ತಾಳೆ. ಅವ್ವನ ಸ್ಥಿತಿಯನ್ನು ಕಂಡ ಮಗಳು ಗೌರಮ್ಮ ಅವಳಿಗೆ ಸಮಾಧಾನದ ಮಾತುಗಳನ್ನು ಹೇಳಿ ಒಂದು ಗಡುಗೇಲಿ ನೀರು ತಂದುಕೊಡುತ್ತಾಳೆ. ನೀರು ಕುಡಿದ ಸಾಕವ್ವ ಮಗಳ ತಲೆಯನ್ನು ಸವರುತ್ತ ನನ್ನ ಆಸ್ತಿಯನ್ನೆಲ್ಲ ನಿನ್ನ ಕಿರಿಯ ಮಗನಿಗೆ ಬರೆಯುತ್ತೇನೆ ಎನ್ನುತ್ತಾಳೆ.

ಇದರಿಂದ ಕುಪಿತನಾದ ಮಗ ಸಣ್ಣಯ್ಯ ತನ್ನ ಮಕ್ಕಳಿಗೆ ಆಸ್ತಿ ಸಿಕ್ಕುವುದಿಲ್ಲವೆಂದು ಸಾಕವ್ವನ ಮೇಲೆ ತಿರುಗಿ ಬೀಳುತ್ತಾನೆ. ಆಸ್ತಿ ತನ್ನ ಸ್ವಯಾರ್ಜಿತ, ಆದ್ದರಿಂದ ತನ್ನಿಷ್ಟ ಬಂದಂತೆ ಮಾಡುತ್ತೇನೆ ಎಂದು ಸಾಕವ್ವ ಸಣ್ಣಯ್ಯನಿಗೆ ದಬಾಯಿಸುತ್ತಾಳೆ. ಅವ್ವನ ಈ ಮಾತುಗಳನ್ನು ಕೇಳಿ ಹೆದರಿದ ಸಣ್ಣಯ್ಯ ಅವಳನ್ನು ಎದುರು ಹಾಕಿಕೊಳ್ಳದೆ ಒಪ್ಪಿಕೊಳ್ಳುತ್ತಾನೆ. ಮುಂದೆ ಸಣ್ಣಯ್ಯನ ಹೆಂಡತಿ ಚಲುವಮ್ಮ ಜಗಳಕ್ಕೆ ನಿಲ್ಲುತ್ತಾಳೆ. ಆದರೆ ಸಾಕವ್ವ ಯಾರಿಗೂ ಬಗ್ಗುವಂತಹವಳಲ್ಲ. ಹಿರಿಯ ಮಗ ಕಾಳಣ್ಣನ ಮಧ್ಯಪ್ರವೇಶದಿಂದ ಜಗಳ ಮುಕ್ತಾಯವಾಗುತ್ತದೆ. ಸಾಕವ್ವ ಅದೇ ರಾತ್ರಿ ಮೊಮ್ಮಗ ಶಿವುನೊಂದಿಗೆ ಕೈಯಲ್ಲಿ ಒಂದು ಗ್ಲಾಸು ಹಿಡಿದು ಬಾಡಿನ ವಾಸನೆ ಮೂಗಿಗೆ ಬಡಿದ ಮನೆಗಳಲ್ಲೆಲ್ಲ ಸಾರು ಕೇಳುತ್ತ ಹೋಗುತ್ತಾಳೆ. ಹುಂಜನ ಸುಳಿವು ಸಿಕ್ಕದೆ ನಿರಾಶಳಾಗಿ ಮನೆಗೆ ಹಿಂದಿರುಗುತ್ತಾಳೆ. ಮನೆಯಲ್ಲಿ ಭೀಕರ ಬಡತನ. ಇಂದಿನ ಊಟಕ್ಕಾಗಿ ನಾಳೆ ಕೂಲಿಗೆ ಬರುತ್ತೇವೆಂದು ಅವರಿವರ ಮನೆಯಲ್ಲಿ ಯಾಚಿಸಿ ತರಬೇಕು. ಕೂಲಿಗೆ ಬರುತ್ತೇವೆಂದು ಕೇಳಿಕೊಂಡು ಹೋದರೂ ಕರೆಯುವವರು ಗತಿ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಕಾಳಣ್ಣ ಸಾಹುಕಾರ ಎತ್ತಪ್ಪನ ಮಿಲ್ಲಿನಿಂದ ಕಳ್ಳೆಕಾಯಿಯನ್ನು ಕದ್ದು ತರುತ್ತಾನೆ. ತಮ್ಮ ಎಲ್ಲ ರೀತಿಯ ಮನಸ್ತಾಪಗಳನ್ನು ಮರೆತು ಮನೆಯ ಅಂಗಳದಲ್ಲಿ ಬೆಂಕಿ ಹತ್ತಿಸಿ ಬೆಂಕಿಯ ಸುತ್ತ ಎಲ್ಲರೂ ಕುಳಿತು ಕಳ್ಳೆಕಾಯಿ ತಿಂದು ಸಿಪ್ಪೆಯನ್ನು ಬೆಂಕಿಯಲ್ಲಿ ಸುಡುತ್ತಾರೆ. ನೆರೆಮನೆಯ ಕಾಳಕ್ಕನಿಗೂ ಮೂರು ಬೊಗಸೆ ಕಳ್ಳೆಕಾಯಿಯನ್ನು ಕೊಡುತ್ತಾರೆ. ಅಷ್ಟೆ ಅಲ್ಲ, ಮಾರಿಗುಡಿಯಲ್ಲಿ ನಾಟಕ ಪ್ರಾಕ್ಟೀಸ್ ಮಾಡುತ್ತಿದ್ದ ಕಿರಿ ಮಗ ಗುರುಸಿದ್ದೂನನ್ನು ಕರೆಸುವುದನ್ನು ಮರೆಯುವುದಿಲ್ಲ.

ಸಾಹುಕಾರ ಎತ್ತಪ್ಪನ ಮಿಲ್ಲಿನಲ್ಲಿ ಬಹಳ ದಿನಗಳಿಂದ ಕಳ್ಳೆಕಾಯಿಯ ಕಳ್ಳತನ ನಡೆಯುತ್ತಿದ್ದು, ಕಳ್ಳನನ್ನು ಪತ್ತೆ ಮಾಡಲಾಗದೆ ಎತ್ತಪ್ಪ ಪೊಲೀಸರಿಗೆ ದೂರು ನೀಡುತ್ತಾನೆ. ಪೊಲೀಸ್ ಇನ್ಸ್‌ಪೆಕ್ಟರ್ ರೇವಣ್ಣ ಎಂಬ ಪಿ.ಸಿ.ಯನ್ನು ಕಳ್ಳತನ ಪತ್ತೆ ಹಚ್ಚಲು ನೇಮಿಸುತ್ತಾನೆ. ಎತ್ತಪ್ಪನ ಮಿಲ್ಲಿನಲ್ಲಿ ಕಾದುಕುಳಿತಿದ್ದ ರೇವಣ್ಣ ಕಾಳಣ್ಣನನ್ನು ಫಾಲೋ ಮಾಡಿ ಬಂದು ಸಾಕವ್ವನ ಮನೆಯ ಜಗಲಿಯಲ್ಲಿ ಕೂರುತ್ತಾನೆ. ಗುರುಸಿದ್ದು ಬಂದು ಹೋದ ನಂತರ ರೇವಣ್ಣ ಬಾಗಿಲಿಗೆ ಚಿಲಕ ಹಾಕಿ ರಾತ್ರಿಯೆಲ್ಲ ಅಲ್ಲೆ ಕಾದು ಕುಳಿತು ಸಾಹುಕಾರನ ಆಳಿನ ಮೂಲಕ ಠಾಣೆಗೆ ವಿಷಯ ತಿಳಿಸುತ್ತಾನೆ. ಬೆಳಗಿನ ಜಾವದಲ್ಲಿಯೇ ಪೊಲೀಸ್ ಜೀಪು ಬರುತ್ತದೆ. ಇನ್ಸ್‌ಪೆಕ್ಟರ್‌ನ ನೇತೃತ್ವದಲ್ಲಿ ಕಳ್ಳಮಾಲಿನ ಶೋಧನೆ ನಡೆಯುತ್ತದೆ. ಇಡೀ ಮನೆಯಲ್ಲಿ ಕಳ್ಳೆಕಾಯಿ ಇರಲಿ, ಒಂದು ಸಿಪ್ಪೆಯು ಸಿಗುವುದಿಲ್ಲ. ಸಾಹುಕಾರ ಮತ್ತು ಪೊಲೀಸರು ನಿರಾಶರಾಗಿ ಹಿಂದಿರುಗುವ ವೇಳೆಯಲ್ಲಿ ಸಾಕವ್ವ ಇನ್ಸ್‌ಪೆಕ್ಟರ್‌ನಿಗೆ ಮೊನ್ನೆ ನನ್ನ ಹುಂಜವೊಂದು ಕಳೆದುಹೋಗಿದೆ. ಅದನ್ನು ಹುಡುಕಿಕೊಡಿ ಎಂದು ಕೇಳುತ್ತಾಳೆ. ಹುಂಜ ಯಾವ ರೀತಿ ಇತ್ತು ಎಂದು ಇನ್ಸ್‌ಪೆಕ್ಟರ್ ವ್ಯಂಗ್ಯವಾಗಿ ಕೇಳುತ್ತಾನೆ. ಸಾಕವ್ವ ಮನೆಯಲ್ಲಿದ್ದ ಮತ್ತೊಂದು ಹುಂಜವನ್ನು ಹೋಲಿಕೆಗಾಗಿ ತೋರುತ್ತಾಳೆ. ಇನ್ಸ್‌ಪೆಕ್ಟರ್ ಅದನ್ನು ಹಿಡಿಸಿ ಕಾಲು ಕಟ್ಟಿಸಿ ಅದನ್ನು ಹುಡುಕಲು ಇದನ್ನು ಕಳುಹಿಸುತ್ತೇನೆ ಎಂದು ವ್ಯಂಗ್ಯದ ನಗೆ ಬೀರುತ್ತಾನೆ. ಸಾಕವ್ವ ಇದ್ದ ಇನ್ನೊಂದು ಹುಂಜವನ್ನು ಕಳೆದುಕೊಂಡೆ ಎಂದು ಸಪ್ಪೆ ಮೋರೆಯಲ್ಲಿ ಕುಳಿತುಕೊಳ್ಳುತ್ತಾಳೆ. ಎತ್ತಪ್ಪ ಎಲೆ ಅಡಿಕೆ ತೆಗೆದುಕೋ ಮುದುಕಿ ಎಂದು ಸಮಾಧಾನಕ್ಕಾಗಿ ಒಂದು ರೂಪಾಯಿ ಕೊಡುತ್ತಾನೆ. ಕಳ್ಳನನ್ನು ಹಿಡಿಯಲು ಬಂದ ಜೀಪು ಸಾಕವ್ವನ ಹುಂಜವನ್ನು ಏರಿಸಿ ಕೊಂಡು ಧೂಳೆಬ್ಬಿಸುತ್ತ ಹೊರಡುತ್ತದೆ. ಇದು ಒಡಲಾಳದೊಳಗಿನ ಒಡಲು.

ಕಥೆಯ ಪ್ರಾರಂಭದಲ್ಲಿಯೇ ಸಾಕವ್ವನ ಹುಂಜದ ಕಳ್ಳತನವಾಗಿದೆ. ಇದು ಆಕೆಯ ಅಸ್ತಿತ್ವದ ಪ್ರಶ್ನೆ. ಆದರೆ ಬೇರೆಯವರಿಗೆ ಅದು ಹುಡುಗಾಟದಂತೆ ಕಾಣುತ್ತದೆ. ಅದು ದೇವರಿಗೆ ಬಿಟ್ಟ ಹುಂಜ. ಅದು ಕಳೆದು ಹೋದರೆ ಮುಂದೆ ದೇವರು ತನ್ನನ್ನು ಯಾವ ಯಾವ ಪರೀಕ್ಷೆಗೆ ಒಳಪಡಿಸುತ್ತಾನೋ ಎಂಬ ಭಯ ಒಂದು ಕಡೆ ಅವಳನ್ನು ಕಾಡಿದರೆ; ಮತ್ತೊಂದು ಕಡೆ ದೇವರ ಅಜಾಗರೂಕತೆಯನ್ನು ತೋರುತ್ತದೆ. ಸಾಕವ್ವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಏಕಕಾಲದಲ್ಲೇ ಒಳಗಿನವರ ಮತ್ತು ಹೊರಗಿನವರಿಂದ ಶೋಷಣೆಗೆ ಒಳಗಾಗಿದ್ದಾಳೆ. ಪ್ರಾರಂಭದಲ್ಲಿ ಅವಳ ಹುಂಜ ಅವಳ ಸುತ್ತಮುತ್ತ ಇರುವವರಿಂದಲೇ ಕಳುವಾಗುತ್ತದೆ. ಕಥೆಯ ಕೊನೆಯಲ್ಲಿ ಪೊಲೀಸರಿಂದ ಇನ್ನೊಂದು ಹುಂಜ ಅವಳ ಎದುರಿಗೆ ಕಳುವಾಗುತ್ತದೆ.

ಹುಂಜವನ್ನು ಕಳೆದುಕೊಂಡ ಸಾಕವ್ವ ದೇವರನ್ನು ಧೈರ್ಯವಾಗಿ ಎದುರಿಸಬಲ್ಲಳು. ಆದರೆ ಅನ್ಯರ ಶೋಷಣೆಯ ಎದುರು ಅವಳದು ಮೌನ ಪ್ರತಿಭಟನೆ.

"ಯಮ ಧರ್ಮರಾಜ ಏನ್ಮಾಡೀನು...?

ಅವ್ವಾ...ನಮ್ಮ ಹಟ್ಟೀ ಗಾತ್ರದ ಸಿಮ್ಮಾಸನದ ಮೇಲ ಕೂತ್ಕಂಡು...

ಯಮ ದೂತರು ಕರ್ಕ ಬತ್ತಾರಲ್ಲ... ಅವರ್ಗ ಸೀಕ್ಸ ಕೋಡ್ತಾನ...

'ಅದ್ಕೂನೂ ನಿಂಗ ಹೆದ್ರಕ ಆಗಲ್ವಾ...?

ಅಯ್... ನರಲೋಕದಲಿ ನಾನು ಪಟ್ಟಂತ ಕಷ್ಟಕ ಆ ಸೀಕ್ಸ

ಎಲ್ಲಾಗ್ತ ತಗಾ... ಅವ್ನ ಜೊತೇಲೂ ಅದ್ನೆ ಅಂತೀನಿಕನಾ..."[1]

ನಗು ಅನ್ನೋದು ಅಲ್ಲಿಂದ ಎದ್ದೂ ಬಿದ್ದು ನಗಾಡತೊಡಗಿತು. ಅದು ಸಾಕವ್ವನಿಗೆ ನಿಧಾನವಾಗಿ ಅರುವಾಯ್ತು. ಆಮೇಲೆ ಅವಳು ಅಯ್ಯೋ ಅಯ್ಯೋ ಅಂದುಕೊಂಡಿದ್ದು ಯಾರ್ಗೂ ಕೇಳಿಸಲಿಲ್ಲ?

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಅವಳಿಗೆ ನರಕ ಎನ್ನುವುದು ಬೇರೊಂದಿಲ್ಲ. ಈ ಜೀವನವೇ ನರಕಕ್ಕಿಂತ ಕೆಟ್ಟದು ಎಂಬ ಅರಿವು ಇದೆ. ದೇವರನ್ನು ಪ್ರಶ್ನಿಸುವ ಈಕೆಯ ದಿಟ್ಟತನ ಪೊಲೀಸರು ಹುಂಜವನ್ನು ಹೊತ್ತುಕೊಂಡು ಹೋಗುವಾಗ ಮಾಯವಾಗುತ್ತದೆ.

ದಲಿತರ ಇಂದಿನ ದುಸ್ಥಿತಿಗೆ ಉಳ್ಳವರ ಶೋಷಣೆಯೊಂದೇ ಕಾರಣವಲ್ಲ. ಅವರಲ್ಲಿರುವ ಅಜ್ಞಾನ ಒಳಜಗಳಗಳು ಕಾರಣವಾಗುತ್ತವೆ ಎಂಬುದನ್ನು ದೇವನೂರರು ತಮಗೆ ದೊರಕಿರುವ ಅನುಭವ ಸಾಮೀಪ್ಯದಿಂದ ವಿಶಿಷ್ಟವಾಗಿ ಅನಾವರಣಗೊಳಿಸಿದ್ದಾರೆ. ಹೀಗೆ ಮಾಡುವಾಗ ಒಂದನ್ನು ಎತ್ತಿ ಹಿಡಿದು ಮತ್ತೊಂದನ್ನು ಮುಚ್ಚಿಹಾಕುವುದಿಲ್ಲ. ವಾಸ್ತವಿಕತೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದರ ಮೂಲಕ ಸಮಗ್ರತೆಯನ್ನು ಸಾಧಿಸುತ್ತಾರೆ.

"ಗಡುಗೇಲಿ ನಾಕು ನೀರು ಕುಡಿದು ಮಗನ ದಿಕ್ಕ ಕಣ್ಣ ಮೆಡರಿಸಿ 'ಕೇಳವ್ವು ನೀ ಯಾರ ?' ಅಂದಳು. ಸಣ್ಣ ಕಡ್ಡಿ ಮುರಿದಂತೆ 'ನಾನು ಅಕ್ಕುದಾರ' ಅಂದ... 'ಆಸ್ತಿ ನನ್ನ ಸ್ವಾರ್ಜತ ಸ್ವಾರ್ಜತ...' ಅಂದಳು. ಸಣ್ಣಯ್ಯನಿಗೆ ಒಂದು ಚಣ ಅದೂ ದಿಟ ಅನ್ನಿಸಿ ದಿಗುಲುಂಟಾಯ್ತು"[2]

"ಅತ್ತೆಮ್ಮೊ ನೀವು ಹಿಂಗೇ ಅಂತಾ ಇರಿ. ನಾನು ಹುಚ್ಚತ್ತಿದರೆ ಹುಚ್ಚು ಮುಂಡೆ. ತಲ ಒಳ್ಗಲ ಹುಳಾ ಪತರಗುಟ್ಟವ ಒಂದಲ್ಲಾ ಒಂಜಿನ ನಿಮ್ಮ ಹಟ್ಗ ಬೆಂಕಿ ಹತ್ಸುಬುಟ್ಟು ನಿಮ್ಮ ಹೊಲ್ಕ ಧೂಳ ಎರಚುಬುಟ್ಟು ಇಲ್ಲಿಂದ ಕದ್ದು ಹೊಂಟೋಯ್ತಿನಿ..."[3]

ಈ ಮಾತುಗಳು ಬಡತನದಿಂದಾಗಿ ಅವರಲ್ಲುಂಟಾಗಿರುವ ಕಚ್ಚಾಟ, ಆಸ್ತಿಗಾಗಿ ಎಂಥ ಹೀನಾಯ ಕೆಲಸಕ್ಕೂ ಕೈ ಹಾಕುವ ಅಜ್ಞಾನ ಇವು ದಲಿತರ ಇಂದಿನ ಶೋಚನೀಯ ಸ್ಥಿತಿಗೆ ಅವರ ಕಾಣಿಕೆ ಎಷ್ಟು ಎಂಬುದನ್ನು ಮನದಟ್ಟು ಮಾಡುತ್ತವೆ. ಗೌರಮ್ಮನ ಮಗ ಶಿವೂ ಓದುತ್ತ ಕುಳಿತದ್ದು, ಕತ್ತಲಾಯ್ತು ದೀಪ ಹಚ್ಚು ಅನ್ನುತ್ತಾನೆ. ಆದರೆ ಮನೆಯಲ್ಲಿ ಸೀಮೆ ಎಣ್ಣೆ ಇರುವುದಿಲ್ಲ. ಪುಟಗೌರಿ ನಾಳೆ ಕೂಲಿಗೆ ಬರುತ್ತೇನೆ ಎಂದು ದುಡ್ಡು ತೆಗೆದುಕೊಂಡು ಬರಲು ಹೋಗಿರುತ್ತಾಳೆ. ಹಣ ಸಿಕ್ಕಿದ ಮೇಲೆಯೇ ಅವಳು ಸೀಮೆಎಣ್ಣೆ ತರಬೇಕು. ಶಿವೂ ದೀಪ ಹಚ್ಚು ಎಂದು ಹಟ ಹಿಡಿಯುತ್ತಾನೆ. ಗೌರಮ್ಮ ಚಲುವಮ್ಮನ ಮನೆಗೆ ಹೋಗಿ ಸೀಮೆಎಣ್ಣೆ ಸಾಲ ಕೇಳುತ್ತಾಳೆ. ಚಲುವಮ್ಮ ನಿಂದ ಮನೆಯಲ್ಲಿ ಸೀಮೆಎಣ್ಣೆ ಇಲ್ಲವೆಂದು ಉತ್ತರ ಬರುತ್ತದೆ. ಆದರೆ ಕಥೆಯ ಕೊನೆಯಲ್ಲಿ ಮನೆಯನ್ನು ಶೋಧಿಸುತ್ತಿದ್ದಾಗ ಅಲ್ಲಿ ಸೀಮೆಎಣ್ಣೆ, ಉರುಳಿ, ಜೋಳ ಇತ್ಯಾದಿಗಳು ಇರುವುದು ಕಂಡುಬರುತ್ತದೆ.

ಕಾಳಣ್ಣ ಕಳ್ಳೆಕಾಯಿಯನ್ನು ಕದ್ದು ತಂದಾಗ ಪರಸ್ಪರ ಪ್ರೀತಿ ವಿಶ್ವಾಸದ ಮಾತುಗಳ ನ್ನಾಡುತ್ತ ಎಲ್ಲರೂ ತಿನ್ನುತ್ತಾರೆ. ಚಲುವಮ್ಮ ದೀಪವನ್ನು ತಂದು ಹೊರಗಿಡುತ್ತಾಳೆ. ಮೇಲಿನ ಮಾತುಗಳನ್ನು ಗಮನಿಸಿದಾಗ ಅವರಲ್ಲಿದ್ದ ಮನಸ್ತಾಪ ತಾತ್ಕಾಲಿಕವಾಗಿ ಶಮನವಾಗಿರಬಹುದು. ಅವರಲ್ಲಿರುವ ಪ್ರೀತಿ ತೋರಿಕೆಯದು ಎಂದು ಸಂದೇಹ ಹುಟ್ಟುತ್ತದೆ. ಮನೆ ಮಂದಿಯೆಲ್ಲ ಬೆಂಕಿಯ ಸುತ್ತ ಕುಳಿತು ಕಳ್ಳೆಕಾಯಿ ಗುಡ್ಡೆಯನ್ನು ಕರಗಿಸುತ್ತ, ಸಿಪ್ಪೆಯನ್ನು ಬೆಂಕಿಯಲ್ಲಿ ಸುಡುತ್ತಾರೆ. ಈ ಸಂಭ್ರಮದಲ್ಲಿಯೇ ಅವರು ಸಾಹುಕಾರ ಎತ್ತಪ್ಪನ ಮಗಳ ವೈಭವದ ಮದುವೆ, ನಡೆದರೂ ಮುಗಿಯದ ಅವರ ದನದ ಹಟ್ಟಿ, ಅಲ್ಲಿ ಕಟ್ಟಿರುವ ದನ ಎಮ್ಮೆಗಳನ್ನು ಹಾಡಿ ಹೊಗಳುತ್ತಾರೆ.

ಈ ಮೇಲಿನ ಮಾತುಗಳನ್ನು ಆಧರಿಸಿ ಯು. ಆರ್. ಅನಂತಮೂರ್ತಿಯವರು "ಉಣ್ಣುವಂಥ ನಿತ್ಯದ ಒಂದು ಸಾಮಾನ್ಯ ಕ್ರಿಯೆಯೂ ಇಲ್ಲಿ ಯಜ್ಞಕ್ಕೆ ಸಮಾನವಾದ ರಿಚುಯಲ್. ಈ ಹಟ್ಟಿಯಲ್ಲಿ ಹೀಗಾಗಿ ದೀಪ ಹಚ್ಚುವುದೂ, ಅದನ್ನು ಹಂಚಿಕೊಳ್ಳುವುದು ಒಟ್ಟಾಗಿ ಉಣ್ಣುವುದೂ "ಸಹನಾವವತು ! ಸಹನೌಭುನಕ್ತು ! ಸಹ ವೀರ್ಯಂಕರ ವಾವಹೈ" ಎಂಬುದು ಉಪನಿಷತ್ತಿನ ಆದರ್ಶವಾದ ಮಾನವ ಸಾಹಚರ್ಯದ ಕ್ರಿಯೆಗಳೇ"[4] ಆಗಿವೆ ಎನ್ನುತ್ತಾರೆ. ಈ ಮಾತುಗಳನ್ನು ಒಪ್ಪದ ಮ.ನ.ಜವರಯ್ಯನವರು 'ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯದ ಸಮಗ್ರ ಅಧ್ಯಯನ' ಎಂಬ ಪ್ರಬಂಧದಲ್ಲಿ ಈ ಹೋಲಿಕೆಯನ್ನು ತಡೆದು ನಿಲ್ಲುವ ಆಧಾರಗಳು ಕೃತಿಯಲ್ಲಿ ಇಲ್ಲ ಎಂದು ಅಭಿಪ್ರಾಯಪಡುತ್ತಾರೆ. ಕದ್ದು ತಂದ ಕಡಲೆಕಾಯಿಯನ್ನು ತಿಂದು ಸಿಪ್ಪೆಯನ್ನು ಬೆಂಕಿಗೆ ಎಸೆಯುವ ಈ ಚಿತ್ರದ ಸಂದರ್ಭದಲ್ಲಿ ಎರಡೂ ಅಥವಾ ಮೂರು ಬಗೆಯ ಧ್ವನಿ ಸಾಧ್ಯತೆಗಳು ಸಾಧ್ಯವೆಂದು ಹೇಳುತ್ತಾರೆ.

"ಉಳ್ಳವರ ಸುಖ ಸಮೃದ್ಧಿಗಾಗಿ ದುಡಿದರೂ ದುಡಿದವರ ಒಡಲಿಗೆ ಕೂಳೂ ಇಲ್ಲವೆಂಬ ಆಕ್ರೋಶ 'ಒಡಲಾಳ'ದ ಬಡಬಾಗ್ನಿಯಾಗಿ, ಆ ಬಡಬಾನಲದ ಒಡಲಲ್ಲಿ ಕಡಲೇಕಾಯಿ ನಾಮಾವಶೇಷವಾಗಿ ಹೋಯಿತು ಎಂಬರ್ಥವಿರಬಹುದು. ಎರಡನೆಯದಾಗಿ ಪೊಲೀಸರ ದಾಳಿಗೆ ಕಡಲೆಕಾಯಿಯ ಒಂದೇ ಒಂದು ಸಿಪ್ಪೆಯೂ ಸಿಗದೆ ಹೋಗುವುದು. ದುಡಿದ ಒಡಲಿಂದ ಎದ್ದ ಕಿಚ್ಚಿಗೆ ಉಳ್ಳವರ ಸಿರಿತನ ದರ್ಪ ಅನ್ಯಾಯಗಳೆಲ್ಲ ಕಡಲೆಕಾಯಿಯಂತೆ ಸುಟ್ಟುಬೂದಿಯಾದವು ಎಂಬ ಎಚ್ಚರಿಕೆಯ ಧ್ವನಿಯೂ ಇಲ್ಲಿಂದ ಹೊರಡಲು ಸಾಧ್ಯವಿರಬಹುದು. ಮೂರನೆಯದಾಗಿ ಹಾಗೆ ಕದ್ದು ತಂದ ಕಡಲೆಕಾಯಿಯನ್ನು ಹಸಿದ ಒಡಲುಗಳೆಲ್ಲ ಸುತ್ತುವರಿದು ತಿನ್ನುವ ಚಿತ್ರದಿಂದ ಹಸಿವು ಮನೆಮಂದಿಯನ್ನೆಲ್ಲಾ ಕಿತ್ತು ತಿಂದಿತು ಎಂಥಲೋ ಅಥವಾ ಮನೆಮಂದಿಯೆಲ್ಲ ಸೇರಿ ಹಸಿವನ್ನೇ ಕಿತ್ತು ತಿಂದರು ಎಂಬ ದ್ವಂದ್ವಾರ್ಥ ಕೂಡ ಸಾಧ್ಯವಿರಬಹುದೆಂದು ತೋರುತ್ತದೆ."[5]

ಈ ಮೇಲಿನ ಮಾತುಗಳಲ್ಲಿ ಅವರು ಗುರುತಿಸುವ ಎರಡನೆಯ ಧ್ವನಿ ಸಾಧ್ಯತೆ ವಾಸ್ತವಿಕತೆಗೆ ದೂರವಾದದ್ದು ಎಂದು ಹೇಳಬಹುದು. ಮಹಾದೇವ ಅವರು ವ್ಯಂಗ್ಯದಲ್ಲಿಯೇ ವ್ಯವಸ್ಥೆಯನ್ನು ವಿರೋಧಿಸಿ, ಸುಧಾರಣೆಯನ್ನು ಬಯಸುತ್ತಾರೆ. ಅವರದು ಆವೇಶ ಆರ್ಭಟಗಳಿಂದ ನಿರ್ಲಿಪ್ತವಾದ ಧಾಟಿ. ಅವರ ಪಾತ್ರಗಳು ಮೌನವಾಗಿ ಪ್ರತಿಭಟಿಸುವುದರ ಮೂಲಕ ಓದುಗನನ್ನು ಆಲೋಚನೆಗೆ ಈಡುಮಾಡುತ್ತವೆ. ಆದ್ದರಿಂದ ಎಚ್ಚರಿಕೆಯ ಧ್ವನಿಯೂ ಇಲ್ಲಿಂದ ಹೊರಡಲು ಸಾಧ್ಯವಿರಬಹುದೆಂಬ ಮ.ನ.ಜವರಯ್ಯನವರ ಮಾತುಗಳನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. "ಹೀಗೆ ಈ ಮೂರು ಬಗೆಯ ಧ್ವನಿ ಸಾಧ್ಯತೆಯನ್ನು ಹೆಕ್ಕಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನೋಡಿದ ಬಳಿಕವೂ ಗಂಭೀರವಾದ ಸಮಸ್ಯೆಯೊಂದು ತಲೆ ಎತ್ತುತ್ತದೆ. ಅದೇನೆಂದರೆ ಹಟ್ಟಿಯ ಹೆಣ್ಣು ಗಂಡುಗಳೆಲ್ಲಾ ಮನೆಯಂಗಳದಲ್ಲಿ ಗುಡ್ಡೆಹಾಕಿಕೊಂಡಿರುವುದರಿಂದ ದುಡಿಮೆ ಎಂಬ ಕ್ರಿಯೆ ಇಲ್ಲಿ ಇಲ್ಲವಾಗುತ್ತದೆ. ತತ್ಪರಿಣಾಮವಾಗಿ, ಒಡಲಾಳದ ಸ್ಥಿತಿ ಬಡಬಾಗ್ನಿಯಾಗುವ ಬದಲು, ಅಪರಾಧಿ ಪ್ರಜ್ಞೆಯಾಗಿ ಬಿಳಿಚಿಕೊಂಡು ಕೃತಿಯ ಮೈಯಲ್ಲಿ ಸ್ಥಾಯಿಭಾವವಾಗಿ ಅರಳಿರುವ ಹಸಿವು, ದುಡಿಮೆಯಿಂದ ಅರಳಿರುವ ನೀತಿ ಬಾಹಿರ ಎಂಬ ಕಳಂಕಕ್ಕೆ ಗುರಿಯಾಗುತ್ತದೆ. ಏಕೆಂದರೆ ಹಸಿವಿನಂಥ ಒಂದೇ ಒಂದು ಭಾವವನ್ನು ಕಥೆಯಾಗಿಸುವ ಇವರ ಕಥೆಗಳಲ್ಲಿ, ಈ ಭಾವವನ್ನು ಕಥೆಯಲ್ಲಿ ಮತ್ತಷ್ಟು ಜ್ವಲಂತಗೊಳಿಸಬಹುದಾಗಿದ್ದ ಮಾನವ ಪ್ರಯತ್ನ ದುಡಿಮೆ, ಸ್ವಾಭಿಮಾನ ಮುಂತಾದ ಪೋಷಕ ಭಾವಗಳ ವೈವಿಧ್ಯತೆಯಿಂದ ಹೊರತಾಗುವ, ಇವರ ಕಥೆಯ ಸ್ಥಾಯಿಭಾವವಾದ ಹಸಿವು, ಕೊನೆಯವರೆಗೂ, ತನ್ನ ಏಕತಾನತೆಯಿಂದಾಗಿ ಇವರ ಕಥೆಗಳು ಕಲಾತ್ಮಕ ಗೆಲುವಿನಿಂದ ವಂಚಿತವಾಗುತ್ತವೆ".

ಮೇಲಿನ ಮಾತುಗಳು ಒಡಲಾಳದ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ಸರಿ ಎನಿಸುತ್ತವೆ ಎಂಬುದನ್ನು ಕೃತಿಯಿಂದಲೇ ಒಂದೆರಡು ಉದಾಹರಣೆಗಳನ್ನು ಕೊಟ್ಟು ವಿಶ್ಲೇಷಿಸಬಹುದು. "ಅಲ್ಲಾ ಕನ್ರಮೇ ಹಟ್ಟಿಯಮ್ಮಳೆಲ್ಲ ಎತ್ತಾಗು ಹೋಗ್ದೇನೆ ಗುಡ್ಡಾಕ್ಕಂಡಿದ್ದೀರಲ್ಲ... ನಿಮ್ಗ ಉಣ್ಣಾಕ ಬಾನಿಂದ ಇಳ್ದು ಬಂದದಾ..., ಅಂದನು, ಯಾರ ಬಾಯಿಂದೂ ಮಾತು ಹೊರಡದೆ ಕೊನೆಗೆ ತಂಗಿ ಗೌರಮ್ಮ 'ಕೆಲ್ಸಕ ಕರದ್ರಲ್ವಣ್ಣ ವೋಗದು. ನಾವೂನು ಮೇಲ್ಬಿದ್ದು ಮೇಗಲ ಕೇರಿಯನೆಲ್ಲ ತಿರಿಕೊಂಡು ಬದ್ವಿ. ನೀ ಯಾರ ಅನ್ನೋರಿಲ್ಲ' ಅಂದಳು. ಕಾಳಣ್ಣ ನಿಂತವನು ನಿಂತಿದ್ದನು"[6] "ಶಿವೂ ಕುಂತಲ್ಲಿಂದಲೆ 'ಸೂಳೆ ಹತ್ತವೊ' ಅಂದನು. ಒಳಗಿಂದ ಗೌರಮ್ಮ 'ತಾಡಪ್ಪ, ಚೆಕ್ಕಿ ನಾಳಕ ಕಂಬ್ಳಕ ಬತ್ತೀನಿ ಅಂದ್ಬುಟು ದುಡ್ಡು ಈಸ್ಕ ಬರಾಕ ವೋಗಳೆ... ಬಂದ್ಮೇಲ ಎಣ್ಣ ತತ್ತೀನಿ' ಎಂದಳು... ಪುಟಗೌರಿ ಬರಿ ಕಯ್ಯ ಬೀಸುತ್ತ ಒಳಬಂದಳು"[7].

ಈ ಮೇಲಿನ ಎರಡು ಉದ್ಧೃತಗಳನ್ನು ಗಮನಿಸಿದಾಗ ಸಾಕವ್ವನ ಮಕ್ಕಳು ಸೋಮಾರಿಗಳಲ್ಲ. ಅವರು ಕದ್ದು ತಂದುಹೊಟ್ಟೆ ಹೊರೆದುಕೊಳ್ಳುವ ಸ್ವಭಾವದವರಲ್ಲ. ಹಟ್ಟಿಯಲ್ಲಿ ಜಗಳ ನಡೆಯುತ್ತಿರುವ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಕಾಳಣ್ಣ ಎಲ್ಲರೂ ಹಟ್ಟಿಯಲ್ಲಿ ಸೋಮಾರಿಗಳಾಗಿ ಕುಳಿತಿದ್ದೀರಿ. ದುಡಿಮೆ ಇಲ್ಲದೆ ಕುಳಿತಿರುವ ನಿಮಗೆ ತಿನ್ನಲಿಕ್ಕೆ ಎಲ್ಲಿಂದ ಬರಬೇಕು ಎಂದು ಜಾಡಿಸುತ್ತಾನೆ. ದುಡಿಯುವ ಮನಸ್ಸು ಮತ್ತು ಸಾಮರ್ಥ್ಯ ಎರಡೂ ಇದ್ದು ಕೆಲಸವಿಲ್ಲದ ಸ್ಥಿತಿಯಲ್ಲಿ ಇವರಿದ್ದಾರೆ ಎಂಬುದು ಗೌರಮ್ಮನ ಮಾತುಗಳಿಂದ ತಿಳಿದುಬರುತ್ತದೆ. ದಿನವಿಡೀ ಊರೆಲ್ಲ ಸುತ್ತಿದರೂ ಇವರನ್ನು ಯಾರು ಕೆಲಸಕ್ಕೆ ಕರೆಯುವುದಿಲ್ಲ. ಆದ್ದರಿಂದ ಬೇರೆ ದಾರಿಯೇ ಇಲ್ಲದ ಇವರು ಕದ್ದು ತಿಂದು ಬದುಕುವ ದುಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಈ ವಿವಿಧ ಅಭಿವ್ಯಕ್ತಿ ವಿನ್ಯಾಸಗಳ ಹಿಂದೆ, ಕ್ರೂರ ವ್ಯವಸ್ಥೆಯ ಸೂಕ್ಷ್ಮಗಳ ಅರಿವು ಪ್ರಧಾನ ಪಾತ್ರವಹಿಸುವುದು. ಸಾಮಾನ್ಯ ಅಂಶವಾಗಿರುತ್ತದೆ.

ಸಾಕವ್ವ ಹೆಣ್ಣಾದರೂ ಗಂಡಸರನ್ನು ಮೀರಿಸಿ, ದುಡಿದು ನಾಲ್ಕು ಕಂಬದ ತೊಟ್ಟಿಮನೆಯನ್ನು ಕಟ್ಟಿಸಿದ್ದಾಳೆ. ಹೀಗಾಗಿ ದುಡಿಮೆ ಎಂಬ ಕ್ರಿಯೆ...

"ಅಣ್ಣೊ ನೆನ್ನ ತಗಡೂರ್ಗ ಹೋಗಿದ್ದಿ. ಅಲ್ಲಿ ನಮ್ಮವರು ಸಿವಬಸಪ್ಪ ಹೋಟಲ್ಲ ನುಗ್ಗದ್ದೂ ಅಂದ್ರ... ಸಿವ ಸಿವಾ ಆ ಪಾಟಿ ಜನ... ನಾವೇನ ಕಾಸ ಕೊಟ್ಟವೂ ಕಲ್ಲ ಕೊಟ್ಟವೂ ಕಾಫಿ ತಿಂಡಿ ಕೊಡ್ರಿ ಅನ್ನೋರು. ಸಿವಬಸಪ್ಪ ಅನ್ನೋವ ಬೆವುತೋದ ಆಮೇಲ ಪೊಲೀಸ್ನವರು ಇಳುದ್ರು. ನಾವು ಕೊಡ್ಸತೀವಿ ಸುಮ್ನಿರಿ ಸುಮ್ನಿರಿ ಅನ್ನೋರು. ಆನ ಅನ್ನೋದು ಪೋಜು ನೋಡೊಥರ ನಿಂತಿರೋದು. ತಕ್ಕಳಪ್ಪ ನಾನ್ಯಾಕ ಸುಮ್ಕಿರೋದು. ಅಂದು ಬುಟ್ಟು ನಾನೂವಿ ಕಾಸ ಬಿಸಾಕಿ ದೋಸಾ ಟೀ ಕೊಡ್ರಿ' ಅಂದೆ. ಶಿವಬಸಪ್ಪ ಅನ್ನೋನು ನನ್ನೇ ದುರುಗುಟ್ಕಂಡು ನೋಡ್ತ ತಂದ್ಕೊಡನು... ಎಂದು ಎಲ್ಲರನ್ನೂ ನೋಡಿದನು."[8]

ಗುರುಸಿದ್ದು ತಗಡೂರು ಶಿವಬಸಪ್ಪನ ಹೋಟೆಲಿಗೆ ಹೋಗಿ ಕಾಸನ್ನು ಬಿಸಾಕಿ ದೋಸೆ ಟೀ ಕೊಡ್ರಿ ಎಂದು ಹೋರಾಟದ ಹಾದಿಯನ್ನು ಹಿಡಿದು ದಲಿತ ಸ್ಥಿತಿಯನ್ನು ಮೀರಬಲ್ಲವನಾಗಿದ್ದಾನೆ. ಕಥೆಯ ಕೊನೆಯಲ್ಲಿ ಕಳ್ಳಮಾಲಿಗಾಗಿ ಪೊಲೀಸರು ಮನೆಯನ್ನು ಶೋಧಿಸುತ್ತಿದ್ದಾಗ ಅಲ್ಲಿಗೆ ಗುರುಸಿದ್ದು ಬರುತ್ತಾನೆ.

ಇನ್ಸ್‌ಪೆಕ್ಟರನ ರೂಲುಗೋಲು ಪುಟಗೌರಿಯ ಗಲ್ಲವನ್ನು ಸವರುತ್ತಿದ್ದಾಗ, ದುರುಗುಟ್ಟಿ ನೋಡುವುದರ ಮೂಲಕ ತನ್ನ ಪ್ರತಿಭಟನೆಯನ್ನು ಸೂಚಿಸುತ್ತಾನೆ. ಈ ನೋಟದಿಂದ ಇನ್ಸ್‌ಪೆಕ್ಟರ್ ಸ್ವಲ್ಪ ಅಳುಕಿದರು, ಗುರುಸಿದ್ದುವನ್ನು ಗಣ್ಣುಡ್ಡೆ ಮೀಟಾಕ್ತೀನಿ ಮಗನೆ ಎಂದು ಹೆದರಿಸುತ್ತಾನೆ. ಗುರುಸಿದ್ದುವಿನ ಬಾಯಿಂದ ಒಂದು ಮಾತು ಹೊರಡುವುದಿಲ್ಲ. ಬಿಸಿರಕ್ತದ ಯುವಕನಾದ ಗುರುಸಿದ್ದು ತಗಡೂರು ಶಿವಬಸಪ್ಪನಂತಹವರ ವಿರುದ್ಧ ಪ್ರತಿಭಟಿಸಬಲ್ಲ. ಆದರೆ ಅಧಿಕಾರಶಾಹಿಯ ದೌರ್ಜನ್ಯವನ್ನು ಹಿಮ್ಮೆಟ್ಟಿಸುವಲ್ಲಿ ಆತ ವಿಫಲನಾಗುತ್ತಾನೆ.

**ಕಾಳಣ್ಣ** : ಆ ಎತ್ತಪ್ಪನೋರ ದನದ ಹಟ್ಟಿ ಇರ್ಲಿ. ಅಲ್ಲಿರೊದನ ಎಮ್ಮೆ ತಾನೆ ಎನಯ್ಯ.

**ಸಣ್ಣಯ್ಯ** : ಒಂದೊಂದುವಿ ಆನಥರ ಹಟ್ಟಿದಪ್ಪ ಅವ.

**ಸಾಕವ್ವ** : ಒಂದು ಎಮ್ಮೆ ಸತ್ರೀಗಪ್ಪ... ನಮ್ಮ ಕೇರಿದರಿದ್ರನಾರು ಒಂಜಿನ ಹಿಂಗ್ತದ.

**ಗೌರಮ್ಮ** : ಅವ್ವೆ ಸುಮ್ಕಿರು ವಸಿಯಾ. ನೀನು ಮೂರ್ಕಾಸ್ನ ಕೋಳೋದ್ದಕ್ಕೆ

ಅಷ್ಟು ಪಾಡುಪಟ್ಟಿ, ಇನ್ನು ಅವರ್ಗ ಎಮ್ಮೋದ್ರ ಇನ್ನೆಂಗಾದ್ದು.

**ಕಾಳಣ್ಣನ ಹೆಂಡ್ತಿ** : ಸರಿಯಾಗಂದಿಕಾ ಅತ್ಗಮ್ಮ

**ಕಾಳಣ್ಣ** : ಎತ್ತಪ್ಪನೇನ ದುಡುದು ಬೆವರಿಳಿಸಿ ರಗತ ಬಸುದು ಸಂಪಾದ್ನ ಮಾಡಿದ್ದನ ತಗಾ. ಹೋದ್ರ ಅವನ್ದೇನೋದ್ದು ...ಗುಡ್ಡ ಹಾಕಿರೊ ಬಡ್ಡಿ ದುಡ್ನಲ್ಲಿ ಒಂದು ಸಿವುರುಕನ"[9]

ಇಲ್ಲಿಯ ಪಾತ್ರಗಳಿಗೆ ತಾವು ಶೋಷಿತರು ಎಂಬ ಅರಿವು ಇದ್ದು, ತಮ್ಮ ಶೋಷಣೆಗೆ ಕಾರಣವಾಗಿರುವ ಅಧಿಕಾರಶಾಹಿ, ಬಂಡವಾಳಶಾಹಿ ಹಾಗೂ ಊಳಿಗಮಾನ್ಯ ಹಿಡಿತವನ್ನು ಗುರುತಿಸಿಕೊಳ್ಳುವ ಸೂಕ್ಷ್ಮತೆಯೂ ಇದೆ. "ಸಾಹುಕಾರರಿಗೂ ಏನೂ ತೋಚದಾಗಿ ಹೊಟ್ಟೆ ಒಳಗ ಬೆಂಕಿ ಇಟ್ಕೊಂಡ ರಾಕ್ಷಸರು ಈ ಜನ ತಿಂದಿರಲೂಬಹುದಾ ಅನ್ನಿಸಿತು".

ಸತ್ತ ಎಮ್ಮೆಯನ್ನು ತಿಂದು ತಮ್ಮ ಹಸಿವನ್ನು ಹಿಂಗಿಸಿಕೊಳ್ಳುವಂತಹ ಸ್ಥಿತಿಗೆ ಈ ಜನರನ್ನು ತಂದ ಸಾಹುಕಾರರು ಹೇಳುವ ಈ ಮಾತುಗಳಿಂದ ದಲಿತರ ಭೀಕರ ದಾರಿದ್ರ್ಯ, ಈ ದಾರಿದ್ರ್ಯಕ್ಕೆ ಎತ್ತಪ್ಪನಂತಹವರ ಪಾಲೇ ಅಧಿಕ ಎಂಬುದು ಮನದಟ್ಟಾಗುತ್ತದೆ. ಯಜಮಾನ ಸಂಸ್ಕೃತಿಯ ಅಡಿಯಲ್ಲಿ ಮಾನವೀಯತೆ ನಲುಗಿ ಹೋಗಿರುವುದನ್ನು ಮಹಾದೇವ ಅವರು ವಿಷಾದದಿಂದ ಗಮನಿಸುತ್ತಾರೆ.

'ಗೋಡೆಯ ದೊಡ್ಡ ಮೊಳೇಲಿ ನೂಲೋರಾಟೆಯ ಕತ್ತಿಗೆ ಹಗ್ಗ ಬಿಗಿದು ನೇಣಾಕಿತ್ತು.' ಎಂಬ ಶಕ್ತಿಯುತವಾದ ಸಾಂಕೇತಿಕತೆಯ ಮೂಲಕ ದೈಹಿಕ ಶ್ರಮದ ಶೋಷಣೆ ಮತ್ತು ಶ್ರಮದ ನಿರುತ್ಪಾದಕತೆಯ ಅನರ್ಥವನ್ನು ಧ್ವನಿಸುತ್ತಾರೆ. ದುಡಿಮೆಯ ಸಾಧನವಾಗಿ ಬಳಕೆಯಾಗಬೇಕಿದ್ದ ರಾಟೆ ನಿಷ್ಪ್ರಯೋಜಕವಾಗಿದೆ. ಹೀಗಾಗಿ ಬಡತನ ಮತ್ತು ನಿರುದ್ಯೋಗದಿಂದ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ದಲಿತರು ಬಳಲುತ್ತಿದ್ದಾರೆ. ತಮ್ಮ ವೈನೋದಿಕ ಧಾಟಿಯಲ್ಲಿ ದಲಿತರ ವಾಸ್ತವ ಸ್ಥಿತಿಯನ್ನು ಹಾಗೂ ಅಂತರ್ಗತ ಸಾಧ್ಯತೆಗಳನ್ನು ಮಹಾದೇವ ಅವರು ಒಟ್ಟಾಗಿ ಚಿತ್ರಿಸುತ್ತಾರೆ. ಈ ದಾರಿದ್ರ್ಯದಿಂದ ದಲಿತರಿಗೆ ಬಿಡುಗಡೆಯೊಂದಿದ್ದರೆ ಅವರ ಶಕ್ತಿ ಏನೆಲ್ಲ ಸಾಧ್ಯತೆಗಳನ್ನು ಪಡೆದುಕೊಳ್ಳುತ್ತದೆ ಎಂದು ನಮ್ಮ ಗಮನವನ್ನು ಸೆಳೆಯುತ್ತಾರೆ.

"ಇರುವುದನ್ನು ಇದ್ದಂತೆಯೇ ಸ್ವೀಕರಿಸುವ ಪ್ರಕ್ರಿಯೆಯಲ್ಲಿ ಪ್ರೀತಿ ಹುಟ್ಟುವುದು, ಹೀಗೆ ಪ್ರೀತಿಗೆ ಪಾತ್ರರಾದ ಜನಗಳು ಶೋಭಾಯಮಾನ ರಾಗುವುದು, ಒಡಲಾಳದ ಕ್ಷುಲ್ಲಕವೆನ್ನಿಸಬಹುದಾಗಿದ್ದ ದೈನಿಕದ ಜಗಳ ಚೌರ್ಯದ ಕಥೆಯಲ್ಲಿ ಸಾಧ್ಯವಾಗಿದೆ. ಇದೊಂದು ಬೆರಗು ಹುಟ್ಟಿಸುವ ಯಶಸ್ಸು ಎನ್ನಬಹುದು. ಇದನ್ನು ಸಾಧ್ಯವಾಗಿಸಿದ್ದು ಲೇಖಕರ ನೋಟ, ಅಂದರೆ ನೋಡುವ, ಅರಿಯುವ ಕ್ರಮ, ಚೈತನ್ಯವನ್ನು ಗುರುತಿಸುವ ಶಕ್ತಿ. ಸ್ವತಃ ಹರಿಜನ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದು ವಿದ್ಯಾವಂತರಾದ ಮಹಾದೇವರಂಥ ಲೇಖಕರೊಬ್ಬರು, ತಾವು ಹುಟ್ಟಿದ ತಾಣದಿಂದ ಅನಿವಾರ್ಯವಾಗಿ ದೂರವಾಗುತ್ತಿರುವಾಗ ಈ ಕಥಾನಕವನ್ನು ಬರೆದಿದ್ದಾರೆಂಬುದನ್ನು ಗಮನಿಸಿದಲ್ಲಿ, ಈ ಬರೆಯುವ ಪ್ರಕ್ರಿಯೆ ಅವರಿಗೆ ಕಳೆದುಕೊಳ್ಳುತ್ತಿರುವುದನ್ನು ಮತ್ತೆ ಪಡೆದುಕೊಳ್ಳುವ, ತನ್ನ ಜನದ ಬಗ್ಗೆ ಮತ್ತೆ ಪ್ರೀತಿಯನ್ನೂ ಸಲಿಗೆಯನ್ನೂ ಗಳಿಸಿಕೊಳ್ಳುವ ಕ್ರಿಯೆ ಎನಿಸುತ್ತದೆ."[10] ಎನ್ನುವ ಯು.ಆರ್. ಅನಂತಮೂರ್ತಿಯವರ ಮಾತುಗಳು ಈ ಮೇಲಿನ ಮಾತುಗಳನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ.

ಮೈಯ ಚರ್ಮ ಸುಕ್ಕುಬಿದ್ದು ಅಲ್ಲಾಡುತ್ತಿರುವ ಸಾಕವ್ವ ಸಾವಿಗೆ ಹತ್ತಿರವಾದವಳು. ತನ್ನ ಅಸ್ತಿತ್ವಕ್ಕಾಗಿ ಕೊನೆಯ ತನಕವೂ ಹೋರಾಡುವ ಅವಳ ಛಲ ಅದಮ್ಯವಾದುದು. ತಮ್ಮ ಪಾತ್ರಗಳ ಬಗ್ಗೆ ಪ್ರೀತಿಯನ್ನುಂಟು ಮಾಡುವುದರ ಮೂಲಕ ಓದುಗನ ಅರಿವನ್ನು ವಿಸ್ತರಿಸಿ, ಸಮಸ್ಯೆಯ ಸ್ವರೂಪವನ್ನು ಸೂಕ್ಷ್ಮವಾಗಿ ಪರಿಚಯಿಸಿ, ಮತ್ತೆ ಮತ್ತೆ ಆಲೋಚಿಸು ವಂತೆ ಮಾಡುವುದು ಮಹಾದೇವರ ಕಥನ ಕ್ರಮ. ಒಡಲಾಳದಲ್ಲಿ ಸಾಕವ್ವ ತನ್ನ ಕಳೆದುಹೋದ ಒಂದು ಹುಂಜವನ್ನು ಹುಡುಕುವ ಕ್ರಿಯೆಯಲ್ಲಿ ವಿಫಲಳಾಗಿ ಕೊನೆಯಲ್ಲಿ ಇದ್ದ ಒಂದು ಹುಂಜವನ್ನು ಕಳೆದುಕೊಳ್ಳುವ ದುರಂತವನ್ನು ಚಿತ್ರಿಸಲಾಗಿದೆ. ಹುಂಜ ಅವಳ ಜೀವನಾಧಾರ ವ್ಯವಸ್ಥೆಯ ಪ್ರತೀಕವಾಗಿದೆ. ಆ ಹುಂಜದ ಕಳುವಿನಲ್ಲಿ ಸಾಹುಕಾರ ಎತ್ತಪ್ಪನಂತಹ ಹಲವಾರು ಪ್ರತಿಗಾಮಿ ಶಕ್ತಿಗಳ ಕೈವಾಡವಿದೆ. ಹೀಗಾಗಿ ಕಾದಂಬರಿಯ ಕೊನೆಯಲ್ಲಿ ಸಾಕವ್ವ ಇದ್ದ ಒಂದು ಹುಂಜವನ್ನು ಪೊಲೀಸರಿಗೆ ಒಪ್ಪಿಸುವಲ್ಲಿ ವ್ಯಂಗ್ಯವನ್ನು ಮೀರಿದ ವಿಷಾದ ಅಡಗಿದೆ.

ಒಂದು ಕಾಲದಲ್ಲಿ ಸುಸ್ಥಿತಿಯಲ್ಲಿದ್ದ ಸಾಕವ್ವನ ಕುಟುಂಬ ನಿಕೃಷ್ಟ ಸ್ಥಿತಿಯನ್ನು ತಲುಪಲು ಕಾರಣವಾದ ಆರ್ಥಿಕ ಸೆಳೆತಗಳ ಬಗೆಗೆ ಹಲವು ಸೂಚನೆಗಳನ್ನು ಕೃತಿ ಧ್ವನಿಸುತ್ತದೆ. ಅವಳ ಕುಟುಂಬದ ಆರ್ಥಿಕ ಬಿಕ್ಕಟ್ಟು ಕುಟುಂಬದೊಳಗಿನ ಮಾನವೀಯ ಸಂಬಂಧಗಳನ್ನು ಕಡಿಮೆಮಾಡುವ ಹಲವಾರು ಅಂಶಗಳನ್ನು ಮಹಾದೇವ ಅವರು ದಾಖಲಿಸುತ್ತಾರೆ. ದಲಿತ ಜನಾಂಗದ ಸಂಸ್ಕೃತಿಯನ್ನು ಅವರ ಪಾತ್ರಗಳು ಪ್ರತಿಬಿಂಬಿಸುತ್ತವೆ.

ಒಟ್ಟಾರೆ ಒಡಲಾಳದ ಸಾಕವ್ವ ಮಾನವೀಯತೆಯನ್ನು ಬೆಳೆಸುವ ಜೀವ ಪ್ರೀತಿಯನ್ನು ಹುಟ್ಟುಹಾಕುವ ಜೀವಂತ ಪಾತ್ರವಾಗಿದೆ. ಒಡಲಾಳವು ದಲಿತರ ಪರಿಸ್ಥಿತಿಯನ್ನು ಹಿಡಿದಿಟ್ಟಿದೆ ಎಂದು ಹೇಳಬಹುದು.

## ಕೊನೆ ಟಿಪ್ಪಣಿ

1. ದೇವನೂರ ಮಹಾದೇವ, ಒಡಲಾಳ, ಮೈಸೂರು ನವ್ವಾಲೆ ಪ್ರಕಾಶನ, 2010, ಪುಟ ಸಂಖ್ಯೆ–20
2. ಅದೇ ಪುಟ ಸಂಖ್ಯೆ–07
3. ಅದೇ ಪುಟ ಸಂಖ್ಯೆ–10
4. ಅದೇ ಮುನ್ನುಡಿ, ಪುಟ ಸಂಖ್ಯೆ–04
5. ಮ.ನ.ಜವರಯ್ಯ, ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯದ ಸಮಗ್ರ ಅಧ್ಯಯನ, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು. 1990, ಪುಟ ಸಂಖ್ಯೆ–104
6. ದೇವನೂರ ಮಹಾದೇವ, ಒಡಲಾಳ, ನವ್ವಾಲೆ ಪ್ರಕಾಶನ, ಮೈಸೂರು. 2010, ಪುಟ ಸಂಖ್ಯೆ–14
7. ಅದೇ ಪುಟ ಸಂಖ್ಯೆ–18
8. ಅದೇ ಪುಟ ಸಂಖ್ಯೆ–29
9. ಅದೇ ಪುಟ ಸಂಖ್ಯೆ–26
10. ಅದೇ ಮುನ್ನುಡಿ. ಪುಟ ಸಂಖ್ಯೆ–07

■■

– *20ನೇ ಪುಟದಿಂದ ಮುಂದುವರೆದುದು*


- **ಪ್ಯಾಟಿ, ಆನಂದತೀರ್ಥ ಮತ್ತು ರೈ ದೇರ್ಲ, ನರೇಂದ್ರ (2008):** ನಿರ್ಮಾಣ ಕಲೆ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಶ್ರೀ ಪಡ್ರೆ ಮತ್ತು ಇತರರು (2004) :** ಫ್ರೀಲಾನ್ಸಿಗಳ ಖಾಸಗಿ ಕಾಲಂ, ಯಲ್ಲಾಪುರ ಮಾಧ್ಯಮ ಸಂಸ್ಕೃತಿ ಅಭಿವೃದ್ಧಿ ಕೇಂದ್ರ.
- **ಹೆಗಡೆ, ನಾಗೇಶ (2012) :** ಮಾಧ್ಯಮ ಕರ್ನಾಟಕ, ಬೆಂಗಳೂರು ಉದಯಭಾನು ಉನ್ನತ ಅಧ್ಯಯನ ಕೇಂದ್ರ.
- **ಶಂಕರ ಸ. ಗಿರಿಜಾ (2018) :** ಪರಿಸರ ಪತ್ರಿಕೋದ್ಯಮ, ಕರ್ನಾಟಕ ಮಾಧ್ಯಮ ಅಕಾಡೆಮಿ
- **ರಾಮಕುಂಜ, ರಾಜಮಣಿ (2002) :** ಪ್ಲಾಸ್ಟಿಕ್ ! ಪ್ಲಾಸ್ಟಿಕ್ !! ಪ್ಲಾಸ್ಟಿಕ್ !!!, ಸರಿದಂತರ ಪ್ರಕಾಶನ.


■■

– *33ನೇ ಪುಟದಿಂದ ಮುಂದುವರೆದುದು*

## ಪರಾಮರ್ಶನ ಗ್ರಂಥಗಳು


- **ಎ.ಆರ್.ಕೃಷ್ಣಶಾಸ್ತ್ರೀ (2012) :** ವಚನ ಭಾರತ, ಗೀತಾ ಬುಕ್ ಹೌಸ್, ಪ್ರಕಾಶನ, ಹದಿಮೂರನೆ ಮುದ್ರಣ.
- **ಬೆಳ್ಳಾವೆ ವೆಂಕಟನಾರಾಯಣಪ್ಪ (2013) :** ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯ, ಪ್ರಸಾರಂಗ, ಮೈಸೂರು ವಿ.ವಿ.ಮೊ. ಮು–1973, ಮೂ.ಮು.
- **ಎನ್. ಅನಂತರಂಗಾಚಾರ್ (2016) :** ಪಂಪಭಾರತಂ, ಕನ್ನಡ ಸಾಹಿತ್ಯ ಪರಿಷತ್ತು, ಮು–2016.
- **ಆರ್.ವಿ. ಕುಲಕರ್ಣಿ (2017) :** ಸಾಹಸ ಭೀಮ ವಿಜಯಂ, ಕನ್ನಡ ಸಾಹಿತ್ಯ ಪರಿಷತ್ತು, ಮು–2017
- **ಡಾ. ಕೆ.ಎಸ್. ನಳಿನಿ ವೆಂಕಟೇಶ್ :** ರನ್ನನ ಮೇಲೆ ಪಂಪನ ಪ್ರಭಾವ, ಭಾರತೀ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಸಾಮಾಜಿಕ ವಿಜ್ಞಾನಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ : ಒಂದು ಅವಲೋಕನ

✍ **ಶಶಿಕುಮಾರ್ ಡಿ.ಎನ್.**, ಸಂಶೋಧನಾ ವಿದ್ಯಾರ್ಥಿ (ಸಾರ್ವಜನಿಕ ಆಡಳಿತ). ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–06

*ಸಾರಾಂಶ*

*ಬಹುಜನರ ಭಾಗ್ಯವಿಧಾತೆ ಮಾತೆ ಸಾವಿತ್ರಿಬಾಯಿ ಫುಲೆ ಅವರು ಆಧುನಿಕ ಭಾರತದ ಪ್ರಸಿದ್ಧ ಸಮಾಜ ಸುಧಾರಕಿ, ಸೃಜನಶೀಲ ಸಾಮಾಜಿಕ ಕಾರ್ಯಕರ್ತೆ, ಶಿಕ್ಷಣತಜ್ಞೆ, ಮತ್ತು ದೇಶದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿ. ಶತಶತಮಾನಗಳಿಂದ ತುಳಿತಕ್ಕೊಳಗಾದ ಹಾಗೂ ಅಸಮಾನತೆಯ ವ್ಯವಸ್ಥೆಗೆ ಬಲಿಯಾದ ಸಮಾಜದ ತಳವರ್ಗದವರನ್ನು; ವಿಶೇಷವಾಗಿ ದೀನ–ದಲಿತರು, ಶೂದ್ರರು, ಅತಿಶೂದ್ರರು, ಅಸ್ಪೃಶ್ಯರು ಹಾಗೂ ಮಹಿಳೆಯರನ್ನು ಶಿಕ್ಷಣ–ಸಂಘಟನೆ–ಹೋರಾಟದ ಮೂಲಕ ಸಮಾಜದ ಮುಖ್ಯವಾಹಿನಿಗೆ ತರಲು ಫುಲೆ ದಂಪತಿಗಳು ಮಹಾರಾಷ್ಟ್ರದಲ್ಲಿ 'ಶಿಕ್ಷಣ ಕ್ರಾಂತಿ'ಯನ್ನು ಆರಂಭಿಸಿದರು. 'ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣವೇ ಮೂಲಮದ್ದು' ಎಂಬುವುದನ್ನು ಮನಗಂಡಿದ್ದ ಫುಲೆ ಅವರು 'ಸ್ತ್ರೀ ಶಿಕ್ಷಣ', 'ದಲಿತ ಶಿಕ್ಷಣ' ಮತ್ತು 'ಸಾಮಾಜಿಕ ಶಿಕ್ಷಣ' ಎಂಬ ತ್ರಿವಳಿ ದೀವಟಿಕೆ ಹಿಡಿದು ಜಾತಿ–ಲಿಂಗದ ಭೇದವಿಲ್ಲದೇ ಶಿಕ್ಷಣದ ಮಹತ್ವವನ್ನು ಸಾರಿದರು. ವೇದ, ಪುರಾಣ, ಸ್ಮೃತಿ–ಶಾಸ್ತ್ರಗಳಿಂದಲೂ ಮಹಿಳೆ ಅಶಕ್ತೆ, ಅಬಲೆ, ಸ್ವಾತಂತ್ರ್ಯಕ್ಕೆ ಅನರ್ಹಳು ಎಂದು ಪರಿಗಣಿಸಿದ್ದ ಹಿಂದೂ ಸಾಮಾಜಿಕ ವ್ಯವಸ್ಥೆಯ ಸ್ಥಿತಿಗತಿಗಳನ್ನು ಆಳವಾಗಿ ಅರಿತ ಇವರು ಸಾಮಾಜಿಕ ಪರಿವರ್ತನೆಗೆ ಪಣತೊಟ್ಟು ಲಿಂಗ ಅಸಮಾನತೆ ಹಾಗೂ ಅನ್ಯಾಯದ ವಿರುದ್ಧ ದೃಢಸಂಕಲ್ಪದ ಹೋರಾಟ ನಡೆಸಿದರು. ಭಾರತದಲ್ಲಿ ಮಹಿಳಾ ಸಬಲೀಕರಣ ಮತ್ತು ಮಹಿಳಾ ಶಿಕ್ಷಣಕ್ಕೆ ಇವರ ಕೊಡುಗೆ ಅತ್ಯಂತ ಮಹತ್ವವಾದುದ್ದು ಮತ್ತು ಸ್ಮರಣೀಯವಾದದ್ದು. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನವು ಸಾಮಾಜಿಕ ವಿಜ್ಞಾನಿಯಾಗಿ, ಸುಧಾರಕಿಯಾಗಿ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಸಾವಿತ್ರಿಬಾಯಿ ಫುಲೆಯವರ ಸಾಮಾಜಿಕ ಕೆಲಸ–ಕಾರ್ಯಗಳನ್ನು ಅವಲೋಕಿಸುವ ಉದ್ದೇಶವನ್ನು ಹೊಂದಿದೆ. ಪ್ರಸ್ತುತ ಲೇಖನವು ವಿಶ್ಲೇಷಣಾತ್ಮಕ ಸ್ವರೂಪದಲ್ಲಿದ್ದು, ಸಂಪೂರ್ಣವಾಗಿ ದ್ವಿತೀಯ ಮೂಲದ ದತ್ತಾಂಶಗಳನ್ನು ಒಳಗೊಂಡಿದೆ.*

*ಮುಖ್ಯಪದಗಳು: ಶಿಕ್ಷಣ, ಸಮಾನತೆ, ಸಾಮಾಜಿಕ ನ್ಯಾಯ, ಮಹಿಳಾ ಹಕ್ಕುಗಳು, ಜಾತಿವ್ಯವಸ್ಥೆ ಮತ್ತು ಸತ್ಯ ಶೋಧಕ ಸಮಾಜ.*

## ಪೀಠಿಕೆ

ಆಧುನಿಕ ಶಿಕ್ಷಣದ ತಾಯಿ, ದಣಿವರಿಯದ ಸತ್ಯಶೋಧಕಿ ಹಾಗೂ ಸಾಮಾಜಿಕ ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾದ ಸಾವಿತ್ರಿಬಾಯಿ ಫುಲೆ ಅವರು ಕ್ರಿ. ಶ. 1831ರ ಜನವರಿ 03ರಂದು ಮಹಾರಾಷ್ಟ್ರದ ಸತಾರ ಜಿಲ್ಲೆಯ ಖಂಡಾರ ತಾಲ್ಲೂಕಿನ **'ನೈಗಾಂವ್'** ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದರು. ತಂದೆ ಖಾಂಡೋಜಿ ನೇವಸೆ ಪಾಟೀಲರು ಮತ್ತು ತಾಯಿ ಲಕ್ಷ್ಮಿಬಾಯಿ. ಇವರದು ಮಾಲಿ ಸಮುದಾಯದ ಬಡ ಕೃಷಿಕ ಕುಟುಂಬ. ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ, ಶೂದ್ರರಿಗೆ ಮತ್ತು ಅಸ್ಪೃಶ್ಯರಿಗೆ ಶಾಲೆಗೆ ಹೋಗುವುದಕ್ಕಾಗಲಿ, ವಿದ್ಯೆಕಲಿಯುವುದಕ್ಕಾಗಲಿ ಅವಕಾಶವಿರಲಿಲ್ಲ. ***"ಹೆಣ್ಣು ಮಕ್ಕಳು ವಿದ್ಯೆ ಕಲಿತರೆ ಅದು ಧರ್ಮಶಾಸ್ತ್ರಕ್ಕೆ ಅಪಮಾನ ಮಾಡಿದಂತೆ; ಸಮಾಜಕ್ಕೆ ದ್ರೋಹ ಬಗೆದಂತೆ"*** ಎಂಬ ಅಂಧ ನಂಬಿಕೆಯಿಂದ ಮಹಿಳೆಯರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಶಿಕ್ಷಣ ಎಂಬುದು ಕೇವಲ ಮೇಲ್ವರ್ಗದ ಪುರುಷರ ಸ್ವತ್ತಾಗಿತ್ತು. ಆದ ಕಾರಣದಿಂದಾಗಿ ಫುಲೆಯವರು ಶಾಲೆಯನ್ನೇ ನೋಡದ–ಅಕ್ಷರವೇ ತಿಳಿಯದ ಅನಕ್ಷರಸ್ಥ ಹೆಣ್ಣು ಮಗಳಾಗಿದ್ದರು. ಆದರೂ ಅವರ ಧೈರ್ಯ, ಸಾಹಸ ಸ್ವಭಾವ ಹಾಗೂ ಮಾನವೀಯ ಗುಣ ಮಾತ್ರ ಮೆಚ್ಚುವಂತಹದು. ಬಾಲ್ಯದಿಂದಲೂ ತಮ್ಮ ಸುತ್ತಲಿನ ದಮನಿತರ, ದೀನ–ದಲಿತರ ಹಾಗೂ ಮಹಿಳೆಯರ ಶೋಚನೀಯ ಸ್ಥಿತಿಗತಿಗಳನ್ನು ಕಂಡು ಅತಿಯಾಗಿ ಭಾವುಕರಾದರು. ಇದಕ್ಕೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂಬ ಬಯಕೆ ಬಾಲ್ಯದಲ್ಲಿಯೇ ಚಿಗುರಿತು.

ಮುಂದೆ ಕ್ರಿ. ಶ. 1840ರಲ್ಲಿ ಅಂದಿನ ಸಾಮಾಜಿಕ ರೂಢಿಯಂತೆ ಒಂಭತ್ತು ವರ್ಷದ ಸಾವಿತ್ರಿಬಾಯಿ ಅವರಿಗೆ ಹದಿಮೂರು ವರ್ಷದ ಜ್ಯೋತಿಬಾ ಫುಲೆ ಅವರೊಂದಿಗೆ ಬಾಲ್ಯ ವಿವಾಹ ಮಾಡಲಾಯಿತು. ಅಂದಿನ ಕಾಲಘಟ್ಟದಲ್ಲಿಯೇ ಉತ್ತಮವಾದ ಶಿಕ್ಷಣ ಪಡೆದಿದ್ದ ಸುಶಿಕ್ಷಿತ–ಸುಜ್ಞಾನಿ ಜ್ಯೋತಿಬಾ ಫುಲೆಯವರು ಅನಕ್ಷರಸ್ಥೆಯಾಗಿದ್ದ ಸಾವಿತ್ರಿಬಾಯಿಗೆ ಅಕ್ಷರ ಜ್ಞಾನವನ್ನು ಕಲಿಸಿ, ಮುಂದೆ ಉತ್ತಮವಾದ ಶಿಕ್ಷಣವನ್ನು ಪಡೆಯಲು ಮಾರ್ಗದರ್ಶನ ನೀಡುತ್ತಾರೆ. ಹೀಗೆ ಸಾವಿತ್ರಿಬಾಯಿ ಅವರಿಗೆ **'ಮನೆಯೇ ಮೊದಲ ಪಾಠಶಾಲೆ; ಪತಿಯೇ ಮೊದಲ ಗುರು'**ಗಳಾದರು. ತದನಂತರ 1847ರಲ್ಲಿ ಮೊದಲ ಬಾರಿಗೆ ಅಹ್ಮದ್‌ನಗರದ ಸಿಂಧಿಯಾ ಫರಾರ್ ಎಂಬ ಅಮೇರಿಕನ್ ಮಿಷನರಿ ಸಂಸ್ಥೆಯಿಂದ ಮತ್ತು ಎರಡನೇ ಬಾರಿ ಪುಣೆ ನಗರದ ಶ್ರೀಮತಿ ಮಿಚಲ್ ಅವರ ಪ್ರತಿಷ್ಠಿತ 'ನಾರ್ಮಲ್ ಸ್ಕೂಲ್'ನಿಂದ ಶಿಕ್ಷಕಿ ತರಬೇತಿಯನ್ನು ಪಡೆದು ಅಧಿಕೃತವಾಗಿ **'ತರಬೇತಿ ಪಡೆದ ಮಹಾರಾಷ್ಟ್ರದ ಪ್ರಪ್ರಥಮ ಮಹಿಳಾ ಶಿಕ್ಷಕಿ'** ಮತ್ತು **'ಇಂಗ್ಲೀಷ್ ಭಾಷೆಯಲ್ಲಿ ಶಿಕ್ಷಣ ತರಬೇತಿ ಪಡೆದ ಮೊದಲ ಭಾರತೀಯ ಮಹಿಳೆ'**ಎಂಬ ಹೆಗ್ಗಳಿಕೆಯನ್ನು ಗಳಿಸುತ್ತಾರೆ.

ಸಾವಿತ್ರಿಬಾಯಿ ಅವರ ಮೊದಲ ಪ್ರೇರಣೆಯೇ ಪತಿ ಮಹಾತ್ಮ ಜ್ಯೋತಿಬಾ ಫುಲೆಯವರು. ಜ್ಯೋತಿಬಾ ಅವರ ಪ್ರಗತಿಪರ ದೃಷ್ಟಿಕೋನ, ವಿಚಾರ ಶಕ್ತಿ, ಹೋರಾಟ ಮತ್ತು ಶಿಕ್ಷಣ ಚಳವಳಿಯ ಹಾದಿ ಸಾವಿತ್ರಿಬಾಯಿ ಅವರನ್ನು ತೀವ್ರವಾಗಿ ಪ್ರಭಾವಿಸಿದವು. ಜೊತೆಗೆ **'ಥಾಮಸ್ ಕ್ಲಾರ್ಕ್‌ಸನ್'** ಎಂಬ ಚಿಂತಕನ ಜೀವನ ಚರಿತ್ರೆಯು ಮಾತೆ ಸಾವಿತ್ರಿ ಅವರ ಮೇಲೆ ಅಗಾಧವಾದ ಪರಿಣಾಮ ಬೀರುತ್ತದೆ. ಕ್ಲಾರ್ಕ್‌ಸನ್ ಅವರು ನಿಗ್ರೋ ಜನಾಂಗವು ಗುಲಾಮಗಿರಿಯ ದಬ್ಬಾಳಿಕೆಯಿಂದ ವಿಮೋಚನೆ ಹೊಂದಿದ ಪ್ರಸಂಗವನ್ನು ಸಂದರ್ಭದೊಂದಿಗೆ ವಿವರಿಸಿದ್ದರು. ಇದರಿಂದ ಪ್ರೇರೇಪಿತರಾದ ಫುಲೆಯವರು ಭಾರತ ದೇಶದ ಮೂಲನಿವಾಸಿಗಳ, ದೀನ–ದಲಿತರ, ಅಸ್ಪೃಶ್ಯರ ಹಾಗೂ ಮಹಿಳೆಯರ ವಿಮೋಚನಾ ಕಾರ್ಯಕ್ಕೆ ದೃಢಸಂಕಲ್ಪ ಕೈಗೊಂಡರು. ಈ ಮೂಲಕ ಅಂದಿನ ಸಾಮಾಜಿಕ ಸಮಸ್ಯೆಗಳಿಗೆ ಹೊಸ–ಹೊಸ ಪ್ರಮೇಯಗಳ ಹುಡುಕಾಟ ಆರಂಭಿಸಿದರು.

## • ಸಾಮಾಜಿಕ ವಿಜ್ಞಾನಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ

ಸಾವಿತ್ರಿಬಾಯಿ ಫುಲೆ ಅವರು ಆಧುನಿಕ ಭಾರತದ ಪ್ರಸಿದ್ಧ ಸಾಮಾಜಿಕ ವಿಜ್ಞಾನಿ, ಸಮಾಜ ಸುಧಾರಕಿ ಮತ್ತು ಶಿಕ್ಷಣತಜ್ಞೆ. ಸಾಮಾಜಿಕ ವಿಜ್ಞಾನಿ ಎಂದರೆ, ಸಮಾಜದಲ್ಲಿರುವ ಸಮಸ್ಯೆಗಳನ್ನು ಅಥವಾ ಅನಿಷ್ಠ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪದ್ಧತಿಯಂತಹ ರೋಗಗಳನ್ನು ಆಳವಾಗಿ ಅರಿತು ಸೂಕ್ತ ಚಿಕಿತ್ಸಾ ವಿಧಾನದ ಮೂಲಕ ಬಗೆಹರಿಸುವ ತಜ್ಞ ಎಂದರ್ಥ. ಈ ನಿಟ್ಟಿನಲ್ಲಿ ಫುಲೆ ಅವರು ಸಹಸ್ರಾರು ವರ್ಷಗಳಿಂದ ಸನಾತನ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಜಾತೀಯತೆ, ಅಸ್ಪೃಶ್ಯತೆ, ಶೋಷಣೆ, ದಬ್ಬಾಳಿಕೆ, ಲಿಂಗ ಅಸಮಾನತೆ ಮತ್ತು ಅನಕ್ಷರತೆಯಂತಹ ಸಾಮಾಜಿಕ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸಿ ನಿವಾರಿಸುವ ದೃಢಸಂಕಲ್ಪ ತೊಟ್ಟು ದೀರ್ಘ ಸಂಘರ್ಷದ ಹೋರಾಟಕ್ಕೆ ಅಣಿಯಾದರು.

**"ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣವೇ ಮೂಲಭೂತವಾದ ಸಾಧನ"**. ಆದರೆ ಈ **'ಅಜ್ಞಾನ'**ವೆಂಬ ಶತ್ರು ಭಾರತದ ಶೋಷಿತ ಸಮುದಾಯಗಳನ್ನು ಸಹಸ್ರಾರು ವರ್ಷಗಳಿಂದ ಅವಕಾಶಗಳನ್ನು ವಂಚಿಸಿ ಗುಲಾಮರನ್ನಾಗಿ ಮಾಡಿದೆ. ಆದ್ದರಿಂದ **'ಜ್ಞಾನ'** ವೆಂಬ ಸಾಧನದ ಮೂಲಕ 'ಅಜ್ಞಾನ'ವೆಂಬ ಶತ್ರುವನ್ನು ನಾಶಮಾಡಿ ಸ್ವತಂತ್ರ್ಯರಾಗಿ–ಜ್ಞಾನಿಗಳಾಗಿ–ಸ್ವಾಭಿಮಾನಿಗಳಾಗಿ ಎಂದು ಮಾತೆ ಫುಲೆಯವರು ಶೋಷಿತ ಸಮುದಾಯಗಳನ್ನು ಪ್ರೇರೇಪಿಸಿದರು. ಈ ಮೂಲಕ ಶಿಕ್ಷಣವೆಂಬ ಕ್ರಾಂತಿಜ್ಯೋತಿಯನ್ನು ಬೆಳಗಿಸಲು ಸಜ್ಜಾದರು.

ಸಾವಿತ್ರಿಬಾಯಿ ಫುಲೆಯವರು ಜಾತಿವ್ಯವಸ್ಥೆಯ ವಿರುದ್ಧ ಮತ್ತು ಸಮಾಜದ ಅಂಚಿನಲ್ಲಿರುವ ಸಮುದಾಯಗಳ ಉನ್ನತಿಗಾಗಿ ಸಾಕಷ್ಟು ಶ್ರಮಿಸಿದರು. ಈ ನಿಟ್ಟಿನಲ್ಲಿ ಮೂಲನಿವಾಸಿಗಳಾದ ಅಸ್ಪೃಶ್ಯರು, ಶೂದ್ರರು, ಅತಿಶೂದ್ರರು ಮತ್ತು ದಲಿತ ಸಮುದಾಯಗಳನ್ನು ಸಾಮಾಜಿಕ ಕಟ್ಟುಪಾಡುಗಳಿಂದ ವಿಮೋಚನೆಗೊಳಿಸುವ ಧ್ಯೇಯದಿಂದ ಹೋರಾಟವೊಂದನ್ನು ರೂಪಿಸಿದರು. ಅಂದಿನ ಸಮಾಜದಲ್ಲಿ ಸಾರ್ವಜನಿಕ ಸ್ಥಳಗಳಾದ ಕೆರೆ, ಬಾವಿ, ರಸ್ತೆ, ಉದ್ಯಾನವನ, ದೇವಾಲಯ ಮುಂತಾದ ಪ್ರದೇಶಗಳಿಗೆ ದಲಿತರನ್ನು ನಿಷೇಧಿಸಲಾಗಿರುತ್ತದೆ. ಇಂತಹ ನೀಚ ಘಟನೆಗಳ ವಿರುದ್ಧ ಧ್ವನಿ ಎತ್ತಿ ಸಾಮಾಜಿಕ ಕಂದಾಚಾರಗಳನ್ನು ಉಲ್ಲಂಘಿಸಿ ಸಮುದಾಯಗಳ ರಕ್ಷಣಾ ಕಾರ್ಯಕ್ಕೆ ಮುಂದಾಗುತ್ತಾರೆ. ಈ ನಿಟ್ಟಿನಲ್ಲಿ 1868ರಲ್ಲಿ ದಲಿತ ಸಮುದಾಯಕ್ಕಾಗಿ ತಮ್ಮ ಮನೆಯ ಕುಡಿಯುವ ನೀರಿನ ತೊಟ್ಟಿಯನ್ನು ಬಿಟ್ಟುಕೊಟ್ಟರು. **"ರಾಜಕೀಯ ದಾಸ್ಯಕ್ಕಿಂತ ಬಹುಮುಖ್ಯವಾಗಿ ಸಾಮಾಜಿಕ ದಾಸ್ಯದಿಂದ"** ತಳಸಮುದಾಯಗಳು ಬಿಡುಗಡೆ ಹೊಂದಬೇಕು ಎಂಬ ದೃಷ್ಟಿಯಿಂದ ದಮನಿತ–ದಲಿತ–ಬಹುಜನರಿಗಾಗಿ ಪ್ರತ್ಯೇಕವಾದ ಶಾಲೆಗಳನ್ನು, ಗ್ರಂಥಾಲಯಗಳನ್ನು ಮತ್ತು ವಸತಿ ಶಾಲೆಗಳನ್ನು ತೆರೆದರು. ಇನ್ನೂ ಮುಂದುವರೆದು ಅಸ್ಪೃಶ್ಯ ಸಮುದಾಯದ ವಿದ್ಯಾರ್ಥಿಗಳಿಗಾಗಿ **'ಸೊಸೈಟಿ ಫಾರ್ ಪ್ರೊಮೋಟಿಂಗ್ ಎಜುಕೇಷನ್ ಆಫ್ ಮಹಾರ್ಸ್ ಆಂಡ್ ಮಾಂಗ್ಸ್'** ಎಂಬ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದರು. ಹೀಗೆ ಹಲವು ಯೋಜನೆಗಳ ಮೂಲಕ ಫುಲೆ ದಂಪತಿಗಳು ತಳಸಮುದಾಯಗಳಿಗೆ ನಿರಂತರವಾಗಿ ಅಕ್ಷರ ಜ್ಞಾನ ನೀಡುತ್ತಾ ಬಂದರು. ಫುಲೆ ದಂಪತಿಗಳು ಅಸ್ಪೃಶ್ಯ ಸಮುದಾಯದ ಜನರಿಗೆ ಅಕ್ಷರ ಜ್ಞಾನ ಕಲಿಸಿದ ಮೊದಲ ಗುರುಗಳು ಎಂದರೆ ಬಹುಶಃ ತಪ್ಪಾಗಲಾರದು. ಭಾರತದ ಬಹುಜನರು ಅಕ್ಷರವನ್ನು ಕಲಿತು ವಿದ್ಯಾವಂತರಾಗಬೇಕು ಮತ್ತು ತಮ್ಮ ಜೀವನದ ನಿರ್ಧಾರವನ್ನು ತಾವೇ ಕೈಗೊಳ್ಳಬೇಕು ಎಂಬುದು ಮಾತೆ ಫುಲೆಯವರ ಮಹದಾಸೆಯಾಗಿತ್ತು.

ಫುಲೆ ಅವರು ಜಾತಿ–ಮತ, ಲಿಂಗ–ಧರ್ಮದ ಭೇದವಿಲ್ಲದೇ ಮತ್ತು ಸಾಮಾಜಿಕ ಸ್ಥಾನಮಾನದ ಪರಿಯಿಲ್ಲದೆ ಶಿಕ್ಷಣದ ಮಹತ್ವವನ್ನು ಸಾರಿದರು. ಜಾನಪದ ಪ್ರಸಂಗಗಳನ್ನು ಬಳಸಿ ಸರಳವಾಗಿ ಭಾಷೆ, ಸಾಹಿತ್ಯ, ಗಣಿತ ಮತ್ತು ಸಾಮಾನ್ಯ ಜ್ಞಾನದ ವಿಷಯಗಳನ್ನು ಹೇಳತೊಡಗಿದರು. ಶಾಲೆಯಲ್ಲಿ ಮಕ್ಕಳಿಗೆ ಪಠ್ಯದೊಂದಿಗೆ ಮಾನವೀಯ ಮೌಲ್ಯಗಳನ್ನು ಹಾಗೂ ವೈಜ್ಞಾನಿಕ–ವೈಚಾರಿಕ ಮನೋಭಾವನೆಯನ್ನು ಸಹ ಕಲಿಸುತ್ತಿದ್ದರು. ವಿನೂತನ ಬೋಧನಾ ವಿಧಾನಗಳ ಮೂಲಕ ಮಕ್ಕಳನ್ನು ಶಿಕ್ಷಣದೆಡೆಗೆ ಆಕರ್ಷಿಸಿದರು. ವಿದ್ಯಾರ್ಥಿಗಳು ಶಾಲೆಯನ್ನು ತೊರೆಯದಂತೆ ತಡೆಯಲು 'ಸ್ಟೈಪೆಂಡ್' (ಧನಸಹಾಯ) ನೀಡುವ ಯೋಜನೆಯನ್ನು ಜಾರಿಗೆತಂದರು. ಪರಿಣಾಮವಾಗಿ ಫುಲೆಯವರ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಯು ಇತರೆ ಸರ್ಕಾರಿ ಶಾಲೆಗಳ ದಾಖಲಾತಿಗಿಂತ ವೇಗವಾಗಿ ಏರಿಕೆಯಾಗತೊಡಗಿತು. ಈ ನಿಟ್ಟಿನಲ್ಲಿ 1848–1852ರ ಅವಧಿಯಲ್ಲಿ ಒಟ್ಟು 18 ಶಾಲೆಗಳನ್ನು ಪ್ರಾರಂಭಿಸಿದರು. ಇವರ ಬೋಧನಾ ವಿಧಾನಗಳು ಸರ್ಕಾರಿ ಶಾಲೆಗಳಿಗಿಂತ ಉತ್ತಮವಾಗಿದ್ದವು ಎಂಬುವುದಕ್ಕೆ ಇದಕ್ಕಿಂತ ಮತ್ತೊಂದು ಸಾಕ್ಷಿ ಬೇಕಿಲ್ಲ. ಜೊತೆಗೆ ವಯಸ್ಕ ಶಾಲೆಗಳನ್ನು, ರಂಗ ತರಬೇತಿ ಶಿಬಿರಗಳನ್ನು, ಜಾನಪದ ಗಾನ ತರಬೇತಿ ಶಿಬಿರಗಳನ್ನು, ಕೃಷಿ ತರಬೇತಿ ಕೇಂದ್ರಗಳನ್ನು ಹಾಗೂ ರೈತರಿಗೆ ಮತ್ತು ಕೂಲಿ–ಕಾರ್ಮಿಕರಿಗಾಗಿ ರಾತ್ರಿ ಪಾಠಶಾಲೆಗಳನ್ನು ಕೂಡ ಆರಂಭಿಸಿದರು. ಈ ಶಾಲೆಗಳ ಆಡಳಿತದ ಜವಾಬ್ದಾರಿಯನ್ನು ಸಾವಿತ್ರಿಬಾಯಿ ಅವರು ಸಮರ್ಪಕವಾಗಿ ನಿರ್ವಹಿಸುತ್ತಿದ್ದರು.

ಇಂಗ್ಲೀಷ್ ಭಾಷೆಯ ಮಹತ್ವ ಮತ್ತು ಅಗತ್ಯತೆಯನ್ನು ಅರಿತಿದ್ದ ಸಾವಿತ್ರಿಬಾಯಿ ಫುಲೆಯವರು ಇಂಗ್ಲೀಷ್ ಭಾಷೆಯನ್ನು ಕಲಿಯಲು ಪ್ರೋತ್ಸಾಹ ನೀಡುತ್ತಿದ್ದರು. ***"ಏಳಿ ಎಚ್ಚರಗೊಳ್ಳಿ ನನ್ನ ಶೋಷಿತ ಸಹೋದರ–ಸಹೋದರಿಯರೇ, ತಲೆದೂರಿದ ದಾಸ್ಯ ಸಂಕೋಲೆಗಳನ್ನು ಕಿತ್ತೊಗೆಯಲು ಇಂಗ್ಲೀಷ್ ಭಾಷೆಯನ್ನು ಕಡ್ಡಾಯವಾಗಿ ಕಲಿಯಿರಿ; ಇದರಿಂದ ಸ್ವಾವಲಂಬಿಗಳಾಗಿರಿ, ಶ್ರಮಶೀಲರಾಗಿರಿ"*** ಎಂದು ಶೋಷಿತ ಸಮುದಾಯಕ್ಕೆ ಸಂದೇಶ ನೀಡಿದರು. ಸಾವಿತ್ರಿಬಾಯಿ ಅವರು ನೀಡಿದ ಸಂದೇಶ ಇಂದಿಗೂ ಪ್ರಸ್ತುತವಾಗಿದೆ. ಇದು ಫುಲೆಯವರ ದೂರದೃಷ್ಟಿತ್ವ ಮತ್ತು ವೈಚಾರಿಕ ಮಟ್ಟಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಇಂತಹ ಕ್ರಿಯಾಶೀಲ ಹಾಗೂ ನಿಸ್ವಾರ್ಥ ಕಾರ್ಯಗಳನ್ನು ಕೂಲಂಕುಶವಾಗಿ ಗಮನಿಸಿದ ಬ್ರಿಟಿಷ್ ಸರ್ಕಾರವು ಸಾವಿತ್ರಿಬಾಯಿ ಫುಲೆ ಅವರನ್ನು 'ಮಾದರಿ ಶಿಕ್ಷಕಿ' ಎಂದು ಗೌರವಿಸುವುದರ ಜೊತೆಗೆ **'ಭಾರತದ ಮೊಟ್ಟ ಮೊದಲ ಮಹಿಳಾ ಶಿಕ್ಷಕಿ'** ಎಂಬ ಬಿರುದನ್ನು ನೀಡಿ ಸನ್ಮಾನಿಸಿತು.

ಮುಂದೆ 1876ರ ಅವಧಿಯಲ್ಲಿ ಮಹಾರಾಷ್ಟ್ರದ ಪಶ್ಚಿಮ ವಲಯದಲ್ಲಿ ಪ್ರಾರಂಭವಾದ ಕ್ಷಾಮದ ಸಮಯದಲ್ಲಿ ಫುಲೆ ದಂಪತಿಗಳು ಎರಡು ವರ್ಷಗಳ ಕಾಲ ಅವಿರತವಾಗಿ ಶ್ರಮಿಸಿದರು. ವಿವಿಧ ಪ್ರದೇಶಗಳಲ್ಲಿ ಉಚಿತ ಆಹಾರವನ್ನು ವಿತರಿಸಿದರು. ಜೊತೆಗೆ 52 ಉಚಿತ ಆಹಾರ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿ ಸಂತ್ರಸ್ಥರಿಗೆ ನೆರವಾದರು. ಇದೇ ರೀತಿಯಲ್ಲಿ 1897ರಲ್ಲಿ ಪುಣೆ ನಗರದಲ್ಲಿ **ಬುಬೊನಿಕ್ ಪ್ಲೇಗ್** ಮಹಾಮಾರಿಯ ಹಾವಳಿಯುಂಟಾದಾಗಲೂ ಸಹ ಸಾವಿತ್ರಿಬಾಯಿ ಅವರು ಹಗಲಿರುಳೂ ಶ್ರಮವಹಿಸಿ ದುಡಿದರು.

### • ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ

ನಾವು ಸಾವಿತ್ರಿಬಾಯಿ ಫುಲೆ ಅವರನ್ನು **'ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮತ್ತು ಸಮಾನತಾವಾದಿ'** ಎಂಬುವುದನ್ನು ಮರೆಯುವಂತಿಲ್ಲ. ವಾಸ್ತವವಾಗಿ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಮಹಿಳಾ ಚಳುವಳಿಯ ಬೀಜವನ್ನು ಬಿತ್ತಿದವರೇ ಮಹಾತ್ಮ ಜ್ಯೋತಿಬಾ ಫುಲೆ ಮತ್ತು ದಂಪತಿಗಳು. ಹಿಂದೂ ಸಾಂಪ್ರದಾಯಿಕ ಸಮಾಜ ಮಹಿಳೆಯರಿಗೆ ತೀರ ಕೆಳಮಟ್ಟದ ಸ್ಥಾನಮಾನವನ್ನು ಬಳುವಳಿಯಾಗಿ ನೀಡಿ ಶೋಷಣೆಗೊಳಪಡಿಸಿತ್ತು. ಆಸ್ತಿ, ಅಧಿಕಾರ, ಶಿಕ್ಷಣ, ಸಮಾನ ಹಕ್ಕುಗಳು ಹಾಗೂ ಉತ್ತಮ ಸಾಮಾಜಿಕ ಸ್ಥಾನಮಾನವನ್ನು ಮಹಿಳೆಯರಿಗೆ ವಂಚಿಸಿ; ಅವರು ದ್ವಿತೀಯ ದರ್ಜೆಯ ಪ್ರಜೆಗಳು, ಸ್ವತಂತ್ರವಾಗಿರಲು ಅನರ್ಹರು, ಅವಳು ಸದಾ ಪುರುಷನ ಪರಾಧೀನಳಾಗಿರಬೇಕು ಎಂಬ ಸಂಕುಚಿತ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮನೋಭಾವನೆಯನ್ನು ಎಲ್ಲೆಡೆ ನಿರ್ಮಿಸಿತ್ತು. ಇಂತಹ ಕಠೋರ ಸತ್ಯಾಂಶಗಳನ್ನು ಸೂಕ್ಷ್ಮವಾಗಿ ಅರಿತ ಮಾತೆ ಸಾವಿತ್ರಿಯವರು ಮಹಿಳಾ ಹಕ್ಕುಗಳಿಗಾಗಿ ಮತ್ತು ಲಿಂಗ ಸಮಾನತೆಗಾಗಿ ಪ್ರಗತಿಪರವಾದ ಹೋರಾಟ ಆರಂಭಿಸಿದರು.

ಶತಶತಮಾನಗಳಿಂದ ಶಿಕ್ಷಣದಿಂದ ವಂಚಿತರಾಗಿ ಅಜ್ಞಾನದ ಕತ್ತಲಿನಲ್ಲಿದ್ದ ಮಹಿಳೆಯರಿಗೆ ಶಿಕ್ಷಣ ನೀಡಲು ಹಾಗೂ ಅವರನ್ನು ಜಾಗೃತಿಗೊಳಿಸಲು ಹಲವು ಕಾರ್ಯಕ್ರಮಗಳನ್ನು ರೂಪಿಸಿದರು. ಈ ನಿಟ್ಟಿನಲ್ಲಿ ಕ್ರಿ. ಶ. 1848ರಲ್ಲಿ ಫುಲೆ ದಂಪತಿಗಳು ಪುಣೆಯ ಸಮೀಪದ ಭಿಡೇವಾಡದಲ್ಲಿ ತಳಸಮುದಾಯದ ಹೆಣ್ಣು–ಮಕ್ಕಳಿಗಾಗಿ **'ಕನ್ಯಾಪಾಠಶಾಲೆ'**ಯನ್ನು ತೆರೆದರು. ಇದು **'ಸ್ಥಳೀಯ ಭಾರತೀಯರಿಂದ ಪ್ರಾರಂಭವಾದ ಮೊಟ್ಟ ಮೊದಲ ಹೆಣ್ಣುಮಕ್ಕಳ ಶಾಲೆ'** ಎಂಬ ಮನ್ನಣೆ ಪಡೆಯಿತು. ಮಾತೆ ಫುಲೆಯವರು ಈ ಪಾಠಶಾಲೆಗೆ ಮುಖ್ಯಶಿಕ್ಷಕಿಯಾಗಿ ನೇಮಕಗೊಂಡರು. ಈ ಮೂಲಕ *'ಸ್ತ್ರೀಯೊಬ್ಬಳು ಶಿಕ್ಷಣ ಕಲಿಯುವುದು ಧರ್ಮಕ್ಕೆ ಅಪಮಾನ ಮಾಡಿದಂತೆ'* ಎಂಬ ಭಾರತೀಯ ಸನಾತನ ಸಮಾಜದ ಅಂಧ ನಂಬಿಕೆಗೆ ಪೆಟ್ಟುಕೊಡಲಾಯಿತು. ಇದರಿಂದ ಉದ್ರಿಕ್ತರಾದ ಸಂಪ್ರದಾಯವಾದಿಗಳು ಸಾವಿತ್ರಿಯವರು ಶಾಲೆಗೆ ಹೋಗುವಾಗ ಅಡ್ಡಗಟ್ಟಿ ಅವ್ಯಾಚ್ಯ ಪದಗಳಿಂದ ನಿಂದಿಸಿ; ಅವರ ಮೇಲೆ ಸಗಣಿ, ಕೆಸರು ಎರಚಿ; ಕಲ್ಲನ್ನೂ ತೂರಿ ಕೇಕೇ ಹಾಕಿ ನಗುತ್ತಿದ್ದರು. ಆದ್ಯಾಗೂ ಇದರಿಂದ ಧೃತಿಗೆಡದ ಫುಲೆಯವರು ತಮ್ಮ ಹೋರಾಟವನ್ನು ಮುಂದುವರೆಸಿದರು. ನಂತರ 1849ರಲ್ಲಿ ತಮ್ಮ ಸ್ನೇಹಿತೆ **ಫಾತಿಮಾ ಶೇಖ್ (ದೇಶದ ಮೊದಲ ಮುಸ್ಲಿಂ ಮಹಿಳಾ ಶಿಕ್ಷಕಿ)** ಅವರೊಂದಿಗೆ ಜೊತೆಗೂಡಿ ಮತ್ತೊಂದು ಬಾಲಕಿಯರ ಶಾಲೆಯನ್ನು ಆರಂಭಿಸಿದರು. ಒಟ್ಟಾರೆ 1851ರ ಅಂತ್ಯದ ವೇಳೆಗೆ ಫುಲೆ ದಂಪತಿಗಳು ಹೆಣ್ಣು–ಮಕ್ಕಳಿಗಾಗಿ ಪ್ರತ್ಯೇಕವಾದ ಮೂರು ಶಾಲೆಗಳನ್ನು ತೆರೆದರು. ಈ ನಡೆ ದೇಶದಾದ್ಯಂತ ಹೆಣ್ಣು–ಮಕ್ಕಳಿಗಾಗಿ ಇನ್ನೂ ಅನೇಕ ಶಾಲೆಗಳನ್ನು ಸ್ಥಾಪಿಸಲು ಪ್ರೇರಣೆಯಾಯಿತು.

'ಮಹಿಳಾ ಹಕ್ಕುಗಳ' ಪ್ರಬಲ ಪ್ರತಿಪಾದಕರಾಗಿದ್ದ ಫುಲೆ ಅವರು ಮಹಿಳೆಯರಿಗೆ ತಮ್ಮ ಹಕ್ಕು–ಕರ್ತವ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಕ್ರಿ.ಶ.1852ರಲ್ಲಿ **'ಮಹಿಳಾ ಸೇವಾ ಮಂಡಳಿ'**ಯನ್ನು ಸ್ಥಾಪಿಸಿದರು. ವಿಶೇಷವೆಂದರೆ, ಇದು ದೇಶದ ಮೊಟ್ಟ ಮೊದಲ ಮಹಿಳಾ ಸೇವಾ ಸಂಘಟನೆಯಾಗಿದೆ. ಈ ಮೂಲಕ ಕೌಟುಂಬಿಕ ದೌರ್ಜನ್ಯ, ವಿಧವೆಯರ ಶೋಷಣೆ, ಕೇಶಮುಂಡನೆ ಪದ್ಧತಿ, ಸತಿ ಪದ್ಧತಿ, ಬಾಲ್ಯವಿವಾಹ, ಜಾತಿ ವ್ಯವಸ್ಥೆ, ಹೆಣ್ಣು ಭ್ರೂಣಹತ್ಯೆ ಮುಂತಾದವುಗಳ ವಿರುದ್ಧ ವ್ಯವಸ್ಥಿತವಾಗಿ ಹೋರಾಡಿದರು. ಹೆಣ್ಣು ಭ್ರೂಣಹತ್ಯೆಯನ್ನು ತಡೆಗಟ್ಟಲು ಮತ್ತು ಅದರ ಬಗ್ಗೆ ಸೂಕ್ತ ಜಾಗೃತಿ ಮೂಡಿಸಲು ಕ್ರಿ.ಶ.1863ರಲ್ಲಿ **'ಬಾಲ್‌ಹತ್ಯಾ ಪ್ರತಿಬಂಧಕ್ ಗೃಹ'**ವನ್ನು ಪ್ರಾರಂಭಿಸಿದರು. ಈ ಕೇಂದ್ರದ ಮೂಲಕ ವಿಧವೆಯರು, ಲೈಂಗಿಕ ದೌರ್ಜನ್ಯಕ್ಕೆ ತುತ್ತಾದ ಹಾಗೂ ಅಸಹಾಯಕ ಗರ್ಭಿಣಿ ಹೆಣ್ಣುಮಕ್ಕಳಿಗೆ ಆಶ್ರಯ ನೀಡಿ ಪ್ರಸೂತಿಗೆ ಸಂಬಂಧಿಸಿದಂತಹ ಎಲ್ಲಾ ರೀತಿಯ ಸೌಲಭ್ಯಗಳನ್ನು ಪೂರೈಸಲಾಗುತ್ತಿತ್ತು. ಅಲ್ಲದೇ ನಿರ್ಗತಿಕ ಮಹಿಳೆಯರಿಗಾಗಿ ತಮ್ಮ ಮನೆಯಲ್ಲಿಯೇ ಆಶ್ರಯವೊಂದನ್ನು ಸ್ಥಾಪಿಸಿದರು. ನಿಜಕ್ಕೂ ಇಂತಹ ಪ್ರಯತ್ನಗಳು ಭಾರತ ದೇಶದಲ್ಲಿಯೇ ಮೊದಲು ಎಂಬುದೇ ಹೆಮ್ಮೆಯ ಸಂಗತಿ.

ಮುಂದೆ 1860ರ ದಶಕದಲ್ಲಿ ವಿಧವೆಯಾದ ಮಹಿಳೆಯರ ತಲೆಬೋಳಿಸುವ (ಕೇಶಮುಂಡನ ಪದ್ಧತಿ) ಅನಿಷ್ಟ ಪದ್ಧತಿಯನ್ನು ಘನವಾಗಿ ವಿರೋಧಿಸಿ ಮುಂಬೈ ಮತ್ತು ಪುಣೆ ನಗರಗಳಲ್ಲಿ **'ಕ್ಷೌರಿಕ ಮುಷ್ಕರ'**ವನ್ನು ಆಯೋಜಿಸಿ ಯಶಸ್ವಿಯಾದರು. ಜೊತೆಗೆ ವಿಧವಾ ಪುನರ್ವಿವಾಹ ಪರಂಪರೆಯನ್ನು ಬೆಂಬಲಿಸುವುದರ ಜೊತೆಗೆ ಬಾಲ್ಯವಿವಾಹದ ವಿರುದ್ಧ ತೀವ್ರ ಪ್ರಚಾರ ಕೈಗೊಂಡರು. ಮಹಿಳೆಯರ ಆಸ್ತಿ ಹಕ್ಕುಗಳನ್ನು ಮತ್ತು ವಿಧವೆಯರ ಹಕ್ಕುಗಳು ಬಲವಾಗಿ ಪ್ರತಿಪಾದಿಸಿದರು. ಎಲ್ಲಾ ಜಾತಿ–ಸಮುದಾಯಗಳ ಮಹಿಳಾ ಪ್ರಜೆಗಳನ್ನು ಒಳಗೊಂಡ **'ಮಹಿಳಾ ಸಭೆ'**ಗಳನ್ನು ಕರೆದು ಅಂದಿನ ಪ್ರಚಲಿತ ಸಮಸ್ಯೆಗಳಿಗೆ ಪರಿಹಾರ ಕ್ರಮಗಳನ್ನು ಚರ್ಚಿಸುತ್ತಿದ್ದರು. ವಿಶೇಷವೆಂದರೆ, ಇಂತಹ ಸಭೆಗಳಲ್ಲಿ ಎಲ್ಲಾ ಜಾತಿಯ ಮಹಿಳೆಯರನ್ನು ಒಂದೇ ಹಾಸಿಗೆಯ ಮೇಲೆ ಕುಳಿತುಕೊಳ್ಳಲು ಆಹ್ವಾನಿಸಿ ಜಾತಿ ತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಿಸಿದರು.

**"ಮಹಿಳೆಯರು ಸಾಮಾಜಿಕ ಸಂಪ್ರದಾಯಗಳಿಂದ ಮತ್ತು ಕೌಟುಂಬಿಕ ಕಟ್ಟುಪಾಡುಗಳಿಂದ ಹೊರ ಬಂದರೆ ಮಾತ್ರ ಅವರ ಪ್ರಗತಿ ಸಾಧ್ಯ"** ಎಂದು ಮಾತೆ ಫುಲೆಯವರು ಕರೆ ನೀಡಿದರು. ಇನ್ನೂ ಮುಂದುವರೆದು ***'ಸಂಸ್ಕೃತಿ ಎಂಬ ಅಸ್ತ್ರದಿಂದ ಮಹಿಳೆಯರನ್ನು ನಿಶಕ್ತಗೊಳಿಸಲಾಗಿದೆ; ಆದುದರಿಂದ ಸಂಸ್ಕೃತಿ ಎಂಬ ದಬ್ಬಾಳಿಕೆ ಮುಖವಾಡವನ್ನು ಕಿತ್ತೊಗೆಯಲು ಪ್ರತಿಯೊಬ್ಬ ಮಹಿಳೆಯು ದಿಟ್ಟತನದಿಂದ ಹೋರಾಟ ನಡೆಸಬೇಕಾಗಿದೆ'*** ಎಂದು ಕರೆ ಕೊಟ್ಟರು. ಸಾವಿತ್ರಿಬಾಯಿ ಫುಲೆಯವರ ಇಂತಹ ಪ್ರಯತ್ನಗಳ ಹಿಂದಿನ ಮೂಲಧ್ಯೇಯ 'ಹೆಣ್ಣು–ಮಕ್ಕಳ ಘನತೆಯನ್ನು ಎತ್ತಿಹಿಡಿಯುವುದು ಮತ್ತು ಲಿಂಗಸಮಾನತೆಯನ್ನು ಸ್ಥಾಪಿಸುವುದೇ' ಆಗಿದೆ. ಸ್ತ್ರೀಯರ ಸ್ಥಾನಮಾನ–ಸ್ಥಿತಿಗತಿಗಳು ತುಂಬಾ ದುರ್ಬಲ ಮತ್ತು ಹೀನಾಯವಾಗಿದ್ದ ಕಾಲದಲ್ಲಿ ಇವರ ಕಾರ್ಯಗಳು ನವ್ಯ ಮತ್ತು ಗಮನಾರ್ಹವಾಗಿದ್ದವು. ಇಂತಹ ಹೋರಾಟಗಳಿಂದ ಸಾವಿತ್ರಿಬಾಯಿ ಫುಲೆಯವರು **'ಭಾರತ ದೇಶದ ಮೊಟ್ಟ ಮೊದಲ ಮಹಿಳಾವಾದಿ'** ಎಂದೇ ಪ್ರಸಿದ್ಧಿಯಾದರು.

## • ಕವಯಿತ್ರಿಯಾಗಿ ಮಾತೆ ಸಾವಿತ್ರಿಬಾಯಿ ಫುಲೆ

ಬಹುಜನರ ಭಾಗ್ಯವಿಧಾತೆಯಾದ ಮಾತೆ ಸಾವಿತ್ರಿಬಾಯಿ ಫುಲೆ ಅವರು ತಮ್ಮ ಸೃಜನಾತ್ಮಕ ಹಾಗೂ ಕ್ರಿಯಾಶೀಲತೆಯ ಬರಹ–ಭಾಷಣಗಳ ಮೂಲಕ ಶೋಷಿತ ಸಮುದಾಯಗಳಿಗೆ; ತಮ್ಮ ಇತಿಹಾಸ, ಜಾತಿವ್ಯವಸ್ಥೆ, ಅಸಮಾನತೆಯ ನೆಲೆಗಳು, ಮಾನವ ಹಕ್ಕುಗಳು, ಶಿಕ್ಷಣದ ಮಹತ್ವ ಮತ್ತು ಇಂಗ್ಲೀಷ್ ಭಾಷೆಯ ಅಗತ್ಯತೆಯ ಬಗ್ಗೆ ಗಮನಾರ್ಹವಾಗಿ ಅರಿವು ಮೂಡಿಸುತ್ತಿದ್ದರು. ಇವರು ಮರಾಠಿ ಭಾಷೆಯಲ್ಲಿ ಸಮೃದ್ಧ ಸಾಹಿತ್ಯವನ್ನು ರಚಿಸಿದ್ದು **'ಮರಾಠಿ ಕಾವ್ಯದ ಪ್ರವರ್ತಕಿ'** ಎಂದೇ ಪ್ರಸಿದ್ಧಿಯಾಗಿದ್ದಾರೆ. ಇವರ ಪ್ರಮುಖ ರಚನೆಗಳೆಂದರೆ;

- **ಕಬ್ಯಾಫುಲೆ (ಕಾವ್ಯ ಅರಳಿತು)** – ಮೊದಲ ಕವನ ಸಂಕಲನ (1854)
- **ಬಾವನ್ ಕಶಿ ಸುಬೋದ್ ರತ್ನಾಕರ್' (ಅಪ್ಪಟ ಮುತ್ತುಗಳ ಸಾಗರ)** – 2ನೇ ಕವನ ಸಂಕಲನ (1891)
- **ಜ್ಯೋತಿಬಾ ಅವರ ಭಾಷಣಗಳು** – ಸಂಪಾದಿತ ಕೃತಿ (1892)
- **ಕರ್ಜ (ಸಾಲ)** – ಸಾಮಾಜಿಕ ಕಳಕಳಿಯುಳ್ಳ ಪ್ರಬಂಧ

ಇವರು ತಮ್ಮ ಕವಿತೆಗಳಲ್ಲಿ **'ಕಲಿಯಲು ಮತ್ತು ಕಾರ್ಯೋನ್ಮುಖರಾಗಲು ಎದ್ದೇಳಿ'** (Rise, to learn and act) ಎಂಬ ಸ್ಫೂರ್ತಿದಾಯಕ ಸಾಲುಗಳನ್ನು ಬರೆದಿರುವುದು ವಿಶೇಷ. ಇವರ ಸಾಹಿತ್ಯವೂ ಸಾಮಾಜಿಕ ನ್ಯಾಯದ ಕಡೆ ಕೆಲಸ ಮಾಡಲು ಮತ್ತು ಸಾಮಾಜಿಕ ಕಂದಾಚಾರಗಳನ್ನು ಸವಾಲು ಮಾಡಲು ಅನೇಕ ಜನರನ್ನು ಪ್ರೇರೇಪಿಸಿದವು. ಬ್ರಿಟೀಷ್ ಸರ್ಕಾರವು ಫುಲೆಯವರ ಸಾಹಿತ್ಯವನ್ನು ಗುರುತಿಸಿ ಮೆಚ್ಚುಗೆಯ ಮನ್ನಣೆ ನೀಡಿತು.

## • ಸತ್ಯ ಶೋಧಕ ಸಮಾಜ ಮತ್ತು ಸಾವಿತ್ರಿಬಾಯಿ ಫುಲೆ

ಫುಲೆ ದಂಪತಿಗಳು ತಮ್ಮ 'ಶಿಕ್ಷಣ ಕ್ರಾಂತಿ' ಮತ್ತು 'ಸಮಾನತೆಯ ಚಳುವಳಿ'ಗೆ ಪೂರಕವಾಗಿ 24ನೇ ಸೆಪ್ಟೆಂಬರ್, 1873ರಂದು ಪುಣೆ

*– 54ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಆತ್ಮಹತ್ಯೆಗೆ ಕಾರಣ ಮತ್ತು ಪರಿಹಾರಗಳು : ಒಂದು ವಿಶ್ಲೇಷಣೆ

✍ **ಪ್ರೊ. ಪುನೀತಾ ಕೆ.,** ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಂಪೂರ, ತಾ. ಜಿ. ಬಾಗಲಕೋಟ.

## ಪೀಠಿಕೆ

ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿ ಕ್ರಿಮಿಕೀಟಗಳಿಗಿಂತ ಮಾನವನಿಗೆ ದೇವರು ಅತ್ಯದ್ಭುತವಾದ ಶಕ್ತಿಯನ್ನು ಕರುಣಿಸಿದ್ದಾನೆ ಅದುವೇ ಬುದ್ಧಿಶಕ್ತಿ. ಈ ಅಸಾಧಾರಣವಾದ ಬುದ್ಧಿ ಶಕ್ತಿಯನ್ನು ಬಳಸಿಕೊಂಡು ನಮ್ಮ ಜೀವನದಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದನ್ನು ಬಿಟ್ಟು ಮನಸ್ಸಿನ ಸ್ಥಿಮಿತತೆಯನ್ನು ಕಳೆದುಕೊಂಡು ಅವಿವೇಕದ ನಿರ್ಣಯಗಳನ್ನು ಕೆಲವೊಮ್ಮೆ ತೆಗೆದುಕೊಳ್ಳುವುದುಂಟು. ಈ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳಲು ಮುಖ್ಯ ಕಾರಣವೇನೆಂದರೆ, ಮಾನವನ ಮನಸ್ಸು ತುಂಬಾ ಸೂಕ್ಷ್ಮವಾದದ್ದು ಅದಕ್ಕೆ ಸ್ವಲ್ಪ ನೋವಾದರೂ ಸಹ ಸಹಿಸಿಕೊಳ್ಳುವ ಸಾಮರ್ಥ್ಯವಿರುವುದಿಲ್ಲ. ಯಾವ ವ್ಯಕ್ತಿಯ ಮನಸ್ಸು ದುರ್ಬಲ ಗೊಂಡಿರುತ್ತದೆಯೋ ಅದು ಸದಾ ಸಾವಿನ ಕಡೆಯೇ ಆಲೋಚಿಸುತ್ತಿರುತ್ತದೆ. ಈ ದೌರ್ಬಲ್ಯದಿಂದಾಗಿ ವ್ಯಕ್ತಿ ತನ್ನ ಜೀವವನ್ನು ಕಳೆದುಕೊಂಡು ತಾತ್ಕಾಲಿಕ ಪರಿಹಾರ ಕಂಡುಕೊಂಡರು ಮತ್ತೊಂದೆಡೆ ತನ್ನ ಕುಟುಂಬದವರಿಗೆ ಸಾಕಷ್ಟು ಸಮಸ್ಯೆಗಳನ್ನು ಸೃಷ್ಟಿ ಮಾಡಿ ಹೋಗುತ್ತಾನೆ.ಆತ್ಮಹತ್ಯೆ ಎಂದರೇನು ? ಆತ್ಮಹತ್ಯೆ ಎಂದರೆ ವ್ಯಕ್ತಿ ಸ್ವಪ್ರೇರಣೆಯಿಂದ ತನ್ನ ಪ್ರಾಣವನ್ನು ತಾನೇ ಅಂತ್ಯಗೊಳಿಸಿಕೊಳ್ಳುವುದು ಅಥವಾ ಉದ್ದೇಶಪೂರ್ವಕವಾಗಿ ತನ್ನನ್ನು ಕೊಲ್ಲುವ ಕ್ರಿಯೆ.

## ಜಾಗತಿಕವಾಗಿ ಆತ್ಮಹತ್ಯೆಯ ಚಿತ್ರಣ

ವಿಶ್ವ ಆರೋಗ್ಯ ಸಂಸ್ಥೆಯ (WHO) ಮಾಹಿತಿ ಪ್ರಕಾರ ಪ್ರತಿ ವರ್ಷ 7 ಲಕ್ಷಕ್ಕೂ ಹೆಚ್ಚು ಮಂದಿ ಆತ್ಮಹತ್ಯೆ ಮಾಡಿಕೊಂಡು ತಮ್ಮ ಜೀವನ ಕೊನೆಗೊಳಿಸಿಕೊಳ್ಳುತ್ತಿದ್ದಾರೆ. ಇದರ 20 ಪಟ್ಟಿಗೂ ಹೆಚ್ಚು ಮಂದಿ ಆತ್ಮಹತ್ಯೆಗೆ ಪ್ರಯತ್ನ ಮಾಡುತ್ತಾರೆ. ಜನರಲ್ಲಿ ಜಾಗೃತಿ ಮೂಡಿಸಿ ಅವರು ಮಾಹಿತಿಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾದರೆ ಆತ್ಮಹತ್ಯೆ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡಬಹುದು ಎಂಬ ವಿಶ್ವಾಸವನ್ನು WHO ಹೊಂದಿದ್ದು ಈ ಉದ್ದೇಶದಿಂದಲೇ ವಿಶ್ವ ಆತ್ಮಹತ್ಯೆ ತಡೆ ದಿನವನ್ನು ಹಮ್ಮಿಕೊಳ್ಳಲು 2003ರಲ್ಲಿ ನಿರ್ಧರಿಸಲಾಯಿತು. ಪ್ರತಿ ವರ್ಷ ಸೆಪ್ಟೆಂಬರ್ 10ರಂದು ಆತ್ಮಹತ್ಯೆ ತಡೆ ದಿನ ಎಂದು ಘೋಷಿಸಲಾಗಿದೆ. ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳೆಲ್ಲವೂ ಜೊತೆಯಾಗಿ ಆತ್ಮಹತ್ಯೆಯನ್ನು ತಡೆಯಲು ಸಾಧ್ಯ ಎಂಬ ಏಕೈಕ ಧ್ಯೇಯದಿಂದ ಕೆಲಸ ಮಾಡುತ್ತವೆ. 'ಕ್ರಿಯೆಯ ಮೂಲಕ ಭರವಸೆ' ಎಂಬುದು 2021 ರಿಂದ 2023ರವರೆಗಿನ ಧ್ಯೇಯ ವಾಕ್ಯವಾಗಿದೆ.

## ಭಾರತದಲ್ಲಿ ಆತ್ಮಹತ್ಯೆಯ ಚಿತ್ರಣ

ಜಗತ್ತಿನ ಒಟ್ಟು ಆತ್ಮಹತ್ಯೆಗಳ ಪೈಕಿ ಶೇಕಡಾ 77 ರಷ್ಟು ಮಧ್ಯಮ ಮತ್ತು ಕೆಳ ಆದಾಯದ ದೇಶಗಳಲ್ಲಿ ಸಂಭವಿಸುತ್ತವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೋದ (NCRB) ಅಪಘಾತ ಮತ್ತು ಆತ್ಮಹತ್ಯೆಯಿಂದ ಸಾವು ವರದಿಯ ಪ್ರಕಾರ 2021 ರಲ್ಲಿ ಭಾರತದಲ್ಲಿ 1.64 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಂದು ಲಕ್ಷ ಜನರಲ್ಲಿ 12 ಮಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂದು ಲೆಕ್ಕಾಚಾರ ಹಾಕಲಾಗಿದೆ. ಭಾರತದಲ್ಲಿ ವಾಸ್ತವದಲ್ಲಿ ಇನ್ನೂ ಹೆಚ್ಚು ಆತ್ಮಹತ್ಯೆಗಳು ನಡೆಯುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ. FIR ದಾಖಲಾದ ಆತ್ಮಹತ್ಯೆ ಪ್ರಕರಣಗಳು ಮಾತ್ರ NCRB ವರದಿಯಲ್ಲಿ ಉಲ್ಲೇಖವಾಗುತ್ತಿವೆ. ಜಾಗತಿಕ ಅನಾರೋಗ್ಯ ಹೊರೆ ವರದಿಯ ಪ್ರಕಾರ ಭಾರತದಲ್ಲಿ 63ರಷ್ಟು ಆತ್ಮಹತ್ಯೆಗಳಷ್ಟೇ ದಾಖಲಾಗುತ್ತಿವೆ.ಅತಿ ಹೆಚ್ಚು ಆತ್ಮಹತ್ಯೆ ಪ್ರಕರಣಗಳು ವರದಿಯಾದ ರಾಜ್ಯಗಳಲ್ಲಿ ಮಹಾರಾಷ್ಟ್ರ ಮೊದಲ ಸಾಲಿನಲ್ಲಿದೆ. 2021 ರಲ್ಲಿ ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳಲ್ಲಿ ಶೇ. 13ರಷ್ಟು ಪ್ರಕರಣಗಳು ಮಹಾರಾಷ್ಟ್ರ ಒಂದರಲ್ಲೇ ವರದಿಯಾಗಿದೆ. ಮಹಾರಾಷ್ಟ್ರ ತಮಿಳುನಾಡು ಮಧ್ಯ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕವು ಅತಿ ಹೆಚ್ಚು ಆತ್ಮಹತ್ಯೆ ವರದಿಯಾದ ಮೊದಲ ಐದು ರಾಜ್ಯಗಳೆನಿಸಿವೆ.ದೇಶದಲ್ಲಿ ವರದಿಯಾದ ಒಟ್ಟು ಆತ್ಮಹತ್ಯೆಗಳಲ್ಲಿ ಈ ಐದು ರಾಜ್ಯಗಳ ಪಾಲು ಶೇ. 51ರಷ್ಟಿದೆ. ಉಳಿದೆಲ್ಲ ರಾಜ್ಯಗಳಲ್ಲಿ ಶೇ. 49ರಷ್ಟು ಆತ್ಮಹತ್ಯೆಗಳು ವರದಿಯಾಗಿವೆ. ಆತ್ಮಹತ್ಯೆ ದರದಲ್ಲಿ ಏರಿಕೆ 2017ರಲ್ಲಿ ಪ್ರತಿ 1 ಲಕ್ಷ ಜನಸಂಖ್ಯೆಯಲ್ಲಿ 9.9 ರಷ್ಟು ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಆದರೆ 2021 ರಲ್ಲಿ ಈ ಸಂಖ್ಯೆ 12ಕ್ಕೆ ಏರಿದೆ.ದೇಶದ ಪ್ರತಿಯೊಂದು ಜನರಲ್ಲಿ 12 ಜನರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದ ಪ್ರತಿಯೊಂದು ಜನರಲ್ಲಿ 39.7 ರಷ್ಟು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ದೇಶದಲ್ಲೇ ಗರಿಷ್ಠ ಆತ್ಮಹತ್ಯೆ ದರವಾಗಿದೆ. ಬಿಹಾರದಲ್ಲಿ ಆತ್ಮಹತ್ಯೆ ದರವು ಅತ್ಯಂತ ಕಡಿಮೆ. ಪ್ರತಿ 1 ಲಕ್ಷ ಜನರಲ್ಲಿ 0.7 ಜನರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಪುರುಷರಲ್ಲೇ ಹೆಚ್ಚು. ಆತ್ಮಹತ್ಯೆಗೆ ಶರಣಾದವರಲ್ಲಿ ಪುರುಷರ ಪ್ರಮಾಣವೇ ಹೆಚ್ಚು. 2021 ರಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಪ್ರಮಾಣ ಶೇ.2.6ರಷ್ಟಿದೆ. ಮಹಿಳೆಯರ ಪ್ರಮಾಣ ಶೇಕಡ 27.4 ರಷ್ಟಿದೆ. ಬಹುತೇಕ ಎಲ್ಲಾ ವಯಸ್ಸಿನ ವರ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು ಇದೆ. ಆದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಬಾಲಕಿಯರ ಸಂಖ್ಯೆ ಹೆಚ್ಚು.ಈ ವರ್ಗದಲ್ಲಿ ಆತ್ಮಹತ್ಯೆಗೆ ಶರಣಾದ ಬಾಲಕರ ಪ್ರಮಾಣ ಶೇ. 47ರಷ್ಟಿದ್ದರೆ ಬಾಲಕಿಯರ ಪ್ರಮಾಣ 53ರಷ್ಟಿದೆ. ಈ ವರ್ಗದಲ್ಲಿ ಬಹುತೇಕ ಮಂದಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿದ್ದಕ್ಕೆ ಪ್ರೇಮ ವಿಫಲವಾಗಿದ್ದಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. 18–45 ವರ್ಷದ ಮಹಿಳೆಯರಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ ಹೆಚ್ಚು ಇದೆ. ಈ ವಯೋವರ್ಗದ ಒಟ್ಟು 30,217 ಮಹಿಳೆಯರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ವಯಸ್ಸಿನ ಮಹಿಳೆಯರಲ್ಲಿ ಬಹುತೇಕ ಮಂದಿ ಆತ್ಮಹತ್ಯೆ ಮಾಡಿಕೊಂಡಿರುವುದು ವಿವಾಹಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ. ಹಲವರು ವರದಕ್ಷಿಣೆ ಕಿರುಕುಳದಿಂದ ಪ್ರಾಣ ಬಿಟ್ಟಿದ್ದಾರೆ. ಉಳಿದವರು ಮಕ್ಕಳು ಆಗಿಲ್ಲ ಎಂಬ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

## ಆತ್ಮಹತ್ಯೆಗೆ ಕಾರಣಗಳು

ಈ ಆತ್ಮಹತ್ಯೆಗೆ ನಿಖರವಾದ ಕಾರಣಗಳೇನು ಎಂಬುದನ್ನು ಹೇಳುವುದು ಕಷ್ಟ ಸಾಧ್ಯ. ಸಮಾಜದ ಸನ್ನಿವೇಶ ಪರಿಸ್ಥಿತಿ ಹಾಗೂ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಸ್ಕೃತಿಗೆ ಅನುಕೂಲವಾಗಿ ಕಾರಣಗಳು ವಿಭಿನ್ನ ರೂಪ ತಳೆಯುತ್ತಾ ಹೋಗುವುದನ್ನು ಕಾಣಬಹುದು. ಸಾಮಾನ್ಯವಾಗಿ ಊಹಿಸಬಹುದಾದ ಕಾರಣಗಳೆಂದರೆ –

1. ಮಾನಸಿಕ ಅಸ್ಥಿರತೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಸಮಸ್ಯೆಗಳು ತಲೆ ದೊರುತ್ತವೆ ಕೆಲವು ವ್ಯಕ್ತಿಗಳು ಇಂತಹ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಪರಿಹಾರ ಕಂಡುಕೊಳ್ಳುವ ಬದಲು ತನ್ನ ಜೀವನ ಮುಗಿದು ಹೋಯಿತು ತನ್ನಿಂದ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬರುತ್ತಾರೆ. ಇಂತಹ ನಿರ್ಣಯಗಳು ಅವರನ್ನು ಆತ್ಮಹತ್ಯೆಗಳಿಗೆ ಪ್ರೇರೇಪಿಸುವುದುಂಟು. ಈ ಸಮಸ್ಯೆಗೆ ಸಾವೇ ಅಂತಿಮ ಪರಿಹಾರ ಎಂಬ ಮಾನಸಿಕ ಅಸ್ಥಿರತೆ ಅವರನ್ನು ಇಂತಹ ಕೂಪಗಳಿಗೆ ತಳ್ಳುತ್ತದೆ. ಜೀವನದಲ್ಲಿ ಸಂಭವಿಸುವ ಸಂದಿಗ್ಧ ಪರಿಸ್ಥಿತಿಗಳನ್ನು ತಾಳ್ಮೆಯಿಂದ ಯೋಚಿಸಿ ಬಗೆಹರಿಸಿಕೊಳ್ಳುವುದರ ಬಗ್ಗೆ ಚಿಂತನೆ ಮಾಡದೆ ತಮ್ಮ ಅಮೂಲ್ಯವಾದ ಜೀವವನ್ನು ಕಳೆದುಕೊಳ್ಳುತ್ತಾರೆ.
2. ಭರವಸೆಯ ಕೊರತೆ ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಏಳುಬೀಳುಗಳು ಸಹಜ. ಜೀವನದ ಯಾವುದಾದರೂ ವಿಷಯಗಳಲ್ಲಿ ಒಮ್ಮೆ ಸೋತೆ ಎಂದರೆ ಮತ್ತೊಮ್ಮೆ ನನ್ನಿಂದ ಗೆಲುವು ಸಾಧ್ಯ, ನಾನು ಗೆಲುವನ್ನು ಸಾಧಿಸುತ್ತೇನೆ ಎಂಬ ಭರವಸೆ ನಮ್ಮಲ್ಲಿ ಇರುವುದಿಲ್ಲ. ಈ ಭರವಸೆಯ ಕೊರತೆಯಿಂದಾಗಿ ನಾನು ಸೋತು ಹೋದೆ ಎಂದು ಇನ್ನೂ ಯಾರಿಗೂ ಮುಖ ತೋರಿಸಲು ಸಾಧ್ಯವಾಗುವುದಿಲ್ಲವೆಂದು ತಾವೇ ಕಲ್ಪನೆ ಮಾಡಿಕೊಂಡು ಜೀವವನ್ನು ಕಳೆದುಕೊಳ್ಳುತ್ತಾರೆ.
3. ದುಶ್ಚಟಗಳು ಕೆಟ್ಟ ಸ್ನೇಹಿತರ ಸಹವಾಸದಿಂದಾಗಿ ವ್ಯಕ್ತಿಗಳು ಮದ್ಯ ವ್ಯಸನ ಹಾಗೂ ಮಾದಕ ವಸ್ತು ವ್ಯಸನ ದುಶ್ಚಟಗಳಿಗೆ ಬಲಿಯಾಗಿರುತ್ತಾರೆ. ಇಂತಹ ಚಟಕ್ಕೆ ದಾಸರಾಗಿರುವವರಿಗೆ ಆತ್ಮಹತ್ಯೆ ಅಂತ ಕೆಟ್ಟ ಆಲೋಚನೆಗಳು ಬರುತ್ತದೆ ಹಾಗೂ ಮತ್ತಿನಲ್ಲಿರುವ ವೇಳೆ ಇವರು ಅನಿಸಿದ್ದನ್ನು ಮಾಡುವ ಮನಸ್ಥಿತಿ ಉಳ್ಳವರಾಗಿರುತ್ತಾರೆ. ಈ ಸಂದರ್ಭದಲ್ಲಿ ಇವರಿಗೆ ತಾವು ಏನು ಮಾಡುತ್ತಿದ್ದೇವೆ ಎನ್ನುವ ಜ್ಞಾನವು ಇರುವುದಿಲ್ಲ. ಇಂತಹ ಪ್ರಕರಣಗಳಿಂದಲೇ ಹೆಚ್ಚಾಗಿ ಆತ್ಮಹತ್ಯೆಗಳು ನಡೆಯುತ್ತವೆ.
4. ವ್ಯಾಪಾರೋದ್ಯಮದಲ್ಲಿ ನಷ್ಟ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವ್ಯಾಪಾರೋದ್ಯಮಗಳಲ್ಲಿ ಏಳುಬೀಳುಗಳು ಸಹಜ. ತನ್ನಿಂದ ಎಲ್ಲಾ ಸಾಧ್ಯ ಪ್ರತಿ ಬಾರಿಯೂ ನಾವೇ ಗೆಲ್ಲಬೇಕು ಎಂಬ ಆತ್ಮವಿಶ್ವಾಸ ಪ್ರತಿಯೊಬ್ಬ ವ್ಯಾಪಾರೋದ್ಯಮಿಯಲ್ಲಿಯೂ ಇರುತ್ತದೆ. ಒಂದು ವೇಳೆ ಆ ವ್ಯಾಪಾರೋದ್ಯಮದಲ್ಲಿ ನಷ್ಟ ಸಂಭವಿಸಿದರೆ ಅದನ್ನು ಎದುರಿಸಲು ಆಗದೆ ಆತ್ಮಹತ್ಯೆ ಅಂತಹ ಆಲೋಚನೆಯನ್ನು ಮಾಡುವ ಹಾಗೆ ಮಾಡುತ್ತದೆ.
5. ಗಂಭೀರ ಕಾಯಿಲೆಗಳು ದೀರ್ಘಕಾಲದ ಗುಣಮುಖವಾಗದ ಗಂಭೀರ ಕಾಯಿಲೆಯಿಂದ ಬಳಲುತ್ತಿರುವವರು ಅಸಹನೀಯವಾದ ನೋವನ್ನು ಸಹಿಸಲು ಸಾಧ್ಯವಾಗದೇ ಇದ್ದಾಗ ಆತ್ಮಹತ್ಯೆ ಅಂತಹ ಕಡೆ ಮುಖ ಮಾಡುವರು.
6. ಹೆದರಿಸುವ ಉದ್ದೇಶ ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿಗೆ ನಿಜವಾಗಲೂ ತನ್ನ ಜೀವವನ್ನ ಅಂತ್ಯಗೊಳಿಸಿಕೊಳ್ಳುವ ಉದ್ದೇಶ ಇಲ್ಲವಾದರೂ, ತಾನು ಯಾರನ್ನು ಅತಿಯಾಗಿ ಪ್ರೀತಿಸುತ್ತಿರುತ್ತಾರೋ ಅವರು ತಮ್ಮ ಭಾವನೆಗಳಿಗೆ ಸ್ಪಂದಿಸದೆ ಇದ್ದಂತಹ ಸಂದರ್ಭದಲ್ಲಿ ಅವರನ್ನು ಎದುರಿಸುವ ಸಲುವಾಗಿ ನಡೆಸುವ ಆತ್ಮಹತ್ಯೆ ಯತ್ನವು ಹಲವು ಬಾರಿ ಪ್ರಾಣವನ್ನೇ ಬಲಿ ಪಡೆದಿದೆ.
7. ಪ್ರೇಮ ವೈಫಲ್ಯ ಪ್ರಿಯಕರನ ವಂಚನೆಯಿಂದ ಹುಡುಗಿ ಅಥವಾ ಪ್ರಿಯತಮೆ ಮೋಸ ಮಾಡಿದನೆಂದು ಹುಡುಗ ಪ್ರೇಮ ಪ್ರಕರಣದಲ್ಲಿ ಮೋಸ ಹೋದಾಗ ಆತ್ಮಹತ್ಯೆಯ ದಾರಿ ಹಿಡಿಯಬಹುದು. ನಮ್ಮ ಸಾಂಪ್ರದಾಯಿಕ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಪರಸ್ಪರ ಪ್ರೀತಿಸಿ ವಿವಾಹವಾಗಲು ಹಾಗೂ ಅಂತರ್ಜಾತಿಯ ವಿವಾಹಕ್ಕೆ ಪೋಷಕರ ವಿರೋಧ ಇರುವುದನ್ನು ಗಮನಿಸಬಹುದು.ಇಂತಹ ವಿವಾಹಗಳಿಗೆ ಪೋಷಕರಿಂದ ಸಮ್ಮತಿ ದೊರಕದೆ ಇದ್ದಾಗ ಮನನೊಂದು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.
8. ಕೌಟುಂಬಿಕ ಸಮಸ್ಯೆ ವರದಕ್ಷಿಣೆ ಸಂಬಂಧಿತ ಹಿಂಸೆಯೂ ವಿವಾಹಿತ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯದ ಒಂದು ಸಾಮಾನ್ಯ ರೂಪವಾಗಿದ್ದು ನಿರೀಕ್ಷಿಸಿದ ಪ್ರಮಾಣದಲ್ಲಿ ಹೆಣ್ಣು ಮಕ್ಕಳು ವರದಕ್ಷಿಣೆಯನ್ನು ತರದೆ ಇದ್ದಾಗ ಆ ಪಡಂಬೂತಕ್ಕೆ ಸಿಲುಕಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಇಂದಿಗೂ ಗಂಡು ಮಗುವಿನ ಬಗೆಗಿನ ವ್ಯಾಮೋಹ ವ್ಯಾಪಕವಾಗಿದ್ದು ಗಂಡು ಮಕ್ಕಳೇ ನಮ್ಮ ವಂಶೋದ್ಧಾರಕರು ಅವರಿಂದಲೇ ನಮಗೆ ಮೋಕ್ಷ ಪ್ರಾಪ್ತಿಯಾಗುವುದೆಂಬ ನಂಬಿಕೆ ಇರುವುದರಿಂದ ಗಂಡು ಮಕ್ಕಳು ಹುಟ್ಟಲಿಲ್ಲವೆಂದು ಗಂಡ ಅಥವಾ ಅತ್ತೆ ಮನೆಯಲ್ಲಿ ಕಿರುಕುಳ ನೀಡಿದಾಗ ಹೆಣ್ಣು ಮಕ್ಕಳು ಆತ್ಮಹತ್ಯೆಗೆ ಶರಣಾಗುತ್ತಾರೆ. ದುಶ್ಚಟಗಳಿಗೆ ದಾಸನಾದಪುರುಷ ತನ್ನ ಪತ್ನಿಯ ಮೇಲೆ ದೈಹಿಕ ಅಲ್ಲೇ ನಡೆಸುವುದು ಹಾಗೂ ಕುಟುಂಬವನ್ನು ಸರಿಯಾಗಿ ಸಂತೋಷನೆ ಮಾಡದೆ ಇದ್ದಾಗ ಸ್ತ್ರೀ ಮನನೊಂದು ಆತ್ಮಹತ್ಯೆ ಕಡೆಗೆ ಮುಖ ಮಾಡುತ್ತಾಳೆ.
9. ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣವಾಗುವುದು ಅಥವಾ ಕಡಿಮೆ ಅಂಕ ಗಳಿಸಿದಾಗ. ಇಂದಿನ ಮಕ್ಕಳಲ್ಲಿ ಆತ್ಮಹತ್ಯೆ ಪ್ರವೃತ್ತಿ ಹೆಚ್ಚಾಗುತ್ತಿದೆ. ಚಿಕ್ಕಚಿಕ್ಕ ವಿಷಯಗಳನ್ನು ಸಹಿಸಿಕೊಳ್ಳುವ ತಾಳ್ಮೆ ಮಕ್ಕಳಲ್ಲಿ ಇಲ್ಲದಾಗಿದೆ. ಇದಕ್ಕೆ ಬಹುಮುಖ್ಯ ಕಾರಣ ಅವರ ಪಾಲಕರು ಹಾಗೂ ಇಂದಿನ ಶಿಕ್ಷಣ ವ್ಯವಸ್ಥೆ. ಮಕ್ಕಳ ಮೇಲೆ ಅತಿಯಾದ ಒತ್ತಡ ಹೇರುವುದು. ನೆರೆಹೊರೆಯವರ, ಸಂಬಂಧಿಕರ ಅಥವಾ ತಮ್ಮದೇ ವಾರಗೆಯವರ ಇತರ ಮಕ್ಕಳ ಜೊತೆ ಹೋಲಿಕೆ ಮಾಡುವುದು. ತಮಗೆ ಇಷ್ಟವಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಓದಲು ಅವಕಾಶ ನೀಡದೆ ಪೋಷಕರು ತಾವು ಇಚ್ಛಿಸಿದ ವಿಷಯಗಳನ್ನು ಆಯ್ಕೆ ಮಾಡುವುದು ಇದನ್ನೇ ಓದಬೇಕು ಇಷ್ಟೇ ಅಂಕಗಳನ್ನ ಗಳಿಸಬೇಕು ಎಂಬ ಷರತ್ತನ್ನು ಹಾಕಿರುತ್ತಾರೆ. ಒಂದು ವೇಳೆ ಪೋಷಕರು ನಿರೀಕ್ಷಿಸಿದ ಮಟ್ಟದಲ್ಲಿ ಅಂಕಗಳನ್ನು ತೆಗೆಯದೆ ಇದ್ದರೆ ಅಥವಾ ತೇರ್ಗಡೆ ಹೊಂದದೆ ಹೋದರೆ ಮಕ್ಕಳು ಆತ್ಮಹತ್ಯೆಯ ದಾರಿ ಹಿಡಿಯುತ್ತವೆ.
10. ರೈತರ ದುಸ್ಥಿತಿ ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ರೈತರು ನಮ್ಮ ದೇಶದ ಬೆನ್ನೆಲುಬಿದ್ದಂತೆ. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು ಎಂಬುದು ಕೃಷಿಯು ಶ್ರೇಷ್ಠತೆಯನ್ನು ಸಾರುತ್ತದೆ.ಇಂದಿಗೂ ಸುಮಾರು 60ರಷ್ಟು ಜನರು ನೇರವಾಗಿ ಅಥವಾ ಪರೋಕ್ಷವಾಗಿ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ. ಆದರೆ ಹಲವಾರು ಕಾರಣಗಳಿಂದ ಇತ್ತೀಚಿನ ವರ್ಷಗಳಲ್ಲಿ ರೈತ ಸಮುದಾಯ ಸಂಕಷ್ಟಕ್ಕೆ ಸಿಲುಕಿದೆ. ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಗಮನಸೆಳೆದಿರುವ ಸಮಸ್ಯೆ ಎಂದರೆ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಇದಕ್ಕೆ ಬಹು ಮುಖ್ಯ ಕಾರಣಗಳೆಂದರೆ ಸಾಲದ ಹೊರೆ, ಅತಿವೃಷ್ಟಿ, ಅನಾವೃಷ್ಟಿ, ಕೃಷಿ ಉಪಕರಣಗಳ ಬೆಲೆ ಏರಿಕೆ, ಲಾಭದಾಯಕವಲ್ಲದ ಹಿಡುವಳಿ,

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಗ್ರಾಮೀಣ ಸ್ವಾವಲಂಬನೆಯು ಯುಗಾಂತ್ಯ, ಬದಲಿ ಉದ್ಯೋಗಗಳನ್ನು ಕಂಡುಕೊಳ್ಳಲಾಗದ ದು:ಸ್ಥಿತಿ ಇನ್ನಿತರ ಕಾರಣಗಳಿಂದ ರೈತ ಸಮುದಾಯ ಆತ್ಮಹತ್ಯೆ ದಾರಿ ಹಿಡಿದಿದೆ.

11. ನಿರುದ್ಯೋಗ ನಿರುದ್ಯೋಗವು ಸಮಾಜಕ್ಕೆ ಶಾಪ. ಇದು ವ್ಯಕ್ತಿಗಳ ಮೇಲೆ ಕೆಟ್ಟ ಪರಿಣಾಮಗಳನ್ನು ಬೀರುತ್ತಿದೆ. ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ವ್ಯಕ್ತಿ ತನ್ನ ಜೀವನವನ್ನು ನಿಭಾಯಿಸಿಕೊಂಡು ಹೋಗಲು ಒಂದಲ್ಲ ಒಂದು ಉದ್ಯೋಗಗಳಲ್ಲಿ ತೊಡಗಿಸಿ ಕೊಳ್ಳಬೇಕಾದ ಅನಿವಾರ್ಯತೆ ಇದೆ.ತಾವು ಪಡೆದಿರುವ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಇಂದು ವ್ಯಕ್ತಿಗಳಿಗೆ ಉದ್ಯೋಗವಕಾಶಗಳು ದೊರೆಯುತ್ತಿಲ್ಲವಾದುದರಿಂದ ಮತ್ತು ಕುಟುಂಬದವರ ನಿರೀಕ್ಷೆಗಳನ್ನು ತಲುಪಲಾರದೆ ವ್ಯಕ್ತಿ ಆತ್ಮಹತ್ಯೆ ದಾರಿ ಹಿಡಿದಿದ್ದಾನೆ.

12. ಏಕಾಂಗಿತನದ ಕ್ರೂರತೆ ಇಂದಿನ ಮಾಹಿತಿ ಮತ್ತು ಸಮೂಹನ ತಂತ್ರಜ್ಞಾನದ ಸಮಾಜದಲ್ಲಿನ ವಿದ್ಯಮಾನಗಳು ವ್ಯಕ್ತಿಗಳನ್ನು ಹೆಚ್ಚು ಹೆಚ್ಚಾಗಿ ಸ್ವಾರ್ಥಪರನ್ನಾಗಿಸುತ್ತಿವೆ. ಒಬ್ಬರಿಗಾಗಿ ಎಲ್ಲರೂ ಮತ್ತು ಎಲ್ಲರಿಗೂ ಎಂಬ ಸಹಕಾರಿ ಭಾವನೆ ಮಾಯವಾಗಿ ತಾನು ತನ್ನ ಹೆಂಡತಿ ಮತ್ತು ಮಕ್ಕಳ ಶ್ರೇಯೋಭಿವೃದ್ಧಿಗೆ ಆಧುನಿಕರು ಹೆಚ್ಚಿನ ಪ್ರಶಸ್ತಿ ನೀಡುತ್ತಿರುವುದನ್ನು ಕಾಣಬಹುದು. ಇದರಿಂದ ನಾವು ನಮ್ಮವರು ಎಂಬ ಭಾವನೆ ಹೋಗಿ ಯಾರ ಕಷ್ಟ ಸುಖ:ಗಳಿಗೆ ಯಾರು ಸ್ಪಂದಿಸದೆ ಇರುವಂತಹ ಪರಿಸ್ಥಿತಿ ನಿರ್ಮಾಣ ವಾಗಿರುವುದರಿಂದ ಸಮೂಹ ಬಂಧನಗಳು ಹಾಗೂ ಕಟ್ಟುಪಾಡುಗಳು ದುರ್ಬಲಗೊಳ್ಳುತ್ತಿವೆ. ವ್ಯಕ್ತಿಗಳ ಜೀವನದಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಕಷ್ಟ ಕಾರ್ಪಣ್ಯಗಳಿಗೆ ಯಾರು ನೆರವಾಗದೆ ಇರುವುದರಿಂದ ತಾನು ಇರುವಂತಹ ಪರಿಸರದಲ್ಲಿ ತಾನು ಒಬ್ಬಂಟಿಗನಾಗಿ ಅನಾಥನಂತೆ ಜೀವನ ಮಾಡಬೇಕಾಗಿ ಬಂದೋದಗುವ ಪರಿಸ್ಥಿತಿಯು ಆತನನ್ನು ಆತ್ಮಹತ್ಯೆಂತಹ ಕೃತ್ಯಕ್ಕೆ ಪ್ರೇರೇಪಿಸುವುದು.

13. ವೈವಾಹಿಕ ಬಿಕ್ಕಟ್ಟು ಹಿಂದೂಗಳಲ್ಲಿ ವಿವಾಹವು ಕೇವಲ ಸಾಮಾಜಿಕ ಒಪ್ಪಂದವಾಗಿರದೆ ಅದೊಂದು ಪವಿತ್ರ ಸಂಸ್ಕಾರವಾಗಿದ್ದು ಸಂಗಾತಿಗಳಿಗೆ ಪರಸ್ಪರ ನಿಷ್ಠೆ ಮತ್ತು ಭಕ್ತಿ ವಿವಾಹದ ಮೂಲ ತತ್ವವೆಂದು ಪರಿಗಣಿಸಲಾಗಿತ್ತು.ಆದರೆ ಇಂದು ವಿವಾಹವು ಸಾವಿನ ನಂತರವೂ ಮುಂದುವರೆಯುವಂತದ್ದು ಎಂಬ ಪರಿಕಲ್ಪನೆ ಹೋಗಿ ವಿವಾಹವು ಪತಿ ಪತ್ನಿಯರ ಸ್ವಹಿತಾ ಶಕ್ತಿಗಳಿಗೆ ಧಕ್ಕೆಯಾಗದಂತೆ ಜೀವನವನ್ನು ಹಂಚಿಕೊಳ್ಳುವ ಬದ್ಧತೆ ಎಂಬ ರೀತಿಯಲ್ಲಿ ಪರಿಗಣಿಸಲ್ಪಡುತ್ತಿದೆ.ಜಾಗತೀಕರಣದ ಬಿರುಗಾಳಿಗೆ ಸಿಲುಕಿ ವಿವಾಹವು ತನ್ನ ಮೊದಲಿನ ಮೌಲ್ಯವನ್ನು ಕಳೆದುಕೊಂಡು ಸಾಕಷ್ಟು ಬದಲಾವಣೆಗೆ ಒಳಗಾಗಿದೆ. ಕ್ಷುಲ್ಲಕ ಕಾರಣಗಳಿಗಾಗಿ ಪತಿ–ಪತ್ನಿಯರ ನಡುವೆ ಹೊಂದಾಣಿಕೆ ಸಾಧ್ಯವಾಗದೆ ಎಷ್ಟೋ ದಂಪತಿಗಳು ವಿವಾಹ ವಿಚ್ಛೇದನದ ಮೊರೆ ಹೋಗುತ್ತಿದ್ದಾರೆ.ನಂತರ ಏಕಾಂಗಿಯಾಗಿ ಜೀವನ ನಡೆಸಿ ಕಹಿ ಉಂಡು ಏಕಾಂಗಿತನದ ಕ್ರೂರತೆಯಿಂದ ಹೊರಬರಲು ಸಾಧ್ಯವಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

## ಆತ್ಮಹತ್ಯೆಯನ್ನು ತಡೆಗಟ್ಟುವ ಮಾರ್ಗೋಪಾಯಗಳು

1. ಆತ್ಮಹತ್ಯೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಿ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗಬೇಕು.
2. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಆಸಿಕೆ ಇದ್ದಷ್ಟು ಕಾಲು ಚಾಚು ಎಂಬ ಗಾದೆ ಮಾತಂತೆ ನಮ್ಮ ಸಾಮರ್ಥ್ಯವೇನು ಎಂಬುದನ್ನು ಅರಿತು ಜೀವನ ಮಾಡಬೇಕು ಬೇರೆಯವರ ಜೀವನ ಶೈಲಿ ನಮ್ಮದಾಗದಿರಲಿ.
3. ಜೀವನದಲ್ಲಿ ಕಷ್ಟ ಸುಖಗಳು ಸಹಜ ಸಮಸ್ಯೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅದಕ್ಕೆ ಏನು ಪರಿಹಾರ ಕಂಡುಕೊಳ್ಳಬಹುದು ಎಂದು ಯೋಚಿಸುವ ವ್ಯವಧಾನವನ್ನು ರೂಡಿಸಿಕೊಳ್ಳಬೇಕು. ಒಂದು ವೇಳೆ ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗದಿದ್ದಾಗ ನಮ್ಮ ಸಮಸ್ಯೆಗಳನ್ನು ಮನೆಯವರು ಅಥವಾ ಆಪ್ತರ ಬಳಿ ಮುಕ್ತವಾಗಿ ಹಂಚಿಕೊಂಡು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಬೇಕು.
4. ಆತ್ಮಹತ್ಯೆಯನ್ನು ತಡೆಗಟ್ಟಲು ಶೈಕ್ಷಣಿಕ ಅರಿವನ್ನು ಮೂಡಿಸುವ ಕ್ರಮಗಳನ್ನು ಹೆಚ್ಚಿಸುವುದು.
5. ಸಮಾಜದಲ್ಲಿ ಸಾಧನೆ ಮಾಡಲು ಹಾಗೂ ಸುಂದರ ಬದುಕನ್ನು ಕಟ್ಟಿಕೊಳ್ಳಲು ಅಗಾಧ ಅವಕಾಶಗಳಿವೆ. ಸಾಧಿಸಬೇಕಾದ ಗುರಿ ಮತ್ತು ಮಾರ್ಗಗಳನ್ನು ಸರಿಯಾಗಿ ಆಯ್ಕೆ ಮಾಡಿಕೊಂಡಾಗ ಅಸಾಧ್ಯವಾದದನ್ನುಸಾಧ್ಯವಾಗಿ ತೋರಿಸಬಹುದು.
6. ಒಂಟಿ ಬದುಕು ಖಿನ್ನತೆಯನ್ನು ಹೆಚ್ಚಿಸುತ್ತದೆ ಯಾರಿಗೂ ಯಾರಿಲ್ಲ. ಇದಕ್ಕೆ ಪ್ರಮುಖ ಕಾರಣ ಸಂಪಾದನೆಯ ಬೆನ್ನತ್ತಿ ಕೌಟುಂಬಿಕ ಸಂಬಂಧಗಳ ಕೊಂಡಿಯಿಂದ ವ್ಯಕ್ತಿ ಕಳಚಿಕೊಂಡಿದ್ದಾನೆ ಇದರಿಂದಾಗಿ ಸಮಸ್ಯೆಯನ್ನು ಆಲಿಸುವ ಮನಸ್ಸುಗಳು ಬತ್ತಿ ಹೋಗುತ್ತಿವೆ ಪರಿಣಾಮವಾಗಿ ಒಂಟಿತನ ಖಿನ್ನತೆಯ ರೂಪ ಪಡೆದುಕೊಳ್ಳುತ್ತಿದೆ. ಇದರಿಂದ ವ್ಯಕ್ತಿ ಹೊರಬರಬೇಕಾದರೆ ಕುಟುಂಬ ಸದಸ್ಯರ ಜೊತೆ ತನ್ನ ಜೀವನವನ್ನು ಕಳೆಯಬೇಕಾದ ಅನಿವಾರ್ಯತೆ ಇದೆ.
7. ಸಕಾರಾತ್ಮಕ ಮನೋಭಾವನೆಗಳು ಅಂದರೆ ಪ್ರೀತಿ,ಭರವಸೆ, ಆಶಾವಾದ ಮತ್ತು ಆತ್ಮವಿಶ್ವಾಸ ಇವುಗಳನ್ನು ಜೀವನದಲ್ಲಿ ವ್ಯಕ್ತಿ ಬೆಳೆಸಿಕೊಳ್ಳಬೇಕು ನನ್ನಿಂದ ಸಾಧ್ಯ ನಾನು ಏನೇ ಸಮಸ್ಯೆ ಬಂದರೂ ಎದುರಿಸುವೆ ಎನ್ನುವ ಧನಾತ್ಮಕ ಚಿಂತನೆಯಿಂದ ಆತ್ಮಹತ್ಯೆಯನ್ನು ತಡೆಗಟ್ಟಬಹುದು.
8. ಪರೀಕ್ಷೆಯಲ್ಲಿ ಪಡೆಯುವ ಅಂಕಗಳೇ ಮಕ್ಕಳನ್ನು ಅಳೆಯುವ ಮಾನದಂಡವಲ್ಲ ಎಂಬುದನ್ನು ಪೋಷಕರು ತಿಳಿದುಕೊಂಡು ಮಕ್ಕಳಿಗೆ ಬದುಕುವ ವಿದ್ಯೆಯನ್ನು ನೀಡಬೇಕಾಗಿದೆ.

## ಉಪಸಂಹಾರ

'ಮಾನವ ಜನ್ಮ ಬಲು ದೊಡ್ಡದು ಅದನ್ನು ಹಾಳು ಮಾಡಿಕೊಳ್ಳ ಬೇಡಿರೋ ಹುಚ್ಚಪ್ಪಗಳಿರಾ' ಎಂಬ ಹಿರಿಯರ ವಾಣಿಯು ಮಾನವನ ಬದುಕಿನ ಮಹತ್ವವನ್ನು ತಿಳಿಸುತ್ತದೆ. ವ್ಯಕ್ತಿಯ ಜೀವನದ ಪ್ರತಿ ಹಂತದಲ್ಲೂ ಸೋಲು ನಿರಾಸೆ ಬಂದೇ ಬರುತ್ತವೆ. ಅನೇಕ ಸನ್ನಿವೇಶಗಳು ಆತ್ಮಹತ್ಯೆ ದಾರಿಯತ್ತ ವ್ಯಕ್ತಿಯನ್ನು ದೂಡುತ್ತವೆ. ಆದರೆ ಎಲ್ಲವನ್ನೂ ಎದುರಿಸಿ ಮುನ್ನುಗುವ ಛಲವು ಎಂತಹವರನ್ನು ಬದುಕಿಸುತ್ತವೆ. ಬದುಕಿನಲ್ಲಿ ಏನೇ ಸಮಸ್ಯೆಗಳು ಬಂದರೂ ಭರವಸೆಯನ್ನು ಮಾತ್ರ ಕಳೆದುಕೊಳ್ಳಬಾರದು ಮುಂದೆ ಬರುವ ಸಂತೋಷದ ಕ್ಷಣಗಳಿಗಾಗಿ ಇಂದಿನ ಬದುಕಿನ ಕಷ್ಟಕಾರ್ಪಣ್ಯಗಳ ಜೊತೆ ಹೋರಾಡಲೇಬೇಕು.

UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಪರಾಮರ್ಶನ ಗ್ರಂಥಗಳು


- **ಡಾ. ಚ. ನ. ಶಂಕರ್ ರಾವ್ (2013–14) :** ಭಾರತದ ಗ್ರಾಮ ಸಮಾಜ ಮತ್ತು ಗ್ರಾಮೀಣಾಭಿವೃದ್ಧಿ ಮಂಗಳೂರು ಜೈ ಭಾರತ್ ಪ್ರಕಾಶನ .
- **NCRBಯ** 'ಅಪಘಾತದ ಸಾವುಗಳು ಮತ್ತು 2021ರ ವರದಿ.
- **George Ritzer :** Social Theory, Fifth Edition New Delhi Tata McGraw Hill Education private Limited.
- **Ram Ahuja (2015) :** Social Problems in India, Third Edition, Jaipur Ram New Delhi Ahuja Rawat Publications.


■■

*– 30ನೇ ಪುಟದಿಂದ ಮುಂದುವರೆದುದು*

## 3. ನಿಷಧಿಗಳು

ಹಿಂದೂ ಪರಂಪರೆಯಲ್ಲಿ ಕಂಡುಬರುವ ಸ್ಮಾರಕಶಿಲ್ಪಗಳಿಗೆ ಸಮಾನವಾಗಿ ಜೈನಪರಂಪರೆಯಲ್ಲಿ ಈ ಶಿಲ್ಪಗಳನ್ನು ನೋಡುತ್ತೇವೆ. ಜೈನಮುನಿಗಳು, ಧಾರ್ಮಿಕಮುಖಂಡರು, ಕೆಲವೊಮ್ಮೆ ಶ್ರೀ ಸಾಮಾನ್ಯರೂ ಸಹ ತಮ್ಮ ಆತ್ಮಕ್ಕೆ ಅಂಟಿದ ಕರ್ಮಗಳನ್ನು ಕಿತ್ತೊಗೆದು ಮೋಕ್ಷವನ್ನು ಸಾಧಿಸಲು ಸಲ್ಲೇಖನ ವ್ರತವನ್ನು ಕೈಗೊಂಡು ಮರಣಹೊಂದಿರುವರು. ಹೀಗೆ ಮೋಕ್ಷಸಾಧಿಸಿದವರ ನೆನಪಿಗಾಗಿ ಜೈನಪರಂಪರೆಯಲ್ಲಿ ಸ್ಮಾರಕಗಳನ್ನು ನಿಲ್ಲಿಸಿರುವುದು ಕಂಡುಬರುತ್ತದೆ.. ಇವುಗಳನ್ನು ಜೈನಪರಿಭಾಷೆಯಲ್ಲಿ ನಿಷಧಿಗಳೆನ್ನುವರು. ಮುಳುಗುಂದ ನಾಡಿನ ವ್ಯಾಪ್ತಿಯಲ್ಲಿ ಈ ರೀತಿಯ ಅನೇಕ ನಿಷಧಿಶಿಲ್ಪಗಳು ದೊರೆತಿವೆ. ಅವುಗಳಲ್ಲಿ ಕೆಲವಕ್ಕೆ ಶಾಸನಗಳಿವೆ.

ಮುಳಗುಂದದ ಮಧ್ಯದಲ್ಲಿ ಬಸದಿ ಪರಿಸರದಲ್ಲಿರುವ ಗುಡ್ಡದಲ್ಲಿ ಮೂರು ನಿಷಧಿಗಳಿವೆ. ಅವುಗಳಲ್ಲಿ ಕ್ರಿ.ಶ. 1010 ರ ನಿಷಧಿ ಶಾಸನವು, ವಸಂತರಿ ದೇವರ ಶಿಷ್ಯ ನೀಲಗುಂದದ ದೇವಣ್ಣನು ಮುಳಗುಂದದಲ್ಲಿ ಸಲ್ಲೇಖನ ವ್ರತವನ್ನು ಆಚರಿಸಿ ಕೊಪ್ಪಳದಲ್ಲಿ ಅದನ್ನು ಸಾಕಾರಗೊಳಿಸಿದ ವಿವರವನ್ನು ತಿಳಿಸಿದೆ. ಮುಂದುವರೆದು, ಆತನ ಮಮ್ಮೊಗನೂ ಸಲ್ಲೇಖನವನ್ನು ಆಚರಿಸಿದ್ದನ್ನು ತಿಳಿಸಿದೆ. ಕ್ರಿ.ಶ. 1399 ರ ನಿಷಧಿ ಶಾಸನವು, ಹೇಮಸೇನನ ಶಿಷ್ಯನೊಬ್ಬ ನಿಷಧಿಹೊಂದಿದ್ದನ್ನು ಉಲ್ಲೇಖಿಸಿದೆ. ಆದರೆ, ಶಾಸನವು ಭಗ್ನಗೊಂಡಿರುವುದರಿಂದ ಆತನ ಹೆಸರು ತಿಳಿಯುವುದಿಲ್ಲ. ಕ್ರಿ.ಶ. 1420 ರ ಮತ್ತೊಂದು ನಿಷಧಿ ಶಾಸನದಲ್ಲಿ, ಹೇಮಸೇನನ ಶಿಷ್ಯನಾದ ಬುಳಿಸೆಟ್ಟಿ ಕೇಶಪ್ಪನು ನಿಷಧಿಹೊಂದಿದ್ದನ್ನು ತಿಳಿಸಿದೆ.

ಕ್ರಿ. ಶ. 1275 ರ ಕಳಚೂರಿಯರ ಕಾಲಾವಧಿಯ ಶಾಸನದಲ್ಲಿ ಉಲೇಖಗೊಂಡಿರುವ ತಿಳಕಾಕ್ಕನ ಮಮ್ಮೊಗನಾದ, ದೇವರಾಜ ಮತ್ತು ಭಾಗಾಂಬಿಕಾ ದಂಪತಿಗಳ ಮಗನಾದ ಅಮೃತಯ್ಯನು ಆರಂಭದಲ್ಲಿ ಸಂಪತ್ತಿನ ವ್ಯಾಮೋಹಕ್ಕೆ ಒಳಗಾಗಿದ್ದು, ತನ್ನ ಜೀವಿತದ ಅಂತಿಮ ದಿನಗಳಲ್ಲಿ ಈತನು ಸಲ್ಲೇಖನ ಸ್ವೀಕರಿಸಿದ್ದನ್ನು ತಿಳಿಸಿದೆ.

ಹೊಸೂರಿನ ಕಲ್ಮೇಶ್ವರ ದೇವಾಲಯದ ಮುಂಭಾಗದಲ್ಲಿರುವ ನಿಷಧಿಶಿಲ್ಪವು ಸುಮಾರು ಎರಡು ಅಡಿ ಎತ್ತರವಿದೆ. ಧ್ಯಾನಭಂಗಿಯಲ್ಲಿ ಕುಳಿತಿರುವ ಜಿನನು ಸಲ್ಲೇಖನವನ್ನು ಆಚರಿಸುತ್ತಿರುವನು. ಮೇಲ್ಭಾಗದಲ್ಲಿ ಮುಕ್ಕೊಡೆಯಿದೆ.

ಕಣವಿಯಲ್ಲಿರುವ ನಿಷಧಿಶಿಲ್ಪದಲ್ಲಿ ಅಕ್ಷರಗಳಿವೆ. ಆದರೆ, ಸ್ಥಳೀಯರು ಇದನ್ನು ಪೂಜಿಸುತ್ತಿದ್ದು, ಇದರ ಮೇಲೆ ಎಣ್ಣೆಯನ್ನು ಹಾಕಿರುವುದರಿಂದ ಅಕ್ಷರಗಳು ಅಸ್ಪಷ್ಟವಾಗಿವೆ. ಮೂರು ಹಂತಗಳಲ್ಲಿರುವ ಶಿಲ್ಪದ ಕೆಳಗಿನ ದೃಶ್ಯದಲ್ಲಿ ದಂಪತಿಗಳಿಬ್ಬರು ಕೈಮುಗಿದು ಕುಳಿತಿರುವರು. ಮಧ್ಯದ ದೃಶ್ಯದಲ್ಲಿ ಜಿನನಿದ್ದು, ಇಕ್ಕೆಲಗಳಲ್ಲಿ ಚಾಮರವನ್ನು ತೋರಿಸಲಾಗಿದೆ. ಮೇಲಿನ ಹಂತದಲ್ಲಿ ಜಿನನಲ್ಲಿ ಐಕ್ಯವಾಗಿರುವಂತೆ ತೋರಿಸಿರುವರು. ಶಿಲ್ಪದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಚಿತ್ರಿಸಲಾಗಿದೆ.

ಮುಳುಗುಂದನಾಡು ಇಂದಿಗೂ ಸಹ ತನ್ನನ್ನು ಐತಿಹಾಸಿಕವಾಗಿ ಗುರುತಿಸಿಕೊಂಡಿದೆ. ಆದರೆ, ಇಲ್ಲಿ ಕಂಡುಬರುವ ವಿವಿಧ ರೂಪದ ಸ್ಮಾರಕಶಿಲ್ಪಗಳು ಸಂರಕ್ಷಣೆಯ ಕೊರತೆಯಿಂದ ವಿನಾಶದ ಅಂಚಿನಲ್ಲಿವೆ. ಹಾಗಾಗಿ, ಇದಕ್ಕೆ ಸಂಬಂಧಿಸಿದ ರಾಜ್ಯಪುರಾತತ್ವ ಇಲಾಖೆಯವರು, ಇತಿಹಾಸ ಆಸಕ್ತರು ಹಾಗೂ ಸಂಘಸಂಸ್ಥೆಗಳವರು ಈ ಕುರಿತು ಸ್ಥಳೀಯರಲ್ಲಿ ಅವುಗಳ ಮಹತ್ವವನ್ನು ತಿಳಿಸಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ. ಆ ಮೂಲಕ ಅವುಗಳನ್ನು ಸಂರಕ್ಷಿಸಿ ಇಲ್ಲಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಮಹತ್ತರ ಕಾರ್ಯವನ್ನು ಮಾಡಬೇಕಿದೆ.

## ಪರಾಮರ್ಶನ ಗ್ರಂಥಗಳು


- **ಕ್ಷೇತ್ರಕಾರ್ಯಾಧಾರಿತ ಮಾಹಿತಿ.**
- **ಎಫಿಗ್ರಾಫಿಯಾ ಇಂಡಿಕ ಸಂಪುಟಗಳು** : 6, 13, 16, 26.
- **ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್** : ಸಂಪುಟ–11, ಭಾಗ 1 ಮತ್ತು 2.
- **ಕಲಬುರ್ಗಿ ಎಂ.ಎಂ. (1975) :** ಧಾರವಾಡ ಜಿಲ್ಲೆಯ ಶಾಸನಸೂಚಿ, ಕನ್ನಡ ಅಧ್ಯಯನ ಪೀಠ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಧನವಂತ ಹಾಜವಗೋಳ (2004) :** ಮುಳಗುಂದ ನಾಡು ಒಂದು ಸಾಂಸ್ಕೃತಿಕ ಅಧ್ಯಯನ, ಧಾರವಾಡ ಮಹಾದೇವಿ ಪ್ರಕಾಶನ.
- **ನಾಗರಾಜಯ್ಯ ಹಂಪ (1997) :** ಕರ್ನಾಟಕ ಮತ್ತು ಜೈನಧರ್ಮ, ಬೆಂಗಳೂರು ಐ.ಬಿ.ಎಚ್ ಪ್ರಕಾಶನ.
- **ರಿತ್ತಿ ಶ್ರೀನಿವಾಸ (1969) :** ಮುಳುಗುಂದನಾಡು, ಪ್ರಸಾರಾಂಗ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಸುರೇಶ ಬಿ. (2018) :** ಪ್ರಾಚ್ಯಶೋಧ, ಮೈಸೂರು ಉಷಾ ಪ್ರಕಾಶನ.
- **ಅರವಂಟಿಗೆ (1999) :** ಶ್ರವಣಬೆಳಗೊಳ ಜೈನ ಅಧ್ಯಯನ ಸಂಸ್ಥೆ, ಸಂಪುಟ–1, ಸಂಚಿಕೆ–1.
- **ಅರವಂಟಿಗೆ (2000) :** ಶ್ರವಣಬೆಳಗೊಳ ಜೈನ ಅಧ್ಯಯನ ಸಂಸ್ಥೆ, ಸಂಪುಟ–1, ಸಂಚಿಕೆ–2.
- **ಅರವಂಟಿಗೆ (2000) :** ಶ್ರವಣಬೆಳಗೊಳ ಜೈನ ಅಧ್ಯಯನ ಸಂಸ್ಥೆ, ಸಂಪುಟ–1, ಸಂಚಿಕೆ–3.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಶರಣರ ವಚನಗಳಲ್ಲಿ ಜೀವನ ಮೌಲ್ಯಗಳು

✍ **ಚಂದ್ರಪ್ಪ ಬಾರಂಗಿ,** ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

12ನೆಯ ಶತಮಾನ ವಚನ ಸಾಹಿತ್ಯ, ಸಾಹಿತ್ಯ ಸೃಷ್ಟಿಯ ಪರಮಯುಗ. ಬಸವಾದಿ ಶರಣರ ಆದಿಯಾಗಿ ಸುಮಾರು ನಾಲ್ಕು ನೂರಕ್ಕೂ ಅಧಿಕ ವಚನಕಾರರು ವಚನಗಳನ್ನು ರಚಿಸಿದ್ದಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳೆರಡೂ ಶಿರೋನ್ನತ ಸ್ಥಾನದಲ್ಲಿ ಇರುವಂತವುಗಳು.ಜಗತ್ತಿನ ಬೇರಾವ ಭಾಷೆಗಳಲ್ಲಿಯೂ ಕಂಡು ಬರದ ಸಾಹಿತ್ಯ ಪ್ರಕಾರಗಳು. ದಾಸ ಸಾಹಿತ್ಯ ಮತ್ತು ವಚನ ಸಾಹಿತ್ಯ ಎರಡೂ ಹಾಡುಗಬ್ಬಗಳಾಗಿವೆ. ವಚನಗಳಂತೂ ಓದಿದರೆ ಗದ್ಯವಾಗುವ, ಹಾಡಿದರೆ ಪದ್ಯವಾಗುವ ಸಾಹಿತ್ಯವಾಗಿದೆ ಎಂದರೆ ಅತೀಶಯೋಕ್ತಿಯಲ್ಲ. ಪ್ರಪಂಚಕ್ಕೆ **ಕಾಯಕದ ಮಹತ್ವವನ್ನು** ಸಾರಿ ಹೇಳಿದ್ದು ವಚನ ಸಾಹಿತ್ಯ.ಜಗತ್ತಿನ ಮೊದಲ ಸಂಸತ್ತು ಎಂಬ ಹೆಗ್ಗಳಿಕೆ **"ಅನುಭವ ಮಂಟಪಕ್ಕಿದೆ"**. ಇದು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾದರಿಯಾಗಿದೆ.ವಚನ ಸಾಹಿತ್ಯದಲ್ಲಿ ಸಮಕಾಲೀನಕ್ಕೆ ಸರಿಹೊಂದುವ ಮೌಲ್ಯಗಳು ಎದ್ದು ಕಾಣುತ್ತವೆ.

ಅನುಭವ ಮಂಟಪದ ಆವಶ್ಯಕತೆಯನ್ನು ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ –

**ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು**
**ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು**
**ಮನದ ಮೈಲಿಗೆಯ ತೊಳೆಯಬೇಕಾದರೆ**
**ಕೂಡಲ ಚೆನ್ನಸಂಗನ ಶರಣರ ಅನುಭಾವವ ಮಾಡುವುದು.**

ನಮ್ಮ ನಮ್ಮ ಮನವನ್ನು ಶುದ್ಧಗೊಳಿಸಲು ಅನುಭವ ಮಂಟಪ ಆವಶ್ಯಕವಾಗಿತ್ತು ಎಂದಿದ್ದಾರೆ. ಸರ್ವರಿಗೂ ಸಮಬಾಳು; ಸರ್ವರಿಗೂ ಸಮಪಾಲು ಎಂಬ ನಿಲವು ಇದರಲ್ಲಿ ಎದ್ದು ಕಾಣುತ್ತದೆ.ಅನುಭವ ಮಂಟಪದಲ್ಲಿ ಎಲ್ಲರಿಗೂ ತಮ್ಮ ಅಭಿವ್ಯಕ್ತಿಗೆ ಸ್ವಯಂ ಅವಕಾಶ ಕಲ್ಪಿಸಲಾಗಿತ್ತು.

## ಶರಣರು ಮತ್ತು ಮಹಿಳಾ ಸ್ವಾತಂತ್ರ್ಯ

ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುತ್ತಿರುವ ನಾವಿಂದು ಮಹಿಳಾ ಹಕ್ಕು, ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಘೋಷಣೆ ಕೂಗುತ್ತಲೇ ಇದ್ದೇವೆ. ಶತಮಾನಗಳ ಕಾಲದುದ್ದಕ್ಕೂ ಹೆಣ್ಣು ಶೋಷಣೆಗೆ ಒಳಗಾಗುತ್ತಲೇ ಬಂದಿದ್ದಾಳೆ.ಆದರೆ ಶರಣರು 12ನೇ ಶತಮಾನದಲ್ಲಿ ಮಹಿಳೆಗೆ ತನ್ನ ನೋವನ್ನೂ, ಸಂತೋಷವನ್ನೂ ಹಂಚಿಕೊಳ್ಳಲು ಮುಕ್ತ ಅವಕಾಶ ಕೊಟ್ಟಿದ್ದರು ಎಂಬುದು ಹೆಮ್ಮೆಯ ಸಂಗತಿಯಾಗಿದೆ.ಇದು ಇಂದಿಗೂ ಮಾದರಿಯಲ್ಲವೇ ?

ಪ್ರತಿ ಭಾಷಣದಲ್ಲಿ, ಲೇಖನದಲ್ಲಿ "Behind every great man there is anwomen" ಎನ್ನುವ ನಾವುಗಳೆಲ್ಲಾ; ಮೂಲಭೂತ ಹಕ್ಕು ಅವಕಾಶಗಳ ಕಡೆಗೆ ಗಮನ ಹರಿಸಿದಾಗ ಇದು ಬರೀ ವಾಕ್ಯ ಮಾತ್ರವೆಂದೆನಿಸುತ್ತದೆ. ಇದಕ್ಕೆ ಅಪವಾದವೆಂಬಂತೆ ಹನ್ನೆರಡನೆಯ ಶತಮಾನದ ಶರಣರು–ಶರಣೆಯರು ಬದುಕಿ ತೋರಿಸಿದರು.

**ಹೆಣ್ಣು ಹೆಣ್ಣಲ್ಲ; ಹೆಣ್ಣು ರಾಕ್ಷಸಿಯಲ್ಲ;**
**ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ !**

ಎನ್ನುವ ಶರಣ ಸಿದ್ಧರಾಮನ ವಚನದಲ್ಲಿ ಹೆಣ್ಣಲ್ಲಿ ಅಡಗಿರುವ ಸುಪ್ತ ಪ್ರತಿಭೆ; ಸಾಧನೆಗಳ ಅಂಶವನ್ನು ಕಂಡುಕೊಂಡು ಮಹಿಳೆಯನ್ನು ಭಗವಂತನ ಎತ್ತರಕ್ಕೆ ಒಯ್ದರು. ಶರಣರ ಚಳುವಳಿಯಲ್ಲಿ ಮೂಲಭೂತ ಅಂಶಗಳೆಂದರೆ, **ಮಹಿಳಾ ಸ್ವಾತಂತ್ರ್ಯ ಮತ್ತು ಅಸ್ಪೃಶ್ಯ ನಿರ್ಮೂಲನೆ ಹಾಗೂ ಉತ್ತಮ ಸಮಾಜ ನಿರ್ಮಾಣದ ಗುರಿ** ಎಂದೆನ್ನಬಹುದು.

ಶರಣರು ಮಹಿಳೆಗೆ ದುಡಿದು ತಿನ್ನುವ ಹಕ್ಕನ್ನು ಕಲ್ಪಿಸಿ ಸಮಾಜದಲ್ಲಿ ಸಮಾನತೆಯನ್ನು ನೀಡಿದರು. ಸಾವಿರಾರು ವರ್ಷಗಳಿಂದ ಹಾಕಲ್ಪಟ್ಟ ಬಂಧನಗಳ ಸಂಕೋಲೆಯನ್ನು ಶರಣರು ಕಿತ್ತೆಸೆದರು. ಇನ್ನು ಆಧ್ಯಾತ್ಮಿಕ ಜೀವನದಲ್ಲಿ ಹೆಣ್ಣು–ಪುರಷನಷ್ಟೇ ಸಮಾನಳು. ಇದರ ಪರಿಣಾಮವಾಗಿ ಹೆಣ್ಣು–ಗಂಡು ಎಂಬ ಭೇದದಿಂದ ಮುಕ್ತವಾದ ಸಮಾಜ ನಿರ್ಮಾಣವಾಯಿತು. ಇಂದು ಏನಾಗಿದೆ ? ಈ ಬಾಯಿಬಡುಕ ರಾಜಕಾರಣಕ್ಕೆ ? ಹೆಣ್ಣು ಸರ್ವಕಾಲಕ್ಕೂ ಶ್ರೇಷ್ಠಳು.

ಒಬ್ಬ ಹೆಣ್ಣು ಎಷ್ಟು ಶ್ರೇಷ್ಠಳು ಎಂಬುದನ್ನು ಚೆನ್ನಬಸವಣ್ಣನವರ ವಚನದಲ್ಲಿ ನೋಡಿದಾಗ –

**ಆದ್ಯರ ಅರವತ್ತು ವಚನಕ್ಕೆ**
**ದಣ್ಣಾಯಕನ ಹತ್ತು ವಚನ,**
**ದಣ್ಣಾಯಕನ ಹತ್ತು ವಚನಕ್ಕೆ,**
**ಅಜಗಣ್ಣನ ಐದು ವಚನ**
**ಅಜಗಣ್ಣನ ಐದು ವಚನಕ್ಕೆ**
**ಅಕ್ಕಮಹಾದೇವಿಯ ಒಂದೇ ವಚನ ಸಮ ಕಾಣಾ**
**ಕೂಡಲ ಚೆನ್ನಸಂಗಮ ದೇವಾ.**

ತನುವಿನೊಳಗಿದ್ದು ತನುವ ಗೆದ್ದಳು, ಮನದೊಳಗಿದ್ದು ಮನವ ಗೆದ್ದಳು, ಅಕ್ಕನ ಶ್ರೀ ಪಾದಕ್ಕೆ ನಮೋಃ ಎನ್ನುತ್ತಾನೆ ಚೆನ್ನಬಸವಣ್ಣ.

ಅಂದಿನ ವಚನ ಯುಗದ ಪ್ರಭಾವ ಎಷ್ಟಿತ್ತೆಂದರೆ – ಯಾವುದೇ ರೀತಿಯ ಸಂಪರ್ಕ ಮಾಧ್ಯಮಗಳು ಬೇಗ ತಲುಪದ ಕಾಲವದು.ಅಂತಹ ಸಂದರ್ಭದಲ್ಲಿಯೂ ದೇಶ ವಿದೇಶಗಳಿಂದ ಶರಣರು ಕಲ್ಯಾಣದ ಕಡೆ ಓಡೋಡಿ ಬಂದರು. ಕಾರಣವಿಷ್ಟೇ ಶರಣರು (ವಚನಕಾರರು) ತಮ್ಮ ನಡೆ–ನುಡಿಯಲ್ಲಿ, ಅಂತರಂಗ–ಬಹಿರಂಗವನ್ನು ಶುದ್ಧಿಮಾಡಿಕೊಂಡು ಕಾಯಕದಲ್ಲಿ ತೊಡಗಿದ್ದು. ಆದ್ದರಿಂದಲೇ ಅಫ್ಘಾನಿಸ್ತಾನದಿಂದ ಶಂಕರದೇವರು, ಕಾಶ್ಮೀರದಿಂದ ಮಹದೇಭೂಪಾಲರು. ಸೌರಾಷ್ಟ್ರದಿಂದ ಆದಯ್ಯ ಇಂತಹ ಎಲ್ಲ ಶರಣರನ್ನು, ಆಧ್ಯಾತ್ಮಿಕ ಸಾಧಕರನ್ನು ಒಂದೆಡೆ ಆಕರ್ಷಿಸಿದಂತಹ, ಆಯಸ್ಕಾಂತದಂತಹ ವ್ಯಕ್ತಿತ್ವ ಬಸವಣ್ಣನವರದ್ದು. ಆ ವ್ಯಕ್ತಿತ್ವನ್ನು ಅವರು **'ಸದುವಿನಯವೇ ಸದಾಶಿವನ ಒಲುಮೆಯಯ್ಯ'** ಎಂದು ತಮ್ಮ ವಚನದಲ್ಲಿಯೇ ಹೇಳಿದ್ದಾರೆ. ಈ ಗುಣ ಇಂದಿನ ಯುವ ಪೀಳಿಗೆಗೆ ಆವಶ್ಯವಾಗಿ ಬೇಕೇಬೇಕು. ಶರಣರ ನಡೆಯು ಹಿಂದೆ, ಇಂದು ಮತ್ತು ಮುಂದೆಯೂ ನಮ್ಮ ಸಮಾಜಕ್ಕೆ ಹೊಂದುವ ಮಾದರಿ.

## ಉತ್ತಮ ಜೀವನಕ್ಕಾಗಿ ಬಸವಣ್ಣನವರ ಸಪ್ತ ಸೂತ್ರಗಳು

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,**
**ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ,**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,**

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

**ಇದೇ ಅಂತರಂಗ ಶುದ್ಧಿ ! ಇದೆ ಬಹಿರಂಗ ಶುದ್ಧಿ !**
**ಇದೆ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.**

ಇದಕ್ಕಿಂತ ಉತ್ತಮ ಸೂತ್ರಗಳು ಬೇಕಿಲ್ಲ ಎಂಬುದು ನನ್ನ ಅಭಿಪ್ರಾಯ.ಇಂದಿನ ಸಮಾಜದಲ್ಲಿ ಎಷ್ಟೊಂದು ಕಾನೂನುಗಳು ಇದ್ದರೂ ತಪ್ಪಿ ನಡೆಯುವ ನಾವು, ಬಸವಣ್ಣನವರ ಈ ಒಂದು ವಚನವನ್ನು ಪಾಲಿಸಿದರೆ ಜೀವಿತಾವಧಿಯಲ್ಲಿ ಎಂದೂ ಕೋರ್ಟು-ಕಚೇರಿ ಎಂದು ಹೋಗುವ ಆವಶ್ಯಕತೆಯಿಲ್ಲ.

## ವಚನ ಸಾಹಿತ್ಯದಲ್ಲಿ ಸಾಮಾಜಿಕ ಸಮಾನತೆ ಮತ್ತು ಮಾನವ ಸಮಾನತೆ

"ಮಗು ಹುಟ್ಟುತ್ತಲೇ ವಿಶ್ವ ಮಾನವನಾಗಿ ಹುಟ್ಟುವುದು, ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಶಿಕ್ಷಣ ಮತ್ತೆ ಅವನನ್ನು ವಿಶ್ವಮಾನವನನ್ನಾಗಿ ಮಾಡುತ್ತದೆ"ಎಂದು ಕುವೆಂಪು ಹೇಳಿದ್ದಾರೆ. ಅದಕ್ಕೆ ಬಸವಣ್ಣನವರು ಮಾನವನನ್ನು ಮಹಾಮನೆಯ ಮಗ ಎಂದರೆ ಭೂಲೋಕದ ಕೂಸು ಎಂದು ಹೇಳಿದ್ದಾರೆ. ಅವರದೇ ವಚನ ನೋಡಿ...

**ಇವನಾರವ ಇವನಾರವ ಇವನಾರವ ನೆಂದಿನಸದಿರಯ್ಯಾ**
**ಇವನಮ್ಮವ ಇವನಮ್ಮವ ಇವನಮ್ಮವ ನೆಂದಿನಸಯ್ಯಾ**
**ಕೂಡಲಸಂಗಮದೇವಾ ನಿಮ್ಮ ಮಹಾಮನೆಯ ಮಗನೆಂದನಿಸಯ್ಯ.**

## ಸಾಮಾಜಿಕ ಸಮಾನತೆಯ ಕುರಿತು ಬಸವಣ್ಣನವರು.

**ಅಪ್ಪನು ನಮ್ಮ ಮಾದಾರ ಚೆನ್ನಯ್ಯ,**
**ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,**
**ಚಿಕ್ಕಯ್ಯನೆಮ್ಮಯ್ಯ ಕಾಣಯ್ಯ,**
**ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ,**
**ಎನ್ನನೇತಕ್ಕರಿಯಿರಿ ? ಕೂಡಲಸಂಗಯ್ಯ.**

ಯಾರೂ ಸಮಾಜದ ಸ್ತರದಲ್ಲಿ ಹಿಂದೆ ಇದ್ದರೋ ಅವರನ್ನು ತನ್ನ ಸಂಬಂಧಿಗಳು ಎಂದು ಬಸವಣ್ಣನವರು ಸಾರಿ ಹೇಳಿದ್ದಾರೆ. ಇದು ಇಂದಿಗೂ ಪ್ರಸ್ತುತವೇ....! ಪ್ರಜಾಪ್ರಭುತ್ವಕ್ಕೆ ಹಿಡಿದ ಕೈಗನ್ನಡಿ ಎನ್ನಬಹುದು.

ಜಾತಿಯಲ್ಲಿನ ಶ್ರೇಷ್ಠ-ಕನಿಷ್ಠವೆಂಬ ತಾರತಮ್ಯವಿಲ್ಲವೆಂದು ವಚನಕಾರರು ಇಂದಿಗೂ ಮಾದರಿಯಾಗಬಲ್ಲ ವಚನಗಳನ್ನು ಹೇಳಿದ್ದಾರೆ. ಇದನ್ನೇ ಸಿದ್ಧರಾಮೇಶ್ವರರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

**ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ**
**ಕುಲವೇ ಡೋಹರನ?ಕುಲವೇ ಮಾದಾರನ?**
**ಕುಲವೇ ದೂರ್ವಾಸನ?ಕುಲವೇ ವ್ಯಾಸನ?**
**ಕುಲವೇ ವಾಲ್ಮೀಕನ?ಕುಲವೇ ಕೌಂಡಿಲ್ಯನ?**
**ಕುಲವ ನೋಳ್ಪಡೆ ನಡೆಯುವರು ತ್ರಿಲೋಕದಲ್ಲಿಲ್ಲ ನೋಡಾ,**
**ಕಪಿಲಸಿದ್ಧಮಲ್ಲಿಕಾರ್ಜುನ**

ಮೇಲಿನ ವಚನದಲ್ಲಿ ಹೆಸರಿಸಿದ ಶರಣರು ಭಾವಶುದ್ಧ, ಕಾಯಶುದ್ಧ ಗುಣದವರು ಎಂಬುದನ್ನು ಮರೆಯುವಂತಿಲ್ಲ. ತನುಮನಗುಣ ಶುದ್ಧವಿರುವರಲ್ಲಿ ಕುಲ ಹುಡುಕುವ ಪರಿಬೇಡ ಎಂದಿದ್ದಾರೆ. **ಇದನ್ನೇ ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆ ಏನಾದರು ಬಲ್ಲಿರಾ ? ಎಂದು ಕನಕದಾಸರು ಹೇಳಿದ್ದಾರೆ.**

ಬಸವಣ್ಣನವರು ಕೂಡ ಪೂಜಿಸಿದ ಫಲ ನಿಮ್ಮದು ಎನ್ನುವಲ್ಲಿ ಆಧ್ಯಾತ್ಮದ ಮಹತ್ವವನ್ನು ಬಸವಣ್ಣ ಹೇಳಿದ್ದಾರೆ.ಉತ್ತಮ ಚಿಂತನೆ ಮತ್ತು ಉತ್ತಮ ಕಾಯಕ ಮಾಡಲು ಸಮಯವನ್ನೇಕೆ ನೋಡುವಿರಿ ? ಎಂದು ಪ್ರಶ್ನಿಸಿದ್ದಾರೆ.ಸದಾಕಾಲ ಉತ್ತಮವಾದದ್ದನ್ನೇ ಚಿಂತಿಸಿ, ಜೀವನದಲ್ಲಿ ಸದಾಕಾಲ ನೆಮ್ಮದಿ ಪಡೆಯಿರಿ ಎಂದು ಹೇಳಿದ್ದಾರೆ.

## ಕೋಪದ ಬಗ್ಗೆ, ಶರಣರ ಸಲಹೆ ಸೂಚನೆಗಳು

ತನುವಿನ ಕೋಪ ತನ್ನ ಹಿರಿಯತನದ ಕೇಡು, ಮನೆಯೊಳಗಿನ ಬೆಂಕಿಯು ತನ್ನ ಮನೆಯನ್ನು ಸುಡುವಂತೆ, ಕೋಪವು ಸ್ವತ: ತನ್ನನ್ನು ಆಶ್ರಯಿಸಿದ ದೇಹವನ್ನೆ ಸುಡುತ್ತದೆ, ಇದನ್ನೆ ಗುರು ಬಸವಣ್ಣನವರು ಇಲ್ಲಿ ತಿಳಿಯಪಡಿಸುತ್ತಾರೆ.

**ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ**
**ತನಗಾದ ಆಗೇನು ಅವರಿಗಾದ ಚೇಗೆಯೇನು**
**ತನುವಿನ ಕೋಪ ತನ್ನ ಹಿರಿಯತನದ ಕೇಡು.**
**ಮನದ ಕೋಪ ತನ್ನ ಅರಿವಿನ ಕೇಡು.**
**ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ**
**ನೆರೆಮನೆಯ ಸುಡದು ಕೂಡಲಸಂಗಮದೇವಾ.**

ತಾಳ್ಮೆ ಬಹಳ ಮುಖ್ಯ. ತಾಳಿದವನು ಬಾಳಿಯಾನು ಎಂಬ ಗಾದೆಮಾತು ಕೂಡ ಇದನ್ನು ಸಾದರಪಡಿಸುತ್ತದೆ. ತಾಳ್ಮೆ ಇದ್ದರೆ ಜಗವನ್ನೇ ಗೆಲ್ಲಬಹುದು. ಬುದ್ಧ ಇದಕ್ಕೆ ಸೂಕ್ತ ಉದಾಹರಣೆ. ಕೋಪದಲ್ಲಿ ಕೋಯ್ದ ಮೂಗು ಮತ್ತೇ ಬಂದಿತೇ ? ಎಂಬ ಗಾದೆಯನ್ನು ಮರೆಯಬಾರದು. ಕೋಪದಲ್ಲಿ ನಾನಾ ಜೀವಿಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿವೆ. ಇಂದಿನ ಸ್ಥಿತಿಗತಿಗೆ ತಾಳ್ಮೆ ಆವಶ್ಯಕವಾಗಿ ಬೇಕು. "ತಾಳಬೇಕು ಏನು ಬಂದರು ಬಾಳಬೇಕು" ಎಂದು ದಾಸರೂ ಕೂಡ ಇದನ್ನೇ ಹೇಳಿದ್ದಾರೆ.

## ಯೋಗಾಭ್ಯಾಸದ ಬಗ್ಗೆ

**ಯೋಗಾಭ್ಯಾಸ ಯೋಗಾಭ್ಯಾಸವೆಂದೆಂಬಿರಿ**
**ಯೋಗವು ಅಭ್ಯಾಸವೆ ? ಅಭ್ಯಾಸವು ಯೋಗವೆ ಅಯ್ಯಾ ?**
**ಯೋಗಾಭ್ಯಾಸವೆಂಬನ್ನಕ್ಕ ತಾನಾ ಯೋಗಿಯೆ ಅಯ್ಯಾ ?**
**ಯೋಗವ ನುಡಿವರೆ ಅಯ್ಯಾ ?**
**ಗುರುಮತದಿಂ ಭಾವಿಸಲು ಸರ್ವವೂ ಪರಬ್ರಹ್ಮ,**
**ಶ್ರೀಗುರುವಿನ ಶ್ರೀಪಾದಧ್ಯಾನವೇ ಯೋಗ**
**ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.**

ಯೋಗವೂ ಒಂದು ಅಭ್ಯಾಸವಾಗಬೇಕೆ ಹೊರತು, ಅದನ್ನು ಪರರ ಪ್ರೇರಣೆಯಿಂದ ಮಾಡುವುದಲ್ಲ. ಯಾರೋ ಮಾಡುತ್ತಾರೆ ಅಂತ ಮಾಡಲು ಹೋಗುವುದಲ್ಲ. ತಟ್ಟೆಯಲ್ಲಿ ಕೈಯಿಟ್ಟು ಅನ್ನ ಹಿಡದ ಕೈ ಹೇಗೆ ನೇರವಾಗಿ ಬಾಯಿಗೆ ತಪ್ಪದೇ ಬರುವುದೋ ಹಾಗೆಯೇ ಯೋಗ ಆಚರಣೆ ಅಭ್ಯಾಸವಾದಾಗ ಸಾರ್ಥಕವಾಗುವುದು.ಯೋಗದಿಂದ ಉತ್ತಮ ಚಿಂತನೆ ಜೊತೆಗೆ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಂಡು, ಸಾರ್ಥಕ ಬದುಕು ಸಾಗಿಸಬಹುದು.

## ದಯೆಯ ಕುರಿತು

ಎಲ್ಲರಲ್ಲಿಯೂ ದಯೆಯು ಮೂಲ ತಳಹದಿಯಾಗಬೇಕು ಎನ್ನುತ್ತಾರೆ ಶರಣರು. ಇಂದಿನ ಪ್ರಾಣಿ ಪಕ್ಷಿಗಳ ಸ್ಥಿತಿಗತಿಯನ್ನು ಗಮನಿಸಿದರೆ ನಾವು ದಯಾವಂತರಾಗಬೇಕು.ಪ್ರಾಣಿ ಪಕ್ಷಿಗಳ ಮೇಲೆ ದಯೆ ತೋರಬೇಕು.ಇಲ್ಲವಾದರೆ ಅವುಗಳ ಅಳಿವಿನಂಚಿನ ಸ್ಥಿತಿ ನಮಗೂ ಬಾರದೇ ಇರದು.

**ದಯವಿಲ್ಲದ ಧರ್ಮವದೇವುದಯ್ಯಾ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ**
**ದಯವೇ ಧರ್ಮದ ಮೂಲವಯ್ಯಾ**
**ಕೂಡಲಸಂಗಯ್ಯ ನಂತಲ್ಲದೊಲ್ಲನಯ್ಯಾ**

ದಯವಿಲ್ಲದುದು ಧರ್ಮವೇ ಅಲ್ಲ, ಧರ್ಮದ ಹೆಸರಿನಲ್ಲಿ ಪ್ರಾಣಿ ಬಲಿಕೊಡುವುದನ್ನು ಶರಣರು ಖಂಡಿಸುತ್ತಾರೆ. ಯಾವುದೇ ಜೀವಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಪ್ರಾಣ ತೆಗೆಯಬಾರದು ಎಂದು ಹೇಳಿದರೆ ಅನೇಕರು ಸಸ್ಯಗಳಿಗೂ ಜೀವವಿದೆ. ಸಸ್ಯಾಹಾರವನ್ನು ಮಾಡಬಾರದು ಎಂದು ವಾದ ಮಾಡುತ್ತಾರೆ. ಸಸ್ಯಗಳಲ್ಲಿ ಜೀವವಿದೆ ಆದರೆ ಆತ್ಮ ಇಲ್ಲ. ಸಸ್ಯಗಳಿಗೆ ಸುಖ–ದುಃಖ, ನೋವು–ನಲಿವುಗಳಿರುವುದಿಲ್ಲ ಅದಕ್ಕಾಗಿ ಸಸ್ಯಾಹಾರವು ಹಿಂಸೆಯಲ್ಲ. ಸಸ್ಯಗಳಲ್ಲಿ ಕ್ರಿಯೆಗೆ ಪ್ರತಿಕ್ರಿಯೆಯಿಲ್ಲ. ಆದರೆ ಪ್ರಾಣಿಗಳಲ್ಲಿ ಕ್ರಿಯೆಗೆ ಪ್ರತಿಕ್ರಿಯೆಯಿದೆ. ಅವು ತಮ್ಮ ಸುಖ–ದುಃಖವನ್ನು ಪ್ರಕಟಿಸಬಲ್ಲವುಗಳಾಗಿವೆ. ಎಲ್ಲಿ ಆತ್ಮ ಇರುತ್ತದೆಯೋ ಅಂಥವನ್ನು ಕೊಂದಾಗ ಮಾತ್ರ ಅದು ಹಿಂಸೆಯಾಗುತ್ತದೆ. ಕೆಲವರು 'ಮುಟ್ಟಿದರೆ ಮುನಿ' ಗಿಡವು ಕ್ರಿಯೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತದೆ ಎಂದು ವಾದ ಮಾಡುತ್ತಾರೆ. ಮುಟ್ಟಿದರೆ ಮುನಿ ಗಿಡವು ಮುಟ್ಟಿದಾಗ ತನ್ನ ಎಲೆಗಳನ್ನು ಮುಚ್ಚಿಕೊಂಡು ಕ್ರಿಯೆಗೆ ಪ್ರತಿಕ್ರಿಯೆ ವ್ಯಕ್ತ ಪಡಿಸಿದರೂ ಆ ಪ್ರತಿಕ್ರಿಯೆ ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿಲ್ಲ. ಕಸಕಡ್ಡಿ ಏನೇ ಅದರ ಮೇಲೆ ಬಿದ್ದರೂ ಅದು ಮುಚ್ಚಿಕೊಳ್ಳುತ್ತದೆ. ಹೀಗಾಗಿ ಆತ್ಮನ ವಿಕಾಸ, ಅರಿವು ಎನ್ನುವಂಥದ್ದು ಪ್ರಾಣಿಗಳಲ್ಲಿ ವಿಕಾಸಗೊಂಡಿದೆಯೇ ಹೊರತು ಸಸ್ಯಗಳಲ್ಲಿ ಇಲ್ಲ. ಒಂದು ಬೆಳೆಯುತ್ತಿರುವ ಸಸ್ಯವನ್ನು ಚಿವುಟಿ ಹಾಕಿದರೂ ಅದು ಮತ್ತೆ ಬೆಳೆಯುತ್ತದೆ. ಆದರೆ ಯಾವುದೇ ಪ್ರಾಣಿಯ ಒಂದು ಕಾಲನ್ನು ಕತ್ತರಿಸಿದರೂ ಅದು ಮತ್ತೆ ಬೆಳೆಯುವುದಿಲ್ಲ. ಆದ್ದರಿಂದ ದಯಾಗುಣ ಪ್ರತಿಯೊಬ್ಬ ಮಾನವರ ಆದ್ಯಗುಣವಾಗಬೇಕು.

## ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು

ಇಂದಿಗೆ ಬಹಳ ಸೂಕ್ತವಾದ ಮಾತಿದು.

**ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು.**
**ಮಾಡಿದ ಕಾರ್ಯದಿಂದ ಸತ್ಪುರುಷರ ಹರ್ಷ ನಿರ್ಭರವಾಗಬೇಕು.**
**ಮಾಡಿದ ಕಾರ್ಯದಿಂದ ಪ್ರಮಥರು ಅಹುದಹುದೆನಬೇಕು.**
**ಅದು ಕಾರಣ, ಮಾಡಿಸಿ ಜ್ಞಾನಪ್ರಾಪ್ತಿಯಾಗಲಿಲ್ಲ;**
**ಮಾಡಿಸಿ ಪ್ರಮಥರ ಮನೋಲ್ಹಾದವಾಗಲಿಲ್ಲ;**
**ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಾಕ್ಷಾತ್ಕಾರವಾಗಲಿಲ್ಲ;**
**ಕೇಳಾ ಕೇದಾರಯ್ಯಾ.**

ನಮ್ಮ ಶರಣರು ಅವರು ಯಾವುದೇ ಸತ್ಕಾರ್ಯವನ್ನು ಮಾಡಿದರೂ ಆ ಕಾರ್ಯಕ್ಕೆ ತಕ್ಕ ಫಲ ಸಿಗುತ್ತಿತ್ತು. ಇದಕ್ಕೆ ಕಾರಣ ಅವರಲ್ಲಿರುವ ಜ್ಞಾನಶಕ್ತಿ, ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಶರಣರಲ್ಲಿ ಸಾಮಾಜಿಕ ಕಳಕಳಿಯು ಕೂಡ ಅವರ ಮನದಲ್ಲಿ ಮನೆ ಮಾಡಿತ್ತು. ಈ ರೀತಿ ನಮ್ಮ ಸಂಕಲ್ಪ ಶಕ್ತಿಯು ಸಹ ನಮಗೆ ಗಟ್ಟಿಯಾಗಿದ್ದಲ್ಲಿ ನಾವು ಮಾಡುವ ಕಾರ್ಯಗಳು ಯಶಸ್ವಿಯಾಗುತ್ತವೆ ಎಂಬುದಕ್ಕೆ ಅಂದಿನ ಹನ್ನೆರಡನೆ ಶತಮಾನದ ನಮ್ಮ ಶರಣರು ಸಾಕ್ಷಿಪ್ರಜ್ಞೆಂiರಾಗಿ ನಮ್ಮ ಕಣ್ಣೆದುರುಗೆಯೇ ನಿಲ್ಲುತ್ತಾರೆ. ಅಂತಹ ಕಾರ್ಯವನ್ನು ನಮ್ಮ ನಿಜಶರಣರು ಹೇಗೆ ಮಾಡಿದರು ? ನಮ್ಮಂಥವರು ಹೇಗೆ ಮಾಡಿದರು ? ಮತ್ತು ಹೇಗೆ ಮಾಡುತ್ತಿದ್ದೇವೆ ? ಎಂಬ ವ್ಯತ್ಯಾಸವನ್ನ ಶರಣರಾದ ಸಿದ್ಧರಾಮೇಶ್ವರರು ಚೆನ್ನಾಗಿ ಮನದಟ್ಟು ಮಾಡಿಕೊಟ್ಟಿದ್ದಾರೆ ಈವೊಂದು ವಚನದಲ್ಲಿನ ಮೌಲ್ಯ ಇಂದಿಗೂ ಇದು ಪ್ರಸ್ತುತವಲ್ಲವೇ?

## ನಿಮ್ಮನ್ನು ನೀವು ತಿದ್ದಿಕೊಳ್ಳಿ

ಕೆಲವರು, ತಮ್ಮ ತಟ್ಟೆಯಲ್ಲಿ ಕಪ್ಪೆಗಳು ಇದ್ದಾಗ, ಬೇರೆಯವರ ತಟ್ಟೆಯಲ್ಲಿರುವ ನೋಣವನ್ನು ಕುರಿತು ಮಾತನಾಡುತ್ತಾರೆ ಅಂತಹವರಿಗೆ ಗುರು ಬಸವಣ್ಣನವರು ಮೊದಲು ನಿಮ್ಮ ನಿಮ್ಮ ಮನವನ್ನು ಸರಿಪಡಿಸಿಕೊಳ್ಳಿ ಎಂದು ಈ ಸುಂದರವಾದ ವಚನದ ಮೂಲಕ ತಿಳಿಸಿಕೊಡುತ್ತಾರೆ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.**
**ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ**
**ಕೂಡಲಸಂಗಮದೇವ.**

## ಮದುವೆ, ಕುಟುಂಬ ಸಂಘಟನೆಯ ಶಕ್ತಿಯನ್ನು ಕುರಿತು ಶರಣರು ಹೇಳಿದ್ದಾರೆ.

**ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ.**
**ಸತಿಪತಿಗಳೊಂದಾಗದವರ ಭಕ್ತಿ**
**ಅಮೃತದೊಳು ವಿಷ ಬೆರೆದಂತೆ ಕಾಣಾ ! ರಾಮನಾಥ.**

ಇಲ್ಲಿ ಶರಣರು ಕುಟುಂಬದ ಕಲ್ಪನೆ ಕಟ್ಟಿಕೊಟ್ಟಿದ್ದಾರೆ. ಇಂದು ಅವಿಭಕ್ತ ಕುಟುಂಬ ನಾಶವಾಗಿ, ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಇಂದು ಸಕಾರಣವಿಲ್ಲದೆ ನಮ್ಮ ಹೆಣ್ಣುಮಕ್ಕಳು ಮದುವೆಯಾದ ಕೆಲವೇ ದಿನಗಳಲ್ಲಿ, ತಿಂಗಳುಗಳಲ್ಲಿ ವಿಚ್ಛೇಧನಕ್ಕೆ ಹೋಗುತ್ತಿರುವುದು ವಿಷಾಧಕರ ಸಂಗತಿಯಾಗಿದೆ. ಆದರೆ ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ಮರೆಯಬಾರದು. ಕೂಡಿಬಾಳಿದರೆ ಸ್ವರ್ಗ ಸುಖ ಎಂಬುದನ್ನು ಅರಿತು ನಡೆಯಬೇಕು.

## ಶರಣರ ಸಂಗ ಮತ್ತು ಅನುಭಾವ

ಉತ್ತಮರ ಸಂಗವನ್ನು ಮಾಡಬೇಕು. ಇಂದು ಸಂಗದಿಂದಲೇ ಭಂಗಗಳು ಉಂಟಾಗಿ ವಿರಸಗಳಿಂದ ಸಂಘರ್ಷಗಳು ಹೆಚ್ಚಾಗಿವೆ. ಉತ್ತಮ ಸಂಗ ಲೇಸು ಎಂಬುದನ್ನು ಶರಣರು ಪ್ರಾಣಿಪಕ್ಷಿಗಳ ಉಲ್ಲೇಖ ಮಾಡಿ ವಚನ ರಚಿಸಿದ್ದಾರೆ ನೋಡಿ.

**ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು?**
**ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ?**
**ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಗಿಂತ ಕರಕಷ್ಟ**
**ಕೂಡಲಸಂಗಮದೇವಾ.**

ನಾವು ಹಂಚಿಕೊಂಡು ತಿನ್ನುವ ಗುಣವನ್ನು ಹೊಂದಬೇಕು ಎನ್ನು ಪರಿಯನ್ನು ಇದು ತಿಳಿಸುತ್ತದೆ. ಪ್ರಪಂಚದಲ್ಲಿ ಪ್ರತಿಯೊಂದು ಜೀವಿಯೂ ಬದುಕಲು ಹಕ್ಕು ಹೊಂದಿದೆ. ಅಂತೆಯೇ ಮಾನವ ಸಂಘಜೀವಿಯಾಗಿ ಹಂಚಿಕೊಂಡು ತಿನ್ನುವ ಗುಣವನ್ನು ರೂಢಿಸಿಕೊಳ್ಳಬೇಕು. ಪ್ರಕೃತಿಯಲ್ಲಿನ ಪ್ರತಿಯೊಂದು ಹಣ್ಣುಹಂಪಲು ದವಸಧಾನ್ಯ ಕೇವಲ ನರನಿಗಷ್ಟೇಯಲ್ಲ; ಸಕಲ ಚರಾಚರ ಜೀವಿಗಳಿಗೂ ಸೇರಿದ್ದು.ಆದ್ದರಿಂದ ಹಂಚಿಕೊಂಡು ತಿನ್ನಬೇಕು.

**ಅರಿಯದವರೊಡನೆ ಸಂಗವ ಮಾಡಿದಡೆ**
**ಕಲ್ಲ ಹೋಯ್ದು ಕಿಡಿಯ ತೆಗೆದುಕೊಂಬಂತೆ.**
**ಬಲ್ಲವರೊಡನೆ ಸಂಗವ ಮಾಡಿದಡೆ**
**ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ.**
**ಚೆನ್ನಮಲ್ಲಿಕಾರ್ಜುನಯ್ಯಾ.**

ಉತ್ತಮರ ಸಂಗವದು ಹೆಜ್ಜೇನು ಸವಿದಂತೆ ಎಂದು ದಾಸರೂ ಇದನ್ನೇ ಹೇಳಿದ್ದಾರೆ.

## ಅತಿಥಿ ಸತ್ಕಾರ

**ಏನಿ ಬಂದಿರಿ, ಹದುಳಿದ್ದಿರೆ ಎಂದಡೆ**
**ನಿಮ್ಮೈಸಿರಿ ಹಾರಿ ಹೋಹುದೆ ?**
**ಕುಳ್ಳಿರೆಂದಡೆ ನೆಲ ಕುಳಿಹೋಹುದೆ ?**
**ಒಡನೆ ನುಡಿದಡೆ ಸಿರ, ಹೊಟ್ಟೆಯೊಡೆವುದೆ ?**
**ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ**
**ಮೂಗ ಕೊಯ್ವುದೆ ಮಾಬನೆ ಕೂಡಲಸಂಗಮದೇವಯ್ಯ?**

APPROVED UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಬೆಲ್ಲವನು ಕೊಡದಿದ್ದರೂ ಬೆಲ್ಲದಂತ ಎರಡು ಮಾತನ್ನಾಡು ಎನ್ನುವ ಸೂಕ್ತಿ ಕನ್ನಡದಲ್ಲಿದೆ.ಮನೆಗೆ ಬಂದ ಅತಿಥಿಗಳಿಗೆ ಏನು ಕೊಡದಿದ್ದರೂ ಪರವಾಗಿಲ್ಲ ಕರೆದು ಸವಿಮಾತುಗಳನ್ನಾಡಿದರೂ ಅದು ಸಾರ್ಥಕ ಬದುಕು ಎಂದು ಬಸವಣ್ಣನವರು ಮಾರ್ಮಿಕವಾಗಿ ಹೇಳಿದ್ದಾರೆ.

## ಮಾತಿನ ಮಹಿಮೆ ಕುರಿತು (ಮಾತು ಹೇಗಿರಬೇಕು?)

**ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ;**
**ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ.**
**ಗುಹೇಶ್ವರನ ಶರಣರುನುಡಿದು ಸೂತಕಿಗಳಲ್ಲ ಕೇಳಾ ಮರುಳೆ.**

ಮಾತು ಮಾನವನಿಗೆ ದೇವರು ಕೊಟ್ಟ ವರ.ಅದನ್ನು ಸರಿಯಾಗಿ ಬಳಸಿಕೊಳ್ಳಬೇಕು ಎಂಬುದು ವಚನಕಾರರ ನಿಲುವು.ಮಾತು ಜ್ಯೋತಿರ್ಲಿಂಗಕ್ಕೆ ಸಮಾನ. ಮಾತಿಗೆ ಜಗತ್ತನ್ನು ಬೆಳಗುವ ಶಕ್ತಿಯಿದೆ.ಹದವರಿತು, ಹಿತಮಿತವಾಗಿ ಮಾತನಾಡಬೇಕು.

ಮಾತು ಹೇಗಿರಬೇಕೆಂದರೆ –

**ನುಡಿದಡೆ ಮುತ್ತಿನ ಹಾರದಂತಿರಬೇಕು.**
**ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.**
**ನುಡಿದಡೆ ಸ್ಫಟಿಕದ ಸಲಾಕೆಯಂತಿರಬೇಕು.**
**ನುಡಿದಡೆ ಲಿಂಗ ಮೆಚ್ಚಿ ಅಹುದಹುದೆನಬೇಕು.**
**ನುಡಿಯೊಳಗಾಗಿ ನಡೆಯದಿದ್ದಡೆ,**
**ಕೂಡಲಸಂಗಮದೇವನೆಂತೊಲಿವನಯ್ಯಾ**

ಹೀಗೆ ಬಸವಣ್ಣನವರು ನಮ್ಮ ನಡೆಯ ಬಗ್ಗೆ ಮಾರ್ಮಿಕವಾಗಿ ಹೇಳಿದ್ದಾರೆ.. ಇಂತಹ ಮಾತನ್ನಾಡುವ ಇಂದಿನ ಜನರನ್ನು ಅದು ಯಾರು ತಾನೆ ಬಿಟ್ಟು ಹೋಗುವರು.? **ಮಾತೆ ಮಾಣಿಕ್ಯ – ಎಂದು ಸರ್ವಜ್ಞನು ಕೂಡ ಮಾತಿನ ಮಹತ್ವ ಸಾರಿ ಹೇಳಿದ್ದಾರೆ.**

## ಕಾಯಕ ಮತ್ತು ದಾಸೋಹ

**“ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ**
**ಸತ್ಯಶುದ್ಧವಿಲ್ಲದುದು ಕಾಯಕವಲ್ಲ**
**ಆಸೆಯೆಂಬುದು ಭವದ ಬೀಜ**
**ನಿರಾಸೆಯೆಂಬುದು ನಿತ್ಯಮುಕ್ತಿ**
**ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ.”**

ಕಾಯಕದಲ್ಲಿ ಮುಕ್ತಿ ಕಾಣುವ ಪರಿ ಇದು.ಒಬ್ಬ ದಲಿತ ಮಹಿಳೆ ಶರಣಸಂಕುಲದೊಳಗೆ ಬಂದು ಇಷ್ಟೊಂದು ಮಹತ್ತರವಾದ ವಿಚಾರವನ್ನೊಳಗೊಂಡ ವಚನ ರಚನೆ ಮಾಡಿದ್ದಾಳೆಂದರೆ ಬಸವಣ್ಣನವರು ಜಗತ್ತಿನಲ್ಲಿ ಮೊದಲ ಬಾರಿಗೆ ಯಾವರೀತಿ ವಯಸ್ಕರ ಶಿಕ್ಷಣದ ವ್ಯವಸ್ಥೆ ಮಾಡಿರಬಹುದು ಎಂಬುದರ ಕುರಿತು ಸಂಶೋಧನೆಯಾಗಬೇಕಿದೆ. ಶರಣರ ವಚನಗಳು ಮತ್ತು ತತ್ವ ಕೂಡ ಕಾಯಕದ ಉತ್ಪತ್ತಿಯಾಗಿವೆ ಎಂಬುದನ್ನು ಮರೆಯಬಾರದು. ವಚನಗಳು ಅನನ್ಯವಾಗಿರುವುದು ಇದೇ ಕಾರಣದಿಂದ. ಅನೇಕ ವಚನಕಾರರು ತಮ್ಮ ಕಾಯಕಗಳ ಅನುಭದ ಮೂಲಕವೇ ಅನುಭಾವಿಯಾಗಿದ್ದಾರೆ. ಅವರ ವಚನಗಳಲ್ಲಿನ ಪ್ರತಿಮೆ, ಪ್ರತೀಕ ಮತ್ತು ಸಂಕೇತಗಳು ಅವರವರ ಕಾಯಕಗಳ ಅನುಭವದ ಮೂಲಕವೇ ಸೃಷ್ಟಿಯಾಗಿವೆ. ಕಾಯಕದ ವಸ್ತುಗಳು ಹೀಗೆ ಕಾವ್ಯ ಪ್ರತಿಮೆಗಳಾಗುತ್ತಲೇ ತತ್ವವನ್ನು ಸ್ಪುರಿಸತೊಡಗುತ್ತವೆ.

**ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು**
**ದಾಸೋಹವ ಮಾಡಬಹುದೇ ?**
**ಒಮ್ಮನವ ತಂದು ಒಮ್ಮನದಲ್ಲಿಯೇ ಮಾಡಿ**
**ಇಮ್ಮನವಾಗದ ಮುನ್ನವೇ ಮಾರಯ್ಯ**
**ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲಬೇಕು.**

ಭಕ್ತರು ಕಾಯಕದಿಂದ ಬಂದುದು ತಾನೇ ಎಂದು ಮನಸ್ಸಿಗೆ ಬಂದಂತೆ ಗಳಸಿ, ಮನಸ್ವೇಚ್ಚೆ ದಾಸೋಹಕ್ಕೆ ಕುಚೇಷ್ಟೆ undefined ಮಾಡಬಾರದು. ಒಂದೇ ಮನಸ್ಸಿನಿಂದ ಕಾಯಕ ಮಾಡಿ ತರಬೇಕು. ಒಂದೇ ಮನದಿಂದ ದಾಸೋಹ ಮಾಡಬೇಕು.ತತ್ವಭ್ರಷ್ಟತೆಗೆ ಅವಕಾಶ ನೀಡಬಾರದು.

**ಕಾಯಕದಲ್ಲಿ ನಿರತನಾದರೆ,**
**ಗುರುಗರ್ಶನವಾದಡೂ ಮರೆಯಬೇಕು**
**ಲಿಂಗಪೂಜೆಯಾದಡೂ ಮರೆಯಬೇಕು**
**ಜಂಗಮ ಮುಂದೆ ನಿಂದಿದ್ದರೂ ಹಂಗು ಹರಿಯಬೇಕು**
**ಕಾಯಕವೆ ಕೈಲಾಸವಾದ ಕಾರಣ,**
**ಅಮರೇಶ್ವರಲಿಂಗವಾಯಿತ್ತಾದರೂ ಕಾಯಕದೊಳಗು.**

ಕಾಯಕದಲ್ಲಿ ತೊಡಗಿದಾಗ ಗುರುದರ್ಶನ, ಲಿಂಗ ಪೂಜೆಗಳನ್ನಾದರೂ ಮರೆಯಬೇಕು. ಜಂಗಮ ಮುಂದಿದ್ದರೂ ಹಂಗಿಲ್ಲದೆ ಇರಬೇಕು. ಪರಮಾತ್ಮನಾದರೂ ಕಾಯಕ ಮಾಡಲೇಬೇಕು. ಏಕೆಂದರೆ ಕಾಯಕವೇ ಕೈಲಾಸ.

## ಸಾಕ್ಷಾತ್ಕಾರ

ಅನುಭವದ ಕುರಿತು ಹೇಳಲೇ ಬೇಕು. ಅದುವೇ ಸಾಕ್ಷಾತ್ಕಾರ, ಶಿವಯೋಗ ಸಾಧಕನ ಬಾಳ ಬಟ್ಟೆಯಲ್ಲಿ ಎರಡು ಬಗೆಯ ಸಾಕ್ಷಾತ್ಕಾರಗಳನ್ನು ಗುರುತಿಸಬಹುದು. (1) ಸಗುಣ ಅಥವಾ ಖಂಡ ಸಾಕ್ಷಾತ್ಕಾರ (2) ಇನ್ನೊಂದು ನಿರ್ಗುಣ ಅಥವಾ ಅಖಂಡ ಸಾಕ್ಷಾತ್ಕಾರ.ಸಗುಣವೆಂದರೆ ಯಾವುದಾದರೊಂದು ಆಕಾರದಲ್ಲಿ ಶ್ರವಣದೃಶ್ಯ ಮಾಧ್ಯಮದಲ್ಲಿ ನೋಡುವುದು.ಅಂದರೆ ಆ ವಸ್ತುವು ಕಣ್ಣಿಗೆ ಕಾಣುವುದು, ಅದರ ಮಾತುಗಳು ಕಿವಿಗೆ ಕೇಳುವುವು. ಅದು ಪ್ರವಹಿಸಿದಾಗ, ಬಳಸಿದಾಗ ಸಾಧಕನಿಗೆ ಅದ್ಭುತ ಪರಿಣಾಮವಾಗುವುದು; ರೋಮಾಂಚನವಾಗುವುದು. ಆದರೆ ಅದನ್ನು ಇವನು ಮುಟ್ಟಲು, ಹಿಡಿದುಕೊಳ್ಳಲು ಸಾಧ್ಯವಾಗದು.ಅದನ್ನು ಈ ಮುಂದಿನ ಅಕ್ಕಮಹಾದೇವಿಯ ವಚನದಲ್ಲಿ ನೋಡಬಹುದು.

**ಹೊಳೆವ ಕೆಂಜೆಡೆಗಳ ಮಣಿ ಮುಕುಟದ ಒಪ್ಪುವ ಸುಲಿಪಲ್ಗಳ**
**ನಗೆ ಮೊಗದ ಕಂಗಳ ಕಾಂತಿಯ**
**ಈರೇಳು ಭುವನವ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು.**
**ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ.**
**ಗಂಡ ಗಂಡರೆಲ್ಲರ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು,**
**ಜಗದಾದಿ ಶಕ್ತಿಯೊಳು ಬೆರಸಿ ಮಾತನಾಡುವ**
**ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.**

**ಎರಡನೆಯದೇ ಅಖಂಡ ಅಥವಾ ನಿರ್ಗುಣ ಸಾಕ್ಷಾತ್ಕಾರ.** ಇದರಲ್ಲಿ ಪುನಃ ಎರಡು ಬಗೆ; ಆತ್ಮ ಸಾಕ್ಷಾತ್ಕಾರ, ಪರಮಾತ್ಮ ಸಾಕ್ಷಾತ್ಕಾರ ಎಂಬುದಾಗಿ ಅಥವಾ ಪ್ರಾಣಲಿಂಗ–ಭಾವಲಿಂಗ ಸಾಕ್ಷಾತ್ಕಾರ ಎಂಬುದಾಗಿ. ಶಿವಯೋಗಿಯು ತನ್ನ ಘಟದೊಳಗೆ ಇರುವ ಆತ್ಮಲಿಂಗ ಪ್ರಕಾಶವನ್ನು ಮೊದಲು ಕಾಣುವನು. ನಂತರ ಬ್ರಹ್ಮಾಂಡಗತವಾದ ಪರಮಾತ್ಮ ಪ್ರಕಾಶವನ್ನು ಕಾಣುವನು.

ಹೀಗೆಯೇ ವಚನ ಸಾಹಿತ್ಯ ಹಿಂದಿನ ಸ್ಥಿತಿಗೂ, ಇಂದಿನ ಸ್ಥಿತಿಗೂ ಹಾಗೂ ಮುಂದಿನ ಸ್ಥಿತಿಗೂ ಬೇಕೇ ಬೇಕು. ವಚನ ಸಾಹಿತ್ಯದಲ್ಲಿನ ಮೌಲ್ಯಗಳು ಎಂದೆಂದಿಗೂ ಸತ್ಯ. ಅಂದರೆ ಶರಣರ ನಡೆ ತ್ರಿಕಾಲ ಸತ್ಯ.ಅದನ್ನು ನಾವು ಪಾಲಿಸುತ್ತಾ ನಡೆದರೆ. ಜೀವನ್ಮುಕ್ತಿ ಎಂಬುದು ಕಟುಸತ್ಯವಾದ ಮಾತು.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಪರಾಮರ್ಶನ ಗ್ರಂಥಗಳು


- **ಶ್ರೀ ಸಿದ್ಧರಾಮ ಶರಣರು ಬೆಲ್ದಾಳ (2021) :** ಸಂಪಾದಕರು, ಸಮಗ್ರ ವಚನ ಸಂಪುಟ–3, ಚನ್ನಬಸವಣ್ಣನವರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಪ್ರೊ. ಮಲೆಯೂರು ಗುರುಸ್ವಾಮಿ (2021) :** ಸಂಪಾದಕರು, ಸಮಗ್ರ ವಚನ ಸಂಪುಟ–4, ಸಿದ್ಧರಾಮೇಶ್ವರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಡಾ. ವೀರಣ್ಣ ರಾಜೂರು (2021) :** ಸಂಪಾದಕರು, ಸಮಗ್ರ ವಚನ ಸಂಪುಟ–1, ಬಸವಣ್ಣನವರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಡಾ. ವೀರಣ್ಣ ರಾಜೂರು (2021) :** ಸಂಪಾದಕರು, ಸಮಗ್ರ ವಚನ ಸಂಪುಟ–5, ಶಿವಶರಣೆಯರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಶ್ರೀ ಸಿದ್ಧರಾಮ ಶರಣರು ಬೆಲ್ದಾಳ (2021) :** ಸಂಪಾದಕರು, ಸಮಗ್ರ ವಚನ ಸಂಪುಟ–2, ಅಲ್ಲಮಪ್ರಭುದೇವರ ವಚನ ಸಂಪುಟ, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.
- **ಡಾ. ಕೆ. ರವೀಂದ್ರನಾಥ (2021) :** ಸಂಪಾದಕರು, ಸಮಗ್ರ ವಚನ ಸಂಪುಟ–6, ಸಂಕೀರ್ಣ ವಚನ ಸಂಪುಟ–1, ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರ.


■■

*– 28ನೇ ಪುಟದಿಂದ ಮುಂದುವರೆದುದು*

ಜೀವನವನ್ನು ಸಮಗ್ರವಾಗಿ ಪ್ರೀತಿಸಿಬಲ್ಲ ಈ ಸಂಕಲನದ ಮತ್ತೊಂದು ಕಥೆ 'ಲಕ್ಕವ್ವನ ಮಂದಿ' ಗುಳೇಕಾರ ಮಂದಿಯ ನೋವು ನಲಿವುಗಳಿಗೆ ಸಾಕ್ಷಿಯಾಗುವ ದೇವಿ ಲಕ್ಕವ್ವ ಇಲ್ಲಿ ಯಾವುದಕ್ಕಾಗಿ ಸ್ಪಂದಿಸದ ಪ್ರತಿಮೆ ಮಾತ್ರ ಇವಳನ್ನು ಆರಾಧಿಸುವ ದಾಸರು, ಡೊಂಬರು, ಕುಂಚಿಕೊರವರು, ಅವಳ ಬಂಧುಗಳು, ದಿಕ್ಕೆಟ್ಟ ಹನಮವ್ವ ಹಾಗೂ ಅವಳ ಮಕ್ಕಳಿಗೆ ಆಸರೆಯಾಗಿ ನಿಲ್ಲುವ ಒಡ್ಡರ ನಾಗವ್ವಳು ಲಕ್ಕವ್ವನ ಸನ್ನಿಧಿಯಲ್ಲಿ ತೋರುವ ಜೀವನದ ಪ್ರೀತಿ ಅನನ್ಯವಾದದ್ದು.

ಮುನ್ಸೂಚನೆಯಿಲ್ಲದೇ ಒದಗಿದ ಕಷ್ಟಗಳ ಸಂದರ್ಭದಲ್ಲಿ ನೆರವಾಗುವ ಕೊರ ಮುದುಕನಂತವರು ಮನುಷ್ಯತ್ವದ ಸಾದೃಶ್ಯಗಳಾಗಿ ನಿಲ್ಲುತ್ತಾರೆ. ಸಮಾಜದಲ್ಲಿ ನಿಕೃಷ್ಟವಾಗಿ ಕಡಗಣನೆಗೆ ಒಳಗಾಗಿದ್ದರೂ ಇರುವುದರಲ್ಲಿಯೇ ಸಂತೃಪ್ತಿಯ ಜೀವನ ನಡೆಸುವ ಅಲೆಮಾರಿ ಜನಾಂಗದ ದೈನಂದಿನ ಪರಿಚಲನೆಯನ್ನು ಕಥೆ ಯಥಾವತ್ತಾಗಿ ವಿವರಿಸುತ್ತದೆ. ಪರಮಾತ್ಮನ ಕರೆಯಂತೆ ಪ್ರಾಣಬಿಟ್ಟ ಹನಮವ್ವಳ ಮಗಳದು ಅನ್ಯಾಯದ ಸಾವು.

ಬದುಕಿನ ಪ್ರತಿ ನೋವು ನಲಿವುಗಳನ್ನು ಸಮಾನರೇಖೆಯಲ್ಲಿ ಸ್ವೀಕರಿಸಿ ಖುಷಿಯಿಂದಿರುವ 'ಮಾವ' ನ ಕುರಿತು ಹೇಳುವುದು ನಂತರದ ಕಥೆ, ಮಾವನ ಸರಸ, ವಿನೋದ, ಹಳ್ಳಿಯ ಮುಗ್ಧನಗು, ಕೀಟಲೆಗಳು ಎಲ್ಲವು ಚಂದವೆನಿಸುತ್ತವೆ. ಹುಡುಗರ ಚೇಷ್ಟೆಗಳಿಗೆ ಬಲಿಯಾಗಿ ಕೊನೆಗೆ ತಿಳಿದು ನಕ್ಕುಬಿಡುವ ಹೃದಯ ವೈಶಾಲತೆ ಆತನಲ್ಲಿತ್ತು. ತಾನು ಸಂತೋಷವಾಗಿರುವುದು ಮಾತ್ರವಲ್ಲದೆ ತನ್ನ ಸುತ್ತಲಿನವರೂ ಹಾಗೆಯೇ ಇರಬೇಕೆಂದು ಬಯಸುವ ಇಲ್ಲಿಯ ಮಾವ ನಮ್ಮ ಸ್ವಂತ ಮಾವನ ಕುರಿತಾದ ಕಥೆಯೇ ಎಂದು ಅನುಮಾನ ಹುಟ್ಟಿಸುತ್ತದೆ.

ಜನನಿ ವಾತ್ಸಲ್ಯವನ್ನು ಹೇಳಹೊರಟಿರುವ ಮತ್ತೊಂದು ಕಥೆ 'ಮಾತೃದೇವೋಭವ', ಹೆಂಡತಿಯ ವಿಲಾಸ ಜೀವನ ಪೂರೈಸ ಹೊರಟಿರುವ ಪತಿರಾಯನೊಬ್ಬ ಹೇಳುವ ಸುಳ್ಳುಗಳು ತನ್ನ ಆತ್ಮಕ್ಕೆ ಮಾಡಿಕೊಂಡ ವಂಚನೆಯೆಂಬುದು ಆತ ಅರಿಯದ ಸಂಗತಿಗಳೇನಲ್ಲ. ಕಥೆಯ ಕೊನೆಯಲ್ಲಿ ಬರುವ 'ಸೋ' ಒಳಗಿನ 'ಭಸ್' ಶಬ್ದದ ರೂಪಕ ಇದನ್ನು ಸಾಬೀತು ಪಡಿಸುತ್ತದೆ.

ಇಲ್ಲಿಯ ಮತ್ತೊಂದು ಮಹತ್ವದ ಕಥೆ 'ಬಸ್ಸು ಹೊರಟು ಹೋಯಿತು' ದಾಂಪತ್ಯ ಬಂಧಿಯಾಗಿರುವ ಬಸವರಾಜನ ಬರಡು ಬದುಕಿನ ಯಂತ್ರದಲ್ಲಿ ಪ್ರೀತಿಯ ಎರಕ ಹೊಯ್ದ ಮತ್ತೋರ್ವ ಯುವತಿ ಐಜಾಕ್ ಕೊನೆಗೆ ಕೈ ಚೆಲ್ಲಿ 'ನಮಗೆ ಬೇಕಾದ ಬಸ್ಸು ಹೋದಾಗ ಬೇಡವಾದ ಸಿಟಿ ಬಸ್ ಹಿಡಿದು ಬಂದಿರಲ್ವೇ?" ಎನ್ನುವ ಅವಳ ಮಾತುಗಳು ಆತನಿಂದ ಬಿಡುಗಡೆಯನ್ನು ಬಯಸುತ್ತವೆ. ನಾವು ಹತ್ತುವ ಬಸ್ಸು ಸರಿಯಾದದ್ದಲ್ಲ ಎಂದು ತಿಳಿಯುವುದು ಹಾದಿ ಮಧ್ಯೆ ಸಿಗುವ ಮತ್ತೊಂದು ಬಸ್ಸಿನಿಂದಲೆ ಎನ್ನುವುದನ್ನು ಕಥೆ ಜೀವನಕ್ಕೆ ಅನ್ವಯಿಸಿ ಹೇಳಹೊರಟಿದೆ.

ಬದುಕಿನಲ್ಲಿ ಎಲ್ಲವನ್ನು ಸಾಧಿಸಬೇಕೆಂದು ಹೊರಟವಳಿಗೆ ವಿಧಿಯಾಟದಿಂದ ಒದಗುವ ಸಾವಿನ ಹಿಂದಿನ ಮನೋಸ್ಥಿತಿಯನ್ನು 'ಸ್ನೇಹಾ' ಹೇಳುವ ರೀತಿ ಅನನ್ಯ. ತನ್ನ ಸಾವು ನಿಶ್ಚಿತವೆಂದು ತಿಳಿದ ಬಾಲಕಿಯೊಬ್ಬಳು ಆ ಸಾವಿಗೆ ತನ್ನನ್ನು ಒಗ್ಗಿಸಿಕೊಳ್ಳುವ ಕ್ರಿಯೆಗೆ ಆಕೆಯ ದಿನಚರಿಯ ಪುಟಗಳು ಸಾಕ್ಷಿಯಾಗುತ್ತವೆ. ವ್ಯಸನವೇ ಜೀವನವೆಂದು ತಿಳಿದ ಆನಂದದಲ್ಲಿ ಪರಿವರ್ತನೆ ಬಯಸುವ ಕಥೆ 'ಮೌಲ್ಯ'. ವಿದ್ಯಾರ್ಥಿಗಳು ಬದುಕಿನಲ್ಲಿ ಅಳವಡಿಸಿಕೊಳ್ಳಬಹುದಾದ ಆದರ್ಶಗಳ ಕುರಿತಾದ ಎಳೆಯೊಂದು ಈ ಕಥೆಯಲ್ಲಿದೆ. ಹಳ್ಳಿಯ ಅನುಭವಗಳಿಗೆ ತಮ್ಮನ್ನು ತೆರೆದುಕೊಳ್ಳಬೇಕೆನ್ನುವ ಪ್ರೊಫೆಸರೊಬ್ಬರ ನೆಲದ ಪ್ರೀತಿಯ ಸಾಬೀತು ಪಡಿಸುವ ಕಥೆ 'ಅನುಭವ'. ಇಲ್ಲಿ ಹಳ್ಳಿತನದ ಮೇಲೆ ವ್ಯಕ್ತವಾಗಿರುವ ಸೆಳೆತಗಳೆಲ್ಲವು ನೈಜವಾಗಿವೆ. ಪ್ರೀತಿಯ ತತ್ಕಾಲೀನ ಸುಖದ ಕುರಿತಾದ 'ಗುಡ್ ಬೈ' ಕಥೆ ಕೊನೆಗೆ ವಿರಹಾಂತ್ಯವನ್ನು ಕಾಣುತ್ತದೆ. ಚೆಕೋವಾನ ಕಥೆಗಳ ಕನ್ನಡಾನುವಾದಗಳಾದ 'ದುಷ್ಟ ಹುಡುಗಿ ಹಾಗೂ 'ಕಾರಕೂನನ ಸಾವು' ಸರಳವಾಗಿ ಓದಿಸಿಕೊಂಡು ಹೋಗುವ ಶೈಲಿಯಿಂದ ಗಮನ ಸೆಳೆಯುತ್ತದೆ. ಬದುಕುವ ರೀತಿಯನ್ನು ಅರಿಯಲು "ಅಮೀನಪುರದ ಸಂತೆ' ಒಂದೊಳ್ಳೆ ಸಂಗಾತಿ. ಯಾವುದೇ ಇಸಂಗಳಿಗೆ ಒತ್ತು ಕೊಡದೇ ಸಾಗುವ ಇಲ್ಲಿನ ಕಥೆಗಳು ಓದುಗನ ಅಂತರಂಗವನ್ನು ಕಲಕಿ ಚಿಂತನಶೀಲತೆಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿವೆ.

ಗಿರಡ್ಡಿಯವರು ಹೇಳುವಂತೆ 'ಹಿರೇಮಠರ ಬರವಣಿಗೆಯಲ್ಲಿ ಬಂಡಾಯದ ಒಲವಿದ್ದರೂ ಎಲ್ಲೂ ಅಬ್ಬರವಿಲ್ಲ, ಒಂದು ಜೀವನ ಸ್ಥಿತಿಯ ಚಿತ್ರಣವನ್ನು ಸರಳವಾಗಿ ಮುಂದಿಟ್ಟು ಅದರ ಅರ್ಥವನ್ನು ಓದುಗರಿಗೇ ಬಿಡುತ್ತಾರೆ. ಆದರೆ ತಮ್ಮ ಸಹನಾಭೂತಿ ಯಾವ ಕಡೆಗೆ ಎಂಬುದನ್ನು ಕಥೆಯ ಮೂಲಕವೇ ಸೂಚಿಸುತ್ತಾರೆ. ಆದರೂ ಈ ಸಹಾನುಭೂತಿ ಭಾವಾತಿರೇಕಕ್ಕೆ ಹೋಗದಂತೆ ನೋಡಿಕೊಳ್ಳುತ್ತಾರೆ'. ಎನ್ನುವುದು ಅವರ ಬರವಣಿಗೆಯ ಕುರಿತಾದ ಸರಿಯಾದ ಗ್ರಹಿಕೆ.

## ಪರಾಮರ್ಶನ ಗ್ರಂಥಗಳು


- **ಮಲ್ಲಿಕಾರ್ಜುನ ಹಿರೇಮಠ (2003) :** ಅಮೀನಪುರದ ಸಂತೆ, ಕಲಬುರ್ಗಿ ಸಿದ್ದಲಿಂಗೇಶ್ವರ ಬುಕ್ ಡಿಪೋ.
- **ಎಚ್.ಎಸ್.ವೆಂಕಟೇಶಮೂರ್ತಿ ಮತ್ತು ರಾಘವೇಂದ್ರ ಪಾಟೀಲ (2022):** ಸಂಬಂಧ, ಧಾರವಾಡ ಸಂಗಾತ ಪುಸ್ತಕ.


APPROVED BY UGC CARE

■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಾನವ ಅಭಿವೃದ್ಧಿ ಮತ್ತು ಶಿಕ್ಷಣ

✍ ಡಾ. ಮಂಜಯ್ಯ, ಸಹಾಯಕ ಪ್ರಾಧ್ಯಾಪಕರು, ಡಾ. ಅಂಬೇಡ್ಕರ್ ಶಿಕ್ಷಣ ಮಹಾ ವಿದ್ಯಾಲಯ, ಜೆ. ಸಿ. ನಗರ, ಬೆಂಗಳೂರು.

*ಶಿಕ್ಷಣವಿಲ್ಲದಿದ್ದರೆ ಜ್ಞಾನವಿಲ್ಲ*
*ಜ್ಞಾನವಿಲ್ಲದಿದ್ದರೆ ಅಭಿವೃದ್ಧಿಯಿಲ್ಲ*
*ಅಭಿವೃದ್ಧಿ ಇಲ್ಲದಿದ್ದರೆ ಸಂಪತ್ತಿಲ್ಲ*
*ಸಂಪತ್ತಿಲ್ಲದಿದ್ದರೆ ಶೂದ್ರರ ಸರ್ವನಾಶ ಕಟ್ಟಿಟ್ಟ ಬುತ್ತಿ*

*ಜ್ಯೋತಿ ಬಾ ಫುಲೆ–1890*

## ಪೀಠಿಕೆ

ರಾಷ್ಟ್ರದ ಅಭಿವೃದ್ಧಿಗೆ ನೈಸರ್ಗಿಕ ಸಂಪನ್ಮೂಲ ಎಷ್ಟು ಅಗತ್ಯವೂ ಅದೇ ರೀತಿ ಜನಸಂಖ್ಯೆಯು ಸಹ ಒಂದು ರಾಷ್ಟ್ರ ಆಸ್ತಿ ಎಂದು ಪರಿಗಣಿಸಲಾಗಿದೆ. ಒಂದು ದೇಶದಲ್ಲಿ ವಾಸಿಸುತ್ತಿರುವ ಜನರು ಆ ದೇಶದ ಜನಸಂಖ್ಯೆ. ಅವರಲ್ಲಿ ಮಕ್ಕಳು, ವಯಸ್ಕರು ಮತ್ತು ಹಿರಿಯ ನಾಗರಿಕರಿದ್ದಾರೆ. 14 ವರ್ಷದ ವಯಸ್ಸಿನ ಒಳಗಿರುವವರನ್ನು ಮಕ್ಕಳೆಂತಲೂ, 15 ವರ್ಷದ ಮೇಲ್ಪಟ್ಟು 60 ವರ್ಷದ ಒಳಗಿನವರನ್ನು ವಯಸ್ಕರೆಂತಲೂ ಮತ್ತು 60 ವರ್ಷದ ಮೇಲ್ಪಟ್ಟವರನ್ನು ಹಿರಿಯ ನಾಗರಿಕರೆಂತಲೂ ಗುರುತಿಸಲಾಗಿದೆ. ವಯಸ್ಕರು ದುಡಿಯಲು ಸಮರ್ಥರು. ಇವರನ್ನು ದುಡಿಯುವ ಜನರು ಎನ್ನುತ್ತೇವೆ. ಈ ದುಡಿಯುವ ಜನರೇ ದೇಶದ ಸಂಪತ್ತು. ಪ್ರಸ್ತುತ ದೇಶದಲ್ಲಿರುವ ಉತ್ಪಾದನಾ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯ ಹೊಂದಿರುವ ದುಡಿಯುವ ಜನರನ್ನು ಮಾನವ ಸಂಪನ್ಮೂಲ ಎಂದು ಕರೆಯಲಾಗುತ್ತಿದೆ. ವಯಸ್ಕರು, ಮಕ್ಕಳು ಮತ್ತು ಹಿರಿಯ ನಾಗರಿಕರೆಲ್ಲಾರು ಒಂದು ದೇಶದ ಮಾನವ ಸಂಪನ್ಮೂಲ, ದೇಶದ ಅಭಿವೃದ್ಧಿಗೆ ಆಸ್ತಿಯಾಗಬೇಕಾದರೆ ಮೊದಲ ಮಾನವ ಅಭಿವೃದ್ಧಿ ಕಾರ್ಯವಾಗಬೇಕು. ಮಾನವ ಅಭಿವೃದ್ಧಿಯಾಗಬೇಕಾದರೆ ವಯಸ್ಕರು, ಮಕ್ಕಳು, ಹಿರಿಯ ನಾಗರಿಕರಿಗೆ, ಲಿಂಗ, ಜಾತಿ ಮತ್ತು ಧರ್ಮ ತಾರತಮ್ಯವಿಲ್ಲದೆ ಎಲ್ಲರಿಗೂ ಉತ್ತಮ ಶಿಕ್ಷಣ, ಉದ್ಯೋಗ ತರಬೇತಿ, ಆರೋಗ್ಯ ಸುರಕ್ಷತೆ, ಕಾನೂನು ನೆರವು ನೀಡಬೇಕಾಗುತ್ತದೆ, ಅವಾಗ ಮಾನವ ಸಂಪನ್ಮೂಲವು ಸಂವೃದ್ಧ ರಾಷ್ಟ್ರ ಕಟ್ಟಲು ಸಹಾಯಕವಾಗುತ್ತದೆ.

*ಎಲ್ಲರಿಗೂ ಕಲಿಯುವ ಹಕ್ಕಿದೆ*
*ಮಾನವ ಜೀವಿಸಲು ಆಹಾರ ಎಷ್ಟು*
*ಅಗತ್ಯವೋ, ಶಿಕ್ಷಣವು ಅಷ್ಟೇ ಅಗತ್ಯ.*

*– ಗೌತಮ ಬುದ್ಧ*

ಮಾನವ ಜೀವಿ ದೈಹಿಕವಾಗಿ ಬೆಳವಣಿಗೆಯಾಗಬೇಕಾದರೆ ಗಾಳಿ, ಬೆಳಕು, ನೀರು ಮತ್ತು ಆಹಾರ ಬೇಕು, ನಂತರ ಅದೇ ಮಾನವ ಜೀವಿ ಪ್ರಗತಿಪರ ಸಮಾಜದಲ್ಲಿ ಬೌದ್ಧಿಕವಾಗಿ ತನ್ನ ಜ್ಞಾನದಾಹದ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶಿಕ್ಷಣ ಬೇಕು, ಅಂದರೆ **"ನಹಿಃ ಜ್ಞಾನ್ಞೇನ ಸದೃಶಂ"** ಎಂಬ ಆರ್ಯೋಕ್ತಿಯೂ ಇದನ್ನೇ ಸ್ಪಷ್ಟಪಡಿಸುತ್ತದೆ. ಜ್ಞಾನಕ್ಕಿಂತ ಮಿಗಿಲಾದುದಿಲ್ಲ ಎಂದ ಮೇಲೆ ಇಂಥ ಜ್ಞಾನ ಲಭ್ಯವಾಗುವುದು ಶಿಕ್ಷಣದಿಂದ.

*ಭೂಮಿಗೆ ಬಿದ್ದ ಬೀಜ*
*ಎದೆಗೆ ಬಿದ್ದ ಅಕ್ಷರ*
*ಇಂದಲ್ಲ ನಾಳೆ ಫಲ ಕೊಡುವುದು*

*– ದೇವನೂರು ಮಹಾದೇವ*

ಭೂಮಿಗೆ ಹಾಕಿದ ಬೀಜ ಎಂದಾದರು ಒಂದು ದಿನ ನೆರಳು, ಗಾಳಿ, ಹಣ್ಣು ನೀಡುತ್ತದೆ. ಇದೇ ರೀತಿ ಮಕ್ಕಳಿಗೆ ಶಿಕ್ಷಣ ನೀಡಿದರೆ ಎಂದಾದರು ಒಂದು ದಿನ ವ್ಯಕ್ತಿಗೆ, ಕುಟುಂಬಕ್ಕೆ, ಸಮಾಜಕ್ಕೆ, ದೇಶಕ್ಕೆ ಪರಿಸರಕ್ಕೆ ಫಲ ಸಿಗುತ್ತದೆ ಎಂಬುವುದು ಅವರ ಅಭಿಪ್ರಾಯ, ಇದು ಸತ್ಯವು ಹೌದು.

ರಾಷ್ಟ್ರಕವಿ ***ಕುವೆಂಪುರವರು*** ಹೇಳುವಂತೆ : ಪ್ರತಿಯೊಂದು ಮಗುವು ಹುಟ್ಟುತ್ತಲೆ **'ವಿಶ್ವ ಮಾನವ'** ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು **'ವಿಶ್ವ ಮಾನವನ'**ನ್ನಾಗಿ ಮಾಡುವುದೆ ಶಿಕ್ಷಣದ ಕರ್ತವ್ಯವಾಗಬೇಕು.

ಹುಟ್ಟುವಾಗ **'ವಿಶ್ವಮಾನವ'**ನಾಗಿಯೆ ಹುಟ್ಟಿದ ಮಗುವನ್ನು ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ, ಅವೆಲ್ಲವುಗಳಿಂದ ಪಾರಾಗಿ ಮಗುವನ್ನು ಮತ್ತೆ **'ಬುದ್ಧ'**ನನ್ನಾಗಿ, ಅಂದರೆ **'ವಿಶ್ವ ಮಾನವ'**ನನ್ನಾಗಿ ಪರಿವರ್ತಿಸುವುದೇ ಶಿಕ್ಷಣ. ಪ್ರಪಂಚದ ಮಕ್ಕಳೆಲ್ಲಾ ಅನಿಕೇತರಾಗಬೇಕು, ಲೋಕ ಉಳಿದು ಬಾಳಿ ಬದುಕ ಬೇಕಾದರೆ !

ಶಿಕ್ಷಣ ಮಾನವನ ಪ್ರಗತಿಗೆ ಆಧಾರವಾಗಿದೆ. ಇದು ಸಮಾಜದ ಹಾಗೂ ಮಾನವನ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಒಂದು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ನಮ್ಮ ವಿದ್ಯೆ, ಸಂಸ್ಕೃತಿ, ನಾಗರಿಕತೆ ಎಲ್ಲದರ ಅದ್ಯ ಕರ್ತವ್ಯವಾಗಬೇಕು.

## ಶಿಕ್ಷಣದ ಅರ್ಥ ಮತ್ತು ವಿವರಣೆ

ಮಗು ಮತ್ತು ಮಾನವ ವರ್ತಮಾನದಲ್ಲಿ ನಿಂತು ಭೂತಕಾಲವನ್ನು ನೋಡಿ, ಭವಿಷ್ಯತ್ತನ್ನು ಸಂಪದ್ಭರಿತವಾದುದನ್ನಾಗಿ ರೂಪಿಸಿಕೊಳ್ಳಲು ಸಹಾಯ ಮಾಡುವುದೇ ಶಿಕ್ಷಣ, ಇದನ್ನೇ ಇನ್ನೊಂದು ಮಾತಿನಲ್ಲಿ ಹೀಗೆ ಹೇಳಬಹುದು **"ಭೂತ ಭವಿಷ್ಯದ್ವರ್ತಮಾನಗಳ ಜಾಗೃತ ಪ್ರಜ್ಞೆ"**ಯನ್ನು ಮಗು ಮತ್ತು ಮಾನವಿಗೆ ತಮ್ಮ ಜೀವಿತದುದ್ದಕ್ಕೂ ಹರಿದು ಬರುವಂತೆ ಮಾಡುವ ಶಕ್ತಿಯೇ ಶಿಕ್ಷಣ.

## ವ್ಯಾಖ್ಯಾನಗಳು

***ನೆಲ್ಸನ್ ಮಂಡೇಲಾ*** ಹೇಳಿದಂತೆ : " ಶಿಕ್ಷಣವು ಅತ್ಯಂತ ಶಕ್ತಿಯುತ ಆಯುಧವಾಗಿದ್ದು, ನೀವು ಜಗತ್ತನ್ನು ಬದಲಿಸಲು ಬಳಸಿಕೊಳ್ಳಬಹುದು.

***ದ. ರಾ. ಬೇಂದ್ರೆ*** ಹೇಳಿರುವಂತೆ : "ಮಕ್ಕಳಿಗೆ ಆಸ್ತಿ ಮಾಡಬೇಡಿ, ಮಕ್ಕಳನ್ನೇ ಆಸ್ತಿಯಾಗಿ ಮಾಡಿ".

***ಬರ್ಟ್‌ರ್ಯಾಂಡ್ ರಸಲ್*** ಅಭಿಪ್ರಾಯದಂತೆ: "ವೀರರೂ, ಧೀರರೂ, ಪ್ರತಿಭಾ ಸಂಪನ್ನರೂ ಆದ ವ್ಯಕ್ತಿಗಳನ್ನೊಳಗೊಂಡ ಸಮಾಜವನ್ನು ನಿರ್ಮಿಸುವುದೇ ಶಿಕ್ಷಣ.

***ಹರ್ಬರ್ಟ್‌ನ*** ಪ್ರಕಾರ : "ಮಗುವಿನ ಶಿರ, ಹೃದಯ, ಕರಗಳ ವಿಕಾಸ ಆಗಿ ಮಕ್ಕಳಲ್ಲಿ ಶ್ರದ್ಧೆ, ಆಸೆ, ಧ್ಯಾನ, ನ್ಯಾಯ, ವಿವೇಕ, ನಿಗ್ರಹ, ಧೈರ್ಯ ಮೊದಲಾದ ಸದ್ಗುಣಗಳು ನೆಲೆಸುವಂತೆ ಮಾಡುವುದೇ ಶಿಕ್ಷಣ".

***ಡಾ. ಸರ್ವಪಲ್ಲಿ ರಾಧಾಕೃಷ್ಣರವರು*** ಹೇಳಿರುವಂತೆ: "ಮಕ್ಕಳು ಮಾನವರಾಗಿ, ನಾಗರೀಕರಾಗಿ ಇನ್ನೊಬ್ಬರೊಡನೆ ಮೈತ್ರಿ ಗೌರವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಘನತೆಗಳಿಂದ ವರ್ತಿಸುವಂತೆ ಮಾಡಿ, ಮಕ್ಕಳಲ್ಲಿ ಔದಾರ್ಯ, ಭ್ರಾತೃಭಾವ, ಸಹಾನುಭೂತಿಗಳು ಹೆಚ್ಚಾಗಿರುವಂತೆ ಮಾಡುವುದೆ ಶಿಕ್ಷಣ".

ಶಿಕ್ಷಣವು ವಾಸ್ತವಾಂಶಗಳನ್ನು ಅಥವಾ ಸಿದ್ಧಾಂತಗಳನ್ನು ವಿದ್ಯಾರ್ಥಿಯ ತಲೆಯಲ್ಲಿ ತುಂಬುವುದಕ್ಕಿಂತಲೂ ಹೆಚ್ಚಾಗಿ ಅವನ ಸ್ವಂತಿಕೆಯನ್ನು ಹೊರಸೆಳೆಯುವ ಹಾಗೂ ಅವನ ಬೌದ್ಧಿಕ ಶಕ್ತಿಯನ್ನು ಪ್ರಚೋದಿಸುವ ಧ್ಯೇಯವನ್ನು ಹೊಂದಿರಬೇಕು

ಶಿಕ್ಷಣ ಸನ್ನಡತೆಯನ್ನು ವೃದ್ಧಿಸಬೇಕು, ಎಲ್ಲಾ ಪ್ರಗತಿಗಾಗಿ ಶಿಕ್ಷಣವೇ ಮೂಲ, ಶಿಕ್ಷಣ ಒಂದು ಶಕ್ತಿ, ಸಮಾಜದ ರೋಗಗ್ರಸ್ಥ ಪಿಡುಗುಗಳಿಗೆ ಸಿದ್ಧ ಔಷಧವೇ ಶಿಕ್ಷಣ, ಶೀಲವನ್ನು ವೃದ್ಧಿಸುವುದೇ ಶಿಕ್ಷಣ, ಶಿಕ್ಷಣ ಒಂದು ಖಡ್ಗವಿದ್ದಂತೆ, ಮಕ್ಕಳಿಗೆ ಶಿಕ್ಷಣ ಕೊಡಿಸಿ, ಅವರಲ್ಲಿ ಹೆಬ್ಬಯಕೆಯನ್ನು ತುಂಬಿರಿ ಅವರು ಮಹಾ ಪುರುಷರಾಗುತ್ತಾರೆ ಎಂಬುದನ್ನು ಅವರ ಮನಸ್ಸಿನಲ್ಲಿ ಅಚ್ಚೊತ್ತಿರಿ. ಮನುಷ್ಯನಲ್ಲಿ ಜ್ಞಾನವೃದ್ಧಿಗೊಳಿಸುವುದೊಂದೇ ಶಿಕ್ಷಣದ ಉದ್ದೇಶವಾಗಬಾರದು, ಜ್ಞಾನವೃದ್ಧಿಯ ಜೊತೆಗೆ ಮನುಷ್ಯನಲ್ಲಿ ನೀತಿ, ಸನ್ನಡತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಶಿಕ್ಷಣದ ಉದ್ದೇಶವಾಗಿರಬೇಕು.

## ಮಾನವ ಅಭಿವೃದ್ಧಿಯ ಅರ್ಥ ಮತ್ತು ವಿವರಣೆ

ಒಂದು ಸಮಾಜದಲ್ಲಿರುವ ಎಲ್ಲಾ ಜನರ ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯಗಳನ್ನು ಬೆಳೆಸುವ ಕ್ರಿಯೆಗೆ **'ಮಾನವ ಅಭಿವೃದ್ಧಿ'** ಅಥವಾ **'ಮಾನವ ಸಂಪನ್ಮೂಲ ಅಭಿವೃದ್ಧಿ'** ಎನ್ನುವರು.

ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮತ್ತು ಜೀವನವನ್ನು ನಡೆಸಲು ವ್ಯಕ್ತಿಯನ್ನು ಸಿದ್ಧಪಡಿಸುವುದೇ **'ಮಾನವ ಅಭಿವೃದ್ಧಿ'** ಅಥವಾ **'ಮಾನವ ಸಂಪನ್ಮೂಲ ಅಭಿವೃದ್ಧಿ'** ಎನ್ನುವರು. ಈ ಮಾನವ ಅಭಿವೃದ್ಧಿ ಆಧುನೀಕರಣಕ್ಕೆ ದಾರಿ ಮಾಡಿಕೊಡುತ್ತದೆ. ಹಾಗಾಗಿ ವ್ಯಕ್ತಿ, ಸಮಾಜ, ದೇಶ, ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ.

ಮಾನವ ಅಭಿವೃದ್ಧಿ **ಪರಿಕಲ್ಪನೆಯನ್ನು** ಪಾಕಿಸ್ತಾನದ ಖ್ಯಾತ ಅರ್ಥಶಾಸ್ತ್ರಜ್ಞ **ಡಾ. ಮೆಹಬೂಬುಲ್ ಹಖ್** ಪ್ರತಿಪಾದಿಸಿದರು: "ಜನರ ಆಯ್ಕೆಗಳ ವಿಸ್ತರಣೆಯೇ ಮಾನವ ಅಭಿವೃದ್ಧಿ" ಎಂದು ವ್ಯಾಖ್ಯಾನಿಸಿದ್ದಾರೆ. ಜನರು ತಮ್ಮ ಸಾಮರ್ಥ್ಯನುಸಾರ ಆಯ್ಕೆಗಳನ್ನು ನಿರಂತರವಾಗಿ ವಿಸ್ತರಿಸಿಕೊಳ್ಳುತ್ತ ಬದುಕಿನ ಗುಣಮಟ್ಟವನ್ನು ಸುಧಾರಿಸಿಕೊಳ್ಳುವ ಪ್ರಕ್ರಿಯೆ **ಸಾಮರ್ಥ್ಯ**ವೆಂದರೆ ಒಬ್ಬ ವ್ಯಕ್ತಿಯ ಸಾಧನೆಗೆ ಇರಬಹುದಾದ ಹಲವಾರು ಪರ್ಯಾಯಗಳ ಕ್ರೋಢೀಕರಣ ಎನ್ನಬಹುದು. ಅಂದರೆ ಬದುಕಲು ಒಬ್ಬ ವ್ಯಕ್ತಿಯು ತಾನು ಎಂತಹ ಬದುಕು ನಡೆಸಬೇಕೆನ್ನುವ "ಹಲವಾರು ಪರ್ಯಾಯ ಮಾರ್ಗಗಳ ಆಯ್ಕೆ ಸ್ವಾತಂತ್ರ್ಯ".

## ಮಾನವ ಅಭಿವೃದ್ಧಿಯ ಗುಣಲಕ್ಷಣಗಳು

ಮಾನವ ಅಭಿವೃದ್ಧಿಯು ಜನರಿಂದ ಮತ್ತು ಜನರಿಗಾಗಿ ನಡೆಯುವ ಬಹುಮುಖಿ ಪ್ರಕ್ರಿಯೆಯಾಗಿದೆ. ಮಾನವ ಅಭಿವೃದ್ಧಿಯು ಸಾಧನೆಯ ಮಾರ್ಗವೇ ಹೊರತು ಅಂತಿಮ ಗುರಿಯಲ್ಲ. ಜನರು ಅಭಿವೃದ್ಧಿಯ ಕಾರಣ ಕರ್ತರಾಗುವ ಜೊತೆಗೆ ಅವಕಾಶಗಳ ಸೃಷ್ಟಿಕರ್ತರಾಗಿ ತಮ್ಮ ಸಾಮರ್ಥ್ಯವರ್ಧನೆಯನ್ನು ಕೂಡ ಮಾಡಿಕೊಳ್ಳುವರು. ಮಾನವ ಅಭಿವೃದ್ಧಿಯು ಪ್ರಗತಿಯ ಒಂದು ಹೆಜ್ಜೆಯೇ ವಿನಃ ಅದೇ ಅಂತ್ಯವಲ್ಲ.

## ಮಾನವ ಅಭಿವೃದ್ಧಿ ಸೂಚಕಗಳು

ಆರ್ಥಿಕ ಅಭಿವೃದ್ಧಿಯ ಮುಖ್ಯ ಗುರಿ ಮಾನವ ಅಭಿವೃದ್ಧಿ ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಲು ಅನುವು ಮಾಡುವುದೇ ಇದರ ಉದ್ದೇಶ, ಜನರು ಉತ್ತಮ ಗುಣಮಟ್ಟದ ಜೀವನವನ್ನು ನಡೆಸಬೇಕಾದರೆ ಉತ್ತಮ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ, ಕಾನೂನಿನ ನೆರವು, ಸಾಮಾಜಿಕ ಭದ್ರತೆ ಮುಂತಾದ ಸೌಲಭ್ಯಗಳ ಜೊತೆಗೆ ಶುದ್ಧವಾದ ನೀರು, ಶುದ್ಧವಾದ ಗಾಳಿ, ಸ್ವಚ್ಛವಾದ ಪರಿಸರ ಬೇಕಾಗುತ್ತದೆ.

ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ **'ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು' (UNDP) 'ಮಾನವ ಅಭಿವೃದ್ಧಿ ಸೂಚಿ' (HDI)** ಎಂಬ ಮಾನದಂಡವನು ರೂಪಿಸಿದೆ. ಮಾನವ ಅಭಿವೃದ್ಧಿ ಸೂಚಿಯಲ್ಲಿ ಆರೋಗ್ಯ, ಜ್ಞಾನ ಹಾಗೂ ಜೀವನಮಟ್ಟವನ್ನು ಅಳೆಯಲು ಮೂರು ಸೂಚಕಗಳನ್ನು ರೂಪಿಸಲಾಗಿದೆ. ಅವುಗಳೆಂದರೆ –

1. ನಿರೀಕ್ಷಿತ ಜೀವಿತಾವಧಿ 2. ಶೈಕ್ಷಣಿಕ ಸಾಧನೆ 3. ಜೀವನಮಟ್ಟ

ದೇಶದ ಜನರು ಬದುಕುಳಿಯಬಹುದಾದ ಸರಾಸರಿ ವಯಸ್ಸನ್ನು **'ನಿರೀಕ್ಷಿತ ಜೀವಿತಾವಧಿ'** ಎನ್ನುತ್ತೇವೆ. ಹಾಗಾದರೆ ಮನುಷ್ಯ ದೀರ್ಘಕಾಲದವರೆಗೆ ಬದುಕಲು ಸಹಾಯಕವಾಗುವ ಅಂಶಗಳಾವುವು? ಪೌಷ್ಠಿಕ ಆಹಾರದ ಲಭ್ಯತೆ, ಉತ್ತಮ ಆರೋಗ್ಯ ಮತ್ತು ನೈರ್ಮಲ್ಯದ ಸೌಲಭ್ಯಗಳು, ಶುದ್ಧವಾದ ಪರಿಸರ ಮುಂತಾದುವು ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗಿವೆ. ಈ ಎಲ್ಲ ಅಂಶಗಳು **'ನಿರೀಕ್ಷಿತ ಜೀವಿತಾವಧಿ'** ಪ್ರತಿನಿಧಿಸುತ್ತವೆ.

**'ಶೈಕ್ಷಣಿಕ ಸಾಧನೆ'** ಹೆಚ್ಚಾದಂತೆ ದೇಶದ ಆರ್ಥಿಕ ಪ್ರಗತಿ ಹೆಚ್ಚಾಗುತ್ತದೆ. ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯುವುದಾದರೂ ಹೇಗೆ? ದೇಶದಲ್ಲಿನ 25 ವರ್ಷಗಳ ಮೇಲ್ಪಟ್ಟ ಜನರು ಪೂರೈಸಿರುವ **'ಸರಾಸರಿ ಶಾಲಾ ಶಿಕ್ಷಣದ ವರ್ಷಗಳು'** ಮತ್ತು 5 ವರ್ಷದ ಮಕ್ಕಳು ತಮ್ಮ ಜೀವಿತಾವಧಿಯಲ್ಲಿ ಪಡೆಯಲಿರುವ **'ನಿರೀಕ್ಷಿತ ಶಾಲಾ ಶಿಕ್ಷಣದ ವರ್ಷಗಳು'** ಈ ಎರಡು ಅಂಶಗಳ ಆಧಾರದ ಮೇಲೆ ಒಂದು ದೇಶದ ಶೈಕ್ಷಣಿಕ ಸಾಧನೆಯನ್ನು ಅಳೆಯಲಾಗುತ್ತದೆ.

**'ಜೀವನಮಟ್ಟ'**ವನ್ನು ಒಟ್ಟು ರಾಷ್ಟ್ರೀಯ ಆದಾಯದಿಂದ ಗಳಿಸಿದ ತಲಾದಾಯದ ಕೊಂಡುಕೊಳ್ಳುವ ಶಕ್ತಿ, ಸಮಾನತೆಯ ತತ್ವದ ಆಧಾರದ ಮೇಲೆ ಅಳೆಯಲಾಗುತ್ತದೆ.

**ತಲಾವರಮಾನ (Per capita income) :** ಒಂದು ದೇಶದ ಜನರ ಸರಾಸರಿ ವರಮಾನ ತಲಾವರಮಾನವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದು ದೇಶದ ಒಟ್ಟು ಜನಸಂಖ್ಯೆಯಲ್ಲಿ ವ್ಯಕ್ತಿಯೊಬ್ಬನ ಸರಾಸರಿ ವರಮಾನವೇ ತಲಾವರಮಾನವಾಗಿದೆ. ಒಂದು ದೇಶದ ಒಟ್ಟು ರಾಷ್ಟ್ರೀಯ ವರಮಾನವನ್ನು ಆ ದೇಶದ ಒಟ್ಟು ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾವರಮಾನವನ್ನು ಲೇಖಿಚಾರ ಮಾಡಬಹುದು. ತಲಾವರಮಾನ ಒಂದು ದೇಶದ ರಾಷ್ಟ್ರೀಯ ವರಮಾನದಲ್ಲಿ ವ್ಯಕ್ತಿಯೊಬ್ಬನ ಸರಾಸರಿ ಪಾಲನ್ನು ಸೂಚಿಸುತ್ತದೆ. ಅಂದರೆ ಆ ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯ ಅಥವಾ ಒಬ್ಬ ನಿರುದ್ಯೋಗಿಯ ಅಥವಾ ಒಬ್ಬ ಭಿಕ್ಷುಕನ ವರಮಾನ ಸಮಾನವಾಗಿರುತ್ತದೆ.

ಹೀಗೆ ಒಂದು ದೇಶದ ಜನರ **'ನಿರೀಕ್ಷಿತ ಜೀವಿತಾವಧಿ' 'ಶೈಕ್ಷಣಿಕ ಸಾಧನೆ'** ಹಾಗೂ **'ಜೀವನಮಟ್ಟ'** ಆ ದೇಶದ ಜನರ ಅಭಿವೃದ್ಧಿಯನ್ನು ಪ್ರತಿನಿಧಿಸುತ್ತವೆ. ಈ ಮೂರು ಅಂಶಗಳನ್ನು **'ಮಾನವ ಅಭಿವೃದ್ಧಿಯ ಸೂಚಕಗಳು'** ಎನ್ನುತ್ತಾರೆ. ಈ ಮೂರು ಸೂಚಕಗಳ ಸರಾಸರಿಯೇ **'ಮಾನವ ಅಭಿವೃದ್ಧಿ ಸೂಚಿ'**.

ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ದೇಶಗಳ ಅಭಿವೃದ್ಧಿಯನ್ನ ಗುರುತಿಸಲಾಗುತ್ತದೆ. ಹಾಗೆಯೇ ದೇಶಗಳ ಅಭಿವೃದ್ಧಿಯನ್ನು ಪರಸ್ಪರ ಹೋಲಿಕೆ ಮಾಡಲಾಗುತ್ತದೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ದೇಶಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗಿದೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

## ಮಾನವ ಅಭಿವೃದ್ಧಿ ಸೂಚಿ

**'ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮವು'** ಮಾನವನ ಜೀವನದ ಗುಣಮಟ್ಟವನ್ನು ಅಳೆಯುವುದಕ್ಕಾಗಿ ರೂಪಿಸಿದ ಮಾನದಂಡವೇ **'ಮಾನವ ಅಭಿವೃದ್ಧಿ ಸೂಚಿ'**. ಇದನ್ನು **1990** ರಲ್ಲಿ ರೂಪಿಸಲಾಯಿತು. ಇದನ್ನು ರೂಪಿಸಿದ ಕೀರ್ತಿ ಪಾಕಿಸ್ತಾನದ ಅರ್ಥಶಾಸ್ತ್ರಜ್ಞ **ಮೆಹಬೂಬ್‌ಲ್ ಹಕ್** ಅವರಿಗೆ ಸಲ್ಲುತ್ತದೆ. ಭಾರತದ **ಡಾ. ಅಮರ್ತ್ಯಸೇನ್** ಸಹ ಇದನ್ನು ರೂಪಿಸಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಿದ್ದಾರೆ. ಮಾನವ ಅಭಿವೃದ್ಧಿ ಸೂಚಿಯ ಆಧಾರದ ಮೇಲೆ ವಿಶ್ವದ ರಾಷ್ಟ್ರಗಳನ್ನು ಮೂರು ಗುಂಪುಗಳನ್ನಾಗಿ ಮಾಡಲಾಗಿದೆ.

1. **ಹೆಚ್ಚು ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.8** ಕ್ಕಿಂತ ಹೆಚ್ಚು ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.
2. **ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.5** ಮತ್ತು **0.8** ರ ನಡುವಿನ ಮಾನವನ ಅಭಿವೃದ್ಧಿ ಸೂಚಿ ಹೊಂದಿವೆ.
3. **ಕಡಿಮೆ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳು** : ಇವು **0.5** ಕ್ಕಿಂತ ಕಡಿಮೆ ಮಾನವ ಅಭಿವೃದ್ಧಿ ಸೂಚಿ ಹೊಂದಿವೆ.

**2011 ರ ಮಾನವ ಅಭಿವೃದ್ಧಿ ವರದಿಯ ಅಂಕಿ ಅಂಶಗಳು**

| ದೇಶಗಳು | HDI 2011 ಮಾನವ ಅಭಿವೃದ್ಧಿ ಸೂಚಿ | ನಿರೀಕ್ಷಿತ ಜೀವಿತಾವಧಿ ವರ್ಷಗಳು | ಸರಾಸರಿ ಶಾಲಾ ಅವಧಿ ವರ್ಷಗಳು | ನಿರೀಕ್ಷಿತ ಶಾಲಾ ಅವಧಿ ವರ್ಷಗಳು | ತಲಾ ಆದಾಯ (*PPP ಡಾಲರುಗಳಲ್ಲಿ) |
|---|---|---|---|---|---|
| ನಾರ್ವೆ | 0.943 | 81.1 | 12.6 | 17.3 | 47,557 |
| ಆಸ್ಟ್ರೇಲಿಯಾ | 0.929 | 81.9 | 12.0 | 18.0 | 34,431 |
| ಚೀನಾ | 0.687 | 73.5 | 7.5 | 11.6 | 7,476 |
| ಭಾರತ | 0.547 | 65.4 | 4.4 | 10.3 | 3,468 |
| ಪಾಕಿಸ್ತಾನ | 0.504 | 65.4 | 4.9 | 6.9 | 2,550 |
| ಬಾಂಗ್ಲಾದೇಶ | 0.500 | 68.9 | 4.8 | 8.1 | 1,529 |

(*PPP ಡಾಲರುಗಳು : ಸಮಾನ ಕೊಳ್ಳುವ ಶಕ್ತಿಯ ಡಾಲರುಗಳು. (Purchasing power parity dollars)

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಾನವ ಅಭಿವೃದ್ಧಿ ಸೂಚಿಯು ನಿರಂತರವಾಗಿ ಹೆಚ್ಚುತ್ತಿದ್ದು, ಅದು **2011 ರಲ್ಲಿ 0.547** ರಷ್ಟಿತ್ತು ಹಾಗಾಗಿ ಭಾರತವು ಇಂದು ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿದ ದೇಶಗಳ ಗುಂಪಿಗೆ ಸೇರಿದೆ.

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣ ಪ್ರಗತಿಯ ಪರಿಹಾರೋಪಯಗಳು/ ಮಾರ್ಗಗಳು/ ವಿಧಾನಗಳು

ಮಾನವ ಸಂಪನ್ಮೂಲ ಅಧ್ಯಯನಕ್ಕಾಗಿ **'ನೋಬಲ್ ಬಹುಮಾನವ'**ನ್ನು ಪಡೆದ **'ಥಿಯೋಡರ್ ಸಹಲ್ಜ್'** ರವರು ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಐದು ಮಾರ್ಗಗಳಿಂದ ಅಭಿವೃದ್ಧಿ ಪಡಿಸಬಹುದು ಎಂದಿದ್ದಾರೆ ಅವುಗಳೆಂದರೆ –

1. ಆರೋಗ್ಯದ ಅನುಕೂಲತೆ ಮಾಡಿಕೊಡುವುದು ಮತ್ತು ಸೇವೆಗಳ ಅವಕಾಶ
2. ಉದ್ಯೋಗಾವಧಿ ತರಬೇತಿ ನೀಡುವುದು
3. ವಯಸ್ಕರ ಶಿಕ್ಷಣ / ಸಮಾಜ ಶಿಕ್ಷಣ
4. ವಿಸ್ತರಣಾ ಶಿಕ್ಷಣ – ಔಪಚಾರಿಕ ಶಿಕ್ಷಣ
5. ಉದ್ಯಮ ಶೀಲತೆಯನ್ನು ಅಭಿವೃದ್ಧಿಗೊಳಿಸುವುದು

ಹಾಗಾಗಿ ಮಾನವ ಸಂಪನ್ಮೂಲಕ್ಕೆ ಉತ್ತಮ ಶಿಕ್ಷಣ ತರಬೇತಿ ಮತ್ತು ಆರೋಗ್ಯ ಸುರಕ್ಷತೆಗಳನ್ನು ಒದಗಿಸಿದರೆ ಅವರು **'ಮಾನವ ಬಂಡವಾಳ'**ವಾಗಿ ಮಾರ್ಪಡುತ್ತಾರೆ, ಇವರು ರಾಷ್ಟ್ರದ ಆದಾಯದ ಹೆಚ್ಚಳಕ್ಕೆ ಕಾರಣರಾಗುವ, ಸಾಮಾಜಿಕ ಪರಿವರ್ತನೆ ತರುವ ಸಾಮರ್ಥ್ಯವನ್ನು ಹೊಂದುತ್ತಾರೆ. ಮಕ್ಕಳ ಶಿಕ್ಷಣ ಮತ್ತು ಆರೋಗ್ಯದ ಮೇಲೆ ಹೆಚ್ಚಿನ ಹಣ ಹೂಡುವುದರಿಂದ ಭವಿಷ್ಯದಲ್ಲಿ ಅವರು ಹೆಚ್ಚಿನ ಆದಾಯ ತರಬಲ್ಲರು, ಸಮಾಜಕ್ಕೆ, ದೇಶಕ್ಕೆ, ಉತ್ತಮ ಕೊಡುಗೆ ನೀಡಬಲ್ಲರು, ಆದ್ದರಿಂದಲೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಕ್ಕಳಿಗೆ, ನಾಗರಿಕರಿಗೆ ಉತ್ತಮ ಶಿಕ್ಷಣ ಹಾಗೂ ಆರೋಗ್ಯ ಒದಗಿಸಲು ಶ್ರಮಿಸುತ್ತವೆ. ಮಾನವ ಅಭಿವೃದ್ಧಿಗೆ, ಮಾನವನ ಯೋಗ ಕ್ಷೇಮಕ್ಕೆ ಶಿಕ್ಷಣ ಮತ್ತು ಆರೋಗ್ಯ ಎರಡೂ ಅವಿಭಾಜ್ಯ ಎಂಬ ಆಧಾರದ ಮೇಲೆ ಮಾನವ ಅಭಿವೃದ್ಧಿಯು ಆಧಾರಿತವಾಗಿದೆ.

- ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು
- ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವುದು
- ವಯಸ್ಕರ ಶಿಕ್ಷಣವನ್ನು ಕೈಗೊಳ್ಳುವುದು
- ಅಸಮಾನ ಅಭಿವೃದ್ಧಿ, ಲಿಂಗ ಅಸಮಾನತೆ–ತಾರತಮ್ಯ ಹೋಗಲಾಡಿಸುವುದು
- ಕೇಂದ್ರ ಮತ್ತು ರಾಜ್ಯದ ಶೈಕ್ಷಣಿಕ ಯೋಜನೆಗಳನ್ನು ಅನುಷ್ಠಾನಗೊಳಿಸುವುದು
- ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು
- ಮಾನವ ಹಕ್ಕುಗಳನ್ನು ಅನುಷ್ಠಾನಗೊಳಿಸುವುದು
- ಸಂವಿಧಾನದ ಪ್ರಸ್ತಾವನೆಯ ಬಗ್ಗೆ ಅರಿವು ಮೂಡಿಸುವುದು
- ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸುವುದು
- ಸರ್ವಶಿಕ್ಷಣ ಅಭಿಯಾನ ಯೋಜನೆ ಜಾರಿಗೆ ತರುವುದು.
- ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆ ಜಾರಿಗೆ ತರುವುದು
- ಯೋಗ ಶೀಕ್ಷಣ, ಮೌಲ್ಯಶಿಕ್ಷಣ, ಕಾರ್ಯಶಿಕ್ಷಣ, ದೈಹಿಕ ಶಿಕ್ಷಣವನ್ನು ಶಿಕ್ಷಣದ ಪಠ್ಯಕ್ರಮದಲ್ಲಿ ತರುವುದು.
- ಉತ್ತಮ ಪಠ್ಯಕ್ರಮ, ಪಠ್ಯಪುಸ್ತಕ, ಬೋಧನಾ ಪದ್ಧತಿಯನ್ನು ಪರೀಕ್ಷಾ ಪದ್ಧತಿಯನ್ನು ಮೌಲ್ಯಮಾಪನ ವಿಧಾನವನ್ನು ತರುವುದು
- ಉಚಿತ ಆರೋಗ್ಯ ತಪಾಷಣೆ, ಚಿಕಿತ್ಸೆ ನೀಡುವುದು ಮತ್ತು ಔಷಧಗಳ ವಿತರಣೆ ಮಾಡುವುದು
- ಪೌಷ್ಠಿಕ ಆಹಾರವನ್ನು ಮಧ್ಯಾಹ್ನ ಬಿಸಿ ಊಟದಲ್ಲಿ ನೀಡುವುದು
- ಮಾನವ ಹಕ್ಕುಗಳು, ಮಹಿಳಾ ಹಕ್ಕುಗಳು, ಮತ್ತು ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು
- ಕೂಲಿಯಿಂದ ಶಾಲೆಗೆ, ಬಾ ಮರಳಿ ಶಾಲೆಗೆ, ಬಾ ಬಾಲೆ ಶಾಲೆಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.
- ಪ್ರತಿಯೊಬ್ಬ ಮನುಷ್ಯನಿಗೆ ಸಿಗುವ ಹಾಗೆ ಶಿಕ್ಷಣವನ್ನು ತರುವುದು.
- ಸಮನ್ವಯ ಶಿಕ್ಷಣ ಜಾರಿಗೆ ತರುವುದು.
- ವಿದ್ಯಾರ್ಥಿ ವೇತನವನ್ನು ನೀಡುವುದು
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿಯುತ ಶಾಲೆ ತೆರೆಯುವುದು
- ಎಲ್ಲಾ ಸಾಧ್ಯವಿರುವ ವಿಧಾನಗಳಿಂದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಎಲ್ಲಾರಿಗೂ ಸಿಗುವಂತೆ ಮಾಡುವುದು.

## ಮಾನವನನ್ನು ಅಭಿವೃದ್ಧಿಯತ್ತ ಸಾಗುವಂತೆ ಮಾಡುವುದೇ ಶಿಕ್ಷಣ

ಶಿಕ್ಷಣವು ವ್ಯಕ್ತಿ ತನ್ನಲ್ಲಿರುವ ಎಲ್ಲ ಶಕ್ತಿಯನ್ನೂ ಅಭಿವೃದ್ಧಿಗೊಳಿಸಿ

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಕೊಂಡು ತನ್ನ ವಾತಾವರಣವನ್ನು ಹತೋಟಿಯಲ್ಲಿರಿಸಿಕೊಂಡು ತನಗೆ ಸಾಧ್ಯವಾದುದನ್ನೆಲ್ಲಾ ಪೂರೈಸಿಕೊಳ್ಳುವಂತೆ ಮಾಡುವುದಾಗಿದೆ. ಇಲ್ಲಿ ಅವನ ಶಕ್ತಿ ಎಂದರೆ ದೈಹಿಕ, ಬೌದ್ಧಿಕ ಮತ್ತು ನೈತಿಕ ಶಕ್ತಿ. ಅದೇ ಅಭಿಪ್ರಾಯವನ್ನು **ಟಿ.ಪಿ. ನನ್** ಮಹಾಶಯ ಬೇರೆ ರೀತಿಯಲ್ಲಿ ಹೇಳಿದ್ದಾನೆ. ಅವರ ಪ್ರಕಾರ **'ಶಿಕ್ಷಣವು ಮಗುವಿನ ವ್ಯಕ್ತಿತ್ವದ ಪರಿಪೂರ್ಣ ಬೆಳವಣಿಗೆಗೆ ಅವಕಾಶ ನೀಡಿ ಮಾಡುವುದಾಗಿದೆ'**. ಹಾಗೆ ಮಾನವನ ಬದುಕು ವಿಕಾಸಗೊಂಡು ಪರಿಪೂರ್ಣತೆಯೆಡೆಗೆ ಬಂದಾಗ ಪ್ರತಿಯೊಬ್ಬನಿಗೂ ಅರ್ಥ ಮಾಡಿಕೊಳ್ಳುವ, ಆಚರಿಸುವ ಮತ್ತು ಗುರಿ ಮುಟ್ಟುವ ಶಕ್ತಿ ಬರುತ್ತದೆ. ಆಗ ಅವನು ತನ್ನ ಸುತ್ತ ನಡೆಯುವ ಜೀವನ ವ್ಯಾಪಾರವನ್ನು ವಿಮರ್ಶಿಸುವ, ಟೀಕಿಸುವ ಸಾಮರ್ಥ್ಯವನ್ನು ಹೊಂದುತ್ತಾನೆ. ಅಂತಹ ವ್ಯಕ್ತಿ ನಿತ್ಯ ಪರಿವರ್ತನ ಶೀಲವಾದ ತನ್ನ ಸಮಾಜದ ವಾತಾವರಣದೊಂದಿಗೆ ಹೊಂದಿಕೊಂಡು ಬಾಳುವುದನ್ನು ಕಲಿಯುತ್ತಾನೆ.

**ಸಾಕ್ರಟೀಸನು 'ಜ್ಞಾನವೇ ಶಕ್ತಿ' 'Knowledge is Power'** ಎಂದು ಹೇಳಿದ್ದಾನೆ. ಅವನು ಶಿಷ್ಯ **ಪ್ಲೇಟೊ** ಮಹಾಶಯ 'ಶಿಕ್ಷಣವು ಮಾನವನ ತನ್ನ ಶಾರೀರಿಕ ಮತ್ತು ಆಂತರಿಕ ಸೌಂದರ್ಯ ಮತ್ತು ನೈಪುಣ್ಯತೆಯನ್ನು ಅವನ ಶಕ್ತಿಯಿದ್ದಷ್ಟು ಬೆಳೆಸಿಕೊಳ್ಳಲು ಅವಕಾಶ ಮಾಡಿಕೊಡುವಂತಹುದಾಗಿದೆ' ಎಂದಿದ್ದಾನೆ. ಪ್ಲೇಟೊವಿನ ಶಿಷ್ಯ **ಅರಿಸ್ಟಾಟಲನೂ** ಇದೇ ಅಭಿಪ್ರಾಯ ಪಡುತ್ತಾನೆ.

ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯೂ ತಾನು ಬಾಳುವ ಸಮಾಜಕ್ಕೆ ತನ್ನ ಮೂಲಭೂತ ಶಕ್ತಿಯಿಂದ ಏನಾದರೊಂದು ಹೊಸ ಕೊಡುಗೆಯನ್ನು ಕಾಣಿಕೆಯ ರೂಪದಲ್ಲಿ ಕೊಡುವಂತೆ ಮಾಡತಕ್ಕದೇ ಆಗಿದೆ. ಶಿಕ್ಷಣವು ವ್ಯಕ್ತಿಯಲ್ಲಿ ಸ್ವಯಂ ಸಾಮರ್ಥ್ಯವನ್ನುಂಟುಮಾಡಿ ತನ್ನನ್ನು ತಾನು ಹತೋಟಿಗೊಳಪಡಿಸಿಕೊಂಡು ಸರ್ವತೋಮುಖವಾದ ಬೆಳವಣಿಗೆಗೆ ನೆರವು ನೀಡುವಂತಹುದೇ ಆಗಿದೆ.

## ಮಾನವ ಸಂಪನ್ಮೂಲ ಅಭಿವೃದ್ಧಿಗೆ ಇರುವ ಸಮಸ್ಯೆಗಳು

- ಯೋಜಿತ ಶೈಕ್ಷಣಿಕ ಪ್ರಗತಿಗೆ ಅಡ್ಡಿ ಆತಂಕಗಳು.
- ಶೈಕ್ಷಣಿಕ ಯೋಜನೆಗಳ ನ್ಯೂನತೆಗಳು– ನಿರುದ್ಯೋಗ ಸಮಸ್ಯೆ
- ಪರಿಸರದ ಅಂಶಗಳು– ಸಮಾಜದ ಕೆಲವು ಅಂಶಗಳಾದ ಬಡತನ, ಮೂಢನಂಬಿಕೆಗಳು, ಲಿಂಗಭೇದ
- ಜನಸಂಖ್ಯಾ ಸ್ಫೋಟ ಮತ್ತು ಸಾಂಪ್ರದಾಯಿಕ ಪದ್ಧತಿಗಳು.
- ಅನಕ್ಷರತೆ ಮತ್ತು ಸುಶಿಕ್ಷಿತರ ನಿರುದ್ಯೋಗ.
- ಅತಿಯಾದ ವ್ಯಾಮೋಹದ ಧಾರ್ಮಿಕ ಭಾವನೆ ಮತ್ತು ಸಾಂಸ್ಕೃತಿಕ ಭಾವನೆಗಳು,
- ಶಿಸ್ತು ಮತ್ತು ನೈತಿಕತೆಯ ಕೊರತೆ,
- ರಾಷ್ಟೀಯ ಭಾವೈಕತೆ ಇಲ್ಲದೇ ಇರುವುದು

## ಮಾನವ ಅಭಿವೃದ್ಧಿ ಮತ್ತು ಶಿಕ್ಷಣದಿಂದಾಗುವ ಪರಿಣಾಮಗಳು

- ಅನಕ್ಷರತೆ ಕಡಿಮೆಯಾಗಿ ಸಾಕ್ಷರತೆ ಹೆಚ್ಚಾಗುತ್ತದೆ.
- ನಿರುದ್ಯೋಗ ಸಮಸ್ಯೆ, ಲಿಂಗ ತಾರತಮ್ಯ ಅಸಮಾನತೆಯನ್ನು ಹೋಗಲಾಡಿಸಬಹುದು
- ಸಮ–ಸಮಾಜದ ಸೃಷ್ಠಿ ಮಾಡಬಹುದು
- ಸ್ವಚ್ಛ–ಸ್ವಾಸ್ಥ್ಯ ಸಮಾಜವನ್ನು ಕಟ್ಟಬಹುದು,
- ಸೇವಾ ವಲಯಗಳಲ್ಲಿ ಪ್ರಗತಿ ಸಾಧಿಸಬಹುದು
- ರಾಷ್ಟ್ರೀಯ ಆದಾಯ, ತಲಾ ಆದಾಯವನ್ನು ಹೆಚ್ಚಿಸಬಹುದು
- ರಾಷ್ಟ್ರೀಯ ಭಾವೈಕತೆಯನ್ನು ವೃದ್ಧಿಸಬಹುದು
- ವಿಶ್ವ ಮಾನವ ಪ್ರಜ್ಞೆಯನ್ನು ಬೆಳೆಸಬಹುದು
- ಮೂಢನಂಬಿಕೆಗಳನ್ನು ಹೋಗಲಾಡಿಸಬಹುದು
- ವೈಜ್ಞಾನಿಕ, ತಾಂತ್ರಿಕ, ಆಧುನಿಕತೆಯ ಜ್ಞಾನವನ್ನು ವೃದ್ಧಿಸಬಹುದು.
- ಸಾಮಾಜಿಕ ಪಿಡುಗುಗಳಾದ ಅಸ್ಪೃಶ್ಯತೆ, ಬಾಲ್ಯವಿವಾಹ, ವರದಕ್ಷಣೆ, ಜೀತ ಪದ್ಧತಿಗಳ ನಿವಾರಣೆ ಮಾಡಬಹುದು
- ಮಹಿಳಾ ಸಬಲೀಕರಣ ಮಾಡಬಹುದು
- ಆದರ್ಶ ಸಮಾಜ ಕಟ್ಟಬಹುದು
- ವೈಜ್ಞಾನಿಕ, ವೈಚಾರಿಕ ಚಿಂತನೆಗಳನ್ನು ಬೆಳೆಸಬಹುದು
- ಪರಿಸರ ಜಾಗೃತಿ ಮೂಡಿಸುವುದು.
- ಜೀವಿತಾವಧಿ, ಜೀವನಮಟ್ಟ, ಶೈಕ್ಷಣಿಕ ಸಾಧನೆಯನ್ನು ಹೆಚ್ಚಿಸಬಹುದು.
- ಸಾಮಾಜಿಕ, ನೈತಿಕ, ಆರ್ಥಿಕ, ರಾಜಕೀಯ ಮೌಲ್ಯಗಳನ್ನು ಬೆಳೆಸಬಹುದು.
- ಸಾಕ್ಷರತಾ ಸಮಾಜ ನಿರ್ಮಾಣ,
- ಆರೋಗ್ಯಕರವಾದ ಸಮಾಜ ನಿರ್ಮಾಣ,
- ಉದ್ಯಮಗಳ ಸ್ಥಾಪನೆ ಮತ್ತು ಅಭಿವೃದ್ಧಿ ಮಾಡಬಹುದು.

## ಉಪಸಂಹಾರ

**"ಮಾನವ ಅಭಿವೃದ್ಧಿ ಮತ್ತು ಶಿಕ್ಷಣ"** ಲೇಖನದಲ್ಲಿ ಒಂದು ರಾಷ್ಟ್ರ ಅಭಿವೃದ್ಧಿಯಾಗಬೇಕಾದರೆ ಮೊದಲು ಆ ರಾಷ್ಟ್ರದ ಪ್ರತಿಯೊಬ್ಬ ಪ್ರಜೆಗೂ ಉತ್ತಮವಾದ ಶಿಕ್ಷಣ ಸಿಗುವಂತಾಗಬೇಕು, ಅವಾಗ ಆ ದೇಶದ ಮಾನವ ಅಭಿವೃದ್ಧಿಯಾಗುತ್ತದೆ. ಅವಾಗ ಒಂದು ಬಲಿಷ್ಠ ಸಮಾಜ, ರಾಜ್ಯ, ರಾಷ್ಟ್ರದ ನಿರ್ಮಾಣವಾಗುತ್ತದೆ, ಧರ್ಮ, ಜಾತಿ, ಲಿಂಗ ತಾರತಮ್ಯವಿಲ್ಲದೆ ಎಲ್ಲಾರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಿಗಬೇಕು ಎಂಬುವುದು ನನ್ನ ಆಶಯವಾಗಿದೆ. ಇದಕ್ಕಾಗಿ ಎಲ್ಲಾರನ್ನು **'ಶಿಕ್ಷಣದ ಮುಖ್ಯವಾಹಿನಿ'ಗೆ** ತರುವುದು ನಮ್ಮೆಲ್ಲಾರ ಆದ್ಯ ಕರ್ತವ್ಯವಾಗಬೇಕಾಗಿದೆ.

***ನಾನು ಭಾರತದ ಭವಿಷ್ಯವನ್ನು ನೋಡುವಾಗ ನಕ್ಷತ್ರ ಗ್ರಹಗಳನ್ನು ನೋಡುವುದಿಲ್ಲ. ಮುದ್ದು ಮಕ್ಕಳ ಹೊಳೆಯುವ ಕಣ್ಣುಗಳನ್ನು ನೋಡುತ್ತೇನೆ. ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ, ಭಾರತಕ್ಕೆ ಭವಿಷ್ಯವಿರುತ್ತದೆ. ಆ ಕಣ್ಣುಗಳಲ್ಲಿ ಕಣ್ಣೀರು, ನಿರಾಸೆ ತುಂಬಿದ್ದರೆ ಭಾರತಕ್ಕೆ ಭವಿಷ್ಯವಿರುವುದಿಲ್ಲ.***

**– ಜವಾರಹರಲಾಲ್ ನೆಹರು**

**"ಓ ಮಾನವ, ಮಾನವರನ್ನು ಪ್ರೀತಿಸು ಹಾಗೂ ಗೌರವಿಸು...."**

**"ಕಲ್ಲಾಗು ಮನವೆ; ಪೂಜಿಸುವ ಶಿಲೆಯಾಂತಾಗುವೆ"**

**"ಕಾಡುಕಲ್ಲು ಬಂಡೆ ಕಂದಕದಲ್ಲಿ ಬೇರು ಬಿಡು ಮಾಮರವೇ...."**

## ಪರಾಮರ್ಶನ ಗ್ರಂಥಗಳು


- **ಪ್ರೊ. ಸಿ. ಹೆಚ್. ಮರಿದೇವರು (1973)** : "ಶಿಕ್ಷಣ ತತ್ತ್ವಶಾಸ್ತ್ರ" (ಶಿಕ್ಷಣಕ್ಕೆ ತಾತ್ತ್ವಿಕ, ಸಾಮಾಜಿಕ, ಐತಿಹಾಸಿಕ, ಜೈವಿಕ ಬುನಾದಿ) "ಉದಯೋನ್ಮುಖ ಭಾರತದಲ್ಲಿನ ಶಿಕ್ಷಣ" ತುಮಕೂರು ಉದಯಬಾನು ಪ್ರಕಾಶನ.
- **ಎಚ್.ಎಂ. ಶೈಲಜ, ರಾಜೀವ ಪಿ. ಗುಂಡಾಳೆ (2005)** : "ಭಾರತೀಯ ತಾತ್ತ್ವಿಕ ಪರಂಪರೆ ಮತ್ತು ಶಿಕ್ಷಣ". ಗದಗ ವಿದ್ಯಾನಿಧಿ ಪ್ರಕಾಶನ.
- **ಪಿ.ನಾಗರಾಜ (2001)** : "ಶಿಕ್ಷಣದಲ್ಲಿ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ" ಗದಗ ವಿದ್ಯಾನಿಧಿ ಪ್ರಕಾಶನ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712


- **ಮಂಜಯ್ಯ (2003) :** "ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ" ಬೆಂಗಳೂರು ಗೆಳೆಯರ ಬಳಗ ಪ್ರಕಾಶನ
- **ಕರ್ನಾಟಕ ಸರ್ಕಾರ "ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಬುನಾದಿ ತರಬೇತಿ" (2013-14) :** ತರಬೇತಿ ಕೈಪಿಡಿ ಹಾಗೂ ಕಾರ್ಯ ಚಟುವಟಿಕೆ ಪುಸ್ತಕ ಭಾಗ-3
- www.pue.kar.nic.in
- www.schooleducation.kar.nic.in
- **Nadler (1984) :** "L.Ed, the hand book of human resource development" New York Johnviley & Sons.


■■

*- 40ನೇ ಪುಟದಿಂದ ಮುಂದುವರೆದುದು*

ನಗರದಲ್ಲಿ **'ಸತ್ಯ ಶೋಧಕ ಸಮಾಜ'**ವನ್ನು ಸ್ಥಾಪಿಸಿದರು. ಇದು ಸಾಮಾಜಿಕ ಸಮಾನತೆಯನ್ನು ಸಾಧಿಸುವ ಏಕೈಕ ಧ್ಯೇಯದೊಂದಿಗೆ ಜಾತಿ-ಮತ, ಲಿಂಗ-ಧರ್ಮ, ವರ್ಗ ಮತ್ತು ಸಾಮಾಜಿಕ ಅಂತಸ್ತನ್ನು ಲೆಕ್ಕಿಸದೆ ಎಲ್ಲರಿಗೂ ಅವಕಾಶ ಕಲ್ಪಿಸುವ ಮುಕ್ತ ವೇದಿಕೆಯಾಗಿತ್ತು. ಮಾತೆ ಫುಲೆಯವರು ಈ ಸಮಾಜದ ಮಹಿಳಾ ಘಟಕದ ನಾಯಕಿ ಕೂಡ ಆಗಿದ್ದರು. ಇದು ಶೈಕ್ಷಣಿಕ ಕೆಲಸ-ಕಾರ್ಯಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ಹಿಂದುಳಿದವರ, ದೀನ-ದಲಿತರ, ಶೂದ್ರರ, ಅಸ್ಪೃಶ್ಯರ ಮತ್ತು ಮಹಿಳೆಯರ ಉನ್ನತಿ ಸಾಧಿಸಬೇಕೆಂಬ ಗುರಿಯನ್ನು ಹೊಂದಿತ್ತು.

ಈ ಸಮಾಜದ ಮೂಲಕ ಪ್ರಾರಂಭವಾದ **'ಸತ್ಯಶೋಧಕ ವಿವಾಹ ವಿಧಿ'** ಅತ್ಯಂತ ಗಮನಾರ್ಹವಾದುದು. ವಿವಾಹಿತ ದಂಪತಿಗಳು ಶಿಕ್ಷಣ ಮತ್ತು ಸಮಾನತೆಯನ್ನು ಉತ್ತೇಜಿಸುವ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು ಹಾಗೂ ಬ್ರಾಹ್ಮಣ ಆಚರಣೆಗಳನ್ನು ನಿರಾಕರಿಸುವುದು ಈ ನೂತನ ವಿಧಿಯ ಮೂಲ ತಿರುಳು. ವಿಧವಾ ಪುನರ್‌ವಿವಾಹ, ಅಂತರ್-ಜಾತಿ ವಿವಾಹ, ಕೌಟುಂಬಿಕ ಲಿಂಗ ಸಮಾನತೆಯನ್ನು ಪ್ರತಿಪಾದಿಸಲು ಹಾಗೂ ಸಾಮಾಜಿಕ ಕಟ್ಟುಪಾಡುಗಳನ್ನು ಮುರಿಯುವಲ್ಲಿ ಈ ನೂತನ ಪರಂಪರೆಯು ನೆರವಾಯಿತು. ಫುಲೆಯವರು ಕಾನೂನಿನ ನೆರವಿನೊಂದಿಗೆ 1873ರಲ್ಲಿ ಮೊದಲ 'ಸತ್ಯಶೋಧಕ ವಿವಾಹ'ವನ್ನು ನೆರವೇರಿಸಿದರು. 19ನೇ ಶತಮಾನದ ಇತಿಹಾಸದಲ್ಲಿ ಮೊದಲ ಬಾರಿಗೆ ಕಾನೂನಿನ ನೆರವು ಪಡೆದು ಯಾವುದೇ ಪುರೋಹಿತರು - ಬ್ರಾಹ್ಮಣ್ಯ ಶಾಸ್ತ್ರಗಳು ಇಲ್ಲದ ಮದುವೆ ಕಾರ್ಯವನ್ನು ನೆರವೇರಿಸಿದ್ದು ನಿಜಕ್ಕೂ ಒಂದು ಕ್ರಾಂತಿಕಾರಿ ಹೋರಾಟವೇ ಸರಿ.

ಮುಂದೆ 1890ರಲ್ಲಿ ಪತಿ ಜ್ಯೋತಿಬಾ ಫುಲೆಯವರು ನಿಧನರಾದ ಸಂದರ್ಭದಲ್ಲಿ ಸಾವಿತ್ರಿಬಾಯಿ ಫುಲೆಯವರು ತಾವೇ ಮುಂದೆ ನಿಂತು ಪತಿಯ ಅಂತ್ಯಕ್ರಿಯೆಯನ್ನು ನೆರವೇರಿಸಿದರು. ಮಹಿಳೆಯರು ಇಂತಹ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗುವುದು ಅಂದಿನ ಸಾಮಾಜಿಕ ದಿನಗಳಲ್ಲಿ ನಿಷಿದ್ಧ. ಆದರೆ ಫುಲೆಯವರು ದುಃಖದ ನಡುವೆಯು ತಮ್ಮ ಗುರಿ-ನಿಷ್ಠೆಯನ್ನು ಮರೆಯಲಿಲ್ಲ. ಪತಿಯ ಮರಣದ ನಂತರವೂ ಸಾವಿತ್ರಿಬಾಯಿ ಅವರ ಹೋರಾಟದ ಬದುಕು ನಿಲ್ಲಲಿಲ್ಲ. ಸತ್ಯ ಶೋಧಕ ಸಮಾಜದ ಅಧ್ಯಕ್ಷೆಯಾಗಿ ಯಾವುದೇ ಅಡೆತಡೆಯಿಲ್ಲದೇ ಸಂಘಟನೆಯ ಕೆಲಸ-ಕಾರ್ಯಗಳನ್ನು ಮುಂದುವರೆಸಿದರು. ಈ ನಿಟ್ಟಿನಲ್ಲಿ 1893ರಲ್ಲಿ ಸಾಸ್ವಾದ್ ನಗರದಲ್ಲಿ ಸತ್ಯ ಶೋಧಕ ಸಮಾಜದ ವಾರ್ಷಿಕ ಅಧಿವೇಶನವನ್ನು ಯಶಸ್ವಿಯಾಗಿ ಮುನ್ನೆಡೆಸಿದರು. ಅಂತಿಮವಾಗಿ 1897ರ ಸಮಯದಲ್ಲಿ, ಪುಣೆ ನಗರದಲ್ಲಿ **ಬುಬೊನಿಕ್ ಪ್ಲೇಗ್ ಮಹಾಮಾರಿಯ** ವಿರುದ್ಧ ಹೋರಾಡುವ ಸಂದರ್ಭದಲ್ಲಿ ಪ್ಲೇಗ್ ಸೋಂಕಿಗೆ ಬಲಿಯಾದ ಬೇರೊಂದು ಜೀವವನ್ನು ಉಳಿಸುವ ಪ್ರಯತ್ನದಲ್ಲಿ ಸಾವಿತ್ರಿ ಫುಲೆಯವರು ಪ್ಲೇಗ್ ರೋಗಕ್ಕೆ ತುತ್ತಾಗಿ ಮಾರ್ಚ್ 10, 1897ರಂದು ವೀರ ಮರಣಹೊಂದಿದರು.

## ಉಪಸಂಹಾರ

ಫುಲೆ ದಂಪತಿಗಳು ಸಹಸ್ರಾರು ವರುಷಗಳಿಂದ ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದ ಭಾರತದ ಬಹುಸಂಖ್ಯಾತ ಶೋಷಿತ ಸಮುದಾಯಕ್ಕೆ ಶಿಕ್ಷಣದ ಮೂಲಕ ವೈಚಾರಿಕ-ವೈಜ್ಞಾನಿಕ ಪ್ರಜ್ಞೆಯನ್ನು ಮೂಡಿಸಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು. ಇವರ ಕ್ರಾಂತಿಯ ಹಾದಿ ಅಷ್ಟೊಂದು ಸರಾಗವಾಗಿರಲಿಲ್ಲ. ಹಿಂದೂ ಸಮಾಜದಿಂದ, ಸಂಪ್ರದಾಯವಾದಿಗಳಿಂದ, ಮೇಲ್ವರ್ಗದವರಿಂದ ಹಾಗೂ ಕೊನೆಗೆ ಸ್ವಂತ ಕುಟುಂಬದವರಿಂದಲೂ ಸಾಕಷ್ಟು ತೊಂದರೆ, ಬೆದರಿಕೆ, ಅಪಮಾನ ಮತ್ತು ಸಮಸ್ಯೆಗಳು ಎದುರಾದರೂ ಸಹ ಯಾವುದಕ್ಕೂ ಅಂಜದೇ ಧೈರ್ಯದಿಂದ ತಮ್ಮ ಗುರಿಯನ್ನು ಬೆನ್ನಟ್ಟಿ ಹೋರಾಡಿದರು. ಇವರ ಕಾರ್ಯಗಳಿಂದ ಜಡ ಸಮಾಜದ ನೆಲೆಯಲ್ಲೂ ತಲ್ಲಣಗಳು ಉಂಟಾಗಿ ಸಮಾಜದ ಕಂದಾಚಾರಗಳನ್ನು ಪ್ರಶ್ನಿಸುವ ಪ್ರವೃತ್ತಿ ಜಾಗೃತವಾಯಿತು. ಇವರ ಸಮಾನತೆ ತತ್ವ, ಸಾರ್ವತ್ರಿಕ ಹಕ್ಕುಗಳ ಪ್ರತಿಪಾದನೆ, ಬ್ರಾಹ್ಮಣ ಪ್ರಾಬಲ್ಯದ ವಿರೋಧ ಮುಂತಾದ ವಿಚಾರಧಾರೆಗಳು ಭಾರತದ ಬೌದ್ಧಿಕ ಚಳುವಳಿ, ಬ್ರಾಹ್ಮಣೇತರ ಚಳುವಳಿ, ದಲಿತ ಚಳುವಳಿ ಮತ್ತು ಸ್ತ್ರೀವಾದಿ ಚಳುವಳಿಯ ಮೇಲೆ ಗಮನಾರ್ಹ ಪರಿಣಾಮವನ್ನು ಬೀರಿದವು. ಒಟ್ಟಾರೆಯಾಗಿ ಇವರ ಕೆಲಸ-ಕಾರ್ಯಗಳನ್ನು ಜಾತಿ, ಧರ್ಮ, ಲಿಂಗ ಮತ್ತು ಪ್ರಾದೇಶಿಕತೆಯ ಚೌಕಟ್ಟಿನಲ್ಲಿ ಗುರುತಿಸದೇ ಎಲ್ಲರೂ ಅವರ ಆಶಯಗಳನ್ನು ಅರ್ಥೈಸಿಕೊಂಡು ಅವರ ಹಾದಿಯಲ್ಲಿ ನಡೆಯುವುದು ಉತ್ತಮ. ಫುಲೆ ದಂಪತಿಗಳು ನಮಗೆ ಸದಾ ಪ್ರೇರಣೆ ಮತ್ತು ಆದರ್ಶ.

## ಪರಾಮರ್ಶನ ಗ್ರಂಥಗಳು


- **ಡಾ. ಅನುಪಮಾ ಎಚ್. ಎಸ್. (2022) :** ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆ, ಗದಗ ಲಡಾಯಿ ಪ್ರಕಾಶನ.
- **ಡಾ. ದೇವೇಂದ್ರಪ್ಪ ಜಾಜಿ. (2022) :** ಸೋಷಿಯಲ್ ಸೈಂಟಿಸ್ಟ್ ಸಾವಿತ್ರಿಬಾಯಿ, ಗದಗ ಲಡಾಯಿ ಪ್ರಕಾಶನ.
- https://kn.wikipedia.org/wiki/ಸಾವಿತ್ರಿಬಾಯಿ_ಫುಲೆ.
- **ಡಾ. ಅನುಪಮಾ ಎಚ್. ಎಸ್. (2016) :** ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಗದಗ ಲಡಾಯಿ ಪ್ರಕಾಶನ.
- **ಜಗತಾಪ ಮುರಳೀದರ (2010) :** ಸಮಾಜ ಸುಧಾರಕ ಮಹಾತ್ಮ ಫುಲೆ, ಬೆಂಗಳೂರು ನವಕರ್ನಾಟಕ ಪ್ರಕಾಶನ
- **ಶ್ರೀಪಾದಭಟ್ ಬಿ. :** ವಿಮೋಚಕಿಯ ಕನಸುಗಳು, ಶಿವಮೊಗ್ಗ ಅಹರ್ನಿಶಿ ಪ್ರಕಾಶನ,


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಗಿಡಮೂಲಿಕೆ ಔಷಧಿಗಳ ಐತಿಹಾಸಿಕ ದೃಷ್ಟಿಕೋನಗಳು ಮತ್ತು ಭವಿಷ್ಯದ ಪ್ರಾಮುಖ್ಯತೆ

✍ **ಡಾ. ಕುಮಾರ್ ಎಂ. ಎಸ್.**, ಸಹ ಪ್ರಾಧ್ಯಾಪಕರು, ಜೀವ ರಸಾಯನಶಾಸ್ತ್ರ ವಿಭಾಗ, ಮಹಾರಾಣಿ ಮಹಿಳಾ ಕಾಲೇಜು (ಸ್ವಾಯತ್ತ), ಮೈಸೂರು.
✍ **ಚಿತ್ರಶ್ರೀ ಜೆ.ಸಿ.**, ಸಂಶೋಧನಾ ವಿದ್ಯಾರ್ಥಿನಿ, ಜೀವ ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು (ಸ್ವಾಯತ್ತ), ಮೈಸೂರು

ವಿಶ್ವ ಆರೋಗ್ಯ ಸಂಸ್ಥೆಯು (WHO) ಸಾಂಪ್ರದಾಯಿಕ ಗಿಡಮೂಲಿಕೆ ಔಷಧಿಗಳನ್ನು ನೈಸರ್ಗಿಕವಾಗಿ ಲಭ್ಯವಿರುವ ಸಸ್ಯದಿಂದ ಕನಿಷ್ಠ ಅಥವಾ ಕೈಗಾರಿಕಾ ಸಂಸ್ಕರಣೆಯಿಲ್ಲದೆ ಪಡೆದ ಪದಾರ್ಥಗಳು ಎಂದು ವ್ಯಾಖ್ಯಾನಿಸುತ್ತದೆ. ಇದನ್ನು ಸ್ಥಳೀಯ ಅಥವಾ ಪ್ರಾದೇಶಿಕ ಚಿಕಿತ್ಸಾ ಪದ್ಧತಿಗಳಲ್ಲಿ ಅನಾರೋಗ್ಯಕ್ಕೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಸಾಂಪ್ರದಾಯಿಕ ಗಿಡಮೂಲಿಕೆ ಔಷಧಿಗಳು ನೈಸರ್ಗಿಕವಾಗಿ ಪಡೆಯುವುದ ರಿಂದ ಹಾಗೂ ಇವುಗಳ ಬಳಕೆಯು ಕಡಿಮೆ ಅಡ್ಡಪರಿಣಾಮಗಳಿರುವುದ ರಿಂದ ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ಆರಂಭದಲ್ಲಿ ಟಿಂಕ್ಚರ್‌ಗಳು, ಚಹಾಗಳು, ಪೌಡರ್‌ಗಳು ಮತ್ತುಇತರ ಗಿಡಮೂಲಿಕೆಗಳ ಸೂತ್ರೀಕರಣಗಳಂತಹ ಕಚ್ಚಾ ಔಷಧಿಗಳು ಗಿಡಮೂಲಿಕೆ ಔಷಧಿಗಳಾಗಿ ಉಗಮಗೊಂಡವು.

ಮಾನವನ ಇತಿಹಾಸದಿಂದ ಸಸ್ಯಗಳನ್ನು ಚಿಕಿತ್ಸೆಯ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ. ಪ್ರಸ್ತುತ ಲಭ್ಯವಿರುವ ಆಧುನಿಕ ಔಷಧಿಗಳನ್ನು ಗಿಡಮೂಲಿಕೆಯ ಔಷಧಿಗಳನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಪಡಿಸಲಾಗಿದೆ. ಉದಾಹರಣೆಗೆ ಆಸ್ಪಿರಿನ್ ಅನ್ನು ವಿಲೋ ಎಂಬ ಮರದ ತೊಗಟೆಯಲ್ಲಿರುವ ರಾಸಾಯನಿಕ ಸಂಯುಕ್ತದಿಂದ ಅಭಿವೃದ್ಧಿಪಡಿಸಲಾಗಿದೆ, ಡಿಜಿಟಾಕ್ಸಿನ್ ಅನ್ನು ಫಾಕ್ಸ್‌ಗ್ಲೋವ್ ಎಂಬ ಸಸ್ಯದಿಂದ, ಮಾರ್ಫಿನ್ ಅನ್ನು ಗಸಗಸೆಯಿಂದ, ಕ್ವಿನೈನ್ ಅನ್ನು ಸಿಂಕೋನಾ ತೊಗಟೆಯಿಂದ ಹಾಗೂ ಪೈಲೊಕಾರ್ಪೈನ್ ಅನ್ನು ಜಬೊರಾಂಡಿ ಎಂಬ ಸಸ್ಯದಿಂದ ಪಡೆಯಲಾಗಿದೆ.

ಸುಮಾರು 75 – 80% ಪ್ರಪಂಚದ ಜನಸಂಖ್ಯೆಯು ಮುಖ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಗಿಡಮೂಲಿಕೆಯ ಔಷಧಿಗಳನ್ನು(ಹರ್ಬಲ್ ಮೆಡಿಸಿನ್) ಪ್ರಾಥಮಿಕ ಆರೋಗ್ಯ ರಕ್ಷಣೆಗಾಗಿ ಉಪಯೋಗಿಸುತ್ತಾರೆ. ಗಿಡ ಮೂಲಿಕೆ ಔಷಧಗಳು ಅಗ್ಗದ ಮತ್ತು ಸ್ಥಳೀಯವಾಗಿ ಲಭ್ಯವಾಗುವುದರ ಜೊತೆಗೆ ಯಾವುದೇ ಅಡ್ಡಪರಿಣಾಮಗಳಿಲ್ಲದ ನಂಬಿಕಾರ್ಹ ಔಷಧಿಗಳಾಗಿವೆ. ವಿಶ್ವಆರೋಗ್ಯ ಸಂಸ್ಥೆ (WHO) ಪ್ರಕಾರ, ಇತ್ತೀಚೆಗೆ ಪ್ರಪಂಚದಾದ್ಯಂತ ಗಿಡಮೂಲಿಕೆಗಳ ಬಳಕೆಯು ಸಾಂಪ್ರದಾಯಿಕ ಔಷಧಿಗಳಿಗಿಂತ ಎರಡರಿಂದ ಮೂರು ಪಟ್ಟು ಹೆಚ್ಚಾಗಿದೆ. WHO ಗಿಡಮೂಲಿಕೆಯ ಔಷಧಗಳನ್ನು ಅವುಗಳ ಮೂಲ, ವಿಕಾಸ ಮತ್ತು ಪ್ರಸ್ತುತ ಬಳಕೆಯ ಪ್ರಕಾರ ನಾಲ್ಕು ವಿಭಿನ್ನ ವರ್ಗಗಳಾಗಿ ವರ್ಗೀಕರಿಸಿದೆ.

1. ಸ್ಥಳೀಯ ಗಿಡಮೂಲಿಕೆ ಔಷಧಿಗಳು
2. ಸಾಂಪ್ರದಾಯಿಕ ಗಿಡಮೂಲಿಕೆ ಔಷಧಿಗಳು
3. ಮಾರ್ಪಡಿಸಿದ ಗಿಡಮೂಲಿಕೆ ಔಷಧಿಗಳು
4. ಗಿಡಮೂಲಿಕೆ ಔಷಧಿ ಬೇಸ್ನೊಂದಿಗೆ ಆಮದು ಮಾಡಿದ ಉತ್ಪನ್ನಗಳು

ಸ್ಥಳೀಯ ಗಿಡಮೂಲಿಕೆ ಔಷಧಿಗಳನ್ನು ಐತಿಹಾಸಿಕವಾಗಿ ಸಮುದಾಯದ ಮಟ್ಟದಲ್ಲಿ ಅಥವಾ ಕೆಲ ಪ್ರದೇಶದಲ್ಲಿ ಬಳಸಲ್ಪಡುತ್ತವೆ ಮತ್ತು ಇವುಗಳನ್ನು ಸ್ಥಳೀಯ ಜನರು ದೀರ್ಘಕಾಲದಿಂದ ಬಳಸುತ್ತಿರುವುದರಿಂದ ಬಹಳ ಪ್ರಸಿದ್ದಿ ಪಡೆದಿವೆ. ಹಾಗೂ ಇವುಗಳನ್ನು ಸ್ಥಳೀಯ ಸಮುದಾಯದವರು ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ಮುಕ್ತವಾಗಿ ಬಳಸಬಹುದಾಗಿದೆ. ಈ ವರ್ಗದ ಔಷಧಿಗಳ ಉಪಯೋಗವು ಸ್ಥಳೀಯ ಸಮುದಾಯ ಅಥವಾ ಕೆಲ ಪ್ರದೇಶದಿಂದ ವಿಸ್ತರಣೆಯಾದರೆ ಅಥವಾ ಮಾರುಕಟ್ಟೆಗೆ ಪ್ರವೇಶಿಸಿದರೆ ಗಿಡಮೂಲಿಕೆ ಔಷಧಿಗಳ ರಾಷ್ಟ್ರೀಯ ನಿಯಮಗಳ ಪ್ರಕಾರ ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಅವಶ್ಯಕತೆಗಳನ್ನು ಪೂರೈಸಬೇಕಾಗುತ್ತದೆ.

ಸಾಂಪ್ರದಾಯಿಕ ಗಿಡಮೂಲಿಕೆ ಔಷಧಿಗಳನ್ನು ದೀರ್ಘಕಾಲದಿಂದ ಬಳಸಲಾಗುತ್ತಿದೆ ಮತ್ತು ಇವುಗಳ ಬಳಕೆಯನ್ನು ವಿಶೇಷ ಸಿದ್ಧಾಂತಗಳು ಮತ್ತು ಪರಿಕಲ್ಪನೆಗಳೊಂದಿಗೆ ದಾಖಲಿಸಲಾಗಿದೆ ಮತ್ತು ವಿವಿಧ ದೇಶಗಳಿಂದ ಅಂಗೀಕರಿಸಲ್ಪಟ್ಟಿದೆ. ಉದಾಹರಣೆಗೆ ಭಾರತದಲ್ಲಿ ಆಯುರ್ವೇದ, ಯುನಾನಿ ಮತ್ತು ಸಿದ್ಧ ಔಷಧೀಯ ವ್ಯವಸ್ಥೆಗಳು.

ಮಾರ್ಪಡಿಸಿದ ಗಿಡಮೂಲಿಕೆ ಔಷಧಿಗಳಲ್ಲಿ ಗಿಡಮೂಲಿಕೆಗಳ ಔಷಧೀಯ ಪದಾರ್ಥಗಳ ರೂಪ, ಇವುಗಳನ್ನು ದೇಹಕ್ಕೆ ತೆಗೆದುಕೊಳ್ಳುವ ಮಾರ್ಗಗಳು, ತಯಾರಿಕೆಯ ವಿಧಾನಗಳು, ವೈದ್ಯಕೀಯ ಸೂಚನೆಗಳನ್ನು ಒಳಗೊಂಡಂತೆ ಮಾರ್ಪಡಿಸಲಾಗಿದೆ. ಈ ಗಿಡಮೂಲಿಕೆ ಔಷಧಿಗಳು ಸಹ ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ರಾಷ್ಟೀಯ ನಿಯಂತ್ರಕ ಅವಶ್ಯಕತೆಗಳನ್ನು ಪೂರೈಸಬೇಕಾಗುತ್ತದೆ.

ಗಿಡಮೂಲಿಕೆ ಔಷಧಿ ಬೇಸ್ನೊಂದಿಗೆ ಆಮದು ಮಾಡಿದ ಉತ್ಪನ್ನಗಳು ಸಂಬಂಧಪಟ್ಟ ಮೂಲದ ದೇಶಗಳಲ್ಲಿ ನೋಂದಾಯಿಸಬೇಕು ಮತ್ತು ಮಾರಾಟ ಮಾಡಬೇಕು. ಗಿಡಮೂಲಿಕೆ ಔಷಧಿಗಳ ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಮಾಹಿತಿಯನ್ನು ಆಮದು ಮಾಡಿಕೊಳ್ಳುವ ದೇಶದ ರಾಷ್ಟ್ರೀಯ ಪ್ರಾಧಿಕಾರಕ್ಕೆ ಸಲ್ಲಿಸಬೇಕು ಮತ್ತು ಸ್ವೀಕರಿಸುವ ದೇಶದಲ್ಲಿ ಗಿಡಮೂಲಿಕೆಗಳ ಔಷಧಿಗಳ ನಿಯಂತ್ರಣದ ಸುರಕ್ಷತೆ ಮತ್ತು ಪರಿಣಾಮಕಾರಿತ್ವದ ಅವಶ್ಯಕತೆಗಳನ್ನು ಪೂರೈಸುವ ಅಗತ್ಯವಿರುತ್ತದೆ.

## ಹರ್ಬಲ್ ಮೆಡಿಸಿನ್‌ನ ಐತಿಹಾಸಿಕ ದೃಷ್ಟಿಕೋನಗಳು

ಸಸ್ಯಗಳು ಮತ್ತು ನೈಸರ್ಗಿಕ ಉತ್ಪನ್ನಗಳನ್ನು ಮಾನವ ಕುಲವು ಹಲವಾರು ವರ್ಷಗಳಿಂದ ಆಹಾರ ಮತ್ತು ಔಷಧಿಗಳನ್ನು ರೋಗಗಳನ್ನು ಗುಣಪಡಿಸಲು ಮತ್ತು ತಡೆಗಟ್ಟಲು ಬಳಸುತ್ತಿದ್ದರು. ಔಷಧೀಯವಾಗಿ ಸಸ್ಯಗಳ ಬಳಕೆಯನ್ನು ಪ್ರಾರಂಭಿಸಿದ ನಿಖರವಾದ ಸಮಯವನ್ನು ಹೇಳುವುದು ತುಂಬಾ ಕಷ್ಟ, ಪ್ರಾಚೀನ ಬ್ಯಾಬಿಲೋನ್ (ಇರಾಕ್) ನ ಕಾರ್ಬನ್‌ಡೇಟಿಂಗ್ ಪ್ರಕಾರ 60,000 ವರ್ಷಗಳ ಹಿಂದೆ ಸಸ್ಯಗಳನ್ನು ಔಷಧಿಗಳಾಗಿ ಬೆಳೆಸಲಾಗುತ್ತಿತ್ತು ಎಂಬ ದಾಖಲೆ ಇದೆ. ಸರಿ ಸುಮಾರು 5,000 ವರ್ಷಗಳಷ್ಟು ಹಿಂದೆ ಭಾರತ, ಚೀನಾ ಮತ್ತು ಈಜಿಪ್ಟ್‌ನಲ್ಲಿ ಹಾಗೂ ಕನಿಷ್ಠ 2,500 ವರ್ಷಗಳ ಹಿಂದೆ ಗ್ರೀಸ್ ಮತ್ತುಏಷ್ಯಾದಲ್ಲಿ ಗಿಡಮೂಲಿಕೆಗಳನ್ನು ಔಷಧಿಯವಾಗಿ ಬಳಸಲಾಗುತ್ತಿತ್ತು ಎಂದು ಲಿಖಿತ ದಾಖಲೆ ಇದೆ. ನಿಯಾಂಡರ್ತಲ್ ಕಾಲದಲ್ಲಿಯೂ ಸಹ ಔಷಧೀಯ ಗಿಡಮೂಲಿಕೆಗಳ ಅವಶೇಷಗಳು ಕಂಡುಬಂದಿರುತ್ತವೆ. ಸುಮೇರಿಯನ್ನರು ಕನಿಷ್ಠ 5,000 ವರ್ಷಗಳ ಹಿಂದೆ ಲಾರೆಲ್, ಕ್ಯಾರೆವೇ ಮತ್ತು ಥೈಮ್ನಂತಹ ಸಸ್ಯಗಳನ್ನು ಔಷಧೀಯವಾಗಿ ಉಪಯೋಗಿಸಲಾಗುತ್ತಿತ್ತು ಎಂದು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿವರಿಸಿದ್ದಾರೆ. ಈಜಿಪ್ಟಿನ ಜನರು ಕ್ರಿ. ಪೂ. 2900 ಕ್ಕಿಂತ ಮೊದಲು ಔಷಧಕ್ಕೆ ಚಿರಪರಿಚಿತರಾಗಿದ್ದರು, ಆದರೆ ಈಜಿಪ್ಟಿನ ಔಷಧೀಯ ದಾಖಲೆಯೆಂದರೆ "ಎಬರ್ಸ್ ಪ್ಯಾಪಿರಸ್" ಇದು 800 ಕ್ಕೂ ಹೆಚ್ಚು ಔಷಧೀಯ ಸೂತ್ರಗಳನ್ನು ಒಳಗೊಂಡಿದೆ. ಗಾರ್ಗಲ್ಸ್, ಸ್ನಫ್ಸ್, ಪೌಲ್ಟೀಸ್, ಇನ್ಫ್ಯೂಷನ್ಗಳು ಮಾತ್ರೆಗಳು ಮತ್ತು ಮುಲಾಮುಗಳಲ್ಲಿ ಸಾಮಾನ್ಯವಾಗಿ ಬಿಯರ್, ಹಾಲು, ವೈನ್ ಮತ್ತು ಜೇನುತುಪ್ಪವನ್ನು ವಾಹಕಗಳಾಗಿ ಬಳಸಲಾಗುತ್ತದೆ. ಅಕೇಶಿಯ, ಕ್ಯಾಸ್ಟರ್ ಆಯಿಲ್ ಮತ್ತು ಫೆನ್ನೆಲ್ ಗಳನ್ನು ಒಳಗೊಂಡಂತೆ ಸುಮಾರು 700 ವಿವಿಧ ಔಷಧಿಗಳ ಜೊತೆಗೆ ಕಬ್ಬಿಣ, ಸೋಡಿಯಂಕ್ಲೋರೈಡ್ ಮತ್ತು ಗಂಧಕದಂತಹ ಕೆಲವು ರಾಸಾಯನಿಕಗಳ ಸ್ಪಷ್ಟ ಉಲ್ಲೇಖದೊಂದಿಗೆ ಅವುಗಳ ಬಳಕೆಯನ್ನು ಬಳಸಲಾಗುತ್ತದೆ.

ಸರಿ ಸುಮಾರು 2600 BCಯಲ್ಲಿ ಮೆಸೊಪಟ್ಯಾಮಿಯಾ ಜನರು ಕೆಮ್ಮು, ನೆಗಡಿ ಮತ್ತು ಉರಿಯೂತಕ್ಕೆ ಚಿಕಿತ್ಸೆ ನೀಡಲು ಇಂದಿಗೂ ಬಳಸಲಾಗುವ Cupressussempervirens (Cypress) ಮತ್ತು Commiphora ಜಾತಿಯ (ಮಿರ್ಹ್) ತೈಲಗಳನ್ನು ಒಳಗೊಂಡಿರುವ ಮಣ್ಣಿನ ಮಾತ್ರೆಗಳ ಮೇಲೆ ಕ್ಯೂನಿಫಾರ್ಮ್ ಭಾಷೆಯಲ್ಲಿ ನೈಸರ್ಗಿಕ ಉತ್ಪನ್ನವನ್ನು ಔಷಧವಾಗಿ ಬಳಸುವುದನ್ನು ದಾಖಲಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಚೀನೀ ಜನರು ತಮ್ಮದೇ ಆದ ಔಷಧೀಯ ವ್ಯವಸ್ಥೆಯನ್ನು ಹೊಂದಿದ್ದಾರೆ. ಸಸ್ಯದ ಔಷಧಗಳನ್ನು ಸಣ್ಣ ಸಂಸ್ಕರಣೆಯ ನಂತರ ಅಂದರೆ ವಿನೆಗರ್ ಅಥವಾ ವೈನ್‌ನಲ್ಲಿ ನೆನೆಸಿದ ನಂತರ ಬಳಸಲಾಗುವ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚು ಚೀನೀ ಜನರು ನಿಯಮಿತವಾಗಿ ಸಾಂಪ್ರದಾಯಿಕ ಔಷಧಗಳನ್ನು ಬಳಸುತ್ತಾರೆ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಚೀನಾದಲ್ಲಿ ಸುಮಾರು 5000 ಕ್ಕಿಂತ ಹೆಚ್ಚು ಸಾಂಪ್ರದಾಯಿಕ ಔಷಧಿಗಳ ಲಭ್ಯವಿವೆ; ಇದು ಚೀನೀ ಔಷಧೀಯ ಮಾರುಕಟ್ಟೆಯ ಸರಿ ಸುಮಾರು ಐದನೇ ಒಂದು ಭಾಗವನ್ನು ಹೊಂದಿದೆ.

ಆಯುರ್ವೇದವು ಸರಿಸುಮಾರು ಐದು ಸಾವಿರ ವರ್ಷಗಳಷ್ಟು ಹಳೆಯದಾದ ಭಾರತೀಯ ಔಷಧ ಪದ್ಧತಿಯಾಗಿದೆ. ಆಯುರ್ವೇದ ಪಠ್ಯವು ಅಥರ್ವವೇದದ ಒಂದು ಭಾಗವಾಗಿದೆ, ಇದು ಕ್ರಿ. ಪೂ. 1500 ರಿಂದ 1000 ಕ್ಕೆ ಸೇರಿದೆ. ಸಾವಿರಾರು ವರ್ಷಗಳ ಕಾಲ ಆಯುರ್ವೇದ ಔಷಧ ಪದ್ಧತಿಯು ಮೌಖಿಕವಾಗಿ ವ್ಯಾಪಿಸಿದ ನಂತರ, ಪ್ರಾಚೀನ ಆಯುರ್ವೇದ ಪಠ್ಯಗಳನ್ನು ಅಂತಿಮವಾಗಿ ಸಂಸ್ಕೃತದಲ್ಲಿ ಬರೆಯಲಾಗಿದೆ ಮತ್ತು ಸಂರಕ್ಷಿಸಲಾಗಿದೆ. ಚರಕ ಸಂಹಿತಾ (ಕ್ರಿ. ಪೂ. 1000) ಮತ್ತು ಸುಶ್ರುತ್ ಸಂಹಿತಾ (ಕ್ರಿ. ಶ. 100) ಇವುಗಳು ಲಭ್ಯವಿರುವ ಮುಖ್ಯ ಗ್ರಂಥಗಳಾಗಿವೆ. ಪ್ರಾಚೀನ ಆಯುರ್ವೇದವು ಮೂಲಭೂತವಾಗಿ ರೋಗದ ವಿರುದ್ಧ ಹೋರಾಡುವ ಬದಲು ಆರೋಗ್ಯವನ್ನು ಉತ್ತೇಜಿಸಲು ಉದ್ದೇಶಿಸಲಾಗಿತ್ತು. ಆಯುರ್ವೇದ ಮೆಟೀರಿಯ ಮೆಡಿಕಾ ಪುಸ್ತಕದಲ್ಲಿ 1500 ಕ್ಕೂ ಹೆಚ್ಚು ಗಿಡಮೂಲಿಕೆಗಳು ಮತ್ತು 10,000 ಸೂತ್ರೀಕರಣಗಳ ವಿವರವಾದ ಮಾಹಿತಿಯನ್ನು ನೀಡಲಾಗಿದೆ.

ವಾಸ್ತವವಾಗಿ, ಪ್ರಕೃತಿಯು ಶೇ.90% ರಷ್ಟು ಔಷಧೀಯ ಅಣುಗಳನ್ನು ನೀಡುತ್ತದೆ ಎಂದು ನಂಬಲಾಗಿದೆ. ಡಕ್ಟಿನೊಮೈಸಿನ್, ಬ್ಲೋಮೈಸಿನ್, ಮತ್ತು ಡಾಕ್ಸೊರುಬಿಸಿನ್, ವಿನ್‌ಬ್ಲಾಸ್ಟಿನ್, ಇರಿನೊಟೆಕನ್, ಟೊಪೊಟೆಕನ್, ಎಟೊಪೊಸೈಡ್, ಮತ್ತು ಪ್ಯಾಕ್ಲಿಟಾಕ್ಸೆಲ್ (ಆಂಟಿಕ್ಯಾನ್ಸರ್), ಮೆಫ್ಲೋಕ್ವಿನ್ ಕ್ಲೋರೊಕ್ವಿನ್‌ನಂತಹ ಅನೇಕ ಪರಿಣಾಮಕಾರಿ ಏಜೆಂಟ್‌ಗಳನ್ನು ಪ್ರಕೃತಿಯು ಒದಗಿಸಿದೆ. ಭಾರತವು ಸುಮಾರು 25,000 ಪರಿಣಾಮಕಾರಿ ಸಸ್ಯ ಆಧಾರಿತ ಸೂತ್ರೀಕರಣಗಳನ್ನು ಹೊಂದಿದೆ ಮತ್ತು 7800 ಔಷಧೀಯ ಔಷಧ ತಯಾರಿಕಾ ಘಟಕಗಳು ಇದ್ದು ಇವುಗಳಿಗೆ ವಾರ್ಷಿಕವಾಗಿ ಸುಮಾರು 2000 ಟನ್ ಕಚ್ಚಾ ಗಿಡಮೂಲಿಕೆಗಳು ಬೇಕಾಗುತ್ತದೆ.

## ಹರ್ಬಲ್ ಮೆಡಿಸಿನ್‌ನ ಭವಿಷ್ಯದ ಪ್ರಾಮುಖ್ಯತೆ

ಅಸ್ತಿತ್ವದಲ್ಲಿರುವ ಸಸ್ಯಗಳಲ್ಲಿ ಸುಮಾರು 350,000 ಜಾತಿಗಳಿವೆ ಎಂದು ಅಂದಾಜಿಸಲಾಗಿದೆ (ಬೀಜ ಸಸ್ಯಗಳು, ಬ್ರಯೋಫೈಟ್‌ಗಳು ಮತ್ತು ಜರೀ ಗಿಡಗಳು ಸೇರಿದಂತೆ), ಅವುಗಳಲ್ಲಿ 287,655 ಜಾತಿಗಳನ್ನು 2004 ರಲ್ಲಿ ಗುರುತಿಸಲಾಗಿದೆ. ಇವುಗಳಲ್ಲಿ ಶೇ. 1 ರಿಂದ 10% ರಷ್ಟು ಸಸ್ಯಗಳನ್ನು ಮಾನವರು ಮತ್ತು ಇತರ ಪ್ರಾಣಿಗಳು ಆಹಾರವಾಗಿ ಬಳಸಲಾಗುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರಪಂಚದ ವಿವಿಧ ಭಾಗಗಳ ಬುಡಕಟ್ಟು ಜನರು ಬಳಸುವ ಔಷಧೀಯ ಸಸ್ಯಗಳ ಬಳಕೆಯನ್ನು ದಾಖಲಿಸುವಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಿದೆ. ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳು ಔಷಧೀಯ ಸಸ್ಯಗಳ ಮೇಲೆ ಜನಾಂಗೀಯ ಔಷಧೀಯ ಡೇಟಾವನ್ನು ದಾಖಲಿಸುವಲ್ಲಿ ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸಿವೆ. ಭಾರತೀಯ ಗಿಡಮೂಲಿಕೆಗಳ ಮೇಲೆ ಬುಡಕಟ್ಟು ಗಿಡಮೂಲಿಕೆ ತಜ್ಞರ ಹಕ್ಕುಗಳಿಗೆ ವೈಜ್ಞಾನಿಕ ಪುರಾವೆಗಳನ್ನು ಕಂಡುಹಿಡಿಯುವ ಸಂಶೋಧನೆಯನ್ನು ತೀವ್ರಗೊಳಿಸಲಾಗಿದೆ. ಒಮ್ಮೆ ಈ ಸ್ಥಳೀಯ ಜನಾಂಗೀಯ ಔಷಧೀಯ ಸಿದ್ಧತೆಗಳನ್ನು ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡಿ ಮತ್ತು ಸರಿಯಾಗಿ ಪ್ರಸಾರ ಮಾಡಿದರೆ, ಪರಿಣಾಮಕಾರಿ ಔಷಧ ಚಿಕಿತ್ಸೆ ಮತ್ತು ಸುಧಾರಿತ ಆರೋಗ್ಯ ಸ್ಥಿತಿಯ ಬಗ್ಗೆ ಜನರಿಗೆ ಉತ್ತಮ ಮಾಹಿತಿ ನೀಡಲಾಗುತ್ತದೆ. ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯನ್ನು ಅಧ್ಯಯನ ಮಾಡಬೇಕು, ದಾಖಲಿಸಬೇಕು, ಸಂರಕ್ಷಿಸಬೇಕು ಮತ್ತು ಅದನ್ನು ಶಾಶ್ವತವಾಗಿ ಕಳೆದುಕೊಳ್ಳುವ ಮೊದಲು ಮಾನವಕುಲದ ಪ್ರಯೋಜನಕ್ಕಾಗಿ ಬಳಸಬೇಕು. ಇದಕ್ಕೆ ಸಮಗ್ರ ವಿಧಾನ ಮತ್ತು ಸ್ಥಳೀಯ ನಿವಾಸಿಗಳ ಒಳಗೊಳ್ಳುವಿಕೆ ಮತ್ತು ಭಾಗವಹಿಸುವಿಕೆ ಅಗತ್ಯವಿರುತ್ತದೆ.

ಜಾಗತಿಕ ಗಿಡಮೂಲಿಕೆ ಔಷಧಿ ಮಾರುಕಟ್ಟೆಯ ಗಾತ್ರವು 2021 ರಲ್ಲಿ USD 151.91 ಶತಕೋಟಿ ಮೌಲ್ಯದ್ದಾಗಿದೆ ಮತ್ತು ಮಾರುಕಟ್ಟೆಯು 2022 ರಲ್ಲಿ USD 165.66 ಶತಕೋಟಿಯಿಂದ 2029 ರ ವೇಳೆಗೆ USD 347.50 ಶತಕೋಟಿಗೆ ಬೆಳೆಯುವ ನಿರೀಕ್ಷೆಯಿದೆ ಹಾಗೂ ಮುನ್ಸೂಚನೆಯ ಅವಧಿಯಲ್ಲಿ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (CAGR) 11.16% ರಷ್ಟು ಆಗುತ್ತದೆ ಎಂದು ನಿರೀಕ್ಷೆಯಿದೆ.

ಭಾರತೀಯ ಆಯುರ್ವೇದ ಉತ್ಪನ್ನಗಳ ಮಾರುಕಟ್ಟೆ ಗಾತ್ರವು 2022 ರಲ್ಲಿ INR 626 ಶತಕೋಟಿಯನ್ನು ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆ ವಿಶ್ಲೇಷಣೆ ಸಂಶೋಧನೆ ಮತ್ತು ಸಲಹಾ ಸಮೂಹದ ಮಾಹಿತಿಯ ಪ್ರಕಾರ 2028 ರ ವೇಳೆಗೆ ಮಾರುಕಟ್ಟೆಯು INR 1,824 ಶತಕೋಟಿಯನ್ನು ತಲುಪುತ್ತದೆ ಎಂದು ನಿರೀಕ್ಷಿಸಲಾಗಿದೆ. 2023–2028ರ ಅವಧಿಯಲ್ಲಿ ಸಂಯುಕ್ತ ವಾರ್ಷಿಕ ಬೆಳವಣಿಗೆ ದರ (CAGR) 19.3% ರಷ್ಟು ಆಗುತ್ತದೆ ಎಂದು ನಿರೀಕ್ಷೆಯಿದೆ.

## ಉಪಸಂಹಾರ

ಗಿಡಮೂಲಿಕೆಗಳನ್ನು ಔಷಧೀಯವಾಗಿ ಬಳಕೆ ಮಾಡುವುದು ಪುನರಾಗಮನವಾಗುತ್ತಿದೆ ಮತ್ತು ಪ್ರಸ್ತುತ ದಿನಗಳಲ್ಲಿ ಗಿಡಮೂಲಿಕೆಗಳ ಉತ್ಪನ್ನಗಳು ಸಂಶ್ಲೇಷಿತ ಔಷಧಿಗಳಿಗೆ ಹೋಲಿಸಿದರೆ ಸುರಕ್ಷತೆ ಮತ್ತು ಭದ್ರತೆಯನ್ನು ಪ್ರತಿನಿಧಿಸುತ್ತವೆ, ಇದು ಗಿಡಮೂಲಿಕೆ ಔಷಧಿಗಳಲ್ಲಿ ಸಂಶೋಧನೆಗೆ ಕಾರಣವಾಗುತ್ತದೆ. ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಯನ್ನು ಅಧ್ಯಯನ ಮಾಡಬೇಕು, ದಾಖಲಿಸಬೇಕು, ಸಂರಕ್ಷಿಸಬೇಕು ಮತ್ತು ಅದನ್ನು ಶಾಶ್ವತವಾಗಿ ಕಳೆದುಕೊಳ್ಳುವ ಮೊದಲು ಮಾನವ ಕುಲದ ಪ್ರಯೋಜನಕ್ಕಾಗಿ ಬಳಸಬೇಕು. ಇದಕ್ಕೆ ಸಮಗ್ರ ವಿಧಾನ ಮತ್ತು ಸ್ಥಳೀಯ ನಿವಾಸಿಗಳ ಒಳಗೊಳ್ಳುವಿಕೆ ಮತ್ತು ಭಾಗವಹಿಸುವಿಕೆ ಅಗತ್ಯವಿರುತ್ತದೆ.

*– 66ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಹಿಳಾ ಅಭಿವೃದ್ಧಿ ದೃಷ್ಟಿಕೋನಗಳು

✍ ಡಾ. ಯರ್ರಿಸ್ವಾಮಿ ಈ., ಸಹಾಯಕ ಪ್ರಾಧ್ಯಾಪಕ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

ವಿಶ್ವಸಂಸ್ಥೆಯ ಮಹಿಳಾ ದಶಕದ ಘೋಷಣೆಗಿಂತ ಮುಂಚೆ ಅಭಿವೃದ್ಧಿ ಸಿದ್ಧಾಂತಗಳನ್ನು ಲಿಂಗತಟಸ್ಥವೆಂದು ಪರಿಗಣಿಸಲಾಗಿತ್ತು. ಆದಕಾರಣ ನೀತಿ ರೂಪಿಸುವವರು ಅಭಿವೃದ್ಧಿಯಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ವ್ಯತ್ಯಾಸವನ್ನು ಗುರುತಿಸುವ ಗೋಜಿಗೆ ಹೋಗಲಿಲ್ಲ. "ಅಭಿವೃದ್ಧಿಯು ಸ್ತ್ರೀ ಮತ್ತು ಪುರುಷರ ಮೇಲೆ ಏಕತೆರನಾದ ಪರಿಣಾಮ ಬೀರುತ್ತದೆ ಎಂದು ಭಾವಿಸಿದ್ದರು. ಆದರೆ ಸ್ತ್ರೀವಾದಿ ಚಿಂತಕರು ಮಹಿಳೆ ಮತ್ತು ಪುರುಷರು ಅಭಿವೃದ್ಧಿಯ ಯೋಜನೆಗಳಿಂದ ಭಿನ್ನವಾಗಿ ಪ್ರಯೋಜನ ಪಡೆದುಕೊಂಡಿದ್ದಾರೆ ಎಂಬುದನ್ನು ಸಾಬೀತು ಮಾಡಿದರು"(ಫೋರೈಶಿ ಪಿ.ಮತ್ತು ಬೆಲಾಂಜರ್ ಸಿ., 1996, ಪು.92).ಈ ತೆರನಾದ ಜಾಗೃತಿಯ ಪರಿಣಾಮ ಅಭಿವೃದ್ಧಿಯ ಎಲ್ಲ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ಉತ್ತೇಜಿಸುವ ಕ್ರಮ ಪ್ರಾರಂಭವಾಯಿತು. "ಮಹಿಳೆಯರನ್ನು ಒಳಗೊಳ್ಳುವಿಕೆಯ ಅಭಿವೃದ್ಧಿ ಮತ್ತು ಸಾಮಾಜಿಕ ಪ್ರಗತಿಗೆ ಹೆಚ್ಚಿನ ಕೊಡುಗೆಯನ್ನು ಮರಳಿ ನೀಡುತ್ತದೆ ಎಂದು ಭಾವಿಸಲಾಯಿತು" (ಜಾಕ್ಸನ್ ಸಿ. ಮತ್ತು ಪಿಯರ್ಸನ್ ಆರ್., 1998, ಪು. 114).

ಸ್ತ್ರೀವಾದಿ ಸಂಶೋಧಕರು ಜಂಡರ್ ವಿಶ್ಲೇಷಣೆಯನ್ನು ಮಾಡಿದ್ದರ ಪರಿಣಾಮ "ಕಳೆದ ಮೂರು ದಶಕಗಳಿಂದ ಅಭಿವೃದ್ಧಿಯ ಸಿದ್ಧಾಂತಗಳಲ್ಲಿ ಬದಲಾವಣೆಗಳು ಕಂಡು ಬಂದವು. ಅಂದರೆ ಅಭಿವೃದ್ಧಿ ಪರಿಕಲ್ಪನೆಯಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ, ಮಹಿಳೆ ಮತ್ತು ಅಭಿವೃದ್ಧಿ ಹಾಗೂ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಪರಿಕಲ್ಪನೆಗಳು ವಿಕಸನಗೊಂಡಿವೆ. ಇವು ಪ್ರತಿಯೊಂದು ಪರಿಕಲ್ಪನೆಯು ಸಹ ಒಂದು ಕಾಲಾವಧಿಯನ್ನು ಸೂಚಿಸುತ್ತವೆ"(ದೇಸಾಯಿ, ವಿ.ಮತ್ತು ಪಾಟರ್ ಆರ್. (ಇಡಿ), 2002, ಪು.126).

ಇದರ ಮುಂದುವರೆದ ಭಾಗವಾಗಿ ದೇಸಾಯಿ ಮತ್ತು ಪೋಟರ್ ಅವರು "ಯೋಜನಾ ವಿಧಾನಗಳು ಸಿದ್ಧಾಂತಗಳ ಮೂಲಭೂತ ಪರಿಕಲ್ಪನೆಗಳನ್ನು ಒಳಗೊಳ್ಳುತ್ತವೆ. ಸಂಘ ಮತ್ತು ಸಂಸ್ಥೆಗಳು ಯಾವ ತೆರನಾಗಿ ನೀತಿಗಳನ್ನು ಘೋಷಿಸಿಕೊಳ್ಳಬೇಕು ಎನ್ನುವುದನ್ನು ಇವು ನಿರ್ಧರಿಸುತ್ತವೆ. ಯೋಜನೆಯು ನೀತಿಗಳನ್ನು ತಾರ್ಕಿಕತೆ, ಉದ್ದೇಶ, ತತ್ವ ಹಾಗೂ ಕಾರ್ಯತಂತ್ರಗಳನ್ನು ಪರಿಗಣಿಸಿ ರೂಪಿಸಲಾಗುತ್ತದೆ. ಅಭಿವೃದ್ಧಿ ಯೋಜನೆಯ ಕುರಿತ ಸಾಹಿತ್ಯವು ಐದು ನೀತಿ ದೃಷ್ಟಿಕೋನಗಳನ್ನು ಗುರುತಿಸಿದೆ. ಅವುಗಳನ್ನು ಈ ಭಾಗದಲ್ಲಿ ಪರೀಕ್ಷಿಸಲಾಗುತ್ತದೆ. ಇವು ಕಲ್ಯಾಣ, ಸಮಾನತೆ, ಬಡತನ ವಿರೋಧಿ, ದಕ್ಷತೆ ಮತ್ತು ಸಬಲೀಕರಣ ಗುರಿಗಳನ್ನು ಒಳಗೊಂಡಿವೆ. ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನವು ಪ್ರಮುಖವಾಗಿ ಸಮಾನತೆ, ಬಡತನ ವಿರೋಧಿ ಮತ್ತು ದಕ್ಷತೆಯನ್ನು ಒಳಗೊಂಡಿದ್ದರೆ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಸಬಲೀಕರಣ ದೃಷ್ಟಿಕೋನವನ್ನು ಒಳಗೊಂಡಿದೆ" (ದೇಸಾಯಿ ವಿ.ಮತ್ತು ಪಾಟರ್ ಆರ್. (ಇಡಿ), 2002, ಪು.174).

ಕಲ್ಯಾಣ ದೃಷ್ಟಿಕೋನವು 1950 ಮತ್ತು 1960ರಲ್ಲಿ ಪ್ರಾರಂಭವಾಯಿತು. ಅಭಿವೃದ್ಧಿ ಪ್ರಯತ್ನಗಳಲ್ಲಿ ಮೊಟ್ಟಮೊದಲ ಬಾರಿಗೆ ಮಹಿಳೆಯನ್ನು ಗುರುತಿಸಲಾಯಿತು. ಇದನ್ನು ಅನುಸರಿಸಿ 1970ರಲ್ಲಿ ಅಭಿವೃದ್ಧಿಯಲ್ಲಿ ಮಹಿಳೆ ನಂತರ 1980ರಲ್ಲಿ ಲಿಂಗವ್ಯವಸ್ಥೆ ಮತ್ತು ಅಭಿವೃದ್ಧಿ ಅದರ ಸ್ಥಾನವನ್ನು ಅಲಂಕರಿಸಿತು. ಅಭಿವೃದ್ಧಿಯಲ್ಲಿ ಮಹಿಳೆ ದೃಷ್ಟಿಕೋನಕ್ಕಿಂತ ಮೊದಲು ಅನುಷ್ಠಾನದಲ್ಲಿದ್ದ ಕಲ್ಯಾಣ ವಿಧಾನವು ಅತ್ಯಂತ ಪರಿಣಾಮಕಾರಿ ಹಾಗೂ ವೈರುಧ್ಯ ನೀತಿಗಳಿಂದ ಕೂಡಿತ್ತು. 1990ರಲ್ಲಿ ಸಬಲೀಕರಣ ವಿಧಾನವನ್ನು ಯೋಜನಾ ಗ್ರಹಿಕೆಯಲ್ಲಿ ಅಳವಡಿಸಿಕೊಳ್ಳಲಾಯಿತು. ಇಲ್ಲಿ ಪ್ರಸ್ತುತಪಡಿಸಿದ ವಿವಿಧ ನೀತಿಗಳು ವಿವಿಧ ಅವಧಿಗಳಲ್ಲಿ ಪ್ರಭಾವ ಬೀರುತ್ತವೆ.

ಹಳೆಯ ದೃಷ್ಟಿಕೋನವಿಧಾನದ ಟೀಕೆಯನ್ನು ಒಳಗೊಂಡ ನೂತನ ನೀತಿ ವಿಧಾನಗಳು ಪ್ರಾರಂಭಗೊಂಡವು. ಆದರೂ ಒಂದೊಂದು ಸಲ ಹಳೆಯ ವಿಧಾನಗಳಿಗೆ ಮರುಕಳಿಸಿರುವುದು ತಿಳಿದುಬರುತ್ತದೆ. ಆದ್ದರಿಂದ ರೂಢಿಯಲ್ಲಿರುವ ವಿಧಾನಗಳಿಂದ ವಿವರಿಸಿದಷ್ಟು ಈ ಯೋಜನಾ ವಿಧಾನಗಳು ಪರಿಪೂರ್ಣವಾಗಿಲ್ಲ ಮತ್ತು ಹಲವು ಬಾರಿ ಬೆರತುಹೋಗಿರುವುದು ಇದೆ.

## ಕಲ್ಯಾಣ ದೃಷ್ಟಿಕೋನ

ಕಲ್ಯಾಣ ದೃಷ್ಟಿಕೋನವು 19ನೆಯ ಶತಮಾನದ ಸಾಮಾಜಿಕ ಕಲ್ಯಾಣದ ಬೇರುಗಳಲ್ಲಿ ಅಡಕಗೊಂಡಿವೆ. ಈ ಅವಧಿಯಲ್ಲಿ ಬಡವರು ಯಶಸ್ಸುಗೊಳ್ಳಲು ಸಾಧ್ಯವಿಲ್ಲದವರು, ಸ್ವಪ್ರಯತ್ನದಿಂದ ಸುಧಾರಿಸಿಕೊಳ್ಳಲು ಅಸಮರ್ಥರು ಎಂದು ಪರಿಗಣಿಸಲಾಗಿತ್ತು ಮತ್ತು ಸ್ವಯಂದತ್ತಿ ನೀಡುವ ಸ್ವಯಂ ಸಂಘಗಳು, ಸಂಸ್ಥೆಗಳು ಇವರಿಗೆ ಸಹಾಯ ಮಾಡಲು ಜವಾಬ್ದಾರಿಯನ್ನು ಹೊತ್ತವು. ವಸಾಹತು ಅವಧಿಯಲ್ಲಿ ಅಭಿವೃದ್ಧಿ ಮುಖ್ಯ ಪ್ರಯತ್ನವನ್ನು ಕಲ್ಯಾಣದ ನೆರವಿನಿಂದಾಗಿ ಪ್ರತ್ಯೇಕಿಸುವುದು ಸಾಮಾನ್ಯವಾಗಿತ್ತು. 1950 ಮತ್ತು 1960ರಲ್ಲಿ ಇದು ಪ್ರಾರಂಭವಾದರೂ ಇದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಹಿಳೆಯರನ್ನು ಕೇಂದ್ರೀಕರಿಸಿತ್ತು. ಪುರುಷರನ್ನು ಉತ್ಪಾದನಾ ಕಾರ್ಮಿಕರೆಂದು ಪರಿಗಣಿಸಿದರೆ ಮಹಿಳೆಯರನ್ನು ದುರ್ಬಲ ವರ್ಗದವರೆಂದು ನಿಷ್ಕ್ರಿಯ ಪಾಲುದಾರರೆಂದು ಪರಿಗಣಿಸಿತು. ಏಕೆಂದರೆ ಅವರನ್ನು ಪ್ರಾಥಮಿಕವಾಗಿ ಸಂತಾನೋತ್ಪತ್ತಿ ಪಾತ್ರಗಳಿಂದ ಗುರುತಿಸಲಾಗುತ್ತಿತ್ತು.

ಈ ದೃಷ್ಟಿಕೋನದ ಮೊದಲ ಉದ್ದೇಶವು ಮಹಿಳೆಯರಿಗೆ ಸಹಾಯ ಮಾಡುವುದಾಗಿತ್ತು. ಅದು ಯಾವ ತೆರನಾದ ಸಹಾಯವೆಂದರೆ ಅವರನ್ನು ಉತ್ತಮ ತಾಯಿಯರನ್ನಾಗಿ ಮಾಡುವುದು, ಹೆಂಡತಿಯರನ್ನಾಗಿ ಮಾಡುವುದಾಗಿತ್ತು. ಇದರ ಮೂಲಕ ಕುಟುಂಬದ ಕಲ್ಯಾಣವನ್ನು ಸಾಧಿಸಬಹುದು ಎಂದು ಭಾವಿಸಲಾಗಿತ್ತು. ಆದಕಾರಣ ತಾಯಿ ಮತ್ತು ಮಕ್ಕಳ ಆರೋಗ್ಯ, ಪೌಷ್ಟಿಕಾಂಶಗಳ ಸುಧಾರಣೆ, ಕುಟುಂಬ ಯೋಜನೆ ಮತ್ತು ಕುಟುಂಬದ ಆರ್ಥಿಕತೆಗೆ ಸಹಾಯ ಮಾಡುವುದು, ಆ ಮೂಲಕ ಸುಧಾರಿಸುವುದು ಎಂದುಕೊಂಡು ಅವುಗಳನ್ನೇ ಕೇಂದ್ರೀಕರಿಸಿತ್ತು.

ಕಲ್ಯಾಣ ವಿಧಾನದ ಪ್ರಮುಖ ವಿಮರ್ಶಕರಾದಕಬೀರ್ ಸಿಂಡರ್ ಮತ್ತು ತಡಸ್ಸೆ "ಮಹಿಳೆಯ ಸಂಸಾರದ ಪಾತ್ರ ಹಾಗೂ ಲಿಂಗಾಧಾರಿತ ಶ್ರಮವಿಭಜನೆಯ ರೂಢಿಗತ ಊಹೆಯನ್ನು ಹೊಂದಿದ್ದರು. ಈ ವಿಧಾನವು ಮಹಿಳೆಯರ ಉತ್ಪಾದನ ಚಟುವಟಿಕೆಗಳು ಹಾಗೂ ಅವರ ಆರ್ಥಿಕ ಕೆಲಸಗಳ ಜವಾಬ್ದಾರಿಗಳನ್ನು ಪ್ರಶ್ನಿಸುವ ಮತ್ತು ಅದರಲ್ಲಿಬೇರೂರಿರುವ ತಪ್ಪುಗ್ರಹಿಕೆಗಳನ್ನು ತಿಳಿಸುವಲ್ಲಿ ವಿಫಲಾಯಿತು. ಆದರೂ ಮಹಿಳೆ ಮತ್ತು ಪುರುಷರ ನಡುವೆ ಗೊಂದಲ ಸೃಷ್ಟಿಸದ ಒಂದು ಸುರಕ್ಷಿತ ವಿಧಾನವಾಗಿದೆ ಎಂದಿರುವರು" (ಕಬೀರ್ ಎನ್., 1994, ಪು.80–97). ಬ್ಯುವಿನಿಕ್

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಮ್ "ಕಲ್ಯಾಣ ವಿಧಾನವು ಸ್ವಾವಲಂಬಿಯನ್ನಾಗಿಸದೇ ಅವಲಂಬಿತರನ್ನಾಗಿಸುತ್ತದೆ ಎಂದರು" (ಬುವಿನಿಕ್ ಎಮ್., ಲೈಸಟ್ ಎ. ಮತ್ತು ವಿಲಿಯಂ, ಪಿ., 1983, ಪು.158). ಮೋಸರ್ ಹೇಳುವಂತೆ "ಕಲ್ಯಾಣ ವಿಧಾನ ಕುರಿತ ಅತೃಪ್ತಿಯು ಹಾಗೂ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪರ್ಯಾಯ ವಿಧಾನಗಳಿಗೆ ಹಾಗೂ ಸಮಾನತೆಯ ವಿಧಾನಕ್ಕೂ ಕಾರಣವಾಯಿತು ಎನ್ನುತ್ತಾರೆ" (ಮೋಸರ್ ಸಿ., 1993, ಪು.213).

## ಸಮತೆ ದೃಷ್ಟಿಕೋನ

ಎಸ್ತರ್ ಬೋಸ್ತರಪ್ ಅವರ ಪುಸ್ತಕ 'ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯ ಪಾತ್ರ (1970)'ದ ಪ್ರಭಾವ, ಪಾಶ್ಚಿಮಾತ್ಯ ಸ್ತ್ರೀವಾದಿಗಳ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮಹಿಳೆಯರ ಆರ್ಥಿಕ ಸ್ಥಿತಿ ಮತ್ತು ಸ್ಥಾನಮಾನದಲ್ಲಾದ ಬದಲಾವಣೆಯನ್ನು ಗ್ರಹಿಸಿತು. ಇದರ ಪ್ರಮುಖ ಊಹೆಯೆಂದರೆ "ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಪುರುಷರೊಂದಿಗೆ ಹೊಂದಿದ್ದ ಸಂಬಂಧವನ್ನು ಕಳೆದುಕೊಳ್ಳುತ್ತಾರೆ. ಅದಕ್ಕೆ ಇರುವ ಕಾರಣಗಳೆಂದರೆ ಒಂದು, ಮಹಿಳೆಯರು ಉತ್ಪಾದನೆ ಹಾಗೂ ಸಂತಾನೋತ್ಪತ್ತಿಯ ಎರಡು, ಪಾತ್ರಗಳನ್ನು ಸಮಾಜದಲ್ಲಿ ನಿಭಾಯಿಸುತ್ತಾರೆ ಎಂಬುದು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮಹಿಳೆಯರನ್ನು ಆರ್ಥಿಕ ಉತ್ಪಾದನೆಗಿಂತ ಅವರ ಸಂತಾನೋತ್ಪತ್ತಿ ಪಾತ್ರಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಎರಡು ಸಾಂಪ್ರದಾಯಿಕ ಮತ್ತು ಪಾಶ್ಚಾತ್ಯ ಅಭಿವೃದ್ಧಿ ಚಟುವಟಿಕೆಗಳನ್ನು ಅಳೆಯುವ ಮಹಿಳೆಯರ ಸಂತಾನೋತ್ಪತ್ತಿ ಪಾತ್ರಗಳ ಮೌಲ್ಯಗಳನ್ನು ಕಡೆಗಣಿಸಿವೆ. ಏಕೆಂದರೆ ಆಧುನಿಕ ವಲಯದಲ್ಲಿ ಅವರ ಕೆಲಸ ಸಂಬಳ ರಹಿತ ದುಡಿಮೆಯಾಗಿದೆ. ಮೂರು ಅಭಿವೃದ್ಧಿ ನೀತಿಗಳು ತೃತೀಯ ಜಗತ್ತಿನ ಮಹಿಳೆಯರ ಸಂಬಳಸಹಿತ ದುಡಿಮೆಗೆ ಅಡ್ಡಿಯಾಗಿವೆ. ನಾಲ್ಕು ಈ ಯೋಜನೆಯು ಸಾಂಪ್ರದಾಯಿಕ ವಲಯದಲ್ಲಿ ಮಹಿಳೆಯರನ್ನು ಹಿಂದೆ ತಳ್ಳಿವೆ ಮತ್ತು ಎರಡು ಲಿಂಗಗಳ ನಡುವಿನ ಆದಾಯದ ಅಂತರವನ್ನು ಹೆಚ್ಚಿಸಿವೆ" (ಬೋಸ್ತರಪ್ ಇ., 1970, ಪು.148).

ಈ ದೃಷ್ಟಿಕೋನದ ಪ್ರಕಾರ ಮಹಿಳೆ ಮತ್ತು ಪುರುಷರ ನಡುವೆ ಸಮಾನತೆ ತರಲು ಇಬ್ಬರ ಮಧ್ಯೆ ಸಂಪನ್ಮೂಲ, ಆಸ್ತಿಯನ್ನು ಎಲ್ಲ ಹಂತದಲ್ಲೂ ಮರುಹಂಚಿಕೆ ಮಾಡುವುದು ಮತ್ತು ಮಹಿಳೆಯರ ಪರ ಸಕಾರಾತ್ಮಕ ತಾರತಮ್ಯವನ್ನು ಮಾಡುವುದು. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ಉದ್ಯೋಗಾವಕಾಶವನ್ನು ಪಡೆದುಕೊಳ್ಳಲು ಹಾಗೂ ಮಾರುಕಟ್ಟೆಯಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸುವುದು. ಇದು ಮಹಿಳೆಯರ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಾನಮಾನ, ಸ್ವಾಯತ್ತತೆಯನ್ನು ಗಳಿಸಲು ಶಾಸನಬದ್ಧ ಕ್ರಮದ ಅಗತ್ಯವನ್ನು ತಿಳಿಸುತ್ತದೆ. ಈ ವಿಧಾನದ ಮೂಲಕವೇ ಮಹಿಳೆಯರ ಮಾನವ ಹಕ್ಕುಗಳು ವಿಶ್ವದಾದ್ಯಂತ ಗುರುತಿಸಲ್ಪಟ್ಟವು. ಉದಾಹರಣೆಗೆ ವಿಚ್ಛೇದನ ಹಕ್ಕು, ಭೂ ಒಡೆತನ, ಆಸ್ತಿ, ಸಾಲ ಹಾಗೂ ಮತದಾನ ಹಕ್ಕುಗಳನ್ನು ಉಲ್ಲೇಖಿಸಬಹುದು.

ಎಲ್ಲ ಮಹಿಳೆಯರಿಗೆ ಅಧಿಕಾರದ ಮರುಹಂಚಿಕೆಯ ಪ್ರಸ್ತಾಪಿತ ಕಾರಣದಿಂದಾಗಿ ಸಮಾನತೆಯ ವಿಧಾನವು ಹಲವಾರು ಸಮಸ್ಯೆಗಳನ್ನು ಹಾಗೂ ಪ್ರತಿರೋಧವನ್ನು ಎದುರಿಸಿತು. ಇದನ್ನು ಒಂದು ನೀತಿಯಾಗಿ ಪರಿಗಣಿಸಲು ಕಷ್ಟವೆನಿಸಿತು. ಈ ವಿಧಾನವು ಪುರುಷರಿಗೆ ಬೆದರಿಕೆಯೊಡ್ಡಿದ ನೀತಿಯೆಂದು ಗ್ರಹಿಸಲಾಯಿತು.

## ಬಡತನ ವಿರೋಧಿ ದೃಷ್ಟಿಕೋನ

1970ರಲ್ಲಿ ಸಮಾನತೆ ದೃಷ್ಟಿಕೋನ ಕುರಿತಾದ ಅಸಂತುಷ್ಟಿಯು ಬಡತನವಿರೋಧಿ ದೃಷ್ಟಿಕೋನ ಹುಟ್ಟಿಗೆ ಕಾರಣವಾಯಿತು. ಮೋಸರ್ ಈ ದೃಷ್ಟಿಕೋನವು "ಮಹಿಳೆಯರ ಮೇಲೆ ಕೇಂದ್ರೀಕೃತವಾಯಿತು ಮತ್ತು ಬಡತನ ನಿರ್ಮೂಲನೆಗೆ ಮೂಲ ಕಾಳಜಿಯನ್ನು ಹೊಂದಿತ್ತು. ಬಡತನ ನಿರ್ಮೂಲನೆ ಉದ್ದೇಶಿತ ಗುಂಪಿನ ಸದಸ್ಯರಾಗಿ ಬಡವರಲ್ಲಿ ತೀರ ಬಡವರು ಅಂದರೆ ಕಡಿಮೆ ಆದಾಯದ ಗುಂಪಿನ ಮಹಿಳೆಯನ್ನು ಗುರುತಿಸಲಾಗಿತ್ತು. ಏಕೆಂದರೆ ಅವರನ್ನು ಆರ್ಥಿಕ ಬೆಳವಣಿಗೆಯಲ್ಲಿ ಒಳಗೊಳ್ಳುವುದರಿಂದ ಅವರು ಕುಟುಂಬದ ಎಲ್ಲ ಸದಸ್ಯರ ಮೂಲ ಅಗತ್ಯಗಳನ್ನು ಪೂರೈಸುತ್ತಾರೆ. ಮಹಿಳೆ ಮತ್ತು ಪುರುಷರ ನಡುವಿನ ಅಸಮಾನತೆಗೆ ಕೇವಲ ಅಧೀನತೆ ಮಾತ್ರ ಕಾರಣವಲ್ಲ. ಅಸಮಾನತೆಯು ಬಡತನದ ಜೊತೆಗೆ ಸಂಬಂಧಿಸಿದೆ. ಅದು ಒಡೆತನ ಹೊಂದಲು ಬಿಡುವುದಿಲ್ಲ. ಅದು ಲಿಂಗಅಸಮಾನತೆಯನ್ನು ಉಂಟುಮಾಡುತ್ತದೆ ಎನ್ನುವರು" (ಮೋಸರ್ ಸಿ., 1993, ಪು.178). ಈ ವಿಧಾನದ ಪ್ರಮುಖ ಉದ್ದೇಶ ಉದ್ಯೋಗ ಹಾಗೂ ಆದಾಯವನ್ನು ಹೆಚ್ಚಿಸುವ ಚಟುವಟಿಕೆಗಳ ಮೂಲಕ ಬಡಮಹಿಳೆಯರ ಉತ್ಪಾದಕತೆಯನ್ನು ಹೆಚ್ಚಿಸುವುದು ಮತ್ತು ಬಡತನವನ್ನು ಕಡಿಮೆಗೊಳಿಸಿ ಆರ್ಥಿಕ ಬೆಳವಣಿಗೆಯನ್ನು ಹೊಂದುವುದು.

ಇದು ಮಹಿಳೆಯರ ಸ್ಥಾನಮಾನವನ್ನು ಬದಲಿಸಲು ಬಹಳ ಕಡಿಮೆ ಸಾಮರ್ಥ್ಯವನ್ನು ಬಳಸಲಾಗಿದೆಯೆಂದು ಭಾವಿಸಲಾಯಿತು. ಕಬೀರ್ ಪ್ರಕಾರ "ಮಹಿಳೆಯರ ಸಮಸ್ಯೆಗಳನ್ನು ಕುಟುಂಬದ ಮೂಲ ಅವಶ್ಯಕತೆಗಳೊಂದಿಗೆ ವಿವರಿಸಲಾಗಿದೆ ಹೊರತು ಸಂಪನ್ಮೂಲಗಳ ದೊರಕುವಿಕೆಯಲ್ಲಿ ಅಸಮಾನತೆಯ ಕುರಿತು ವಿವರಿಸಲಾಗಿಲ್ಲ ಎಂದು ವಿಮರ್ಶಿಸಿದ್ದಾರೆ" (ಕಬೀರ್ ಎನ್., 1994, ಪು.89).ಇದು "ಎಲ್ಲ ಮಹಿಳೆಯರನ್ನು ಹೊರತುಪಡಿಸಿ ಕೇವಲ ಬಡಮಹಿಳೆಯರೆಡೆಗೆ ಗಮನ ಹರಿಸುತ್ತದೆ. ಅಭಿವೃದ್ಧಿಯ ಪ್ರಯತ್ನದಲ್ಲಿ ಮಹಿಳೆಯರಿಗುಂಟಾದ ಲಾಭವು ಪುರುಷರಿಗೆ ನಷ್ಟವನ್ನು ಸೂಚಿಸುತ್ತದೆ ಎನ್ನುವ ದ್ವಂದವನ್ನು ಈ ವಿಧಾನವು ಸೃಷ್ಟಿಸುತ್ತದೆ" (ಫರ್ನಾಂಡೀಸ್-ಕೆಲ್ಲಿ ಎಮ್., 1991, ಪು. 414-419).

ಈ ದೃಷ್ಟಿಕೋನವು ಮುಖ್ಯವಾಗಿ ಮಹಿಳೆಯರನ್ನೊಳಗೊಂಡ ಹಾಗೂ ಮನೆಯ ಸಮೀಪವೇ ಸ್ಥಾಪಿತವಾದ ಸಣ್ಣ ಪ್ರಮಾಣದ ಆದಾಯ ಉತ್ಪಾದಿಸುವ ಯೋಜನೆಗಳನ್ನು ಕೇಂದ್ರೀಕರಿಸುತ್ತದೆ. ಆದಾಯ ಉತ್ಪಾದನೆ ಯೋಜನೆಯ ಅನುಷ್ಠಾನದಲ್ಲಿ ಮಹಿಳೆಯರ ಸಂತಾನೋತ್ಪತ್ತಿ ಹೊರೆಯನ್ನು ನಿರ್ಲಕ್ಷಿಸಲಾಗಿದೆ. ಅವರಿಗೆ ಸಾಕಷ್ಟು ವಿರಾಮದ ವೇಳೆ ಇರುತ್ತದೆಂದು ಭಾವಿಸಲಾಗಿದೆ. ಆದರೆ ಆದಾಯ ಉತ್ಪಾದನ ಯೋಜನೆಗಳು ಮಹಿಳೆಯರ ಕೆಲಸದ ಅವಧಿಯನ್ನು ಹಾಗೂ ಕೆಲಸದ ಹೊರೆಯನ್ನು ಅಧಿಕಗೊಳಿಸುತ್ತವೆ. ಇದು ಮಹಿಳೆಯರ ಸಾಂಪ್ರದಾಯಿಕ ಪಾತ್ರಗಳ ಗ್ರಹಿಕೆಯನ್ನೇ ಹೊಂದಿದ್ದು, ಮಹಿಳೆಯ ಸಾಂಪ್ರದಾಯಿಕ ಚಟುವಟಿಕೆಗಳಿಂದಲೇ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ ನಡೆಸಿದೆಯೇ ಹೊರತು ಅವರನ್ನು ನೂತನ ಕೆಲಸಗಳಿಗೆ ಪರಿಚಯಿಸುವ ಪ್ರಯತ್ನ ನಡೆಸಿರುವುದಿಲ್ಲ.ಆದರೂ ಈ ಸಣ್ಣ ಪ್ರಮಾಣದ ಈ ಯೋಜನೆಗಳು ಸ್ವ-ಬೆಳವಣಿಗೆಯನ್ನು ಹೆಚ್ಚಿಸುವಲ್ಲಿ ಅಲ್ಪಸಾಮರ್ಥ್ಯ ಹೊಂದಿದ್ದು, ಆರ್ಥಿಕವಾಗಿ ದುರ್ಬಲವಾಗಿರುವ ಕಾರಣ ಬಡತನ ಕಡಿಮೆಗೊಳಿಸಲು ಹಾಗೂ ಮಹಿಳೆಯರ ಜೀವನಾಧಾರ ಸುಧಾರಿಸಲು ವಿಫಲವಾಗಿದೆ.

## ದಕ್ಷತಾ ದೃಷ್ಟಿಕೋನ

ಇದರ ಹೆಸರೇ ಸೂಚಿಸುವಂತೆ ಮೂರನೆಯ ಜಗತ್ತಿನ ಮಹಿಳೆಯರು ಅಧಿಕ ದಕ್ಷತೆ ಹಾಗೂ ಪರಿಣಾಮಕಾರಿಯಾದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದನ್ನು ಪ್ರತಿಪಾದಿಸುತ್ತದೆ. ಆರ್ಥಿಕ ಬೆಳವಣಿಗೆ ಮತ್ತು ಮಹಿಳೆಯರ ಜೀವನೋಪಾಯ ಸಾಮರ್ಥ್ಯವನ್ನು ಹೆಚ್ಚಿಸುವುದು ಈ ದೃಷ್ಟಿಕೋನದ ಗುರಿ. ಅಭಿವೃದ್ಧಿ ಪ್ರಯತ್ನಗಳು ಹೆಚ್ಚಾಗಬೇಕಾದರೆ ಅಥವಾ ಯಶಸ್ವಿಯಾಗಬೇಕಾದರೆ ಮಹಿಳೆಯ ಉತ್ಪಾದನೆಯಲ್ಲಿ ಭಾಗವಹಿಸುವಿಕೆದರ ಹೆಚ್ಚಳವಾಗಬೇಕೆಂಬುದು ಈ ದೃಷ್ಟಿಕೋನದ ಊಹೆ. 1970ರ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮಧ್ಯಭಾಗದ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯ ಸಂದರ್ಭದಲ್ಲಿ ದಕ್ಷತೆ ವಿಧಾನಕ್ಕೆ ಮಹತ್ವ ನೀಡಲಾಯಿತು ಹಾಗೂ ಮಹಿಳೆಯನ್ನು ಆರ್ಥಿಕ ಕಾರ್ಯಕರ್ತರೆಂದು ಪರಿಗಣಿಸಲಾಯಿತು. 1980ರಲ್ಲಿ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಮತ್ತು ಎಸ್‌ಎಪಿ ರಚನೆ ಮಾಡಿದ ಅಭಿವೃದ್ಧಿ ಡಿಸೈನ್‌ನಲ್ಲಿಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ದಕ್ಷತೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು ಇದರ ಉದ್ದೇಶಗಳಾಗಿದ್ದವು.

ನವಉದಾರವಾದಿ ಚಿಂತನೆಯನ್ನು ಹೊಂದಿದ ಯೋಜನಾ ಕಾರ್ಯಕರ್ತರು ಈ ದೃಷ್ಟಿಕೋನದ ಯೋಜನೆಗಳಿಗೆ ಜವಾಬ್ದಾರರು. ಇವರು ಆರ್ಥಿಕ ಚೇತರಿಕೆಯಲ್ಲಿ ಮಹಿಳೆಯರನ್ನು ಪ್ರಮುಖ ಪಾತ್ರದಾರಿಗಳನ್ನಾಗಿ ಪರಿಗಣಿಸಲಿಲ್ಲ. ಈ ದೃಷ್ಟಿಕೋನವು ಮಹಿಳೆಯರ ಸ್ಥಾನಮಾನವನ್ನು ಪ್ರಾಥಮಿಕವಾಗಿ ಆರ್ಥಿಕ ನೆಲೆಯಲ್ಲಿಯೆ ಪರಿಗಣಿಸಲಾಗಿದೆ ಹೊರತು ಅವರನ್ನು ಸಮಾನತೆಯ ಅಂಶವಾಗಿ ನೋಡಿಲ್ಲ. ಈ ವಿಧಾನದ ಯೋಜನೆಸ್ವಸಹಾಯ ಸಂಘಗಳ ಅಂಶಗಳೆಡೆ ಗಮನಹರಿಸಿದೆ ಮತ್ತು ಮಹಿಳೆಯರು ಸ್ವಸಹಾಯ ಸಂಘದ ಸದಸ್ಯರಾಗಿ ಸಮುದಾಯಕ್ಕೆ ವಿವಿಧ ಸೇವೆಗಳನ್ನು ಸಲ್ಲಿಸುತ್ತಿರುವುದರ ಕುರಿತು ತಿಳಿಸುತ್ತದೆ.

ಈ ದೃಷ್ಟಿಕೋನದ ಕುರಿತು ಹಲವಾರು ವಿಮರ್ಶೆಗಳು ಬಂದಿವೆ. ಅಭಿವೃದ್ಧಿ ಪ್ರಕ್ರಿಯೆಯ ಯಶಸ್ಸಿಗೆ ಮಹಿಳೆಯರನ್ನು ಒಟ್ಟುಗೂಡಿಸುವುದು ಅವಶ್ಯಕ ಎನ್ನುವ ಊಹೆಯನ್ನು ಪ್ರಶ್ನಿಸಲಾಗಿದೆ. ಇದಕ್ಕೆ ಕಾರಣ ಈ ವಿಧಾನವು ಆರ್ಥಿಕ ಸ್ಥಿತಿ ಹಾಗೂ ಮಹಿಳೆಯರ ಸ್ಥಾನಮಾನವನ್ನು ಅಗತ್ಯವಾಗಿ ಸುಧಾರಿಸುವುದಿಲ್ಲ ಎನ್ನುವ ವಾಸ್ತವ. ಅದಲ್ಲದೇ ಈ ವಿಧಾನವು ಪ್ರತಿಬಾರಿಯೂ ಅಧಿಕ ಲಿಂಗ ಸಮಾನತೆ ಹಾಗೂ ಎಲ್ಲ ಮಹಿಳೆಯರಿಗೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವಿದೆ ಎಂದು ಮಹಿಳೆಯರ ಭಾಗವಹಿಸುವಿಕೆಯನ್ನು ತಪ್ಪಾಗಿ ಅರ್ಥೈಸಲಾಗುತ್ತದೆ. ಮಹಿಳೆಯರ ಜೀವನದ ಉತ್ಪಾದನೆ ಹಾಗೂ ಸಂತಾನೋತ್ಪತ್ತಿಯ ನಡುವಿರುವ ಅಂತರ ಸಂಬಂಧವನ್ನು ನಿರ್ಲಕ್ಷಿಸಿರುವುದೆಂದು ಟೀಕಿಸಲಾಗಿದೆ. ಇದಲ್ಲದೆ ಮಹಿಳಾ ಶ್ರಮದ ಪುನರ್ ಚೈತನ್ಯ ಶಕ್ತಿಯ ಮೇಲೆ ಅತಿಯಾದ ಅವಲಂಬನೆ ಹೊಂದಿದೆ. ಅತಿಯಾದ ದೀರ್ಘಕೆಲಸದ ಅವಧಿ ಹಾಗೂ ವೇತನರಹಿತ ಕೆಲಸ. ಜೊತೆಗೆ ಇವರನ್ನು ಮನುಷ್ಯರನ್ನಾಗಿ ಪರಿಗಣಿಸದೇ ಕೇವಲ ಅಭಿವೃದ್ಧಿಗೆ ಅನುಕೂಲ ಮಾಡುವವರು ಎಂದು ತಿಳಿಸುತ್ತದೆ. ಮಹಿಳೆಯರನ್ನು ಇತರೆ ಅಭಿವೃದ್ಧಿ ಉದ್ದೇಶಗಳಿಗಾಗಿ ಪರಿಗಣಿಸಿ ಅವರಿಗೆ ದೊರೆಯುವ ಹಕ್ಕುಗಳನ್ನು ಪರಿಗಣಿಸದೆ ನೋಡುವ ಈ ದೃಷ್ಟಿಕೋನವಿವಾದಕ್ಕೆ ಒಳಗಾಯಿತು.

## ಸಬಲೀಕರಣ ದೃಷ್ಟಿಕೋನ

ಸಬಲೀಕರಣ ವಿಧಾನವು ಕೇವಲ ಇತ್ತೀಚಿನ ವಿಧಾನವಾಗಿದ್ದು, ಇದನ್ನು 1980ರಲ್ಲಿ ಸ್ತ್ರೀವಾದಿಗಳು ಹಾಗೂ ದಕ್ಷಿಣದ ಪ್ರಗತಿಪರರು ಪ್ರಾರಂಭಿಸಿದರು. ಆದ್ದರಿಂದ ಈ ಸಿದ್ಧಾಂತದಲ್ಲಿ ದಕ್ಷಿಣದ ವಾಸ್ತವತೆಗಳು ಅಡಗಿವೆ. ಈ ವಿಧಾನವು ಲಿಂಗ ಹಾಗೂ ಅಭಿವೃದ್ಧಿಯ ಆಯಾಮದಿಂದ ರಚಿಸಲಾಗಿದೆ. ಇದು 'ಕೆಳಗಿನಿಂದ ಮೇಲೆತ್ತು', 'ಬಾಟಮ್ ಅಪ್' ಮತ್ತು ಪಾತ್ರಗಳ ಆಧಾರಿತ ತಂತ್ರವಾಗಿದೆ. ಮಹಿಳೆಯರು ಅಸಮಾತೆಯನ್ನು ಭಿನ್ನವಾಗಿ ಅನುಭವಿಸುತ್ತಾರೆ ಎಂಬುದನ್ನು ಈ ದೃಷ್ಟಿಕೋನ ಗುರುತಿಸಿತು. ಇದು ಅಂದರೆ ವರ್ಗ, ವರ್ಣ, ಜನಾಂಗ, ಜಾತಿ, ವಯಸ್ಸು, ವಸಾಹತುಶಾಹಿ, ನವವಸಾಹತುಶಾಹಿಯನ್ನು ಅವಲಂಬಿಸಿದೆ. ಮಹಿಳೆಯ ಮೇಲೆ ನಡೆಯುವ ಹಿಂಸೆಯು ವಿವಿಧ ಹಂತದಲ್ಲಿ, ವಿವಿಧ ಬಗೆಯಲ್ಲಿ, ವಿವಿಧ ಸಂದರ್ಭಗಳಲ್ಲಿ ನಿರ್ಧಾರವಾಗುತ್ತದೆ. ಮಹಿಳೆ ಮತ್ತು ಪುರುಷರಲ್ಲಿನ ಅಸಮಾನತೆಯು ಕೇವಲ ಅವರ ನಡುವಿನ ಸಂಬಂಧದಿಂದ ಮಾತ್ರ ಬರುವುದಿಲ್ಲ, ಸಮಾಜದಲ್ಲಿನ ಇತರ ಸಂಬಂಧ ಮತ್ತು ರಚನೆಗಳಿಂದ ಬರುತ್ತದೆ ಎಂದು ಭಾವಿಸುತ್ತದೆ.

ಮಹಿಳೆಯರನ್ನು ನಿಯಂತ್ರಣಗೊಳಿಸುವ ಹಾಗೂ ಪುರುಷರಿಗೆ ಒಲವು ತೋರುವ ಸಾಮಾಜಿಕ ಸಂಸ್ಥೆಗಳು ಹಾಗೂ ಸಂಬಂಧಗಳು ಮಹಿಳೆಯರಿಗೆ ಕಾಳಜಿ ತೋರುವುದಕ್ಕಿಂತಲೂ ಪ್ರತ್ಯೇಕ ಗುಂಪಾಗಿ ಪರಿಗಣಿಸಿವೆ. ಆದ್ದರಿಂದ ಲಿಂಗಸಂಬಂಧಗಳು ಮತ್ತು ಅಧಿಕಾರ, ಮಹಿಳಾ ಸಬಲೀಕರಣದ ಮಹತ್ವ, ಪ್ರತ್ಯೇಕತೆ ಮತ್ತು ತಮ್ಮ ಸ್ವ ಜೀವನವನ್ನು ಸ್ವಕ್ರಮ ಮಾರ್ಗದಲ್ಲಿ ನಿಯಂತ್ರಣದಲ್ಲಿ ತೆಗೆದುಕೊಳ್ಳುವ ಕುರಿತು ಈ ವಿಧಾನವು ಗಮನಹರಿಸುತ್ತದೆ. ಸಬಲೀಕರಣದ ಮೂಲಕ ಮಹಿಳೆಯರು ಪುರುಷರೊಂದಿಗೆ ಹೆಚ್ಚಿನ ಸಮಾನತೆ ಹೊಂದುತ್ತಾರೆಂದು ಈ ವಿಧಾನವು ಊಹಿಸಿದೆ. ಆದ್ದರಿಂದ ಮಹಿಳಾ ಸಬಲೀಕರಣದ ಮಾರ್ಗವೆಂದರೆ ರಾಜಕೀಯದಲ್ಲಿ ತೊಡಗುವಿಕೆ, ಜಾಗೃತಿಗೊಳ್ಳುವಿಕೆ ಹಾಗೂ ಶಿಕ್ಷಣ ಮತ್ತು ಆದಾಯ ಗಳಿಕೆಯ ಅವಕಾಶಗಳು. ಇದರ ಉದ್ದೇಶ ನೀತಿ ಪ್ರಕ್ರಿಯೆ ಹಾಗೂ ಅಭಿವೃದ್ಧಿ ತಂತ್ರವನ್ನು ಪರಿವರ್ತನೆಗೊಳಿಸುವುದಾಗಿದೆ.

ಮಹಿಳೆ ಮತ್ತು ಅಭಿವೃದ್ಧಿ ಪ್ರಯತ್ನದಲ್ಲಿ ತೊಡಗಿರುವ ಇತರ ನೀತಿ ಮತ್ತು ವಿಧಾನಗಳನ್ನು ಸಬಲೀಕರಣ ವಿಧಾನವು ಕಾನೂನಾತ್ಮಕ ವಾಗಿಸಲು ಯತ್ನಿಸಿದೆ ಎಂದು ಹಲವು ವಿಮರ್ಶಕರ ನಿಲುವು.ಜ್ಯಾಕ್ಸನ್ "ಮಹಿಳೆಯರು ಜನಸಂಖ್ಯಾ ನಿಯಂತ್ರಣ, ಸಮರ್ಥನೀಯ ಅಭಿವೃದ್ಧಿ, ಬಡತನ ನಿರ್ಮೂಲನೆಯ ಸಾಧನವೆಂದು" (ಜಾಕ್ಸನ್ ಸಿ.ಮತ್ತು ಪಿಯರ್ಸನ್ ಆರ್., 1998, ಪು.157) ಸಬಲೀಕರಣ ವಿಧಾನವನ್ನು ವಿಮರ್ಶಿಸಿದ. ಇದಲ್ಲದೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳಾ ಸಬಲೀಕರಣದ ಯೋಚನೆಯು ಪುರುಷರು ತಮ್ಮ ನಿಯಂತ್ರಣವನ್ನು ಕಳೆದುಕೊಳ್ಳುತ್ತಾರೇನೋ ಎನ್ನುವ ಭಯ ಇರುವುದು ವ್ಯಕ್ತವಾಗುತ್ತಿದೆ ಎನ್ನಬಹುದು.

## ಪರಾಮರ್ಶನ ಗ್ರಂಥಗಳು


- **ಕಬೀರ್ ಎನ್. (1994) :** ಜಂಡರ್–ಅವೇರ್ ಪಾಲಿಸಿ ಪ್ಲಾನಿಂಗ್: ಎ ಸೋಶಿಯಲ್ ರಿಲೇಶನ್ಸ್ ಪರ್‌ಸ್ಪೆಕ್ಟಿವ್. ಇನ್ ಎಂ. ಮ್ಯಾಕ್ ಡೊನಾಲ್ಡ್(ಇಡಿ) ಜಂಡರ್ ಪ್ಲಾನಿಂಗ್ ಇನ್ ಡೆವಲ್‌ಪ್‌ಮೆಂಟ್ ಏಜೆನ್ಸಿ: ಆಕ್ಸ್‌ಫ್ಯಾಮ್: ಆಕ್ಸ್‌ಫರ್ಡ್, ಪು.80–97
- **ಫೋರೈತಿ ಪಿ.ಮತ್ತು ಬೆಲಾಂಜರ್ ಸಿ., (1996) :** ವುಮನ್, ವರ್ಕ್ ಆ್ಯಂಡ್ ಜಂಡರ್ ರಿಲೇಷನ್ಸ್ ಇನ್ ಡೆವಲಪಿಂಗ್ ಕಂಟ್ರೀಸ್: ಎ ಗ್ಲೋಬಲ್ ಪರ್ಸ್‌ಪೆಕ್ಟಿವ್: ಗ್ರೀನ್‌ವುಡ್ ಪ್ರೆಸ್, ಕನೆಕ್ಟಿಕಟ್, ಪು.92.
- **ಜಾಕ್ಸನ್ ಸಿ. ಆ್ಯಂಡ್ ಪಿಯರ್ಸನ್ ಆರ್, (1998) :** ಫೆಮಿನಿಷ್ಟ ವಿಜನ್ ಆಫ್ ಡೆವಲಪ್‌ಮೆಂಟ್: ಜಂಡರ್ ಅನಾಲಿಸಿಸ್ ಆ್ಯಂಡ್ ಪಾಲಿಸಿ: ರೂಟ್ಲೆಡ್ಜ್, ನ್ಯೂಯಾರ್ಕ್, ಪು. 33–157.
- **ದೇಸಾಯಿ ವಿ. ಆ್ಯಂಡ್ ಪಾಟರ್, ಆರ್(ಇಡಿ), (2002) :** ದಿ ಕಂಪ್ಯಾನಿಯನ್ ಟು ಡೆವಲಪ್‌ಮೆಂಟ್ ಸ್ಟಡೀಸ್: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಯಾರ್ಕ್, ಪು. 126–174.
- **ಫರ್ನಾಂಡೀಸ್–ಕೆಲ್ಲಿ ಎಮ್., (1991) :** ದ ಸೆಕ್ಸುವಲ್ ಡಿವಿಜನ್ ಆಫ್ ಲೇಬರ್, ಡೆವಲಪ್‌ಮೆಂಟ್, ಆ್ಯಂಡ್ ವುಮನ್ ಸ್ಟೇಟಸ್: ಕರೆಂಟ್ ಅಂಥ್ರೊಪಾಲಜಿ 22(4), ಪು. 414–419.
- **ಬುವಿನಿಕ್ ಎಮ್., ಲೈಸೆಟ್ ಎ.ಆ್ಯಂಡ್ ವಿಲಿಯಂ ಪಿ., (1983) :** ವುಮೆನ್ ಆ್ಯಂಡ್ ಪಾವರ್ಟಿ ಇನ್ ದ ಥರ್ಡ್‌ವರ್ಲ್ಡ್: ಜಾನ್ ಹಾಪ್ಕಿನ್ಸ್ ಯೂನಿವರ್ಸಿಟಿ ಪ್ರೆಸ್, ಬಾಲ್ಟಿಮೋರ್ ಪು. 137–158.
- **ಬೋಸ್ತರಪ್ ಇ., (1970) :** ವುಮನ್ಸ್ ರೋಲ್ ಇನ್ ಎಕನಾಮಿಕ್ ಡೆವಲಪ್‌ಮೆಂಟ್: ಜಾರ್ಜ್ ಅಲೆನ್ ಉರ್ವಿನ್, ಲಂಡನ್, ಪು.138–148.
- **ಮೋಸರ್ ಸಿ., (1993) :** ಜಂಡರ್ ಪ್ಲಾನಿಂಗ್ ಆ್ಯಂಡ್ ಡೆವಲಪ್‌ಮೆಂಟ್: ಥಿಯರಿ, ಪ್ರಾಕ್ಟಿಸ್ ಆ್ಯಂಡ್ ಟ್ರೈನಿಂಗ್: ರೂಟ್‌ಲೆಡ್ಜ್, ಲಂಡನ್, ಪು.178–213.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ನಾಡೋಜ ಪಂಪ : ಪರಿಚಯಾತ್ಮಕ ಅವಲೋಕನ

✍ **ಕುರುಬರ ಗಾದಿಲಿಂಗಪ್ಪ,** ಸಂಶೋಧನಾ ವಿದ್ಯಾರ್ಥಿ, ಡಾ. ಡಿ. ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಸ್ವಾತಂತ್ರ್ಯ ಪೂರ್ವ ಮತ್ತು ಭಾಷಾವಾರು ರಾಜ್ಯಗಳ ವಿಂಗಡನೆಯಾಗುವ ಮೊದಲೇ ಪ್ರಾರಂಭವಾಗಿದ್ದ ಪ್ರಾಂತಪ್ರದೇಶಗಳನ್ನು ಗುರುತಿಸಿಕೊಳ್ಳುವ, ಆಯಾ ಭಾಷೆಗಳನ್ನು ಮಾತನಾಡುವ ಜನರನ್ನೂ, ಆ ಜನರ ಪ್ರದೇಶಗಳನ್ನೂ ಒಂದು ಕಡೆ ಸೇರಿಸುವ ಪ್ರಯತ್ನಗಳು ಕನ್ನಡಿಗರಲ್ಲಿ ಪ್ರಾರಂಭವಾಗುವ ಮುಂಚೆಯೇ ತೆಲುಗು ಮತ್ತು ತಮಿಳು ಭಾಷಿಕರಲ್ಲಿ ಶುರುವಾಗಿತ್ತು. ಅಲ್ಲದೇ ಅಂದಿನ ಅರಿಕೇಸರಿಯ ಕಾಲದಲ್ಲಿ ಕನ್ನಡ ಪ್ರಾಂತವಾಗಿದ್ದ ವೆಂಗಿಮಂಡಲವು ಎಂದೋ ಆಂಧ್ರರ ಪಾಲಾಗಿ ಹೋಯಿತ್ತಲ್ಲದೇ, 1930ರ ದಶಕದಲ್ಲಿ ಆಂಧ್ರ ಚಾರಿತ್ರಿಕ ಸಂಶೋಧಕ ಸಂಘದ ಲೇಖಕರು "ವೆಂಗಿಪುರದ ಆಂಧ್ರಬ್ರಾಹ್ಮಣನಾದ ಪಂಪನು ಚಾಳುಕ್ಯವಂಶದ ಎರಡನೆಯ ಅರಿಕೇಸರಿಯ ಆಸ್ಥಾನವನ್ನೊಂದಿದವನು" ಎಂದು ಹೇಳುವ ಮೂಲಕ ಪಂಪನನ್ನು ಆಂಧ್ರದವನ್ನಾಗಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದರು. ಈ ಕಾಲದಲ್ಲಿ ಪಂಪನ ಸರಿಯಾದ ನೆಲೆಯನ್ನು ಗುರುತಿಸಿ, ಆತ ಕನ್ನಡದವನು ಎಂದು ಸಾಬೀತು ಮಾಡಬೇಕಾದ ಅನಿವಾರ್ಯ ಕಾಲಘಟ್ಟದಲ್ಲಿ ಮುಳಿಯ ತಿಮ್ಮಪ್ಪಯ್ಯನವರು ಕನ್ನಡಿಗರ ಅಸ್ಮಿತೆಯಾಗಿ ಪಂಪನನ್ನು ಮುಂದಿಟ್ಟ ಕಾರ್ಯವು ಮೆಚ್ಚುವಂತಹದ್ದು. "ನಾಡೋಜ ಪಂಪನ ಹೊಲಬನ್ನರಿತು ಕನ್ನಡ ಸಾಹಿತ್ಯದಲ್ಲವನ ನೆಲೆಯನ್ನೂಹಿಸಿಕೊಳ್ಳುವುದೇ ಈ ಪ್ರಬಂಧೋದ್ದೇಶ" ಎಂದು ತಿಮ್ಮಪ್ಪಯ್ಯನವರು ತಮ್ಮ ನಾಡೋಜ ಪಂಪ ಕೃತಿಯ ಉದ್ದೇಶವನ್ನು ಖಚಿತಪಡಿಸಿದ್ದಾರೆ. ಪಂಪನ ಕಾಲ, ದೇಶ, ಆತನ ಪೂರ್ವಜರ ಚರಿತ್ರೆ; ಆಶ್ರಯದಾತನಾದ ಇಮ್ಮಡಿ ಅರಿಕೇಸರಿಯ ವಂಶಜರ ಚರಿತ್ರೆಯ ನಿರೂಪಣೆ; ವೆಂಗಿಮಂಡಲ ಪ್ರದೇಶದ ವ್ಯಾಪ್ತಿ; ಸಮಸ್ತಭಾರತ ಮತ್ತು ಅದರ ಕಾಲ; ಪಂಪನ ದೇಸಿ, ಅವನ ಇತಿಹಾಸ ದರ್ಶನ; ಈ ಮೊದಲಾದ ಸಂಗತಿಗಳನ್ನು ಪ್ರಸ್ತುತ ಗ್ರಂಥದ ಪ್ರಥಮ ಭಾಗದಲ್ಲಿ ತಿಮ್ಮಪ್ಪಯ್ಯನವರು ಚಾರಿತ್ರಿಕ ದೃಷ್ಟಿಪ್ರಜ್ಞೆಯ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ. ಇನ್ನು, ದ್ವಿತೀಯ ಭಾಗದಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಚೌಕಟ್ಟಿನಲ್ಲಿ ಮಹಾಕಾವ್ಯ, ಲಘುಕಾವ್ಯಗಳ ಲಕ್ಷಣಗಳನ್ನು ಚರ್ಚಿಸಿ, ಪಂಪನ ಆದಿಪುರಾಣವನ್ನು ರಸತತ್ವದ ಜಿಜ್ಞಾಸೆಯ ಹಿನ್ನೆಲೆಯಲ್ಲಿ ಹಾಗೂ ವಿಕ್ರಮಾರ್ಜುನವಿಜಯಂ ಕಾವ್ಯವನ್ನು ಸಮಸ್ತಭಾರತದ ಶೈಲಿಯ ಹಿನ್ನೆಲೆಯಲ್ಲಿ ವಿಮರ್ಶೆಗೆ ಒಳಪಡಿಸಿದ್ದಾರೆ.

ಪೀಠಿಕಾ ಭಾಗದಲ್ಲಿ ತಿಮ್ಮಪ್ಪಯ್ಯನವರು "ಸಂಸ್ಕೃತಕ್ಕೆ ವಾಲ್ಮೀಕಿಯಂತೆ ಕನ್ನಡಕ್ಕೆ ಪಂಪನು" ಎಂದು ಕರೆದು, ಪಂಪನಿಗೆ ವಿಕ್ರಮಾರ್ಜುನವಿಜಯಂ ಮಹಾಕಾವ್ಯದ ರಚನೆಗೆ ಯಾವುದು ಸ್ಫೂರ್ತಿಯಾಗಿರಬಹುದು ಎಂದು ಚರ್ಚಿಸುತ್ತ, "ವಾಲ್ಮೀಕಿ ನಿಷಾದನ ಕ್ರೌಂಚ ವಧದಿಂದ ಉದ್ಬುದ್ಧನಾಗಿ ರಾಮಾಯಣವನ್ನು ಹಾಡಿದನು. ಪಂಪನು ಅರ್ಜುನಕಥಾ ಪ್ರೇರಿತನಾಗಿ ಅರಿಕೇಸರಿಯ ಚರಿತವಾದ ಸಮಸ್ತಭಾರತವನ್ನು ಬಣ್ಣಿಸಿದನು. ರಾಮನಿಗೆ ವಿಶುದ್ಧ ಬುದ್ಧಿಯನ್ನು ಆದಿ ಕವೀಶ್ವರವಾಣಿ ಬೋಧಿಸಿದರೆ, ಪಂಪನ ಮುಖ ಪದ್ಮರಂಗದ ಸರಸ್ವತಿ ಅರಿಗಂಗೆ ವಿಶುದ್ಧ ಬುದ್ಧಿಯಂ ನೀಡಿತು"(ಪು; 10–11) ಎಂಬ ತೀರ್ಮಾನಕ್ಕೆ ಬರುತ್ತಾರೆ. ಮುಂದುವರಿದು, ವಾಲ್ಮೀಕಿಯ ರಾಮಾಯಣದ ಹರವು ಮತ್ತು ಪಂಪನ ವಿಕ್ರಮಾರ್ಜುನ ವಿಜಯಂ ಮಹಾಕಾವ್ಯದ ಹರವನ್ನು ವಿವೇಚಿಸುತ್ತ, ರಾಮಾಯಣದಲ್ಲಿ "ನಿಷಾದನ ಕತೆ ಆದಿಯಲ್ಲಿ ಹೊಳೆದು, ಮತ್ತೆ ಮಾಸಿಹೋಗಿ, ಪ್ರಕೃತವಾದ ರಾಮನಕತೆಯೇ ನೆಲೆಗೊಂಡಿದೆ: ಇಲ್ಲಿ ಅರಿಕೇಸರಿಯ ಕತೆ ಅಲ್ಲಲ್ಲಿ ಹೊಳೆಯುತ್ತಾ ಕಡೆಗೆ ನೆಲೆವಡೆದರೂ ಅಪ್ರಕೃತವಾದ ಅರ್ಜುನನ ಕಥಾನಕವೆ ಕಾವ್ಯ ವಿಷಯವಾಗಿದೆ... ಅವನು ನಮ್ಮ ಮಾತೃ ಭೂಮಿಯ ದೇವವಾಣಿಗೆ ಆದಿಕವಿ, ಈ ನಾಡೋಜನು ಕನ್ನಡ ನಾಲ್ನುಡಿಗೆ ಆದಿಕವಿ"(ಪು–11) ಎಂದು ಸಾರುವ ಮೂಲಕ ಪಂಪಭಾರತ ಕಥೆಯ ಒಳತಿರುಳು ಏನು ಎಂಬುದನ್ನು ಪ್ರಾರಂಭದಲ್ಲಿ ಪ್ರಸ್ತಾಪಿಸಿ, ಮುಂದೆ 'ಸಮಸ್ತಭಾರತ ಅದರ ಕಾಲ' ಭಾಗದಲ್ಲಿ ವಿಸ್ತರಿಸಿದ್ದಾರೆ.

ಚಾಳುಕ್ಯ ಮತ್ತು ರಾಷ್ಟ್ರಕೂಟರ ವಂಶಸಂಬಂಧಗಳು ಹೇಗೆ ರಚನೆಗೊಂಡಿದ್ದವು? ಚಾಳುಕ್ಯರ ಶಾಖೆಗಳಲ್ಲಿ ಒಂದಾದ ವೇಮುಲವಾಡದ ಅರಿಕೇಸರಿಯ ವಂಶಚರಿತ್ರೆ ಏನು? ಈ ವಂಶಜ ಅರಸರ ಗುಣಸ್ವಭಾವ, ಪ್ರತಾಪ ಮತ್ತು ಪ್ರಭಾವ ಹೇಗಿತ್ತು? ವೇಮುಲವಾಡದ ಚಾಳುಕ್ಯರು ಯಾವಾಗ ರಾಷ್ಟ್ರಕೂಟ ಸಾಮಂತರಾದರು? ಮೊದಲಾದ ಸಂಗತಿಗಳನ್ನು 'ಚಾಳುಕ್ಯ ವಂಶವೂ ಅರಿಕೇಸರಿಯ ಕುಲಶಾಖೆಯೂ' ಎನ್ನುವ ಭಾಗದಲ್ಲಿ ತಿಮ್ಮಪ್ಪಯ್ಯನವರು ಚರ್ಚಿಸಿರುವರು. 'R.G.Bhandarkar, Early History of the Dekkan (1884)' ಈ ಕೃತಿಯ ಆಧಾರದಿಂದ ಚಾಳುಕ್ಯರ ಮತ್ತು ರಾಷ್ಟ್ರಕೂಟರ ವಂಶಶಾಖೆಗಳನ್ನು ಉಲ್ಲೇಖಿಸಿರುವರು. ಪಂಪಭಾರತದ ವಿಶ್ಲೇಷಣೆಯಲ್ಲಿ ಚಾಳುಕ್ಯ ವಂಶವೃಕ್ಷವನ್ನು ಇವರು ನೀಡಿರುವುದರ ಹಿಂದೆ ಒಂದು ನಿರ್ದಿಷ್ಟ ಉದ್ದೇಶವಿದೆ. ತನ್ನ ವಿಕ್ರಮಾರ್ಜುನವಿಜಯಂ ಕಾವ್ಯವನ್ನು 'ಸಮಸ್ತಭಾರತ' ಎಂದು ಪಂಪ ಕರೆದಿದ್ದರ ನೆಲೆಯನ್ನು ಅನ್ವೇಷಿಸುವುದೇ ಆ ಉದ್ದೇಶವಾಗಿದೆ. ಪಂಪನು ಆ ಮಹಾಕಾವ್ಯದ ಪ್ರಾರಂಭದ ಭಾಗದಲ್ಲಿ ಅರಿಕೇಸರಿಯ ವಂಶಾವಳಿಯನ್ನು ನೀಡಿರುವನು. ಇದು ಎಷ್ಟರ ಮಟ್ಟಿಗೆ ನಂಬಲರ್ಹ ಐತಿಹಾಸಿಕ ದಾಖಲೆಯಾಗಬಹುದು ಎಂಬ ಸಂಶಯವು ವಿದ್ವಾಂಸರನ್ನು ಕಾಡಿದ್ದಿದೆ. ಯಾವಾಗ ಪಂಪನ ಆಶ್ರಯದಾತನಾದ ಎರಡನೇ ಅರಿಕೇಸರಿಯ 'ವೇಮುಲವಾಡ ಶಾಸನ' ಹಾಗೂ ಆತನ ಮೊಮ್ಮಗನಾದ ಮೂರನೇ ಅರಿಕೇಸರಿಯ 'ಪರಭಣಿ ತಾಮ್ರಶಾಸನ'ಗಳು ದೊರೆತವು, ಆಗ ಇದರ ಬಗ್ಗೆ ಇದ್ದ ಸಂಶಯವು ಸಹಜವಾಗಿಯೇ ದೂರವಾಯಿತು. ಶಾಸನೋಕ್ತ ಅರಿಕೇಸರಿಯ ವಂಶಾವಳಿಯು ಮತ್ತು ಪಂಪನು ಪಂಪಭಾರತದಲ್ಲಿ ನೀಡಿರುವ ವಂಶಾವಳಿಯು ಬಹುಪಾಲು ಸಂವಾದಿಯಾಗಿರುವದನ್ನು ಕೊಟ್ಟು, ವಿಸಂವಾದಿ ಆಗಿರುವ ಅಂಶಗಳನ್ನು ತಿಮ್ಮಪ್ಪಯ್ಯನವರು ಚರ್ಚಿಸಿರುವರು. ಇಲ್ಲಿ ಪಂಪನು ವಿಕ್ರಮಾರ್ಜುನವಿಜಯಂ ಕಾವ್ಯದ ಆದಿಯಲ್ಲಿ ಅರಿಕೇಸರಿಯ ವಂಶಶಾಖೆಯನ್ನು 'ಯುದ್ಧಮಲ್ಲನಿಂದ ಅರಿಕೇಸರಿ–II' ವರೆಗೆ ನೀಡಿದರೇ, ವೇಮುಲವಾಡ ಶಾಸನವು 'ಯುದ್ಧಮಲ್ಲನಿಂದ ಅರಿಕೇಸರಿ–II' ವರೆಗೆ, ಪರಭಣಿ ತಾಮ್ರಶಾಸನ 'ಯುದ್ಧಮಲ್ಲನಿಂದ ಅರಿಕೇಸರಿ–III' ವರೆಗೆ ವಂಶವೃಕ್ಷವನ್ನು ನೀಡುತ್ತವೆ. ಇವರಲ್ಲಿ ಪ್ರಾರಂಭದ ಯುದ್ಧಮಲ್ಲ ಮತ್ತು ಒಂದನೆಯ ಅರಿಕೇಸರಿಯವರು ಪ್ರತಾಪಿಗಳು, ಶೂರರು ಆಗಿದ್ದರಲ್ಲದೇ ಇವರು ತಮ್ಮ ಜೀವಿತಾವಧಿಯಲ್ಲಿ ರಾಷ್ಟ್ರಕೂಟರಿಗೆ ತಲೆಬಾಗಲಿಲ್ಲ, ಸಾಮಂತರಾಗಿರಲಿಲ್ಲ. ಆದರೆ, ಬದ್ದೆಗನ ಕಾಲಕ್ಕೆ ಪ್ರತಾಪಗಳು ಕುಗ್ಗಿ, ಎರಡನೇ ನರಸಿಂಹನ ಕಾಲದಲ್ಲಿ ರಾಷ್ಟ್ರಕೂಟರ ಸಾಮಂತರಾದರು. ಇವನ ಮಗ ಎರಡನೇ ಅರಿಕೇಸರಿಯು ಇವರ ಸಾಮಂತನಾಗಿದ್ದರು ಕೂಡ ಪ್ರಾರಂಭದ ತಮ್ಮ ಪೂರ್ವಜರಂತೆ ಪ್ರತಾಪಿಯಾಗಿದ್ದನಲ್ಲದೆ ಆಗಿನ ರಾಷ್ಟ್ರಕೂಟರ ದೊರೆಯಾಗಿದ್ದ ಗೊಜ್ಜಿಗ(ಗೋವಿಂದ–III)ನನ್ನು ಎದುರಿಸಿದ ವಿಚಾರಗಳು ವ್ಯಕ್ತವಾಗಿವೆ. ಎರಡನೆಯ ನರಸಿಂಹ ಮತ್ತು ಜಾಕವ್ವೆಯರ(ಇಂದ್ರನ ತಂಗಿ) ವಿವಾಹ, ಎರಡನೆಯ ಅರಿಕೇಸರಿ ಮತ್ತು ಲೋಕಾಂಬಿಕೆಯರ(ಗೋವಿಂದನ ತಂಗಿ)

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿವಾಹದ ಸಂಗತಿಗಳನ್ನು ತಿಮ್ಮಪ್ಪಯ್ಯನವರು ಚರ್ಚಿಸಿದ್ದಾರೆ. ಪಂಪನು ಎರಡನೆಯ ಅರಿಕೇಸರಿಯ ಹೆಂಡತಿಯ ಹೆಸರನ್ನು ನೇರವಾಗಿ ಕಾವ್ಯದಲ್ಲಿ ಎಲ್ಲಿಯೂ ಹೆಸರಿಸಿಲ್ಲ. ಆಕೆಯನ್ನು ವೇಮುಲವಾಡ ಶಾಸನ 'ರೇವಕನಿರ್ಮಡಿ' ಎಂದು, ಪರಭಣಿ ತಾಮ್ರಶಾಸನ 'ಲೋಕಾಂಬಿಕೆ' ಎಂದು ಹೆಸರಿಸಿವೆ. ತಿಮ್ಮಪ್ಪಯ್ಯನವರು ರೇವಕನಿರ್ಮಡಿಯೇ ಲೋಕಾಂಬಿಕೆ ಆಗಿರಬೇಕೆಂದು 'ಲೋಕಾಂಬಿಕೆ' ಪದದ ಸ್ವರೂಪ, ನಾಮನಿಷ್ಪತ್ತಿ ಮತ್ತು ವ್ಯುತ್ಪತ್ತಿಯ ಆಧಾರದಿಂದ ಸಾದರಪಡಿಸುತ್ತಾರೆ. "'ಲೋಕಾಂಬಿಕೆ' ಎಂಬುದೇ ಹಿರಿಯರು ಅವಳಿಗಿಟ್ಟ ಹೆಸರು, 'ರೇವಕನಿರ್ಮಡಿ' ಎಂಬುದು ತನ್ನ ಸೌಂದಯಾರ್ದಿ ಗುಣಗಳಿಂದ ಆಕೆ ಪಡೆದ ಹೆಸರು–ಎಂದು ಭಾವಿಸುವುದೇ ಉಚಿತವಾಗಿ ತೋರುತ್ತಿದೆ" (ಪು–48) ಎಂದು ಹೇಳುತ್ತಾರೆ. ಇದನ್ನು ಮುಂದೆ ಬಂದ ಬಹುಜನ ವಿದ್ವಾಂಸರು ಕೂಡ ಒಪ್ಪಿಕೊಂಡಿದ್ದಾರೆ. ಹೀಗೆ, ಒಂದನೆಯ ಅರಿಕೇಸರಿಯ ಕೊಲ್ಲಿಪಾರ ಶಾಸನ, ಎರಡನೆಯ ಅರಿಕೇಸರಿಯ ವೇಮುಲವಾಡ ಶಾಸನ, ಮೂರನೆಯ ಅರಿಕೇಸರಿಯ ಪರಭಣಿ ತಾಮ್ರಶಾಸನಗಳ ಮತ್ತು ವಿಕ್ರಮಾರ್ಜುನ ವಿಜಯಂ ಹಾಗೂ ಇತರ ಇತಿಹಾಸ ಗ್ರಂಥಗಳನ್ನು ಆಧರಿಸಿ ಪಂಪನ ಆಶ್ರಿತ ರಾಜನಾದ ಎರಡನೇ ಅರಿಕೇಸರಿಯ ವಂಶಶಾಖೆಯ ಚರಿತ್ರೆಯನ್ನು ಹಾಗೂ 225 ವರ್ಷಗಳು ರಾಷ್ಟ್ರಕೂಟಾಧಿಪತ್ಯದಲ್ಲಿ ಸಾಮಂತರಾಗಿದ್ದರೂ, ಇವರು ಹೇಗೆ ಸಬಲರಾಗಿದ್ದರು ಎಂಬ ಅಂಶಗಳನ್ನು ಶೋಧಿಸಿ, ವಿಶ್ಲೇಷಿಸುವ ಮೂಲಕ ವೇಮುಲವಾಡದ ಈ ಸಾಮಂತ ಅರಸರ ಚರಿತ್ರೆಯನ್ನು ವ್ಯವಸ್ಥಿತವಾಗಿ ತಿಮ್ಮಪ್ಪಯ್ಯನವರು ಕಟ್ಟಿಕೊಟ್ಟಿದ್ದಾರೆ.

ಮುಳಿಯ ತಿಮ್ಮಪ್ಪಯ್ಯನವರು ಪಂಪನ ವಂಶಾವಳಿಯ ಕಾಲವಿಚಾರಗಳನ್ನು ಚರ್ಚಿಸುತ್ತ, ಅವನ ಪೂರ್ವಜರಾದ ಮಾಧವ ಸೋಮಯಾಜಿ, ಅಭಿಮಾನಚಂದ್ರ, ಕೊಮರಯ್ಯ ಹಾಗೂ ಪಂಪನ ತಂದೆಯಾದ ಭೀಮಪ್ಪಯ್ಯ ಇವರೆಲ್ಲರ ಗುಣಸ್ವಭಾವ ಹೇಗಿತ್ತು? ಅವರ ಕುಟುಂಬದ ಸ್ಥಿತಿಗತಿಗಳು ಹೇಗಿದ್ದವು? ಪಂಪನ ಪೂರ್ವಜರಲ್ಲಿ ಯಾರು ಜೈನಧರ್ಮಕ್ಕೆ ಮತಾಂತರ ಹೊಂದಿದರು? ವಂಶಸ್ಥರ ಕುರಿತ ಪಂಪನ ಅಭಿಪ್ರಾಯ ಏನಾಗಿತ್ತು? 'ಪಂಪ' ನಾಮದ ನಿಷ್ಪತ್ತಿ ಮತ್ತು ವ್ಯುತ್ಪತ್ತಿ ಏನು? ಈಗಾಗಲೇ ತಿಳಿದಿರುವಂತೆ ಪಂಪನ ಪೂರ್ವಜರು ವೆಂಗಿಮಂಡಲದವರು ಎನ್ನುವ ಸಂಗತಿ ಸರ್ವವಿಧಿತವಾಗಿದ್ದರೂ ಅವನ ಪೂರ್ವಜರಲ್ಲಿ ಯಾರು ವೆಂಗಿಮಂಡಲದಿಂದ ಪುಲಿಗೆರೆಗೆ ಬಂದು ನೆಲೆಸಿರಬೇಕು? ಎಂಬ ಇತ್ಯಾದಿ ಅಂಶಗಳನ್ನು ಈ ಕೃತಿಯ 'ಪಂಪಮಹಾಕವಿ' ಭಾಗದಲ್ಲಿ ವಿವೇಚಿಸಿರುವರು. ಇದರಲ್ಲಿ ಕೆಲವು ಸಂಗತಿಗಳನ್ನು ಲಕ್ಷಿಸಬಹುದು: ಮಾಧವ ಸೋಮಯಾಜಿಯು ವೆಂಗಿಮಂಡಲ ಪ್ರದೇಶದ ವಸಂತ, ಕೊಟ್ಟೂರು, ನಿಡುಗುಂದಿ ಮತ್ತು ವಿಕ್ರಮಪುರ ಎಂಬ ಈ ನಾಲ್ಕು ಅಗ್ರಹಾರಗಳ ಪ್ರಮುಖನು ಹಾಗೂ 'ಅಗ್ರಹಾರಸಂಪತ್ಪದವಿ'ಯ ಅಧಿಕಾರಿಯಾಗಿದ್ದನು. ಅಂದರೆ "ಆಳುವರಸರ ವಿಶ್ವಾಸದಿಂದೊದಗುವ ಒಂದಧಿಕಾರದ ಪದವಿಯಾಗಿರಬೇಕು"(ಪು–58) ಎಂದು ತಿಮ್ಮಪ್ಪಯ್ಯನವರು ಹೇಳಿದ್ದಾರೆ. ಬಹುಶಃ ಈ ಪದವಿಯು ಬಸವಣ್ಣನು ಬಿಜ್ಜಳನ ಭಂಡಾರಿ ಅಥವಾ ಆರ್ಥಿಕ ವಿಷಯಗಳ ಮೇಲ್ವಿಚಾರಕನಾಗಿರುವಂತೆ ಸೋಮಯಾಜಿಯು ಒಂದನೆಯ ನರಸಿಂಹನ ಕಾಲದಲ್ಲಿ ಆತನ ಅನುಮತಿಯಂತೆ ಈ ಪ್ರದೇಶದ ಅಗ್ರಹಾರಗಳ ಆರ್ಥಿಕ ಮೇಲ್ವಿಚಾರಣೆಯನ್ನು(ಅರ್ಥಸಚಿವ) ಮಾಡುತ್ತಿದ್ದವನಾಗಿರಬೇಕು ಎನ್ನಿಸುತ್ತದೆ. ಈತನ ಮಗನಾದ ಅಭಿಮಾನಚಂದ್ರನು "ಮಣಿ ಕನಕ ಸಾರ ವಸ್ತುವನೆರೆದರ್ಗಿತ್ತು ಸಲೆ ನೆಗಟ್ದಿನತಿ ಪುರುಷೋತ್ತಮ"(ಪು–61, ಪಂಭಾ–14.45)ನಾಗಿದ್ದ, ಉದಾರಿಯು, ದಾನಿಯು ಆಗಿದ್ದನು. ಇವನ ಮಗನಾಗ ಕೊಮರಯ್ಯನು ವೇದವೇದಾಂಗಗಳು ಬಲ್ಲ ಉತ್ತಮ ವಿದ್ಯಾವಂತನಾಗಿರುವಂತೆ ತೋರುತ್ತದೆ.

ತಿಮ್ಮಪ್ಪಯ್ಯನವರು "ಅಭಿಮಾನಚಂದ್ರನು ಅಸಮಾನ ದಾನಿಯಾಗಿದ್ದರೆ, ಮಗನಾದ ಕೊಮರಯ್ಯನು ಅಸಾಧಾರಣ ವಿದ್ಯಾವಂತನು. ಅವನು 'ಭುವನ ಭವನ ಖ್ಯಾತ'ನಾದರೆ, ಇವನು 'ಉಚಿತ ಪುರಾತನ ಚರಿತ'ನು"(ಪು–62) ಎಂದು ಪಂಪನ ಮಾತನ್ನೆ ವಿವರಿಸಿದ್ದಾರೆ. ಪಂಪನ ತಮ್ಮನಾದ ಜಿನವಲ್ಲಭನ ಶಾಸನ ದೊರೆಯುವುದಕ್ಕೂ ಮೊದಲು ಪಂಪಭಾರತದ ಆಧಾರದಿಂದ ಪಂಪನ ತಂದೆ 'ಅಭಿರಾಮದೇವರಾಯ' ಎಂದು ಭಾವಿಸಲಾಗಿತ್ತು. ಇದನ್ನು ವಿಮರ್ಶಿಸುತ್ತ ತಿಮ್ಮಪ್ಪಯ್ಯನವರು "ಕನ್ನಡ ಸಾಹಿತ್ಯ ಪರಿಷತ್ತಿನವರಿಂದ ಪ್ರಕಟಿತವಾದ ವಿಕ್ರಮಾರ್ಜುನ ವಿಜಯಂ ಗ್ರಂಥದ ಅಡಿ ಟಿಪ್ಪಣಿಯಲ್ಲಿ ಈ ಪದ್ಯದ ಅಂತ್ಯಭಾಗದಲ್ಲಿ 'ನಿಕರ ಭೀಮನಾಮದೆಯಂ' ಎಂದು 'ಗ' ಪ್ರತಿಯ ಪಾಠವಾಗಿಯೂ 'ನೀಕಪರಂ ಭೀಮನಾಮದೆಯಂ' ಎಂದು 'ಘ' ಪ್ರತಿಯದಾಗಿಯೂ ಇರುವಂತೆ ತೋರುತ್ತಿದೆ. ಆ ಎರಡು ಭಿನ್ನ ಪ್ರತಿಗಳಿಂದ ಊಹಿಸಬಹುದಾದಂತೆ 'ಭೀಮ' ಎಂದೇ ಅವನ ಹೆಸರಾಗಿದ್ದಿರಬಹುದೆ?" ಎಂಬ ಊಹೆಯನ್ನು ಮುಂದಿಡುತ್ತಾರೆ. ಈ ಊಹೆಯನ್ನು ಜಿನವಲ್ಲಭನ ಶಾಸನವು ಸತ್ಯವಾಗಿಸಿದೆ. ಸಂಶೋಧನೆಯಲ್ಲಿ ಸಂಶೋಧಕನು ಮಾಡುವಂತಹ ಊಹೆಯೂ ಎಷ್ಟು ಮಹತ್ವದ ಪಾತ್ರವಹಿಸುತ್ತದೆ ಹಾಗೂ ಕೆಲವೊಮ್ಮೆ ಕೆಲವೊಂದು ಊಹೆಗಳು ಸತ್ಯವಾಗಿ ಮಾರ್ಪಡುತ್ತವೆ ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ. ಭೀಮಪ್ಪಯ್ಯನ ಪೂರ್ವಜರಲ್ಲಿ ಮಾಧವ ಸೋಮಯಾಜಿಯು ಕಟ್ಟಾ ವೈದಿಕ ಬ್ರಾಹ್ಮಣನಾಗಿ ಯಜ್ಞಯಾಗಾದಿಗಳಲ್ಲಿ ಲೀನನಾಗಿದ್ದವನಾದರೂ, ಇವನ ವಂಶಜರಾದ ಅಭಿಮಾನಚಂದ್ರ. ಕೊಮರಯ್ಯ ಇವರು ತಮ್ಮ ಜೀವಿತಾವಧಿಯವರೆಗೆ ಬ್ರಾಹ್ಮಣರಾಗಿದ್ದರೂ, ಬ್ರಾಹ್ಮಣ ಕರ್ಮಕಾರ್ಯಗಳಲ್ಲಿ ಅಷ್ಟಾಗಿ ಆಸಕ್ತಿಯನ್ನು ಹೊಂದಿದವರಾಗಿರಲಿಲ್ಲ. ಭೀಮಪ್ಪಯ್ಯನೇ ಜಿನಧರ್ಮ ಸಂಸ್ಕೃತಿಯಿಂದ ಪ್ರೇರಿತನಾಗಿ ಜೈನಧರ್ಮವನ್ನು ಸ್ವೀಕರಿಸಿ ಪುಲಿಗೆರೆಗೆ ಬಂದು ನೆಲೆಸಿರಬೇಕು ಎಂದು ಪಂಪಭಾರತದ ಪದ್ಯಗಳ(14– 44,45,46) ಹಿನ್ನೆಲೆಯಲ್ಲಿ ತಿಮ್ಮಪ್ಪಯ್ಯನವರು ವಿಶ್ಲೇಷಿಸಿದ್ದಾರೆ.

'ಪಂಪ' ನಾಮದ ವ್ಯುತ್ಪತ್ತಿ ಹೇಗೆ? ಎಂಬುದನ್ನು ವಿವೇಚಿಸುತ್ತಾ "ನಮ್ಮಲ್ಲಿ ರಾಮ, ಕೃಷ್ಣ, ಶಿವ, ಶಂಕರ ಮೊದಲಾದ ದೇವರ ನಾಮಗಳನ್ನು ಮಕ್ಕಳಿಗಿಡುವುದೂ ಪದ್ಧತಿಯಾದಂತೆ, ಜೈನರಲ್ಲಿ ತೀರ್ಥಂಕರಾದಿ ಪುಣ್ಯಪುರುಷರ ಹೆಸರಗಳನ್ನಿಡುವುದೂ ಬಳಕೆಯಾಗಿದೆ ಎಂಬುದನ್ನು ಭಾವಿಸಿಕೊಳ್ಳಬೇಕು. ಪದ್ಮಪ್ರಭ ಎಂಬುದು ಆರನೆಯ ತೀರ್ಥಂಕರನ ಹೆಸರು. ಇದಲ್ಲದೆ, 'ಪದ್ಮನಾಭ–ಪದ್ಮೋತ್ತರ–ಪದ್ಮಸೇನ–ಪದ್ಮರಥ' ಮೊದಲಾದ ಪದ್ಮಾಂಕಿತ ನಾಮಗಳು ಕೆಲವರು ತೀರ್ಥಂಕರರ ಭವಾವಳಿಯಲ್ಲಿಯೂ ತೋರುತ್ತಿದೆ. ಆ ಹೆಸರುಗಳೊಳಗೆ ಬಹುಶಃ 'ಪದ್ಮಪ್ರಭ' ಅಲ್ಲವೆ 'ಪದ್ಮನಾಥ' ಎಂಬುದೇ ನಮ್ಮ ಕವಿಯ ಹೆಸರಿನ ಮೂಲವಾಗಿರಬಹುದು" (ಪು–67) ಎನ್ನುವ ಅಭಿಪ್ರಾಯಕ್ಕೆ ತಿಮ್ಮಪ್ಪಯ್ಯನವರು ಬರುತ್ತಾರೆ. ಮುಂದುವರಿದು, "ಪದ್ಮಪ್ರಭ'–ಪದ್ಮಪ್ಪ(ಪದ್ಮ+ಅಪ್ಪ)–ಪದ್ಮಪ–ಪದ್ದಪ್ಪ–ಪಮ್ಮಪ ಎಂದು ತಿರುಗುತ್ತಾ ಬಂದು ನಡುವಣ 'ಮ್ಮ'ಕಾರವು.. ಸೊನ್ನೆಯಾಗಿ 'ಪಂಪ' ಎಂದು ನೆಲೆಗೊಂಡಿಬೇಕು" (ಪು–67) ಎಂದು ಹೇಳುತ್ತಾರೆ. ಇದು ಅಷ್ಟೊಂದು ಸಮಂಜಸವು, ಸಮರ್ಪಕವಾದುದಲ್ಲ. ತಿಮ್ಮಪ್ಪಯ್ಯನವರು ತಮ್ಮ "ಪೂರ್ವನಿರ್ಧಾರಿತ ವಿಚಾರವನ್ನಿಟ್ಟುಕೊಂಡು ಅದಕ್ಕೆ ಪೂರಕವಾಗುವ ಸಾಮಗ್ರಿಯನ್ನು ಒಗ್ಗೂಡಿಸಿಕೊಳ್ಳುವ ವಿಧಾನವೇ ಹೊರತು, ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು ಅದರ ಆಧಾರದ ಮೇಲೆ ಬರುವ ತೀರ್ಮಾನದಂತೆ ಈ ಸಂಶೋಧನೆ ಕಾಣಿಸುವುದಿಲ್ಲ. ಪಂಪನ ಪರಿಸರದಲ್ಲಿ ಈ ಹೆಸರಿನ ಸಾಮ್ಯವನ್ನು ಪರಿಶಿಲಿಸಿದ್ದರೆ ಉತ್ತಮವಾಗುತ್ತಿತ್ತೆಂದು ತೋರುತ್ತದೆ" (ಶ್ರೀಕಂಠ ಕೂಡಿಗೆ, ಮುಳಿಯ ತಿಮ್ಮಪ್ಪಯ್ಯ, ಮಹಾಮಾರ್ಗ, ಪು–439) ಎಂದು ಹೇಳಿದ ಶ್ರೀಕಂಠ ಕೂಡಿಗೆ ಅವರ ಅಭಿಪ್ರಾಯ ಒಪ್ಪುವಂತಹದ್ದು.

ಉದಾಹರಣೆಗೆ, ಪಂಪನ ಕಲಿತನದ ನಿರೂಪಣೆ. ಪಂಪನು ಅರಿಕೇಸರಿಯ ಆಶ್ರಯದ ತೆಕ್ಕೆಗೆ ಯಾವಾಗ ಬಂದನು ಎಂದು ಹೇಳಲು ನಿಖರವಾದ ಯಾವ ಆಧಾರಗಳಿಲ್ಲದ್ದರೂ ಆದಿಪುರಾಣದ ಖ್ಯಾತಿಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಂತರದಲ್ಲಿ ರಾಜಾಶ್ರಿತನಾಗಿರಬೇಕು ಎಂದು ಭಾವಿಸಲಾಗಿದೆ. ಪಂಪನು ತಾನು 'ಕಲಿಯು, ಸತ್ಯವಿಯು ಆಗಿರುವೆ' ಎಂದು ಹೇಳಿಕೊಂಡಿರುವನಾದರು ಕವಿತ್ವಕ್ಕೆ ಎರಡು ಮಹಾಕಾವ್ಯಗಳು ನಮ್ಮ ಮುಂದಿವೆ, ಕಲಿತನಕ್ಕೆ ಉದಾಹರಣೆಯು ಕಾವ್ಯ ಮೂಲದಿಂದ ಸ್ಪಷ್ಟವಾಗಿ ದೊರಕದು. ಮುಳಿಯ ತಿಮ್ಮಪ್ಪಯ್ಯನವರು ವೇಮುಲವಾಡ ಶಾಸನದ 13ನೆಯ ಪದ್ಯದ ಆಧಾರದಿಂದ ಪಂಪನ ಕಲಿತನವನ್ನು ನಿರೂಪಿಸಿದ್ದಾರೆ. ಶರಣಾಗತನಾಗಿ ಬಂದ ಬಿಜ್ಜನನ್ನು ರಕ್ಷಿಸಲು ಅರಿಕೇಸರಿಯು ಬದ್ಧನಾಗಿ ನಿಂತದ್ದಕ್ಕೆ ರಾಷ್ಟ್ರಕೂಟ ದೊರೆ "ಗೋವಿಂದರಾಜನು ಕ್ರೋಧವಡೆದು ಆಜಿರಂಗದಲ್ಲಿದಿರಾಗಲು ತನ್ನ ಕಡೆಯ ಸಾಮಂತ ದಂಡಾಧಿಕಾರಿ ಪ್ರಭೃತಿಗಳನ್ನು ರಣಕುತೂಹಲಿತರನ್ನಾಗಿಯೂ ಪದ್ಮಾ(ದ್ಮಾ)ರ್ಯ(ಪಂಪ)ನನ್ನು ಆ ಸಾಮಂತಾದಿ ಸೈನ್ಯಕ್ಕೆ ಆರ್ಯ(ನಾಯಕ)ನನ್ನಾಗಿಯೂ ಮಾಡಿ, ಸ್ವಜನ ಪರಿಜನದೊಡಗೂಡಿ ಹೋರಾಡಿದ ಅರಿಕೇಸರಿಯಿಂದ ಶರಣಾಗತನಾದ ಬಿಜ್ಜನು ರಕ್ಷಿಸಲ್ಪಟ್ಟನು"(ಪು–70) ಎಂಬ ಸಂಗತಿಯ ನಿರೂಪಣೆಗಾಗಿಯೇ ತಿಮ್ಮಪ್ಪಯ್ಯನವರು ಪಂಪನ ನಾಮದ ವ್ಯುತ್ಪತ್ತಿ ಬಗೆಗೆ ವಿವೇಚಿಸಿರುವರು ಎಂದೆನ್ನಿಸುತ್ತದೆ. ಇದು ಸಂಶೋಧಕರ ಪೂರ್ವನಿರ್ಧಾರಿತ ವಿಚಾರಗಳಾದರೂ ಈ ಮೂಲಕ ಪಂಪನು ಕೇವಲ ಸಾಮಾನ್ಯ ವೀರಯೋಧ ಮಾತ್ರವಲ್ಲ ಸಾಮಂತಾದಿ ಸೈನ್ಯಕ್ಕೆ ನಾಯಕನು ಆಗಿದ್ದನೆಂಬ ಸಂಗತಿಯು ವ್ಯಕ್ತವಾಗುತ್ತದೆ. ಇದು, ತಿಮ್ಮಪ್ಪಯ್ಯನವರು ಊಹೆಯೇ ಪ್ರಧಾನವಾದ ಶೋಧಕ ಬುದ್ಧಿಗೆ ಒಂದು ಉತ್ತಮ ಉದಾಹರಣೆ ಎನ್ನಬಹುದು. ಶಾಸನಗಳು ಮತ್ತು ವಿಕ್ರಮಾರ್ಜುನವಿಜಯಂ ಕಾವ್ಯದ ಉಕ್ತ ಸ್ಥಳಗಳ ಹೆಸರಿನ ಅರ್ಥವ್ಯಾಪ್ತಿಯ ಆಧಾರದ ಹಿನ್ನೆಲೆಯಲ್ಲಿ ವೆಂಗಿಮಂಡಲ ಪ್ರದೇಶದ ವ್ಯಾಪ್ತಿ, ಪರಿಸರ, ಗಡಿರೇಖೆಯನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. "ಈ ಭಾಗದಲ್ಲಿ ಪದಗಳ ಅರ್ಥವ್ಯಾಪ್ತಿಯ ಬಗ್ಗೆ ಅವರ ಲಕ್ಷ್ಯ ಕೇಂದ್ರೀಕೃತವಾಗುತ್ತದೆಯೇ ಹೊರತು ನಿರ್ದಿಷ್ಟ ಉದ್ದೇಶ ಸಾಧಿತವಾಗುವುದಿಲ್ಲ" ಎಂಬುವುದು ಶ್ರೀಕಂಠ ಕೂಡಿಗೆಯವರ ಅಭಿಪ್ರಾಯ.

"ಪಂಪ ಮಹಾಕವಿಯ 'ವಿಕ್ರಮಾರ್ಜುನ ವಿಜಯಂ' ಮಹಾಕಾವ್ಯವು ಈ ಅರಿಕೇಸರಿಯ ರಾಜಧರ್ಮ, ತತ್ಸಾಧಕ ಶಕ್ತಿ ಮೊದಲಾದ ಆದರ್ಶ ಗುಣಗಳನ್ನು ವರ್ಣಿಸಲಿಕ್ಕಾಗಿಯೇ ತಲೆದೋರಿದೆ. ಅವುಗಳ ಸಾರವನ್ನು ವಾಚಕರು ಅದರಿಂದಲೇ ಹೀರಿಕೊಂಡು ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇನೆ" (ಪು–52) ಎಂದು ಹೇಳಿರುವ ತಿಮ್ಮಪ್ಪಯ್ಯನವರ ಮಾತು ಸರಿಯಾಗಿದೆ. ನಮ್ಮ ಕೆಲವು ವಿಮರ್ಶಕರು ಪಂಪಭಾರತವನ್ನು ವ್ಯಾಸ ಭಾರತದ ಹಿನ್ನೆಲೆಯಲ್ಲಿ ನೋಡುವುದರಿಂದ ಪಂಪಭಾರತದ ಕೆಲವು ಸಂಗತಿಗಳು ಆಭಾಸವಾಗಿ ಕಾಣುತ್ತಿವೆ ಅಷ್ಟೇ. ಪಂಪನು ಪಂಪಭಾರತ ಬರೆಯಲು ಕಾರಣವನ್ನು ಸ್ಪಷ್ಟವಾಗಿ ಹೀಗೆ ಹೇಳಿಕೊಂಡಿರುವನು: "ಈ ಕಥೆಯೊಳ್ ತಗುಳ್ಚಿ ಪೋಲಿಪೊಡೆನಗಟ್ಟಿಂಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್"(ಪಂಭಾ; ೧–೧೪) ಮತ್ತು "ವೈರಿ ನರೇಂದ್ರೋದ್ದಾಮ ದರ್ಪೋದ್ದಳನನೆ ನಾಯಕಂ ಮಾಡಿ ಸಂದ ಅರ್ಜುನನೊಳ್ ಪೋಲ್ವ ಈ ಕಥಾಭಿತ್ತಿಯನ್ ಅನುನಯದಿಂ ಪೇಟಲೆಂದೆತ್ತಿಕೊಂಡೆಂ"(ಪಂಭಾ;1–51). ಈ ಉದ್ದೇಶದಂತೆ ಪಂಪನು ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನೊಂದಿಗೆ ಅಭೇದ್ಯವಾಗಿ ಹೋಲಿಸಿ ಕಥೆಯನ್ನು ನಿರೂಪಿಸಿದ್ದಾನೆ. ಈ ಸಂಗತಿಗಳನ್ನು ತಿಳಿದೂ ತಿಳಿಯದಂತಿರುವ ವಿಮರ್ಶಕರ ಜಾಣಮರುಳು ಮತ್ತು ಅವರ ಆಭಾಸದ ಮಾತುಗಳಿಗೆ ಏನು ಹೇಳಬೇಕೋ ತಿಳಿಯದು. ಮುಳಿಯ ತಿಮ್ಮಪ್ಪಯ್ಯನವರು 'ಸಮಸ್ತಭಾರತವೂ ಅದರ ಕಾಲವೂ' ಎಂಬ ಭಾಗದಲ್ಲಿ ಪಂಪನ 'ಸಮಸ್ತಭಾರತ' ಪದದ ವಿವೇಚನೆಯನ್ನು ಮಾಡುತ್ತ, ಕವಿಯು ಮಹಾಭಾರತದೊಳಗಿನ ಎಲ್ಲ ಪಾತ್ರಗಳಿಗೆ ಪ್ರತಿಯಾಗಿ, ಅರಿಕೇಸರಿಯ ಕಾಲದ ಐತಿಹಾಸಿಕ ವ್ಯಕ್ತಿಗಳನ್ನು ಕಲ್ಪಿಸಿಕೊಂಡು ವಿಕ್ರಮಾರ್ಜುನವಿಜಯಂ ಕಾವ್ಯವನ್ನು ಬರೆದಿರಬೇಕು ಎಂದು ಭಾವಿಸಿದ ತಿಮ್ಮಪ್ಪಯ್ಯನವರು ಕಾವ್ಯ ಮತ್ತು ಶಾಸನಗಳ ನೆರವಿನಿಂದ ಮಹಾಭಾರತದ ಪಾತ್ರಗಳಿಗೆ ಸಂವಾದಿಯಾಗಬಲ್ಲ ಐತಿಹಾಸಿಕ ವ್ಯಕ್ತಿಗಳ ಪಟ್ಟಿಯನ್ನು ನೀಡಿ ಆ ಪಾತ್ರ ಮತ್ತು ವ್ಯಕ್ತಿಗಳ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಸಂವಾದಿಯಾದ ಐತಿಹಾಸಿಕ ವ್ಯಕ್ತಿಗಳು ಸಿಗದಿದ್ದಲ್ಲಿ, ಅವು ತನ್ನ ಕಾಲಕ್ಕೆ ದೊರೆತ ಸಾಕ್ಷ್ಯಾಧಾರಗಳಿಗೆ ಹೊರತಾದವೆಂದು ಹೇಳುತ್ತ ಅಂಥ ವ್ಯಕ್ತಿಗಳನ್ನು ಊಹಿಸುವ ಕೆಲಸವನ್ನು ಮುಂದಿನ ಸಂಶೋಧಕರಿಗೆ ಬಿಟ್ಟಿರುವರು. ಮಹಾಭಾರತದಲ್ಲಿನ ಸೋಮವಂಶದ ಭೀಷ್ಮನೇ ಪಂಪಭಾರತದಲ್ಲಿನ ಚಾಳುಕ್ಯವಂಶದ ಬದ್ದೆಗನು, ವಿಚಿತ್ರವೀರ್ಯನೇ ದುಗ್ಧಮಲ್ಲನು, ಪಾಂಡು ಮತ್ತು ಕುಂತಿಯರೇ ನರಸಿಂಹ ಮತ್ತು ಜಾಕವ್ವೆಯರು, ಅರ್ಜುನ ಹಾಗೂ ಸುಭದ್ರೆಯರೇ ಅರಿಕೇಸರಿ ಹಾಗೂ ಲೋಕಾಂಬಿಕೆಯರು; ಹೀಗೆ ಪಾಂಡವ ಮತ್ತು ಕೌರವ ಪಕ್ಷದವರ ಗುಣಸ್ವಭಾವ, ಪರಾಕ್ರಮ ಹಾಗೂ ವ್ಯಕ್ತಿತ್ವಗಳನ್ನು ತತ್ಸಂವಾದಿಯಾಗಿ ಹೋಲುವ ಐತಿಹಾಸಿಕ ವ್ಯಕ್ತಿಗಳನ್ನು ಗುರುತಿಸುವ ತಿಮ್ಮಪ್ಪಯ್ಯನವರ ಸೂಕ್ಷ್ಮವೂ, ತೀಕ್ಷ್ಣವೂ ಆದ ಅಧ್ಯಯನದ ಬಗೆ ಎಂಥವರನ್ನೂ ಬೆರಗುಗೊಳಿಸದೇ ಇರದು.

ಮುಳಿಯ ತಿಮ್ಮಪ್ಪಯ್ಯನವರ ಅಧ್ಯಯನದ ಸ್ವರೂಪ ಮತ್ತು ಫಲಿತಗಳನ್ನು ಕುರಿತು ಹಲವು ವಿದ್ವಾಂಸರು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ. ದ. ರಾ. ಬೇಂದ್ರೆಯವರು ತಮ್ಮ 'ವಿಕ್ರಮಾರ್ಜುನ ವಿಜಯ' ಎಂಬ ಲೇಖನದಲ್ಲಿ: "ಅರ್ಜುನ–ಭಾರತದ ಕಥಾಭಿತ್ತಿಯಲ್ಲಿ ಚಾಳುಕ್ಯ ಕಥೆ ಕೆತ್ತುವದು, ಕೊರೆಯುವದು, ಬರೆಯುವದು ಸುಲಭದ ಕೆಲಸವಲ್ಲ. ದಿ. ಮುಳಿಯ ತಿಮ್ಮಪ್ಪಯ್ಯನವರು ತಮ್ಮ ವಿಮರ್ಶಾ ಕೌಶಲ್ಯದಿಂದ ಅರ್ಜುನ–ಅರಿಕೇಸರಿಯ ತೇಜವೆಂತಹದು, ಕರ್ಣನ ಬಣ್ಣವೆಂತಹದು ಎಂಬುದನ್ನು ವಿವೇಚಿಸಿದ್ದಾರೆ". (ಮಹಾಕವಿ ಪಂಪ ಹಾಗೂ ಅವನ ಕೃತಿಗಳು, ಪು–39) ಎಂದು ಹೇಳುವ ಮೂಲಕ ತಿಮ್ಮಪ್ಪಯ್ಯನವರು ಅರಿಕೇಸರಿ ಚರಿತ್ರೆಯನ್ನು ಕಟ್ಟುವ ಕೆಲಸ ಅಸಾಮಾನ್ಯವಾದುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಕೆ.ವಿ.ಸುಬ್ಬಣ್ಣನವರು ತಮ್ಮ 'ಪಂಪನ ಕವಿತೆ: ಅನುಸಂಧಾನಕ್ಕೆ ಹೊಸ ಮಾರ್ಗ' ಎಂಬ ಲೇಖನದಲ್ಲಿ: "ನಮ್ಮ ವಿಮರ್ಶಕರಲ್ಲೆಲ್ಲ ಮುಳಿಯ ಒಬ್ರೇ ನಿಜವಾಗಿ ಪಂಪನ ಬಗ್ಗೆ ಬೆಲೆ ಬಾಳೋ ಕೆಲಸ ಮಾಡಿರೋದು ಅಂತ ನನ್ನ ನಂಬಿಕೆ. ವಿಕ್ರಮಾರ್ಜುನವಿಜಯದಲ್ಲಿರೋದು ಮಹಾಭಾರತದ ಕಥೆ ಮಾತ್ರವಲ್ಲ, ಅರಿಕೇಸರಿಯ ಕಥೇನೂ ಅದರಲ್ಲಿ ಆದ್ಯಂತ ಓತಪ್ರೋತ ಆಗಿ ಬಂದಿದೆ ಅನ್ನೋದನ್ನ ಸ್ಪಷ್ಟಪಡಿಸಿದ್ರು" (ಶಿವರುದ್ರಪ್ಪ ಜಿ ಎಸ್, ಸಂ: ಪಂಪ : ಒಂದು ಅಧ್ಯಯನ, ಪು – 288) ಎಂದು ತಿಮ್ಮಪ್ಪಯ್ಯನವರ ವಿಮರ್ಶೆ ಸಮರ್ಪಕವೂ, ಸಮ್ಮತವೂ ಆದುದು ಎಂದು ಹೇಳಿರುವರು. ಇಲ್ಲಿ ಊಹೆಯೇ ಪ್ರಧಾನವಾಗಿದ್ದರೂ ಐತಿಹಾಸಿಕ ದೃಷ್ಟಿಕೋನದ ಹಿನ್ನೆಲೆಯಿಂದ ಈ ಮೊದಲು ಪಂಪನ ಕಾವ್ಯದ ಒಳವಿಚಾರಗಳನ್ನು ಅಧ್ಯಯನ ಮಾಡಿದ ಮತ್ತೊಬ್ಬ ವಿದ್ವಾಂಸರಿಲ್ಲ ಎನ್ನಬಹುದು. ಮುಳಿಯ ತಿಮ್ಮಪ್ಪಯ್ಯನವರ ಆಳವಾದ ಅಧ್ಯಯನ ಮತ್ತು ಅವರ ಸೂಕ್ಷ್ಮಗ್ರಹಿಕೆಗೆ ಇದೊಂದು ದ್ಯೋತಕವೇ ಸರಿ.

'ನಾಡೋಜ ಪಂಪ' ಕೃತಿಯ ದ್ವಿತೀಯ ಭಾಗದಲ್ಲಿ ಮಹಾಕಾವ್ಯ, ಪಂಪನ ಕಾವ್ಯಧರ್ಮಪ್ರಸರಣ ಸ್ವರೂಪ, ಆದಿಪುರಾಣದ ರಸಪ್ರವಾಹ ಮತ್ತು ಸಮಸ್ತಭಾರತದ ಶೈಲಿ ಎಂಬ ಉಪ ಅಧ್ಯಾಯಗಳನ್ನು ಮಾಡಿಕೊಂಡು ಭಾರತೀಯ ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಮಹಾಕಾವ್ಯ, ಲಘುಕಾವ್ಯಗಳ ಸ್ವರೂಪಗಳನ್ನು ಚರ್ಚಿಸುತ್ತ, ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯಂ ಮಹಾಕಾವ್ಯಗಳನ್ನು ರಸಜಿಜ್ಞಾಸೆ ಮತ್ತು ಚಾರಿತ್ರಿಕ ವಿಮರ್ಶಾ ಅಧ್ಯಯನದ ಮಾದರಿಯಲ್ಲಿ ಅಧ್ಯಯನ ಮಾಡಿರುವುದು ಗೋಚರಿಸುತ್ತದೆ. ಇಂದಿನಂತೆ ಸಿದ್ಧ ಅಧ್ಯಯನ ಮಾದರಿಗಳು ಇಲ್ಲದ ಕಾಲದಲ್ಲಿನ ತಿಮ್ಮಪ್ಪಯ್ಯನವರ ಈ ಅಧ್ಯಯನ ವಿಧಾನವು ಅತ್ಯಂತ ಮಹತ್ವದ್ದಾಗಿದೆ.

ಆದಿಪುರಾಣ ಕಾವ್ಯದಲ್ಲಿ ಆದಿನಾಥನ ಭವಾವಳಿಗಳೊಂದಿಗೆ ಆತನ ವ್ಯಕ್ತಿತ್ವವು ಲೌಕಿಕದಿಂದ ಅಲೌಕಿಕದೆಡೆಗೆ ಹೇಗೆ ವಿಕಾಸ ಹೊಂದುತ್ತಾ

*– 91ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಹೆಣ್ಣನ್ನು ಕಟಕಟೆಯಲ್ಲಿ ನಿಲ್ಲಿಸುವ ಚಿತ್ರಪಟ ರಾಮಾಯಣ ದೊಡ್ಡಾಟ

✍ **ಶ್ವೇತ ಜೆ., ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ.**

ವಿಶ್ವಾದ್ಯಂತ ಭಿನ್ನ ಸಂಪ್ರದಾಯಗಳು ಇರುವ ಹಲವು ರಾಮಾಯಣ ಪರಂಪರೆಗಳು ಇವೆ. ಆದರು ಸಾವಿರಾರು ವರ್ಷಗಳಿಂದ ಒಂದೇ ರಾಮಕಥಾ ವಸ್ತುವನ್ನು ಸಾರ್ವಕಾಲಿಕಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಹಾಗಿದ್ದಾಗ್ಯೂ ಕಾವ್ಯ, ಕತೆ, ಕಾದಂಬರಿ, ನಾಟಕ ಹೀಗೆ ಬೇರೆ ಬೇರೆ ಪ್ರಕಾರಗಳಲ್ಲಿ ರಾಮಾಯಣ ಕಥನ ಹೊಸ ಹೊಸ ರೂಪಗಳನ್ನು ತಾಳುತ್ತಿದೆ. ಸೀತೆಯು ಚಿತ್ರಿಸಿದ ರಾವಣನ ಚಿತ್ರಪಟವನ್ನು ಕೇಂದ್ರವಾಗಿಟ್ಟುಕೊಂಡು ಸೀತೆಯನ್ನು ತ್ಯಜಿಸುವ ಪ್ರಸಂಗವೊಂದು ? ಚಿತ್ರಪಟ ರಾಮಾಯಣ ದೊಡ್ಡಾಟದಲ್ಲಿ ಬರುತ್ತದೆ. ಇದೊಂದು ಶೈವ ಸಂಪ್ರದಾಯಕ್ಕೆ ಸೇರಿದ ರಾಮಾಯಣ ಕಥನ. ಆದರೆ ಎಲ್ಲೂ ಶೈವ ಚಿಂತನೆ, ವೈಷ್ಣವ ಚಿಂತನೆ ಎಂಬ ಒಡಕು ಕಾಣುವುದಿಲ್ಲ. ಹೆಣ್ಣು ಮತ್ತು ಗಂಡು ಚಿಂತನೆ ಎಂಬ ಒಡೆದ ದೃಷ್ಟಿ ಇಲ್ಲಿ ಪ್ರಧಾನವಾಗಿ ಕಾಣುತ್ತದೆ.

ಈ ನಾಟಕದ ಇಡೀ ಕಥನದ ಸೂತ್ರಧಾರಿ ಸೂರ್ಪನಕಿ. ರಾಮನ ಮೇಲೆ ಆಸೆ ಪಟ್ಟು ಈಕೆ ಹೇಗಾದರು ರಾಮನನ್ನು ಒಲಿಸಿಕೊಳ್ಳಬೇಕು ಎಂದು ನಿರ್ಧರಿಸಿ ಏನೆಲ್ಲ ಮಾಡುತ್ತಾಳೆ ಎಂಬುದೇ ಈ ನಾಟಕದ ಕಥಾವಸ್ತು.

ಮೊದಲಿಗೆ ರಾಮ ಏಕಪತ್ನೀವ್ರತಸ್ಥ ಎಂದು ತಿಳಿದು ರಾಮನನ್ನು ನಾನು ಪಡೆಯಬೇಕಾದರೆ ಸೀತೆಯನ್ನು ನಿವಾರಿಸಿಕೊಳ್ಳಬೇಕು ಎಂದು ಚಿಂತಿಸಿದ ಸೂರ್ಪನಕಿ ಸೀತೆಯನ್ನು ರಾಮ ಪರಿತ್ಯಾಗ ಮಾಡುವ ಯೋಜನೆ ರೂಪಿಸಿ ಸೀತೆಯಿಂದ ರಾವಣನ ಪಟ ಬರೆಸುತ್ತಾಳೆ ? ಪಟ್ಟಕ್ಕೆ ಮಗನನ್ನು ಹಡೆಯದೆ ಹುಟ್ಟು ಬಂಜೆಯಾದ ಸೀತೆಯೊಡನೆ ಎಷ್ಟು ದಿವಸ ಕಷ್ಟಪಡು ವಿಯೋದಿಟ್ಟಾ.' (ಚಿ.ರಾ.ಪು. : 5) ಎಂದು ರಾಮನಿಗೆ ಹೇಳಿ ಅವಳನ್ನು ತೊರೆಯುವ ಒಂದು ಮನೋಭೂಮಿಕೆಯನ್ನು ರಾಮನಲ್ಲಿ ಸಿದ್ಧಪಡಿಸಲು ಯತ್ನಿಸುತ್ತಾಳೆ. ಹೀಗೆ ಹೆಣ್ಣೊಬ್ಬಳು ತಾನು ಆಸೆ ಪಟ್ಟ ಗಂಡಸನ್ನು ಪಡೆಯಲು ಅವನ ಹೆಂಡತಿಗೆ ತೊಂದರೆ ಕೊಡುವ ಹಾಗೆ ಇಲ್ಲಿನ ಸನ್ನಿವೇಶಗಳು ಸೂರ್ಪನಕಿಯ ಮೂಲಕ ಚಿತ್ರಿತವಾಗಿವೆ.

ಸೀತೆ ರಾವಣನ ಮುಖವನ್ನೆ ನೋಡಿಲ್ಲದಿದ್ದರು ಸೂರ್ಪನಕಿ ಕಾಡಿಬೇಡಿ ತನಗಾಗಿ ಅವಳಿಂದ ರಾವಣನ ಚಿತ್ರ ಬರೆಸುತ್ತಾಳೆ. ಯೋಗಿನಿಯಾಗಿ ವೇಷ ತಾಳಿ ಬಂದು ನನ್ನ ಹೊಟ್ಟೆಪಾಡಿಗೆ ಭಿಕ್ಷೆ ಬೇಡುವುದಕ್ಕಾಗಿ ನನಗೆ ಅವನ ಪಟ ಬೇಕಾಗಿದೆ ಎಂದು ಹೇಳಿ ಅವಳನ್ನು ಚಿತ್ರಪಟ ಬಿಡಿಸಲು ಒಪ್ಪಿಸುತ್ತಾಳೆ. ನಂತರ ಹೆಣದಂತಹ ಚಿತ್ರಕ್ಕೆ ಯಾರು ತಾನೆ ಭಿಕ್ಷೆ ಹಾಕುತ್ತಾರೆ ಅದಕ್ಕೆ ಪ್ರಾಣ ನೀಡು ಎಂದೂ ಒತ್ತಾಯಿಸುತ್ತಾಳೆ? ನನ್ನ ಪಾತಿವ್ರತ್ಯದಿಂದ ಈ ಚಿತ್ರಪಟಕ್ಕೆ ಜೀವಕಳೆಯನ್ನು ತುಂಬುತ್ತೇನೆ. ತೆಗೆದುಕೊ ಅಮ್ಮ. ಇನ್ನೇತಕೆ ತಡ ಮಾಡದೆ ಭಿಕ್ಷಾಟನೆಗೆ ತೆರಳಮ್ಮಾ ತಾಯಿ'. (ಪುಟ : 11) ಎಂದು ಸೀತೆ ರಾವಣನ ಚಿತ್ರಕ್ಕೆ ಪ್ರಾಣ ದಾನವನ್ನೂ ನೀಡುತ್ತಾಳೆ. ಸೀತೆಗೆ ಇದೊಂದು ಪೂರ್ವಕಲ್ಪಿತ ಸಂಚು ಎಂದು ತಿಳಿಯುವುದಿಲ್ಲ. ನಾಟಕವು ಸೀತಾ ಪರಿತ್ಯಾಗಕ್ಕೆ ಹೀಗೆ ರಾಮ ಕಾರಣನಲ್ಲ, ಸೂರ್ಪನಕಿ ಕಾರಣ ಎಂದು ಹೇಳುತ್ತ ಇಡೀ ಉತ್ತರ ರಾಮಾಯಣ ಕಥನದಲ್ಲಿ ರಾಮನನ್ನು (ಜೊತೆಗೆ ಸೀತೆಯನ್ನೂ) ನಿರಪರಾಧಿ ಎಂದು ಘೋಷಿಸುತ್ತದೆ.

ರಾವಣನ ಚಿತ್ರ ಬರೆದ ಮಾತ್ರಕ್ಕೆ ಅದಕ್ಕೆ ಬೆಲೆಯಿಲ್ಲ. ಅದಕ್ಕೆ ಪ್ರಾಣ ಬಂದರೆ ಮಾತ್ರ ಬೆಲೆ. ಅದಕ್ಕೆ ಪ್ರಾಣ ನೀಡಲು ಸಾಧ್ಯ ಆಗುವುದು ಸೀತೆಯ ಪಾತಿವ್ರತ್ಯಕ್ಕೆ ಮಾತ್ರ ಎಂಬ ನಂಬಿಕೆಯನ್ನು ಈ ನಾಟಕ ಬಿಂಬಿಸುತ್ತದೆ. ಲವಕುಶ ಕಾಳಗದ ಪ್ರಸಂಗದಲ್ಲೂ ಇದೇ ರೀತಿಯ ಸೀತೆಯ ಪಾತಿವ್ರತ್ಯದ ವಿಚಾರ ಮುನ್ನೆಲೆಗೆ ಬರುತ್ತದೆ. ತಮ್ಮ ಬಾಣಗಳು ರಾಮ ಲಕ್ಷ್ಮಣರನ್ನು ಏನೂ ಮಾಡದಿದ್ದಾಗ ಕುಶನು ? ನಮ್ಮ ತಾಯಿಯ ಪಾತಿವ್ರತ್ಯವು ಸ್ಥಿರವಾಗಿದ್ದರೆ ಬ್ರಹ್ಮಾಸ್ತ್ರ ನಾಶವಾಗಲೆಂದು ಶಪಥ ಮಾಡಿ ಬಾಣ ಪ್ರಯೋಗ ಮಾಡೋ ಅಣ್ಣಯ್ಯನೆ (ಪುಟ: 60) ಎಂದು ಲವನಿಗೆ ಹೇಳುತ್ತಾನೆ. ಅಂದರೆ ಪಾತಿವ್ರತ್ಯಕ್ಕೆ ರಾಮಬಾಣವನ್ನೂ ಹಿಮ್ಮೆಟ್ಟಿಸುವ ಶಕ್ತಿ ಇದೆ ಎಂದು ಜನಪದರು ನಂಬುವಂತೆ ಈ ವಿಚಾರ ಇಲ್ಲಿ ನಿರೂಪಿತವಾಗಿದೆ. ಈ ಎರಡು ಪ್ರಸಂಗದಲ್ಲಿ ಹೆಣ್ಣಿನ ಪಾತಿವ್ರತ್ಯಕ್ಕೆ ಈ ನಾಟಕ ಅತಿರಂಜಿತವಾದ ಶಕ್ತಿಯನ್ನು ಆರೋಪಿಸಿ ಹೆಣ್ಣಿನ ಶೀಲ ಮತ್ತು ಪತಿನಿಷ್ಠೆಯನ್ನು ಒಂದು ಶ್ರೇಷ್ಠವಾದ ಮೌಲ್ಯ ಎಂಬಂತೆ ಬಿಂಬಿಸುತ್ತದೆ. ಗಂಡಾಳಿಕೆಯ ಲೈಂಗಿಕ ಸಂಕಥನವನ್ನು ನಿರಂತರ ಜಾರಿ ಮಾಡಲೆಂದೆ ಜನಪದರು ಈ ಚಿತ್ರಪಟ ರಾಮಾಯಣ ನಾಟಕವನ್ನು ತಯಾರಿಸಿದಂತೆ ಕಾಣುತ್ತದೆ.

ಸೂರ್ಪನಕಿ ತನ್ನ ಪೂರ್ವ ಯೋಜನೆಯಂತೆ ಬರೆಸಿದ ಚಿತ್ರಪಟವನ್ನು ಸೀತೆಯ ಬಳಿಯೆ ಬಿಟ್ಟು ಹೊರಟು ಹೋಗುತ್ತಾಳೆ. ರಾಮನಿಗೆ ಈ ಸಂಗತಿ ತಿಳಿದರೆ ಎಲ್ಲಿ ತಪ್ಪು ತಿಳಿಯುತ್ತಾನೊ ಎಂದು ಸೀತೆ ಅದನ್ನು ತನ್ನ ಮಂಚದ ಕೆಳಗೆ ಬಚ್ಚಿಡುತ್ತಾಳೆ. ಗಂಡ–ಹೆಂಡತಿ ಮಂಚವನ್ನು ಏರುವಾಗ ಗಟ್ಟಿಮುಟ್ಟಾದ ಮಂಚ ಮುರಿಯುತ್ತದೆ. ರಾವಣನ ಜೀವಂತ ಚಿತ್ರಪಟವನ್ನು ಸೀತೆಯ ಹಾಸಿಗೆಯ ಕೆಳಗೆ ಕಂಡ ರಾಮ ಆಕೆಯನ್ನು ತಪ್ಪಿತಸ್ಥಳೆಂದೆ ಭಾವಿಸುತ್ತಾನೆ. ಇವಳು ಪರ ಪುರುಷನ ನೆನಪಿನಲ್ಲಿ ಇದ್ದಾಳೆ. ಅವನ ಮೋಹದಲ್ಲಿ ಬಿದ್ದು ಅವನ ಚಿತ್ರಪಟವನ್ನು ರಚಿಸಿ ಮಲಗುವ ಹಾಸಿಗೆಯ ಕೆಳಗೆ ಬಚ್ಚಿಟ್ಟುಕೊಂಡಿದ್ದಾಳೆ. ಇದು ಶಿಕ್ಷಾರ್ಹ ಅಪರಾಧ ಎಂದು ನಿರ್ಧರಿಸುತ್ತಾನೆ.

ಗರಗಸದಂತೆ ಅಂತರಂಗದಲ್ಲಿ ಮನವಿದ್ದು ಬಹಿರಂಗದಲ್ಲಿ ಮಧುರ ಮಾತುಗಳನ್ನಾಡುವೆಯಾ ದುರುಳ ಜಾನಕಿ ? ನಿನ್ನ ಹೊಟ್ಟೆಯೊಳಗಿರುವ ಅಪೇಕ್ಷೆಯನ್ನು ಇವತ್ತಿಗೆ ತಿಳಿದೆನು. ಆ ದುಷ್ಟನಾದ ರಾವಣನನ್ನು ಕೊಂದದ್ದಕ್ಕಾಗಿ ಆ ಸಿಟ್ಟನ್ನು ಇಟ್ಟುಕೊಂಡು ಆ ಭ್ರಷ್ಟನ ಚಿತ್ರಪಟವನ್ನು ಬರೆದಿಟ್ಟುಕೊಂಡಿರುವೆಯಾ ? ಬಹುಮಂದಿ ಕಪಿಗಳನ್ನು ದಣಿಸಿ ರಾವಣನನ್ನು ವಧಿಸಿ ನಿನ್ನನ್ನು ತಂದಿದ್ದು ಹೇಗಾಯಿತೆಂದರೆ ಬಾಯಿ ತೆರೆದು ಬ್ರಹ್ಮಲೋಕಕ್ಕೆ ಹೋಗಿ ಹುಚ್ಚುನಾಯಿಯನ್ನು ತಂದಂತಾಯಿತು. ಇಂಥಾ ಕರಗದ ಮನಸ್ಸನ್ನು ಅರಿಯದೇ ಹೋದನಲ್ಲೇ ಪರಮ ನೀಚಳೆ? (ಪುಟ : 13) ಎಂದ ರಾಮ ಸೀತೆಯನ್ನು ನಿಂದಿಸಿ ಅನುಮಾನಿಸುತ್ತಾನೆ.

ಇಲ್ಲಿ ರಾವಣನ ಚಿತ್ರವನ್ನು ನೋಡಿದ ರಾಮ ವಾಸ್ತವವನ್ನು ತಿಳಿಯುವ ಪ್ರಯತ್ನವನ್ನು ಮಾಡುವುದೆ ಇಲ್ಲ. ಸೀತೆಯು ಬೇಕಂತಲೆ ರಾವಣನ ರೂಪವನ್ನು ನೋಡಲೆಂದೆ ಚಿತ್ರವನ್ನು ಬರೆದು ಇಟ್ಟುಕೊಂಡಿದ್ದಾಳೆ ಎಂದೆ ರಾಮ ಭಾವಿಸಿ ಹಳಿಯುತ್ತಾನೆ. ಸೀತೆಯ ಯಾವ ಮಾತುಗಳನ್ನೂ ಅವನು ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ಆಕೆಗೆ ಮಾತನಾಡುವುದಕ್ಕೂ ಅವಕಾಶ ನೀಡದೆ ರಾಮ ಆಕೆಯ ಮೇಲೆ ಇಲ್ಲದ ಆರೋಪ ಮಾಡುತ್ತಾನೆ. ರಾವಣನನ್ನು ನಾನು ಕೊಂದಿದ್ದಕ್ಕೆ ನೀನು ನನಗೆ ವಿಷಕೊಟ್ಟು ಕೊಲ್ಲುವುದಕ್ಕೂ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹೇಸುವುದಿಲ್ಲ; ಎದೆಯನ್ನು ಗಟ್ಟಿಮಾಡಿಕೊಂಡು ಎಲ್ಲಿಯಾದರೂ ಹೊರಟು ಹೋಗು ಮುಖ ತೋರಿಸಬೇಡ ಎನ್ನುತ್ತಾನೆ.

ಸೀತೆಯು ದುಷ್ಟ ರಾವಣನನ್ನು ಇಟ್ಟುಕೊಂಡಿರುವಿ ಎಂದು ಸೃಷ್ಟೀಶ ನುಡಿಯ ಬೇಡ ಪಟ್ಟದರಸನೆ ಕೇಳೊ (ಪುಟ : 14) ಎಂದು ತನ್ನ ಹುಟ್ಟನ್ನೆ ಹಳಿಯುತ್ತಾ ಪಾತಕಿ ಎನಿಸಿಕೊಂಡು ಯಾಕಾಗಿ ಬದುಕಿರಬೇಕು ಎಂದುಕೊಳ್ಳುತ್ತಾಳೆ. ಸೂರ್ಪನಕಿ ಅಲ್ಲಿ ಬಂದು ಹೋಗಿರುವುದಕ್ಕೆ ಯಾವುದೇ ಕುರುಹುಗಳು ಇಲ್ಲದ್ದರಿಂದ ಸೀತೆ ರಾಮನ ಕಣ್ಣಿಗೆ ಒಬ್ಬ ಮಾನಸಿಕ ವ್ಯಭಿಚಾರಿಯಾಗಿಯೆ ಕಾಣಿಸುತ್ತಾಳೆ. ಒಂದು ಚಿತ್ರಪಟದ ತೂಕಕ್ಕೆ ಮಂಚ ಮುರಿದು ಬೀಳುವುದು ಎಂದರೆ ಅದು ಅದರ ತೂಕದ ವಿಚಾರ ಅಲ್ಲ. ಅದು ಎರಡು ಮನಸ್ಸುಗಳ ನಿಷ್ಠೆಯ ವಿಚಾರ. ಎರಡು ಮನಸ್ಸುಗಳು ಮುರಿದು ಬೀಳುವ ವಿಚಾರ. ಅದು ಅವರಿಬ್ಬರ ನಡುವಣ ಲೈಂಗಿಕ ಸಂಬಂಧ ಮುರಿದು ಬಿದ್ದುದರ ಸಂಕೇತವೆ ಆಗಿದೆ.

ರಕ್ಕಸಿಯು ಸಂಚಿಗೆ ಗುರಿಯಾಗಿ ನಾನು ಈ ಚಿತ್ರವನ್ನು ಬರೆಯಬೇಕಾಯಿತು ನನ್ನದೇನು ತಪ್ಪಿಲ್ಲ ಎಂದು ಸೀತೆ ಎಷ್ಟೇ ಹೇಳಿದರು ರಾಮ ಅವಳನ್ನು ನಂಬುವುದಿಲ್ಲ. ರಾಮನ ಈ ನಿಲುವು ಸ್ವತಃ ಕೌಸಲ್ಯೆಗೇ ಇಷ್ಟ ಆಗುವುದಿಲ್ಲ ? ಸೀತೆ ದೇವಿ ಮಹಾಪತಿವ್ರತೆ (ಪುಟ : 20) ಎಂಬ ಕೌಸಲ್ಯೆಯ ಮಾತುಗಳೂ ಇಲ್ಲಿ ವ್ಯರ್ಥವಾಗುತ್ತವೆ. ಕೌಸಲ್ಯೆ, ವಿಭೀಷಣ, ಲಕ್ಷ್ಮಣ, ಹನುಮಂತ ಯಾರು ಏನೇ ಹೇಳಿದರೂ ರಾಮನು ಯಾರ ಮಾತನ್ನು ಕೇಳುವುದಿಲ್ಲ. ಒಬ್ಬ ಆರೋಪಿಗೆ ಮಾತನಾಡಲು ನೀಡುವಷ್ಟು ಕಾಲಾವಕಾಶವನ್ನು ರಾಮ ತನ್ನ ಹೆಂಡತಿಯಾದ ಸೀತೆಗೆ ನೀಡುವುದಿಲ್ಲ. ಸೀತೆ ಅಪರಾಧಿ ಎಂದು ಭಾವಿಸಿ ಆಕೆಯ ತಲೆಯನ್ನು ಒಡೆದು ಬರಲು ಲಕ್ಷ್ಮಣನಿಗೆ ಆಜ್ಞಾಪಿಸುವ ಶ್ರೀರಾಮ ಹಾಗೆ ಏಕಪಕ್ಷೀಯವಾಗಿ ನಿರ್ಧಾರವನ್ನು ತೆಗೆದುಕೊಳ್ಳಬಹುದೇ ?

ಅಪಹರಣಕ್ಕೆ ಒಳಗಾದ ಹೆಣ್ಣಿನ ಜೊತೆಗೆ ಮತ್ತೆ ಸಂಸಾರ ಮಾಡುವುದೇ ದೊಡ್ಡದು. ಅಂಥದ್ದರಲ್ಲಿ ರಾವಣನಂಥವನ ಧ್ಯಾನದಲ್ಲಿ ಯಾರಾದರು ಉಳಿದರೆ ಅವರು ಬದುಕಿರುವುದಕ್ಕೂ ಯೋಗ್ಯವಲ್ಲ ಎನ್ನುವ ಹಾಗೆ ಇಲ್ಲಿ ಕಥನವನ್ನು ಕಟ್ಟಲಾಗಿದೆ. ಆದರೆ ಇದೇ ನಾಟಕದ ಕೊನೆಯಲ್ಲಿ ಪರಾಕ್ರಮಿಗಳಾದ ಮಕ್ಕಳನ್ನು ಕಂಡು ಅವರನ್ನು ತನ್ನ ಮಕ್ಕಳೆಂದೆ ಶ್ರೀರಾಮ ಒಪ್ಪುತ್ತಾನೆ. ? ಇವರನ್ನು ಪರಿಗ್ರಹಿಸು' ಎಂದು ಹೇಳಿದ ವಾಲ್ಮೀಕಿಯ ಒಂದೇ ಒಂದು ಮಾತಿಗೆ ಮರುಮಾತಿಲ್ಲದೆ ಅವರನ್ನು ಸ್ವೀಕರಿಸಿ ಅಯೋಧ್ಯೆಗೆ ಕರೆದುಕೊಂಡು ಹೋಗುತ್ತಾನೆ. ಆಗ ಇಲ್ಲಿ ರಾಮನಿಗೆ ಸೀತೆಯಲ್ಲಿ ದೋಷ ಕಾಣುವುದಿಲ್ಲ. ನಮ್ಮ ಜನಪದರಿಗೆ ಗಂಡು ಮಕ್ಕಳನ್ನು ಹೆತ್ತುಕೊಟ್ಟ ತಾಯಿಯಲ್ಲಿ ದೋಷ ಕಾಣುವುದಿಲ್ಲ. !

ಜನಪದ ರಾಮಾಯಣ ಹಾಗೂ ಬೇರೆ ರಾಮಾಯಣ ಕಾವ್ಯಗಳಲ್ಲಿ ಅಗಸನ ಮಾತಿನಿಂದ ರಾಮ ಸೀತೆಗೆ ಶಿಕ್ಷೆ ನೀಡಿದರೆ ಇಲ್ಲಿ ತಾನು ಬಿಡಿಸಿದ ರಾವಣನ ಚಿತ್ರದಿಂದಾಗಿ ಸೀತೆ ಅಪರಾಧಿಯಾಗುತ್ತಾಳೆ ? ತರುಣಿ ಎಂಬ ಕರುಣದಿಂದ ವ್ಯಭಿಚಾರವನ್ನು ಮುಚ್ಚಿಕೊಂಡರೆ ಕುಲಕಂಟಕ ರಾಮನೆಂದು ಅಪಕೀರ್ತಿ ಹೊತ್ತೇನು ನನ್ನ ಆಜ್ಞೆಯನ್ನು ಮೀರುವೆಯಾ? (ಪುಟ : 16) ಎಂದು ಲಕ್ಷ್ಮಣನಿಗು ರೇಗುತ್ತಾನೆ. ಸೀತೆ ಇಲ್ಲಿಯೆ ಉಳಿದರೆ ತಾನೇ ಸನ್ಯಾಸಿ ಆಗುತ್ತೇನೆ ಎನ್ನುವ ಮಟ್ಟಕ್ಕು ರಾಮ ಹೋಗುತ್ತಾನೆ. ಲಕ್ಷ್ಮಣನಿಗೆ ರಾಮನ ನಿರ್ಧಾರದಿಂದ ಅತೀವವಾದ ದುಃಖ ಆಗುತ್ತದೆ. ಆದರೂ ಸೀತೆಯ ತಲೆಕಡಿದು ಬರಲು ರಾಜಾಜ್ಞೆಯಂತೆ ಒಪ್ಪಿಕೊಳ್ಳುತ್ತಾನೆ. ಲಕ್ಷ್ಮಣನ ವರ್ತನೆಗಳನ್ನು ನೋಡಿದರೆ ಆಜ್ಞಾಧಾರಕನಾದರು ಆತ ಅಂತಃಕರುಣಿ ಹಾಗೂ ವಿವೇಕಿಯಾಗಿ ಇಲ್ಲಿ ಕಾಣುತ್ತಾನೆ.

ಸೀತೆಯ ಬಸುರಿ ಬಯಕೆಯನ್ನು ನೆಪ ಮಾಡಿಕೊಂಡು ಆಕೆಯನ್ನು ಕಾಡಿನಲ್ಲಿ ಬಿಟ್ಟು ಬರುವ ಜೈಮಿನಿ ಭಾರತದ ಪ್ರಸಂಗ ಇಲ್ಲಿ ಕಂಡುಬರುವುದಿಲ್ಲ. ಜನಪದ ರಾಮಾಯಣದ ಕಂಸಾಳೆ ಪಠ್ಯದಲ್ಲಿ ಕಂಡು ಬರುವಂತೆ ಇಲ್ಲಿ ಸೀತೆಗೆ ಮೊದಲೆ ತಿಳಿಸಿ ಶಿಕ್ಷೆ ನೀಡಲಾಗುತ್ತದೆ. ಇಲ್ಲಿ ಸೀತೆ ಹೆಚ್ಚಾಗಿ ತನ್ನ ಈ ಕಷ್ಟ ಕಾಲದಲ್ಲಿ ಹನುಮಂತನನ್ನು ನೆನೆಯುವುದು ವಿಶೇಷ. ಯಾಕೆಂದರೆ ಲಂಕೆಯಲ್ಲಿ ರಾಮನಿಗಾಗಿ ಹಂಬಲಿಸುತ್ತಿದ್ದ ಸೀತೆಯ ಕಷ್ಟವನ್ನು ನಿಜವಾಗಿಯೂ ನೋಡಿದವನು ಹನುಮಂತನೆ ಅಲ್ಲವೇ. ಇದು ಕೇವಲ ರಾಮ ಮಾತ್ರ ತೆಗೆದುಕೊಳ್ಳಬೇಕಾದ ನಿರ್ಧಾರವಲ್ಲ. ನಾಲ್ಕಾರು ಜನ ಹಿರಿಯರ ಮುಂದೆ ಇತ್ಯರ್ಥ ಆಗಬೇಕಾದ ವಿಚಾರ. ಹಾಗಾಗಿ ರಾಮ ಹೀಗೆ ಮಾಡಿದ್ದು ಸರಿಯೇ ಎಂದು ಹಿರಿಯನಾದ ಹನುಮಂತನಲ್ಲಿ ಸೀತೆ ಕೇಳುತ್ತಾಳೆ. ನೊಂದ ಹೆಣ್ಣು ತನಗಾದ ಅನ್ಯಾಯಕ್ಕೆ ನ್ಯಾಯ ಕೇಳುವ ರೀತಿಯಲ್ಲೂ ಈ ಪ್ರಸಂಗವಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಸೀತೆ ಗರ್ಭಿಣಿ ಎನ್ನುವ ವಿಷಯ ಅವಳ ಸಖಿ ಚಂದ್ರಮತಿಗೆ ಬಿಟ್ಟು ಬೇರೆ ಯಾರಿಗೂ ತಿಳಿದಿರುವುದಿಲ್ಲ. ಅಲ್ಲದೇ ತಾನು ತಾಯಿಯಾಗುತ್ತಿರುವುದನ್ನು ನಂಬಲು ಸಾಧ್ಯವಾಗದಷ್ಟು ಸೀತೆಯಲ್ಲಿ ಬಂಜೆತನದ ನೋವು ಆವರಿಸಿಕೊಂಡಿರುತ್ತದೆ. ಸೀತೆಗೆ ನೀಡಿದ ಶಿಕ್ಷೆ ಬಗ್ಗೆ ತಿಳಿದ ಸಿದ್ವೀರಿ ಮತ್ತು ಶಿವನ ದಂಪತಿಗಳು (ಪ್ರಜೆಗಳು) ಇಲ್ಲಿ ಮಾತನಾಡಿಕೊಳ್ಳುವ ಒಂದು ದೃಶ್ಯವನ್ನು ಕಟ್ಟಲಾಗಿದೆ. ಈ ದೃಶ್ಯದಲ್ಲಿ ಸೀತೆ ಬಂಜೆ, ಬಂಜೆ ಹೆಣ್ಣಿಗೆ ಗೌರವ ಇಲ್ಲ ಎಂಬ ಸಂದೇಶವನ್ನೇ ಸಾರಲಾಗಿದೆ. ಇಲ್ಲಿ ಶಿವನ ಎಂಬ ಪ್ರಜೆ ಹೆಣ್ಣು ಹೆರದಿದ್ದರೆ ಅವಳು ಸಂಸಾರ ಮಾಡಲು ಯೋಗ್ಯಳಲ್ಲ. ದಾಂಪತ್ಯದಲ್ಲಿ ಮಕ್ಕಳು ಅನಿವಾರ್ಯ. ಸತ್ತ ನಂತರ ಹೆತ್ತವರಿಗೆ ಸದ್ಗತಿ ದೊರೆಯುವುದು ಮಕ್ಕಳಿಂದಲೆ ಎನ್ನುವ ನಂಬಿಕೆಗಳನ್ನೆ ಹೇಳುತ್ತಾನೆ. ಇಲ್ಲಿ ಸಿದ್ವೀರಿ ಒಬ್ಬ ಬಂಜೆ ಆಗಿದ್ದು ಆ ಕಾರಣಕ್ಕೆ ಅವಳನ್ನು ತ್ಯಜಿಸಲು ಸಿದ್ಧವಾಗಿದ್ದ ಆತ ಆನಂತರದಲ್ಲಿ ತಾನು ಆರು ತಿಂಗಳ ಗರ್ಭಿಣಿ ಎಂದು ಸಿದ್ವೀರಿ ಹೇಳಿದಾಗ ಶಿವನ ತನ್ನ ನಿಲುವನ್ನು ಬದಲಾಯಿಸಿಕೊಳ್ಳುತ್ತಾನೆ.

ಸಿದ್ವೀರಿ, ಸೀತೆ ಈ ಇಬ್ಬರೂ ಇಲ್ಲಿ ಸಾಮಾನ್ಯ ಹೆಣ್ಣಿನ ಪ್ರತಿನಿಧಿಗಳಾಗಿ ಬರುತ್ತಾರೆ. ಏಕಕಾಲಕ್ಕೆ ಈ ಪಠ್ಯವು (1) ಬಂಜೆ ಆದ ಹೆಣ್ಣನ್ನು ತ್ಯಜಿಸಬೇಕು. ಜೊತೆಗೆ (2) ಪರಪುರುಷನ ಚಿತ್ರವನ್ನು ಕಲ್ಪಿಸಿಕೊಳ್ಳುವ, ಅಥವಾ ಅವನನ್ನು ಮನಸ್ಸಿನಲ್ಲಿ ಭಾವಿಸುವ ಹೆಣ್ಣಿನ ತಲೆ ತೆಗೆಯಬೇಕು ಎಂಬುದೆ ಸರಿ ಎನ್ನುವುದನ್ನು ಮತ್ತೆ ಮತ್ತೆ ಪ್ರತಿಪಾದಿಸುತ್ತದೆ.

ಅಚ್ಚರಿ ಎಂದರೆ ಅರಮನೆಯಿಂದ ಕಾಡಿಗೆ ಹೊರಡುವಾಗ ಬಾಗಿನವನ್ನು ಸ್ವೀಕರಿಸಿದ ಸೀತೆಯು ? ಈ ಬಾಗಿನವನ್ನು ತೆಗೆದುಕೊಂಡು ಹತ್ತು ಸಹಸ್ರ ಜನ್ಮದಲ್ಲಾದರೂ ಶ್ರೀರಾಮಚಂದ್ರನೆ ನನಗೆ ಪತಿಯಾಗಲೆಂದು ಆಶೀರ್ವಾದ ಮಾಡಿರಮ್ಮಾ ತಾಯಿಗಳಿರ. (ಪುಟ : 24) ಎಂದು ಎಲ್ಲರಿಂದ ಬೀಳ್ಕೊಂಡು ಹೊರಡುತ್ತಾಳೆ. ಗಂಡ ಏನೇ ಶಿಕ್ಷೆ ನೀಡಿದರೂ ಹೆಂಡತಿಯ ದೃಷ್ಟಿಯಲ್ಲಿ ಅವನು ಪತಿಪರಮೇಶ್ವರನೆ ! ಗಂಡನಿಂದ ಅಪಮಾನಕ್ಕೆ ಒಳಗಾದರೂ ಹೆಂಡತಿಗೆ ಅವನ ಮೇಲೆ ದ್ವೇಷ ಇರಬಾರದು ! ಅವನು ಎಷ್ಟೇ ಕೆಟ್ಟದ್ದನ್ನು ಮಾಡಿದರೂ ಅವನೇ ಏಳೇಳು ಜನ್ಮಕ್ಕೆ (ಹತ್ತು ಸಾವಿರ ಜನ್ಮಕ್ಕು) ಗಂಡನಾಗಿರಬೇಕು ಎಂಬುದು ಲೋಕದ ಹೆಣ್ಣುಗಳ ನಂಬಿಕೆ ಎಂಬಂತೆಯೆ ಇಲ್ಲಿ ಸೀತೆಯನ್ನು ಚಿತ್ರಿಸಲಾಗಿದೆ.

ಸೀತೆ ಮತ್ತು ಲಕ್ಷ್ಮಣರ ಕಾಡಿನ ದಾರಿ ಪಯಣದ ಭಾಗ ಅತ್ಯಂತ ಸಂಕ್ಷಿಪ್ತವಾಗಿದೆ. ಲಕ್ಷ್ಮಣ ತನ್ನ ತಲೆ ಕಡಿಯಲು ಮುಂದಾದಾಗ ತನ್ನ ಹಣೆಬರಹವೆ ಹೀಗಿರುವಾಗ ಯಾರು ಅದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಅರಿವು ಸೀತೆಗಿದೆ ಎಂಬಂತೆ ಇಲ್ಲಿನ ಚಿತ್ರಣ ಇದೆ. ಈ ನಾಟಕದಲ್ಲಿ ವಿಧಿ, ಹಣೆಬರಹಗಳು ಮತ್ತೆ ಮತ್ತೆ ಪ್ರಸ್ತಾಪ ಆಗುತ್ತವೆ.

ಸೀತೆಯನ್ನು ಕೊಲ್ಲಲು ಕತ್ತಿ ಎತ್ತಿದಾಗ ಕತ್ತಿಯಲ್ಲಿ ಶಿಶುವಿನ ಬಿಂಬ ಲಕ್ಷ್ಮಣನಿಗೆ ಕಾಣಿಸಿಕೊಂಡು ಸೀತೆ ಗರ್ಭಿಣಿ ಎಂಬ ಸಂಗತಿ ತಿಳಿಯುತ್ತದೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಎಂಬುದು ಇಲ್ಲಿ ಸಾಂಕೇತಿಕವಾದದ್ದು. ಸ್ತ್ರೀ ಹತ್ಯೆ ಮತ್ತು ಶಿಶು ಹತ್ಯೆ ಎರಡೂ ದೋಷ ಎಂಬುದನ್ನು ನೆನಪಿಸಿಕೊಂಡ ಲಕ್ಷ್ಮಣ ಸೀತೆಯನ್ನು ಕೊಲ್ಲದೆ ಕಾಡಿನಲ್ಲಿ ಬಿಟ್ಟು ಹೋಗುತ್ತಾನೆ. ಆದರೆ ಇಂತಹ ಹೆಣ್ಣನ್ನು ಕೊಲ್ಲುವುದು ದೋಷ ಎಂದಾದ ಮೇಲೆ ಆ ದೋಷ ರಾಮನಿಗೂ ತಟ್ಟಬೇಕಲ್ಲವೇ ?

ನಾಟಕದ ಮುಂದಿನ ಭಾಗದಲ್ಲಿ ಸೂರ್ಪನಕಿ ತನ್ನ ಹಾದಿಮುಳ್ಳಾದ ಸೀತೆಯನ್ನು ನಿವಾರಿಸಿಕೊಳ್ಳುವ ಉಪಾಯದ ಮುಂದಿನ ಹೆಜ್ಜೆ ಎಂಬಂತೆ ವೇಷ ಬದಲಿಸಿ ಲವಕುಶರನ್ನು ಕೊಲ್ಲಲು ಹೊರಡುತ್ತಾಳೆ. ಆಗ ಅವಳನ್ನು ಲವಕುಶರು ಹೆಣ್ಣು ಎಂಬ ಕಾರಣಕ್ಕೆ ಕೊಲ್ಲದೆ ಬಿಡುತ್ತಾರೆ. ಇಲ್ಲಿ ಮಕ್ಕಳಿಗೆ ತಿಳಿದದ್ದು ರಾಮನಿಗೆ ತಿಳಿಯಲಿಲ್ಲವೆ ? ಪರ ಗಂಡಸಿನ ಧ್ಯಾನದಲ್ಲಿ ಇದ್ದಾಳೆ ಎಂದು ಭಾವಿಸಿದ ರಾಮನಿಗೆ ಸೀತೆಯನ್ನು ತ್ಯಜಿಸಬೇಕಿದೆ, ಕೊಲ್ಲಿಸಬೇಕಿದೆ ಅಷ್ಟೆ.

ಲಕ್ಷ್ಮಣ ಗರ್ಭಿಣಿ ಸೀತೆಯನ್ನು ಕೊಲ್ಲದೆ ಪ್ರಾಣಿಯೊಂದರ ರಕ್ತವನ್ನು ಕತ್ತಿಗೆ ಸವರಿಕೊಂಡು ತಂದು ರಾಮನಿಗೆ ತೋರಿ ಸೀತೆಯನ್ನು ಕೊಂದು ಬಂದೆ ಎಂದಾಗ ರಾಮ ಕತ್ತಿಯಲ್ಲಿ ಮೆತ್ತಿಕೊಂಡಿದ್ದ ರಕ್ತ ಸೀತೆಯದೆ ಎಂದು ತಿಳಿದು ? ಸಿಟ್ಟಿನಿಂದ ತಲೆಯನ್ನು ಕಡಿದು ಬಾ ಎಂದರೆ ಅದನ್ನೇ ನಿಶ್ಚಯವೆಂದು ತಿಳಿದುಕೊಂಡು ಕೋಮಲಾಂಗಿಯನ್ನು ಕರುಣೆ ಇಲ್ಲದೇ ಕೊಂದು ಬಂದೆಯಾ ? ಆ ಕೋಮಲಾಂಗಿಯನ್ನು ಕೊಲ್ಲುವುದಕ್ಕೆ ನಿನ್ನ ಕೈಗಳಾದರೂ ಹೇಗೆ ಎದ್ದವೋ ಲಕ್ಷ್ಮಣ ? ನಿನ್ನ ಮನಸ್ಸಿಗೆ ಏನೂ ಆಗಲಿಲ್ಲವೆ? (ಪುಟ : 27) ಎಂದು ಬಹಳ ನಾಟಕೀಯವಾಗಿ ದುಃಖಿಸುತ್ತಾನೆ. ಸೀತೆಯನ್ನು ತ್ಯಜಿಸುವಾಗ ಏನು ಅನಿಸದ ರಾಮನಿಗೆ ಈಗ ದುಃಖ ಆಗುವುದು ಸರಿ ಅನಿಸುವುದಿಲ್ಲ. ನಾಟಕ ಪಠ್ಯದ ಸೃಷ್ಟಿಕರ್ತರು ಮತ್ತು ಪ್ರದರ್ಶಕರು ತಿಪ್ಪೆ ಸಾರಿಸಲು ಈ ಪ್ರತಿಕ್ರಿಯೆಯನ್ನು ನಾಟಕೀಯವಾಗಿ ರೂಪಿಸಿದಂತೆ ಕಾಣುತ್ತದೆ.

ರಾಮನನ್ನು ಮರ್ಯಾದಾ ಪುರುಷೋತ್ತಮ ಆಗಿ ಕಂಡಿರುವ ಗಂಡಸರು ಅವನದೇನೂ ತಪ್ಪಿಲ್ಲ ಎಂದೇ ನಿರೂಪಿಸಲು ಹೆಣಗಿದ್ದಾರೆ. ಹಾಗಾಗಿ ಈ ನಾಟಕದಲ್ಲಿ ಅವನು ಮಾನವೀಯ ಕರುಣಾಮೂರ್ತಿ; ಒಮ್ಮೆ ಸಿಟ್ಟಿನ ಕೈಗೊಂಬೆ, ಇನ್ನೊಮ್ಮೆ ಅವನು ವಿಧಿಯ ಕೈಗೊಂಬೆ, ಮತ್ತೊಮ್ಮೆ ರಾಜಕಾರ್ಯದ ಅನಿವಾರ್ಯತೆಗೆ ಸಿಲುಕಿದ ದೊರೆ, ಮಗದೊಮ್ಮೆ ಸೂರ್ಪನಕಿಯಂಥ ಯಾರದೋ ಕಾಣದವರ ಸಂಚಿನ ಕೈಗೊಂಬೆ ಎಂದೆಲ್ಲ ಚಿತ್ರಿತವಾಗಿದ್ದಾನೆ.

ಈ ನಾಟಕದಲ್ಲಿನ ಕುಶನ ಜನನದ ಪ್ರಸಂಗ ಒಂದು ಕುತೂಹಲಕರವಾದ ಪ್ರಸಂಗ. ಒಮ್ಮೆ ಸೀತೆ ನದಿಯಲ್ಲಿ ಬಟ್ಟೆ ತೊಳೆದುಕೊಂಡು ಬರಲು ಹೋಗುವಾಗ ತಾನು ಹೆತ್ತ ಲವನನ್ನು ವಾಲ್ಮೀಕಿಗೆ ಒಪ್ಪಿಸಿ ಹೋಗುತ್ತಾಳೆ. ದಾರಿಯಲ್ಲಿ ಮಂಗಗಳು ತಮ್ಮ ಮರಿಯನ್ನು ಎದೆಗಪ್ಪಿಕೊಂಡಿರುವುದನ್ನು ನೋಡಿ ? ಈ ಮಂಗಗಳು ತಮ್ಮ ತಮ್ಮ ಮರಿಗಳನ್ನು ಎದೆಗಪ್ಪಿಕೊಂಡು ಅರಗಳಿಗೆಯೂ ಬಿಡದಂತೆ ಸಂಚರಿಸುತ್ತಿರುವವಲ್ಲ. ಜ್ಞಾನವಿಲ್ಲದ ಶುಕ ಮೃಗಗಳಿಗು ಮಕ್ಕಳೆಂಬ ವ್ಯಾಮೋಹ ಈ ರೀತಿ ಇದ್ದ ಮೇಲೆ ನಾನೆಂತಹ ಕಟುಮನಸ್ಸಿನವಳು. ಕೂಸಿನ ಕಡೆಗೆ ಲಕ್ಷ್ಯವಿಲ್ಲದೆ ಬಿಟ್ಟು ಬಂದೆನಲ್ಲ. (ಪುಟ : 31) ಎಂದು ಕೊಂಡು ಬಟ್ಟೆಗಳನ್ನು ಅಲ್ಲಿಯೇ ಬಿಟ್ಟು ಮಗುವನ್ನು ಎತ್ತಿಕೊಂಡು ಬರುತ್ತಾಳೆ. ಆನಂತರ ಆಕೆ ಲವನನ್ನು ಎತ್ತಿಕೊಂಡು ಹೋದದ್ದನ್ನು ಗಮನಿಸದ ವಾಲ್ಮೀಕಿ ತೊಟ್ಟಿಲಲ್ಲಿ ಮಗು ಇಲ್ಲದ್ದನ್ನು ಕಂಡು ಆತಂಕವಾಗಿ ತನ್ನ ದರ್ಭೆಯಿಂದ ಒಂದು ಮಗುವನ್ನು ಸೃಷ್ಟಿಸಿ ಇಡುತ್ತಾನೆ. ಮರಳಿ ಬಂದ ಸೀತೆಗೆ ಇದನ್ನೂ ನಿನ್ನ ಶಿಶುವಿನಂತೆಯೆ ಪಾಲಿಸು ಎಂದು ಹೇಳುತ್ತಾನೆ. ಇದೊಂದು ಜನಪದ ಆಶಯ ಎಂಬಂತೆ ಹಲವು ಜನಪದ ಕಥನಗಳಲ್ಲಿ ಬಳಕೆ ಆಗಿದೆ.

ಕುಶ ನೇರವಾಗಿ ಸೀತೆಯ ಮಗು ಅಲ್ಲ. ಅವನು ವಾಲ್ಮೀಕಿಯ ದರ್ಬೆಯಿಂದ ಹುಟ್ಟಿದ ಮಗ. ಇದು ಕೂಡ ಸಾಂಕೇತಿಕವಾದದ್ದು. ಕೆಲವರು ಅಯೋನಿಜರಾದರೂ ಅವರು ಹೆಣ್ಣಿನಲ್ಲಿ ಜನಿಸಿದವರೆ ಆಗಿರುತ್ತಾರೆ. ಆದರೆ ಕುಶ ಹೆಣ್ಣಿಗೆ ಜನಿಸಿದ ಮಗು ಅಲ್ಲ. ಅವನು ಪುರುಷ ಪುತ್ರ. ಆದರೂ ಸೀತೆ ಅವನನ್ನು ತನ್ನ ಮಗ ಲವನಿಗಿಂತ ಹೆಚ್ಚಾಗಿಯೇ ಪ್ರೀತಿಯಿಂದ ಸಾಕುತ್ತಾಳೆ. ಗೊಂಡರ ರಾಮಾಯಣ ಮತ್ತು ಜನಪದ ರಾಮಾಯಣ ಎರಡೂ ಕಡೆ ಕುಶನ ಜನನ ಇದೇ ರೀತಿಯಾಗಿ ಅಯೋನಿಜ ಎಂಬಂತೆ ನಿರೂಪಣೆಯಾಗಿದೆ. ಆದರೆ ಶಿಷ್ಟ ಪಠ್ಯಗಳಲ್ಲಿ ಎಲ್ಲಿಯೂ ಈ ರೀತಿಯ ಜನನದ ಪ್ರಸ್ತಾಪ ಇಲ್ಲ. ಅಚ್ಚರಿ ಎಂದರೆ ಸೀತೆ ಇಬ್ಬರನ್ನೂ ತನ್ನ ಮಕ್ಕಳೆಂದೆ ಒಪ್ಪಿಕೊಳ್ಳುತ್ತಾಳೆ. ಹಾಗೆಯೇ ರಾಮ ಕೂಡ ಪ್ರಶ್ನಿಸದೇ ಒಪ್ಪಿಕೊಳ್ಳುತ್ತಾನೆ. ಇಲ್ಲಿ ಸೀತೆಯನ್ನು ಅವಳ ಮಕ್ಕಳನ್ನು ಹೆತ್ತ ತಾಯಿ ಎಂದು ಹೇಳದೆ ವಾಲ್ಮಿಕಿ ಆಶ್ರಮದಲ್ಲಿ ವಾಲ್ಮೀಕಿಯಿಂದ ಒಂದು ಮಗುವನ್ನು ಪಡೆದ ತಾಯಿ ಎಂದು ತಿಳಿಸಲಾಗಿದೆ.

ಹಾಗೆ ನೋಡಿದರೆ ಅಣ್ಣ ಲವನಿಗಿಂತ ಸೀತೆಯಲ್ಲಿ ಜನಿಸದ, ವಾಲ್ಮೀಕಿ ಸೃಷ್ಟಿಸಿದ, ಸೀತೆ ಸಾಕಿದ ಕುಶ ಹೆಚ್ಚು ಬುದ್ಧಿಶಾಲಿಯಾಗಿಯೂ, ಪರಾಕ್ರಮಿಯಾಗಿಯೂ ಕಂಡುಬರುತ್ತಾನೆ. ಸೀತೆಗೆ ಹುಟ್ಟಿದ ಲವನ ಹಾಗೆ ಮುನಿಪುತ್ರನು ಯಾವುದಾದರೂ ಒಂದು ಹೆಣ್ಣಿಗೆ ಹುಟ್ಟಿರಬಹುದಲ್ಲವೇ? ಆದರೆ ನಾಟಕದಲ್ಲಿ ಸೀತೆಯೆ ಅವನ ತಾಯಿ ಎಂದು ಪ್ರಶ್ನಾತೀತವಾಗಿ ಪ್ರತಿಪಾದಿಸಲಾಗಿದೆ.  ಸೀತಾ ಪರಿತ್ಯಾಗದ ವೇಳೆ ದಿವ್ಯದೃಷ್ಟಿಯಿಂದ ಎಲ್ಲಾ ತಿಳಿದುಕೊಂಡೆ ಎನ್ನುವ ವಾಲ್ಮೀಕಿಗೆ ಮಗುವನ್ನು ಸೀತೆಯೆ ಎತ್ತಿಕೊಂಡು ಹೋದ ವಿಚಾರ ತಿಳಿಯಲಿಲ್ಲವೆ ? ವಾಲ್ಮೀಕಿಯಂಥ ಋಷಿಗಳಿಗೆ ಮಗುವನ್ನು ಸೃಷ್ಟಿಸುವ ಶಕ್ತಿ ಇತ್ತು ಎಂಬ ಈ ಸಂಗತಿ ಕೂಡ ಒಂದು ಜನಪದ ಆಶಯವೇ ಹೌದು.

ಈ ನಾಟಕದ ಕೊನೆಯಲ್ಲಿ ರಾಮ ಸೀತೆಯರ ನಡುವೆ ಯಾವುದೇ ಸಂಭಾಷಣೆಗಳು ಕಂಡು ಬರುವುದಿಲ್ಲ. ಆಕೆ ರಾಮನನ್ನು ಪ್ರಶ್ನಿಸುವುದಿಲ್ಲ. ಇಲ್ಲೆಲ್ಲ ನಾಟಕವು ಅತ್ಯಂತ ತ್ವರಿತಗತಿಯಲ್ಲಿ ಸಾಗಿದೆ. ನಾಟಕಕಾರರು ಇಲ್ಲಿನ ಸನ್ನಿವೇಷಗಳನ್ನು ಸಾಕಷ್ಟು ಸಂಕ್ಷಿಪ್ತಗೊಳಿಸಿದ್ದಾರೆ. ಇಲ್ಲಿನ ಪಾತ್ರಗಳಲ್ಲಿ ಯಾವುದೇ ತಕರಾರಿಲ್ಲದೆ ನಾಟಕವು ಸುಖಾಂತ್ಯ ಕಾಣುವುದು ನಾಟಕಕಾರರ ಜಾಣ್ಮೆಯೆ ಸರಿ.

ಹೆಣ್ಣೊಬ್ಬಳು 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಜನಪದರ ನಂಬಿಕೆಯಂತೆ ಈ ದೊಡ್ಡಾಟದಲ್ಲಿ ಸೂರ್ಪನಕಿಯನ್ನು ಚಿತ್ರಿಸಲಾಗಿದೆ. ಮೊದಲು ಸೀತೆಯನ್ನು ಶ್ರೀರಾಮನು ಅಪರಾಧಿ ಎಂದು ನಿರ್ಣಯಿಸಲು ಕಾರಣ ಆದವಳೆ ಸೂರ್ಪನಕಿ. ನಂತರದಲ್ಲಿ ಲವಕುಶರ ಮೇಲೆ ವಿಭೀಷಣನನ್ನು ಎತ್ತಿ ಕಟ್ಟಿದವಳೂ ಇವಳೇ, ರಾಮ– ಲವಕುಶರ ಕಾಳಗಕ್ಕೂ ಇವಳೆ ಕಾರಣ. ಹೇಗಾದರೂ ಮಾಡಿ ಸೀತೆಯನ್ನು ಇಲ್ಲವಾಗಿಸಿ ರಾಮನನ್ನು ಮದುವೆ ಆಗುವುದು ಇವಳ ಉದ್ದೇಶ. ಮೋಹಿನಿ, ಯೋಗಿನಿ, ಅಪ್ಸರೆ– ಸಂಗೀತ ಕಲಾವಿದೆ, ವಿಭೀಷಣನ ಅಕ್ಕ, ಮಾರಿದೇವಿ, ಕೊರವಂಜಿ, ರಕ್ಕಸಿ ಹೀಗೆ ಹಲವು ರೂಪಗಳನ್ನು ತಾಳಬಲ್ಲ ಶಕ್ತಿ ಇವಳಿಗೆ ಇದೆ. ಹೀಗೆ ಒಳಿತು ಮತ್ತು ಕೆಡುಕು ಎರಡೂ ವ್ಯಕ್ತಿತ್ವವುಳ್ಳ ಪಾತ್ರವಾಗಿ ಹೆಣ್ಣು ತನ್ನ ರೂಪ ಬದಲಿಸಬಲ್ಲಳು; ಅವಳು ಮನಸ್ಸು ಮಾಡಿದರೆ ಒಳ್ಳೆಯದು ಘಟಿಸುವಂತೆಯೂ ಮುನಿದರೆ ಕೇಡು ಘಟಿಸುವಂತೆಯೂ ಮಾಡಬಲ್ಲಳು ಎಂಬಂತೆ ಇವಳ ಪಾತ್ರವನ್ನು ನಾಟಕದುದ್ದಕ್ಕೂ ಚಿತ್ರಿಸಲಾಗಿದೆ.

ಮಿಕ್ಕೆಲ್ಲ ರಾಮಾಯಣ ಪಠ್ಯಗಳಲ್ಲಿ ಸೀತೆಯನ್ನು ಶ್ರೀರಾಮನು ಮತ್ತೆ ಕಾಡಿಗೆ ಕಳಿಸಲು ಅಗಸನೆ ಕಾರಣವಾದರೆ ಚಿತ್ರಪಟ ರಾಮಾಯಣದಲ್ಲಿ ಸೂರ್ಪನಕಿ ಕಾರಣವಾಗಿದ್ದಾಳೆ. ಜನಪದ ಪ್ರಜ್ಞೆ ಇಲ್ಲಿ ಅಗಸರನ್ನು ಅಪರಾಧಿ ಸ್ಥಾನದಿಂದ ಬಿಡುಗಡೆಗೊಳಿಸಿ ಹೆಣ್ಣನ್ನು ('ಸೂರ್ಪನಕಿ'ಯನ್ನು) ಅಪರಾಧಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸ್ಥಾನದಲ್ಲಿ ಸ್ಥಾಪಿಸುತ್ತದೆ. ಯಾವ ಜನಪದ ಪಠ್ಯಗಳಲ್ಲೂ, ಯಾವ ಶಿಷ್ಟ ಪಠ್ಯಗಳಲ್ಲು ಈ ಚಿತ್ರಪಟ ರಾಮಾಯಣದಲ್ಲಿ ಇರುವಂತಹ ಸೂರ್ಪನಕಿಯ ಪಾತ್ರ ಇಲ್ಲ. ಆದರೆ ಗಿರಿಯಮ್ಮ ತನ್ನ ಲವಕುಶ ಕಾಳಗದಲ್ಲಿ ಸೂರ್ಪನಕಿಗೆ ಬದಲಾಗಿ ತಾಟಗಿತ್ತಿ, ಮಂತುಣಿ ಎನ್ನುವ ರೂಪಾಂತರಿ ಹೆಣ್ಣಿನ ಚಿತ್ರಣವನ್ನು ನೀಡಿದ್ದಾಳೆ. ಅವಳು ಸೂರ್ಪನಕಿಯ ಹಾಗೆ ಸೀತೆಯ ದುರಂತ ಬದುಕಿಗೆ ಕಾರಣಳಾಗುತ್ತಾಳೆ. ಒಂದು ಹೆಣ್ಣಿಗೆ ಮಾತೃತ್ವ ಎಷ್ಟು ಮುಖ್ಯವೋ ಪಾತಿವ್ರತ್ಯವು ಅಷ್ಟೇ ಮುಖ್ಯ ಎಂಬ ಮೌಲ್ಯವನ್ನು ಹೇಳುತ್ತಲೆ ರಾಮ–ಸೀತೆ ಇಬ್ಬರನ್ನೂ ನಿರಾಪರಾಧಿಗಳನ್ನಾಗಿ ಚಿತ್ರಿಸುವ ಇರಾದೆ ಇರುವುದರಿಂದಲೆ ಈ ನಾಟಕದಲ್ಲಿ ಸೂರ್ಪನಕಿಯನ್ನು ಹೀಗೆ ರೂಪಿಸಲಾಗಿದೆ. ವಿವಾಹವಾದ ಪುರುಷನನ್ನು (ರಾವಣನನ್ನು) ಸೀತೆ ಮೋಹಿಸುವುದಿರಲಿ ಮನದಲ್ಲು ನೆನಪಿಸಿಕೊಳ್ಳಬಾರದು. ಹಾಗೆಯೇ ವಿವಾಹವಾದ ಪುರುಷನನ್ನು (ರಾಮನನ್ನು) ಸೂರ್ಪನಕಿ ಕೂಡ ಮದುವೆ ಮಾಡಿಕೊಳ್ಳಲಾಗದು. ಸೀತೆ ಪತಿವ್ರತೆ; ಆದರೆ ಸೂರ್ಪನಕಿ ಸಂಚುಗಾತಿ. ಹಾಗಾಗಿಯೆ ಸೀತಾ ಪರಿತ್ಯಾಗ ನಡೆಯುತ್ತದೆ. ಹೀಗೆ ಈ ಚಿತ್ರಪಟ ರಾಮಾಯಣ ದೊಡ್ಡಾಟವು ಸೀತೆ ಮತ್ತು ಸೂರ್ಪನಕಿ ಈ ಎರಡೂ ಪಾತ್ರಗಳನ್ನು ಗಂಡನ್ನು ರಕ್ಷಿಸುವ ಕೆಲಸಕ್ಕೆ ದುಡಿಸಿಕೊಂಡಿದೆ.

ಸೀತೆಯೋ, ಸೂರ್ಪನಕಿಯೊ ಅಂತು ತಪ್ಪು ಗಂಡಿನದಲ್ಲ. ಹೆಣ್ಣಿನದೇ. ಹೆಣ್ಣನ್ನು ಸದಾ ಕಟಕಟೆಯಲ್ಲಿ ನಿಲ್ಲಿಸಬೇಕು ಅಷ್ಟೆ. ಹೆಣ್ಣಿಗೆ ಹೆಣ್ಣೇ ಶತ್ರು ಎಂದು ಹೇಳುವ ಜನಪದ ಗಂಡು ಪಠ್ಯದಂತೆ ಈ ನಾಟಕ ಇದೆ. ಸೀತೆ ಮತ್ತು ಸೂರ್ಪನಕಿ ಎಂಬ ಎರಡು ಪ್ರಧಾನ ಹೆಣ್ಣು ಮಾದರಿಗಳನ್ನು ನೀಡಿ ಈ ಎರಡರಲ್ಲಿ ನಿಮ್ಮ ಆಯ್ಕೆ ಯಾವುದು ಹೇಳಿ ಎಂಬ ಪ್ರಶ್ನೆಯನ್ನು ಗಂಭೀರವಾಗಿ ಹೆಣ್ಣು ಸಮುದಾಯದ ಮುಂದೆ ಎಸೆಯುವ ನಾಟಕ ಇದು.

## ಪರಾಮರ್ಶನ ಗ್ರಂಥಗಳು


- **ಮುದೇನೂರ ಸಂಗಣ್ಣ ಸಂ (1985) :** ಚಿತ್ರಪಟ ರಾಮಾಯಣ (ದೊಡ್ಡಾಟ) ಉಡುಪಿ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರ.
- **ಲೀಲಾವತಿ ಎಸ್. ರಾವ್ (2003) :** ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು : ಸಮಗ್ರ ದಾಸ ಸಾಹಿತ್ಯ ಸಂಪುಟ ಸಂ–18, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.


■■

*– 56ನೇ ಪುಟದಿಂದ ಮುಂದುವರೆದುದು*

## ಪರಾಮರ್ಶನ ಗ್ರಂಥಗಳು


- **Jerome Sarris (2018) :** Herbal medicines in the treatment of psychiatric disorders: 10-year updated review Jul; 32(7) : 1147-1162
- **Matthew K. Hawks , Paul F. Crawford 3rd, David A Moss, Matthew J Snyder (2021 Jun.) :** Integrative Medicine: Herbal Supplements. FP Essent, 505:23-27.
- **E. Ernst (2002 Sep.) :** Ayurvedic Medicines. Pharmacoepidemiol Drug Saf. 11(6):455-6
- **Pulok K. Mukherjee, Ranjit K. Harwansh, Shiva Bahadur, Subhadip Banerjee, Amit Kar, Joydeb Chanda, Sayan Biswas, S.K.Milan (2017 Feb. 2) :** Ahmmed, Development of Ayurveda - Tradition to trend. J Ethnopharmacol. 197:10-24


■■

*– 27ನೇ ಪುಟದಿಂದ ಮುಂದುವರೆದುದು*

ಮಾತುಗಳು ಹೆಣ್ಣಿನ ಬಗ್ಗೆಯ ಚಿಂತನೆಯ ದಾಟಿಯನ್ನು ಸೂಚಿಸುತ್ತದೆ. ಮತ್ತು ಎಲ್ಲರೂ ತಮ್ಮ ಹೆಂಡತಿಯರು ಪತಿವ್ರತೆಯರಾಗಿರಲೇಬೇಕು ಎಂದು ಯೋಚಿಸುವುದು ಅದೇ ಆಲೋಚನೆಗಳು ಬೇರೆ ಹೆಂಗಸರ ಬಗ್ಗೆ ಚಿಂತಿಸುವಾಗ ಮತ್ತು ಮಾತನಾಡುವಾಗ ಏಕೆ ಬರುವುದಿಲ್ಲ ಎಂಬ ಹಲವಾರು ಪ್ರಶ್ನೆಗಳು ಗಾಢವಾಗಿ ಕಾಡುತ್ತವೆ.

ಕಾಡು ಒಂದು ಕಲಾತ್ಮಕ ಚಿತ್ರ ಆದ್ದರಿಂದಲೇ ಇದು ಕಡಿಮೆ ಮಾತು ಮತ್ತು ಹೆಚ್ಚು ಸಂಕೇತಗಳು. ಉಳಿದಂತೆ ಕಾಡು ಕಾದಂಬರಿಯ ವಸ್ತುವನ್ನು ಸಿನಿಮಾದಲ್ಲಿಯೇ ಅಲ್ಪಸ್ವಲ್ಪ ಬದಲಾವಣೆ ಮಾಡಿ ತೆರೆಮೇಲೆ ತಂದಿದ್ದಾರೆ ನಿರ್ದೇಶಕರು.

ಹೀಗೆ ಕಾಡು ಕಾದಂಬರಿ ಮತ್ತು ಸಿನಿಮಾದ ಮುಖ್ಯ ವಿಷಯ ಕ್ರೌರ್ಯವಾದರೂ ಆ ಕ್ರೌರ್ಯಕ್ಕೆ ಸಿಕ್ಕಿ ನಲುಗುವವರು ಮಾತ್ರ ಕಮಲಕ್ಕನಂತಹ ಮಹಿಳೆ ಮತ್ತು ಮುಗ್ಧ ಕಿಟ್ಟಿ. ಕಾಮದ ವಿಷಯದಲ್ಲೂ ಅಷ್ಟೇ ಅದು ಹೆಣ್ಣಿನದೋ ಗಂಡಿನದೋ ತಪ್ಪೇ ಆಗಿರಲಿ ಅದರ ಪರಿಣಾಮ ಮಾತ್ರ ಹೆಣ್ಣೆ ಅನುಭವಿಸುವಂತದ್ದು. ಇದು ಇಂದಿಗೂ ಬದಲಾಗಿಲ್ಲ. ಹೆಣ್ಣನ್ನು ಎಲ್ಲಿಯವರೆಗೆ ಒಂದು ಭೋಗದ ವಸ್ತು ಎಂದು ನೋಡುವವರೋ ಅಲ್ಲಿಯವರೆಗೆ ಇದು ತಪ್ಪಿದ್ದಲ್ಲ. ಇದು ಹಳ್ಳಿಗೆ ಮಾತ್ರ ಮೀಸಲಾಗಿಲ್ಲ. ನಗರ, ಸೈನ್ಯ, ಯುದ್ಧ, ವ್ಯಾಪಾರ, ಎಲ್ಲ ಕಡೆಯಲ್ಲೂ ಹೆಣ್ಣು ಒಂದು ಅನುಭೋಗಿ ವಸ್ತುವಾಗಿಯೇ ಕಾಣುತ್ತಾಳೆ. ನಡೆಯುತ್ತಿರುವ ಪ್ರಚಲಿತ ವಿದ್ಯಾಮಾನಗಳು ಇದಕ್ಕೆ ಸಾಕ್ಷಿಯಾಗಿವೆ. ಆದ್ದರಿಂದ ನಾವೆಲ್ಲರೂ ಹೆಣ್ಣಿಗೆ ಗೌರವ ಕೊಡುವ, ಅವಳಿಗೆ ಮರ್ಯಾದೆ ನೀಡುವ ಅವಳನ್ನು ಮನುಷ್ಯಳಂತೆಯೇ ನೋಡುವ ಅರಿವು ಮತ್ತು ಶಿಕ್ಷಣವನ್ನು ಕೊಡುವುದು ಎಲ್ಲರ ಕರ್ತವ್ಯವಾಗಿದೆ.

## ಕೊನೆ ಟಿಪ್ಪಣಿ

1. ಜಿ.ಎಸ್.ಅಮೂರ; ಕನ್ನಡ ಕಾದಂಬರಿ ಪರಂಪರೆ ಮತ್ತು ಕೃಷ್ಣ ಆಲನಹಳ್ಳಿ, ಪು. 19 ಪುಸ್ತಕ : ಟಿ.ಪಿ.ಅಶೋಕ್, ಸಾಹಿತ್ಯ ಸಂದರ್ಭ
2. ಕಾಡು ಕಾದಂಬರಿ, ಪು. 31
3. ಕಾಡು ಕಾದಂಬರಿ, ಪು. 31
4. ಕಾಡು ಕಾದಂಬರಿ, ಪು. 85
5. ವಿವೇಕಾ ಶಾನಭಾಗ; ಶ್ರೀಕೃಷ್ಣ ಆಲನಹಳ್ಳಿ ವಾಚಿಕೆ, avadimag ಅಂತರಜಾಲ.

## ಪರಾಮರ್ಶನ ಗ್ರಂಥಗಳು


- **ಕಾಡು, ಶ್ರೀಕೃಷ್ಣ ಆಲನಹಳ್ಳಿ (2008) :** ಮೈಸೂರು ಭಾರತೀ ಪ್ರಕಾಶನ, ಸರಸ್ವತಿಪುರಂ, 10ನೇ ಮುದ್ರಣ.
- **ಟಿ.ಪಿ. ಅಶೋಕ್ (2011) :** ಸಾಹಿತ್ಯ ಸಂದರ್ಭ, ಬೆಂಗಳೂರು ಲಕ್ಷ್ಮೀ ಮುದ್ರಣಾಲಯ, ಚಾಮರಾಜಪೇಟೆ, 2ನೇ ಮುದ್ರಣ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಮಾಧ್ಯಮ, ತಂತ್ರಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ

✍ **ಲಾಡ್ಲೇಮಶಾಕ ಪೀ ನದಾಫ್,** ಸಂಶೋಧನಾ ವಿದ್ಯಾರ್ಥಿ, ಡಿಬಿಎಚ್‌ಪಿ ಸಭಾ ಧಾರವಾಡ.

## ಪರಿಚಯ

ನಮ್ಮ ಗ್ರಹದಲ್ಲಿನ ಘಟನೆಗಳ ಹಾದಿಯನ್ನು ಪ್ರಭಾವಿಸುವ ಸಾಮರ್ಥ್ಯದೊಂದಿಗೆ ದೊಡ್ಡ ವಿಶ್ವ ಶಕ್ತಿಯ ಹೊಸ್ತಿಲಲ್ಲಿರುವ ಭಾರತದಂತಹ ದೇಶಕ್ಕೆ ಗ್ರಾಮೀಣ ಅಭಿವೃದ್ಧಿಯು ಈಗಿನ ಅಗತ್ಯವಾಗಿದೆ. ಆದಾಗ್ಯೂ, ನಾವು ಆಂತರಿಕ ಭಿನ್ನಾಭಿಪ್ರಾಯಗಳು ಮತ್ತು ಕಲಹಗಳಿಲ್ಲದ ದೇಶವಾಗಿ, ಆರ್ಥಿಕ ವ್ಯವಸ್ಥೆ ಮತ್ತು ಸುಸಂಘಟಿತ ಸಾಮಾಜಿಕ ವ್ಯವಸ್ಥೆ ಹೊಂದಿರುವ ದೇಶವಾಗಿದ್ದಾಗ ಮಾತ್ರ ನಾವು ನನಸಾಗುವ ಕನಸು ಇದು. ವಾಸ್ತವವಾಗಿ ಅಭಿವೃದ್ಧಿಯ ಸಾರವು ಯಾರೂ ಧೈರ್ಯಮಾಡದ ರೆಜಿಮೆಂಟೆಡ್ ವ್ಯವಸ್ಥೆಯಲ್ಲಿಲ್ಲ. ಒಪ್ಪುವುದಿಲ್ಲ ಆದರೆ ಎಲ್ಲರನ್ನೂ ಒಳಗೊಂಡಿರುವ ವಿತರಣೆಯಲ್ಲಿ ಪ್ರತಿಯೊಬ್ಬರೂ ಸಮಾನ ಪಾತ್ರವನ್ನು ವಹಿಸುತ್ತಾರೆ. ಗ್ರಾಮೀಣಾಭಿವೃದ್ಧಿಯ ಅನ್ವೇಷಣೆಯು ನಮ್ಮನ್ನು ಸಬಲೀಕರಣದ ಅಗತ್ಯವಿರುವ ಸಮಾಜದ ವರ್ಗಗಳನ್ನು ಸಬಲೀಕರಣಗೊಳಿಸುವ ದಿಕ್ಕಿನಲ್ಲಿ ಮುನ್ನಡೆಸಬೇಕು. ಗ್ರಾಮೀಣಾಭಿವೃದ್ಧಿಯಲ್ಲಿ ಮಾಧ್ಯಮವು ಯಾವ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ಮಾಧ್ಯಮದ ಸನ್ನಿವೇಶವನ್ನು ಅದರ ಎಲ್ಲಾ ಆಯಾಮಗಳಲ್ಲಿ ಅರ್ಥಮಾಡಿಕೊಳ್ಳಬೇಕು, ಪ್ರಸ್ತುತ ಅಧ್ಯಯನವನ್ನು ವಿನ್ಯಾಸಗೊಳಿಸಲಾಗಿದೆ.

ಒಂದು ಕಡೆ ಶಿಕ್ಷಣ ಮತ್ತು ಸಾಮಾನ್ಯ ಅರಿವಿನ ಹರಡುವಿಕೆ ಮತ್ತು ಇನ್ನೊಂದು ಕಡೆ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನಗಳಲ್ಲಿನ ಕ್ರಾಂತಿಕಾರಿ ಬದಲಾವಣೆಗಳು ಮಾಧ್ಯಮವನ್ನು ನಮ್ಮ ಕಾಲದಲ್ಲಿ ಸಮೂಹ ಶಿಕ್ಷಣ ಮತ್ತು ಸಮೂಹ ಸಜ್ಜುಗೊಳಿಸುವ ಅತ್ಯಂತ ಪ್ರಬಲ ಸಾಧನವನ್ನಾಗಿ ಮಾಡಿದೆ. ಮಾಧ್ಯಮವನ್ನು ಈಗ ಹೆಚ್ಚು ಪರಿಣಾಮಕಾರಿ ಮತ್ತು ಬೇಡಿಕೆಯ ಸಂವಹನ ಸಾಧನವಾಗಿ ನೋಡಲಾಗುತ್ತಿದೆ. ವಾಸ್ತವವಾಗಿ ಮಾಧ್ಯಮವು ಈಗ ನಮ್ಮ ಜೀವನದ ಎಲ್ಲಾ ಕೆಲಸಗಳನ್ನು ಪ್ರಭಾವಿಸುತ್ತದೆ ವೈಯಕ್ತಿಕ, ಸಾಮಾಜಿಕ ಮತ್ತು ವೃತ್ತಿಪರ. ಇದು ಪ್ರಜಾಪ್ರಭುತ್ವದ ನಿಜವಾದ ಅರ್ಥ ಮತ್ತು ಇದು ಮಾಧ್ಯಮ ಮತ್ತು ಮಾಧ್ಯಮವು ಪ್ರಮುಖ ಪಾತ್ರ ವಹಿಸಬೇಕಾದ ಕ್ಷೇತ್ರವಾಗಿದೆ. ಗ್ರಾಮೀಣಾಭಿವೃದ್ಧಿಯಲ್ಲಿ ಮಾಧ್ಯಮವು ಯಾವ ಪಾತ್ರವನ್ನು ವಹಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ಮಾಧ್ಯಮದ ಸನ್ನಿವೇಶವನ್ನು ಅದರ ಎಲ್ಲಾ ಆಯಾಮಗಳಲ್ಲಿ ಅರ್ಥಮಾಡಿಕೊಳ್ಳಬೇಕು, ಸಮಾಜದ ಮೇಲೆ ಮಾಧ್ಯಮದ ವ್ಯಾಪ್ತಿ, ಮತ್ತು ಪ್ರಭಾವ ಮತ್ತು ಅದು ನಿರ್ವಹಿಸಬೇಕಾದ ಕಾರ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಭಿವೃದ್ಧಿಶೀಲ ಸಮಾಜದಲ್ಲಿ ಮಾಧ್ಯಮವು ಸಾಮಾಜಿಕ ಬದಲಾವಣೆಯನ್ನು ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಆದರೆ ಇದಕ್ಕೂ ಮೊದಲು ಮಾಹಿತಿ ತಂತ್ರಜ್ಞಾನವು ಮಾಧ್ಯಮದ ಮುಖವನ್ನು ಹೇಗೆ ಬದಲಾಯಿಸಿದೆ ಎಂಬುದನ್ನು ನೋಡುವುದು ಯೋಗ್ಯವಾಗಿದೆ ಮತ್ತು ಮಾಧ್ಯಮವು ಒದಗಿಸುವ ಸಮಾಜವನ್ನು ಬದಲಾಯಿಸಿದೆ. ಸಂವಹನ ಕ್ಷೇತ್ರಗಳಲ್ಲಿನ ತಾಂತ್ರಿಕ ಬೆಳವಣಿಗೆಗಳ ವೇಗವು ಕಳೆದ ಎರಡು ಮೂರು ದಶಕಗಳಲ್ಲಿ ಮಾಧ್ಯಮ ಮತ್ತು ಸಮಾಜದ ಮುಖವನ್ನು ಬದಲಿಸಿದೆ ಎಂಬುದರಲ್ಲಿ ಸಂದೇಹವಿಲ್ಲ. ಈ ಬೆಳವಣಿಗೆಗಳು ತುಂಬಾ ವೇಗವಾಗಿದ್ದು, ಸಾಮಾಜಿಕ ವಿಜ್ಞಾನಿಗಳು ಮತ್ತು ಸಂಶೋಧಕರು ವಿವಿಧ ಸಮುದಾಯಗಳು ಮತ್ತು ಸಾಮಾಜಿಕ ಗುಂಪುಗಳ ಮೇಲೆ ಅವುಗಳ ಪ್ರಭಾವವನ್ನು ನಿರ್ಣಯಿಸಲು, ಅರ್ಥಮಾಡಿಕೊಳ್ಳಲು ಮತ್ತು ಅರ್ಥೈಸಲು ಕಷ್ಟಪಡುತ್ತಿದ್ದಾರೆ. ಹೊಸ ಮಾಹಿತಿ ತಂತ್ರಜ್ಞಾನಗಳ ಪ್ರಸರಣವು ಭಾರತೀಯ ಸಮಾಜಗಳಿಗೆ ದಾರಿ ಮಾಡಿಕೊಡುತ್ತಿದೆ, ಅವುಗಳ ಬಹು ಅರ್ಜಿಗಳನ್ನು ಹೆಚ್ಚು ಹೆಚ್ಚು ಸಿನಿಕತನಕ್ಕೆ ಜನ್ಮ ನೀಡುತ್ತಿವೆ. ಮಾಧ್ಯಮಗಳು ಈ ವಿದ್ಯಮಾನಕ್ಕೆ ಅಸಹಾಯಕ ಬಲಿಪಶುಗಳಾಗಿವೆ. ಇಡೀ ಜಗತ್ತನ್ನು ಜಾಗತಿಕ ಗ್ರಾಮವಾಗಿ ಪರಿವರ್ತಿಸಿದ ನಂತರ ಹೊಸ ಮಾಹಿತಿ ತಂತ್ರಜ್ಞಾನಗಳು, ಧ್ವನಿ, ಗ್ರಾಫಿಕ್ಸ್ ಮತ್ತು ಪಠ್ಯವನ್ನು ಹೆಚ್ಚಿನ ವೇಗದಲ್ಲಿ ಮತ್ತು ಕೌಶಲ್ಯದಲ್ಲಿ ಸಂಗ್ರಹಿಸಲು ತಂದಿವೆ, ಇದು ಮೂಲಭೂತವಾಗಿ ಮಾಹಿತಿ ಸಮಾಜವನ್ನು ರಚಿಸುವ ಗುರಿಯನ್ನು ಹೊಂದಿದೆ. ಭವಿಷ್ಯದಲ್ಲಿ, ಮಾಹಿತಿ ಶ್ರೀಮಂತ ಮತ್ತು ಮಾಹಿತಿಯ ನಡುವಿನ ಅಂತರವನ್ನು ವಿಸ್ತರಿಸುತ್ತದೆ

ಬಡವರು. ತಂತ್ರಜ್ಞಾನದ ಉತ್ಪಾದಕರು ಮತ್ತು ಫಲಾನುಭವಿಗಳಾಗಿರುವ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ತಾಂತ್ರಿಕ ಅಭಿವೃದ್ಧಿಯ ಅಸಮಾನ ವೇಗವು ನಗರ ಕೇಂದ್ರಗಳ ನಡುವೆ ಅಸಮಾನತೆಗಳನ್ನು ಹೆಚ್ಚಿಸಿದೆ ಮತ್ತು ಗ್ರಾಮೀಣ ಪರಿಧಿ. ಇಂದಿನ ತಂತ್ರಜ್ಞಾನವು ಸ್ವತಃ ವರ್ಗ ಆಧಾರಿತವಾಗಿದೆ, ಸಾಮಾಜಿಕ ಗುಂಪುಗಳ ನಡುವೆ ವಿಭಜನೆಯನ್ನು ಹೆಚ್ಚಿಸುತ್ತದೆ. ಮಾಹಿತಿ ಶ್ರೀಮಂತ ಮತ್ತು ಮಾಹಿತಿ ಬಡವರ ನಡುವಿನ ಅಂತರ ಹೆಚ್ಚಿದೆ. ಎಲ್ಲಿಗೆ ಹೋಗಬೇಕೆಂದು ತಿಳಿಯದ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಭಾರತೀಯ ಮಾಧ್ಯಮಗಳು ಮುಂದಿವೆ. ಅದು ಬದುಕಲು ಐಟಿ ಕ್ರಾಂತಿ ನೀಡಿದ ದಾರಿಯನ್ನು ಅನುಸರಿಸಬೇಕು. ಅದರ ಸಂಪ್ರದಾಯದಂತೆ ಬದುಕಲು ಅದು ಮಾಹಿತಿಯ ಹಸಿವಿನಿಂದ ಬಳಲುತ್ತಿರುವ ಸಮಾಜದ ವರ್ಗಗಳಿಗೆ ಬದ್ಧತೆಯನ್ನು ತೋರಿಸಬೇಕು.

## ಮಾಧ್ಯಮ ಸನ್ನಿವೇಶ

ಮಾಧ್ಯಮ ಸನ್ನಿವೇಶವು ಮೂಲಭೂತವಾಗಿ ಟಿವಿ, ರೇಡಿಯನ್ ತಲುಪುವಿಕೆ ಮತ್ತು ಪತ್ರಿಕೆಗಳನ್ನು ತಲುಪುವುದು, ಜಾಹೀರಾತು, ಇತರ ಮುದ್ರಣ ಮಾಧ್ಯಮ ರೂಪಗಳು, ಸಾಮಾಜಿಕ ಮಾರ್ಕೆಟಿಂಗ್ ಮತ್ತು ನಿವ್ವಳ ಪತ್ರಿಕೆಗಳು ಅಥವಾ ಸೈಬರ್ ಪತ್ರಿಕೋದ್ಯಮವನ್ನು ಒಳಗೊಂಡಿರುತ್ತದೆ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಸಂಯೋಜಿತವಾಗಿರುವ ಸಾಂಪ್ರದಾಯಿಕ ಮಾಧ್ಯಮದ ವಿವಿಧ ರೂಪಗಳು. ಈ ರೂಪಗಳು ಕೇವಲ ಮನರಂಜನೆ ಆಧಾರಿತವಲ್ಲ. ಅವು ಜೀವನದ ವಿವಿಧ ಅಂಶಗಳ ಶಿಕ್ಷಣದ ಅಗತ್ಯ ಸಾಧನಗಳಾಗಿವೆ. ಅವರು ದೊಡ್ಡ ಮಾಧ್ಯಮ ಸನ್ನಿವೇಶದ ಭಾಗವಾಗಿದ್ದಾರೆ. ಆದರೂ ಸ್ವತಂತ್ರ ಸುದ್ದಿ ಮಾಧ್ಯಮ – ಪ್ರಿಂಟ್, ಎಲೆಕ್ಟ್ರಾನಿಕ್ ಅಥವಾ ಸೈಬರ್ ಸಾರ್ವಜನಿಕ ವ್ಯವಹಾರಗಳನ್ನು ಭಯ ಅಥವಾ ಪರವಾಗಿ ಇಲ್ಲದೆ ಪರಿಶೀಲಿಸುವ ಮತ್ತು ನಮ್ಮ ಉದ್ಯೋಗಗಳು ಮತ್ತು ಜವಾಬ್ದಾರಿಗಳಿಗೆ ನಮ್ಮನ್ನು ಜವಾಬ್ದಾರರನ್ನಾಗಿ ಮಾಡುವ ಸಾಮರ್ಥ್ಯಕ್ಕಾಗಿ ಪ್ರಮುಖ ಮಾಧ್ಯಮವಾಗಿ ಉಳಿದಿದೆ. ಅದರ ಉತ್ತಮ ಆರೋಗ್ಯ ಮತ್ತು ಸರಿಯಾದ ಮನೋಭಾವವು ನಮಗೆಲ್ಲರಿಗೂ ಬಹಳ ಮುಖ್ಯವಾಗಿದೆ ರಾಷ್ಟ್ರೀಯ ಏಕೀಕರಣದ ಎಲ್ಲಾ ಪ್ರಮುಖ ಕಾರ್ಯಗಳಲ್ಲಿ ಸ್ವತಂತ್ರ ಸುದ್ದಿ ಮಾಧ್ಯಮದ ಪ್ರಾಮುಖ್ಯತೆಯನ್ನು ಒತ್ತಿಹೇಳಲಾಗುವುದಿಲ್ಲ. ವಾರ್ತಾಪತ್ರಿಕೆಗಳು, ನಿಯತಕಾಲಿಕಗಳು ಮತ್ತು ನಿಯತಕಾಲಿಕೆಗಳ ಒಟ್ಟು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಸಂಖ್ಯೆಯ ಜೊತೆಗೆ ರೇಡಿಯೋ ಕೇಂದ್ರಗಳು, ಟಿವಿ ಚಾನೆಲ್‌ಗಳು, ಉಪಗ್ರಹ ಲಿಂಕ್‌ಗಳು ಮತ್ತು ಮಾಧ್ಯಮ ಸಂಬಂಧಿತ ವೆಬ್‌ಸೈಟ್‌ಗಳ ಸಂಖ್ಯೆಯ ಕಲ್ಪನೆಯನ್ನು ಹೊಂದುವ ಮೂಲಕ ನಾವು ಭಾರತೀಯ ಸನ್ನಿವೇಶದಲ್ಲಿ ಮಾಧ್ಯಮ ವ್ಯಾಪ್ತಿಯನ್ನು ಅರ್ಥಮಾಡಿಕೊಳ್ಳಬಹುದು. ಇತ್ತೀಚಿನ ವರ್ಷಗಳಲ್ಲಿ ನಾವು ಸೂಕ್ಷ್ಮ ಮಾಧ್ಯಮ ಎಂದು ವಿವರಿಸಬಹುದಾದ ಒಂದು ಸ್ಥಿರವಾದ ಪ್ರವೃತ್ತಿಯಿದೆ – ಸಣ್ಣ ಪತ್ರಿಕೆಗಳ ಮಾಧ್ಯಮ, ಸೀಮಿತ ಪ್ರಸರಣ ನಿಯತಕಾಲಿಕಗಳು ಮತ್ತು ಸಮುದಾಯ ರೇಡಿಯೋ.

## ಮೂಲ ಸೂತ್ರೀಕರಣಗಳು

- ಈ ವಿಶಾಲವಾದ ಸಂಘಟಿತ ಮತ್ತು ಕೆಲವೊಮ್ಮೆ ಅಸಂಘಟಿತ ಮಾಧ್ಯಮ ಸನ್ನಿವೇಶದ ಒಟ್ಟು ವ್ಯಾಪ್ತಿ ಮತ್ತು ಪ್ರಭಾವವನ್ನು ವಿವರಿಸುವುದು ಕಷ್ಟ.
- ಭಾರತದ ಜನಸಂಖ್ಯೆಯ ಯಾವುದೇ ವಿಭಾಗವು ವಾಸ್ತವವಾಗಿ ಸಂಪೂರ್ಣವಾಗಿ ಮಾಧ್ಯಮ ಹಸಿವಿನಿಂದ ಬಳಲುತ್ತಿಲ್ಲ.
- ಆಧುನಿಕ ಭಾಷಾವೈಶಿಷ್ಟ್ಯದ ಮೂಲಕ ಹೋಗುವುದು ಮಾಹಿತಿ ಹೊಂದಿದೆ ಮತ್ತು ಮಾಹಿತಿ ಹೊಂದಿದೆ –ಇಲ್ಲ. ನೀವು ಬಹುಶಃ ಪ್ರಶ್ನಿಸಬಹುದಾದ ಏಕೈಕ ವಿಷಯವೆಂದರೆ ಭಾರತದ ಜನಸಂಖ್ಯೆಯ ವಿಶಾಲ ವಿಭಾಗಗಳು ಪಡೆಯುವ ಮಾಹಿತಿಯ ಪ್ರಕಾರ ಮತ್ತು ಗುಣಮಟ್ಟ.
- ಬ್ರಿಟಿಷರಿಂದ ಸ್ವಾತಂತ್ರ್ಯಕ್ಕಾಗಿ ಭಾರತೀಯರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಭಾರತೀಯ ಪತ್ರಿಕಾ ರಂಗವು ಭಾರತದ ಪ್ರಜ್ಞೆಯ ವಿಕಾಸ ಮತ್ತು ಆಧುನಿಕ ಜಗತ್ತಿನಲ್ಲಿ ಭಾರತದ ಪ್ರವೇಶದೊಂದಿಗೆ ವಿಕಸನಗೊಂಡಿತು, ಆದ್ದರಿಂದ ಇನ್ನೂ ಸಂಪ್ರದಾಯ, ಐತಿಹಾಸಿಕ ಮತ್ತು ವಿಷಯದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತದೆ.

ಕಾರ್ಯಗಳು ಮಾಧ್ಯಮವನ್ನು ನಿರ್ವಹಿಸಬಹುದು. ವಿಶಾಲವಾಗಿ ಮಾಧ್ಯಮದ ಕಾರ್ಯಗಳನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು:

1. ಆರ್ಥಿಕ 2. ಸಾಮಾಜಿಕ ಮತ್ತು 3. ರಾಜಕೀಯ

ಆರ್ಥಿಕ ಒಳಹರಿವಿನ ಕ್ಷೇತ್ರದಲ್ಲಿ ಮಾಧ್ಯಮವು ಒಬ್ಬ ವ್ಯಕ್ತಿಗೆ ಜೀವನೋಪಾಯಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಸಹಾಯ ಮಾಡುತ್ತದೆ, ಇದು ಭೂಮಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಕುಟುಂಬದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. ಮಾಧ್ಯಮವು ಸರಕುಗಳಿಗೆ ಬೇಡಿಕೆಯನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಮತ್ತು ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಸ್ಥಳೀಯ ಉಪಕ್ರಮಗಳನ್ನು ಪ್ರೇರೇಪಿಸುತ್ತದೆ. ಪ್ರವೇಶಿಸು ಪೂರ್ವಭಾವಿ ಮೂಲ ಮಾಧ್ಯಮದ ಭ್ರಷ್ಟಾಚಾರವನ್ನು ಒಟ್ಟಾರೆ ಆರ್ಥಿಕ ಅಭಿವೃದ್ಧಿಗೆ ವಿಸ್ತರಿಸಲು ಜನರನ್ನು ಸಂವೇದನಾಶೀಲಗೊಳಿಸಲು ಇದು ಸಹಾಯ ಮಾಡುತ್ತದೆ ಮತ್ತು ಅದು ಸಂಪೂರ್ಣವಾಗಿ ಅರಿತುಕೊಂಡಿದೆ ಮತ್ತು ಇದು ಸ್ವಯಂ ಶಾಶ್ವತ ಪ್ರಕ್ರಿಯೆಯಾಗಿದೆ. ಚಟುವಟಿಕೆಯ ಸಮಾಜಶಾಸ್ತ್ರೀಯ ಕ್ಷೇತ್ರದಲ್ಲಿ, ಆನುವಂಶಿಕತೆಯ ಸ್ಥಿತಿಯನ್ನು ಬದಲಾಯಿಸುವ ಪ್ರಕ್ರಿಯೆಯಲ್ಲಿ ಮಾಧ್ಯಮವು ಸಹಾಯ ಮಾಡುತ್ತದೆ ಸಾಧನೆ. ಇದನ್ನು ಮಾಡಲು ಅನಕ್ಷರಸ್ಥರನ್ನು ಸಾಕ್ಷರರಾಗಲು ಯಶಸ್ವಿಯಾಗಿ ಪ್ರೇರೇಪಿಸಿದೆ. ನಮ್ಮ ಊಳಿಗಮಾನ್ಯ ಸಮಾಜದಲ್ಲಿ ಅದರ ತೀಕ್ಷ್ಣವಾದ ಜಾತಿ ಮತ್ತು ವರ್ಗ ವ್ಯತ್ಯಾಸಗಳೊಂದಿಗೆ ಮಾಧ್ಯಮವು ವಯಸ್ಸು ಮತ್ತು ಸಾಂಪ್ರದಾಯಿಕ ಸ್ಥಾನಮಾನದಿಂದ ಜ್ಞಾನ ಮತ್ತು ಸಾಮರ್ಥ್ಯಕ್ಕೆ ಪ್ರಭಾವವನ್ನು ಬದಲಾಯಿಸಲು ಸಹಾಯ ಮಾಡುತ್ತದೆ. ಸ್ಥಾನಮಾನ ಧಾರಣಕ್ಕಾಗಿ ಸ್ಪರ್ಧಿಸಲು ಸಾಂಪ್ರದಾಯಿಕ ನಾಯಕರಿಗೆ ಮಾಧ್ಯಮವು ಜ್ಞಾನವನ್ನು ಪಡೆಯಲು ಮತ್ತು ಬದಲಾವಣೆಗಳಿಗೆ ಹೊಂದಿಕೊಳ್ಳಲು ಪ್ರೇರೇಪಿಸುತ್ತದೆ. ಮಾಧ್ಯಮವು ಹೆಚ್ಚಿನ ಸಮಾನತೆ ಮತ್ತು ಮಾನವ ಘನತೆಗೆ ಹೆಚ್ಚಿನ ಗೌರವವನ್ನು ತರಲು ಸಹಾಯ ಮಾಡುತ್ತದೆ ಮತ್ತು ಸಾಂಸ್ಕೃತಿಕ ಮತ್ತು ಸಾಮಾಜಿಕ ಬದಲಾವಣೆಯನ್ನು ಸ್ವಯಂ ಶಾಶ್ವತ ಪ್ರಕ್ರಿಯೆಯನ್ನಾಗಿ ಮಾಡುತ್ತದೆ. ಅದರ ಚಟುವಟಿಕೆಯ ರಾಜಕೀಯ ಕ್ಷೇತ್ರದಲ್ಲಿ, ಮಾಧ್ಯಮವು ಆನುವಂಶಿಕತೆಯಿಂದ ಸಾಧನೆಗೆ ಅಧಿಕಾರ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತದೆ. ಇದು ಸಾಂಪ್ರದಾಯಿಕ ನಾಯಕರನ್ನು ತಮ್ಮ ಮಾಹಿತಿ ಮಟ್ಟವನ್ನು ಹೆಚ್ಚಿಸುವ ಮೂಲಕ ತಮ್ಮ ಶಕ್ತಿಯನ್ನು ರಕ್ಷಿಸಿಕೊಳ್ಳಲು ಪ್ರೇರೇಪಿಸುತ್ತದೆ ಮತ್ತು ಜನಸಾಮಾನ್ಯರು ಅಧಿಕಾರ ರಚನೆಯಲ್ಲಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ಗುರುತಿಸಲು ಮತ್ತು ರಾಜಕೀಯ ಭಾಗವಹಿಸುವಿಕೆಗೆ ಪ್ರಚೋದನೆಯಾಗಿ ಕಾರ್ಯನಿರ್ವಹಿಸಲು ಸಹಾಯ ಮಾಡುತ್ತದೆ. ಮಾಧ್ಯಮವು ಸರ್ಕಾರಕ್ಕೆ ಸಾರ್ವಜನಿಕರ ಅಗತ್ಯತೆಗಳನ್ನು ತಿಳಿದುಕೊಳ್ಳಲು ಮತ್ತು ಅದರ ಕಾರ್ಯಕ್ರಮಗಳನ್ನು ಯೋಜಿಸಲು ಸಹಾಯ ಮಾಡುತ್ತದೆ ಮತ್ತು ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುತ್ತದೆ. ಸಮುದಾಯವು ಪರಸ್ಪರ ಸಹಕಾರದ ಮೂಲಕ ಅಧಿಕಾರವನ್ನು ಸಾಧಿಸಲು ಮಾಧ್ಯಮವು ಸಹಾಯ ಮಾಡುತ್ತದೆ, ಇದು ಈ ಸಮಯದಲ್ಲಿ ನಮ್ಮ ಕಾಳಜಿಯಾಗಿದೆ ಮತ್ತು ರಾಜಕೀಯ ಬೆಳವಣಿಗೆಯನ್ನು ಸ್ವಯಂ–ಶಾಶ್ವತ ಪ್ರಕ್ರಿಯೆಯನ್ನಾಗಿ ಮಾಡುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಮಾಧ್ಯಮವು ಮಾನವ ಘನತೆಗೆ ಹೆಚ್ಚಿನ ಸಮಾನತೆ ಮತ್ತು ಗೌರವವನ್ನು ತರುತ್ತದೆ ರಾಜಕೀಯ ಕ್ಷೇತ್ರ.

## ಸಂಸ್ಕೃತಿ, ಮಾಧ್ಯಮ ಮತ್ತು ಗ್ರಾಮೀಣ ಅಭಿವೃದ್ಧಿ

ನಮ್ಮ ಸಮಾಜದಲ್ಲಿ ವೈವಿಧ್ಯತೆಯಲ್ಲಿ ಏಕತೆ ಇದ್ದಾಗ ನಾವು ಅಭಿವೃದ್ಧಿ ಹೊಂದಲು ಹಲವು ವೈವಿಧ್ಯಮಯ ಸಾಂಸ್ಕೃತಿಕ ಧಾರೆಗಳಿವೆ. ಆದಾಗ್ಯೂ, ಅವರೆಲ್ಲರನ್ನೂ ಕಾಳಜಿ ಮತ್ತು ಗೌರವದಿಂದ ನಡೆಸಿಕೊಳ್ಳಬೇಕು. ಆದಾಗ್ಯೂ, ವೈವಿಧ್ಯಮಯ ಸಾಂಸ್ಕೃತಿಕ ಸ್ಟ್ರೀಮ್‌ಗಳಿಗೆ ಗೌರವವನ್ನು ತೋರಿಸುವಲ್ಲಿ ದೊಡ್ಡ ಅಡಚಣೆಯೆಂದರೆ ಮುಖ್ಯ ಹೊಳೆಗಳು ನಮ್ಮ ಹೆಚ್ಚಾಗಿ ತಪ್ಪಾಗಿ ಗ್ರಹಿಸಿದ ಒತ್ತಡ. ಮುಖ್ಯ ವಾಹಿನಿಯು ಹೆಚ್ಚಿನ ಮಾಧ್ಯಮದ ವ್ಯಕ್ತಿಗಳಿಗೆ ಮುಖ್ಯವಾಹಿನಿ ಆಗಿ ಮಾರ್ಪಟ್ಟಿದೆ ಏಕೆಂದರೆ ವೈವಿಧ್ಯತೆಯು ದೇಶದ ಭದ್ರತೆಗೆ ಅಪಾಯವನ್ನುಂಟು ಮಾಡುತ್ತದೆ ಮತ್ತು ಸತ್ಯವು ಇನ್ನೊಂದು ಬದಿಯಲ್ಲಿದೆ ಎಂಬ ಸ್ಥಾಪನೆಯ ತಪ್ಪಾದ ಆತಂಕಗಳನ್ನು ಮಾಧ್ಯಮಗಳು ಉಪಪ್ರಜ್ಞೆಯಿಂದ ಹಂಚಿಕೊಂಡವು. ಕಳೆದ ಕೆಲವು ವರ್ಷಗಳಲ್ಲಿ ಸಂಸ್ಕೃತಿಯನ್ನು ಸಮಗ್ರಗೊಳಿಸುವ ಶಕ್ತಿಯಾಗಿ ಸಾಕಷ್ಟು ಚರ್ಚೆಗಳು ನಡೆದಿವೆ. ಎಂಬ ಚರ್ಚೆ ಸಾಕಷ್ಟು ಜನರನ್ನು ಗೊಂದಲಕ್ಕೆ ದೂಡಿದೆ. ಮಾಧ್ಯಮಗಳು ಕೂಡ ಭಾರತೀಯ ಸಾಂಸ್ಕೃತಿಕ ವೈವಿಧ್ಯತೆಯ ಸಾರವನ್ನು ಗ್ರಹಿಸಲು ವಿಫಲವಾಗಿವೆ, ಇದರ ಪರಿಣಾಮವಾಗಿ ಅನೇಕ ಬಾರಿ ಮಾಧ್ಯಮಗಳು ಭಿನ್ನಾಭಿಪ್ರಾಯಗಳನ್ನು ಉಂಟುಮಾಡಲು ಮತ್ತು ಸಮಾಜದಲ್ಲಿ ಅಸಂಗತತೆಯನ್ನು ಉತ್ತೇಜಿಸಲು ವರದಿ ಮಾಡುತ್ತವೆ. ಆದ್ದರಿಂದ, ರಾಷ್ಟ್ರೀಯ ಏಕೀಕರಣದಲ್ಲಿ ಮಾಧ್ಯಮದ ಪಾತ್ರವನ್ನು ನಿರ್ಧರಿಸುವ ಮೊದಲು ನಾವು ಭಾರತೀಯ ಸಂಸ್ಕೃತಿಯಿಂದ ಸಮಾಜವಾಗಿ ನಾವು ಅರ್ಥಮಾಡಿಕೊಂಡಿರುವುದನ್ನು ಮಾಧ್ಯಮಗಳಿಗೆ ಸ್ಪಷ್ಟವಾಗಿ ಹೇಳುವುದು ಅವಶ್ಯಕ. ಈ ನಿಟ್ಟಿನಲ್ಲಿ, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ.

- ಒಟ್ಟಾರೆಯಾಗಿ ಭಾರತೀಯ ಸಂಸ್ಕೃತಿಯ ನಿಜವಾದ ಮುಖ ವೇನು ? ನಮ್ಮ ಹಿಂದಿನ ಮೌಲ್ಯಗಳ ಬಗ್ಗೆ ಮಾತನಾಡುವಾಗ ನಾವು ಸಾಂಪ್ರದಾಯಿಕರಾಗುವುದಿಲ್ಲ ಅಥವಾ ಆಧುನಿಕತೆಯ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಮರೀಚಿಕೆಯನ್ನು ಬೆನ್ನಟ್ಟುವಾಗ ಬೇರುರಹಿತರಾಗದಂತೆ ನಮ್ಮ ಜೀವನ ಸಂಸ್ಕೃತಿಯಲ್ಲಿ ಹಳೆಯ ಮತ್ತು ಹೊಸದನ್ನು ಹೇಗೆ ಮಿಶ್ರಣ ಮಾಡುವುದು

- ಸಮೂಹ ಸಂವಹನ ಮತ್ತು ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ನಡುವಿನ ಸಂಬಂಧವೇನು ? ಪೂರ್ವ ಕೈಗಾರಿಕಾ ಜಗತ್ತಿನಲ್ಲಿ ಸಮೂಹ ಸಂವಹನದ ರೂಪ ಯಾವುದು ? ಅದು ಹೇಗೆ ನಿರ್ದೇಶಿಸಲ್ಪಟ್ಟಿದೆ ಮತ್ತು ಅದರ ಮೌಲ್ಯ ವ್ಯವಸ್ಥೆ ಯಾವುದು.
- ಇಂದಿನ ಭಾರತದಲ್ಲಿ ದಿನಪತ್ರಿಕೆ ಟಿ.ವಿ. ರೇಡಿಯೋ ಮತ್ತು ಜಾಹೀರಾತುಗಳಂತಹ ಸಮೂಹ ಸಂವಹನ ಸಾಧನಗಳ ಪಾತ್ರ ಮತ್ತು ಜವಾಬ್ದಾರಿ ಏನು ? ಮಾಧ್ಯಮ ತನ್ನ ಜವಾಬ್ದಾರಿಯನ್ನು ತನಗೆ ಬೇಕಾದಂತೆ ನಿರ್ವಹಿಸುತ್ತಿದೆಯೇ ?
- ಸಮಾಜ ಮತ್ತು ಮಾಧ್ಯಮವು ಸಾಂಕೇತಿಕ ಸಂಬಂಧವನ್ನು ಹೊಂದಿದೆ. ಮಾಧ್ಯಮಗಳು ಸಮಾಜದ ಮೇಲೆ ಪ್ರಭಾವ ಬೀರುವಷ್ಟು ಸೋವಿಯತ್ ಪ್ರಭಾವ ಮಾಧ್ಯಮದ ಮೇಲೆ ಇಬ್ಬರೂ ಪಶ್ಚಾತ್ತಾಪ ಪಡುತ್ತಾರೆ. ಈ ಸಂಬಂಧದ ನಿಜವಾದ ಮತ್ತು ಶಾಶ್ವತವಾದ ಸಕ್ರಿಯ ಯಾವುದು ?
- ಸಮೂಹ ಸಂವಹನ ವಿಧಾನಗಳೊಂದಿಗೆ ನೀವು ಯಾವ ಸಂಬಂಧವನ್ನು ಹೊಂದಿದ್ದೀರಿ. ನೀವು ಕೇವಲ ಸ್ವೀಕರಿಸುವ ವರಾಗಿರುವ ಏಕಪಕ್ಷೀಯ ಸಂಬಂಧವೇ ? ಇಲ್ಲದಿದ್ದರೆ, ಅದನ್ನು ದ್ವಿಮುಖ ಸಂಬಂಧವಾಗಿಸಲು ನೀವು ಏನು ಮಾಡಬೇಕು ಮತ್ತು ಹೇಗೆ ?

ತಂತ್ರಜ್ಞಾನವು ಹೆಚ್ಚುತ್ತಿರುವ ನಮ್ಮ ಪ್ರೀತಿಯನ್ನು ವ್ಯಾಖ್ಯಾನಿಸುವುದ ರೊಂದಿಗೆ ಮತ್ತು ಜನರ ಚಲನಶೀಲತೆಯೊಂದಿಗೆ, ಸರಕುಗಳು ಮತ್ತು ಸೇವೆಗಳು ಸುಲಭವಾಗುತ್ತಿವೆ, ಸಾಂಪ್ರದಾಯಿಕ ಸಂಸ್ಕೃತಿಗಳು ತಮ್ಮ ಪರಿಸರವನ್ನು ನಾಶಪಡಿಸುವ ಮತ್ತು ಅವುಗಳ ಪ್ರಸ್ತುತತೆಯನ್ನು ಪ್ರಶ್ನಿಸುವ ಪರಿಸ್ಥಿತಿಯಲ್ಲಿ ತಮ್ಮನ್ನು ಕಂಡುಕೊಳ್ಳುತ್ತವೆ. ಈ ಪರಿಸರವು ಸ್ವಾಭಾವಿಕವಾಗಿ ಅಭದ್ರತೆ ಮತ್ತು ಪರಕೀಯತೆಯ ಭಾವವನ್ನು ಹುಟ್ಟುಹಾಕುತ್ತದೆ. ಈ ಪರಿಸರದಲ್ಲಿ ಕಾರ್ಯನಿರ್ವಹಿಸುವ ಮೂಲಕ ಅಭಿವೃದ್ಧಿಯನ್ನು ಉತ್ತೇಜಿಸುವ ಸಲುವಾಗಿ ಈ ಸಂಸ್ಕೃತಿಗಳನ್ನು ಸಂರಕ್ಷಿಸಲು ಮಾಧ್ಯಮಗಳು ಹೇಗೆ ಕೊಡುಗೆ ನೀಡುತ್ತವೆ ಎಂಬುದು ಪ್ರಮುಖ ಪ್ರಶ್ನೆಗಳು.

ನಮ್ಮ ಸಾಂಸ್ಕೃತಿಕ ಪರಂಪರೆಯ ಈ ವೈವಿಧ್ಯತೆಯನ್ನು ಸೆರೆಹಿಡಿಯಲು ಮತ್ತು ವ್ಯಕ್ತಪಡಿಸಲು ನಮಗೆ ಪ್ರಸ್ತುತ ಇರುವ ಮಾಧ್ಯಮಕ್ಕಿಂತ ದೊಡ್ಡ ಮಾಧ್ಯಮ ಮಾಧ್ಯಮ ಬೇಸ್ ಅಗತ್ಯವಿದೆ. ಇದು ಸಾಧ್ಯವಾಗುವುದು ದೊಡ್ಡ ಮಾಧ್ಯಮ ಸಂಸ್ಥೆಗಳು ಸರಣಿ ಪತ್ರಿಕೆಗಳನ್ನು ಹೊಂದುವ ಮತ್ತು ಸಣ್ಣ ಪಟ್ಟಣಗಳಿಗೆ ಸಾಹಸ ಮಾಡುವ ಪ್ರಯತ್ನದಿಂದಲ್ಲ. ಸಮೂಹ ಮಾಧ್ಯಮವನ್ನು ಜನಸಾಮಾನ್ಯರಿಗೆ ಕೊಂಡೊಯ್ಯುವ ಮೂಲಕ ಮತ್ತು ಮಾಧ್ಯಮ ನಿರ್ಮಾಣದಲ್ಲಿ ಈ ಸಾಂಸ್ಕೃತಿಕ ಗುಂಪುಗಳ ಸದಸ್ಯರನ್ನು ಒಳಗೊಳ್ಳುವ ಮೂಲಕ ಇದು ಸಾಧ್ಯ. ವೈಯಕ್ತಿಕ ಉಪಕ್ರಮದಿಂದ ಅಥವಾ ನಿಜವಾದ ಎನ್ ಜಿ ಓ ಕಾರ್ಯಕರ್ತರ ಉಪಕ್ರಮದಿಂದ ಇಂತಹ ಹಲವು ಪ್ರಯತ್ನಗಳು ನಡೆಯುತ್ತಿವೆ. ಆದಾಗ್ಯೂ, ಈ ಪ್ರಯತ್ನಗಳನ್ನು ಉತ್ತೇಜಿಸುವ ಅವಶ್ಯಕತೆಯಿದೆ ಮತ್ತು ಇದಕ್ಕಾಗಿ ನಾವು ನಮ್ಮ ಮಾಧ್ಯಮ ನೀತಿಯನ್ನು ಮರುಪರಿಶೀಲಿಸಬೇಕಾಗಬಹುದು. ಈ ಸಣ್ಣ ಉಪಕ್ರಮಗಳನ್ನು ಬೆಂಬಲಿಸಲು ಸರ್ಕಾರದ ಜಾಹೀರಾತು ನೀತಿಯನ್ನು ಪರಿಷ್ಕರಿಸುವ ಅಗತ್ಯವೂ ಇದೆ. ಚಿಕ್ಕ ಪತ್ರಿಕೆಗಳನ್ನು ಉತ್ಪಾದಿಸುವವರ ಕೌಶಲ್ಯವನ್ನು ಸುಧಾರಿಸಲು ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಅಗತ್ಯವಿದೆ.

ಆದರೆ ನಾವು ತೆಗೆದುಕೊಳ್ಳುವ ಯಾವುದೇ ನೀತಿಯ ಉಪಕ್ರಮಕ್ಕಿಂತ ಹೆಚ್ಚಾಗಿ ಚಿಕ್ಕದನ್ನು ಸುಂದರವೆಂದು ಪರಿಗಣಿಸುವ ಮನಸ್ಥಿತಿಯನ್ನು ಹೊಂದಿರುವುದು ಅವಶ್ಯಕ, ಅದು ಅತ್ಯಗತ್ಯ. ದೊಡ್ಡವರು ಮತ್ತು ಕೆಲವರ ಬಗ್ಗೆ ನಮ್ಮ ಗೀಳು ಹೋಗುವುದು ಅವಶ್ಯಕ. ಸಮುದಾಯ ರೇಡಿಯೋ ರೂಪದಲ್ಲಿ ಸರ್ಕಾರ ಉತ್ತಮ ಉಪಕ್ರಮ ಕೈಗೊಂಡಿದೆ. ಜನರು ತಮ್ಮ ಪ್ರದೇಶಕ್ಕೆ ಸಂಬಂಧಿಸಿದ ಆರೋಗ್ಯ, ಶಿಕ್ಷಣ ಮತ್ತು ಸಾರ್ವಜನಿಕ ಸೌಲಭ್ಯಗಳಂತಹ ಸಮಸ್ಯೆಗಳನ್ನು ಪರಿಹರಿಸಲು ವೇದಿಕೆಯನ್ನು ಪಡೆದರು. ಸ್ಥಳೀಯ ಜನರು ಅಥವಾ ಸಮುದಾಯವು ಈ ವೇದಿಕೆಯ ಮೂಲಕ ಪ್ರಾದೇಶಿಕ ರಾಷ್ಟ್ರೀಯ ಮಾಧ್ಯಮದ ಗಮನವನ್ನು ಪಡೆಯಬಹುದು. ಈ ನಿಟ್ಟಿನಲ್ಲಿ ಸರಕಾರ ಧನಸಹಾಯ ಹಾಗೂ ಅನುದಾನ ನೀಡುತ್ತಿದೆ. ಬದಲಾವಣೆಯ ಪ್ರಕ್ರಿಯೆಯಲ್ಲಿ ಪತ್ರಿಕಾ ಬಹುತ್ವದ ಮೂಲಕ ನಮ್ಮ ವೈವಿಧ್ಯತೆಯನ್ನು ಉಳಿಸಿಕೊಳ್ಳಲು ಮತ್ತು ಪೋಷಿಸಲು ನಾವು ಏನನ್ನಾದರೂ ಮಾಡಬೇಕಾದ ಸಮಯ ಇದು.

## ಪರಾಮರ್ಶನ ಗ್ರಂಥಗಳು


- **ಕಾರ್ಣಿಕ್ ಕೆ. (2003) :** "ಎಮರ್ಜಿಂಗ್ ಕಮ್ಯುನಿಕೇಶನ್ ಸಿನಾರಿಯೊ", ಮೇನ್‌ಸ್ಟ್ರೀಮ್ ಸಂಪುಟ 44(38) : 9–14
- **ಶಿವಕುಮಾರ್ ಪಿ. ಸೇತುರಾಮನ್ (1998) :** "ಎನ್‌ಐಟಿಗಳು ರೈತರಿಗೆ ವರದಾನ" ಕಮ್ಯುನಿಕೇಟರ್, ಏಪ್ರಿಲ್–ಜೂನ್, 1998 ರಲ್ಲಿ ಪ್ರಕಟ ಸಂಪುಟ. 32, ಸಂ.2
- **ರಂಜಿತ್‌ಸಿಂಗ್ (1993) :** "ಕಮ್ಯುನಿಕೇಶನ್ ಟೆಕ್ನಾಲಜಿ ಫಾರ್ ರೂರಲ್ ಡೆವಲಪ್‌ಮೆಂಟ್".
- **ಕುಮಾರ್ ಕೇವಲ್ ಜೆ. (1994) :** "ಮಾಸ್ ಕಮ್ಯುನಿಕೇಷನ್ – ಕ್ರಿಟಿಕಲ್ ಅನಾಲಿಸಿಸ್".
- **ಪರ್ಮಾರ್ ಶ್ಯಾಮ್ (1994) :** "ಭಾರತದಲ್ಲಿ ಸಾಂಪ್ರದಾಯಿಕ ಜಾನಪದ ಮಾಧ್ಯಮ".
- **ಜೋಸೆಫ್ ಜೋನಿ (1997) :** "ಮಾಸ್ ಮೀಡಿಯಾ & ರೂರಲ್ ಡೆವಲಪ್‌ಮೆಂಟ್".
- **ಸಂ. ಯಾದವ, ಜೆ.ಎಸ್. ಮತ್ತು ಮಾಥುರ್, ಪರ್ದೀಪ್ (1988) :** "ಸಮೂಹ ಸಂವಹನದಲ್ಲಿ ಸಮಸ್ಯೆಗಳು" ಸಂಪುಟ–2.


■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ನಾನು ಹಿರಿಯವ ನಾ ? ಒಂದು ವೈಜ್ಞಾನಿಕ ವಿಶ್ಲೇಷಣೆ ಮತ್ತು ವಿಮರ್ಶೆ !

✍ **ಡಾ. ಸತೀಶ್ ಎಲ್.ಎ.,** ಭೌತಶಾಸ್ತ್ರ ಸಹ-ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ , ಬೆಂಗಳೂರು

✍ **ಪ್ರೊ. ಜ್ಯೋತಿ ಅರಹುಣಸಿ,** ಭೌತಶಾಸ್ತ್ರ ಸಹಾಯಕ ಪ್ರಾಧ್ಯಾಪಕರು, ಕೆ.ಎಸ್.ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಗದಗ.

*ಅಮೂರ್ತ*

*ದಾಸರು-ಶರಣರು ಹೇಳಿದಂತೆ ಒಂದೇ ವಾಕ್ಯದಲ್ಲಿ ತಿರುಳನ್ನು ತಿಳಿಸುವ ತಿಳಿವಳಿಕೆಯಾಗಲಿ, ವಿವೇಚನಾ ಶಕ್ತಿಯಾಗಲಿ ನನಗೆ ಇಲ್ಲಾ. ಗೌತಮಬುದ್ಧ, ಮಹಾವೀರ, ಬಸವಣ್ಣ, ಅಂಬೇಡ್ಕರ್, ಗಾಂಧೀಜಿ ರವರಂತಹ ಸಾರ್ವಕಾಲೀಕ ದಾರ್ಶನಿಕತೆ, ಸರ್ವಜ್ಞನಂತಹ ಜ್ಞಾನ, ವಚನಕಾರರಂತಹ ಬರವಣಿಗೆಯ ಕುರುಹು ಇಲ್ಲ. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತರಂತಹ ಅಧಮ್ಯ ವಿವೇಕವಿಲ್ಲ. ಗಣ್ಯನಲ್ಲ, ಅಗ್ರಗಣ್ಯನಲ್ಲ, ರಾಜ(ನಾಯಕ)ನಲ್ಲ, ಮಂತ್ರಿ(ಸಚಿವ)ಯಲ್ಲ, ತಂತ್ರಜ್ಞನೂ ಅಲ್ಲ. ಪ್ರಾಜ್ಞನಲ್ಲ, ಜ್ಞಾನಿಯಲ್ಲ, ವಿಜ್ಞಾನಿಯೂ ಅಲ್ಲ. ಆದರೂ, ಲೇಖನಗಳನ್ನು ರಚಿಸಬೇಕೆಂಬ ಹಂಬಲ. ಈ ಲೇಖನ ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲಗಳಿಗೂ ಅನ್ವಯ. ನಾನು, ನನ್ನಿಂದ ಎಂಬ ಬಾವ, ಅಹಂಬಾವದಿಂದ ಕೂಡಿದ ಜನ-ಮನಕ್ಕಾಗಿಯೇ ಈ ರಚನೆ. ಅಧ್ಯಾಪಕ ವೃತ್ತಿಯಲ್ಲಿರುವ ನಾನು, ದೈನಂದಿನ ನನ್ನ ಸುತ್ತ ನಡೆಯುತ್ತಿದ್ದ ಘಟನೆಗಳ ಕುರಿತು ಬರೆಯಲಾದ ವಿಸೃತ ವಿಶ್ಲೇಷಣೆ ಮತ್ತು ವಿಮರ್ಶಾತ್ಮಕ ಲೇಖನವಿದು.*

*ಮುಖ್ಯಸೂಚಿ ಪದಗಳು : ನಾನು, ಹಿರಿಯವ, ಮುಖ್ಯಸ್ಥ, ಅಧ್ಯಕ್ಷ, ಸಂಶೋಧನೆ, ಅಧಿಕಾರಿ*

## ಪೀಠಿಕೆ

ಹಿರಿಯವ ನಾನು ಹುಟ್ಟುವ ಮೊದಲೇ ಈ ಧರೆ, ಮುಗಿಲ್, ಹಗಲ್, ಇರುಳ್, ವರ್ಷಧಾರೆ ಇತ್ತು. ಸೂರ್ಯ, ಚಂದ್ರ, ತಾರೆ, ನಕ್ಷತ್ರಪುಂಜ, ಸೌರಮಂಡಲವಿತ್ತು, ಜೀವ ಸಂಕುಲಗಳಿದ್ದವು, ಸಂಕರ, ವರ್ಣಸಂಕರವೂ ಇತ್ತು. ಆವರಣ, ಅನಾವರಣ, ವಾತಾವರಣವಿತ್ತು. ಪೂರ್ವ, ಅಪೂರ್ವವಿತ್ತು. ಉತ್ತರ, ದಕ್ಷಿಣ, ಪಶ್ಚಿಮವೂ ಇತ್ತು. ನೀರ್, ಕೂಪ, ಕೊಳ, ಸರೋವರ, ನದಿ, ಪ್ರವಾಹ, ಸಮುದ್ರ, ಸಾಗರವೂ ಇತ್ತು. ಕಾಯ, ಕಾಯಕ, ಅಣು, ರೇಣು, ತೃಣ, ಕಾಷ್ಠಗಳಿತ್ತು. ಅಣಿಮ, ಗರಿಮ, ಮಹಿಮ, ಮಹಾಮಹಿಮವೂ ಇತ್ತು, ಊದಾ, ನೀಲಾ, ಪೀಲಾ, ಶ್ವೇತಾ, ಲಾಲಾ, ಹರ, ಕೃಷ್ಣ ವರ್ಣಗಳಿತ್ತು, ವರ್ಣಪಟಲವೂ ಇತ್ತು. ಇಂದ್ರೀಯ, ಜ್ಞಾನೇಂದ್ರಿಯ, ಅತೀಂದ್ರಿಯವೂ ಇತ್ತು. ಯುಗ, ಯುಗಾಂತರ, ಮನ್ವಂತರವೂ ಇತ್ತು. ಆಹಾರ, ವಿಹಾರ, ನಿಹಾರ, ನಿಹಾರಿಕೆಯೂ ಇತ್ತು. ಸ್ವರ, ಅಕ್ಷರ, ಪದಪುಂಜ, ವಾಕ್ಯ, ವಾಕ್ಯಾಂಗವೂ ಇತ್ತು. ಭಾಷೆ, ಪರಿಭಾಷೆ, ಪಾರಿಭಾಷೆಯೂ ಇತ್ತು. ಪುಟ, ಸಂಪುಟ, ಲೇಖನ, ಸಂಚಿಕೆಯೂ ಇತ್ತು. ಏಕರೂಪ, ಬಹುರೂಪ, ಭಿನ್ನರೂಪ, ವೈವಿಧ್ಯತೆ, ಏಕತಾನತೆಯೂ ಇತ್ತು. ವೇದ್ಯ, ಸಂವೇದ್ಯ, ಭೇದ್ಯ, ಅಭೇದ್ಯವಿತ್ತು. ಮಂದ, ಕ್ಷಿಪ್ರ, ಅಕ್ಷೆ, ಕಕ್ಷೆ, ಸಂಜ್ಞೆ, ಚಿಹ್ನೆ, ಸಂಕೇತವಿತ್ತು. ಸಮಯ, ಸಂಯಮ, ವಹನ, ಸಂವಹನವಿತ್ತು. ಪಾರ, ಅಪಾರ, ಕಲ್ಪನೆ, ಪರಿಕಲ್ಪನೆ, ಊಹೆ, ಊಹಾತೀತತೆಯಿತ್ತು. ಮಿತ, ಅಮಿತ, ಮಿತಿ, ಪರಿಮಿತಿ, ಅಪರಿಮಿತಿಯೂ ಇತ್ತು. ತಾತ್ವಿಕತೆ, ಸಿದ್ಧಾಂತ, ಅನುಸಿದ್ಧಾಂತವೂ ಇತ್ತು. ಪೃಥ, ಪೃಥಕರಣವಿತ್ತು. ನಿಷ್ಠೆ, ವಸ್ತುನಿಷ್ಠತೆ, ವ್ಯಕ್ತಿನಿಷ್ಠತೆಯಿತ್ತು. ಏಕತೆ, ಐಕ್ಯತೆ, ಅಂಕ, ಭಿನ್ನಾಂಕವಿತ್ತು. ನಡಿಗೆ, ಓಟ, ಜಿಗಿತ, ನೆಗೆತ, ಪ್ಲವನ, ವಾತ, ನಿರ್ವಾತ, ನಿಬಿಢತೆಯೂ ಇತ್ತು. ಕಾಶ, ಆಕಾಶ, ಆರ್ದತೆಯಿತ್ತು. ಬಂಧ, ಸಂಬಂಧ, ನಿರ್ಬಂಧವೂ ಇತ್ತು. ಗುರುತ್ವ, ಗುರುತ್ವಾಕರ್ಷಣೆ, ನಿಷ್ಕರ್ಷ, ಉತ್ಕರ್ಷ, ವೇಗೋತ್ಕರ್ಷವೂ ಇತ್ತು. ವೃತ್ತ, ಪರಿವೃತ್ತವೂ ಇತ್ತು. ದೃಡತ್ವ, ಜಡತ್ವ, ಮಾರ್ದವ, ಸ್ಥಿತಿಸ್ಥಾಪಕತ್ವವಿತ್ತು. ಯಂತ್ರ, ತಂತ್ರ, ತಂತ್ರಾಂಶವಿತ್ತು. ವ್ಯೂಮ, ವ್ಯೂಹ, ಜಾಲ, ಮಂಡಲವೂ ಇತ್ತು. ಗಮ್ಯ, ಅಗಮ್ಯ, ಕಾಂತ, ಕಾಂತತೆ, ಕಾಂತಕರಣ, ಕಾಂತತ್ವ, ಕಾಂತಕ್ಷೇತ್ರವಿತ್ತು, ಧ್ರುವವಿತ್ತು, ಧನ, ಋಣಧ್ರುವವಿತ್ತು, ತಟಸ್ಥವೂ ಇತ್ತು. ಬಲ, ಪ್ರಬಲ, ದುರ್ಬಲ, ಬಲಾಬಲ, ಬಲಯುಗ್ಮವಿತ್ತು. ಘನ, ದ್ರವ, ಅನಿಲಗಳೆಂಬ ಸ್ಥಿತಿಗಳಿತ್ತು. ಎಳೆತ, ಸೆಳೆತ, ಇಳಿತ, ಉಬ್ಬರವೂ ಇತ್ತು. ಸ್ಪಂದನ, ಸ್ತಂಭನ, ಕಂಪನ, ಭೂಕಂಪನವೂ ಇತ್ತು. ಬರ, ಬರಿಸ, ಗಾಳಿ, ಗಂಧ, ಸುಗಂಧವಿತ್ತು. ದ್ರವ್ಯವಿತ್ತು, ದ್ರವ್ಯರಾಶಿಯಿತ್ತು. ಸ್ಥಿರತೆಯಿತ್ತು, ಅಸ್ಥಿರತೆಯೂ ಇತ್ತು. ಕೋನ, ದೃಷ್ಟಿಕೋನ, ವಿಶಾಲತೆ, ವೈಶಾಲ್ಯತೆಯೂ ಇತ್ತು. ಪಲ್ಲಟ, ಸ್ಥಾನಪಲ್ಲಟ, ದಿಕ್ಪಲ್ಲಟವೂ ಇತ್ತು. ಶಕ್ತಿನಿತ್ಯತ್ವ, ವಸ್ತುನಿತ್ಯತ್ವವಿತ್ತು. ಆಗಮನ, ನಿರ್ಗಮನವೂ ಇತ್ತು. ಖ್ಯಾತಿ, ಪ್ರಖ್ಯಾತಿ, ವಿಖ್ಯಾತಿ, ಕುಖ್ಯಾತಿಯೂ ಇತ್ತು. ಶರೀರ, ಶಾರೀರ, ಹಸ್ತ, ಅಂಗುಷ್ಠವಿತ್ತು. ಚಲನೆ, ಪ್ರಚ್ಛನ್ನತೆ, ಸಂಭವನಿಯತೆ, ಸಂಬಾವ್ಯ, ಸುಪ್ತ, ಗುಪ್ತ, ಗೌಪ್ಯತೆಯೂ ಇತ್ತು. ರಕ್ಷೆ, ಸುರಕ್ಷೆ, ಸಂರಕ್ಷಣೆಯೂ ಇತ್ತು. ತರ, ಆತುರ, ತರಾತುರಿ, ಗಮನ, ಅಂತರ್ಗಮನ, ಬಹಿರ್ಗಮನವೂ ಇತ್ತು. ಹಿರಿಯವ ನಾನು ಇದ್ದರೂ, ಇಲ್ಲದಿದ್ದರೂ, ಇವೆಲ್ಲವೂ ಇರುವುವು, ಮುಂದುವರೆಯುವುವು ಈ ಇಳೆಯೊಳು. ಈ ಅನಂತವ್ಯೂಹದಲ್ಲಿ ನಾನು ಏನೂ ಅಲ್ಲ, ಏನೇನೂ ಅಲ್ಲ. ನಾನಿದ್ದರೂ ಈ ಜಗವಿಹುದು, ನಾನಿಲ್ಲದಿದ್ದರೂ ಈ ಜಗವಿಹುದು. ಜವಬಂದಾಗ ವಜವಾಗುವ ಈ ಜೀವ, ಶವವಾಗಿ, ಈ ಇಳೆಗೆ ವಶವಾಗುವುದೆಂಬುದ ತಿಳಿಯಲಾರನೆ ?

## ವಿಸೃತ ವಿಶ್ಲೇಷಣೆ ಮತ್ತು ವಿಮರ್ಶೆಗಳು

ಹಿರಿಯವ ನಾನು ಹುಟ್ಟುವ ಮೊದಲೆ ತೃಣದಿಂದಿಡಿದು-ಅಗಾಧದವರೆಗೆ, ಸೂಕ್ಷ್ಮದಿಂದಿಡಿದು-ಅತಿಸೂಕ್ಷ್ಮದವರೆಗೂ ಕಂಡುಹಿಡಿಯಲಾಗಿತ್ತು, ಸಾಧಿಸಲಾಗಿತ್ತು ಹಾಗೂ ಸಾಬೀತು ಪಡಿಸಲಾಗಿತ್ತು. ಕಂಡು ಹಿಡಿಯಬೇಕಾಗಿರುವ, ಸಾಧಿಸಬೇಕಾಗಿರುವ ಮತ್ತು ಸಾಬೀತು ಪಡಿಸಬೇಕಾಗಿರುವ ಅಂಶಗಳು-ಕೆಲಸಗಳು ಇನ್ನೂ ಅನಂತವಾಗಿರಬಹುದು. ಹಿರಿಯವ ನನಗೆ, ಸಿಂಪಿಗನ ಅರಿವಿಲ್ಲ, ಬಗೆ ಬಗೆಯ ಉಡುಪುಗಳ ಧರಿಸಬಲ್ಲೆನು. ಅಕ್ಕಸಾಲಿಗನ ಕುಶಲತೆಯಿಲ್ಲ, ಆಭರಣಗಳ ಧರಿಸಬಲ್ಲೆನು. ಚಮ್ಮಾರನ ಜಾಣ್ಮೆಯಿಲ್ಲ, ಪಾದರಕ್ಷೆಗಳ ಬಳಸಬಲ್ಲೆನು. ಬೇಸಾಯ ಮಾಡಿಲ್ಲ, ಕೃಷಿಕೆಲಸ ಗೊತ್ತಿಲ್ಲ, ನೇಗಿಲಯೋಗಿಯ ಶ್ರಮದ ಅರಿವೂ ಇಲ್ಲ, ಅರಿವ ಪ್ರಯತ್ನವನ್ನೂ ಮಾಡಿಲ್ಲ. ಆದರೂ, ಇದನ್ನೆಲ್ಲಾ ಅರಿಯಲೇಬೇಕೆಂಬ ಒತ್ತಾಯ ನನ್ನ ಮೇಲಿಲ್ಲ. ಎಲ್ಲರಿಗೂ ಎಲ್ಲವೂ ತಿಳಿದಿರಲೇಬೇಕೆಂಬುದೂ ಸರಿಯಲ್ಲ ಎಂಬುದನ್ನು ಬಲ್ಲೆ. ಯಾರೋ ಬೆಳೆದ ರಸವತ್ತಾದ ಹಣ್ಣುಗಳ, ಸಿಹಿಯ ಸವಿಯಬಲ್ಲೆನು, ಕಾಯಿಪಲ್ಲೆಗಳನ್ನು-ಆಹಾರವನ್ನು ಸೇವಿಸುತ, ಮೃಷ್ಟಾನ್ನ ಸವಿಯುವ ಸದೃಡ ದೇಹನನ್ನದು. ಹಿರಿಯವ ನಾನು ತಿಳಿಯೆನೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಭೂಮಿಯ ವಯಸ್ಸು ಸರಿಸುಮಾರು 450 ಕೋಟಿ ವರ್ಷಗಳೆಂದು ಅರಿಯದೆ ನನಗೆ? ಭೂಗರ್ಭದಲ್ಲಿನ ಜಲದ ವಯಸ್ಸು ಸುಮಾರು 430 ಕೋಟಿ ವರ್ಷಗಳೆಂದು, ಸಂಚಿತ ಶಿಲೆಗಳ ವಯಸ್ಸು ಸುಮಾರು 410 ಕೋಟಿ ವರ್ಷಗಳೆಂದು, ಕಲ್ಲುಬಂಡೆಗಳ ವಯಸ್ಸು ಸುಮಾರು 390 ಕೋಟಿ ವರ್ಷಗಳೆಂದು, ಉಸಿರಾಟದ ಗಾಳಿಯ ವಯಸ್ಸು ಸುಮಾರು 350 ಕೋಟಿ ವರ್ಷಗಳೆಂದು, ಮೊದಲು ಗುರುತಿಸಿದ ದ್ಯುತಿಸಂಶ್ಲೇಷಣೆ ಕ್ರಿಯೆಯ ವಯಸ್ಸು ಸುಮಾರು 350 ರಿಂದ 200 ಕೋಟಿ ವರ್ಷಗಳೆಂದು ಎಂದು ಶೋಧನೆಗಳು, ಸಂಶೋಧನೆಗಳು ಮತ್ತು ಅನ್ವೇಷಣೆಗಳು ಸಾರಿ ಸಾರಿ ಹೇಳಿವೆ. ನಾನು ಹುಲುಮಾನವ. ಆದರೆ, ಹಿರಿಯವ ನಾನು ಎಂಬ ಪೆರಿಯ ಅಹಂ ನನಗೆ. ನನ್ನ ವಯಸ್ಸು ಸುಮಾರು 100 ವರ್ಷಗಳು ಇರಬಹುದು, ನನ್ನ ವೃತ್ತಿಯ ವಯಸ್ಸು ಸುಮಾರು 40 ವರ್ಷಗಳು ಆಗಿರಬಹುದು, ನನ್ನ ಅನುಭವದ ವಯಸ್ಸು ಕೂಡ 40 ವರ್ಷಗಳು. ಇದು ನನ್ನ ಮಿತಿ! ಈ ಮಿತಿಯಲ್ಲಿ ಅಗಾಧ ಅನಂತವಾದ ಪ್ರಪಂಚವನ್ನು ಅರಿತುಕೊಳ್ಳಲು ಸಾಧ್ಯವೇ? ಹಿರಿಯವ ನಾನು ದೂರಸಂಪರ್ಕದ ತತ್ವ ತಿಳಿದವನಲ್ಲ, ಆಕಾಶವಾಣಿಯ ಕಂಡುಹಿಡಿದವನಲ್ಲ, ದೂರದರ್ಶನ, ದೂರವಾಣಿ, ಗಣಕಯಂತ್ರ. ಎಣಿಕೆಯಂತ್ರ, ಸೂಕ್ಷ್ಮದರ್ಶಕ, ದೂರದರ್ಶಕಗಳನ್ನು ಕಂಡುಹಿಡಿದವನಲ್ಲ. ಹೀಗೆ ಹತ್ತು-ಹಲವು, ಸಾವಿರಾರು ಉದಾಹರಣೆಗಳು. ಇವುಗಳನ್ನು ಆವಿಷ್ಕರಿಸಿದ ವ್ಯಕ್ತಿಗಳನ್ನು ನೋಡಿಲ್ಲ, ಅವರನ್ನು ಪರಿಪೂರ್ಣ ಅನುಸರಿಸಿಲ್ಲ, ಅವರ ಅನುಯಾಯಿಯೂ ಅಲ್ಲ. ಆದರೂ, ಇವುಗಳನ್ನು ಬಳಸಬಲ್ಲೆ, ಓದಿತಿಳಿದು ಉಚ್ಚರಿಸಬಲ್ಲೆ, ಪ್ರಚಾರಪಡಿಸಬಲ್ಲೆ ಮತ್ತು ಕಲಿಸಬಲ್ಲೆ. "ಉದರ ನಿಮಿತ್ತಮ್ ಬಹುಕೃತವೇಷಮ್" ವಾಕ್ಯಾಧೀನ ನಾನು. ಬಗೆಬಗೆಯ ಉದ್ಯೋಗವನ್ನು ಮಾಡುವ ಹಿರಿಯವ ನಾನು. ಯಾರೋ ಮಹಾನ್ ವ್ಯಕ್ತಿಗಳು ಮಾಡಿದ ಕೈಂಕರ್ಯಗಳನ್ನು ಪುನರುಚ್ಚರಿಸಿ ಬದುಕು ಸವೆಸುತ್ತಿರುವವನು ನಾನು. ಹಿರಿಯವನೆಂಬ ಭಾವಾತೀತತೆಯ ಕಡಲಿನಲ್ಲಿ ಮುಳುಗಿರುವ ನನಗೂ ಈ ಜಗತ್ತಿಗೂ ಊಹಿಸಲಾಗದಷ್ಟು ಕೋಟಿ ಕೋಟಿ ವರ್ಷಗಳ ಅಂತರವಿರುವ ಸಂಗತಿಯನ್ನು ಅರಿಯದವ ನಾನು. ಇದು ನನ್ನ ಅನುಭವ. ಇದನ್ನು ಅನುಭವವೆಂದು ಕರೆಯಬಹುದೇ ಎನ್ನುವ ಅನುಮಾನ ಮೂಡುವುದೇ ಇಲ್ಲವೇ ನನಗೆ ?

ಹಿರಿಯವ ನಾನು ಹುಟ್ಟುವ ಮೊದಲೇ, ನಾಯಕರುಗಳು, ಪ್ರಭುಗಳು, ರಾಜರು, ಸಾಮ್ರಾಟರು, ಚಕ್ರವರ್ತಿಗಳಿದ್ದರು. ನಿರಂಕುಶತೆಯೂ ಇತ್ತು. ತತ್ವ, ನಿತ್ಯತ್ವ, ಪ್ರಭುತ್ವ, ಪ್ರಜಾಪ್ರಭುತ್ವವೂ ಇತ್ತು. ಅಧಿಪತ್ಯ, ಏಕಚಕ್ರಾಧಿಪತ್ಯ, ಪತನ, ಅಧಃಪತನವೂ ಇತ್ತು. ವಿಶ್ವವಿದ್ಯಾಲಯಗಳಿದ್ದವು, ಕುಲಪತಿಗಳು, ಕುಲಾಧಿಪತಿಗಳು, ಕುಲಸಚಿವರಿದ್ದರು. ಆದರೆ, ಯಾರೂ ಕೂಡ 100 ವರ್ಷಗಳ ಕಾಲ ಅಧಿಕಾರದಲ್ಲಿರುವುದಿಲ್ಲ ಎಂಬುದ ಅರಿಯಲಾರೆನೆ ಹಿರಿಯವ ನಾನು? 1000 ವರ್ಷಗಳ ಕಾಲ ಬದುಕಿರುವುದಿಲ್ಲ ಎಂಬುದ ಅರಿಯೆನೆ ಹಿರಿಯವ ನಾನು? ಆದರೂ, ಇದನ್ನು ಸಮ್ಮತಿಸುವುದಿಲ್ಲ ನನ್ನ ಹಿರಿಯ-ಮನ. ಹಿರಿಯವ ನಾನು ಇರಬಲ್ಲೆನೇ ಚಿರಯೌವನದಲ್ಲಿರುವ ಸ್ವರಗಳಂತೆ, ಸಪ್ತಸ್ವರಗಳಂತೆ ಅಮರವಾಗಿ? ಹಿರಿಯವ ನಾನಿದ್ದರೂ, ಇಲ್ಲದಿದ್ದರೂ ಇರುವುವು ಎಲ್ಲವೂ ಈ ಭೂಮಂಡಲದಲ್ಲಿರುವ, ಈ ಸೌರಮಂಡಲದಲ್ಲಿರುವ ಎಲ್ಲವೂ, ನಿರಂತರವಾಗಿ. ಹಿರಿಯವ ನಾನು ನಿಮಿತ್ತ ಮಾತ್ರವಲ್ಲವೇ? ಆದರೂ, ಇದನ್ನು ನಾನು ಒಪ್ಪುವುದಿಲ್ಲ. ಕಾರಣ, ಶ್ರೇಷ್ಠ ನಾನು, ಬಲಿಷ್ಠ ನಾನು. ನಾನೇ ಶುದ್ಧ ಹಸ್ತ, ಸ್ವಸ್ಥ ಹಸ್ತ. ನಾನೇ ವಿಭಾಗ ಮುಖ್ಯಸ್ಥ, ವಿಷಯ ಪರಿಣಿತ, ನೇಮಕಾತಿ ಮಂಡಳಿಯ ಅಧ್ಯಕ್ಷ, ಅಧ್ಯಯನ ಮಂಡಳಿ ಅಧ್ಯಕ್ಷ, ಪಠ್ಯಕ್ರಮ ಮಂಡಳಿ ಅಧ್ಯಕ್ಷ, ಪರೀಕ್ಷಾಮಂಡಲಾಧಿಕಾರಿ, ಪರೀಕ್ಷೆಗಳ ಮುಖ್ಯಪಾಲನಾಧಿಕಾರಿ, ವಿದ್ಯಾಮಂಡಲದ ವಿದ್ಯಾಧಿಕಾರಿ, ಆಂತರಿಕ ಗುಣಮಟ್ಟ ಭರವಸೆ ಘಟಕದ ಅಧ್ಯಕ್ಷ, ಹಣಕಾಸು ಅಧಿಕಾರಿ, ವಿದ್ವನ್ ಮಂಡಳಿ ಸಮಿತಿ ಸದಸ್ಯ, ಆಡಳಿತ ಮಂಡಳಿ ಸದಸ್ಯ, ಸಂಸ್ಥೆಯ ಮುಖ್ಯಸ್ಥನೆಂಬ ಅಹಂ ನನಗೆ. ಹಿರಿಯವ ನಾನು, ಎಂದೂ ಇವುಗಳಿಂದ ದೂರ ಇರಲಾರೆ, ಎಂದೆಂದಿಗೂ ಬಿಟ್ಟುಕೊಡಲಾರೆ. ಹಿರಿಯವ ನಾನು, ಲೇಖನಿಯ ಒಳಮೈ ಬಲ್ಲವನಲ್ಲ, ಹೊರಮೈ ಲಕ್ಷಣಗಳ ಅರಿವಾಗಿಲ್ಲ, ಪೂರ್ಣರಚನೆಯನ್ನಂತು ಕಂಡುಕೊಂಡಿಲ್ಲ. ಸೀಸದ ಸುತ್ತಳತೆಯ ಪ್ರಾಜ್ಞತೆಯಾಗಲಿ, ಶಾಯಿಯ ಗುಣಮಟ್ಟದ ಪರಿಚಯವಾಗಲಿ, ನಾಳದಲ್ಲಿ ಶಾಯಿಯ ಚಲನೆಯ ವೇಗವಾಗಲಿ ಗೊತ್ತಿಲ್ಲ, ಸ್ನಿಗ್ಧತೆಯ ಅರಿವಂತೂ ಇಲ್ಲವೇ ಇಲ್ಲ! ವಿವಿಧ ಬಗೆಯ ಕಾಗದದ ಉತ್ಪಾದನೆಯ ವಿಧಾನ ತಿಳಿದವನಲ್ಲದಿದ್ದರೂ, ಬಳಸಬಲ್ಲೆ, ಅಂದವಾಗಿ ಬರೆಯಬಲ್ಲೆ. ಹಿರಿಯವ ನಾನು ಇದನ್ನೆಲ್ಲಾ ತಿಳಿಯಲೇಬೇಕೆಂಬ ನಿಯಮವಾಗಲಿ, ಷರತ್ತುಗಳಾಗಲಿ ಇಲ್ಲ ಎಂಬ ದಾಷ್ಟ್ಯ ನನಗೆ.

ಹಿರಿಯವ ನಾನು ಈ ಜಗತ್ತಿನೊಡಲನೆಲ್ಲವ ಬಲ್ಲೆನೆಂಬ ಭ್ರಮೆ. ನಾನು ಬಲ್ಲದೇಯಿರುವುದೇನೂ ಇಲ್ಲ, ಅರಿಯದಿರುವುದೇನೂ ಇಲ್ಲ ಎಂಬ ಅಹಂ ನನಗೆ. ನಾನು ಮಾಡುವುದೇನೂ ಉಳಿದಿಲ್ಲ, ಮಾಡದಿರುವುದೂ ಏನೂ ಇಲ್ಲಾ ಎಂಬ ಅಹಂಭಾವ. ಹಿರಿಯವ ನನಗೆ ವಯಸ್ಸಾಗುವುದಿಲ್ಲವೇ?, ಚರ್ಮ ಸುಕ್ಕುಗಟ್ಟುವುದಿಲ್ಲವೇ?, ಅನಾರೋಗ್ಯ ಕಾಡುವುದಿಲ್ಲವೇ?, ನೋವಿಲ್ಲವೇ?, ನಲಿವಿಲ್ಲವೇ?. ನಾನೇ ನಿರ್ದೇಶಕನೆಂಬ ಭ್ರಮೆಯೆನಗೆ, ನನ್ನದೇ ನಿರ್ದೇಶನ, ದರ್ಶನ, ಪ್ರದರ್ಶನ ಎಂಬ ಭ್ರಮೆ ನನಗೆ. ನಾನೇ ಪ್ರಧಾನ, ಉಳಿದವರೆಲ್ಲಾ ನನ್ನ ಅಧೀನ ಎಂಬ ಭ್ರಮೆ ನನಗೆ. ಹಿರಿಯವ ನಾನು ಬಿಂದು ಬರೆದವನಲ್ಲ, ವೃತ್ತ ಸೃಷ್ಟಿಸಿದವನಲ್ಲ, ಪರಿವೃತ್ತದ ಪರಿವೆಯಿಲ್ಲದವ, ಆದರೂ, ಕಲರವ ಬೇಕು, ಇತರರಿಂದ ಗೌರವವೆಂಬದು ಬೇಕು. ಹಿರಿಯವ ನನ್ನ ನಡೆ, ನಡತೆ ಒಪ್ಪುವೆ, ನನ್ನ ಮಕ್ಕಳ ಬಿಗಿದಪ್ಪುವೆ, ನನ್ನ ಮಕ್ಕಳು ನನಗಿಂತ ಕಿರಿಯರು, ಅತೀ ಕಿರಿಯರು. ಆದರೂ, ನನ್ನ ಮಕ್ಕಳು, ನೈಪುಣ್ಯವಂತರು, ಕೌಶಲವಂತರು, ವಾಗ್ಮಿಗಳು, ವಾಚಕರು, ಪ್ರವಾಚಕರು, ಸಂಗ್ರಾಹಕರು, ತಂತ್ರಜ್ಞರು, ಸಂಚಿತರು, ನಿರ್ವಂಚಿತರು. ಆದರೆ, ಹಿರಿಯವ ನಾನು, ನನ್ನ ಮಕ್ಕಳನ್ನೊರತು ಪಡಿಸಿ ನನಗಿಂತ ಕಿರಿಯರ ಸಹಿಸಲಾರೆ, ಅನುಭೂತಿ ತೋರಲಾರೆ, ಸಹಾನುಭೂತಿಯಿಂದಿರಲಾರೆ, ಎಂದೆಂದಿಗೂ ನನಗಿಂತ ಕಿರಿಯರ ಒಪ್ಪಲಾರೆ. ಕಿರಿಯರಿಗೆ ಏನ್ ತಿಳಿದಿದೆ? ಏನೂ ಗೊತ್ತಿಲ್ಲ, ಗೊತ್ತಾಗಲ್ಲ, ಗೊತ್ತಾಗುವುದೇ ಇಲ್ಲಾ ಎಂಬ ಕೀಳರಿಮೆ. ಕಾರಣ, ಶಕ್ತಿಯಿಹುದು, ಯುಕ್ತಿಯಿಹುದು, ಹಿರಿಮೆಯಿದೆ, ಪ್ರೌಢಿಮೆ ಇದೆ ನನಗೆ. ನಾನೇ ಪ್ರಥಮ, ಅಪ್ರತಿಮ, ಅದ್ವಿತೀಯನೂ ಹೌದು, ಪ್ರೌಢ ನಾನು, ಪ್ರಬುದ್ಧ ನಾನು, ಪ್ರಜ್ವಲ ನಾನು, ಉಜ್ವಲ ನಾನು, ಪಾಂಡಿತ್ಯವಂತ ನಾನು, ನಿಷ್ಣಾತ ಪಂಡಿತ ನಾನು, ನಾನೇ ಮೇದಾವಿ, ಲೇಖಕ, ಬರಹಗಾರ, ನಾನೇ ಪ್ರವಾಚಕ, ನಾನೇ ಪ್ರಶಸ್ತ, ನಾನೇ ವಿದ್ವಾಂಸ. ನನ್ನ ಜ್ಞಾನ ಅನಂತ, ನಾನೇ ವಿಷಯಾಪರಾವತಾರಿ ಎಂಬ ಭಾವಾತೀತತೆಯ ಕಡಲಿನಲ್ಲಿ ಮುಳುಗಿರುವೆ ನಾನು.

ನನ್ನದೇ ಜೀವನದ ಒಂದು ದೃಷ್ಟಾಂತದಲ್ಲಿ, ನಾನು ಸ್ನಾತಕೋತ್ತರ ಪದವಿ ವ್ಯಾಸಂಗಮಾಡುವಾಗ ಇದ್ದ ವಿದ್ಯಾರ್ಥಿಗಳ ಸಂಖ್ಯೆ 39. ನನ್ನದೇ ಸ್ನಾತಕೋತ್ತರ ಪದವಿ ತರಗತಿಯ ಸಹಪಾಠಿಗಳ ವಯಸ್ಸು ನಾನು ಓದುವ ಸಮಯದಲ್ಲಿ ಸರಿ ಸುಮಾರು 20 ರಿಂದ 23 ವರ್ಷಗಳು ಇದ್ದಿರಬಹುದು ಮತ್ತು ಸ್ನಾತಕೋತ್ತರ ವ್ಯಾಸಾಂಗ ಮುಗಿದಾಗ ಅದು ಖಂಡಿತವಾಗಿಯೂ 22 ರಿಂದ 25 ವರ್ಷಗಳು ಇದ್ದಿರಬಹುದು. ಹಿರಿಯವ ನಾನು ಪ್ರಾಥಮಿಕ, ಪ್ರೌಢ, ಪದವಿಪೂರ್ವ ಮತ್ತು ಪದವಿ ವ್ಯಾಸಂಗದ ವೇಳೆಯಲ್ಲಿದ್ದ ಸಹಪಾಠಿಗಳ ಸಾಧನೆಯನ್ನಾಗಲಿ, ಸಫಲತೆಯನ್ನಾಗಲಿ ಅಥವಾ ವಿಫಲತೆಯನ್ನಾಗಲಿ ಇಲ್ಲಿ ಪ್ರಸ್ತಾಪ ಮಾಡಿಲ್ಲ ಮತ್ತು ಯಾವುದೇ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ವಿಶ್ಲೇಷಣೆಯನ್ನು ಮಾಡುವ ಪ್ರಯತ್ನವನ್ನೂ ಮಾಡಿಲ್ಲ. ಕೇವಲ ಸ್ನಾತಕೋತ್ತರ ಪದವಿಯಲ್ಲಿನ ಮತ್ತು ನಂತರದ ಘಟನಾವಳಿಗಳನ್ನು ಮಾತ್ರ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ಸ್ನಾತಕೋತ್ತರ ಪದವಿ ವ್ಯಾಸಂಗದ ನಂತರ, ಈ 39 ಜನರಲ್ಲಿ ಯಾರಿಗೆ ಯಾವ ವಯಸ್ಸಿನಲ್ಲಿ ಕೆಲಸ ಸಿಕ್ಕಿತು?, ಯಾವ ವಯಸ್ಸಿನಲ್ಲಿ ವಿವಾಹವಾಯಿತು?, ಯಾವ ವಯಸ್ಸಿನಲ್ಲಿ ಮಕ್ಕಳಾದರೂ ?, ಯಾವ ವಯಸ್ಸಿನಲ್ಲಿ ನಿವೇಶನ ಖರೀದಿಸಿದರು?, ಯಾವ ವಯಸ್ಸಿನಲ್ಲಿ ಮನೆ ಕಟ್ಟಿದರು?, ಯಾವ ವಯುಸ್ಸಿನಲ್ಲಿ ವಾಹನ ಖರೀದಿ ಮಾಡಿದರು?. ಆಕಸ್ಮಾತಾಗಿ ಯಾರಾದರೊಬ್ಬರು ವಿಧಿವಶವಾಗಿರಬಹುದು. ಸರ್ವೇಸಾಮಾನ್ಯವಾಗಿ ಚರ್ಚಿಸುವ ಅಥವಾ ವ್ಯಕ್ತಪಡಿಸುವ ಅಥವಾ ಕೇಳುವ ಕೆಲವೆ ಕೆಲವು ಪ್ರಮುಖ ಘಟ್ಟಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲು ಪ್ರಯತ್ನಿಸಲಾಗಿದೆ. ಇದೇ ಕ್ರಮದ ಅಗತ್ಯ ಇರಲೂಬಹುದು ಅಥವಾ ಇಲ್ಲದಿರಲೂ ಬಹುದು. ಸಾಧ್ಯತೆಗಳನ್ನು ಮಾತ್ರ ಇಲ್ಲಿ ಪ್ರಚುರಪಡಿಸಲು ಪ್ರಯತ್ನಿಸಲಾಗಿದೆ. ಹೀಗಾಗಿ ಅಪಾರ್ಥ ಪಡುವ ಅವಶ್ಯಕತೆಯಿಲ್ಲ. ಇಲ್ಲಿ ತಿಳಿಸಲಾಗಿರುವ ಎಲ್ಲಾ ಘಟ್ಟಗಳು, ಘಟನೆಗಳು 39 ಜನರಿಗೂ ಖಂಡಿತವಾಗಿಯೂ ಬೇರೆ-ಬೇರೆ ವಯೋಮಾನದಲ್ಲಿ ಆಗಿರಬಹುದು. ಕಾರಣ, ಯಾರಿಗೆ ಗೊತ್ತಿದೆ? ಹಿರಿಯವನಾದ ನನಗಂತೂ ಗೊತ್ತಿಲ್ಲ. ಎಷ್ಟೇ ಪ್ರಯತ್ನ ಪಟ್ಟರೂ ಯಾಕೆ ಹೀಗೆ? ಅಂತ ಅರ್ಥವಂತೂ ಆಗಿಲ್ಲಾ. ಕಾರಣ, ಸರ್ವವ್ಯಾಪಿಯಾದ ಎಲ್ಲವನ್ನು ನುಂಗಬಲ್ಲ ಕಾಲವೇ ಅಥವಾ ಕಾಲದ ವಿವಿಧ ಸ್ವರೂಪಗಳೇ? ಉತ್ತರ ಕೊಡಬಲ್ಲವರಾರು?. ಒಂದೇ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರೂ, ಉತ್ತಮ ಫಲಿತಾಂಶ ಬಂದಿದ್ದರೂ, ಅಧ್ಯಾಪನ ಅಥವಾ ಸಂಶೋಧನಾ ಕ್ಷೇತ್ರದಲ್ಲಿ ಸರ್ವೇಸಾಮಾನ್ಯವಾಗಿ ಕಾರ್ಯ ನಿರ್ವಹಿಸುವ ನೆಲೆಗಟ್ಟಿನಲ್ಲಿ ಉನ್ನತ ವ್ಯಾಸಾಂಗ ಮಾಡಿದ್ದರೂ, ವ್ಯಾಸಂಗ ವಿಷಯಕ್ಕೂ, ಉದ್ಯೋಗ ವಿಷಯಕ್ಕೂ ಸಂಬಂಧ ಇಲ್ಲದೇ ಇರುವ ಕ್ಷೇತ್ರಗಳಲ್ಲಿ ಅಂದರೆ, ಗೃಹಿಣಿಯರಾಗಿ, ಕೇಂದ್ರ ಜವಳಿ ಇಲಾಖೆಯಲ್ಲಿ ವಿಜ್ಞಾನಿಯಾಗಿ, ಪೋಲೀಸ್ ಇಲಾಖೆಯಲ್ಲಿ ಉನ್ನತ ಅಧಿಕಾರಿಯಾಗಿ, ರೈಲ್ವೆ ಇಲಾಖೆಯಲ್ಲಿ ಅಧಿಕಾರಿಯಾಗಿ, ಪ್ರತಿಷ್ಠಿತ ಆಂಗ್ಲಭಾಷೆಯ ದಿನಪತ್ರಿಕೆಯಲ್ಲಿ ಸಂಪಾದಕರಾಗಿ, ಹೆಸರಾಂತ ಅಂತರಾಷ್ಟ್ರೀಯ ಪುಸ್ತಕ ವಿತರಕರ ಕಛೇರಿಯಲ್ಲಿ ವ್ಯವಸ್ಥಾಪಕರಾಗಿ, ಪ್ರಥಮದರ್ಜೆ ಗುತ್ತಿಗೆದಾರರಾಗಿ, ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ, ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ, ಉಪನ್ಯಾಸಕರುಗಳಾಗಿ, ಪ್ರಥಮ ದರ್ಜೆಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ವೃತ್ತಿನಿರತ ಶಿಕ್ಷಣ ಸಂಸ್ಥೆಯ ಮಾಲೀಕರಾಗಿ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರುಗಳಾಗಿ, ಉದ್ಯೋಗವನ್ನು ಮಾಡುತ್ತಿರುವುದಾದರೂ ಏಕೆ?. ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹಂಚಿಹೋಗಿರುವುದಾದರು ಏಕೆ? ಹೇಗೆ ಅರ್ಥೈಸಿಕೊಳ್ಳುವುದು? ಎಲ್ಲರೂ ಒಂದೇ ವೇತನ ಪಡೆಯುತ್ತಿದ್ದಾರೆಯೇ? ಅಥವಾ ಒಂದೇ ಸಮನಾದ ವೇತನಶ್ರೇಣಿಯಲ್ಲಿದ್ದಾರೆಯೇ? ಯಾವ ಅಳತೆಗೋಲು ನಿರ್ಧರಿಸುತ್ತದೆ ಇದನ್ನು? ತಿಳಿಯುವುದಾದರೂ ಹೇಗೆ?. ಇಂತಹ ಅನಿಶ್ಚಿತತೆಯ ಅವಿದಿತತೆಯಲ್ಲಿ ಬದುಕುತ್ತಿರುವ ಹಿರಿಯವ ನಾನು ಯಾರಿಗೆ?, ಹಿರಿಯವ ನಾನು ಹೇಗೆ? ಈ ಸಾಪೇಕ್ಷತೆಯನ್ನು ಅರಿಯುವ ಪರಿಯಾವುದು?, ಇದನ್ನು ಹಿರಿಯವ ನಾನು ಒಪ್ಪಲೇ ಬೇಕಲ್ಲವೇ? ಹಿರಿಯವ ನಾನು ಕಾಲಾತೀತನೆ?, ನಾನು ಅನುಭವಾತೀತನೆ?, ನಾನು ಪ್ರಶ್ನಾತೀತನೆ?

ಹಿರಿಯವ ನಾನು ಸಮಯದ ಪರಿಧಿಯೊಳಗಿಹೆ ಎಂಬುದ ಅರಿಯಲಾರೆನೆ? ಕಾಲವಾಗುವೆನೆಂಬ ಸತ್ಯವ ತಿಳಿಯಲಾರೆನೆ? ವಾಸ್ತವದಲ್ಲಿ ನನ್ನದೇ ವಿಷಯ ನಿರ್ಮಾತೃಗಳ ಹೆಸರಿನಲ್ಲಿ, ಪುನರುಚ್ಚರಣೆಯಲ್ಲಿ, ಅವರು ಸಾರತೆಗೆದು ಸಾಗಿಬಂದ ಹಾದಿಯಲ್ಲಿ ನಡೆಯುತ್ತಿರುವವನು ನಾನು, ಅದನ್ನೇ ಪಠಿಸಿ, ಪಠಿಸಿ ಜೀವನ ಸಾಗಿಸುತ್ತಿರುವವನು. ನನ್ನದೇ ವೃತ್ತಿ ವಿಷಯದ ಪರಿಣತಿಯಲ್ಲಿ, ವಿಶೇಷತೆಯಲ್ಲಿ, ಒಂದು ಬಿಂದುವಿನ ಅಂಶವಾದರೂ ಕೊಡುಗೆ ನೀಡಲಾಗದವ ನಾನು, ನನಗಿಂತ ಕಿರಿಯರ ದೂಷಿಸುತಾ, ಪಕ್ಕಕೆ ಸರಿಸುತಾ, ಮತ್ಸರಿಸುತಾ, ಕಿರುಕುಳ ಕೊಡುವ, ಬದುಕು ಸಾಗಿಸುವ ಅಂಗೇಕೆ ನನಗೆ? ಏಕೆ ಹೀಗೆ? ಮುಂದೊಂದು-ಹಿಂದೊಂದು ಹೇಳುವ-ಮಾಡುವ, ನುಡಿಯುವ-ನಡೆಯುವ ಚರ್ಯೆ ಏಕೆ ನನಗೆ? ಹಿರಿಯವ ನನಗೆ ತಿಳಿಯದೆ ಈ ಭೂಮಂಡಲದಲ್ಲಿ ಜೀವತಳೆದ ಎಲ್ಲಾ ಜೀವರಾಶಿಗಳು ಕಾಲಾಧೀನವೆಂದು? ಹಿರಿಯವ ನಾನಿದ್ದರೂ, ಇಲ್ಲದಿದ್ದರೂ, ಇರದೇಯಿದ್ದಿದ್ದರೂ, ಎಲ್ಲವೂ, ಇದ್ದೇ ಇರುವುವು ಇಳೆಯೊಳು, ಈ ಇಳೆಯೊಳು ಅಂತರವಾಗಿ, ಕಾಲಾಂತರವಾಗಿ, ನಿರಂತರವಾಗಿ, ಅನಂತತೆಯಲ್ಲಿಎಂಬುದ ಗ್ರಹಿಸಲಾರೆನೆ?

ನನ್ನ ಶೈಕ್ಷಣಿಕ ಜೀವನದಲ್ಲಿನ ಆಯಾಮಗಳನ್ನು ಅಂಕಿ ಅಂಶಗಳ ಮೇಲ್ಮೈ ವಿಶ್ಲೇಷಣೆಗಳ ಪ್ರಕಾರ ಗಮನಿಸಿದರೆ, ಪ್ರಾಥಮಿಕ ಶಿಕ್ಷಣ ಪಡೆಯುವಾಗ ಒಂದು ವರ್ಷಕ್ಕೆ ಅಂದಾಜು 5 ಜನ ಶಿಕ್ಷಕರಂತೆ, 7 ವರ್ಷಗಳಲ್ಲಿ ಸರಿಸುಮಾರು 35 ಜನ ಶಿಕ್ಷಕರು ತಿದ್ದಿ, ತೀಡಿ, ಅಕ್ಷರಾಭ್ಯಾಸ ಮಾಡಿಸಿದ್ದಾರೆ, ಪಾಠ ಕಲಿಸಿಕೊಟ್ಟಿದ್ದಾರೆ. ಈ ಸಮಯದಲ್ಲಿ ಒಂದು ವಿದ್ಯಾರ್ಥಿಯ ಮೇಲೆ ಶಿಕ್ಷಕರ ಕೊಡುಗೆಯ ಅಂಶದಾನ 2.55%. ಪ್ರೌಢ ಶಿಕ್ಷಣ ಪಡೆಯುವಾಗ ಒಂದು ವರ್ಷಕ್ಕೆ ಅಂದಾಜು 6 ಜನ ಉಪಾಧ್ಯಾಯರಂತೆ 3 ವರ್ಷಗಳಲ್ಲಿ ಸುಮಾರು 18 ಜನ ಉಪಾಧ್ಯಾಯರು ಬೋಧನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿದ್ಯಾರ್ಥಿಯ ಮೇಲೆ ಉಪಾಧ್ಯಾಯರ ಕೊಡುಗೆಯ ಅಂಶದಾನ 5.00%. ಪದವಿಪೂರ್ವ ಶಿಕ್ಷಣ ಪಡೆಯುವಾಗ ಒಂದು ವರ್ಷಕ್ಕೆ 22 ಜನ ಉಪನ್ಯಾಸಕರಂತೆ, 2 ವರ್ಷಗಳಲ್ಲಿ ಸರಿಸುಮಾರು 44 ಜನ ಉಪನ್ಯಾಸಕರು ಉಪನ್ಯಾಸ ನೀಡಿದ್ದಾರೆ. ಈ ಸಮಯದಲ್ಲಿ ಒಂದು ವಿದ್ಯಾರ್ಥಿಯ ಮೇಲೆ ಉಪನ್ಯಾಸಕರ ಕೊಡುಗೆಯ ಅಂಶದಾನ 2.25%. ಪದವಿ ಶಿಕ್ಷಣ ಪಡೆಯುವಾಗ ಒಂದು ವರ್ಷಕ್ಕೆ ಸುಮಾರು 16 ಜನ ಅಧ್ಯಾಪಕರುಗಳಂತೆ, 3 ವರ್ಷಗಳಲ್ಲಿ ಸುಮಾರು 48 ಜನ ಅಧ್ಯಾಪಕರುಗಳು ಅಧ್ಯಾಪನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಸ್ನಾತಕ ವಿದ್ಯಾರ್ಥಿಯ ಮೇಲೆ ಅಧ್ಯಾಪಕರ ಕೊಡುಗೆಯ ಅಂಶದಾನ 2.08%. ಸ್ನಾತಕೋತ್ತರ ಪದವಿ ಶಿಕ್ಷಣ ಪಡೆಯುವಾಗ ಒಂದು ವರ್ಷಕ್ಕೆ ಸುಮಾರು 16 ಜನ ಪ್ರಾಧ್ಯಾಪಕರಂತೆ, 2 ವರ್ಷಗಳಲ್ಲಿ ಸುಮಾರು 32 ಜನ ಪ್ರಾಧ್ಯಾಪಕರು ಪ್ರವಚನ ನೀಡಿದ್ದಾರೆ. ಒಂದು ಸ್ನಾತಕೋತ್ತರ ವಿದ್ಯಾರ್ಥಿಯ ಮೇಲೆ ಪ್ರಾಧ್ಯಾಪಕರ ಕೊಡುಗೆಯ ಅಂಶದಾನ 3.12%. ಹಿರಿಯವ ನನಗೆ ಶಾಲಾ-ಕಾಲೇಜುಗಳಲ್ಲಿ ಶಿಕ್ಷಣ ಪಡೆಯುವ ವೇಳೆಯಲ್ಲಿ ಶಿಕ್ಷಣ ನೀಡಿದವರ ಒಟ್ಟು ಸಂಖ್ಯೆ ಸರಿಸುಮಾರು 177. ಇನ್ನೂ ಸ್ವಲ್ಪ ಹೆಚ್ಚಿರಬಹುದು ಅಥವಾ ಸ್ವಲ್ಪ ಕಡಿಮೆಯಿರಬಹುದು. ಇದೊಂದು ಪ್ರಮೇಯವಷ್ಟೆ. ಆಶ್ಚರ್ಯವಾದರೂ, ಒಪ್ಪದಿದ್ದರೂ, ಇದು ಸತ್ಯ ಅಲ್ಲವೇ?.

ಹಿರಿಯವ ನನ್ನನ್ನು ಈಗಿನ ಸ್ಥಿತಿಗೆ ತರುವಲ್ಲಿ ಸಮಾಜದ ಎಲ್ಲಾ ಕ್ಷೇತ್ರಗಳ ಕೊಡುಗೆ ನನ್ನ ಮೇಲೆ ಅಪಾರವಾದುದು ಅಲ್ಲವೇ?. ನಾನು ಉಪನ್ಯಾಸಕ ವೃತ್ತಿ ಆರಂಭಿಸಿದ ದಿನಂದಿಂದ ಇಲ್ಲಿಯವರೆಗೂ ಹೊತ್ತಿಗೆಗಳಿಂದ, ಉಪನ್ಯಾಸಕರುಗಳಿಂದ, ಸಮಾಜದಿಂದ, ಇತರರಿಂದ, ಕಲಿತಿರುವುದೇ ಹೆಚ್ಚು. ಇದೇ ದೃಷ್ಟಾಂತವನ್ನು ನನ್ನದೇ ವೃತ್ತಿಜೀವನಕ್ಕೆ ಅಳವಡಿಸಿ ನೋಡಿದಾಗ, ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ತರಗತಿಯಲ್ಲಿ ಒಂದು ವಿಷಯಕ್ಕೆ ಅಂದಾಜು 4 ಪ್ರಾಧ್ಯಾಪಕರು ಬೋಧನೆ ಮಾಡಿದ್ದಾರೆ ಎಂದು ಕೊಂಡ ಪಕ್ಷದಲ್ಲಿ, ಒಂದು ವಿದ್ಯಾರ್ಥಿಯ ಮೇಲೆ ಪ್ರಾಧ್ಯಾಪಕರ ಅಂಶದಾನ 25.00%. ಇದು ಕೇವಲ ವಿದ್ಯಾರ್ಥಿಯು ಪ್ರಾಧ್ಯಾಪಕರನ್ನೇ ಪರಿಪೂರ್ಣವಾಗಿ ಅವಲಂಬಿಸಿದಾಗ ಮಾತ್ರ ಬರುವ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅಂಶದಾನವಾಗಿರುತ್ತದೆ ಅಲ್ಲವೇ? ಸ್ನಾತಕ ಅಥವಾ ಸ್ನಾತಕೋತ್ತರ ಪದವಿಯಲ್ಲಿ ಕಡಿಮೆ ಎಂದರೂ 5 ವಿಷಯ ಪತ್ರಿಕೆಗಳಿರುತ್ತದೆ. ಈ ಭೂಮಿಕೆಯಲ್ಲಿ ಒಬ್ಬ ಪ್ರಾಧ್ಯಾಪಕ ಒಂದು ಪತ್ರಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಬೋಧಿಸಿದರೂ, ಪದವಿಗೆ ಸಂಬಂಧಿಸಿದಂತೆ, ಪ್ರಾಧ್ಯಾಪಕರ ಅಂಶದಾನ 20.00%. ಇದು ಯಾವುದೇ ತರನಾದ ಅಂಕಿಅಂಶಗಳ ವಿಶ್ಲೇಷಣೆ ಮಾಡಿದರೂ ಸಿಗಬಹುದಾದ ಅತಿ ಹೆಚ್ಚು ಅಂಶದಾನ. ಆದರೆ, ಯಾವುದೇ ಸ್ನಾತಕ ಅಥವಾ ಸ್ನಾತಕೋತ್ತರ ಪದವಿ ವ್ಯಾಸಾಂಗದಲ್ಲಿ ಬರುವ ಎಲ್ಲಾ ವಿಷಯಗಳಿಗೆ ಈ ಅಂಶದಾನವನ್ನು ಹಂಚಿಕೆ ಮಾಡಿದಾಗ ಯಾವುದೇ ಅದ್ಯಾಪಕನಿಂದ, ಯಾವುದೇ ವಿದ್ಯಾರ್ಥಿಗೆ ವೈಯಕ್ತಿಕವಾಗಿ ಬರುವ ಕೊಡುಗೆ ಇನ್ನೂ ಕಡಿಮೆಯಾಗುತ್ತದೆ ಅಲ್ಲವೇ?. ಅಲ್ಲದೇ, ವಿದ್ಯಾರ್ಥಿಯು ಅಧ್ಯಯನದ ವೇಳೆ ಆತನಿಗೆ/ಆಕೆಗೆ ಸಿಗಬಹುದಾದ ಇತರ ಎಲ್ಲಾ ಶೈಕ್ಷಣಿಕ ಸಾಧನಗಳನ್ನು ಬಳಸಿ ತಯಾರಾಗಿರಬಹುದಲ್ಲವೇ? ಪದವಿ ಅಥವಾ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುವಾಗ ಅಭ್ಯಾಸದ ವಿಷಯ ಮತ್ತು ಪಠ್ಯ ಒಂದೇ ಇದ್ದರೂ, ಪ್ರವಚನ ಮಾಡಿದ ಯಾವುದೇ ಇಬ್ಬರು ಪಾಧ್ಯಾಪಕರಲ್ಲಿ ಸ್ವಾಮ್ಯತೆಯೇ ಇರಲಿಲ್ಲ ಎಂಬುದನ್ನು ಒಪ್ಪಲೇಬೇಕಲ್ಲವೇ? ಯಾರೋ ಕೆಲವರು ತಯಾರುಮಾಡಿದ ಪಠ್ಯಕ್ರಮಕ್ಕೆ, ಇನ್ಯಾರೋ ಕೆಲವರು ಕಲಿಸಿಕೊಟ್ಟ ಪಾಠಕ್ಕೆ, ಮತ್ತಿನ್ಯಾರೋ ಕೆಲವರು ಸಿದ್ಧಪಡಿಸಿದ ಪ್ರಶ್ನೆಗಳಿಗೆ, ಪರೀಕ್ಷೆಗಳಲ್ಲಿ ಉತ್ತರಿಸಿರುವ ಉತ್ತರ ಪತ್ರಿಕೆಗಳಿಗೆ ಮಗದೊಬ್ಬರ ಮೌಲ್ಯಮಾಪನದಿಂದ ಬಂದ ಅಂಕಗಳಿಂದ ಶಿಕ್ಷಣ ಪಡೆದು ಉದ್ಭವಗೊಂಡಿರುವ ಕಾಲ್ಪನಿಕ–ಸಾಪೇಕ್ಷತೆಯ ಹಿರಿಯವ ನಾನು. ಇಂತಹ ಸಡಿಲ ತಳಹದಿಯಲ್ಲಿ ನೆಲೆನಿಂತಿರುವ ನಾನು, ಅದೇ ನೆಲೆಗಟ್ಟಿನಲ್ಲಿ ರೂಪುಗೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ನನ್ನಿಂದಾದ ಅಂಶದಾನವನ್ನು ಕಂಡುಹಿಡಿಯಲು ಸಾಧ್ಯವೇ? ಒಂದು ಪಕ್ಷದಲ್ಲಿ ಸಾಧ್ಯವಾದರೂ ಅದು ಅತ್ಯಲ್ಪವಲ್ಲವೇ?

ಹಿರಿಯವ ನಾನು ಹತ್ತು–ಹಲವು ಶಿಕ್ಷಕರುಗಳಿಂದ, ಉಪಾಧ್ಯಾಯರುಗಳಿಂದ, ಉಪನ್ಯಾಸಕರುಗಳಿಂದ, ಅಧ್ಯಾಪಕರುಗಳಿಂದ, ಪ್ರಾಧ್ಯಾಪಕರುಗಳಿಂದ ಏಕರೂಪತೆಯ ತತ್ವಾಧಾರಿತವಾದ ಒಂದೇ ವಿಷಯವನ್ನು ಎಂದೂ ಕೂಡ ಒಂದೇ ತೆರನಾಗಿ ಕಲಿಯದೇ ಭಿನ್ನತೆಯ ಭಿನಾಂಶಗಳಲ್ಲೇ ಬಸವಳಿದ ಕಲಿಕೆಯಲ್ಲಿ ಬೆಳೆದವನಲ್ಲವೇ ನಾನು?. ಒಂದು ವೇಳೆ ಇಂತಹ ಆಳವಾದ ವಿಶ್ಲೇಷಣೆ ಮಾಡಲು ಪ್ರಾರಂಭಿಸಿದ ಪಕ್ಷದಲ್ಲಿ ಪ್ರಾಧ್ಯಾಪಕರ ಅಂಶದಾನ ಖಂಡಿತವಾಗಿಯೂ ಕಡಿಮೆಯಾಗುತ್ತದೆ ಅಲ್ಲವೇ ? ಪ್ರಸ್ತುತ ಕಾಲಮಾನದಲ್ಲಿನ ಪ್ರಶ್ನೆಪತ್ರಿಕೆಗಳ ನಮೂನೆ ಪ್ರಕಾರ, ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದ ಪಠ್ಯಕ್ರಮದಿಂದ ಪರೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗಳನ್ನು ಉತ್ತರಿಸಿಯೂ ಅಥವಾ ಉತ್ತರಿಸದೆಯೂ ಉತ್ತೀರ್ಣನಾಗಬಲ್ಲ ಅಲ್ಲವೇ?. ಇಂತಹ ಸಂದರ್ಭದಲ್ಲಿ ಹಿರಿಯವ ನಾನು ನನ್ನ ಅಂಶದಾನವನ್ನು ಕಂಡುಹಿಡಿಯುವ ಬಗೆಯಾದರೂ ಹೇಗೆ?. ವೃತ್ತಿಪರ ಶಿಕ್ಷಣದಲ್ಲಿ, ಮುಖಾಮುಖಿಯಾಗಿ ನೇರ ತರಬೇತಿ ನೀಡುವ ತರಬೇತುದಾರರ ಅಥವಾ ಮಾರ್ಗದರ್ಶಕರ ಕೊಡುಗೆಯೇ ವಿದ್ಯಾರ್ಥಿಗಳ ಮೇಲೆ ಅತ್ಯಲ್ಪವಾಗಿರುವಾಗ, ಮೂಲಭೂತ ವಿಷಯಗಳ ಸಿದ್ಧಾಂತಗಳನ್ನು, ತತ್ವಗಳನ್ನು, ಪ್ರಮೇಯಗಳನ್ನು ಬೋಧನೆ ಮಾಡುವ ಕಾಲೇಜುಗಳಲ್ಲಿನ ಒಬ್ಬ ಅಧ್ಯಾಪಕರ ಕೊಡುಗೆ ವಿದ್ಯಾರ್ಥಿಯ ಮೇಲೆ ನಗಣ್ಯವಲ್ಲವೇ?. ಇಲ್ಲಿ ಅಧ್ಯಾಪಕರ ಉಪಸ್ಥಿತಿ ಶಿಕ್ಷಣಕ್ಕೆ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡುವುದಕಷ್ಟೇ ಸಿಮಿತವಾಗಿದೆ ಎಂದು ಭಾಸವಾಗುವ ಅನುಮಾನ ಮೂಡುತ್ತದೆಯಲ್ಲವೇ?. ಇಷ್ಟೇ ಅಲ್ಲದೆ, ಯಾವ ವಿದ್ಯಾರ್ಥಿಗೆ ಯಾವ ಹಂತದಲ್ಲಿ ಶೈಕ್ಷಣಿಕ ಅಡಿಪಾಯ ನೆಲೆಗೊಂಡಿತು ಎಂದು ತಿಳಿದುಕೊಳ್ಳುವುದು ಕೂಡ ಬಹುಮುಖ್ಯ ಎಂದೆನಿಸುತ್ತದೆಯಲ್ಲವೇ?. ವಿದ್ಯಾರ್ಥಿಯ ಮೇಲೆ ಹಿರಿಯವ ನನ್ನಿಂದಾದ ಯಾವುದೋ ಒಂದಂಶದ ಪ್ರೇರಣೆಯನ್ನೇ ಸಾಧನೆ ಎಂದು ಪರಿಗಣಿಸಬೇಕು ಎಂದು ಪ್ರತಿಪಾದಿಸುವುದು ಪ್ರಶ್ನಾರ್ಥಕ ನಡೆಯಾಗುತ್ತದೆಯಲ್ಲವೇ?.

ಸದ್ಯ, ಬರಹಗಳ, ಪುಸ್ತಕಗಳ ಮತ್ತು ಲೇಖನಗಳ ರೂಪದಲ್ಲಿ ಅಸ್ಥಿತ್ವಹೊಂದಿದ, ಸುಮಾರು 400 ವರ್ಷಗಳ ಇತಿಹಾಸವಿರುವ ಸದ್ಯ ನಾನು ಬೋಧಿಸುವ ವಿಷಯವನ್ನು ಕೇವಲ 2 ವರ್ಷಗಳಲ್ಲಿ ಉನ್ನತ ವ್ಯಾಸಾಂಗ ಮಾಡಿ ಮತ್ತು 30 ವರ್ಷಗಳ ಅವಧಿಯಲ್ಲಿ ಕೆಲವೇ ಕೆಲವು ಪಠ್ಯಗಳನ್ನು ಬೋಧನೆಮಾಡಿ ಅರಗಿಸಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನೆಯೇ ಮೂಡುವುದಿಲ್ಲವೇ ನನಗೆ?. ಆದರ್ಶಮಾನ ಕೊಡುಗೆಗಳನ್ನು ಯಾವುದೇ ಅಳತೆಮಾನದಡಿಯಲ್ಲಿ ವಿಶ್ಲೇಷಿಸಲಾಗುವುದಿಲ್ಲಾ. ಆದರೂ, ಹಿರಿಯವ ನಾನು ನನ್ನ ಅಂಶದಾನವನ್ನು ನೋಡುವ ಹೆಬ್ಬಯಕೆಯಲ್ಲಿ ಒಂದು ಪ್ರಯತ್ನ ಮಾಡಿದಾಗ; ಒಂದು ಅಂದಾಜಿನ ಪ್ರಕಾರ, ನಾನು ಪಾಠಮಾಡುವ ವಿಷಯಕ್ಕೆ ಸುಮಾರು 200 ಜನ ಆದರ್ಶಮಾನ ಕೊಡುಗೆಗಳನ್ನು ನೀಡಿದ್ದಾರೆ ಎಂದು ಕೊಂಡ ಪಕ್ಷದಲ್ಲಿ, ಅವರುಗಳ 30 ವರ್ಷಗಳ ಅವಿರತ ಶ್ರಮದಿಂದ ರೂಪುಗೊಂಡಿರುವ ನನ್ನ ಬೋಧನಾ ವಿಷಯದ ಒಟ್ಟು ಬೆಳವಣಿಗೆಯ ಸಮಯ ಅಂದಾಜು 6000 ವರ್ಷಗಳಾಗಬಹುದು ಅಲ್ಲವೇ?. ಇಷ್ಟೊಂದು ಅಗಾಧವಾಗಿ, ಬೃಹದಾಕಾರವಾಗಿ ವ್ಯಾಪಿಸಿಕೊಂಡಿರುವ ವಿಷಯವನ್ನು ನಿರರ್ಗಳವಾಗಿ ಪಠಿಸಲು, ಪಾಠಿಸಲು, ಕರಗತ ಮಾಡಿಕೊಳ್ಳಲು ಸಾಧ್ಯವೇ ಎಂದಿನಿಸುವುದಿಲ್ಲವೇ ಹಿರಿಯವ ನನಗೆ?. ಪರಿಸ್ಥಿತಿ ಹೀಗಿರುವಾಗ, ಹಿರಿಯವ ನನ್ನಿಂದಲೇ ಎಲ್ಲಾ, ನಾನೇ ಎಲ್ಲಾ, ಎಂದು ಆಲೋಚನೆ ಮಾಡುವುದಾದರು ಎಷ್ಟು ಸರಿ ಎಂದು ಅನಿಸುವುದಿಲ್ಲವೇ ?. ಸಂಶೋಧನೆಗಳ ಪ್ರಕಾರ ಭಾಷಾ ವಿಷಯಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿರಲೂಬಹುದು. ಹಾಗೆಯೆ ಖಗೋಳಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯದ ಬರಹಗಳ, ಲೇಖನಗಳ, ಅವಲೋಕನಗಳ, ಕಲಿಕೆಗಳ, ಅಭ್ಯಾಸಗಳ ಅಸ್ಥಿತ್ವದ ಅವಧಿ ಸುಮಾರು ಎರಡು ಸಹಸ್ರಮಾನ ವರ್ಷಗಳಾಗಿರಬಹುದು ಎಂದು ಅನ್ವೇಷಣೆಗಳು ಸಾರಿ ಹೇಳಿವೆ ಎಂಬುದ ಗಮನಿಸಲಾರೆನೆ ಹಿರಿಯವನಾದ ನಾನು ?.

ಹಿರಿಯವನಾದ ನಾನು ನನ್ನ ಮೊಮ್ಮಗುವಿನ ಮೊಮ್ಮೊಗುವಿಗೆ, ಯಾರೆಂದು ತಿಳಿಯುವುದೇ ಇಲ್ಲಾ. ಹಾಗೆಯೇ ನನ್ನ ಮುತ್ತಾತನ ಮುತ್ತಾತ ಯಾರೆಂದು ನನಗೆ ಇಂದಿಗೂ ಕೂಡ ತಿಳಿದಿಲ್ಲ. ಇದನ್ನು ನಾನು ಒಪ್ಪಲೇ ಬೇಕಲ್ಲವೇ ಹಿರಿಯವ?. ನಾನೇನು ಆದರ್ಶಪ್ರಾಯನೇ? ಆದರ್ಶಮಾನ ಪ್ರವಾಚಕನೇ?, ಪ್ರಾಧ್ಯಾಪಕನೇ?, ಸಂಶೋಧಕನೇ? ಅಥವಾ ವ್ಯಕ್ತಿಯೇ?. ನನ್ನ ಕೆಲಸ–ಕಾರ್ಯಗಳೆನಾದರೂ ಅಚ್ಚಳಿಯದೆ ಉಳಿಯುವ ಕುರುಹುಗಳೇ ಎಂಬ ಪ್ರಶ್ನೆಯು ಮೂಡುವುದಿಲ್ಲವೇ?. ಅಭಿಮನ್ಯು, ಏಕಲವ್ಯ, ಕುಶ–ಲವ, ಧ್ರುವ, ನಚ್ಚಿಕೇತ, ಪ್ರಹ್ಲಾದ, ಮಾರ್ಕಾಂಡೇಯ ಇವರೆಲ್ಲ ಹಿರಿತನದಲ್ಲಿದ್ದಾಗ ಸಾಧನೆಗೈದಿರುವರೇ? ಇದು ನನಗೆ ತಿಳಿಯದ ವಿಷಯವೇ?. ಇಂತಹ ಅಪ್ರತಿಮ ನವಚೈತನ್ಯದ ಚಿಲುಮೆಯಂತಿರುವ ಕೇವಲ ಹೆಸರನ್ನೇಳಿದರೆ ರೊಮಾಂಚನಗೊಳ್ಳುವ ಇವರುಗಳು ಮಾಡಿದ ಅಜರಾಮರ ಸಾಧನೆಗಳು ನೆನಪಾಗಿವುದಿಲ್ಲವೇ ಹಿರಿಯವ ನನಗೆ? ಸಾಧನೆಗೆ ವಯಸ್ಸಿನ ಮಿತಿಯೇ ಎಂದಿನಿಸುವುದಿಲ್ಲವೇ?. ಇದನ್ನೆಲ್ಲಾ ನಾನು ಒಪ್ಪಲೇಬೇಕಾದ ಸಂಗತಿಗಳು ಅಲ್ಲವೇ?. ಇತ್ತೀಚಿನ ಕಾಲಘಟ್ಟದಲ್ಲಿ ಘಟಿಸಿರುವ ಜ್ವಲಂತ ಪ್ರಸಂಗಗಳನ್ನೇ ನೋಡುವುದಾದರೆ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಅನನ್ಯ ಸಾಧನೆಗೈದಿರುವ ಕಿರಿಯ ವಯಸ್ಸಿನವರನ್ನು ಸಾಕ್ಷೀಕರಿಸಿಲ್ಲವೇ ಹಿರಿಯವ ನಾನು?. ಇವರುಗಳು ಸಾಧನೆಯಲ್ಲಿ ನನಗಿಂತ ಹಿರಿಯರಲ್ಲವೇ?. ಇದನ್ನು ನಾನು ಒಪ್ಪಲೇಬೇಕಲ್ಲವೇ?.

*– 79ನೇ ಪುಟಕ್ಕೆ ಮುಂದುವರೆದುದು*

UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಪ್ಲೇಸ್ಮೆಂಟ್ ಸೆಲ್ : ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಕ್ಯಾಂಪಸ್ ಇಂಟರ್ವ್ಯೂ

✍ **ಡಾ. ಜ್ಯೋತಿ ಬಿ ಪಂತ್,** ಸಹಾಯಕ ಪ್ರಾಧ್ಯಾಪಕರು, ಶ್ರೀ ಸಿದ್ಧಗಂಗಾ ಶಿಕ್ಷಣ ಮಹಾವಿದ್ಯಾಲಯ, ತುಮಕೂರು.

ಮನುಷ್ಯ ಏಕಾಂಗಿ ಅಲ್ಲ, ಅವನು ಸಂಘ ಜೀವಿ. ಅವನು ಸಂಘಜೀವಿಯಾಗಿ ಸಮಾಜದಲ್ಲಿ ಜೀವಿಸಲು ಸಮಾಜದ ನಿಯಮಗಳನ್ನು ಪಾಲಿಸಬೇಕು. ಅಂದರೆ ಸಮಾಜ ಅಪೇಕ್ಷೆ ಪಡುವ ರೀತಿಯಲ್ಲಿ ಅವನು ತನ್ನನ್ನು ಬದಲಾಯಿಸಿಕೊಳ್ಳಬೇಕು ಅಥವಾ ರೂಪಿಸಿಕೊಳ್ಳಬೇಕು. ಹೀಗೆ ಮಾಡಿದ್ದಲ್ಲಿ ಮಾತ್ರ ಅವನು ಸಮಾಜದಲ್ಲಿ ಉತ್ತಮ ಬದುಕನ್ನು ನಡೆಸಲು ಸಾಧ್ಯ. ಹೀಗೆ ಮನುಷ್ಯ ತಮ್ಮ ಜೀವನವನ್ನು ಉತ್ತಮಪಡಿಸಿಕೊಳ್ಳಲು ಹಲವಾರು ಮಾರ್ಗಗಳನ್ನು ಅನುಸರಿಸುತ್ತಾನೆ. ಅದರಲ್ಲಿ ತುಂಬಾ ಪ್ರಮುಖವಾದ ಮಾರ್ಗವೆಂದರೆ ಶಿಕ್ಷಣವನ್ನು ಪಡೆಯುವುದಾಗಿದೆ. ಶಿಕ್ಷಣವನ್ನು ಪಡೆಯುವುದಕ್ಕೋಸ್ಕರ ಅವನು ಹಲವಾರು ಉದ್ದೇಶಗಳನ್ನು ಹೊಂದಿರುತ್ತಾನೆ. ಅದೇನೆಂದರೆ, ಶಿಕ್ಷಣವು ಅವನಿಗೆ ತನ್ನ ಜೀವನವನ್ನು ನಡೆಸಲು ಉತ್ತಮ ಗುಣಗಳನ್ನು, ಉತ್ತಮ ಶಕ್ತಿ–ಸಾಮರ್ಥ್ಯಗಳನ್ನು, ಉತ್ತಮ ಬೌದ್ಧಿಕ ಚಿಂತನೆಯನ್ನು ಮಾಡಲು, ಪರಿಸರಕ್ಕೆ ಹೊಂದಿಕೊಳ್ಳಲು ಬೇಕಾಗಿರುವಂತಹ ಜ್ಞಾನ, ಕೌಶಲ್ಯ ಹಾಗೂ ಉತ್ತಮ ಮನೋಭಾವಗಳನ್ನು ಬೆಳೆಸುವುದಾಗಿದೆ. ಇವೆಲ್ಲವೂ ಅವನಿಗೆ ಸಮಾಜದಲ್ಲಿ ಸ್ವಾವಲಂಬಿ ಜೀವನ ನಡೆಸಲು ಹಾಗೂ ಸಮಾಜಕ್ಕೆ ಒಳಿತಾಗುವ ರೀತಿಯಲ್ಲಿ ಜೀವನ ನಡೆಸುವಂತಿರಬೇಕು.

ಆದ್ದರಿಂದ ಇಂದಿನ ಶಿಕ್ಷಣವು ಅವನಿಗೆ ಕೇವಲ ಜ್ಞಾನವನ್ನು ನೀಡಿದರೆ ಮಾತ್ರ ಸಾಲದು. ಅವನಿಗೆ ಒಂದು ವೃತ್ತಿಗೆ ತಯಾರು ಮಾಡುವ ರೀತಿಯಲ್ಲಿ ಬೇಕಾಗುವಂತಹ ಎಲ್ಲಾ ಸೌಕರ್ಯಗಳನ್ನು ನೀಡುವಂತಹ ಒಂದು ಸಂಸ್ಥೆ ಆಗಬೇಕಾಗಿದೆ. ನಮಗೆಲ್ಲ ತಿಳಿದಿರುವ ಹಾಗೆ ಬಹಳಷ್ಟು ವಿದ್ಯಾರ್ಥಿಗಳು ಐಐಟಿ, ಐಐಎಸ್‌ಸಿಗಳಿಗೆ ದಾಖಲಾಗಲು ಬಹಳಷ್ಟು ಇಚ್ಛೆ ಪಡುತ್ತಾರೆ. ಏಕೆಂದರೆ ಅವು ಅವರಿಗೆ ಜ್ಞಾನವನ್ನು ನೀಡುವುದಷ್ಟೇ ಅಲ್ಲದೆ ಉತ್ತಮವಾದ ಸ್ಥಾನಮಾನವನ್ನು ನೀಡಿ, ಅವರಿಗೆ ಉತ್ತಮ ಸಂಪಾದನೆಯನ್ನು ಮಾಡುವಂತಹ ಹಾಗೂ ಕಾರ್ಖಾನೆಗಳಿಗೆ, ಸಂಘ–ಸಂಸ್ಥೆಗಳಿಗೆ ಸೇರಿಕೊಳ್ಳಲು ಉತ್ತಮ ಅವಕಾಶವನ್ನು ಮಾಡಿಕೊಡುತ್ತವೆ. ಆದ್ದರಿಂದ ಅವರ ಜೀವನದ ಆರ್ಥಿಕ ಮಟ್ಟವು ಬಹಳಷ್ಟು ಮಟ್ಟಿಗೆ ಉತ್ತಮವಾಗಲು ಸಾಧ್ಯವಾಗುತ್ತದೆ. ಆದರೆ ಎಲ್ಲಾ ವಿದ್ಯಾರ್ಥಿಗಳು ಐಐಟಿ ಹಾಗೂ ಐಐಎಸ್‌ಸಿಗಳಿಗೆ ಅಥವಾ ಮತ್ತಿತರ ಉತ್ತಮ ಸಂಸ್ಥೆಗಳಿಗೆ ಸೇರಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಿದ್ದಾಗ ಪ್ರತಿಯೊಂದು ಶಿಕ್ಷಣ ಸಂಸ್ಥೆಗಳು ಅವರಂತೆ ಹಾಗೂ ಆ ಸಂಸ್ಥೆಗಳಂತೆ ಆಗುವ ಪ್ರಯತ್ನವನ್ನು ಮಾಡಬೇಕಾಗಿದೆ. ಅದೇನೆಂದರೆ ಅವರಿಗೆ ಶಿಕ್ಷಣವನ್ನು ನೀಡುವುದರ ಜೊತೆಗೆ ಅವರಿಗೆ ಉದ್ಯೋಗವಕಾಶಗಳಿಗೆ ಬೇಕಾಗಿರುವಂತಹ ಸದಾವಕಾಶವನ್ನು ಶಿಕ್ಷಣ ಸಂಸ್ಥೆಗಳಲ್ಲಿಯೇ ಮಾಡಿಕೊಡಬೇಕಾಗುತ್ತದೆ. ಆಗ ವಿದ್ಯಾರ್ಥಿಗಳು ಆ ಒಂದು ಅಂಶವನ್ನು ಸಹ ಗಂಭೀರವಾಗಿ ಪರಿಗಣಿಸಿ ಇಂತಹ ಸಂಸ್ಥೆಗಳಿಗೆ ಸೇರಿಸಿಕೊಳ್ಳಲು ಇಚ್ಛೆಪಡುತ್ತಾರೆ.

ಶಿಕ್ಷಕ ತರಬೇತಿ ಸಂಸ್ಥೆಗಳಿಂದ ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ತರಬೇತಿಯನ್ನು ಪಡೆದು ಹೊರಬರುತ್ತಿದ್ದಾರೆ. ಅವರಿಗೆ ಶಿಕ್ಷಕರಾಗಲು ಬೇಕಾಗುವಂತಹ ಎಲ್ಲಾ ರೀತಿಯ ತರಬೇತಿಯನ್ನು ಈ ಸಂಸ್ಥೆಗಳು ನೀಡುತ್ತಾ ಬರುತ್ತಿವೆ. ಎಷ್ಟೋ ವಿದ್ಯಾರ್ಥಿಗಳು ಉತ್ತಮ ಶಿಕ್ಷಕರಾಗುವಂತಹ ಎಲ್ಲಾ ಗುಣಗಳನ್ನು ಹಾಗೂ ಸಾಮರ್ಥ್ಯಗಳನ್ನು ಹೊಂದಿದ್ದರೂ ಶಾಲೆಗಳಲ್ಲಿ ವೃತ್ತಿಯನ್ನು ಆರಂಭಿಸಲು ಸಾಧ್ಯವಾಗುತ್ತಿಲ್ಲ. ಅದು ಏಕೆಂದರೆ ತರಬೇತಿಯನ್ನು ಪಡೆದ ಪ್ರಶಿಕ್ಷಣಾರ್ಥಿಗಳ ಹಾಗೂ ಶಾಲೆಗಳ ನಡುವೆ ಇರುವಂತಹ ಕಂದಕಗಳಿಂದ. ಈ ಕಂದಕಗಳನ್ನು ಶಿಕ್ಷಕ ತರಬೇತಿ ಸಂಸ್ಥೆಗಳು ಹೋಗಲಾಡಿಸಲು ಪ್ರಯತ್ನಿಸಬಹುದು.

ಈ ವಿಷಯಕ್ಕೆ ಸಂಬಂಧಿಸಿದಂತೆ ಶಿಕ್ಷಕರನ್ನು ತಯಾರು ಮಾಡುವಂತಹ ತರಬೇತಿ ಸಂಸ್ಥೆಗಳು ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳುವಂತಹ ಪ್ರಶಿಕ್ಷಣಾರ್ಥಿಗಳನ್ನು ಉತ್ತಮ ಶಿಕ್ಷಕರನ್ನಾಗಿಸಲು ಬೇಕಾಗುವಂತಹ ಗುಣಗಳನ್ನು ಬೆಳೆಸುವುದರ ಜೊತೆಗೆ ಅವರಿಗೆ ಶಿಕ್ಷಣದ ನಂತರ ಶಾಲಾ–ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಲು ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತಹ ಅವಕಾಶ ಕಲ್ಪಿಸಬೇಕಾಗುತ್ತದೆ. ಹೀಗೆ ಮಾಡಿದ್ದಲ್ಲಿ ಎಲ್ಲಾ ಶಿಕ್ಷಕ ತರಬೇತಿ ಸಂಸ್ಥೆಗಳು ಸಮಾಜದಲ್ಲಿನ ಈಗಿನ ಪರಿಸ್ಥಿತಿಯಲ್ಲಿ ಉತ್ತಮವಾಗಿ ಬೆಳೆಯಲು ಸಾಧ್ಯವಾಗುತ್ತದೆ. ಈ ಜವಾಬ್ದಾರಿಯುತ ಕಾರ್ಯವನ್ನು ನಿರ್ವಹಿಸಲು ಪ್ರತಿಯೊಂದು ಶಿಕ್ಷಣ ಸಂಸ್ಥೆಗಳಲ್ಲಿ ಪ್ಲೇಸ್ಮೆಂಟ್ ಸೆಲ್ ಅನ್ನು ನಿರ್ಮಿಸಿ, ಅದರ ಮೂಲಕ ಉತ್ತಮ ಜವಾಬ್ದಾರಿಯುತವಾದ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

ಪ್ಲೇಸ್ಮೆಂಟ್ ಸೆಲ್ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಉದಾಹರಣೆಗೆ ಕೌಶಲ್ಯಗಳನ್ನು ಬೆಳೆಸಲು ಕಾರ್ಯಗಾರಗಳನ್ನು ಕೈಗೊಳ್ಳುವುದು, ಬೋಧನೋಪಕರಣಗಳಿಗೆ ಸಂಬಂಧಿಸಿದಂತೆ ತರಬೇತಿಯನ್ನು ನೀಡುವುದು, ಉತ್ತಮ ಸಂವಹನ ಕೌಶಲ್ಯವನ್ನು ಬೆಳೆಸಲು ಯಾವುದಾದರೂ ಮಹತ್ತರವಾದ ವಿಷಯದ ಮೇಲೆ ಚರ್ಚೆಯನ್ನು ಏರ್ಪಡಿಸುವುದು, ಮುಕ್ತ ಪ್ರಶ್ನೆಯನ್ನು ಕೇಳುವುದು, ವರದಿಯನ್ನು ಬರೆಯಲು ಸೂಚಿಸುವುದು, ತರಗತಿಯಲ್ಲಿ ಆಲಿಸಲು ಅವಕಾಶ ಕೊಡುವುದು, ವೇದಿಕೆಯ ಕಾರ್ಯಕ್ರಮದಲ್ಲಿ ಭಾಷಣ ಮಾಡಲು ಅವಕಾಶ ಕಲ್ಪಿಸಿಕೊಡುವುದು, ಚರ್ಚಾಸ್ಪರ್ಧೆ ಹಾಗೂ ಪ್ರಬಂಧಸ್ಪರ್ಧೆಗಳಲ್ಲಿ ಭಾಗವಹಿಸುವಂತೆ ಮಾಡುವುದು. ಜ್ಞಾನದ ಬೆಳವಣಿಗೆಗಾಗಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸುವುದು, ಸ್ಥಳ ವೀಕ್ಷಣೆಯನ್ನು ಆಯೋಜಿಸುವುದು, ಪ್ಯಾನೆಲ್ ಬೋರ್ಡ್‌ನ ಮೇಲೆ ದಿನಪತ್ರಿಕೆ ಹಾಗೂ ಜರ್ನಲ್ ಮ್ಯಾಗಜೈನ್‌ಗಳಲ್ಲಿ ಬರುವಂತಹ ಮಹತ್ವಪೂರ್ಣ ವಿಷಯಗಳ ತುಣುಕುಗಳನ್ನು ಪ್ರದರ್ಶಿಸುವುದು ಹಾಗೂ ಅದನ್ನು ಅಧ್ಯಯನ ಮಾಡಲು ಪ್ರತಿಯೊಬ್ಬ ಪ್ರಶಿಕ್ಷಣಾರ್ಥಿಗೂ ಸೂಚನೆಯನ್ನು ನೀಡುವುದು, ನಿಯೋಜಿತ ಕಾರ್ಯವನ್ನು ಮಾಡಲು ಸೂಚಿಸುವುದು. ಹೀಗೆ ಹಲವಾರು ಕಾರ್ಯಕ್ರಮಗಳನ್ನು ಪ್ಲೇಸ್ಮೆಂಟ್ ಸೆಲ್ ಅಡಿಯಲ್ಲಿ ಮಾಡಬಹುದು.

ಯಾವುದೇ ಒಬ್ಬ ಪ್ರಶಿಕ್ಷಣಾರ್ಥಿಯು ಶಿಕ್ಷಕ ತರಬೇತಿ ಸಂಸ್ಥೆಗೆ ಸೇರಲು ಮೊದಲನೆಯ ಪ್ರಶ್ನೆಯನ್ನು ಕೇಳಿಕೊಳ್ಳುವುದೇನೆಂದರೆ ಇಲ್ಲಿ ಅಧ್ಯಯನ ಮಾಡಿದ ನಂತರ ತನ್ನ ಸಾಮರ್ಥ್ಯಕ್ಕೆ ಸರಿ ಹೊಂದುವ ಶಾಲಾ–ಕಾಲೇಜಿನಲ್ಲಿ ಅಥವಾ ಇತರೆ ಸಂಸ್ಥೆಗಳಲ್ಲಿ ಕೆಲಸ ಸಿಗುತ್ತದೆಯೋ ? ಇಲ್ಲವೋ ? ಎಂಬುದು. ಹಾಗಾಗಿ ಶಿಕ್ಷಕ ತರಬೇತಿ ಸಂಸ್ಥೆಗಳು ವರ್ಷದ ಪ್ರಾರಂಭದಿಂದಲೇ ಶಾಲಾ–ಕಾಲೇಜುಗಳಿಗೆ ಬೇಕಾಗುವ ರೀತಿಯಲ್ಲಿ ಒಂದೊಂದು ಸಾಮರ್ಥ್ಯಗಳನ್ನು ಪ್ರಶಿಕ್ಷಣಾರ್ಥಿಗಳಲ್ಲಿ ಬೆಳೆಸುತ್ತಿರಬೇಕು ಹಾಗೂ ವರ್ಷದ ಕೊನೆಯಲ್ಲಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಈ ಒಂದು ಅಂಶವನ್ನು ಗಂಭೀರವಾಗಿ ಪರಿಗಣಿಸಿ ಅದಕ್ಕೆ ಬೇಕಾಗಿರುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಅದೇನೆಂದರೆ ಪ್ಲೇಸ್ಮೆಂಟ್ ಸೆಲ್ ಅಡಿಯಲ್ಲಿ ಕ್ಯಾಂಪಸ್ ಇಂಟರ್ವ್ಯೂ ಅನ್ನು ಆಯೋಜಿಸುವುದು.

ಕ್ಯಾಂಪಸ್ ಇಂಟರ್ವ್ಯೂ ತುಂಬಾ ಮಹತ್ವಪೂರ್ಣವಾದಂತಹ ಕಾರ್ಯಕ್ರಮವಾಗಿದೆ. ಹಾಗಾಗಿ ಪ್ಲೇಸ್ಮೆಂಟ್ ಸೆಲ್‌ನ ಜವಾಬ್ದಾರಿಯನ್ನು ತೆಗೆದುಕೊಂಡವರು ಕ್ಯಾಂಪಸ್ ಇಂಟರ್ವ್ಯೂ ಅನ್ನು ಆಯೋಜಿಸಲು ಕೆಳಗಿನ ಹಂತಗಳನ್ನು ಅನುಸರಿಸಬೇಕು.

- **ಮೊದಲನೆಯ ಹಂತ :** ಕಾಲೇಜಿನ ಎಷ್ಟು ಪ್ರಶಿಕ್ಷಣಾರ್ಥಿಗಳು ಈ ಕ್ಯಾಂಪಸ್ ಇಂಟರ್ವ್ಯೂನಲ್ಲಿ ಭಾಗವಹಿಸಲು ಇಚ್ಛೆಪಡುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು. ಈ ಹಂತದಲ್ಲಿ ಪ್ರಶಿಕ್ಷಣಾರ್ಥಿಗಳ ಸಂಖ್ಯೆ ಹಾಗೂ ಪ್ರಶಿಕ್ಷಣಾರ್ಥಿಗಳ ವಿಷಯ ಅಂದರೆ ಯಾವ ವಿಷಯದ ಶಿಕ್ಷಕರಾಗಲು ಅವರು ಇಚ್ಛೆ ಪಡುತ್ತಾರೆ ಮತ್ತು ಯಾವ ಊರಿನಲ್ಲಿ ಅವರು ಕಾರ್ಯನಿರ್ವಹಿಸಲು ಬಯಸುತ್ತಾರೆ ಎಂಬೆಲ್ಲಾ ಮಾಹಿತಿಯನ್ನು ಪಡೆಯಬೇಕು.
- **ಎರಡನೆಯ ಹಂತ :** ಕ್ಯಾಂಪಸ್ ಇಂಟರ್ವ್ಯೂ ಎಲ್ಲಾ ಉದ್ದೇಶಗಳನ್ನು ರೂಪಿಸಬೇಕು. ಈ ಕಾರ್ಯವನ್ನು ಪ್ಲೇಸ್ಮೆಂಟ್ ಸೆಲ್‌ನ ರೂವಾರಿಗಳಾಗಿರುವಂತಹ ಶಿಕ್ಷಕರು ಪ್ರಾಂಶುಪಾಲರೊಂದಿಗೆ ಕುಳಿತು ನಿರ್ಧರಿಸಬೇಕು. ಉದ್ದೇಶಗಳನ್ನು ನಿರ್ಧರಿಸುವಂತಹ ಸಂದರ್ಭದಲ್ಲಿ ತಮ್ಮ ಕಾಲೇಜಿನ ಪ್ರಶಿಕ್ಷಣಾರ್ಥಿಗಳ ಗುಣಮಟ್ಟ ಹಾಗೂ ಸಮಾಜದ ಬೇಡಿಕೆಗಳನ್ನು ಪರಿಗಣಿಸಬೇಕಾಗುತ್ತದೆ.
- **ಮೂರನೆಯ ಹಂತ :** ದಿನಪತ್ರಿಕೆಯಲ್ಲಿ ಮತ್ತು ತಮ್ಮ ಕಾಲೇಜಿನ ಜಾಲತಾಣಗಳಲ್ಲಿ ಕ್ಯಾಂಪಸ್ ಇಂಟರ್ವ್ಯೂಗೆ ಸಂಬಂಧಿಸಿದಂತೆ ಶಾಲಾ-ಕಾಲೇಜುಗಳನ್ನು ಆಹ್ವಾನಿಸಲು ಜಾಹಿರಾತುಗಳನ್ನು ನೀಡುವುದು, ಜಾಹಿರಾತಿನಲ್ಲಿ ತಾವು ಪಡೆದಂತಹ ಪ್ರಶಿಕ್ಷಣಾರ್ಥಿಗಳ ಸಂಖ್ಯೆ, ಬೋಧನಾ ವಿಷಯ ಹಾಗೂ ಆಯ್ಕೆ ಮಾಡಿಕೊಳ್ಳಲು (ಕಾರ್ಯನಿರ್ವಹಿಸಲು) ಇಚ್ಛಿಸುವ ಸ್ಥಳಗಳ ಬಗ್ಗೆ ಸೂಚಿಸಬೇಕಾಗುತ್ತದೆ.
- **ನಾಲ್ಕನೆಯ ಹಂತ :** ಶಾಲಾ-ಕಾಲೇಜುಗಳಿಂದ ಬಂದಂತಹ ಬೇಡಿಕೆಗಳನ್ನು ಕೂಲಂಕುಶವಾಗಿ ಪ್ರಾಂಶುಪಾಲರೊಂದಿಗೆ ಚರ್ಚಿಸಿ, ಯಾವ ಶಾಲಾ-ಕಾಲೇಜುಗಳಿಗೆ ಅವಕಾಶವನ್ನು ಮಾಡಿಕೊಡಬೇಕು ಎಂಬುದನ್ನು ನಿರ್ಧರಿಸುವುದು ಮತ್ತು ದಿನ, ಸಮಯ, ಸ್ಥಳ ಹಾಗೂ ಖರ್ಚು-ವೆಚ್ಚಗಳ ಬಗ್ಗೆ ಚರ್ಚಿಸುವುದು. ತಮ್ಮ ಕಾಲೇಜಿನ ಗುಣಾತ್ಮಕತೆ ಆಧಾರದ ಮೇಲೆ ಆಹ್ವಾನಿಸಲು ಪಡುವಂತಹ ಶಾಲಾ-ಕಾಲೇಜುಗಳಿಂದ ಕನಿಷ್ಠ ಮಟ್ಟದ ಹಣವನ್ನು ಸ್ವೀಕರಿಸತಕ್ಕದ್ದು ಹಾಗೂ ಆ ಹಣವನ್ನು ಅಂದಿನ ಕಾರ್ಯಕ್ರಮಕ್ಕೆ ಬಳಸುವುದು (ಆತಿಥ್ಯಕ್ಕೆ / ಜೆರಾಕ್ಸ್‌ಗೆ). ಕ್ಯಾಂಪಸ್ ಇಂಟರ್ವ್ಯೂ ದಿನ ಮತ್ತು ಸಮಯದ ನಿರ್ಧಾರವಾದ ಬಳಿಕ ಕ್ಯಾಂಪಸ್‌ನಲ್ಲಿ ಆಯ್ಕೆ ಮಾಡಲಾದ ಶಾಲಾ-ಕಾಲೇಜುಗಳಿಗೆ ಆಹ್ವಾನವನ್ನು ನೀಡಬೇಕು. ಆಹ್ವಾನಿತರಿಗೆ ಅಂದಿನ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕಾಗುತ್ತದೆ.
- **ಐದನೆಯ ಹಂತ :** ಪ್ರಶಿಕ್ಷಣಾರ್ಥಿಗಳನ್ನು ಪ್ರಾಯೋಗಿಕವಾಗಿ ತಯಾರು ಮಾಡುವುದಾಗಿದೆ. ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಇಂಟರ್ವ್ಯೂ ಅನ್ನು ಹೇಗೆ ಎದುರಿಸಬೇಕು ಎಂಬುದಕ್ಕೆ ತರಬೇತಿಯನ್ನು ನೀಡುವುದು. ಇದಕ್ಕಾಗಿ ಶಿಕ್ಷಕ ತರಬೇತಿ ಸಂಸ್ಥೆಯ ಹೊರಗಿನಿಂದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಅವರಿಗೆ ಅನುಭವವನ್ನು ನೀಡಬಹುದು. ಬರುವಂತಹ ಶಾಲಾ-ಕಾಲೇಜುಗಳು ಕೇಳುವಂತಹ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕು, ತಮ್ಮ ರೆಸ್ಯೂಮೆ (Resume) ಹೇಗೆ ಸಿದ್ಧಪಡಿಸಬೇಕು, ಉಡುಗೆ-ತೊಡುಗೆ-ನಡಿಗೆ (dress code & conduct) ಹೇಗಿರಬೇಕು ಎಂಬಿತ್ಯಾದಿಗಳಿಗೆ ಅನುಭವವನ್ನು ಪೂರ್ವದಲ್ಲಿಯೇ ನೀಡುವುದರಿಂದ ಪ್ರಶಿಕ್ಷಣಾರ್ಥಿಗಳಿಗೆ ಧೈರ್ಯವನ್ನು ತುಂಬಿ, ಆತ್ಮವಿಶ್ವಾಸವನ್ನು ಬೆಳೆಸಿ, ಅವರು ಸಕ್ರಿಯವಾಗಿ ಕ್ರಿಯಾಶೀಲತೆಯಿಂದ ಕ್ಯಾಂಪಸ್ ಇಂಟರ್ವ್ಯೂನಲ್ಲಿ ಭಾಗವಹಿಸಲು ಸಹಕಾರಿಯಾಗುತ್ತದೆ.
- **ಆರನೆಯ ಹಂತ :**ಕಾರ್ಯಯೋಜನೆ ರೂಪಿಸಿದಂತೆ ಕ್ಯಾಂಪಸ್ ಇಂಟರ್ವ್ಯೂ ಅನ್ನು ಆಯೋಜಿಸುವುದು.ಕ್ಯಾಂಪಸ್ ಇಂಟರ್ವ್ಯೂ ದಿನದಂದು ಬಂದಂತಹ ಅತಿಥಿಗಳಿಗೆ ಅಂದರೆ ಶಾಲೆಯ ಮುಖ್ಯಸ್ಥರು, ಆಡಳಿತ ವರ್ಗದವರು ಮತ್ತು ಶಿಕ್ಷಕರಿಗೆ ಸ್ವಾಗತವನ್ನು ಕೋರಿ, ಅವರಿಗೆ ಅಂದಿನ ದಿನ ಕಾರ್ಯಕ್ರಮದ ಸಂಪೂರ್ಣ ಮಾಹಿತಿಗಳನ್ನು ನೀಡಿ, ತಮ್ಮ ತಮ್ಮ ಸಂಸ್ಥೆಯ ಬಗ್ಗೆ ಪರಿಚಯವನ್ನು ಎಲ್ಲ ಪ್ರಶಿಕ್ಷಣಾರ್ಥಿಗಳಿಗೂ ಮಾಡಿಕೊಡಬೇಕಾಗಿ ಅವರಿಗೆ ತಿಳಿಸಬೇಕಾಗುತ್ತದೆ. ಆಗಮಿಸಿದಂತಹ ಪ್ರತಿಯೊಂದು ಸಂಸ್ಥೆಗೂ ಪ್ರತ್ಯೇಕ ಕೊಠಡಿಯನ್ನು ನಿಯೋಜಿಸಿ, ಆಯಾ ಕೊಠಡಿಗಳಲ್ಲಿ ಪ್ರಶಿಕ್ಷಣಾರ್ಥಿಗಳು ಸಂದರ್ಶನದಲ್ಲಿ ಸುವ್ಯವಸ್ಥಿತವಾಗಿ ಭಾಗವಹಿಸುವಂತೆ ಮಾರ್ಗದರ್ಶಿಸಬೇಕು. ಪ್ರತಿಯೊಂದು ಸಂಸ್ಥೆಗೂ ಪ್ರಶಿಕ್ಷಣಾರ್ಥಿಗಳ ಭಾಗವಹಿಸುವಿಕೆಯ ಪಟ್ಟಿಯನ್ನು ನೀಡಿ, ಕೊನೆಯಲ್ಲಿ ಅವರಿಂದ ಆಯ್ಕೆಯಾದ ಪ್ರಶಿಕ್ಷಣಾರ್ಥಿಗಳ ಪಟ್ಟಿಯನ್ನು ನೀಡಬೇಕೆಂದು ಕೇಳಿಕೊಳ್ಳುವುದು. ಸಾಧ್ಯವಾದರೆ ಪ್ರಾಂಶುಪಾಲರು ಪ್ರತಿಯೊಂದು ಕೊಠಡಿಗೂ ಒಬ್ಬೊಬ್ಬ ಶಿಕ್ಷಕರನ್ನು ನೇಮಿಸಿ ಅವರು ಹೇಗೆ ಸಂದರ್ಶನ ಮಾಡುತ್ತಿದ್ದಾರೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಲು ತಿಳಿಸಬಹುದು. ಇಂಟರ್ವ್ಯೂ ಆದ ನಂತರ ದಿನದ ಕೊನೆಯಲ್ಲಿ ಎಲ್ಲಾ ಸಂಸ್ಥೆಗಳನ್ನು ಮತ್ತೊಮ್ಮೆ ಒಂದೆಡೆ ಸೇರಿಸಿ, ಅವರಿಂದ ಕ್ಯಾಂಪಸ್ ಇಂಟರ್ವ್ಯೂ ಅನ್ನು ಆಯೋಜಿಸಿದ ರೀತಿ, ಪ್ರಶಿಕ್ಷಣಾರ್ಥಿಗಳ ಭಾಗವಹಿಸುವಿಕೆ ಹಾಗೂ ಇನ್ನಿತರೆ ಅಂಶಗಳಿಗೆ ಸಂಬಂಧಿಸಿದಂತೆ ಹಿಮ್ಮಾಹಿತಿಯನ್ನು (feedback) ಪಡೆಯಬೇಕಾಗುತ್ತದೆ. ಈ ಹಮ್ಮಾಹಿತಿಯು ಮುಂದಿನ ಪ್ಲೇಸ್ಮೆಂಟ್ ಸೆಲ್ ವತಿಯಿಂದ ಆಯೋಜಿಸುವ ಕ್ಯಾಂಪಸ್ ಇಂಟರ್ವ್ಯೂಗೆ ಸಹಾಯಕವಾಗುತ್ತದೆ. ಸಾಧ್ಯವಾದಷ್ಟು ಈ ಎಲ್ಲಾ ಮಾಹಿತಿಯನ್ನು ವರದಿಯ ರೂಪದಲ್ಲಿ ಒಂದು ಪುಸ್ತಕದಲ್ಲಿ ಸಂಗ್ರಹಿಸಿಡುವುದು ಉತ್ತಮ ಅಂಶವಾಗಿದೆ.
- **ಏಳನೆಯ ಹಂತ :** ಕ್ಯಾಂಪಸ್ ಇಂಟರ್ವ್ಯೂನಲ್ಲಿ ಆಯ್ಕೆಯಾದ ಪ್ರಶಿಕ್ಷಣಾರ್ಥಿಗಳ ಪಟ್ಟಿಯನ್ನು ಕ್ರೋಢೀಕರಿಸಿದ ಶಾರ್ಟ್‌ಲಿಸ್ಟ್ ಅನ್ನು ಕಾಲೇಜಿನ ನೋಟಿಸ್‌ಬೋರ್ಡ್‌ನಲ್ಲಿ ಪ್ರಕಟಿಸಬೇಕು. ತದನಂತರ ಆಯ್ಕೆಯಾದ ಶಾಲೆಗಳಿಗೆ ಸಂಪರ್ಕದ ದಿನಾಂಕವನ್ನು ತಿಳಿಸುವುದಾಗಿದೆ. ಒಂದುವೇಳೆ ಆಯಾ ಸಂಸ್ಥೆಯವರು ಆಯ್ಕೆ ಮಾಡಿದಂತಹ ಪ್ರಶಿಕ್ಷಣಾರ್ಥಿಗಳಿಗೆ ಸ್ಥಳದಲ್ಲಿಯೇ ಪ್ಲೇಸ್ಮೆಂಟ್ ಆರ್ಡರ್ ಅನ್ನು ನೀಡಿದರೆ ಅದನ್ನು ಸಹ ಪ್ರಶಿಕ್ಷಣಾರ್ಥಿಗಳಿಗೆ ನೀಡಿ ಅದರ ಒಂದು ಪ್ರತಿಯನ್ನು ಜೋಪಾನ ಮಾಡಬೇಕಾಗುತ್ತದೆ.
- **ಎಂಟನೆಯ ಹಂತ :** ಕೊನೆಯ ಹಂತವಾಗಿ ಕ್ಯಾಂಪಸ್ ಇಂಟರ್ವ್ಯೂ ಅನ್ನು ಆರಂಭದಿಂದ ಅಂತ್ಯದವರೆಗೆ ಹೇಗೆಲ್ಲಾ ಆಯೋಜಿಸಲಾಯಿತು ಎಂಬ ಒಂದು ವರದಿಯನ್ನು ತಯಾರು ಮಾಡಿ, ಅದರಲ್ಲಿ ಬೇಕಾಗಿರುವಂತಹ ಎಲ್ಲಾ ಮಾಹಿತಿಗಳನ್ನು ಕ್ರೋಢೀಕರಿಸಿ ಒಂದು ಫೈಲ್ ಅನ್ನು ತಯಾರಿಸಬೇಕಾಗುತ್ತದೆ ಹಾಗೂ

*– 75ನೇ ಪುಟಕ್ಕೆ ಮುಂದುವರೆದುದು*

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಇತಿಹಾಸ ಅಧ್ಯಯನದಲ್ಲಿ ಶಾಸನಗಳ ಪ್ರಾಮುಖ್ಯತೆ

✍ **ಎಮ್. ಎ. ಖವಾಸ,** ಎಮ್.ಎ.,ಎಂ.ಎಡ್.,ಕೆ.ಸೆಟ್, ನೆಹರು ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಹುಬ್ಬಳ್ಳಿ.


## ಸಾರಲೇಖ

ಪ್ರಸ್ತುತ ಲೇಖನವು ಇತಿಹಾಸ ಅಧ್ಯಯನದಲ್ಲಿ ಶಾಸನಗಳ ಪ್ರಾಮುಖ್ಯತೆಯ ಬಗ್ಗೆ ತಿಳಿಸುವ ಪ್ರಯತ್ನವನ್ನು ಮಾಡಲಾಗಿದೆ. ಇತಿಹಾಸ ಅಧ್ಯಯನ ಕೈಗೊಳ್ಳಲು ವಿವಿಧ ಮೂಲಾಧಾರಗಳನ್ನು ಬಳಸಲಾಗುತ್ತದೆ. ಅವುಗಳಲ್ಲಿ ಪ್ರಾಕ್ತನ ಹಾಗೂ ಸಾಹಿತ್ಯ ಮೂಲಾಧಾರಗಳಾಗಿವೆ. ಪ್ರಾಕ್ತನ ಮೂಲಾಧಾರಗಳಲ್ಲಿ ಶಾಸನಗಳು ಅತ್ಯಂತ ಪ್ರಮುಖ ಅಧ್ಯಯನಕ್ಕೆ ಒಳಪಡಿಸುವ ಮೂಲಾಧಾರಗಳು ಆಗಿರುತ್ತವೆ.


## ಪ್ರಸ್ತಾವನೆ

ಇತಿಹಾಸ ಅಧ್ಯಯನದ ಪ್ರಾಕ್ತನ ಮೂಲಾಧಾರಗಳಲ್ಲಿ ಸ್ಮಾರಕಗಳು, ಶಾಸನಗಳು, ನಾಣ್ಯಗಳು, ದೇವಾಲಯಗಳು, ಕಲಾಕೃತಿಗಳು, ಯುದ್ಧ ಉಪಕರಣಗಳು, ಪಳೆಯುಳಿಕೆಗಳು ಹಾಗೂ ಇನ್ನೂ ಮುಂತಾದವುಗಳಾಗಿವೆ. ಇವುಗಳಲ್ಲಿ ಶಾಸನಗಳಿಂದ ಇತಿಹಾಸಗಾರರು ಉಪಯುಕ್ತ ಮಾಹಿತಿಯನ್ನು ಕಲೆಹಾಕಿ ಗತಕಾಲದ ಘಟನೆಗಳ ಬಗ್ಗೆ ಉಲ್ಲೇಖಿಸುವದರ ಮೂಲಕ ಇತಿಹಾಸವನ್ನು ಸೃಷ್ಟಿಸುವ ಪ್ರಯತ್ನ ಕೈಗೊಳ್ಳುವವರು. ಶಾಸನಗಳ ಬಗ್ಗೆ ಈ ಕೆಳಗಿನಂತೆ ತಿಳಿಯಬಹುದು.

## ಶಾಸನಗಳು

ಶಾಸನಗಳು ಎಂದರೆ, ಬಹುಕಾಲ ಉಳಿಯಬಹುದಾದ ಶಿಲೆ, ಲೋಹ ಮೊದಲಾದವುಗಳ ಮೇಲೆ ಕೆತ್ತಲಾದ ಬರಹ ಹೊಂದಿದ್ದು ಗತಕಾಲದ ಘಟನೆಗಳು ಅಂದರೆ ಇತಿಹಾಸವನ್ನು ವ್ಯಕ್ತಪಡಿಸು ಮಾಧ್ಯಮಗಳಾಗಿವೆ. ಸಂಸ್ಕೃತದಲ್ಲಿ ಶಾಸನ ಪದದ ಅರ್ಥ "ಆಜ್ಞೆ" ಎಂದಾಗುತ್ತದೆ. "ಶಾಸ್" ಎಂಬ ಮೂಲ ಪದದಿಂದ ಬಂದಿರುವ ಇದರರ್ಥ–"ಆಜ್ಞಾಪಿಸು", "ಶಿಕ್ಷಿಸು" ಎಂಬರ್ಥಗಳಿವೆ. ಮೂಲತಹ ಶಾಸನ ಎಂಬುದು ದಾನ ಸಂಬಂಧವಾದ ರಾಜಾಜ್ಞೆ, ಹಿಂದಿನ ಕಾಲದಲ್ಲಿ ರಾಜರು ತಮ್ಮ ಅಥವ ಇತರರ ಕೊಡುಗೆಗಳು ಅಥವಾ ಇತರ ಘಟನೆಗಳ ಬಗ್ಗೆ ಶಾಸನಗಳನ್ನು ಹೊರಡಿಸುತ್ತಿದ್ದರು. ಇಂದು ಶಾಸನಗಳು ಇತಿಹಾಸಗಾರರಿಗೆ ಅತ್ಯಂತ ಪ್ರಮುಖ ಅಧ್ಯಯನದ ಮೂಲಗಳಾಗಿವೆ.

## ಶಾಸನಗಳ ಪ್ರಕಾರಗಳು

1. ದಾನ ಶಾಸನಗಳು
2. ಪ್ರಶಸ್ತಿ ಶಾಸನಗಳು
3. ವೀರಗಲ್ಲು ಶಾಸನಗಳು
4. ಮಾಸ್ತಿಗಲ್ಲು

## ಶಾಸನಗಳ ಪ್ರಾಮುಖ್ಯತೆ

ಶಾಸನಗಳಿಂದ ಐತಿಹಾಸಿಕ ಘಟನಾವಳಿಗಳಾದ–ರಾಜರ ಯುದ್ಧಗಳು, ಕೊಡುಗೆಗಳು, ದತ್ತಿಗಳು, ದಾನಗಳು, ಹಿಂದಿನ ಕಾಲದ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಪರಂಪರೆಗಳು ಇನ್ನೂ ಮುಂತಾದ ಮಾಹಿತಿಯನ್ನು ಪಡೆಯಲು ಸಹಾಯವಾಗುತ್ತದೆ. ಶಾಸನಗಳಿಂದ ಅಂದಿನ ಕಾಲದ ಲಿಪಿ, ಬರಹ, ಸಾಹಿತ್ಯದ ಕುರಿತು ತಿಳಿಯಬಹುದು. ಇತಿಹಾಸಗಾರರು ಶಾಸನಗಳ ಸಹಾಯದಿಂದ ಚರಿತ್ರೆಯನ್ನು ಅಧ್ಯಯನ ಮಾಡಿ, ಇತಿಹಾಸವನ್ನು ಪುನರ್‌ರಚಿಸುವ ಕಾರ್ಯ ಮಾಡುವರು. ಶಾಸನಗಳ ಸಹಾಯದಿಂದ ಕಾಲ, ಸ್ಥಳ, ಘಟನೆ, ಸಾಹಿತ್ಯ ಅಭಿರುಚಿ, ಜೊತೆಗೆ ರಾಜರ ಹತ್ತು ಹಲವಾರು ಕೊಡುಗೆಗಳು, ದಾನಗಳ ಬಗ್ಗೆ ಇಂದಿನ ಜನರಿಗೆ ಗೊತ್ತಾಗುವಂತೆ ಶಾಸನ ಬರೆಯಿಸಿ ಅದನ್ನು ಪ್ರತಿ ಕಾಲದಲ್ಲೂ ಎಲ್ಲರೂ ಅರಿಯುವಂತೆ, ದಾಖಲಿಡುವ ಕಾರ್ಯ ಇದಾಗಿರುತ್ತದೆ.

## ಇತಿಹಾಸದ ಕೆಲವು ಶಾಸನಗಳು

ಪ್ರಾಚೀನ ಕಾಲದಲ್ಲಿ ಅಶೋಕನು ಬಹು ಸಂಖ್ಯೆಯಲ್ಲಿ ಶಾಸನಗಳನ್ನು ಹೊರಡಿಸಿದ್ದು, ಈತನನ್ನು ಶಾಸನಗಳ ಪಿತಾಮಹ ಎನ್ನುವರು. ಎಲ್ಲರಿಗೂ ಅರ್ಥವಾಗುವಂತೆ ಅತಿ ಸರಳ ಭಾಷೆಯಲ್ಲಿ ಕಲ್ಲುಬಂಡೆಗಳು, ಶಿಲಾಸ್ಥಂಭಗಳು ಹಾಗೂ ಗವಿಗೋಡೆಗಳ ಮೇಲೂ ಆತ ಶಾಸನಗಳನ್ನು ಕೆತ್ತಿಸಿದ್ದಾನೆ. ಸಂಸ್ಕೃತ, ಪ್ರಾಕೃತ ಭಾಷೆಗಳಲ್ಲಿ ಹಾಗೂ ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳಲ್ಲಿ ಕೆತ್ತಿಸಿದ್ದಾನೆ. ಅಶೋಕನ ಶಾಸನಗಳ ಕೆಲವು ಉದಾಹರಣೆಗಳೆಂದರೆ–ಮಾಸ್ಕಿ, ಬ್ರಹ್ಮಗಿರಿ, ಜಟಿಂಗರಾಮೇಶ್ವರ, ರೂಪನಾಥ, ಎರ್ರಾಗುಡಿ, ಮುಂತಾದವುಗಳು.

ಕನ್ನಡ ನಾಡಿನ ಸಾಮ್ರಾಜ್ಯಗಳ ಅರಸರ ಕೆಲ ಪ್ರಮುಖ ಶಿಲಾಶಾಸನಗಳೆಂದರೆ– ಹಲ್ಮಿಡಿ, ಐಹೊಳೆ, ಚಿತ್ರದುರ್ಗ, ಸನ್ನತಿ, ಬಾದಾಮಿ, ಪಟ್ಟದಕಲ್ಲು, ಬನವಾಸಿ ಮುಂತಾದವುಗಳು.

## ಉಪಸಂಹಾರ

ಮೂಲಾಧಾರಗಳಿಲ್ಲದೇ ಇತಿಹಾಸ ಅಧ್ಯಯನ ಸಾಧ್ಯವಿಲ್ಲವೆಂಬಂತೆ, ಮೂಲಾಧಾರಗಳಲ್ಲಿ ಶಾಸನಗಳು ಅತ್ಯಂತ ಪ್ರಮುಖಗಳಾಗಿವೆ. ಇತಿಹಾಸಗಾರರು ಇವುಗಳ ಸಹಾಯದಿಂದ ಚರಿತ್ರೆಯನ್ನು ಪುನರ್ ರಚಿಸುನ ಕಾರ್ಯವನ್ನು ಮಾಡುತ್ತಾರೆ. ಶಾಸನಗಳಿಂದ ಕಾಲ, ಸ್ಥಳ, ಸಾಮ್ರಾಜ್ಯಗಳು, ಅರಸರು, ಸಾಹಿತ್ಯ, ಲಿಪಿ, ಘಟನಾವಳಿಗಳು, ಕೊಡುಗೆಗಳು, ಇನ್ನೂ ಮುಂತಾದ ಮಾಹಿತಿ ವಿವರಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

## ಪರಾಮರ್ಶನ ಗ್ರಂಥಗಳು



- **ಆರ್. ಎಸ್. ಶರ್ಮಾ (2006) :** ಇಂಡಿಯಾಸ್ ಎನ್ಷಿಯಂಟ್ ಪಾಸ್ಟ, ಒಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್.
- **ಉಪಿಂದರ್ ಸಿಂಘ :** ಎ ಹಿಸ್ಟರಿ ಅಫ್ ಎನ್ಷಿಯಂಟ್ ಎಂಡ್ ಮಿಡಿವಲ್ ಇಡಿಯಾ. ಪಿಯರ್ಸನ್. 3009
- **ಕೆ. ಸದಾಶಿವ (2006) :** ಸಮಗ್ರ ಭಾರತದ ಇತಿಹಾಸ. ಪ್ರಿಯದರ್ಶಿನಿ ಪ್ರಕಾಶನ.
- **ಡಿ.ಟಿ. ಜೋಶಿ (2013) :** ಪ್ರಾಚೀನ ಭಾತರದ ಚರಿತ್ರೆ. ಗದಗ ವಿದ್ಯಾನಿಧಿ ಪ್ರಕಾಶನ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಉತ್ತಮ ಆರೋಗ್ಯ ಜೀವನಕ್ಕೆ ಯೋಗ.....!

✍ **ಡಾ. ಶಂಕರ ಬಾರಿಕೇರ,** ಕನ್ನಡ ಸಹಾಯಕ ಪ್ರಾಧ್ಯಾಪಕರು, ಶ್ರೀ ಜ. ಫಕೀರೇಶ್ವರ ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಿರಹಟ್ಟಿ, ಜಿ. ಗದಗ




ಆಧುನಿಕ ಮನುಷ್ಯ ಪ್ರಸ್ತುತ ಯಾಂತ್ರಿಕ ಬದುಕಿನಲ್ಲಿ ನಾನಾ ರೋಗಗಳಿಗೆ ತುತ್ತಾಗುತ್ತಿದ್ದಾನೆ. ಈ ತೋರಿಕೆಯ ಪ್ರಪಂಚದೊಳಗೆ ಹಣ, ಆಸ್ತಿ ಗಳಿಕೆಯಲ್ಲಿ ಆಸಕ್ತಿ ವಹಿಸಿ; ಬಿಡುವಿಲ್ಲದ ದುಡಿಮೆಯ ಜೊತೆಗೆ ಆರೋಗ್ಯ ಕಡೆಗಣಿಸಿದ್ದಾನೆ. ಸಾಂಪ್ರತ ಒತ್ತಡ ಬದುಕಿನಲ್ಲಿ ಆಧ್ಯಾತ್ಮಿಕ ಮತ್ತು ದೈಹಿಕ ಆರೋಗ್ಯ ನಿರ್ಲಕ್ಷಿಸುವುದರ ಜತೆಗೆ ಮನಸ್ಸಿನ ನೆಮ್ಮದಿ ಕಳೆದುಕೊಂಡಿದ್ದಾನೆ. ಒಣ ಆಡಂಬರದ ಬದುಕು ನಡೆಸುವುದರ ಜತೆಗೆ, ಅಂತಸ್ತು ಮತ್ತು ಗೌರವ ಗಳಿಕೆಗೆ ಆದ್ಯತೆ ನೀಡಿ; ಭಾವನೆಗಳಿಲ್ಲದ ಯಾಂತ್ರಿಕ ಬದುಕು ಸವೆಸುತ್ತಿರುವುದು ಮನುಕುಲದ ಆತಂಕದ ವಿಷಯವಾಗಿದೆ. ಯೋಗಾಭ್ಯಾಸ ಮೂಲತಃ ಉತ್ತಮ ಆರೋಗ್ಯ ಸಂಬಂಧಿತ ಅತ್ಯಂತ ಪ್ರಾಚೀನ ಮಹತ್ವದ ಕಲೆಯಾಗಿದೆ. ಇದು ಆರೋಗ್ಯಕರ ದೇಹದೊಳಗೆ ಆರೋಗ್ಯಕರ ಮನಸ್ಸನ್ನು ಬೆಳೆಸುವ ಗುರಿಯನ್ನು ಹೊಂದಿದ್ದು; ಮಾನವ ಬದುಕಿನ ಕಲ್ಯಾಣವನ್ನು ಬಯಸಿದೆ. ಭಾರತೀಯರ ಅಷ್ಟಾಂಗ ಯೋಗ ಪದ್ಧತಿ ಇತ್ತೀಚಿನ ವರ್ಷಗಳಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಪ್ರಭಾವ ಬೀರುತ್ತಿದೆ. ಆರೋಗ್ಯ ಭಾಗ್ಯವೆಂದರೆ ಕೇವಲ ದೇಹ ಸ್ವಾಸ್ಥ್ಯವೆನ್ನುವ ನಂಬಿಕೆ ಬದಲಾಗುತ್ತಿದ್ದು; ದೇಹ, ಮನಸ್ಸು, ಭಾವನೆ ಹಾಗು ಆಧ್ಯಾತ್ಮಿಕ ನಿಲುವುಗಳ ಸಾವಯವ ಪರಿಪಾಕ ಎನ್ನುವ ಪರಿಕಲ್ಪನೆ ಬಲಗೊಳ್ಳುತ್ತಿದೆ.

ಸ್ವಾಸ್ಥ್ಯ ಬದುಕಿನ ಕುರಿತು "ಸಿರಿ, ಆನಂದ ಮತ್ತು ಮೋಕ್ಷಕ್ಕೆ ಶ್ರೇಷ್ಠ ಬುನಾದಿ ಆರೋಗ್ಯ." ಎಂದು ಹೇಳಿದವರು ಎರಡು ಸಾವಿರದ ಐದನೂರು ವರ್ಷಗಳ ಹಿಂದೆ ಭಾರತದಲ್ಲಿದ್ದ ಅತ್ಯಂತ ಪ್ರಾಚೀನ ವೈದ್ಯಚರಕ. ಈತನ ಮಾತು ಎಲ್ಲ ಕಾಲಕ್ಕೂ ಸತ್ಯ. ಆರೋಗ್ಯದ ಬಗ್ಗೆ ಹೆಚ್ಚು ವಿವರಿಸುತ್ತಾ ಚರಕನು ಹೇಳುವುದೆಂದರೆ– "ಬದುಕು ಎಂಬುದು ದೇಹ, ಮನಸ್ಸು ಮತ್ತು ಆಧ್ಯಾತ್ಮಗಳ ಮಿಲನ. ಇದು ಹಿಂದಿನ ಜನ್ಮ ಮತ್ತು ಮುಂದಿನದನ್ನು ಸೇರುವಕೊಂಡಿ." (ಸೀತಾರಾಮ್ ಎ. ಆರ್., 2004, ಅರಿಕೆ, ಪುಟ, 2) ಎಂದು ಅಭಿಪ್ರಾಯಿಸಿದ್ದಾನೆ.

ಭೂಮಿಯ ಮೇಲೆ ಒಂದಲ್ಲಒಂದು ಬಗೆಯರೋಗ ಮಾನವನನ್ನು ಕಾಡುತ್ತಲೇ ಇರುವುದರಿಂದ, ಅವನು ಆರೋಗ್ಯದ ಬೆನ್ನಟ್ಟಿ ಹೋಗುತ್ತಿರುವ ವಿಷಯ ನಾಗರಿಕತೆಯಷ್ಟೇ ಹಳೆಯದು. ಕೆಲವರು ಸಂತೋಷವೆಂದರೆ ದುಃಖ ಇಲ್ಲದೇ ಇರುವುದು ಎಂದು ಅರ್ಥೈಸುವಂತೆ, ಇನ್ನು ಕೆಲವರು ಆರೋಗ್ಯವೆಂದರೆ ರೋಗವಿಲ್ಲದೇ ಇರುವುದು ಎಂದು ಹೇಳುತ್ತಾರೆ. ಹೀಗೆ ಹೇಳುವ ನಕಾರಾತ್ಮಕವಾಗಿ ಅರ್ಥೈಸುವ ವಿಧಾನವೇ ಹೊರತು, ಧನಾತ್ಮಕವಾಗಿ ಹೇಳುವುದಲ್ಲ. ದೇಹದ ಅಂಗಾಂಗಗಳೆಲ್ಲಾ ಅವುಗಳ ಕಾರ್ಯವನ್ನು ಸರಿಯಾಗಿ ಮಾಡುತ್ತಾ, ಚಿತ್ತಹರ್ಷದಿಂದಿರುವುದು ಆರೋಗ್ಯದ ಲಕ್ಷಣ. ಆದ್ದರಿಂದ ಮಾನಸಿಕ ಆರೋಗ್ಯಕ್ಕೆ ಬದುಕಿನ ಬಗ್ಗೆ ಧನಾತ್ಮಕ ಭಾವವಿರಬೇಕಾದುದು ಆವಶ್ಯಕವಾಗಿದೆ.


ಮನುಷ್ಯನ ದೇಹ ಮತ್ತು ಮನಸ್ಸು ಒಂದನ್ನೊಂದು ಅನುಸರಿಸಿ, ಪರಸ್ಪರ ಸಹಕರಿಸಿ ಕೆಲಸಮಾಡುವಂತೆ ಪ್ರಕೃತಿ ಮಾಡಿದೆ. ವಿಕಾಸದ ಹಂತಗಳಾದ ಶೈಶವ, ಬಾಲ್ಯ, ಯೌವನ, ಪ್ರೌಢ ಮತ್ತು ಇಳಿವಯಸ್ಸಿನಲ್ಲಿ ಉಂಟಾಗುವ ಪ್ರಕೃತಿ ಸಹಜವಾದ ದೈಹಿಕ ಹಾಗು ಮಾನಸಿಕ ಬದಲಾವಣೆಗಳನ್ನು ತಪ್ಪಿಸುವುದು ಅಸಾಧ್ಯ. ಆದರೆ ಯೋಗಾಸನಗಳನ್ನು ಮಾಡುವುದರಿಂದ ಔಷಧಿಯ ಕೃತ್ರಿಮ ಸಾಧನಗಳನ್ನು ಬಳಸದೆ ವ್ಯಕ್ತಿ ತನ್ನ ದೇಹ ಹಾಗೂ ಮನಸ್ಸನ್ನು ಅಂಕೆಯಲ್ಲಿಟ್ಟುಕೊಂಡು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯದಿಂದ ಇರಲು ಸಾಧ್ಯವಾಗುತ್ತದೆ. ಶುಚಿತ್ವವಾದ ದೇಹದಲ್ಲಿ ಪರಿಶುದ್ಧವಾದ ಮನಸ್ಸು ತರುವುದೇ ಯೋಗದ ಗುರಿಯಾಗಿದೆ. ಪ್ರಸಿದ್ಧ ಪಿಟೀಲು ವಾದಕ ಯಹೂದಿ ಮೆನುಹಿನ್‌ನು "ನಮ್ಮ ಜೀವನದ ದೃಷ್ಟಿ, ನಮ್ಮ ದೇಹದ ಮೇಲೆ ಅವಲಂಬಿಸಿದೆ, ಹದಿನೈದು ವರ್ಷಗಳ ದೀರ್ಘಯೋಗಾಭ್ಯಾಸದಿಂದ ನನಗೆ ನಿಖರವಾಗಿಅರಿವಾಗಿದೆ." (ಅದೇ, ಪುಟ, 2) ಎಂದು ಹೇಳುತ್ತಾನೆ.

ಆಧುನಿಕ ಮಾನವನ ಜೀವನ ಬಹಳ ಸಂಕೀರ್ಣದಿಂದ ಒತ್ತಡಕ್ಕೊಳಪಟ್ಟಿದೆ. ಪೂರಕವಾಗಿ ನಮ್ಮ ಪರಿಸರ ಬಹು ಕೆಟ್ಟಿದೆ. ಆದುದರಿಂದ ಆರೋಗ್ಯದ ಬಗ್ಗೆ ನಾವು ಎಚ್ಚರಿಕೆ ವಹಿಸುವುದಕ್ಕೆ ಹಿಂದೆಂದೂ ಇಲ್ಲದಷ್ಟು ಈಗ ಪ್ರಾಮುಖ್ಯತೆ ಅಗತ್ಯವಾಗಿದೆ. ಯೋಗದ ಬಗೆಗೆ ಜ್ಞಾನವಿರುವ ಯೋಗಿಗೆ ತನ್ನ ಸುತ್ತಮುತ್ತ ಏನಾಗುತ್ತಿದೆ ಎಂಬುದು ಅರಿವಾಗುತ್ತಿದ್ದರೂ, ಅವುಗಳ ಬಗ್ಗೆ ಅವನು ಭಾವೋದ್ರೇಕಗೊಳ್ಳುವುದಿಲ್ಲ. ಅವನ ದೇಹ ಮತ್ತು ಮನಸ್ಸು ಹತೋಟಿಯಲ್ಲಿರುತ್ತದೆ. ಬದುಕಲ್ಲಿ ಶಿಸ್ತಿಲ್ಲದೆ ಮನಸ್ಸು ಕೋಪ, ಕಾಮ, ದುರಾಸೆ ಇವುಗಳಿಗೆ ಈಡಾಗಿ ಅದರಿಂದ ಅನೇಕ ತೊಂದರೆಗಳು ವ್ಯಕ್ತಿಗೆ ಉಂಟಾಗುತ್ತದೆ. ಅಸ್ತಮಾ, ಬೆನ್ನುನೋವು, ತಲೆಶೂಲೆ, ಅಲ್ಸರ್ ಇವುಗಳಿಗೆ ಹತೋಟಿ ಇಲ್ಲದ ಮನಸ್ಸು ಕಾರಣವಾಗಬಹುದು. ಈ ಸತ್ಯಾಂಶಗಳು ಬಹಳ ಜನರಿಗೆ ಗೊತ್ತು. ಈ ರೋಗಗಳನ್ನು ಯೋಗದಿಂದ ತಪ್ಪಿಸಬಹುದು. ಇನ್ನೊಬ್ಬರ ಸಹಾಯವಿಲ್ಲದೆ, ಔಷಧಿ, ಪಥ್ಯವಿಲ್ಲದೆ, ನೈಸರ್ಗಿಕವಾಗಿ ದೇಹ ಮತ್ತು ಮನಸ್ಸು ಸಂಬಂಧಿತ ರೋಗಗಳನ್ನು ತಪ್ಪಿಸುವ ಮಾರ್ಗ ಯೋಗಾಭ್ಯಾಸಕ್ಕಿದೆ.

ಮನುಷ್ಯನ ಚಿತ್ತವೃತ್ತಿಯನ್ನುಅರ್ಥಾತ್ ಮನಸ್ಸಿನ ಚಾಂಚಲ್ಯವನ್ನು ನಿವಾರಿಸಿ ಅದನ್ನು ಏಕಾಗ್ರಗೊಳಿಸಿ, ಉನ್ಮುಖ ಚಲನೆಗೆ ಸಿದ್ಧಗೊಳಿಸುವುದೇ ಯೋಗ. ಭಗವದ್ಗೀತೆಯ ಪ್ರಕಾರ 'ಮಾನಸಿಕ ಶಾಂತಿಯೇ ಯೋಗ' (ಸಮತ್ವಂಯೋಗ ಮುಚ್ಯತೆ). ಯೋಗ ಎಂಬ ಸಂಸ್ಕೃತ ಶಬ್ದವು 'ಯುಜ್' ಧಾತುವಿನಿಂದ ಉದಯಿಸಿದ್ದು, ಹಾಗೆಂದರೆ ಬಂಧಿಸು, ಸೇರಿಸು, ಕೇಂದ್ರೀಕರಿಸು, ಜೋಡಿಸುವುದು, ಕೂಡಿಸುವುದು ಎಂದರ್ಥವಾಗುತ್ತದೆ. ಮನಸ್ಸನ್ನು ಪ್ರಕೃತಿಯೊಡನೆ ಸೇರಿಸುವಂತಹುದೇ ಯೋಗ. ಇದು ದೇಹ, ಮನಸ್ಸು ಮತ್ತು ಚೇತನ (ಆತ್ಮ)ವನ್ನು ಒಂದುಗೂಡಿಸಲು ಸಹಾಯ ಮಾಡುತ್ತದೆ. ಆಸನವೆಂದರೆ– ಪತಂಜಲಿ ಮಹರ್ಷಿಗಳು ಹೇಳುವಂತೆ ಸ್ಥಿರವಾಗಿ, ಸುಖಕರವಾಗಿ, ದೀರ್ಘಕಾಲ ಒಂದೇ ಭಂಗಿಯಲ್ಲಿ ಶರೀರವನ್ನು ಇರಿಸಿಕೊಳ್ಳುವುದೇ 'ಆಸನ'ವಾಗಿದೆ. ಯೋಗಾಸನದ ಸಾಂಪ್ರದಾಯಿಕ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712




ಅರ್ಥ ನೋಡುವುದಾದರೆ, ಪರಮಾತ್ಮನೊಡನೆ ಜೀವಾತ್ಮವನ್ನು ಕೂಡಿಸುವುದು ಎಂದರ್ಥವಾಗುತ್ತದೆ.

ಯೋಗ ಮಾನವನ ದೈಹಿಕ, ಆಧ್ಯಾತ್ಮಿಕ, ಮಾನಸಿಕ ಮತ್ತು ಸಾಮಾಜಿಕ ಸ್ಥಿತಿಯನ್ನು ಹೆಚ್ಚಿಸುತ್ತದೆ. ಇಂತಹ ಅಮೂಲ್ಯ ಸಂಪತ್ತನ್ನು ಎರಡು ಸಾವಿರ ವರ್ಷಗಳ ಹಿಂದೆಯೇ ಭರತಖಂಡದ ಪತಂಜಲಿ ಮಹರ್ಷಿಯು ಇಡೀ ಜಗತ್ತಿಗೆ ಪರಿಚಯಿಸಿದ್ದಾನೆ. ಈತನು ಯೋಗದ ಕುರಿತು "ಯೋಗಶ್ಚಿತ ವೃತ್ತಿ ನಿರೋಧ" ಎಂದು ಅಭಿಪ್ರಾಯಿಸಿದ್ದಾನೆ. ಅಂದರೆ ಚಿತ್ತವೃತ್ತಿ ನಿರೋಧ. ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರಾ, ಸ್ಮೃತಿ ಎಂಬ ಚಿತ್ತವೃತ್ತಿಗಳು ಮತ್ತು ಅವುಗಳ ನಿಯಂತ್ರಣವೇ ಯೋಗ. ಪತಂಜಲಿ ಮಹರ್ಷಿಯನ್ನು ಯೋಗ ಸೂತ್ರದ ಸಂಸ್ಥಾಪಕ ಎನ್ನಲಾಗಿದೆ. ಈ ಮಹರ್ಷಿಯು ಪ್ರಾಚೀನಕಾಲದ ಶ್ರೇಷ್ಠ ಆಧ್ಯಾತ್ಮಿಕ ಸಾಧಕ ಮತ್ತು ಮನೋವಿಜ್ಞಾನಿಯಾಗಿದ್ದು, ಆಧ್ಯಾತ್ಮಿಕ ಚೈತನ್ಯವನ್ನು ಯೋಗ ಸೂತ್ರಗಳಲ್ಲಿ ವ್ಯವಸ್ಥಿತವಾಗಿ ಬಣ್ಣಿಸಿದ್ದಾನೆ. ಪ್ರತಿಯೊಬ್ಬರ ಆತ್ಮವು ಪ್ರಸನ್ನ ಜೀವನದ ಹಾದಿಯಲ್ಲಿ ಅನಂತ ಚೇತನದತ್ತ ಸಾಗಬೇಕೆಂದು ಜ್ಞಾನಿ ಪತಂಜಲಿ ಮಹರ್ಷಿ ವ್ಯಾಖ್ಯಾನಿಸಿದ್ದಾನೆ. ಈತನ 'ಯೋಗ ಸೂತ್ರ' ಗ್ರಂಥವು ಹಿಂದು ತತ್ತ್ವಶಾಸ್ತ್ರದ ಪ್ರಸಿದ್ಧ ದರ್ಶನಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಇದು ನಾಲ್ಕು ಅಧ್ಯಾಯಗಳಲ್ಲಿ 196 ಸಂಸ್ಕೃತ ಸೂತ್ರಗಳನ್ನು ಅಳವಡಿಸಿಕೊಂಡಿದೆ. ಯೋಗ ಸೂತ್ರದಲ್ಲಿ ಸಮಾಧಿಪಾದ, ಸಾಧನಾ ಪಾದ, ವಿಭೂತಿ ಪಾದ ಮತ್ತು ಕೈವಲ್ಯ ಪಾದ ಎನ್ನುವ ನಾಲ್ಕು ಅಧ್ಯಾಯಗಳಿವೆ.


ಸದೃಢ ದೇಹದೊಳಗೆ ಸದೃಢ ಮಾನಸಿಕ ವಿಕಾಸ ಸಾಧಿಸುವುದೇ ಯೋಗ. "ಮನಃ ಪ್ರಶಮನೋಪಾಯಃ ಯೋಗಃ ಇತ್ಯಭಿ ಧೀಯತೇ" ಅಂದರೆ ಮನಸ್ಸನ್ನು ನಿಯಂತ್ರಿಸುವ, ಶಾಂತಗೊಳಿಸುವ ಉಪಾಯವೇ ಯೋಗ. ಇದರಲ್ಲಿ ಗುರಿ ತಲುಪಲು ವಿವಿಧ ಮಾರ್ಗಗಳಿವೆ. ಜೀವಾತ್ಮ, ಪರಮಾತ್ಮ ಸಂಯೋಗ ಹೊಂದಲು ಬಹು ಬಗೆಯದಾರಿ (ಪಥ) ಗಳಿವೆ.ಇಲ್ಲಿ ಮುಖ್ಯವಾಗಿ ನಾಲ್ಕು ಪಥಗಳನ್ನು ವಿವೇಚಿಸಿದೆ –

**ಅ. ಜ್ಞಾನಯೋಗ :** ವೇದ, ಜ್ಞಾನದ ಮೂಲಕ ಯೋಗವನ್ನು ಪಡೆಯುವುದಕ್ಕಾಗಿ ಜ್ಞಾನಯೋಗ ಎನ್ನುವರು. ಉಪನಿಷತ್ತು, ಪುರಾಣ, ಆಧ್ಯಾತ್ಮಿಕ ವಿಷಯಗಳ ಅಧ್ಯಯನದ ಮೂಲಕ ಸಜ್ಜನರ ಸಹವಾಸ, ಸತ್ಸಂಗ, ತರ್ಕ ಮಾರ್ಗದಲ್ಲಿ ಮುಂದುವರೆದು ಗುರಿತಲುಪುವುದಾಗಿದೆ. ದೇವರನ್ನು ತನ್ನ ಆಲೋಚನೆ ಹಾಗೂ ವಿವೇಚನೆಗಳ ಮೂಲಕ ತಿಳಿಯುವ ಪ್ರಯತ್ನವಾಗಿದೆ.

**ಆ. ಭಕ್ತಿಯೋಗ :** ಭಕ್ತಿಯ ಮಾರ್ಗದಿಂದ ಯೋಗ ಸಾಧನೆಗೆ ಭಕ್ತಿಯೋಗ ಎನ್ನುವರು. ದೇವರು, ಧರ್ಮ ಇತ್ಯಾದಿಗಳ ಬಗ್ಗೆ ಗಮನ ನೀಡಬಲ್ಲವರಾಗಿದ್ದಲ್ಲಿ ಭಕ್ತಿಯೋಗದ ಮಾರ್ಗದಲ್ಲಿ ಮುನ್ನಡೆಯ ಗುರಿ ಸೇರಬಹುದು.ಭಾವಾವೇಶಕ್ಕೊಳಗಾಗುವ ಮಾನವನು ದೇವರ ಮೇಲೆ ಅಪಾರವಾದ ಪ್ರೀತಿ–ಆಸಕ್ತಿಗಳನ್ನು ತೋರಿಸಲು ಅಭ್ಯಾಸಗೈಯ್ಯುತ್ತಾನೆ. ಈ ಮಾರ್ಗವನ್ನು ಭಕ್ತಿಯೋಗವೆನ್ನುತ್ತಾರೆ.

**ಇ. ಕರ್ಮಯೋಗ :** ತನ್ನ ನಿಸ್ವಾರ್ಥ ಕಾಯಕದ ಮೂಲಕ ದೇವರನ್ನು ಒಲಿಯಲು ಪ್ರಯತ್ನಿಸುವುದೇ ಕರ್ಮಯೋಗ. ನಾವು ಮಾಡುವ ಕೆಲಸಗಳಿಗೆಲ್ಲಾ ಫಲ ನಿರೀಕ್ಷಿಸುವ ಆಶಾಭಾವನೆಯಿಂದ ಹೊರಬಂದು ನಿರ್ಮಲ ಮನಸ್ಸಿನಿಂದ ಅಚ್ಚುಕಟ್ಟಾಗಿ ಮಾಡುವ ಕೆಲಸವೇ ಇದಾಗಿದೆ. ಮಾಡುವ ಕೆಲಸದಲ್ಲಿ ವ್ಯಾಮೋಹವಿಲ್ಲದೆ ಇದ್ದಾಗ ಮನಸ್ಸು ಕರ್ಮಗಳ ಬಂಧನದಿಂದ ವಿಮುಕ್ತವಾಗಿರುವುದು. ಆಗ ಮನಸ್ಸು ಸ್ಥಿರತೆ ಮತ್ತು ಶಾಂತಿಯಿಂದ ಕೂಡಿರುವುದೇ ಕರ್ಮಯೋಗ.

**ಈ. ರಾಜಯೋಗ :** ನಮ್ಮ ಸ್ವಭಾವ, ನಡಾವಳಿಗಳ ಮೂಲ ನಿಯಂತ್ರಣ ಕೇಂದ್ರವಾಗಿರುವ ಉಸಿರಾಟದ ಮೂಲಕ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವ ಮಾರ್ಗವೇ ರಾಜಯೋಗ. ಮನಸ್ಸನ್ನು ಪಳಗಿಸಲು, ನಿಯಂತ್ರಿಸಲು ಹಂತ ಹಂತವಾಗಿ ಸಾಧನಾ ಪಥದಲ್ಲಿ ಮೇಲೇರಬೇಕಾಗುತ್ತದೆ. ಅದಕ್ಕಾಗಿ ಪತಂಜಲಿ ಮಹರ್ಷಿಗಳು ರಾಜಯೋಗದಲ್ಲಿ ಎಂಟು ಮೆಟ್ಟಿಲುಗಳನ್ನು ಸೂಚಿಸಿದ್ದಾರೆ. ಆದ್ದರಿಂದಲೇ ರಾಜಯೋಗವನ್ನು ಅಷ್ಟಾಂಗ ಯೋಗ (ಅಷ್ಟಾಂಗ ಮಾರ್ಗ) ಎಂದು ಕರೆಯಲಾಗಿದೆ. ತನ್ನ ಸಂಕಲ್ಪ ಶಕ್ತಿ ಅಥವಾ ಇಚ್ಛಾ ಶಕ್ತಿಯನ್ನು ಬಳಸಿ, ಮನಸ್ಸನ್ನು ಪ್ರಶಮನಗೊಳಿಸುವ ಮಾರ್ಗವೇ ರಾಜಯೋಗ ವೆನಿಸುತ್ತದೆ.






ಪರಿಪೂರ್ಣ ಆರೋಗ್ಯದಿಂದ ಮಾನವನ ಜೀವಮಾನ ಕೇವಲ ಕಾಲಮಾಪನದಿಂದಷ್ಟೇ ಅಲ್ಲ, ಗುಣಮಾಪನದಿಂದಲೂ ಉಜ್ವಲವಾಗುತ್ತದೆ. ಇಂತಹ ಆರೋಗ್ಯವನ್ನು ಪಡೆಯಲು ಸಾಧ್ಯವೇ ? ಎರಡು ಸಾವಿರ ವರ್ಷಕ್ಕೂ ಹಿಂದೆ ಪತಂಜಲಿ ಮಹರ್ಷಿಗಳು ಈ ಪ್ರಶ್ನೆಗೆ ಸಮರ್ಪಕವಾದ, ವೈಜ್ಞಾನಿಕ ತಳಹದಿಯುಳ್ಳ ಪರಿಹಾರವನ್ನು ಸೂಚಿಸಿದ್ದಾರೆ. ಪತಂಜಲಿ ಮಹರ್ಷಿಯು ತಮ್ಮ ಯೋಗ ಸೂತ್ರಗಳಲ್ಲಿ ಸೂಚಿತವಾದ ಪರಿಹಾರವೇ– ಅಷ್ಟಾಂಗ ಯೋಗ. ಪತಂಜಲಿಯ ಯೋಗ ಸೂತ್ರವು ರಾಜಯೋಗ ಅಥವಾ ಶ್ರೀಮಂತ ಯೋಗವೆಂದು ಖ್ಯಾತಿಗಳಿಸಿದೆ. ಯೋಗ ಸೂತ್ರದಎರಡನೇ ಅಧ್ಯಾಯವಾದ ಸಾಧನಾ ಪಾದದಲ್ಲಿ ಇದರ ಎಂಟು ಸೂತ್ರಗಳು ಉಲ್ಲೇಖವಾಗಿವೆ. ಇವುಗಳೇ ಅಷ್ಟಾಂಗ ಯೋಗಗಳೆಂದು ಪ್ರಸಿದ್ಧವಾಗಿವೆ. ಅಷ್ಟಾಂಗ ಯೋಗವೆಂದರೆ ಎಂಟು ಅಂಗಗಳುಳ್ಳದ್ದು. ಅವುಗಳೆಂದರೆ– ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ(ಏಕಾಗ್ರತೆ), ಧ್ಯಾನ, ಸಮಾಧಿ. ಇವು ಎಂಟು ಅಂಗಗಳಾಗಿದ್ದು, ಪರಸ್ಪರ ಪೂರಕ ಮತ್ತು ಪೋಷಕವಾಗಿವೆ. ಮೊದಲು ಮೂರು ಹಂತಗಳಲ್ಲಿ ಪರೋಕ್ಷವಾಗಿ ಪ್ರಶಮನ (ನಿಯಂತ್ರಣ) ಮಾಡಲಾಗುವುದು. ಇದನ್ನು 'ಬಹಿರಂಗ ಯೋಗ' ಎನ್ನುತ್ತಾರೆ. (1 ರಿಂದ 3) ನಡುವಿನ ಎರಡು ಹಂತಗಳು ಅಂತರಂಗ ಬಹಿರಂಗ ಯೋಗಗಳೆರಡೂ ಹೌದು. (4 ರಿಂದ 5) ಕೊನೆಯ ಮೂರು ಹಂತಗಳು ಮನಸ್ಸನ್ನು ನೇರವಾಗಿ ಹಿಡಿಯಲಾಗುವುದು. ಇದನ್ನು 'ಅಂತರಾಗಯೋಗ' ಎನ್ನಲಾಗಿದೆ.

ಯೋಗ ಭಾರತೀಯ ಸಂಸ್ಕೃತಿ ಮತ್ತು ಆಚಾರ ವಿಚಾರಗಳಲ್ಲಿ ಸೇರಿ ಹೋಗಿದೆ. ಈ ನೆಲ ಮೂಲದ ಯೋಗಕ್ಕೆ ಆರು ಸಾವಿರ ವರ್ಷಗಳ ಪ್ರಾಚೀನತೆಯಿದ್ದು, ಅಭ್ಯಾಸಕ್ಕೆ ಸರಳವಾಗಿರುವುದರಿಂದ ಇದನ್ನು ಎಲ್ಲರೂ ಕೈಗೊಳ್ಳಬಹುದು. ಯೋಗ ವಿಜ್ಞಾನವು ಅನೇಕಾನೇಕ ಪ್ರಯೋಗಗಳನ್ನು ಮಾಡಿಕೊಟ್ಟಿದೆ. ಅವು ಭೌತಿಕ ಮತ್ತು ಮಾನಸಿಕ ತೊಂದರೆಗಳನ್ನು

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ನಿವಾರಿಸಲು ಸಹಾಯ ಮಾಡುತ್ತದೆ. ರಷ್ಯಾ ದೇಶದ ಸ್ಪೇಸ್‌ಕ್ರ್ಯಾಫ್ಟ್ ಸೋಯಜ್‌ರಲ್ಲಿ ವ್ಯೋಮಕ್ಕೆ ಹಾರಿದ ರಾಖೇಶ ಶರ್ಮ ಯೋಗಾಭ್ಯಾಸದಿಂದ ತನ್ನಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯಾವಾಯಿತೆಂದು ಅಭಿಪ್ರಾಯ ಹಂಚಿಕೊಂಡಿದ್ದಾನೆ. 'ಶರೀರಮಾಧ್ಯಂ ಖಲು ಧರ್ಮ ಸಾಧನಂ' ಆತ್ಮವಿಕಾಸಕ್ಕೆ ಮುಖ್ಯವಾದುದು ಉತ್ತಮ ಆರೋಗ್ಯ.ಇದನ್ನು ಹೊಂದುವುದಕ್ಕಾಗಿ ಸಕಲರೂ ಯೋಗದ ಯೋಗ್ಯತೆ ಅರಿತು, ಅಳವಡಿಸಿಕೊಳ್ಳಬೇಕು. 2015 ಜೂನ್ 21 ರಂದು ಮೊದಲ ಬಾರಿಗೆ ಜಾರಿಗೆ ಬಂದಿರುವ 'ಅಂತರಾಷ್ಟ್ರೀಯ ಯೋಗ ದಿನಾಚರಣೆ'ಯನ್ನು ವಿಶ್ವದಾದ್ಯಂತ ವರ್ಷಂ ಪ್ರತಿ ಆಚರಿಸಲಾಗುತ್ತದೆ. ಯೋಗ ಎಲ್ಲರಿಗೂ, ಎಲ್ಲಾ ವಯಸ್ಸಿನವರೆಗೂ, ಎಲ್ಲ ಪರಿಸರದಲ್ಲೂ ಉತ್ತಮ ಆರೋಗ್ಯ ವಿಷಯದಲ್ಲಿ ದಾರಿ ದೀಪವಾಗಬಲ್ಲುದು.

## ಪರಾಮರ್ಶನ ಗ್ರಂಥಗಳು


- **ಅರವಿಂದರು (1997) :** ಯೋಗಸಾಧನೆಯ ಮೂಲಾಧಾರಗಳು, ಪುದುಚೇರಿ ಶ್ರೀ ಅರವಿಂದ ಆಶ್ರಮ.
- **ಓಂಕಾರ್ ಎಸ್. ಎನ್. (2007) :** ಪತಂಜಲಿಯ ಯೋಗಸೂತ್ರಗಳು ಮತ್ತು ವ್ಯಕ್ತಿತ್ವ ವಿಕಾಸ, ಬೆಂಗಳೂರು ನವಕರ್ನಾಟಕ ಪ್ರಕಾಶನ.
- **ಸೀತಾರಾಮ್ ಎ.ಆರ್. (2004) :** ಸ್ವಾಸ್ಥ್ಯ ಬದುಕಿಗೆ ಯೋಗ, ಮೈಸೂರು ಪರಮಹಂಸ ಯೋಗ ಚಿಕಿತ್ಸಾ ಕೇಂದ್ರ.
- **ಧನ್ಯಕುಮಾರ ಇಜಾರಿ (1996) :** ಸಂಪೂರ್ಣ ಆರೋಗ್ಯ, ಹುಬ್ಬಳ್ಳಿ ಪದ್ಮಶ್ರೀ ಪ್ರಕಾಶನ.
- **ಜಯದೇವ ಎಂ. ಮೆಣಸಗಿ (2016) :** ಯೋಗ, ಗದಗ ವಿದ್ಯಾನಿಧಿ ಪ್ರಕಾಶನ.


■■

*– 79ನೇ ಪುಟದಿಂದ ಮುಂದುವರೆದುದು*

ವೃತ್ತಿ ಜೀವನದ ಪ್ರಾರಂಭದಿಂದಲೂ ಈ ಕ್ಷಣದವರೆಗೂ, ನೂರಾರು ಜನರಿಂದ ನೋಡಿ, ಕೇಳಿ, ಮಾಡಿಯೂ ಕಲಿ(ಯು)ತ್ತಿದ್ದೇನಲ್ಲವೇ?. ಸುತ್ತಮುತ್ತಲಿನ ವಾತಾವರಣದಿಂದಲೂ, ನೂರಾರು ಬಗೆಗಳಲ್ಲಿ ಕಲಿ(ಯು)ತಿದ್ದೇನಲ್ಲವೇ?. ಹೀಗೆಯೆ ನೋಡುತ್ತಾ ಹೋದರೆ, ಸಮಾಜದ ಪ್ರತಿಯೊಂದು ಕ್ಷೇತ್ರಗಳಿಂದ ನಾನು ಧಾರಣೆ ಮಾಡಿರುವುದು ಅಪಾರ ಪ್ರಮಾಣದಲ್ಲಿದೆಯೆನ್ನುವುದು ಅನುಭವಕ್ಕೆ ಬರುತ್ತದೆಯಲ್ಲವೇ? ಇಂದಿನ ನನ್ನ ಸ್ಥಿತಿಗೆ ಸಮಾಜದ ನೇರ ಕೊಡುಗೆ ಅಮೂಲ್ಯವಾಗಿದೆ ಎಂದೆನಿಸುತ್ತದೆಯಲ್ಲವೇ? ಮತ್ತು ಪ್ರಸ್ತುತ ಸ್ಥಿತಿಗತಿಗೆ ಎಲ್ಲಾ ಮೂಲಗಳಿಂದಾದ ಧಾರಣೆಯ ಸಂಚಿತ-ಸಂಕಲನದ ಫಲಿತಾಂಶವೇ ಕಾರಣ ಎಂದೆನಿಸುತ್ತದೆ ಅಲ್ಲವೇ?. ಹೀಗೆ ಕಾಲಾನುಕಾಲಕ್ಕೆ ಕಾಲೋಚಿತಗೊಂಡು ರೂಪುಗೊಂಡಿರುವ ನಾನು, ನನ್ನದೇ ವಿದ್ಯಾರ್ಥಿಗಳಿಗೆ ಕೊಟ್ಟಿರುವ ಕೊಡುಗೆಯನ್ನು ಕಂಡುಹಿಡಿಯುವ ಬಗೆಯಾದರು ಹೇಗೆ ಎಂದು ಅನಿಸುವುದಿಲ್ಲವೇ? ಒಂದು ವೇಳೆ ಕಂಡುಹಿಡಿಯಲು ಪ್ರಯತ್ನಿಸಿದರು ಬರುವ ಉತ್ತರದ ಅಂಶದಾನ ಅಲ್ಪ ಮಾತ್ರವಲ್ಲವೇ?.

## ಉಪಸಂಹಾರ

ಈ ಹಿನ್ನಲೆಯಲ್ಲಿ, ಹಿರಿಯವ ನಾನು ಯಾರಿಗೆ?, ಹಿರಿಯವ ನಾನು ಹೇಗೆ?. ಜ್ಞಾನದ ಜ್ಯಾಮಿತಿ ಎಂಬ ಅಳತೆಮಾನದಡಿಯಲ್ಲೇನಾದರು ನನ್ನನ್ನು ಹಿರಿಯವನೆಂದು ನಿರ್ಧಾರಿಸಲಾಗಿದೆಯೇ? ಅಥವಾ ಕೇವಲ ವಯೋಮಾನದ ಆಧಾರದಲ್ಲಿ ಕಾಲ್ಪನಿಕ-ಸಾಪೇಕ್ಷತೆಯ ಚೌಕಟ್ಟಿನಲ್ಲಿ ಹಿರಿಯವನೇ?, ಈ ಸಾಪೇಕ್ಷತೆಯನ್ನು ಅರಿಯುವುದು ಹೇಗೆ?, ಇದನ್ನು ಹಿರಿಯವ ನಾನು ಒಪ್ಪಲೇಬೇಕಲ್ಲವೇ?. ನಾನು ಕಾಲಾತೀತನೆ?, ಅನುಭವಾತೀತನೆ?, ಪ್ರಶ್ನಾತೀತನೆ?, ಉತ್ತರಿಸಬೇಕಲ್ಲವೇ ನಿರುತ್ತರನಾಗದೆ?! ಹಿರಿಯವ ನಾನ್ ನೆಪಮಾತ್ರ, ಹಿರಿಯವ ನಾನ್ ನಿಮಿತ್ತ ಮಾತ್ರ. ಹಿರಿಯವ ನಾನ್ ಈ ಇಳೆಯವ, ಇಳೆಯೊಳಗೆ ಇಳಿದು ಇಂಗಿಹೋಗುವವ....

■■

*– 75ನೇ ಪುಟದಿಂದ ಮುಂದುವರೆದುದು*

ಬಂದಂತಹ ಅಧಿಕಾರಿಗಳಿಗೆ ತಾವು ಮಾಡಿದಂತಹ ಕಾರ್ಯದ ಬಗ್ಗೆ ಉತ್ತಮವಾದ ಚಿತ್ರಣವನ್ನು(Profile) ನೀಡಲು ಸಾಧ್ಯವಾಗುತ್ತದೆ.

ಹೀಗೆ ಪ್ಲೇಸ್ಮೆಂಟ್ ಸೆಲ್ ವತಿಯಿಂದ ಕ್ಯಾಂಪಸ್ ಇಂಟರ್ವ್ಯೂ ಅನ್ನು ಶಿಕ್ಷಕ ತರಬೇತಿ ಸಂಸ್ಥೆಗಳಲ್ಲಿ ಆಯೋಜಿಸಬಹುದಾಗಿದೆ. ಈ ಕ್ಯಾಂಪಸ್ ಇಂಟರ್ವ್ಯೂನಿಂದ ಬಂದಿರುವಂತಹ ಮಾಹಿತಿಯನ್ನು ನಾವು ಅಂದರೆ ಶಿಕ್ಷಕ ತರಬೇತಿ ಸಂಸ್ಥೆಗಳು ಮುಂದಿನ ದಾಖಲಾತಿಯ ಸಮಯದಲ್ಲಿ ವಿದ್ಯಾಕಾಂಕ್ಷಿಗಳನ್ನು ಆಕರ್ಷಿಸಲು ಬಳಸಬಹುದು.

ಪ್ರಶಿಕ್ಷಣಾರ್ಥಿಗಳಿಗೆ ಕ್ಯಾಂಪಸ್ ಇಂಟರ್ವ್ಯೂನಿಂದ ಆಗುವಂತಹ ಅನುಕೂಲಗಳೇನೆಂದರೆ;

- ಇಂಟರ್ವ್ಯೂ ಅನ್ನು ಎದುರಿಸಲು ಆತ್ಮವಿಶ್ವಾಸವನ್ನು ಹಾಗೂ ಧೈರ್ಯವನ್ನು ಬೆಳೆಸಿಕೊಳ್ಳಬಹುದು.
- ಇಂಟರ್ವ್ಯೂ ಅನ್ನು ಹೇಗೆ ಎದುರಿಸಬೇಕು? ಹಾಗೂ ಶಾಲಾ-ಕಾಲೇಜುಗಳ ಬೇಡಿಕೆಗಳೇನು? ಎಂಬುದರ ಬಗ್ಗೆ ಪರಿಚಯ ವಾಗುತ್ತದೆ.
- ತನ್ನ ಸಾಮರ್ಥ್ಯ ಹಾಗೂ ತಮ್ಮಲ್ಲಿರುವ ನ್ಯೂನ್ಯತೆ/ಕೊರತೆಗಳು ಏನು ಎಂಬುದನ್ನು ತಿಳಿಯಬಹುದು.
- ಉದ್ಯೋಗವಕಾಶ ಪಡೆಯುವ ದಾರಿ ಸುಗಮವಾಗುತ್ತದೆ.
- ಮುಂದಿನ ಪ್ರಯತ್ನ ಹೇಗಿರಬೇಕು ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತದೆ.

ಇವೆಲ್ಲವುದರ ಜೊತೆಗೆ ಶಿಕ್ಷಕ ತರಬೇತಿ ಸಂಸ್ಥೆಗಳ ಮೇಲೆ ಸಮಾಜದ ನಂಬಿಕೆ ಹೆಚ್ಚಾಗುತ್ತದೆ ಹಾಗೂ ಶಿಕ್ಷಕ ತರಬೇತಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸಹಾಯಕವಾಗುತ್ತದೆ.

■■

APPROVED BY UGC CARE

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ಬರಗೂರರ ಬೆಂಕಿ ಕಾದಂಬರಿಯಲ್ಲಿ ಮಹಿಳಾ ಸಂವೇದನೆ

✍ **ರಶ್ಮಿ.ರಾ. ಚಂದ್ರಗಿರಿ,** ಸಂಶೋಧನ ವಿದ್ಯಾರ್ಥಿನಿ, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
✍ **ಡಾ. ಬಿ.ಎಸ್. ಭಜಂತ್ರಿ,** ಸಂಶೋಧನ ಮಾರ್ಗದರ್ಶಕರು, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**"ವರ್ತನೆಯ ನರ್ತನೆಗೆ ಪರಿವರ್ತನೆಯ ಸೊಬಗು"** ಎಂಬ ಚೆನ್ನವೀರ ಕಣವಿಯವರ ಮಾತಿನಂತೆ ಕೇವಲ ಬೆರಳಣಿಕೆಯ ಸಾಹಿತ್ಯ ಪ್ರಕಾರಗಳನ್ನು ಹೊಂದಿದ್ದ ಕನ್ನಡ ಸಾಹಿತ್ಯವು ಪರಿವರ್ತನೆ ಎಂಬಂತೆ ಹೊಸಗನ್ನಡ ಹಲವು ಹೊಸ ಸಾಹಿತ್ಯ ಪ್ರಕಾರಗಳನ್ನು ಒಳಗೊಂಡು ಉಗಮವಾಯಿತು. ಇಂತಹ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಕೂಡ ಒಂದು. ಹೀಗೆ ಕನ್ನಡ ಕಾದಂಬರಿ ಸಾಹಿತ್ಯವು ಕೂಡ ತನ್ನ ಬೆಳವಣಿಗೆಯ ಆಯಾ ಕಾಲಘಟ್ಟದಲ್ಲಿ ಬೇರೆ ಬೇರೆ ಸ್ವರೂಪ ಪಡೆದದ್ದು ಇದೆ. ನವೋದಯ ಕಾಲಘಟ್ಟದ ಆರಂಭದಲ್ಲಿ ಅನುವಾದಗಳಿಗೂ ನಂತರದ ಕಾದಂಬರಿಕಾರರ ಕಾದಂಬರಿಗಳಲ್ಲಿ ರಂಜನೀಯತೆಯೊಂದಿಗೆ ಧರ್ಮ, ಸಂಸ್ಕೃತಿ, ಆದರ್ಶ, ಆದರ್ಶದ ಬದುಕಿಗೆ, ರಾಷ್ಟ್ರಭಕ್ತಿಗೆ ಒತ್ತು ಕೊಟ್ಟದ್ದನ್ನು ಗಮನಿಸಬಹುದು. ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ಕಾರ್ಮಿಕರ ಮತ್ತು ಮಧ್ಯಮ ವರ್ಗದವರ ಸಮಸ್ಯೆಗಳಿಗೆ ಒತ್ತು ನೀಡಿದ್ದು ಕಂಡು ಬಂದರೆ– ಮನೋವಿಜ್ಞಾನಿ ಪ್ರಾಯಿಡನ ಶೋಧನೆಯ ಪ್ರಭಾವದಿಂದ, ಸಾಹಿತ್ಯದಲ್ಲಿ ವ್ಯಕ್ತಿಶೋಧ, ವ್ಯಕ್ತಿಯ ಸುಪ್ತ ಮನಸ್ಸಿನ ಆಲೋಚನೆ, ಕಾಮ, ಆಧುನಿಕ ಬದುಕಿನ ವಿಪರ್ಯಾಸ, ಸಂಕೀರ್ಣತೆ ಮುಂತಾದ ನೆಲೆಗಳಲ್ಲಿ ನವ್ಯ ಕಾದಂಬರಿಕಾರರು ರಚನೆಗೆ ತೊಡಗಿಕೊಂಡದ್ದನ್ನು ನೋಡಬಹುದು. ನವ್ಯೋತ್ತರ ಅಂದರೆ ಬಂಡಾಯ ದಲಿತ ಸಾಹಿತ್ಯದ ಕಾದಂಬರಿಕಾರರಿಗೆ ತಾವು ಬಂದ ನೆಲೆ, ನೊಂದ ನೆಲೆ, ಕಾದಂಬರಿಗೆ ವಸ್ತುವಾಗಿ, ಆ ಹಿನ್ನೆಲೆಯೊಂದಿಗೆ ಕಾದಂಬರಿ ರಚನೆಗೆ ತೊಡಗಿದ್ದನ್ನು ಗುರುತಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಬಂಡಾಯ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟತೆಯಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಅದುವರೆಗೂ ಸಾಹಿತ್ಯದಲ್ಲಿ ಅಭಿವ್ಯಕ್ತವಾದ ನಿರೂಪಣೆ ಹಾಗೂ ಅಭಿವ್ಯಕ್ತಿಗಿಂತ ಭಿನ್ನ ನೆಲೆಯಲ್ಲಿ ಬಂಡಾಯ ಸಾಹಿತ್ಯ ತನ್ನ ಛಾಪು ಮೂಡಿಸಿತು. ಬಂಡಾಯ ಸಾಹಿತ್ಯ ಪ್ರಕಾರವು ಈ ಹಿಂದಿನ ಸಾಹಿತ್ಯ ಪರಂಪರೆಯಂತೆ ಕೇವಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗದೆ ಸೀಮಿತವಾಗದೆ ಹೋರಾಟ ಮತ್ತು ಚಳವಳಿಯ ಸ್ವರೂಪವನ್ನು ಪಡೆದುಕೊಂಡಿತು. ಹೀಗಾಗಿ ಬಂಡಾಯ ಸಾಹಿತಿಗಳೆಲ್ಲ ಪ್ರಗತಿಪರ ನೆಲೆಯ ಹೋರಾಟಗಾರರೇ ಆಗಿದ್ದಾರೆ. ಬಂಡಾಯ ಸಾಹಿತಿಗಳು ಸಾಹಿತ್ಯ ಕೃಷಿಯ ಜೊತೆ ಜೊತೆಯಲ್ಲಿಯೇ ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಅನ್ಯಾಯವನ್ನು ಪ್ರತಿಭಟಿಸಿಸುವ ನೆಲೆಯಲ್ಲಿ ಹೋರಾಟವನ್ನು ಮುನ್ನಡೆಸಿಕೊಂಡು ಬಂದವರಾಗಿದ್ದಾರೆ. ಹಾಗೆಯೇ ಬಹುತೇಕ ಬಂಡಾಯ ಸಾಹಿತಿಗಳು ದಲಿತರು ಹಾಗೂ ಮಹಿಳೆಯರ ಮುಂದಿನ ಬಿಕ್ಕಟ್ಟುಗಳನ್ನು ಕೇಂದ್ರವಾಗಿಟ್ಟುಕೊಂಡು ಸಾಹಿತ್ಯ ಕೃಷಿ ನಡೆಸಿರುವುದು ಕಂಡುಬರುತ್ತದೆ.

ಬಂಡಾಯ ಸಾಹಿತ್ಯದಲ್ಲಿ ಬಂಡಾಯದ ಬರಗೂರು ಎಂಬ ಪ್ರಸಿದ್ಧಿಯಾಗಿರುವ ರಾಮಚಂದ್ರಪ್ಪನವರು ತಮ್ಮ ಸಾಹಿತ್ಯದ ಮೂಲಕ ಸಮಾಜದಲ್ಲಿರುವ ಅನಿಷ್ಟ ಪದ್ಧತಿ, ಮೂಢನಂಬಿಕೆ, ಶೋಷಣೆ, ಅನಾಚಾರ ಇವುಗಳ ವಿರುದ್ಧ ಬಂಡಾಯವೆದ್ದ ಕವಿ. ಇಂತಹ ವಿಷಯ ವಸ್ತುಗಳನ್ನು ಒಳಗೊಂಡಿರುವ ಕಾದಂಬರಿ ಬರಗೂರರ ಬೆಂಕಿ. ಪ್ರಸ್ತುತವಾಗಿ ಈ ಲೇಖನದಲ್ಲಿ ಬೆಂಕಿ ಕಾದಂಬರಿಯಲ್ಲಿ ಮಹಿಳಾ ಸಂವೇದನೆ ಎಂಬುದರ ಕುರಿತಾಗಿ ವಿಷಯ ವಸ್ತುವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ಮಹಿಳಾ ಸಂವೇದನೆ ಒಂದು ಸಾಂಸ್ಕೃತಿಕ ಆಯಾಮ ಪಡೆದುಕೊಳ್ಳುತ್ತದೆ. ಸಂವೇದನೆಯನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ಕಾಣಬೇಕಾಗುತ್ತದೆ. ಭಾರತದಂತಹ ದೇಶಗಳಲ್ಲಿ ಪಿತೃಪ್ರಧಾನ ವ್ಯವಸ್ಥೆ ತನ್ನದೇ ಆದ ಪ್ರಭಾವಳಿಯನ್ನು ನಿರ್ಮಿಸಿರುವುದನ್ನು ಕಾಣಬಹುದು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಕಾಣುವ ಬದಲು ಭಾರತದ ನಾಗರೀಕ ಸಮಾಜ ಸಂಪ್ರದಾಯಬದ್ಧ ಸಾಂಸ್ಕೃತಿಕ ನೆಲೆಯಲ್ಲೇ ಕಾಣಲು ಹವಣಿಸುತ್ತದೆ. ಇಂತಹ ಸಂಪ್ರದಾಯದಬದ್ಧ ತೊಡಕುಗಳಲ್ಲಿ ಸಿಕ್ಕಿಹಾಕಿಕೊಂಡು ನರಳಾಡುವ ವಿಷಯ ವಸ್ತುವೇ ಈ ಬೆಂಕಿ ಕಾದಂಬರಿ.

ಕಾದಂಬರಿಯ ನಾಯಕಿಯಾದ ಲಕ್ಷ್ಮೀ ಸಮಾಜದ ಸಂಪ್ರದಾಯದ ಬಂಧನದಲ್ಲಿ ಸಿಲುಕಿ ತನ್ನ ಆಸೆಗಳಿಗೆ ನೀರೆರಚುವ ಸನ್ನಿವೇಶಗಳನ್ನು ಈ ಕಾದಂಬರಿಯ ವಸ್ತುವಾಗಿರುವುದನ್ನು ಕಾಣಬಹುದು. ಈ ರೀತಿಯ ಜಡವ್ಯವಸ್ಥೆಗೆ ಆಕೆ ಬೆಂಕಿಯಾಗಿ ಪ್ರತಿಭಟಿಸುವುದು ಈ ಕಾದಂಬರಿಯ ಹೆಸರಿಗೂ ಇದು ಪೂರಕವಾಗಿರುವುದನ್ನು ಕಾಣುತ್ತೇವೆ. ಸಮಾಜದ ವಿವಿಧ ಮಗ್ಗುಲಗಳನ್ನು ಅತ್ಯಂತ ಸೂಕ್ಷ್ಮ ರೀತಿಯಲ್ಲಿ ಕಣ್ಣಿಗೆ ಕಟ್ಟಿಕೊಡುವ ರೀತಿಯಲ್ಲಿ ಕಾದಂಬರಿ ಮೂಡಿಬಂದಿದೆ. ಸುಖ ಸಂತೋಷದಿಂದ ವಂಚಿತಳಾದ ಕಾದಂಬರಿಯ ನಾಯಕಿಯಾದ ಲಕ್ಷ್ಮೀ ಸಾಮಾಜಿಕ ಮೌಲ್ಯಗಳನ್ನು ಪ್ರಶ್ನಿಸುತ್ತ ಇಲ್ಲಿ ಕೇಂದ್ರವಾಗಿ ಬಿಂಬಿತಳಾಗುತ್ತಾಳೆ. ಸವಾಜದಲ್ಲಿ ಸಂಪ್ರದಾಯದ ಹೆಸರಿನಲ್ಲಿ ಬೇರು ಬಿಟ್ಟಿರುವ ಮೂಢನಂಬಿಕೆಗಳನ್ನು ವಿರೋಧಿಸುವ ನಿಟ್ಟಿನಲ್ಲಿ ವೈಚಾರಿಕ ಪಾತ್ರವಾಗಿ ರಂಗಸ್ವಾಮಿ ಬಿಂಬಿತನಾಗುತ್ತಾನೆ. ಸ್ವಾರ್ಥ, ವಂಚನೆ ತುಂಬಿಕೊಂಡ ಲಕ್ಷ್ಮಿಯ ತಂದೆಯ ವಯಸ್ಸಿನ ಸೀನಪ್ಪ ಈ ಕಾದಂಬರಿ ಉದ್ದಕ್ಕೂ ಸುಳಿದಾಡುತ್ತಾ ತನ್ನ ಬೆಳೆಯನ್ನು ಬೇಯಿಸಿಕೊಳ್ಳುತ್ತಿರುತ್ತಾನೆ. ನಪುಂಪಸಕ ಗಂಡನನ್ನು ಕಟ್ಟಿಕೊಂಡು ದೈಹಿಕ ಸುಖದಿಂದ ವಂಚಿತಳಾಗಿ, ಯಾರಿಗೂ ಹೇಳದೆ ತಾನೊಬ್ಬಳೇ ನರಕ ಯಾತನೆ ಅನುಭವಿಸುವುದೇ ಈ ಕಾದಂಬರಿಯ ಕಥಾವಸ್ತುವಾಗಿದೆ.

ಬರಗೂರರ ಈ 'ಬೆಂಕಿ' ಕಾದಂಬರಿಯಲ್ಲಿ ಲಕ್ಷ್ಮೀ ಎಂಬ ಹೆಣ್ಣುಮಗಳು ಪುರುಷ ಸಮಾಜದಿಂದ ಮತ್ತು ಸಮಾಜದಿಂದ ಶೋಷಣೆಗೆ ಒಳಗಾದಂತವಳು. ತಂದೆಯ ಮಾತಿಗೆ ಬೆಲೆಕೊಟ್ಟು ಗಂಡಸ್ತನ ಇಲ್ಲದ ತನ್ನ ಅಳಿಯನಿಗೆ (ತಂಗಿಯ ಮಗನಿಗೆ) ಕೊಟ್ಟು ಮದುವೆ ಮಾಡುತ್ತಾನೆ.ಈ ಸಂಗತಿ ಇಡೀ ವ್ಯವಸ್ಥೆಗೆ ಗೊತ್ತಿರುತ್ತದೆ. ಆಕೆ ವಿವಾಹವಾಗುವುದಕ್ಕೆ ಪ್ರತಿಭಟಿಸಿದರೂ ಸಾಧ್ಯವಾಗದೆ ಅನಿವಾರ್ಯವಾಗಿ ವಿವಾಹವಾಗ ಬೇಕಾಗುತ್ತದೆ. ಹಿರಿಯರು ನಡೆದ ದಾರಿಯಲ್ಲಿ ತಾನು ಸಾಗಬೇಕು ಎಂದು ಅವನ ಜೊತೆ ಜೀವನ ಸಾಗಿಸುತ್ತಾಳೆ ಇವಳ ನೋವಿಗೆ ರಂಗಸ್ವಾಮಿ ಧೈರ್ಯ ತುಂಬಿ ಅವಳ ಕಷ್ಟಗಳಿಗೆ ಸ್ಪಂದಿಸುವ ವ್ಯಕ್ತಿಯಾಗುತ್ತಾನೆ.ಆಕೆಗೆ ಆಗುತ್ತಿದ್ದ ಅನ್ಯಾಯವನ್ನು ಪ್ರಶ್ನಿಸಿ ಪ್ರತಿಭಟಿಸುತ್ತಾನೆ. ಲಕ್ಷ್ಮೀಯ ಇಂತಹ ಸ್ಥಿತಿಗೆ ಸೀನಪ್ಪ ಎಂಬ ತಂದೆ ವಯಸ್ಸಿನ ಮೇಲ್ಜಾತಿಯ ವ್ಯಕ್ತಿ ಕಾರಣನಾಗುತ್ತಾನೆ. ಕಾರಣ ಆಕೆಯನ್ನು ಪಡೆಯಬೇಕೆಂಬ ಹಠಕ್ಕೆ ಬಿದ್ದು ಆಕೆಯನ್ನು ವಿಧವೆಯಾಗುವಂತೆ ಮಾಡುತ್ತಾನೆ.

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

‘ಬೆಂಕಿ’ ಕಾದಂಬರಿಯು ಸ್ತ್ರೀ ಸಂವೇದನೆಯ ನೆಲೆಯಲ್ಲಿ ರಚಿತವಾಗಿರುವ ಒಂದು ಬಂಡಾಯ ಕಾದಂಬರಿಯಾಗಿದೆ. ಲಕ್ಷ್ಮೀಯನ್ನು ಬಲಾತ್ಕಾರದಿಂದ ಒಲಿಸಿಕೊಳ್ಳುವ ಬದಲು ಸೀನಪ್ಪ ಬೇರೇ ಉಪಾಯದಿಂದ ಶತಾಯ ಗತಾಯ ಪ್ರಯತ್ನ ಪಡುತ್ತಾನೆ. ಈ ಪ್ರಯತ್ನದಲ್ಲಿ ಅರೆಬರೆ ಗೆದ್ದರೂ ಲಕ್ಷ್ಮೀಯ ಮನಸ್ಸು ಸ್ಥಿಮಿತಕ್ಕೆ ಸಿಗದೆ ದ್ವಂದಕ್ಕೆ ತಿರಗುತ್ತದೆ.ಇದಕ್ಕೆ ಕಾರಣ ಲಕ್ಷ್ಮೀಯು ರಂಗಸ್ವಾಮಿಯನ್ನು ಪ್ರೀತಿಸುತ್ತಿದ್ದುದನ್ನು ಅರಿತು ಸೀನಪ್ಪ ಕುತಂತ್ರದಿಂದ ಲಕ್ಷ್ಮೀಯ ತಂದೆ ರಂಗಣ್ಣನಿಗೆ ಹೇಳಿ ಆಕೆಯನ್ನು ಎಂದಾದರೂ ಪಡೆಯಬಹುದೆಂದು ನಿರ್ಧರಿಸಿ ಗಂಡಸ್ತನ ಇಲ್ಲದ ನರಸಿಂಹನಿಗೆ ಕೊಟ್ಟು ವಿವಾಹ ಮಾಡಿಸುತ್ತಾನೆ. ಹೆಸರು ಕೇಳಿದರೆನೆ ಉಸಿರುಗಟ್ಟುವಂತೆ ಮಾಡುವ ಈ ಕಾದಂಬರಿ ಹೆಣ್ಣೊಬ್ಬಳು ಸಂಪ್ರದಾಯದ ಬಿಗಿ ಬಂಧನದಲ್ಲಿ ಸಿಲುಕಿ, ತನ್ನೆಲ್ಲ ಬದುಕು ಕಳೆದುಕೊಂಡು ನರಳುವ ಕಥಾವಸ್ತುವನ್ನು ಒಳಗೊಂಡಿದೆ. ಸಮಾಜದ ವಿವಿಧ ಮಗ್ಗಲುಗಳನ್ನು ಈ ಕಾದಂಬರಿ ಪರಿಚಯಿಸುತ್ತದೆ.

ಜೀವನದಲ್ಲಿ ತನ್ನೆಲ್ಲ ಸುಖ ಸಂತೋಷಗಳಿಂದ ವಂಚಿತಳಾದ ಲಕ್ಷ್ಮೀ ಸಾಮಾಜಿಕ ಮೌಲ್ಯವನ್ನು ಪ್ರಶ್ನಿಸುವ ಕೇಂದ್ರಪಾತ್ರವಾದರೆ, ಸಮಾಜದಲ್ಲಿ ಬೇರುಬಿಟ್ಟಿದ್ದ ಮೂಢನಂಬಿಕೆ – ರೂಢಿ ಸಂಪ್ರದಾಯಗಳನ್ನು ಪ್ರತಿಭಟಿಸುವ ವೈಚಾರಿಕ ಪಾತ್ರವಾಗಿ ರಂಗಸ್ವಾಮಿ ಕಂಡುಬರುತ್ತಾನೆ. ಸ್ವಾರ್ಥ ವಂಚನೆ ತುಂಬಿಕೊಂಡ ಶೀನಪ್ಪ ಈ ಕಾದಂಬರಿಯ ತುಂಬ ಪ್ರವಹಿಸುತ್ತಾನೆ. ಹೀಗೆ ಹಲವಾರು ಪಾತ್ರಗಳು ಮನುಷ್ಯ ಸಂಬಂಧದ ವಿವಿಧ ಮಗ್ಗುಲುಗಳನ್ನು ಶೋಧಿಸಿ ಕಥಾವಸ್ತುವಿಗೆ ಚಾಲನೆ ಕೊಡುತ್ತವೆ. ಹೆಣ್ಣೊಬ್ಬಳು ನಪುಂಸಕ ಗಂಡನನ್ನು ಕಟ್ಟಿಕೊಂಡು, ದೈಹಿಕ ಸುಖದಿಂದ ವಂಚಿತಳಾಗಿ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುವುದೇ ಈ ಕಾದಂಬರಿಯಲ್ಲಿ ಪ್ರಮುಖ ವಾದಂತಹದು.

ಮದುವೆಯಾದ ತನ್ನ ಅತ್ತೆಯ ಮಗ ನರಸಿಂಹನಿಂದ ದೈಹಿಕ ಸುಖವನ್ನು ಕಾಣದ ಲಕ್ಷ್ಮೀಯ ಬದುಕು ಬೆಂಕಿಯಲ್ಲಿ ಸಾಗಿದ ಪಯಣವಾಗಿದೆ. ವಿರಹದ ಬೆಂಕಿ ತಾಳಲಾರದು ಸಂಪ್ರದಾಯದ ಕಟ್ಟಳೆಯಲ್ಲಿ ಸಿಲುಕಿದ ಲಕ್ಷ್ಮೀ ತನ್ನ ಸಹಪಾಠಿಯಾದ ರಂಗಸ್ವಾಮಿಯನ್ನು ಕೂಡುವಂತಿಲ್ಲ. ತನ್ನ ಬಡತನವನ್ನು ನೋಡಲಾಗದೆ ತನಗೆ ಸಹಾಯ ಮಾಡುತ್ತಿರುವುದನ್ನು ನೋಡಿ ಜನ ಆಡಿಕೊಳ್ಳುತ್ತಿರುವುದನ್ನು ಕೇಳಿದ ಲಕ್ಷ್ಮೀ ಒಳಗೊಳಗೆ ಕುದಿಯುತ್ತಾಳೆ. ಬ್ರಹ್ಮಚಾರಿ ಎಂದು ಸೋಗು ಹಾಕಿದ ಶೀನಪ್ಪ ಲಕ್ಷ್ಮೀಯನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಅನೇಕ ರೀತಿಯ ಸಂಚು ಹೂಡುತ್ತಾನೆ. ರಂಗಸ್ವಾಮಿ ಈ ಕಡೆಗೆ ಬರದಂತೆ ನೋಡಿಕೊಳ್ಳಲು ಲಕ್ಷ್ಮಿಯ ತಂದೆ ಗಂಗಪ್ಪನಿಗೆ ಹೇಳುತ್ತಾನೆ. ಗಂಗಪ್ಪ ಮುಂದೆ ತನ್ನ ತಂಗಿ ಕೆಂಚಪ್ಪ ಎಂಬ ಹೋರಿ ಹೋರಿ ವ್ಯಾಪಾರಿ ಜೊತೆ ಓಡಿ ಹೋದಾಗ ಅವಮಾನದಿಂದ ಮನೆ ಬಿಟ್ಟು ಹೊರಟು ಹೋಗುತ್ತಾನೆ.

ಸಾಂಪ್ರದಾಯಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಶೀನಪ್ಪ ನರಸಿಂಹನಿಗೆ ಪುಣ್ಯಕ್ಷೇತ್ರಗಳ ದರ್ಶನ ಮಾಡಿಸಿದರೆ ಪುರುಷತ್ವ ಬರಬಹುದೆಂದು ಹೇಳಿ ಪುಣ್ಯ ಕ್ಷೇತ್ರಗಳಿಗೆ ಲಕ್ಷ್ಮೀ ಮತ್ತು ನರಸಿಂಹನನ್ನು ಕರೆದೋಯ್ಯುತ್ತಾನೆ ತಿರುಪತಿಗೆ ಬಂದಾಗ ಅಲ್ಲಿ ಭಿಕ್ಷುಕರನ್ನು ಕಂಡ ಲಕ್ಷ್ಮೀ, ಭಕ್ತರು ದೇವರನ್ನು ಬೇಡಲು ಬಂದರೆ, ಈ ಭಿಕ್ಷುಕರು ಭಕ್ತರನ್ನೆ ಬೇಡುತ್ತಾರಲ್ಲ ಎಂದು ಚಿಂತಿಸುತ್ತಾಳೆ. ಶ್ರವಣಬೆಳಗೊಳದಲ್ಲಿ ತನ್ನ ತಂದೆ ಗಂಗಾನಂದಿಸ್ವಾಮಿಯಾಗಿ ದರ್ಶನ ನೀಡಿದಾಗ ಮಗಳೆಂದು ಒಪ್ಪಿಕೊಳ್ಳದ ತಂದೆಯನ್ನು ಜರೆಯುತ್ತಾಳೆ. ಗಂಗಾನಂದ ಸ್ವಾಮಿ ತನ್ನೂರಿಗೆ ಬಂದಾಗ, ಮಮತೆಯಿಂದ ಕಾತರಿಸಿ ಬಂದ ಮಗಳಿಗೆ ಸ್ವಾಮಿಗಳು ತಮ್ಮ ದೊಡ್ಡಸ್ತಿಕೆಯನ್ನು ಹೇಳಿದಾಗ, ನನಗೆ ನನ್ನಪ್ಪಬೇಕು, ನನ್ನಪ್ಪ ದೊಡ್ಡವನಾಗುವುದು ಬೇಡವೆನ್ನುತ್ತಾಳೆ. ನನ್ನಪ್ಪ ನಪುಂಸಕನಿಗೆ ಮದುವೆ ಮಾಡಿಕೊಟ್ಟು ಮಗಳನ್ನು ಕೊಂದು, ಸ್ವಾಮಿಯಾಗಿ ಅವನೂ ಸತ್ತ ಎಂದು ದಿಟ್ಟವಾಗಿ ಹೇಳುತ್ತಾಳೆ.

ಗಂಗಾನಂದಿ ಸ್ವಾಮಿಗಳು ಊರಲ್ಲಿ ರಾಮದೇವರ ರಥೋತ್ಸವ ನೆರವೇರಿಸಲು ಹೇಳಿ ಆಗ ತಾನು ನರಸಿಂಹನಿಗೆ ತಾಯತ ಕಟ್ಟಿ ಪುರುಷತ್ವ ಬರಿಸುವುದಾಗಿ ಹೇಳುತ್ತಾರೆ. ಊರಿನ ಶ್ರೀರಾಮದೇವರ ಉತ್ಸವಕ್ಕೆ ಊರು ಶೃಂಗಾರಗೊಳ್ಳತೊಡಗಿತ್ತು. ರಂಗಸ್ವಾಮಿಯ ಪ್ರತಿಭಟನೆ ಮುಂದುವರೆದಿದ್ದರೆ, ಲಕ್ಷ್ಮೀ ಸ್ವಾಮಿಯಾದ ತನ್ನ ತಂದೆಯ ವಿರುದ್ಧ ಪ್ರತಿಭಟನೆ ನಡೆಸಿದ್ದಳು. ಸೀನಪ್ಪನ ಮನದಲ್ಲಿ ನರಸಿಂಹನಿಗೆ ನಿಜವಾಗಿ ಗಂಡಸ್ಥನ ಬಂದರೆ, ಲಕ್ಷ್ಮಿ ತನಗೆ ದೊರೆಯಲಾರಳೆಂಬ ಅಳುಕು ಇತ್ತು. ‘ಊರು ಪೂರ್ತಿ ಶೃಂಗಾರವಾಗಿತ್ತು. ಮುರುಕು ಮನೆ, ಹರಿದ ಅಂಗಿ, ಹಸಿದ ಹೊಟ್ಟೆಗಳನ್ನು ಒಳಗಿಟ್ಟುಕೊಂಡು ಹೊರಗೆ ಕಂಬ, ಹಸಿರುಗರಿ, ತೋರಣಗಳ ತೋರಿಕೆಯಲ್ಲಿ ತೊನ್ನು ಹಿಡಿದ ಬದುಕಿಗೆ ಬೆರಗಿನ ಬಣ್ಣ ಬಳಿದಿತ್ತು. ಇಂಥ ಸಮಯದಲ್ಲಿ ರಂಗಸ್ವಾಮಿ ಪ್ರತಿಭಟಿಸುತ್ತ ಜನರನ್ನು ಸಂಘಟಿಸತೊಡಗಿದ್ದ ಶೀನಪ್ಪ ಜನರನ್ನೆಲ್ಲ ತನ್ನೆಡೆಗೆ ಕರೆದುಕೊಂಡು ಊರಿನ ಉತ್ಸವದಲ್ಲಿ ಓಡಾಡುತ್ತಿದ್ದ. ಉತ್ಸವದಲ್ಲಿ ಸ್ವಾಮಿಗಳು ನರಸಿಂಹನಿಗೆ ತಾಯತ ಕಟ್ಟಿದರು. ಜನರು ಆವೇಶದಿಂದ ಕುಣಿಯುತ್ತಿರುವುದನ್ನು ನೋಡುತ್ತ ನಿಂತಿದ್ದ ನರಸಿಂಹ ಆವೇಶಭರಿತನಾಗಿ ತಾನೂ ಹೆಜ್ಜೆ ಹಾಕ ತೊಡಗುತ್ತಾನೆ. ಹೀಗೆ ನರಸಿಂಹ ಕುಣಿಯುತ್ತಿರುವುದನ್ನು ನೋಡಿದ ಜನ ನರಸಿಂಹನಿಗೆ ಗಂಡಸುತನ ಬಂದಿದೆ ಎಂದು ಮಾತಾಡುತ್ತಿರುವಾಗಲೇ ಮೂರು ದಿನಗಳಿಂದ ಉಪವಾಸವಿದ್ದ ನರಸಿಂಹ ಕೆಳಗೆ ಕುಸಿದು ಬಿದ್ದು ಸಾವನ್ನಪ್ಪುತ್ತಾನೆ. ಅಷ್ಟರಲ್ಲೆ ಗಂಗಾನಂದಿಸ್ವಾಮಿಗಳು ಪಲಾಯನ ಮಾಡಿರುತ್ತಾರೆ. ನರಸಿಂಹ ಸತ್ತಾಗ ಲಕ್ಷ್ಮೀಯ ಆವೇಶ– ಆಕ್ರೋಶವೆಲ್ಲ ಕೂಡಿ ಅವಳಲ್ಲಿ ಬಗ್ಗೆಂದು ಬೆಂಕಿ ಹತ್ತಿ, ಕಣ್ಣುಗಳು ಕೆಂಡದುಂಡೆಗಳನ್ನು ಕಾರುತ್ತವೆ. ತಾಳಿಯನ್ನು ಕಿತ್ತು ರಾಮದೇವರ ಮೇಲೆ ಎಸೆಯುತ್ತಾಳೆ. ಅದು ರಾಮದೇವ ಕಿರೀಟದ ಮೇಲೆ ಬಿದ್ದು ಜೋತಾಡುತ್ತದೆ.

ಮದುವೆಯಾದ ಗಂಡನಿಂದ ದೈಹಿಕ ಸುಖವನೇ ಕಾಣದ ಹೆಣ್ಣೊಬ್ಬಳು ವಿರಹದ ಬೆಂಕಿಯಲ್ಲಿ ಬೆಂದು ಮೂಢನಂಬಿಕೆಯ ಆಶ್ರಯಕ್ಕೆ ಬಿದ್ದು ಗಂಡನನ್ನು ಕಳೆದುಕೊಂಡು ಬೆಂಕಿಯ ಮೇಲೆ ಬದುಕನ್ನು ಸಾಗಿಸಿದ ಹೆಣ್ಣೋಬ್ಬಳ ದುರಂತದ ಕಥೆಯೇ ಬೆಂಕಿ ಕಾದಂಬರಿ ಬೆಂಕಿ ಇಲ್ಲಿ ಎರಡು ಪ್ರತಿಮಾ ವಿಶ್ಲೇಷಣೆಯನ್ನೊಳಗೊಂಡಿದೆ. ಲಕ್ಷ್ಮೀಯ ಬದುಕೆ ಬಿಂಕಿಯಲ್ಲಿ ಸಾಗಿದ ಪಯಣ ಒಂದಾದರೆ, ದೈಹಿಕ ಸುಖ ಹಿಂಗದ ವಿರಹದ ಬೆಂಕಿಯಾಗಿ ಕಾಡಿಸಿದುದು ಮತ್ತೊಂದು.

ಪತಿಯೇ ಪರದೈವ ಎನ್ನುವ ಜಿಡ್ಡುಗಟ್ಟಿದ ಹಿಂದೂ ಸಂಪ್ರದಾಯದಲ್ಲಿ ಪುರುಷತ್ವ ಇಲ್ಲದ ಗಂಡನೊಟ್ಟಿಗೆ ಬದುಕು ಸಾಗಿಸುವ ಹೆಣ್ಣಿನ ಶೋಷಣೆಯ ಎಳೆಗಳನ್ನು ಈ ಕಾದಂಬರಿ ತೋರಿಸುತ್ತದೆ. ಆದ್ರೆ ಆಳೋನಿಗೆ ಹತ್ತು ಜನ ಹೆಂಡ್ರು ಇದು ಧರ್ಮಕ್ಕೆ ವಿರೋಧ ಅಲ್ಲ ಹೆಣ್ಣು ಮತ್ತೋಬ್ಬನನ್ನು ನೋಡಿದರೆ ಸಾಕು ಅವಳು ಮಾನಗೆಟ್ಟವಳು, ಕುಲಗೆಟ್ಟೋಳು ಅವಳ ಬದುಕು ಅಲ್ಲಿಂದ ಯಾತನಾಮಯ.

ತನ್ನ ಸಹಪಾಠಿ, ಪ್ರೀತಿಯ ವ್ಯಕ್ತಿ ರಂಗಸ್ವಾಮಿಯನ್ನು ಕೂಡುವಂತಿಲ್ಲ ಸೀನಣ್ಣನ ದುಷ್ಟ ಕಣ್ಣಿನಿಂದ ತಪ್ಪಿಸಿಕೊಳ್ಳುವಂತಿಲ್ಲ– ದ್ವಂದ್ವದಲ್ಲಿ ಸಿಲುಕುತ್ತಾಳೆ. ಸಂಪ್ರದಾಯದ ಗೆರೆ ದಾಟಲು ಮುಂದಾಗುತ್ತಾಳೆ. ಗೊಂದಲಗಳ ಸುಳಿಗೆ ಸಿಕ್ಕು ಹಿರಿದೆಗೆಯುತ್ತಾಳೆ. ಕೊನೆಗೆ ಅಪ್ಪನೆ ಸ್ವಾಮಿಯಾಗಿ ಬಂದು ಗಂಡ ನರಸಿಂಹನಿಗೆ ಪುರುಷತ್ವ ಕೊಡುವುದಕ್ಕೆ ರಥೋತ್ಸವ ನಡೆಸುತ್ತಾನೆ. ಉಪವಾಸವಿದ್ದ ನರಸಿಂಹ ಅಲ್ಲೆ ಕುಸಿದು ಪ್ರಾಣ ಬಿಡುತ್ತಾನೆ. ತಲ್ಲಣಿಸಿದ ಲಕ್ಷ್ಮೀ ಕೊರಳಲ್ಲಿದ್ದ ತಾಳಿಯನ್ನು ಕಿತ್ತು ದೇವರ ಕಿರೀಟಕ್ಕೆ ಎಸೆದು ಮನೆಗೆ ಹೋಗಿ ಬಾಗಿಲು ಹಾಕಿಕೊಂಡಾಗ ಆಕೆ ಆತ್ಮಹತ್ಯೆ ಮಾಡಿಕೊಂಡಾಳೆಂದು ಸೀನಪ್ಪ ಬಂದು ಬಾಗಿಲು ಬಡಿದು ಕೇಳಿದಾಗ –

ನಾನು ಹುಟ್ಟಿರಾದು ಸಾಯಾಕಲ್ಲ ಎಂದು ಬಾಗಿಲು ಮುಚ್ಚುತ್ತಾಳೆ ಇಲ್ಲಿ ಒಂದು ಹೆಣ್ಣು ಹಿಂದೂ ಸಂಪ್ರದಾಯದಲ್ಲಿ ಮನೆಯಲ್ಲೇ ಬಂಧಿಯಾಗಿ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಹಿಂಸೆಪಡುವ ಚಿತ್ರಣವಿದೆ. ಜನ್ನನ ಯಶೋಧರ ಚರಿತೆಯನ್ನು ನೆನಪಿಸುವ ಈ ಕಾದಂಬರಿ ಅಮೃತಮತಿಯಂತೆ ಸಂಪ್ರದಾಯದ ಗೆರೆಯನ್ನು ಲಕ್ಷ್ಮೀ ದಾಟಲೆ ಇಲ್ಲ. ಅಂದರೆ ಹಿಂದೂ ಧರ್ಮದ ಹಿಡಿತದಲ್ಲಿ ಮಹಿಳೆ ಜರ್ಜಿತವಾಗಿ ನಲುಗಿರುವುದನ್ನು ಬರಗೂರರು ಬೆಂಕಿ ಯಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಇದು ಲಕ್ಷ್ಮೀಯೊಬ್ಬಳ ವ್ಯಥೆಯಲ್ಲ ಅಂತ ಸಾವಿರಾರು ಹೆಣ್ಣುಮಕ್ಕಳ ಕಥೆ.

ಬರಗೂರರ ಈ ಕಾದಂಬರಿಯ ಪ್ರಮುಖ ಪಾತ್ರದಾರಿಯಾದ ಲಕ್ಷ್ಮೀಯು ಜೀವನಪೂರ್ತಿ ಕಣ್ಣಿರೇ ಆಗಿರುವುದನ್ನು ಕಾಣುತ್ತೇವೆ. ಸಂಪ್ರದಾಯಕ್ಕೆ ಪಟ್ಟುಬಿದ್ದು ತಾನು ಪ್ರೀತಿಸಿದ ಹುಡುಗನನ್ನು ಬಿಟ್ಟು ತಂದೆಯ ಆದೇಶದಂತೆ ಅತ್ತೆಯ ಮಗನನ್ನು ವಿವಾಹವಾಗುತ್ತಾಳೆ. ಅವನು ನಪುಂಸಕನೆಂದು ತಿಳಿದು ಜೀವನವೆಲ್ಲ ವಿರಹದಲ್ಲಿ ನರಳುವಂತಾಗುತ್ತದೆ. ಅವಳನ್ನು ಒಲಿಸಿಕೊಳ್ಳಲು ತಂದೆಯ ವಯಸ್ಸಿನ ಸೀನಪ್ಪ ನಿನ್ನ ಗಂಡನನ್ನು ತೀರ್ಥಯಾತ್ರೆಗೆ ಕರೆದುಕೊಂಡು ಹೋದರೆ ಅವನಿಗೆ ಪುರಷತ್ವ ಬರುತ್ತದೆ ಎಂದು ನಂಬಿಸಿ ಕರೆದುಕೊಂಡು ಹೋಗುತ್ತಾನೆ.

ಪುಣ್ಯಕ್ಷೇತ್ರಕ್ಕೆ ಬಂದಾಗ ಅದರ ವೈಭವದ ಜೊತೆಗೆ ಅವಳಿಗೆ ಮನಸ್ಸಿಗೆ ಘಾಸಿಯಾಗುವ ದೃಶ್ಯವನ್ನು ನೋಡುತ್ತಾಳೆ. ಜನರು ದೇವರ ಬಳಿ ಭಿಕ್ಷೆಯನ್ನು ಬೇಡಲು ಹೊರಟಿದ್ದರೆ, ಇವರ್ ಬಳಿ ಭಿಕ್ಷೆ ಬೇಡುವವರು ನಿರ್ಗತಿಕರು, ಅಸಹಾಯಕರು, ಬಡವರು ಹೀಗೆ ಒಂದಿಲ್ಲ ಒಂದು ರೀತಿಯಲ್ಲಿ ಭಿಕ್ಷುಕರೇ ಎಂಬುದನ್ನು ಮನಗಂಡರೂ ಲಕ್ಷ್ಮೀ ಇವುಗಳೆಲ್ಲವನ್ನು ನೋಡಿ ಮನಸ್ಸಿಗೆ ನೋವಾಗುತ್ತದೆ. ಕಾರಣ ಹರಕು ಮುರುಕು ಬಟ್ಟೆ ಹಾಕಿಕೊಂಡು ಭಿಕ್ಷೆ ಬೇಡುತ್ತಿದ್ದವರು ಒಂದು ಹೊತ್ತಿನ ಊಟಕ್ಕೂ ಪರದಾಡುವ ರೀತಿಯನ್ನು ತನ್ನ ಹಿಂದಿನ ಜೀವನವನ್ನು ನೆನೆಪಿಸಿಕೊಂಡು ದುಃಖ ಉಮ್ಮಳಸಿ ಬರುತ್ತದೆ.

ಪುಣ್ಯಕ್ಷೇತ್ರಕ್ಕೆಂದು ಹೋದಂತಹ ಲಕ್ಷ್ಮೀಯು ತನ್ನ ತಂದೆಯನ್ನು ಸ್ವಾಮಿಯ ವೇಷದಲ್ಲಿ ನೋಡಿದ ತಕ್ಷಣ ಅವಳು ಅವನನ್ನು ತಿರಸ್ಕರಿಸುತ್ತಾಳೆ. ಏಕೆಂದರೆ ಅವಳು ಹೇಳುವ ಹಾಗೆ ನನಗೆ ನನ್ನ ತಂದೆ ಬೇಕು ಈ ಸ್ವಾಮಿ ಬೇಡ ಎಂಬ ವಿಚಾರ, ನನ್ನಪ್ಪ ನಂಗೆ ಬೇಕು ಎಂಬುದನ್ನು ಹೇಳುತ್ತಾಳೆ. ಈ ಮೂಲಕ ಸಂಬಂಧದ ಮಾನವೀಯ ಮೌಲ್ಯವನ್ನು ತಿಳಿಸುತ್ತಾಳೆ. ತಂದೆ ಗಂಗಪ್ಪನು ಗಂಗಾನಂದಸ್ವಾಮಿಯಾಗಿರುವುದನ್ನು ಒಪ್ಪದ ಅವಳಿಗೆ ಮಗಳಾಗಿ ಕಾಟ ಕೊಡಬೇಡ ಭಕ್ತೆಯಾಗಿ ಆಶಿರ್ವಾದವನ್ನು ತೆಗೆದುಕೋ ಎಂದು ಹೇಳುತ್ತಾನೆ. ಆಗ ಲಕ್ಷ್ಮೀಯು ಆಕ್ರೋಶದಿಂದ ನನ್ನಪ್ಪ ನನ್ನ ಪಾಲಿಗೆ ಸತ್ತ ಎಂದು ಹೇಳುತ್ತಾಳೆ. ಗಂಡಸ್ತನ ಇಲ್ಲದವನನ್ನು ಮಗಳಿಗೆ ಮದುವೆ ಮಾಡಿ ನೀನು ಸ್ವಾಮಿಯಾದರೆ ನಿನ್ನನ್ನು ನಾ ಈ ವೇಷದಲ್ಲಿ ಒಪ್ಪಲಾರೆ ಎಂದು ಅತ್ಯಂತ ಗಟ್ಟಿಯಾಗಿ ತಿರಸ್ಕರಿಸಿ ಪ್ರತಿಭಟಿಸುವ ಸನ್ನಿವೇಶವನ್ನು ಬರಗೂರರು ಈ ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ.

ಸ್ವಾಮಿಗಳು ನರಸಿಂಹನಿಗೆ ಪುರುಷತ್ವವನ್ನು ಬರಿಸಲು ಈ ಊರಿನ ರಾಮದೇವರ ರಥೋತ್ಸವ ಜರುಗಿಸಲು ಹೇಳುತ್ತಾರೆ. ಅದೇ ಪ್ರಕಾರ ನಪುಂಪಸ ನರಸಿಂಹ ತಾಯತವನ್ನು ಕಟ್ಟಿಸಿಕೊಂಡು ಸಾವನ್ನಪ್ಪುತ್ತಾನೆ. ಆಗ ಲಕ್ಷ್ಮೀ ತನ್ನ ಕೊರಳಲ್ಲಿ ಇದ್ದ ತಾಳಿಯನ್ನು ಕಿತ್ತೆಸೆಯುತ್ತಾಳೆ. ಆ ತಾಳಿ ರಾಮದೇವರ ಕಿರೀಟದ ಮೇಲೆ ನೇತಾಡುತ್ತಿರುತ್ತದೆ. ಇದೇ ನೋವಿನಲ್ಲಿ ಮನೆಗೆ ಬಂದು ಬಾಗಿಲನ್ನು ಹಾಕಿಕೊಂಡಾಗ ಸೀನಪ್ಪ ಇದರಲ್ಲೇ ಅವಳು ಏನಾದರೂ ಜೀವಹಾನಿ ಮಾಡಿಕೊಂಡಾಳು ಎಂಬ ಭಯದಿಂದ ಮನೆಯ ಬಾಗಿಲನ್ನು ಬಡಿಯುತ್ತಾನೆ. ಲಕ್ಷ್ಮೀಯು ಬಾಗಿಲನ್ನು ತೆರೆದು ನಾನು ಹುಟ್ಟಿರೋದು ಸಾಯಕ್ಕಲ್ಲ ಎಂಬ ಮಾತಿನೊಂದಿಗೆ ಬಾಗಿಲನ್ನು ಮತ್ತೆ ಹಾಕಿಕೊಳ್ಳುತ್ತ ಬಾಗಿಲ ಕಡೆ ದಿಟ್ಟಿಸುತ್ತ ಈ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾಳೆ. ಇಲ್ಲಿ ಸಂಪ್ರದಾಯಕ್ಕೆ ಪಟ್ಟುಬಿದ್ದು ತಾನು ಪ್ರೀತಿಸಿದ ವ್ಯಕ್ತಿಯನ್ನು ತೊರೆದು ತಂದೆಯ ಅಣತಿಯಂತೆ ನಪುಂಪಸಕನನ್ನು ಮದುವೆ ಆಗಿ ವೇದನೆಯಲ್ಲಿ ಸುಟ್ಟು ಹೋಗುತ್ತಾಳೆ.

ಮದುವೆಯಾದ ಗಂಡನಿಂದ ದೈಹಿಕ ಸುಖವನ್ನು ಪಡದ ಲಕ್ಷ್ಮೀಯು ವಿರಹದ ಬೆಂಕಿಯಲ್ಲಿ ಬಿದ್ದು ಬೇಯುವುದನ್ನು ಬರಗೂರರರು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಸೀನಪ್ಪ ಹೇಳಿದ ಮಾತನ್ನು ನಂಬಿ ಮೂಡನಂಬಿಕೆಗೆ ಮಾರುಹೋಗಿ ಇದ್ದಂತಹ ಗಂಡನನ್ನು ಕಳೆದುಕೊಂಡು ಬೆಂಕಿಯ ಮೇಲೆ ಬದುಕನ್ನು ನಡೆಸಿದ ಹೆಣ್ಣು ಲಕ್ಷ್ಮೀ. ಪತಿಯೇ ಪರದೈವ ಎಂಬ ಜಿಡ್ಡುಗಟ್ಟಿದ ಸಂಪ್ರದಾಯದ ವ್ಯವಸ್ಥೆಯಲ್ಲಿ ನಪುಂಪಸಕನ ಜೊತೆ ಜೀವನ ಸಾಗಿಸುವುದು ಹೆಣ್ಣಿನ ಶೋಷಣೆಯ ಒಂದು ಪ್ರತೀಕವಾಗಿ ಲಕ್ಷ್ಮೀ ಈ ಕಾದಂಬರಿಯಲ್ಲಿ ಬಿಂಬಿತವಾಗಿದ್ದಾಳೆ.

ಒಟ್ಟಾರೆಂಯಾಗಿ ಹೇಳಬೇಕಾದರೆ ದಲಿತ ಬಂಡಾಯ ಕಾದಂಬರಿಕಾರರಾದ ಬರಗೂರರು , ತಮ್ಮ ಕಾದಂಬರಿಯಲ್ಲಿ ಸಾಮಾಜಿಕ ನೆಲೆಯ ಕಥಾವಸ್ತುವನ್ನು ಆಯ್ಕೆ ಮಾಡಿಕೊಂಡು, ಮಹಿಳೆಯರ ನೋವಿನ ನೆಲೆ, ಕೆಳವರ್ಗದವರ ಜನರ ಜೀವನ ಪದ್ಧತಿ, ಸಂಪ್ರದಾಯ, ಆಚಾರ–ವಿಚಾರ ಅವರ ನೋವುಗಳನ್ನು ಸಾಮಾಜಿಕವಾಗಿ ನ್ಯಾಯ ಒದಗಿಸುವ ಪ್ರಯತ್ನವನ್ನು ಕಾದಂಬರಿಕಾರರು ತಮ್ಮ ಕಾದಂಬರಿಯಲ್ಲಿ ಮಾಡಿದ್ದಾರೆ ಎಂದು ಹೇಳಬಹುದು. ಬರಗೂರರ ಕಾದಂಬರಿ ಬೆಂಕಿಯಲ್ಲಿ ಲಕ್ಷ್ಮಿ ಎಂಬ ಹೆಣ್ಣುಮಗಳು ವೇದನೆಯಿಂದ ಬೆಂದು, ಪಿತೃಪ್ರಧಾನವಾದ ಸಮಾಜದಲ್ಲಿ ಜಿಡ್ಡುಗಟ್ಟಿದ ಸಂಪ್ರದಾಯಕ್ಕೆ ಸಮಾಜದ ಪ್ರತಿಯೊಂದು ಹೆಣ್ಣು ನರಳುವುದು, ಮತ್ತು ಒಂಟಿಹೆಣ್ಣನ್ನು ಗಂಡಸರು ತಮ್ಮ ಕಾಮದ ತೃಷೆಗಾಗಿ ಉಪಯೋಗಿಸಿಕೊಳ್ಳುವುದು ಇಂತಹ ಹೆಣ್ಣುಮಕ್ಕಳ ಅಸಹಾಯಕತೆಯವೇ ಪುರುಷರ ಬಂಡವಾಳವಾಗಿರುತ್ತದೆ.ಇಂತಹ ಹಲವಾರು ಅಂಶಗಳನ್ನು ಒಳಗೊಂಡು ಮತ್ತು ಅದನ್ನು ಪ್ರತಿಭಟಿಸುವ ಸನ್ನಿವೇಶಗಳು ಬರಗೂರರ ಬರವಣಿಗೆಗಳಲ್ಲಿ ಕಂಡುಬರುತ್ತವೆ.

## ಪರಾಮರ್ಶನ ಗ್ರಂಥಗಳು


- **ಕೊರಟ ಶ್ರೀನಿವಾಸರಾವ (1974)** : ಕನ್ನಡ ಕಾದಂಬರಿ ಇತಿಹಾಸ, ಚಿನ್ನದಗರಿ
- **ಡಾ. ಪುರುಷೋತ್ತಮ ಬಿಳಿಮಲೆ (2005)** : ಬಂಡಾಯ ದಲಿತ ಸಾಹಿತ್ಯ, ಬೆಂಗಳೂರು ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ.
- **ಬರಗೂರು ರಾಮಚಂದ್ರಪ್ಪ (2007)** : ಕನ್ನಡ ಸಾಹಿತ್ಯವೆಂಬ ಸ್ವಾತಂತ್ರ್ಯ ಹೋರಾಟ, ಬೆಂಗಳೂರು ಅಂಕಿತ ಪುಸ್ತಕ.
- **ಶಿವಾನಂದ ಕೆಳಗಿನಮನಿ (2011)** : ಬಂಡಾಯ ಸಾಹಿತ್ಯ, ಮೈಸೂರು ಚೇತನ್ ಬುಕ್ ಹೌಸ್.
- **ಬರಗೂರು ರಾಮಚಂದ್ರಪ್ಪ** : ಅವರ ಕಥೆ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ, ಯತಗೊಳ್ ಶಿವಾಜಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ.
- **ಡಾ. ಎ.ಎಚ್. ಚಂದ್ರಶೇಖರ್** : ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳ ಒಂದು ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
- **ಸಂ. ಸರಜೂ ಕಾಟ್ಕರ್ (2012)** : ನವದೆಹಲಿ ಕನ್ನಡ ಬಂಡಾಯ ಸಾಹಿತ್ಯ ಅಕಾಡೆಮಿ.
- **ಬರಗೂರ ರಾಮಚಂದ್ರಪ್ಪ** : ಬೆಂಕಿ.


■■

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

# ವಿ.ಎಸ್. ಕಾಂತನವರ ಕಾವ್ಯದಲ್ಲಿ ಛಂದಸ್ಸು

✍ **ಕು. ಸಿದ್ದಮ್ಮ ಅಂಬಿಗೇರ,** ಸಂಶೋಧನ ವಿದ್ಯಾರ್ಥಿನಿ, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
✍ **ಡಾ. ಬಿ.ಎಸ್. ಭಜಂತ್ರಿ,** ಸಂಶೋಧನ ಮಾರ್ಗದರ್ಶಕರು, ಡಾ. ಆರ್.ಸಿ. ಹಿರೇಮಠ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ನಾದವು ಜಗದ ಮೂಲ ನಾದವಿಲ್ಲದಿದ್ದರೆ ವಿಶ್ವವೇ ಜಡವಾಗುತ್ತಿತ್ತು. ನಾದದ ಸಂಪರ್ಕದಿಂದ ನಮ್ಮ ಜೀವ ಜಗತ್ತು ಜೀವಂತವಾಗಿದೆ. ಆ ಅನುಭವವನ್ನು ನಾವಾಡುವ ಉಸಿರಿನಲ್ಲಿ, ಪ್ರಕೃತಿಯಲ್ಲಿ ಗಾಳಿ ತೀಡುವಲ್ಲಿ ಬಳ್ಳಿ ಚಿಗಿಯುವಲ್ಲಿ, ಹೀಗೆ ಪ್ರಪಂಚದ ಅಂತರಂಗ, ಬಹಿರಂಗ, ಪ್ರಪಂಚದಲ್ಲಿಯೂ ನಾದದ ಅಸ್ತಿತ್ವವಿದೆ. ಕಾವ್ಯವೂ ಈ ಮಾತಿಗೆ ಹೊರತಾಗಿಲ್ಲ. ಭಾವ, ನಾದ ಮತ್ತು ಭಾಷೆಗಳ ಸಾಮರಸ್ಯವನ್ನು ಹೊಂದಿದ ಕಾವ್ಯದಲ್ಲಿ ಅತಿಸೂಕ್ಷ್ಮವಾಗಿ ಭಾವವು, ಸೂಲವಾಗಿ ಭಾಷೆಯೂ ಇದ್ದು, ಭಾವ ಭಾಷೆಯ ಮಧ್ಯವರ್ತಿಯಾಗಿ ನಾದವನ್ನು ಕಾಣಬಹುದು. “ಕಾವ್ಯಕ್ಕೆ ಒಂದು ವಾತಾವರಣ ಆಚ್ಛಾದನವಿದ್ದಂತೆ ಛಂದಸ್ಸು”[1] ಎಂಬುದನ್ನು ತತ್ವಜ್ಞಾನಿ ಹೆಗಲ್ ಹೇಳುತ್ತಾರೆ. ಛದ್ ಮತ್ತು ಛಂದ ಎಂಬೆರೆಡು ಧಾತುಗಳಿಂದ ಛಂದಸ್ಸು ಉತ್ಪತ್ತಿಯಾಗಿದೆ. ಆಚ್ಛಾದಿಸು, ಹೊದಿಸು ಎಂಬರ್ಥವನ್ನು ನೀಡುತ್ತದೆ. ಕಾವ್ಯದ ಸಹಜ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಛಂದಸ್ಸಿನ ಪಾತ್ರ ಹಿರಿದಾಗಿದೆ. ಪ್ರತಿಭೆ ಮೂಲಕ ಅರಳುವುದು ಛಂದಸ್ಸು ಈ ಛಂದಸ್ಸನ್ನು ಸಂಗೀತ, ಕಲೆ ಛಾಯೆಯನ್ನು ಹೊಂದಿರುವದರಿಂದ ಸೌಂದರ್ಯ ದೃಷ್ಟಿ, ಮಾತ್ರೆ, ಗಣ, ಯತಿ, ಪ್ರಾಸ ಲೆಕ್ಕಾಚಾರಗಳಿಂದ ಶಾಸ್ತ್ರವಾಗಿ ಪ್ರಯೋಜನ ದೃಷ್ಟಿ ಹೀಗೆ ಸೌಂದರ್ಯ, ಪ್ರಯೋಜನ ದೃಷ್ಟಿಯಿಂದ ಛಂದಸ್ಸಿನ ಮಹತ್ವವನ್ನು ತಿಳಿಯಬಹುದು.

ಛಂದಸ್ಸು ಕವಿಗೆ ಸರಸ್ವತಿ ಕೊಡುವ ವರ ಪ್ರತಿಭೆಯ ಜಾಣ್ಮೆಯ ಫಲವಾದ ಇಂತಹ ಛಂದಸ್ಸಿನ ಜ್ಞಾನವನ್ನು ಪಡೆದ ವಿ.ಎಸ್.ಕಾಂತನವರು ಛಂದಸ್ಸನ್ನೇ ತಮ್ಮ ಅಭಿವ್ಯಕ್ತಿ ಸಾಧನವಾಗಿಸಿ ಕಾವ್ಯ ರಚಿಸಿದ್ದಾರೆ. ಷಡಾಂಗಗಳಲ್ಲಿ ಒಂದಾದ ಛಂದಶಾಸ್ತ್ರದ ಬಗೆಗೆ ಪ್ರಾಚೀನಕಾಲದಿಂದಲೂ ಅಧ್ಯಯನಗಳು ನಡೆದಿದೆ. ಶ್ರೀವಿಜಯ, ಕೇಶಿರಾಜ, 1 ನೇ ನಾಗವರ್ಮ, 2 ನೇ ನಾಗವರ್ಮ, ಜಯಕೀರ್ತಿ, ಈಶ್ವರಕವಿ ಮೊದಲಾದ ವೈಯಾಕರಣಿಗಳು ಅವರ ಹಳೆಗನ್ನಡ ಸಂದರ್ಭದಲ್ಲಿ ಚಂಪೂ, ಕಂದ ನಡುಗನ್ನಡ ಕಾಲಾವಧಿಯಲ್ಲಿ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಹೀಗೆ ಹೊಸ ಭಾಷೆಯನ್ನು ಹೊಸ ಭಾವಕ್ಕೆ ತಕ್ಕಂತೆ ಛಂದಸ್ಸು ಆಯಾ ಸಂದರ್ಭದಲ್ಲಿ ನಿರ್ಮಾಣವಾಯಿತು. ಮಹಾಕವಿಗಳು ಹೊಸ ಛಂದೋರೂಪಗಳಿಗೆ ಆದ್ಯರಾದರು ರಗಳೆ ಹರಿಹರ, ಷಟ್ಪದಿಯಲ್ಲಿ ರಾಘವಾಂಕ, ಲಕ್ಷ್ಮೀಶ, ಕುಮಾರವ್ಯಾಸ, ಸಾಂಗತ್ಯ, ರತ್ನಾಕರ, ತ್ರಿಪದಿಯಲ್ಲಿ ಸರ್ವಜ್ಞ, ಇವರನ್ನು ಮೀರಿಸುವುದು ಕಷ್ಟ ಸಾಧ್ಯವಾದ ಸಾಫಲ್ಯತೆಯನ್ನು ಕವಿವರ್ಯರು ಸಾಧಿಸಿದ್ದಾರೆ.

ಆಧುನಿಕ ಕನ್ನಡ ಕಾವ್ಯ ಸಂದರ್ಭದಲ್ಲಿ ಪ್ರಾಚೀನ ಛಂದಸ್ಸು, ಪಾಶ್ಚಾತ್ಯ ಛಂದಸ್ಸು, ಸಾರವನ್ನು ಹೀರಿದ ಹೊಸದಾದ ಪ್ರಯೋಗಗಳು ಛಂದಸ್ಸಿನಲ್ಲಿ ನಡೆದವು ಕೆಲವರು ಹೊಸದನ್ನು ಕಟ್ಟಿದರು, ಕೆಲವರು ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಮಾಡಿದರು.ಮತ್ತೆ ಕೆಲವರು ಸಾಂದರ್ಭಿಕವಾಗಿ ಹೊಸರೂಪಗಳಿಗೆ ಬದಲಾವಣೆ ಮಾಡಿದರು. ಆಧುನಿಕರಲ್ಲಿ ಟಿ.ವಿ.ವೆಂಕಟಾಚಲಶಾಸ್ತ್ರೀ, ಡಿ.ಎಸ್.ಕರ್ಕಿ, ಬಿ.ಎಂ.ಶ್ರೀಕಂಠಯ್ಯ, ವಿ.ಕೃ.ಗೋಕಾಕ, ಗೋವಿಂದ ಪೈ, ಮೊದಲಾದವರು ಹೊಸ ಹೊಸ ರೀತಿಯ ಪ್ರಯೋಗಗಳನ್ನು ಬಳಸಿ ಛಂದಸ್ಸಿನ ವೈವಿಧ್ಯದ ಸಮೃದ್ಧಿಗೆ ತಮ್ಮದೇ ಆದ ಕಾಣಿಕೆಯನ್ನು ನೀಡಿದ್ದಾನೆ. ಅಂತಹವರಲ್ಲಿ

ವಿ.ಎಸ್. ಕಾಂತನವರು ಕೊಡುಗೆಯನ್ನು ಗಮನಿಸಬಹುದು ಅವರ ಕಾವ್ಯ ಸಾಹಿತ್ಯವೆಲ್ಲವೂ ಛಂದೋಬದ್ಧವಾಗಿವೆ. ಛಂದಸ್ಸನ್ನೇ ಕಾವ್ಯದ ಮುಖ್ಯ ಸಾಧನವಾಗಿಸಿಕೊಂಡು ಗೇಯ, ಲಯಕ್ಕೆ ಒಗ್ಗಿಸಿ ಸರಳವಾಗಿ, ಸುಂದರವಾಗಿ ಕಾವ್ಯ ಸೃಜಿಸಿದ್ದಾರೆ ಅಬ್ಬರ ಆಡಂಬರಗಳಿಲ್ಲದ ತಣ್ಣನೆಯ ನಿರ್ಝರಿಯಂತೆ ಹಿತಮಿತವಾದ ಉಪಮೆ, ರೂಪಕ, ಸ್ವಭಾವೋಕ್ತಿಗಳಿಂದ ಕೂಡಿದ ಕಾವ್ಯ ಕೌಶಲ ಅವರದಾಗಿದೆ. ತ್ರಿ ಭಾಷಾ ಪಂಡಿತರಾಗಿದ್ದರಿಂದ ಅವರ ಕಾವ್ಯದಲ್ಲಿ ಸಂಸ್ಕೃತ ಪದಗಳು ಹಾಸುಹೊಕ್ಕಾಗಿ ಬರುತ್ತವೆ. ಛಂದಸ್ಸಿನ ವೈವಿಧ್ಯಗಳಾದ ವೃತ್ತ, ರಗಳೆ, ದ್ವಿಪದಿ, ಚೌಪದಿ, ಕಂದ ಮುಂತಾದ ಕಾವ್ಯ ಬಂಧಗಳನ್ನು ಭಾವಗಳನ್ನು, ಏರಿಳಿತಗಳಿಗೆ ತಕ್ಕಂತೆ ಗೇಯತೆ, ನಾದಮಾಧುರ್ಯವನ್ನು ಅವರ ಕಾವ್ಯದಲ್ಲಿ ಕಾಣಬಹುದಾಗಿದೆ. ಸಂಕ್ಷಿಪ್ತತೆ, ಸಂಕೀರ್ಣತೆ, ಭಾವೋತ್ಕಟತೆ, ಗೇಯತೆ ಭಾವಗೀತೆಯ ಆಧಾರ ಸ್ಥಂಬಗಳು. ಮತ್ತು ಕಾವ್ಯ ಸಣ್ಣದಿರಲಿ, ದೀರ್ಘವಿರಲಿ ಹೀಗೆ ಎಲ್ಲಾ ರೀತಿಯ ಕಾವ್ಯಗಳಲ್ಲೂ ಗೇಯತೆಯನ್ನು ಕಾಣುತ್ತೇವೆ ಈ ಗೇಯತೆಗೆ ಒಂದು ನಾದ, ಲಯ, ಗತ್ತು ಅವಶ್ಯಕ ಇದರಿಂದ ಕಾವ್ಯದಲ್ಲಿ ವೈವಿಧ್ಯತೆ ಕಾಣಲು ಸಾಧ್ಯ ಎಂದು ವಿ.ಎಸ್.ಕಾಂತನವರು ಹೇಳುತ್ತಾರೆ. “ಲಯವು ಛಂದಸ್ಸಿನ ಮುಖ್ಯ ಅಂಗ ಒಂದು ದೃಷ್ಟಿಯಿಂದ ಕಾವ್ಯ ಛಂದಸ್ಸುಗಳನ್ನು ಮೀರಿ ಲಯದ ವ್ಯಾಪ್ತಿ ವಿಶ್ವ ವ್ಯಾಪ್ತಿಗೆ ಹರಡುತ್ತದೆ. ಋತುಗಳು, ಹೊಳೆ ಹಳ್ಳಗಳು, ಲಯದಲ್ಲಿ ಚಲಿಸುತ್ತವೆ. ಹಗಲು ಇರುಳು ಲಯದಲ್ಲಿ ಉರುಳುತ್ತವೆ. ಕಲೆಗಳಲ್ಲಿ ತೋರಿಬರುವ ಸಾಂಗತ್ಯವು ಲಯ ನೃತ್ಯದ ಭಂಗಿಯಲ್ಲಿ ಸಂಗೀತದ ಸ್ವರ ಸಾಮರಸ್ಯದಲ್ಲಿ, ಶಿಲ್ಪಕಲೆಯ ಹಾಗೂ ಚಿತ್ರಕಲೆಯ ಸುಳುಹು ಹೊಳಹುಗಳ ಜೊತೆಯಲ್ಲಿ ಲಯವೇ ಓತಪ್ರೋತ.”[2] ಹೀಗೆ ಲಯದ ಸರ್ವವ್ಯಾಪಕತೆಯನ್ನು ಡಿ.ಎಸ್. ಕರ್ಕಿ ಸೂಚಿಸುತ್ತಾರೆ. ಆಧುನಿಕ ಛಂದಸ್ಸಿನಲ್ಲಿ ಉತ್ಸಾಹಲಯ, ಮಂದಾನಿಲಯ, ಲಲಿತಲಯ ಪ್ರಕಾರಗಳನ್ನು ಕಾಣತ್ತೇವೆ. ಕಾಂತನವರ ಕಾವ್ಯದಲ್ಲಿ ಉತ್ಸಾಹಲಯದ ಪ್ರಯೋಗವನ್ನು ಕಾಣಬಹುದು.

## ಉತ್ಸಾಹಲಯ

U U U   – U   U U U   – U
ಶರಣ । ರೆಂಬ । ಹಣತೆ । ಯಲ್ಲಿ

– U   – U   – U   U U U
ತತ್ವ । ವೆಂಬ । ಬತ್ತಿ । ಯಿರಿಸಿ

– U   U U U   – U   U U U
ಭಕ್ತಿ । ರಸದ । ತೈಲ । ವೆರೆಯೆ

– U   U U U   U U U   – U
ಮೋಕ್ಷ । ದೆಡೆಗೆ । ಕಿರಣ । ಸೂಸಿ[3]

– *ಕವನ : ಕಲ್ಯಾಣದೀಪ*

ಉತ್ಸಾಹಲಯವು 3 ಮಾತ್ರೆಗಳ 4 ಗಣವಿನ್ಯಾಸವನ್ನು ಹೊಂದಿರುತ್ತದೆ. ಉತ್ಸಾಹಲಯದ ಸಮಬಂಧ ಕಿರಿಚತುಷ್ಪದಿಗೆ ಈ ಮೇಲಿನ ಕಾವ್ಯವು ಉದಾಹರಣೆಯಾಗಿದೆ. ಪ್ರಾಚೀನ ವೈಯಾಕರಣಿಗಳಾದ ನಾಗವರ್ಮ ಉತ್ಸಾಹ, ಜಯಕೀರ್ತಿ ಉತ್ಸವ ಪದವನ್ನು ಈ ಲಯಕ್ಕೆ ಸೂಚಿದ್ದಾರೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಉತ್ಸಾಹ ಪೂರ್ಣವಾದ ಲಯಗತಿಗೆ ಅನುಸಾರವಾಗಿ ಉತ್ಸಾಹ ಎಂದು ಹೆಸರಿಸಿರುವುದು ಸಾರ್ಥಕವಾಗಿದೆ. ಎಂದು ಟಿ.ವಿ. ವೆಂಕಟಾಚಲ ಶಾಸ್ತ್ರೀಯವರ ಅಭಿಪ್ರಾಯ ವ್ಯಕ್ತಪಡಿಸುವರು. ನೃತ್ಯ ಲಯಕ್ಕೆ ಉತ್ಸಾಹದ ನಡಿಗೆ ಒಪ್ಪವಂತಹದ್ದಾಗಿದೆ ನಿಯತವಾಗಿ ಇಲ್ಲಿ ಅಂತ್ಯ ಪ್ರಾಸವನ್ನು ಕಾಣುತ್ತೇವೆ.

## ತಲಚೌಪದಿ

ಉತ್ಸಾಹಲಯದ ಎರಡು ಚರಣಗಳನ್ನು ನಾಲ್ಕು ಚರಣಗಳ ರೂಪದಲ್ಲಿಟ್ಟು ಒಂದೊಳ್ಳೆಯ ಬಂಧವನ್ನು ಆಧುನಿಕ ಕವಿಗಳು ರಚಿಸಿದ್ದಾರೆ. ವಿ.ಎಸ್. ಕಾಂತನವರ ಅನೇಕ ಕವಿತೆಗಳು ತಲಚೌಪದಿಯಲ್ಲಿವೆ. ಇಲ್ಲಿ ಒಂದನೆಯ ಮತ್ತು ಮೂರನೆಯ ಚರಣಗಳಲ್ಲಿ 3 ಮಾತ್ರೆಗಳ ನಾಲ್ಕು ಗಣಗಳಿವೆ ಕೊನೆಯಲ್ಲಿಯ ಒಂದು ಅಕ್ಷರವು ಗುರುವಾಗಿರುತ್ತದೆ ಅದು ಲಘುವಾಗಿದ್ದರೂ ಗುರು ಎಂದು ತಿಳಿಯಬೇಕು. ಕಾಂತನವರ ಈ ಬಗೆಯ ಪ್ರಯೋಗವನ್ನು ಅವರ ಕಾವ್ಯದಲ್ಲಿ ಕಾಣಬಹುದಾಗಿದೆ.

– U U – U U U U – U
ಪ್ರಕೃತಿ । ದೇವಿ । ಪುರುಷ । ದೇವ
U U U U U U U U U –
ಮಿಲನ । ಬುವಿಯ । ಬೆಳಸಿ । ಗೆ
U U U U U U U U U U U U
ಮಿಲನ । ಫಲವು । ಇರುವ । ಜನವು
U U U U U U U U U –
ಜಗದ । ನಗೆಯ । ಬೆಳಕಿ । ದೊ[4]

**– ಕವನ : ಮಿಲನ**

– U – U – U – U
ಎತ್ತ । ರೆತ್ತ । ರೆತ್ತ । ರಕ್ಕೆ
U U U – U – U –
ಕವಿಯ । ಭಾವ । ಹಾರಿ । ತು
– U – U – U – U
ಸುಪ್ತ । ವಾದ । ಚೇತ । ನಕ್ಕೆ
– U – U – U –
ಭಾಷೆ । ಬಂದು । ಸೇರಿ । ತು[5]

**– ಕವನ : ವಿಜಯದುಂಧುಭಿ**

ಹೀಗೆ ಈ ತಲಚೌಪದಿಯ ಛಂದೋಬಂಧಗಳನ್ನು ಸಿರಸಂಗಿ, ಪ್ರತೀಕ್ಷೆ ಕವನಗಳಲ್ಲೂ ಕಾಣಬಹುದಾಗಿದೆ. ಶಿರಸಂಗಿಯ ಸ್ಥಳದ ಐತಿಹ್ಯ, ಪೌರಾಣಿಕತೆ ಅಲ್ಲಿನ ತ್ಯಾಗವೀರ ಲಿಂಗರಾಜರ ಕೀರ್ತಿಯನ್ನು ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ. ಪ್ರತೀಕ್ಷೆ ಕವನ ಶೃಂಗಾರ ರಸ ಭಾವದಲ್ಲಿ ದೇವ ಮತ್ತು ಭಕ್ತನ ಸಂಬಂಧವನ್ನು ಇಲ್ಲಿ ವರ್ಣಿಸಲಾಗಿದೆ. ಮೂರು ಮಾತ್ರೆಯ ನಾಲ್ಕು ಗಣಗಳು ಒಂದು ಮತ್ತು

ಮೂರನೆಯ ಪಾದದಲ್ಲಿ ಮೂರು ಮಾತ್ರೆಯ ಮೂರು ಕೊನೆಯಲ್ಲಿ ಗುರುವನ್ನು ಎರಡನೆಯ ನಾಲ್ಕನೆಯ ಸಾಲಿನಲ್ಲಿ ಕಾಣಬಹುದಾಗಿದೆ ಆಧುನಿಕ ಛಂದಸ್ಸಿನ ತಲಚೌಪದಿಯ ಬಂಧದಲ್ಲಿ ರಚಿಸಿರುವುದು ಕವಿಯ ವಿಶೇಷತೆಯೆನಿಸಿದೆ.

## ಮಂದಾನಿಲ ಲಯ

ಮಂದಾನಿಲವು ಮುಖ್ಯವಾಗಿ ಚರಣದಲ್ಲಿ 4:4:4:4 ಗಣ ಯೋಜನೆಯುಳ್ಳ ಲಯವಾಗಿದೆ. 3,5,3,5 ಬಗೆಯ ಗಣಗಳು ಈ ಲಯದಲ್ಲಿ ಬಂದರೂ ಅದಕ್ಕೆ ಮಂದಾನಿಲ ಲಯವೆಂದೇ ಕರೆಯುತ್ತೇವೆ. ಭಾವದ ಆವೇಶ ಆವೇಗಗಳನ್ನು ಸಮರ್ಥವಾಗಿ ವ್ಯಕ್ತಮಾಡುವ ಲಯವೆನಿಸಿದೆ. ಕಾಂತನವರ 'ಭಾವನೆ' ಕವನದಲ್ಲಿ 4,4 ಬಗೆಯ ಮಂದಾನಿಲ ಲಯ ಕಂಡು ಬರುತ್ತದೆ. ಕವಿಗಳನ್ನು ಆಳುವಂತಹ ಭಾವನೆ ಆ ಭಾವನೆಗೆ ಪ್ರೇರಣೆಯ ಅಂಶಗಳನ್ನು ಕವಿತೆ ಅಭಿವ್ಯಕ್ತಿಸುತ್ತದೆ

– U U – U U – U U – –
ತಿಂಗಳ । ನಂಗಳ । ದಿಂದಲಿ । ನೀ ಬಾ
– U U – U U – U U – –
ಮಂಗಳ । ಸಾಗರ । ದಿಂದಲಿ । ನೀ ಬಾ
– U U U U U U – U U – –
ಹೆಂಗಳ । ಮುಖಅರ । ವಿಂದದಿ । ನೀ ಬಾ
– U U – – U U – – –
ಭೃಂಗದ । ಗುಂಜಾ । ರವದಿಂ । ನೀ ಬಾ[6]

**– ಕವನ : ಭಾವನೆ**

## ಮಂದಾನಿಲ ಲಯದ ಕಿರಿ ಚತುಷ್ಪದಿ

ಕೆಲವೊಮ್ಮೆ ಮಂದಾನಿಲ ಲಯದ ಪ್ರಯೋಗಗಳಲ್ಲಿ ಎರಡನೆಯ ಮತ್ತು ನಾಲ್ಕನೆಯ ಕಿರಿಚರಣಗಳು ತೀರ ಚಿಕ್ಕದಾಗಿರುತ್ತದೆ. ಆದ್ದರಿಂದ ಇಂಥ ಪ್ರಯೋಗಗಳನ್ನು ಮಂದಾನಿಲ ಲಯದ ಕಿರಿಚತುಷ್ಪದಿ ಎಂದು ಗುರುತಿಸಲಾಗಿದೆ. ಕಥನಕವನ ಲಾವಣಿಗಳಿಗೆ ಹೊಂದಿಕೆಯಾಗುವ ಈ ಛಂದೋಬಂಧವನ್ನು ಕಾಂತನವರ 'ಶ್ರೀ ಲಕ್ಷ್ಮೀಕಾಂತಾಚಾರ್ಯರು' ಕಥನಕವನದಲ್ಲಿ ಇಂತಹ ಪ್ರಯೋಗ ಕಂಡು ಬರುತ್ತದೆ.

## ಶರಚೌಪದಿ

ಶರಷಟ್ಪದಿಯ ಬಂಧವನ್ನು ಮೈಗೂಡಿಸಿಕೊಂಡು ಮಂದಾನಿಲ ಲಯದ ಚತುಷ್ಪದಿಗಳಲ್ಲಿ ಬಳಕೆಯಾಗಿರುವ ಬಂಧಕ್ಕೆ ಶರ ಚೌಪದಿ ಎಂದು ಹೆಸರು. ಮೊದಲನೆಯ ಮತ್ತು ಮೂರನೆಯ ಚರಣಗಳಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳಿರುತ್ತವೆ. ಎರಡನೆಯ ಮತ್ತು ನಾಲ್ಕನೆಯ ಚರಣಗಳಲ್ಲಿ ನಾಲ್ಕು ಮಾತ್ರೆಯ ಮೂರು ಗಣಗಳು ಮೇಲೊಂದು ಗುರು ಇರುತ್ತದೆ. ಕಾಂತನವರು ತಮ್ಮ ಅನೇಕ ಕವಿತೆಗಳಲ್ಲಿ ಇದನ್ನು ಪ್ರಯೋಗಿಸಿದ್ದಾರೆ.

– U U – – – U U – U U
ಕೃಷ್ಣೆಯು । ಶಾಖಾ । ಬಾಹುಗ । ಳಿಂದಲಿ
– U U – U U U U U U U
ಅಪ್ಪಿದ । ತಾಣವು । ಕುರುವಪು । ರ
– – – – – U U U U U U
ಶ್ರೀ ಪಾ । ದ ಶ್ರೀ । ವಲ್ಲಭ । ಯತಿಗಳ
– U – U U U U U – U
ಭಕ್ತಿ ಭಾ । ವಗಳ ಮ । ಹ ಪೂರ[7]

**– ಕವನ : ಶ್ರೀಪಾದಶ್ರೀವಲ್ಲಭ ಚರಿತೆ**

ಇಲ್ಲಿ 'ಕ್ತಿ' ಇದನ್ನು ಶಿಥಿಲಾಕ್ಷರ ವೆಂದು ಪರಿಗಣಿಸಬೇಕು.

## ದ್ವಿಪದಿ

ರಗಳೆ ನಿರ್ದಿಷ್ಟ ಸಂಖ್ಯೆಯ ಮಾತ್ರಾಗಣಗಳು ಬರುವ ಅನಿರ್ದಿಷ್ಟ ಪಾದಗಳುಳ್ಳದ್ದು ಪಾದಾಂತ್ಯದಲ್ಲಿ ಯತಿ ಕಡ್ಡಾಯ ಎರೆಡೆರಡು ಪಾದಗಳು ಆದಿ ಅಂತ್ಯ ಪ್ರಾಸಗಳನ್ನು ಪಡೆಯುವುದರಿಂದ ಅವೆರಡೂ ಸೇರಿ ಒಂದು ಬಗೆಯ ದ್ವಿಪದಿಯಾಗುತ್ತದೆ. ಹೊಸಗನ್ನಡ ಕವಿತೆಗಳಲ್ಲಿ ಇಂತಹ ದೀರ್ಘ ದ್ವಿಪದಿಯನ್ನು ನಾಲ್ಕು ಚರಣಗಳಲ್ಲಿ ಬಿಡಿಸಿ ರಚಿಸಿಕೊಂಡ ಬಂಧವು ಸಾಕಷ್ಟು ಪ್ರಯೋಗವನ್ನು ಕಂಡಿದೆ. ಇಂತಹ ಪ್ರಯತ್ನ ಕಾಂತನವರ ಕಾವ್ಯದಲ್ಲೂ ಮಾಡಲಾಗಿದೆ.

– U U – U U U U – – U U
ಭಾವವು । ಆತ್ಮವು । ರಸವೇ । ಜೀವನ
U U U U – U U – U U –
ಪ್ರಕೃತಿಯೆ । ಚಂದದ । ಅಂದಣ । ವು
– U U – U U – – U U U U
ಪಾವನ । ಕಾವ್ಯವೆ । ಗೀತಾಂ । ಜಲಿಯದು
– – – U U – U U –
ಕಾವ್ಯೋ । ದ್ಯಾನಕೆ । ಚಂದನ । ವು [8]

***– ಕವನ : ಕವೀಂದ್ರ ರವೀಂದ್ರ***

ಕಾಂತನವರ ಇನ್ನುಳಿದ ಕವನಗಳಾದ ಹಾರೈಕೆ, ಪಂಚಮಿನಾಗ, ನಾಗರಪಂಚಮಿ, ಶ್ರಿ ಲಕ್ಷ್ಮೀಕಾಂತಾಚಾರ್ಯರು, ಕಬೀರರ ವಾಣಿ ಅನುವಾದದಲ್ಲೂ ಈ ಪ್ರಯೋಗಗಳನ್ನು ಕವಿ ಮಾಡಿದ್ದಾರೆ.

## ಲಲಿತಲಯ

ರಗಳೆಯಿಂದ ಸರಳರಗಳೆಯನ್ನು ರೂಪಿಸಿಕೊಂಡ ಖ್ಯಾತಿ ನವೋದಯ ಕವಿಗಳಿಗೆ ಸಲ್ಲುತ್ತದೆ ಇಂಗ್ಲೀಷ್ ಕಾವ್ಯದ ಪ್ರೇರಣೆಯಿಂದಾಗಿ ಹೊಸ ಕಾವ್ಯವನ್ನು ನಿರ್ಮಿಸಬೇಕೆಂಬ ಹಂಬಲದಿಂದ ಹೊಸ ಹೊಸ ಮಟ್ಟುಗಳನ್ನು ರೂಪಿಸಿ ಪ್ರಯೋಗಿಸಿದರು ಹಿಂದಿನ ಸಾಹಿತ್ಯದಲ್ಲಿನ ಷಟ್ಪದಿ, ರಗಳೆ, ಸಾಂಗತ್ಯಗಳನ್ನು ಅವಲೋಕಿಸಿದಾಗ ಸಹಜವಾಗಿ ಕಾಣಿಸಿದ್ದು ಲಲಿತ ರಗಳೆ, ಲಲಿತ ರಗಳೆಯ ಆದಿ ಅಂತ್ಯ ಪ್ರಾಸವನ್ನು ಕಿತ್ತುಹಾಕಿ ಪಾದಾಂತ ಯತಿಯನ್ನು ತೆಗೆದು ಹಾಕಿದ್ದರಿಂದ ರಗಳೆಗೆ ನಿರಾಂತಕ ಓಟ ಲಭಿಸಿದೆ. ಲಲಿತ ಲಯದಲ್ಲಿ 5,5, ಮಾತ್ರೆಯ ಗಣ ವಿನ್ಯಾಸವಿರುತ್ತದೆ ಕಾಂತನವರ 'ಕನ್ನಡ ನುಡಿ' ಕವಿತೆಯು ಇದೆ ಲಯದಲ್ಲಿದೆ.

– U U U U U – U – U U U – – U
ಕನ್ನಡದ । ನುಡಿಯಲ್ಲಿ । ಕಾಣುತಿದೆ । ಸೌಂದರ್ಯ
– U U U – U U U U – U U U U U U U
ಕಿನ್ನರರ । ಗೇಯವಿದು । ಕೀರುತಿಗೆ । ನೆಲೆಯಹುದು
U U U – U U U U U – U U U U U U U U
ಕುಜದಂತೆ । ತಣಿಸುವುದು । ಕೂಟವಿದು । ನವರಸಕೆ
– U U U – U U U – U U U – U U U
ಕೆಚ್ಚೆದೆಯ । ನೀಯುವದು । ಕೇಶವಗೆ । ಅರ್ಪಿತವು
– – U U U U U U U U U U U – U U U
ಕೈಲಾಸ । ಶಿಖರದಲಿ । ಕೊನರಿಹುದು । ಭಾಷೆಯಿದು
– U U – U U – U – – U U U – U
ಕೋಮಲಾಂ । ಗಿಯೆಕೇಳು । ಕೌಂತೇಯ । ಸಖನಾದ
– U – U U U U U – U – U U – U
ಕಂಜನಾ । ಭನಿಗೊಲವು । ಕಃಪದಾ । ರ್ಥವಿದಲ್ಲ [9]

***– ಕವನ : ಕನ್ನಡ ನುಡಿ***

ಕಾಗುಣಿತದ ಚಮತ್ಕಾರದ ಕವನ ಇದಾಗಿದೆ 'ಕ' ದಿಂದ ಆರಂಭವಾಗಿ 'ಕಃ' ದವರೆಗೂ ಪದಗಳನ್ನು ಲಲಿತಲಯದಲ್ಲಿ ಪ್ರಸ್ತುತ ಪಡಿಸಿರುವುದು ಅದ್ಭುತವಾಗಿದೆ. ಲಲಿತ ಲಯದಲ್ಲಿ 4 ಗಣಗಳ 4 ಚರಣಗಳು ಬರುವುದು ಇದನ್ನು 'ಪೂರ್ಣಸಮಬಂಧ ಲಲಿತಲಯ ಚತುಷ್ಪದಿ' ಎನ್ನುತ್ತೇವೆ. ಸಂಸ್ಕೃತ ಭಾಷೆಯ ಹಿರಿಮೆಯ ಅವರ ದೇವಭಾಷೆ, ಸ್ವಾಗತಗೀತೆ ಕವನಗಳಲ್ಲಿ ಈ ಪ್ರಯೋಗಗಳಿವೆ

– U – U U – U – U U U – – U
ದಂಡಿಭಾ । ರವಿಭಾಸ । ಪಂಡಿತರ । ದೀಭಾಷೆ
– U U U – U – – U U U – – U
ಬಾಣಭವ । ಭೂತಿಮಾ । ಘಾದಿಗಳ । ದೀಭಾಷೆ
U U U U U U U U U U – U – U U – U
ಕವಿಕುಲಕೆ । ಗುರುವೆನಿಪ । ಕಾಲಿದಾ । ಸನ ಭಾಷೆ
U U U U U – U – – U – U – U
ಜಗದಗಲ । ಕೆಲ್ಲಕೂ । ಮೀಗಿಲಾ । ದ ಭಾಷೆ [10]

***– ಕವನ : ದೇವ ಭಾಷೆ***

ಗಣಪರಿವೃತ್ತಿ ಗಣ ರಚನೆಯಲ್ಲಿ ಕಂಡು ಬರುವ ಒಂದು ವಿಶೇಷಾಂಶ. ಈ ಪರಿಭಾಷೆಯನ್ನು ಮೊದಲು ಬಳಸಿ ಲಕ್ಷಣವನ್ನು ನಿರೂಪಿಸಿದವರು ತೀ.ನಂ.ಶ್ರೀ ಯವರು ಯಾವುದಾದರೊಂದು ನಿರ್ದಿಷ್ಟ ಲಯ ಸಾಗುತ್ತಿರುವಾಗ ಆ ಲಯಕ್ಕೆ ಒಂದು ಹೊಸ ಬಳುಕನ್ನು ತರುವುದಕ್ಕಾಗಿ ಒಂದು ಜಾತಿಯ ಗಣಗಳನ್ನು ಇರಿಸುವುದಕ್ಕೆ ಗಣರಿವೃತ್ತಿ ಎಂದು ಹೆಸರು ಐದು ಮಾತ್ರೆಯ ಲಯದಲ್ಲಿ ಕಂಡುಬರುವ ಗಣಪರಿವೃತ್ತಿಯೆಂದರೆ ಸಾಮಾನ್ಯವಾಗಿ 5+5 ರ ಸ್ಥಾನದಲ್ಲಿ 3+4+3 ರಂತೆ ಬರುವುದು ಇದಕ್ಕೆ ಉದಾಹರಾಣಾರ್ಥವಾಗಿರುವ ಕವನ ಈ ಕೆಳಗಿನಂತಿದೆ

– U – U U – U – U U U – U U U
ಹಗ್ಗ । ವಿಲ್ಲದೆ । ಬಾವಿ । ಬಿದ್ದಿರುವ । ನಾಗರಿಕ
– U – U U U U U – U – U U U U U
ನುಗ್ಗು । ಮೇಲಕೆ । ಪುರುಷ । ಆತ್ಮ । ಶಕ್ತಿಯ । ಬಲದಿ [11]

***– ಕವನ : ಉತ್ತಿಷ್ಟಪರಂತಪ***

## ಲಲಿತಲಯದ ಅರ್ಧ ಸಮಚತುಷ್ಪದಿ

1 ನೇ ಮತ್ತು 3 ನೇ ಚರಣಗಳು 5 ಮಾತ್ರೆಯ ನಾಲ್ಕು ಗಣಗಳಿಂದ ಕೂಡಿದ್ದು 2 ಮತ್ತು 4 ನೇ ಚರಣಗಳು ಕೊನೆಯಲ್ಲಿ ಮಾತ್ರ ಒಂದಿನಿತು ಬೇರೆ ರೀತಿಯಲ್ಲಿ ತರಂಗಗೊಳ್ಳುತ್ತವೆ. ಪ್ರಾಸದ ಸೊಗಸನ್ನು ಗಮನಕ್ಕೆ ತರುತ್ತವೆ. ಪಂಡಿತ ತಾರಾನಾಥರು, ಜಗನ್ನಾಥದಾಸರು ಈ ಪ್ರಯೋಗವನ್ನು ಕಾಣಬಹುದಾಗಿದೆ. **ಲಲಿತ ಲಯದ ಕಿರಿಯ ಚತುಷ್ಪದಿ** – ಲಲಿತ ಲಯದ ಎರಡು ಚರಣಗಳನ್ನು ಲಯಾನುಸಾರವಾಗಿ ನಾಲ್ಕು ಕಿರಿಚರಣಗಳಲ್ಲಿ ಬಿಡಿಸಿ ಇಡಬಹುದು. ಹೀಗೆ ರೂಪುಗೊಂಡ ಲಲಿತಲಯದ ನಾಲ್ಕು ಕಿರಿಚರಣಗಳಿಗೆ ಲಲಿತಲಯದ ಕಿರಿ ಚತುಷ್ಪದಿ ಎನ್ನಬಹುದು 6 ಚರಣಗಳಿದ್ದರೆ ಕಿರಿಷಟ್ಪದಿ ಎಂದು ಕರೆಯಲಾಗುತ್ತದೆ. ಕಾಂತನವರ ಕವಿತಾ ಕುಮಾರಿ, ಶಿಕ್ಷಕ ಕವನಗಳಲ್ಲಿ ಕಿರಿಚತುಷ್ಪದಿ, ಜಾತಿ ಕವನದಲ್ಲಿ ಕಿರಿಷಟ್ಪದಿಯನ್ನಯ ಪ್ರಯೋಗಿಸಿದ್ದಾರೆ.

– U U U – U U U
ಎನ್ನ ಮನೆ । ಚೆನ್ನ ಮನೆ
– U – U U U U U
ಮೇಲುಮಾ । ಳಿಗೆಯ ಮನೆ
– U – U U – U
ಸುಣ್ಣ ಬ । ಣ್ಣಗಳಿಂದ
– U U U – U U U
ಶೋಭಿಸುವ । ನನ್ನ । ಮನೆ [12]

***– ಕವನ : ಎನ್ನ ಮನೆ***

## ಕುಸುಮ ಚೌಪದಿ

ಪ್ರಾಚೀನ ಈ ಛಂದೋಬಂಧದ ಹೊಸ ರೀತಿಯ ಪ್ರಯೋಗಕ್ಕೆ ಒಳಪಡಿಸಿ ಆಧುನಿಕ ಅನೇಕ ಕವಿಗಳು ಕುಸುಮ ಚೌಪದಿಯಲ್ಲಿ ಕವಿತೆಗಳನ್ನು ರಚಿಸಿದ್ದಾರೆ. ಆಧುನಿಕ ಕಾವ್ಯ ಸಂದರ್ಭದಲ್ಲಿ ಇಂತಹ ಅತ್ಯಂತ ವಿಫುಲವಾದ ವಿನಿಯೋಗವಾದ ಬಂಧ ಮತ್ತೊಂದಿಲ್ಲ ಎಂದರೆ

ISSN : 2249-2429 ಸೈದ್ಧಾಂತಿಕ RNI REG.NO.KARKAN/2011/38712

ಅತಿಶಯೋಕ್ತಿ ಎನಿಸದು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಮಂದ ಗತಿಯ ಸುಂದರ ಭಾವಾಭಿವ್ಯಕ್ತಿಗೆ ಅನುಕೂಲವಾದ ಬಂಧವಾಗಿದ್ದು, ಕುಸುಮ ಷಟ್ಪದಿಯನ್ನು ನಾಲ್ಕು ಪಾದಗಳಲ್ಲಿಟ್ಟು ರಚಿಸುವ ಬಂಧವಾಗಿ ಆಧುನಿಕರು ಇದನ್ನು ಅಂತ್ಯ ಪ್ರಾಸದೊಡನೆ ಬಳಸುತ್ತಿದ್ದಾರೆ. ಇದನನಿ ಕುಸುಮ ಚೌಪದಿ, ಚಿಕ್ಕಸೀಸವೆಂತಲೂ ಕರೆಯಲಾಗುತ್ತದೆ. ಈ ಆಧುನಿಕ ಛಂದಸ್ಸಿನ ಪ್ರಯೋಗವನ್ನು ಕಾಂತನವರ ಭಾವಪ್ರಪಂಚ, ಪೂರ್ಣೇಂದು, ತ್ಯಾಗವೀರ ಲಿಂಗರಾಜ, ಶ್ರೀ ಪುರಂದರದಾಸರು, ವಿಜ್ಞಾನಿ, ಆರ್ತನಾದ, ಭಾರತಿ ಹಾಗೂ ಮುಂತಾದ ಕವನಗಳಲ್ಲಿ ಅವರ ಬಹುಪಾಲು ಕಾವ್ಯವೆಲ್ಲವೂ ಕುಸುಮ ಚೌಪದಿಯಲ್ಲಿವೆ.

– U UUUUU UUU – UUU UU – U
ಮಾಗಿ । ದಮೃತದ । ಫಲವು । ಮೃತ್ತಿಕೆಗೆ । ಮಣಿವಂತೆ
– U – – UUU – U – –
ಭೋಗದಿಂ । ತ್ಯಾಗದೆಡೆ । ಗೋಡಿಬಂ । ದೆ
– UUU UU – U – UUU – UUU
ಭಾಗವತ । ರಲಿ ನೀನು । ಅಗ್ಗಳನು । ಸದ್ಗುರುವೆ
– UUU UU– U – UUU –
ಬಾಗುವೆನು । ಚರಣಾರ । ವಿಂದಗಳ । ಲಿ [13]

*– ಕವನ : ಶ್ರೀ ಪುರಂದರದಾಸರು*

## ಭಾಮಿನೀಲಯ

ಭಾಮಿನೀ ಷಟ್ಪದಿಯ 3,4,3,4 ಲಯ ಗತಿಯ ಹಲವು ಬಂಧಗಳಲ್ಲಿ ಆಧುನಿಕ ಭಾವಗೀತೆಗಳು ಮೈದೋರಿವೆ ಆದ್ದರಿಂದ ಇವನ್ನು ಭಾಮಿನೀ ಲಯವೆಂದು ಕರೆಯಲಾಗಿದೆ ಈ ಲಯದ ಹಿರಿ ಚತುಷ್ಪದಿಗಲ್ಲಿ ಪ್ರತಿ ಚರಣದಲ್ಲೂ 3, 4, 3, 4, 3, 4, 3 ಗು ಗಣ ಯೋಜನೆ, ಕಿರಿ ಚತುಷ್ಪದಿಯಲ್ಲುಇ 3, 4, 3, 4 ಹಾಗೂ 2 ಮತ್ತು 4 ನೇಯ ಚರಣಗಲ್ಲಿ 3, 4, 3 ಗು ಈ ರೀತಿಯ ಗಣವಿನ್ಯಾಸವಿದೆ. ಹಿರಿಚತುಷ್ಪದಿಯ ಲಯದ ಒಂದು ಪಾದದ ಗಣ ವಿನ್ಯಾಸ ಎರಡು ಪಾದಗಳಲ್ಲಿ ಹರಡಿಕೊಂಡಿದ್ದು ತ್ರಿಪುಡೆಯ ಲಯಗತಿಯನ್ನು ಹೋಲುತ್ತವೆ. ದ್ವಿಪದಿ ಸ್ವರೂಪದ ಈ ಬಂಧ ನಾಲ್ಕು ಚರಣಗಳ ರೂಪದಲ್ಲಿ ಕಾಣುತ್ತದೆ ಕಾಂತನವರ ವಿರಚಿತ ರಾಯಚೂರು ಕವಿತೆಯಲ್ಲಿ ಹಾಗೂ ಜ್ಞಾನಕಿರಣ, ಕೀರ್ತಿಕಹಳೆ, ರಾಷ್ಟ್ರಕವಿ ಕುವೆಂಪು, ಸೌಗಂಧಿಪುರ, ಎದ್ದೇಳಿ. ಮುಂತಾದ ಕವನಗಳಲ್ಲಿ ಈ ಪ್ರಯೋಗವನ್ನು ಕಾಣುತ್ತೇವೆ.

– U – – UUU – UU
ಅಂದು । ರಾಮಾ । ಯಣದ । ಕಾಲದಿ
– U – UU – U –
ದಂಡ । ಕಾನನ । ಸುಂದ। ರ [14]

*– ಕವನ : ರಾಯಚೂರು*

## ಮೇಘರಗಳೆ

ಮೇಘ ರಗಳೆಯ ಪ್ರತಿ ಚರಣವೂ 3, 3, 2, 3, 3, 2, 3, 3, 3 ಈ ರೀತಿಯ ಗಣಜೋಡಣೆಯನ್ನು ಹೊಂದಿರುತ್ತದೆ. ಕಾಂತನವರ ಜಾಹ್ನವಿ, ಸ್ಮರೇನ್ನಿತ್ಯಂ, ಮುಂಗಾರುದೇವ, ಚಿಗುರು, ಮುಂತಾದ ಕವನಗಳಲ್ಲಿ ಹಾಗೂ ಮೂರು ವಿವಿಧ ಬಗೆಯ 2 ಮಾತ್ರೆಯ ಅನಾಗತ ಗಣ, ಹುಸಿಗಣ ಹೀಗೆ ವಿವಿಧ ಬಗೆಯ ಮೇಘರಗಳೆಯನ್ನು ಕಾವ್ಯದಲ್ಲಿ ಪ್ರಯೋಗಿಸಿದ್ದಾರೆ. ಸಂಸ್ಕೃತದ ಈ ಮೇಘರಗಳೆಯನ್ನು ಕನ್ನಡಿಸಿ ಬೇಂದ್ರೆಯವರು ಹೊಸ ಛಂದಸ್ಸನ್ನೇ ಸೃಜಿಸಿದರು. ಅವರ ಮೇಘದೂತ ಮುಂತಾದ ಭಾವಗೀತೆಗಳಲ್ಲಿ ಈ ಛಂದಸ್ಸಿನ ಮಟ್ಟನ್ನು ಕಾಣಬಹುದು.

– U – U UU UUU UUU
ನಂಜ । ನುಂಡು । ಪರಿ । ತಪಿಸಿ । ದವಗೆ ।
– – U – U UUU
ನೀ । ನಂದು । ತಂಪ । ನೆರೆದೆ
– U – U UU – U – U U –
ಮಂಜು । ವೆಟ್ಟ । ದಲಿ । ನಿಂದು । ಮುಂದೆ । ಪರಿ ।
– U UUU UUU
ತಂದು । ಜಗದಿ । ಮೆರೆದೆ[15]

*– ಕವನ : ಜಾಹ್ನವಿ*

ಆಧುನಿಕ ಛಂದಸ್ಸಲ್ಲದೇ ಭಾಮಿನಿ ಷಟ್ಪದಿಯಲ್ಲಿ ಶ್ರೀ ವೆಂಕಟೇಶ್ವರ ಸ್ತುತಿ, ಶ್ರೀ ಲಕ್ಷ್ಮೀಸ್ತುತಿ, ಗುರುಕೃಪೆ ಸ್ತುತಿಯನ್ನು ಹಾಗೂ ಪುಷ್ಪಲತಾಪುರದಲ್ಲಿ ಮತ್ತೇಭವಿಕ್ರೀಡಿತ, ಚಂಪಕಮಾಲಾ, ಉತ್ಪಲಮಾಲಾ ವೃತ್ತ ಪ್ರಯೋಗಗಳನ್ನು ಮಂಗಳಕೋರಿಕೆಯಲ್ಲಿ ಶಾರ್ದೂಲವಿಕ್ರೀಡಿತ ವೃತ್ತದ ಪ್ರಯೋಗವನ್ನು ಕವಿ ಮಾಡಿದ್ದಾರೆ. ಕವಿಯ ಕಣ್ಣಿನ ಬೆಳಕಾಗಿ, ಕಾವ್ಯ ನೌಕೆಯ ಹಡಗಾಗಿರುವ ಛಂದಸ್ಸನ್ನು ಮುಖ್ಯ ಸಾಧನವಾಗಿಸಿಕೊಂಡು ವಿಶಿಷ್ಟ ಶೈಲಿ, ಭಾಷೆ, ಭಾವ, ವಸ್ತು ಎಲ್ಲದರಲ್ಲಿಯೂ ವೈವಿಧ್ಯತೆಯುನ್ನು ಸಾಧಿಸಿದ ಕವಿ ವಿ.ಎಸ್.ಕಾಂತನವರ ಕಾವ್ಯವನ್ನು ಸಂಕ್ಷಿಪ್ತವಾಗಿ ಇಲ್ಲಿ ಚರ್ಚಿಸಲಾಗಿದೆ. ಇವರ ಕಾವ್ಯ ಅಧ್ಯಯನಕಾರರಿಗೆ ಪ್ರೇರಕ ಹಾಗೂ ಮಾರ್ಗದರ್ಶಕವಾಗಿವೆ ಎಂದರೆ ಅತಿಶಯೋಕ್ತಿ ಎನಿಸದು.

## ಅಡಿಟಿಪ್ಪಣಿಗಳು

1. ಡಾ.ಡಿ.ಎಸ್.ಕರ್ಕಿ 'ಕನ್ನಡ ಛಂದೋವಿಕಾಸ' ಪುಟ 3
2. ಅದೇ ಪುಟ 4
3. ವಿ.ಎಸ್.ಕಾಂತನವರ ಕಿರಣ ಕವನ ಸಂಕಲನ ಪುಟ 11
4. ಅದೇ ಪುಟ 7
5. ಅದೇ ಪುಟ 12
6. ವಿ.ಎಸ್.ಕಾಂತನವರ ನವೋದಯ ಕವನ ಸಂಕಲನ ಪುಟ 5
7. ಅದೇ ಪುಟ 34
8. ಅದೇ ಪುಟ 21
9. ವಿ.ಎಸ್.ಕಾಂತನವರ ಕಿರಣ ಕವನ ಸಂಕಲನ ಪುಟ 38
10. ಅದೇ ಪುಟ 37
11. ಅದೇ ಪುಟ 6
12. ಅದೇ ಪುಟ 23
13. ಅದೇ ಪುಟ 17
14. ಅದೇ ಪುಟ 3
15. ಅದೇ ಪುಟ 13

## ಪರಾಮರ್ಶನ ಗ್ರಂಥಗಳು


- **ಡಾ.ಡಿ.ಎಸ್.ಕರ್ಕಿ (2010) :** 'ಕನ್ನಡ ಛಂದೋವಿಕಾಸ' ಧಾರವಾಡ ಭಾರತ ಪ್ರಕಾಶನ, 13 ನೇ ಮುದ್ರಣ.
- **ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ (2008) :** 'ಕನ್ನಡ ಛಂದಃಸ್ವರೂಪ' ಮೈಸೂರು ಡಿ.ವಿ.ಕೆ. ಮೂರ್ತಿ ಪ್ರಕಾಶಕರು ಮೂರನೇ ಮುದ್ರಣ.
- **ಶ್ರೀಮತಿ. ಕೋಮಲ ಡಿ. (2019) :** 'ಕಾಂತನವರ ಕಾವ್ಯದಲ್ಲಿ ಛಂದಸ್ಸು' ರವೀಂದ್ರ ಪ್ರಕಾಶನ ರಾಯಚೂರು ಪ್ರಥಮ ಮುದ್ರಣ.
- **ಹೊ.ನ. ನೀಲಕಂಠೇಗೌಡ (2017) :** 'ಛಂದೋಬಂಧ' ಯುವಸಾಧನೆ ಬೆಂಗಳೂರು ಪರಿಷ್ಕೃತ ಮೊದಲನೇ ಮುದ್ರಣ.

ISSN : 2249-2429 ಸಂಶೋಧನೆ RNI REG.NO.KARKAN/2011/38712

# ವಿದ್ಯಾರ್ಥಿಗಳ ಕ್ರೀಡಾ ಪ್ರಗತಿಗೆ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಕೊಡುಗೆಗಳು; ಒಂದು ಅಧ್ಯಯನ

✍ ದೇವಾನಂದ ಎ.ಸಿ., ಸಹಾಯಕ ಪ್ರಾಧ್ಯಾಪಕ, ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯ, ಬಿಜಿ ನಗರ.

✍ ಡಾ. ಎ. ಟಿ. ಶಿವರಾಮು, ಡೀನ್, ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಮತ್ತು ಪ್ರಾಂಶುಪಾಲರು, ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯ, ಬಿಜಿ ನಗರ

*ಸಾರಾಂಶ*

*ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸವನ್ನು ತನ್ನ ಗುರಿಯನ್ನಾಗಿಟ್ಟುಕೊಂಡಿದ್ದು, ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಉತ್ತೇಜನವನ್ನು ನೀಡುತ್ತಿದೆ. ಶಿಕ್ಷಣ ಟ್ರಸ್ಟ್ ಪ್ರತಿ ವರ್ಷವೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ "ರಾಜ್ಯಮಟ್ಟದ ಕ್ರೀಡಾಕೂಟ"ಗಳನ್ನು, ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸುತ್ತಿದೆ.. ಶಿಕ್ಷಣ ಟ್ರಸ್ಟ್ ಅಂತರಾಷ್ಟ್ರೀಯ ಯೋಗ ದಿನಾಚರಣೆ, ಸಾಹಸ ಕ್ರೀಡೆಗಳಿಗೆ ಪ್ರೋತ್ಸಾಹ, ರಾಷ್ಟ್ರೀಯ ಮೆಮೊರಿ ಚಾಂಪಿಯನ್‌ಶಿಪ್ ಆಯೋಜನೆ, ಕ್ರೀಡಾಂಗಣಗಳ ನಿರ್ಮಾಣ ಮತ್ತು ದಿವ್ಯಾಂಗರ ಕ್ರೀಡೆಗೆ ವಿಶೇಷ ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ.*

*ಮುಖ್ಯ ಪದಗಳು : ಕ್ರೀಡೆ, ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ವಿದ್ಯಾರ್ಥಿ, ಕ್ರೀಡಾಂಗಣ*

## 1. ಪೀಠಿಕೆ

"ಕ್ರೀಡೆ" ಎಂಬ ಪದವು "ವಿರಾಮ"ವೆಂಬ ಅರ್ಥಕೊಡುವ ಫ್ರೆಂಚ್‌ನ Disport ಎಂಬ ಪದದಿಂದ ಬಂದಿದೆ. ಪರ್ಷಿಯನ್ ಭಾಷೆಯಲ್ಲಿ ಕ್ರೀಡೆಗೆ "ಬಾರ್ಡ್" ಎಂಬ ಪದ ಬಳಸಲಾಗುತ್ತಿದ್ದು, ಇದು 'ಗೆಲುವು' ಎಂಬ ಅರ್ಥವನ್ನು ನೀಡುತ್ತದೆ. ಕ್ರೀಡೆಗಳು ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸ್ಪರ್ಧಾ ಮನೋಭಾವನೆ, ಶಿಸ್ತು ಹಾಗೂ ಸಂಯಮದ ಪಾಠವನ್ನು ಕಲಿಸುತ್ತವೆ. ಇವು ಸೋಮಾರಿತನವನ್ನು ತೊಡೆದು ಹಾಕಿ, ದೇಹವನ್ನು ರೋಗ ಮುಕ್ತಗೊಳಿಸುತ್ತವೆ. ಕ್ರೀಡೆಗೆ ಜಗತ್ತಿನ ಜನರನ್ನು ಒಂದುಗೂಡಿಸುವ ವಿಶಿಷ್ಟ ಶಕ್ತಿಯಿದೆ.

## 2. ಹಿಂದಿನ ಅಧ್ಯಯನಗಳ ಸಮೀಕ್ಷೆ

- ಡಾ. ಕೆ. ರಾಜೇಶ್ವರಿ ಗೌಡ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ "ಆದಿಚುಂಚನಗಿರಿ: ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ಸಂಶೋಧನಾ ಪ್ರಬಂಧವು ಕ್ರಿ.ಶ.2001 ರಲ್ಲಿ ಪುಸ್ತಕವಾಗಿ ಪ್ರಕಟಣೆಗೊಂಡಿದೆ. ಸಂಶೋಧಕರು ಈ ಪ್ರಬಂಧದಲ್ಲಿ 'ಶೈಕ್ಷಣಿಕವಾಗಿ ಶ್ರೀ ಕ್ಷೇತ್ರದ ಪ್ರಗತಿ' ಎಂಬ ಅಧ್ಯಾಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ ನೀಡಿದ ಕೊಡುಗೆಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ.
- ಶ್ರೀ ಧರ್ಮಪಾಲನಾಥ ಸ್ವಾಮೀಜಿ ಕ್ರಿ.ಶ.2022 ರಲ್ಲಿ "ಸಂಸ್ಕೃತ–ಸಂಸ್ಕೃತಿಗೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆ ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧವನ್ನು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಅವರು ಈ ಪ್ರಬಂಧದಲ್ಲಿ ಶ್ರೀ.ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಕಾಲಮಾನದಲ್ಲಿ ಮಠದ ಬೆಳವಣಿಗೆ, ಆಧ್ಯಾತ್ಮಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಂಸ್ಕೃತ ಭಾಷೆ, ಸಾಹಿತ್ಯದ ಬೆಳವಣಿಗೆಯನ್ನು ಕುರಿತು ಚರ್ಚಿಸಿದ್ದಾರೆ

## 3. ಅಧ್ಯಯನದ ಉದ್ದೇಶಗಳು

- ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಆಯೋಜಿಸುತ್ತಿರುವ ಪಂದ್ಯಾವಳಿಗಳನ್ನು ಕುರಿತು ವಿಶ್ಲೇಷಿಸುವುದು
- ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಶಾಲೆಗಳು ದಿವ್ಯಾಂಗರ ಕ್ರೀಡಾ ಚಟುವಟಿಕೆಗಳಿಗೆ ನೀಡುತ್ತಿರುವ ಪ್ರೋತ್ಸಾಹವನ್ನು ಅಧ್ಯಯನ ಮಾಡುವುದು
- ಶಿಕ್ಷಣ ಟ್ರಸ್ಟ್ ಕ್ರೀಡಾಂಗಣಗಳ ನಿರ್ಮಾಣ ಹಾಗೂ ಅಭಿವೃದ್ಧಿಗೆ ನೀಡಿರುವ ಪ್ರಾಮುಖ್ಯತೆಯನ್ನು ಗುರುತಿಸುವುದು.
- ಶಿಕ್ಷಣ ಟ್ರಸ್ಟ್ ಸಾಮೂಹಿಕ ಕವಾಯತು, ಯೋಗ ಮತ್ತು ಸಾಹಸ ಕ್ರೀಡೆಗಳಿಗೆ ನೀಡುತ್ತಿರುವ ಮಹತ್ವವನ್ನು ಅಧ್ಯಯನ ಮಾಡುವುದು.

## 4. ಅಧ್ಯಯನದ ವ್ಯಾಪ್ತಿ

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಹಾಗೂ ಶಿಕ್ಷಣ ಟ್ರಸ್ಟ್‌ನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯದ ಎಲ್ಲಾ ಶಾಲಾ–ಕಾಲೇಜುಗಳ ಕ್ರೀಡಾ ಚಟುವಟಿಕೆಗಳು ಇದರ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

## 5. ಅಧ್ಯಯನದ ಮಿತಿಗಳು

ಈ ಅಧ್ಯಯನವು ಕರ್ನಾಟಕ ರಾಜ್ಯದೊಳಗಿರುವ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಶಾಲಾ– ಕಾಲೇಜುಗಳ ಕ್ರೀಡಾ ಚಟುವಟಿಕೆಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದೆ.

## 6. ಅಧ್ಯಯನ ವಿಧಾನ

ಅಧ್ಯಯನಕ್ಕೆ ಐತಿಹಾಸಿಕ,ವಿವರಣಾತ್ಮಕ ಹಾಗೂ ಅನುಭವಾತ್ಮಕ ವಿಧಾನವನ್ನು ಅನುಸರಿಸಲಾಗಿದೆ

## 7. ಸಾಧನ ಮತ್ತು ತಂತ್ರಗಳು

ಸಂದರ್ಶನ, ಪ್ರಶ್ನಾವಳಿ ಹಾಗೂ ಅವಲೋಕನಗಳ ಮೂಲಕ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ.

## 8. ದತ್ತಾಂಶಗಳ ವಿಶ್ಲೇಷಣೆ

**8.1. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಆಯೋಜಿಸುತ್ತಿರುವ ರಾಜ್ಯ ಮಟ್ಟದ ಶಾಲಾ– ಕಾಲೇಜುಗಳ ಕ್ರೀಡಾಕೂಟಗಳು :** ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಅವಕಾಶ ಕಲ್ಪಿಸಲು ಕ್ರಿ.ಶ.1994 ರಲ್ಲಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಶಿವಮೊಗ್ಗದಲ್ಲಿ ಪ್ರಪ್ರಥಮ ಬಾರಿಗೆ "ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಶಾಲಾ– ಕಾಲೇಜುಗಳ ರಾಜ್ಯಮಟ್ಟದ ಕ್ರೀಡಾಕೂಟ"ವನ್ನು ಆಯೋಜಿಸಿದರು. ಅನಂತರ ಪ್ರತಿ ವರ್ಷವೂ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಿಕೊಂಡು ಬರುತ್ತಿದೆ.

**ಕ್ರೀಡಾಕೂಟಗಳ ವಿವರ**

1. ಶಿವಮೊಗ್ಗ – 1994–1995
2. ವಿಶ್ವಮಾನವ ಕ್ಷೇತ್ರ, ಕೊಮ್ಮೇರಹಳ್ಳಿ, ಮಂಡ್ಯ ಜಿಲ್ಲೆ– 1995–1996
3. ಬಿ.ಜಿ.ನಗರ, ಮಂಡ್ಯ ಜಿಲ್ಲೆ 1996–1997
4. ಚಿಕ್ಕಮಗಳೂರು 1997–1998
5. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ 1998–1999
6. ಮಾಯಸಂದ್ರ, ತುಮಕೂರು ಜಿಲ್ಲೆ 1999–2000
7. ಮೈಸೂರು 2000–2001
8. ಶಿವಮೊಗ್ಗ 2001–2002
9. ನಿತ್ಯಾನಂದ ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ 2002–2003
10. ವಿಶ್ವಮಾನವ ಕ್ಷೇತ್ರ, ಕೊಮ್ಮೇರ ಹಳ್ಳಿ, ಮಂಡ್ಯ ಜಿಲ್ಲೆ 2003–2004
11. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ 2005–2006
12. ಚಿಕ್ಕಮಗಳೂರು 2006–07
13. ಹಾಸನ 2008–2009
14. ಮಾಯಸಂದ್ರ, ತುಮಕೂರು ಜಿಲ್ಲೆ 2010–2011
15. ಬಿ.ಜಿ.ನಗರ, ಮಂಡ್ಯ ಜಿಲ್ಲೆ 2011–2012
16. ಶಿವಮೊಗ್ಗ 2012–2013
17. ಮೈಸೂರು 2013–2014
18. ಚಿಕ್ಕಮಗಳೂರು 2014–2015
19. ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆ 2015–2016
20. ಆದಿಚುಂಚನಗಿರಿ, ಮಂಡ್ಯ ಜಿಲ್ಲೆ 2016–2017
21. ಬಿಜಿ ನಗರ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ 2017–18
22. ಬಿಜಿಎಸ್ ಕೇಂದ್ರೀಯ ವಿದ್ಯಾಲಯ, ಮಿರ್ಜಾನ್ ಕುಮಟಾ, ಉತ್ತರ ಕನ್ನಡ ಜಿಲ್ಲೆ 2018–2019
23. ಆದಿಚುಂಚನಗಿರಿ, ಮಂಡ್ಯ ಜಿಲ್ಲೆ 2019–20
24. ಆದಿಚುಂಚನಗಿರಿ, ಮಂಡ್ಯ ಜಿಲ್ಲೆ 2021–22
25. ಶಿವಮೊಗ್ಗ 2022–23

ಕ್ರೀಡಾಕೂಟದಲ್ಲಿ "ಕ್ರೀಡಾ ದರ್ಶನ" ಎನ್ನುವ ಸ್ಮರಣ ಸಂಚಿಕೆಯನ್ನು ಬಿಡುಗಡೆಗೊಳಿಸಲಾಗುತ್ತಿದೆ. ಇದು ಶಿಕ್ಷಣ ಟ್ರಸ್ಟ್ ಆಯೋಜಿಸಿದ್ದ ಕ್ರೀಡಾಕೂಟಗಳ ಮಾಹಿತಿ, ವಿದ್ಯಾರ್ಥಿಗಳ ಕ್ರೀಡಾ ಸಾಧನೆಗಳ ಬಗೆಗಿನ ಸಚಿತ್ರ ವರದಿಯನ್ನು ಒಳಗೊಂಡಿದೆ.

**ಕ್ರೀಡಾಕೂಟದಲ್ಲಿ ಆಯೋಜಿಸಲಾಗುವ ಸ್ಪರ್ಧೆಗಳ ವಿವರ**

ಕ್ರೀಡಾಕೂಟದಲ್ಲಿ ಮೂರು ವಿಭಾಗಗಳಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ.

1. 14 ವರ್ಷದ ಬಾಲಕರು ಮತ್ತು ಬಾಲಕಿಯರ ವಿಭಾಗ.
2. 17 ವರ್ಷದ ಬಾಲಕರು ಮತ್ತು ಬಾಲಕಿಯರ ವಿಭಾಗ.
3. 19 ವರ್ಷದ ಬಾಲಕರು ಮತ್ತು ಬಾಲಕಿಯರ ವಿಭಾಗ.

a) **ವೈಯಕ್ತಿಕ ವಿಭಾಗದ ಸ್ಪರ್ಧೆಗಳು** : 100 ಮೀ, 200ಮೀ, 300 ಮೀ, 400 ಮೀ, 600 ಮೀ, 800 ಮೀ, 1500 ಮೀಟರ್ ಓಟ ಸ್ಪರ್ಧೆ, 4 × 100 ಮೀಟರ್ ರಿಲೇ, ಮಿಡಲ್ ರಿಲೇ, ಟ್ರಿಪಲ್ ಜಂಪ್, ಡಿಸ್ಕಸ್ ಎಸೆತ, ಗುಂಡು ಎಸೆತ, ಉದ್ದ ಜಿಗಿತ

b) **ಗುಂಪು ವಿಭಾಗದ ಸ್ಪರ್ಧೆಗಳು:** ಬಾಲ್ ಬ್ಯಾಡ್ಮಿಂಟನ್, ಶಟಲ್ ಬ್ಯಾಡ್ಮಿಂಟನ್, ಹ್ಯಾಂಡ್ ಬಾಲ್, ಕಬ್ಬಡಿ, ಖೋ–ಖೋ, ವಾಲಿಬಾಲ್.

ಪ್ರತಿ ವಿಭಾಗಗಳಲ್ಲೂ ಮೂರು ಸ್ಥಾನ ವಿಜೇತರಾದ ಬಾಲಕರು ಹಾಗೂ ಬಾಲಕಿಯರಿಗೆ ಬಹುಮಾನಗಳನ್ನು ವಿತರಿಸಲಾಗುತ್ತಿದೆ. ಈ ಪ್ರೋತ್ಸಾಹದ ಪರಿಣಾಮವಾಗಿ ವಿದ್ಯಾರ್ಥಿಗಳು ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಜಯಿಸಿ, ರಾಷ್ಟ್ರಕ್ಕೆ ಕೀರ್ತಿ ತರುತ್ತಿದ್ದಾರೆ.

**8.2 ಅಂತರಾಷ್ಟ್ರೀಯ ಯೋಗ ದಿನಾಚರಣೆ**: ಆದಿಚುಂಚನಗಿರಿ ವಿಶ್ವವಿದ್ಯಾಲಯ ಹಾಗೂ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಎಲ್ಲಾ ಶಾಲಾ– ಕಾಲೇಜುಗಳಲ್ಲಿ 21.6.2022 ರಂದು ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಅಂದು ಯೋಗದ ಮಹತ್ವದ ಬಗ್ಗೆ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು ಮತ್ತು ಸಾಮೂಹಿಕ ಯೋಗಭ್ಯಾಸವನ್ನು ಕೈಗೊಳ್ಳಲಾಯಿತು

**ಪ್ರತಿಫಲನ:** ಪತಾಂಜಲಿ ಹೇಳಿರುವ "ಯಮ– ವಿದ್ಯಾರ್ಥಿಗಳಲ್ಲಿ ಸನ್ನಡತೆಯನ್ನು, ಸ್ವ ಅಧ್ಯಾಯ– ಆಂತರಿಕ ಪ್ರೇರಣೆಯನ್ನು, ಆಸನ– ದೀರ್ಘಕಾಲ ಕುಳಿತು ಅಧ್ಯಯನ ಮಾಡುವ ಶಕ್ತಿಯನ್ನು ಮೂಡಿಸುತ್ತದೆ. ಪ್ರಾಣಾಯಾಮ– ಉಸಿರಿನ ನಿಯಂತ್ರಣವು ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸುವ ಶಕ್ತಿಯನ್ನು ನೀಡುತ್ತದೆ.

**8.3. ಪ್ರಶಿಕ್ಷಣಾರ್ಥಿಗಳ ಯೋಗ ಅಧ್ಯಯನ :** ಶಿಕ್ಷಣ ಟ್ರಸ್ಟ್ ನ ಬಿ.ಪಿ.ಇಡಿ ಮತ್ತು ಬಿ.ಇಡಿ ಕಾಲೇಜುಗಳಲ್ಲಿ ಯೋಗವನ್ನು ಅಧ್ಯಯನ ವಿಷಯವನ್ನಾಗಿ ಇಡಲಾಗಿದೆ. ಪ್ರಶಿಕ್ಷಣಾರ್ಥಿಗಳು ಪ್ರಾಯೋಗಿಕವಾಗಿ ಯೋಗ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದು ಭವಿಷ್ಯದಲ್ಲಿ ಇವರು ಅಸಂಖ್ಯಾತ ವಿದ್ಯಾರ್ಥಿಗಳಿಗೆ ಯೋಗ ಶಿಕ್ಷಣವನ್ನು ಒದಗಿಸಿಕೊಡಲು ಸಹಕಾರಿಯಾಗಿದೆ.

**8.4. ಕರಾಟೆ ತರಬೇತಿ :** ಬೆಂಗಳೂರು ಮತ್ತು ರಾಮನಗರದಲ್ಲಿರುವ ಬಿಜಿಎಸ್ ಪಬ್ಲಿಕ್ ಸ್ಕೂಲ್ ಮತ್ತು ಹೆಸರಘಟ್ಟದಲ್ಲಿರುವ ಬಿಜಿಎಸ್ ಯುನೈಟೆಡ್ ಸ್ಕೂಲ್ ಗಳಲ್ಲಿ ವಿದ್ಯಾರ್ಥಿಗಳಿಗೆ ಕರಾಟೆ ತರಬೇತಿಯನ್ನು ನೀಡಲಾಗುತ್ತಿದೆ. ಇವು ಆತ್ಮ ರಕ್ಷಣೆಗೆ ಸಹಕಾರಿಯಲ್ಲದೆ, ವೇಗ ಮತ್ತು ವ್ಯಕ್ತಿತ್ವ ವಿಕಸನ ಮಾಡಬಲ್ಲದು.

**8.5. ಪರ್ವತ ಚಾರಣ :** ಸದೃಢ ದೇಹದಲ್ಲಿ ಸದೃಢ ಮನಸ್ಸಿರುತ್ತದೆ ಎಂಬ ಅರಿಸ್ಟಾಟಲ್‌ನ ಉಕ್ತಿಯಂತೆ ಆದಿಚುಂಚನಗಿರಿಯ 'ಕಾಲಭೈರವೇಶ್ವರ ಸಂಸ್ಕೃತ ವೇದಾಗಮ ಮಹಾವಿದ್ಯಾಲಯ'ದ ವಿದ್ಯಾರ್ಥಿಗಳು 16.05.2022 ರಂದು ಹಿಮಾಚಲ ಪ್ರದೇಶದಲ್ಲಿರುವ 12,030 ಎತ್ತರದ 'ಚಂದ್ರಕಣಿ ಪರ್ವತದ' ಚಾರಣ ಕೈಗೊಂಡಿದ್ದರು. ಶಿವನ ಸಾನಿಧ್ಯವೆಂದೇ ಖ್ಯಾತವಾಗಿರುವ ಹಿಮಾಲಯ ಪರ್ವತಗಳ ಚಾರಣವು ಆಧ್ಯಾತ್ಮಿಕ ಅನುಭೂತಿಯನ್ನು ನೀಡುವುದಲ್ಲದೆ, ಕಷ್ಟ ಸಹಿಷ್ಣತೆ, ಬದುಕಿನಲ್ಲಿ ತತಕ್ಷಣ ಎದುರಾಗುವ ಸವಾಲುಗಳನ್ನು ಎದುರಿಸುವ ಆತ್ಮ ಸ್ಥೈರ್ಯವನ್ನು ವೃದ್ಧಿಸಬಲ್ಲದು.

**8.6. ಹತ್ತನೇ ರಾಷ್ಟ್ರೀಯ ಮೆಮೊರಿ ಚಾಂಪಿಯನ್‌ಶಿಪ್:** ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ 'ವರ್ಲ್ಡ್ ಮೆಮೊರಿ ಸ್ಪೋರ್ಟ್ಸ್ ಕೌನ್ಸಿಲ್ ಫಾರ್ ಇಂಡಿಯಾ, ನವದೆಹಲಿ' ಸಹಭಾಗಿತ್ವದಲ್ಲಿ "ರಾಷ್ಟ್ರೀಯ ಮೆಮೊರಿ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಚಾಂಪಿಯನ್ ಶಿಪ್" ಅನ್ನು ದಿನಾಂಕ 12 ಮತ್ತು 13.10. 2019 ರಂದು ಚಿಕ್ಕಬಳ್ಳಾಪುರದ ಎಸ್.ಜೆ.ಸಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಯೋಜಿಸಿತ್ತು. ಇದರಲ್ಲಿ 190 ಮಂದಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ಮರಣಾ ಸ್ಪರ್ಧೆಗಳು ವಿದ್ಯಾರ್ಥಿಗಳ ಏಕಾಗ್ರತೆ, ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿ, ಕಲಿಕೆಯಲ್ಲಿ ಪ್ರಗತಿಯನ್ನು ತರಲು ಸಹಕಾರಿಯಾಗುತ್ತವೆ.

**8.7. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ಆಯೋಜಿಸಲಾದ ಕ್ರೀಡಾಕೂಟಗಳ ವಿವರ**

- 2002-02 ನೇ ಸಾಲಿನ 18ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ ಕ್ರೀಡಾಕೂಟವನ್ನು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ಶಿವಮೊಗ್ಗ ವಿಭಾಗವು ದಿನಾಂಕ 07-01-2003 ರಿಂದ 11-01-2003ರ ವರೆಗೆ ಶಿವಮೊಗ್ಗದ ನೆಹರು ಕ್ರೀಡಾಂಗಣದಲ್ಲಿ ನಡೆಸಿತು. ಕ್ರೀಡಾಕೂಟದಲ್ಲಿ 33 ರಾಜ್ಯಗಳ ಸಂಖ್ಯೆ 3864 ಸ್ಪರ್ಧಿಗಳು ಪಾಲ್ಗೊಂಡಿದ್ದರು.
- 14 ವರ್ಷದೊಳಗಿನ 32 ನೇ ರಾಷ್ಟ್ರೀಯ ಅತಿ ಕಿರಿಯರ ವಾಲಿಬಾಲ್ ಪಂದ್ಯಾವಳಿಗಳನ್ನು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್,ಶಿವಮೊಗ್ಗ ವಿಭಾಗವು ದಿನಾಂಕ 18-11-2009 ರಿಂದ 20-11-2009 ವರೆಗೆ ಶಿವಮೊಗ್ಗದ ನೆಹರು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು.
- 2016-17ನೇ ಸಾಲಿನ 19 ವರ್ಷದೊಳಗಿನ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಯುವಕರು ಹಾಗೂ ಯುವತಿಯರ ರಾಜ್ಯಮಟ್ಟದ ಖೋ-ಖೋ ಪಂದ್ಯಾವಳಿಯನ್ನು ದಿನಾಂಕ 10-11-2016 ಮತ್ತು 11-11-2016 ರಂದು ನಾಗಮಂಗಲ ತಾಲೂಕಿನ, ಆದಿಚುಂಚನಗಿರಿಯಲ್ಲಿರುವ "ಆದಿಚುಂಚನಗಿರಿಯ ಕೀಡಾಂಗಣ"ದಲ್ಲಿ ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳ 31 ಯುವಕರ ಹಾಗೂ 29 ಬಾಲಕಿಯರ ತಂಡಗಳು ಪಾಲ್ಗೊಂಡಿದ್ದವು.
- 2018-19 ನೇ ಸಾಲಿನ ರಾಜ್ಯಮಟ್ಟದ ಪದವಿಪೂರ್ವ ಕಾಲೇಜಿನ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಗಳನ್ನು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ಶಿವಮೊಗ್ಗ ವಿಭಾಗದವು ದಿನಾಂಕ 15-10-2018 ಮತ್ತು 16-10-2018 ರಂದು ಶಿವಮೊಗ್ಗದ "ಶ್ರೀ ಆದಿಚುಂಚನಗಿರಿ ಕ್ರೀಡಾಂಗಣದಲ್ಲಿ" ಆಯೋಜಿಸಲಾಗಿತ್ತು.
- 2018-19 ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ದಿನಾಂಕ 18-9-2018 ರಿಂದ 20-9-2018 ರವರೆಗೆ 'ಆದಿಚುಂಚನಗಿರಿಯಲ್ಲಿರುವ "ಆದಿಚುಂಚನಗಿರಿಯ ಕೀಡಾಂಗಣ"ದಲ್ಲಿ ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ 61 ಕಾಲೇಜುಗಳ ಒಟ್ಟು 1,200 ಕ್ರೀಡಾಪಟುಗಳು ಭಾಗವಹಿಸಿದ್ದಾರೆ.
- 2018-19 ನೇ ಸಾಲಿನ 17 ವರ್ಷದೊಳಗಿನ ಪ್ರೌಢಶಾಲಾ ಬಾಲಕ, ಬಾಲಕಿಯರ ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು 20-11-2018 ರಿಂದ 22-11-2018 ವರೆಗೆ ಆದಿಚುಂಚನಗಿರಿ ಯಲ್ಲಿರುವ ಆದಿಚುಂಚನಗಿರಿ ಕ್ರೀಡಾಂಗಣದಲ್ಲಿ ನಡೆಸಲಾಗಿತ್ತು. ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯದ 31 ಜಿಲ್ಲೆಗಳ 1980 ಸ್ಪರ್ಧಿಗಳು ಪಾಲ್ಗೊಂಡಿದ್ದರು.
- 2019- 20 ನೇ ಸಾಲಿನ 19 ವರ್ಷದೊಳಗಿನ ಪದವಿ ಪೂರ್ವ ಕಾಲೇಜುಗಳ ಯುವಕರು ಹಾಗೂ ಯುವತಿಯರ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿಯನ್ನು ದಿನಾಂಕ 3-10-2019ರ ಮತ್ತು 4-10-2019 ರಂದು 'ಆದಿಚುಂಚನಗಿರಿಯಲ್ಲಿರುವ "ಆದಿಚುಂಚನಗಿರಿಯ ಕ್ರೀಡಾಂಗಣ"ದಲ್ಲಿ ಆಯೋಜಿಸಲಾಗಿತ್ತು.
- 14 ಮತ್ತು 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ರಾಜ್ಯ ಮಟ್ಟದ ಕಬ್ಬಡಿ ಪಂದ್ಯಾವಳಿಯನ್ನು ದಿನಾಂಕ 18-10-2019 ರಿಂದ 20-10-2019 ರವರೆಗೆ ಆದಿಚುಂಚನಗಿರಿಯಲ್ಲಿರುವ 'ಆದಿಚುಂಚನಗಿರಿ ಕ್ರೀಡಾಂಗಣ'ದಲ್ಲಿ ಆಯೋಜಿಸಲಾಗಿತ್ತು. ಪಂದ್ಯಾವಳಿಯಲ್ಲಿ ಬಾಲಕ ಮತ್ತು ಬಾಲಕಿಯರ ತಲಾ 16 ತಂಡಗಳು ಭಾಗವಹಿಸಿದ್ದವು.
- 14 ವರ್ಷದೊಳಗಿನ ಮತ್ತು 17 ವರ್ಷದೊಳಗಿನ ವಿದ್ಯಾರ್ಥಿಗಳ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು 11-11-2019 ರಿಂದ 14-11-2019 ಆದಿಚುಂಚನಗಿರಿಯಲ್ಲಿರುವ ಆದಿಚುಂಚನಗಿರಿ ಕ್ರೀಡಾಂಗಣದಲ್ಲಿ ನಡೆಸಲಾಗಿತ್ತು. ಕ್ರೀಡಾಕೂಟದಲ್ಲಿ ಕರ್ನಾಟಕ ರಾಜ್ಯದ 31 ಜಿಲ್ಲೆಗಳ 14 ವರ್ಷದೊಳಗಿನ 1980 ಮತ್ತು 17 ವರ್ಷದೊಳಗಿನ 1980 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.
- 2019-20 ನೇ ಸಾಲಿನ 17 ವರ್ಷದೊಳಗಿನ 65ನೇ ರಾಷ್ಟ್ರಮಟ್ಟದ ಶಾಲಾ ಬಾಲಕರ ಹಾಗೂ ಬಾಲಕಿಯರ ಕಬಡ್ಡಿ ಪಂದ್ಯಾವಳಿ ಯನ್ನು ದಿನಾಂಕ 19-11-2019 ರಿಂದ 22-11-2019 ರವರೆಗೆ ಆದಿಚುಂಚನಗಿರಿಯಲ್ಲಿರುವ 'ಆದಿಚುಂಚನಗಿರಿ ಕೀಡಾಂಗಣ'ದಲ್ಲಿ ಆಯೋಜಿಸಲಾಗಿತ್ತು. ಕ್ರೀಡಾಕೂಟದಲ್ಲಿ 39 ಬಾಲಕರ ಮತ್ತು 39 ಬಾಲಕಿಯರ ತಂಡಗಳು ಪಾಲ್ಗೊಂಡಿದ್ದವು.
- 2018-19ನೇ ಸಾಲಿನ **14** ವರ್ಷದೊಳಗಿನ ರಾಷ್ಟ್ರೀಯ ಅತಿ ಕಿರಿಯರ ವಾಲಿಬಾಲ್ ಪಂದ್ಯಾವಳಿಗಳನ್ನು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್,ಶಿವಮೊಗ್ಗ ವಿಭಾಗವು ದಿನಾಂಕ 27-11-2018 ಮತ್ತು 28-11-2018 ರಂದು ಶಿವಮೊಗ್ಗದ "ಶ್ರೀ ಆದಿಚುಂಚನಗಿರಿ ಕ್ರೀಡಾಂಗಣ"ದಲ್ಲಿ ಆಯೋಜಿಸಿತ್ತು. ಪಂದ್ಯಾವಳಿಯಲ್ಲಿ 14 ಬಾಲಕರ ಮತ್ತು 14 ಬಾಲಕಿಯರ ತಂಡಗಳು ಪಾಲ್ಗೊಂಡಿದ್ದವು.
- 2022-23 ನೇ ಸಾಲಿನ 14 ಮತ್ತು 17 ವರ್ಷದೊಳಗಿನ ಬಾಲಕ - ಬಾಲಕಿಯರ ಮೈಸೂರು ವಿಭಾಗ ಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯನ್ನು ಆದಿಚುಂಚನಗಿರಿಯಲ್ಲಿರುವ 'ಆದಿಚುಂಚನಗಿರಿ ಕ್ರೀಡಾಂಗಣ'ದಲ್ಲಿ ದಿನಾಂಕ 15-11-2022 ರಂದು ಆಯೋಜಿಸಲಾಗಿತ್ತು. 14 ವರ್ಷ ವಯೋಮಿತಿಯಲ್ಲಿ 14 ತಂಡಗಳು ಹಾಗೂ 17 ವರ್ಷ ವಯೋಮಿತಿಯಲ್ಲಿ 14 ತಂಡಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.
- 2022-23ನೇ ಸಾಲಿನ 19 ವರ್ಷ ವಯೋಮಿತಿಯೊಳಗಿನ ರಾಜ್ಯಮಟ್ಟದ ಪದವಿ ಪೂರ್ವ ಕಾಲೇಜುಗಳ ಹ್ಯಾಂಡ್ ಬಾಲ್ ಪಂದ್ಯಾವಳಿಯನ್ನು ತುಮಕೂರು ಜಿಲ್ಲೆಯ, ಮಾಯಸಂದ್ರದಲ್ಲಿ ದಿನಾಂಕ 5-12-2022 ಮತ್ತು 6-12-2022 ರಂದು ಎಸ್‌ಬಿಜಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. 32 ಯುವಕರ ಮತ್ತು 32 ಯುವತಿಯರ ತಂಡಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.
- 2022-23 ನೇ ಸಾಲಿನ 19 ವರ್ಷದೊಳಗಿನ ಪದವಿ ಪೂರ್ವ ಕಾಲೇಜುಗಳ ಯುವಕ- ಯುವತಿಯರ ರಾಜ್ಯಮಟ್ಟದ ಕಬ್ಬಡಿ ಪಂದ್ಯಾವಳಿಯನ್ನು ಆದಿಚುಂಚನಗಿರಿಯಲ್ಲಿರುವ 'ಆದಿಶಕ್ತಿ ಮತ್ತು ಶಿವಶಕ್ತಿ ಸಮುದಾಯ ಭವನದಲ್ಲಿ ದಿನಾಂಕ 24-11-2022 ಮತ್ತು 25-11-2022 ರಂದು ಆಯೋಜಿಸಲಾಗಿತ್ತು. ಯುವಕರ 33 ಮತ್ತು ಯುವತಿಯರ 33 ತಂಡಗಳು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದವು.
- **ಚದುರಂಗ :** ಚದುರಂಗದಾಟವು ಮಕ್ಕಳ ಆಲೋಚನಾ ಶಕ್ತಿಯನ್ನು ವೃದ್ಧಿಸುತ್ತದೆ, ಏಕಾಗ್ರತೆ ಹೆಚ್ಚಿಸುತ್ತದೆ. ವೇಗವಾಗಿ ಆಲೋಚಿಸುವ

ISSN : 2249-2429 ಸಂಶೋಧನೆ RNI REG.NO.KARKAN/2011/38712

ಸಾಮರ್ಥ್ಯ ಹಾಗೂ ತಕ್ಷಣ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಆದ್ದರಿಂದ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಚೆಸ್ ಪಂದ್ಯಾವಳಿಯ ಆಯೋಜನೆಗೆ ಒತ್ತು ನೀಡುತ್ತಿದೆ.

- ಶ್ರೀ ಆದಿಚುಂಚನಗಿರಿ ಶಿವಮೊಗ್ಗ ಶಾಖಾ ಮಠವು ಕ್ರಿ.ಶ 2000 ಇಂದ ಕ್ರಿಸ್ತಶಕ 2007 ರವರೆಗೆ ಶಿವಮೊಗ್ಗದ ಶ್ರೀ ಆದಿಚುಂಚನಗಿರಿ ಆಂಗ್ಲ ಮಾಧ್ಯಮ ಸಂಯುಕ್ತ ಪ್ರೌಢಶಾಲೆಯಲ್ಲಿ 'ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಾಲಕ ಮತ್ತು ಬಾಲಕಿಯರಿಗೆ' ರಾಜ್ಯಮಟ್ಟದ ಚುಂಚಾದ್ರಿ ಚೆಸ್ ಪಂದ್ಯಾವಳಿಯನ್ನು ಆಯೋಗಿಸಿತ್ತು. ಪ್ರತಿ ಪಂದ್ಯಾವಳಿಗಳಲ್ಲೂ 500 ರಿಂದ 600 ಸ್ಪರ್ಧಿಗಳು ಭಾಗವಹಿಸುತ್ತಿದ್ದರು.
- ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಾಥಮಿಕ ಹಾಗೂ ಪ್ರೌಢಶಾಲಾ ಅಂಧ ಮಕ್ಕಳಿಗಾಗಿ "ಕರ್ನಾಟಕ ಸ್ಟೇಟ್ ಚೆಸ್ ಅಸೋಸಿಯೇಷನ್ ಫಾರ್ ದ ಬ್ಲೈಂಡ್"ನ ಸಹಯೋಗದಲ್ಲಿ ಕ್ರಿ.ಶ 2000 ಇಂದ ಕ್ರಿಸ್ತಶಕ 2007 ರವರೆಗೆ "ಚುಂಚಾದ್ರಿ ಅಂಧ ಮಕ್ಕಳ ಚೆಸ್ ಪಂದ್ಯಾವಳಿ" ಆಯೋಜಿಸುತ್ತಿತ್ತು. 100ರಿಂದ 150 ವಿದ್ಯಾರ್ಥಿಗಳು ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು.
- 14 ಮತ್ತು 17 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರಿಗೆ ರಾಜ್ಯಮಟ್ಟದ ಚೆಸ್ ಪಂದ್ಯಾವಳಿಯನ್ನು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್, ಶಿವಮೊಗ್ಗ ವಿಭಾಗವು ದಿನಾಂಕ 22.10.2019 ರಂದು ಶಿವಮೊಗ್ಗದ ಶರಾವತಿ ನಗರದಲ್ಲಿರುವ ಶ್ರೀ ಆದಿಚುಂಚನಗಿರಿ ಸಮುದಾಯ ಭವನದಲ್ಲಿ ನಡೆಸಿತು. 14 ವರ್ಷದೊಳಗಿನ ವಿದ್ಯಾರ್ಥಿಗಳ ಚೆಸ್ ಪಂದ್ಯಾವಳಿಯಲ್ಲಿ 31 ಜಿಲ್ಲೆಗಳ 310 ಬಾಲಕರು ಮತ್ತು 310 ಬಾಲಕಿಯರು ಹಾಗೂ 17 ವರ್ಷದೊಳಗಿನ ವಿದ್ಯಾರ್ಥಿಗಳ ಚೆಸ್ ಪಂದ್ಯಾವಳಿಯಲ್ಲಿ 31 ಜಿಲ್ಲೆಗಳ 310 ಬಾಲಕರು ಮತ್ತು 310 ಬಾಲಕಿಯರು ಭಾಗವಹಿಸಿದ್ದರು.

**8.8. ಕ್ರೀಡಾಂಗಣಗಳ ಅಭಿವೃದ್ಧಿ :** ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸಿಕೊಂಡು ಬರುತ್ತಿದ್ದು; ಅದಕ್ಕೆ ಪೂರಕವಾಗಿ ಕ್ರೀಡಾಂಗಣಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ.

**8.8.1. ಬಿಜಿಎಸ್ ಅಂತರಾಷ್ಟ್ರೀಯ ಕ್ರಿಕೆಟ್ ಕೀಡಾಂಗಣ** : ಬೆಂಗಳೂರಿನ ಕುಂಬಳಗೋಡಿನಲ್ಲಿ ಅಂತರಾಷ್ಟ್ರೀಯ ದರ್ಜೆಯ 'ಬಿಜಿಎಸ್ ಕ್ರಿಕೆಟ್ ಸ್ಟೇಡಿಯಂ' ಅನ್ನು ನಿರ್ಮಿಸಿದೆ. ಇದು 10,000 ಮಂದಿ ವೀಕ್ಷಕರು ಕುಳಿತುಕೊಳ್ಳಬಹುದಾದ ಆಸನ ವ್ಯವಸ್ಥೆಯನ್ನು ಹೊಂದಿದೆ. ಇಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ 6 ಅಂತಾರಾಷ್ಟ್ರೀಯ ಗುಣಮಟ್ಟದ ಟರ್ಫ್ ವಿಕೆಟ್‌ಗಳನ್ನು ಸಿದ್ಧಪಡಿಸಿದೆ.

**8.8.2.** ಆದಿಚುಂಚನಗಿರಿಯಲ್ಲಿ " ಆದಿಚುಂಚನಗಿರಿ ಕ್ರೀಡಾಂಗಣ", ಶಿವಮೊಗ್ಗದಲ್ಲಿ ಆದಿಚುಂಚನಗಿರಿ ಕ್ರೀಡಾಂಗಣ ಮತ್ತು ಬಿಜಿ ನಗರದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಕ್ರೀಡಾಂಗಣ ಅಭಿವೃದ್ಧಿಪಡಿಸಲಾಗಿದೆ ಮತ್ತು ಶಾಲಾ ಕಾಲೇಜುಗಳ ಮೈದಾನಗಳನ್ನು ಅಭಿವೃದ್ಧಿಪಡಿಸಲಾಗಿದೆ.

**8.9. ಬಿಜಿಎಸ್ ಸ್ಪೋರ್ಟ್ಸ್ ಅಕಾಡೆಮಿ :** ನಿತ್ಯಾನಂದನಗರದಲ್ಲಿ ಬಿಜಿಎಸ್ ಸ್ಪೋರ್ಟ್ಸ್ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಗಾಲ್ಫ್, ಕ್ರಿಕೆಟ್, ಈಜು, ಫುಟ್‌ಬಾಲ್, ವಾಲಿಬಾಲ್, ಬೌಲಿಂಗ್ ಅರೇನಾ, ಟೆನಿಸ್, ಬಾಸ್ಕೆಟ್‌ಬಾಲ್, ಅಥ್ಲೆಟಿಕ್ಸ್, ಯೋಗ, ಕರಾಟೆ, ಕಬಡ್ಡಿ, ಇತ್ಯಾದಿ ಕ್ರೀಡಾ ಪ್ರಕಾರಗಳಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

**8.10. ಸಾಮೂಹಿಕ ಕವಾಯತು ಹಾಗೂ ಪಥಸಂಚಲ :** ಶಿಕ್ಷಣ ಟ್ರಸ್ಟ್‌ನ ಶಾಲೆಗಳಲ್ಲಿ ಪ್ರತಿ ಶನಿವಾರ ವಿದ್ಯಾರ್ಥಿಗಳಿಗೆ ಸಾಮೂಹಿಕ ಕವಾಯತ್ತನ್ನು ಮಾಡಿಸುತ್ತವೆ. ಕವಾಯತು ಮಕ್ಕಳ ದೈಹಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವದಲ್ಲಿ ವಿದ್ಯಾರ್ಥಿಗಳಿಂದ ಪಥ ಸಂಚಲನವನ್ನು ಮಾಡಿಸಲಾಗುತ್ತದೆ. ಇದು ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಸಮನ್ವಯತೆಗೆ ಕಾರಣವಾಗುತ್ತದೆ.

**8.11. ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಕ್ರಿಕೆಟ್ ಪಂದ್ಯಾವಳಿ :** ಆದಿಚುಂಚನಗಿರಿ ವಿಶ್ವವಿದ್ಯಾನಿಲಯು ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ದಿನಾಂಕ 25–2–2019 ರಿಂದ 11–3–2019 ರವರೆಗೆ ಬಿಜಿ ನಗರದಲ್ಲಿರುವ "ಆದಿಚುಂಚನಗಿರಿ ಕ್ರೀಡಾಂಗಣ"ದಲ್ಲಿ ಆಯೋಜಿಸಿತ್ತು.

## 8.12. ದಿವ್ಯಾಂಗರ ಕ್ರೀಡೆಗೆ ಪ್ರೋತ್ಸಾಹ

8.12.1. ರಾಮನಗರದ ಅರ್ಚಕರ ಹಳ್ಳಿಯಲ್ಲಿರುವ ಜಗದ್ಗುರು ಬಾಲಗಂಗಾಧರನಾಥ ಸ್ವಾಮೀಜಿ ಅಂಧರ ವಸತಿ ಶಾಲೆಯು ವಿದ್ಯಾರ್ಥಿಗಳ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹಿಸುತ್ತಿದ್ದು, ವಿದ್ಯಾರ್ಥಿಗಳು ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ, ಬಹುಮಾನಗಳನ್ನ ಗಳಿಸಿದ್ದಾರೆ.

- ಶ್ರೀ ಶಾರದಾ ಅಂಧರ ವಿಕಾಸ ಕೇಂದ್ರ ಸಂಸ್ಥೆಯು ದಿನಾಂಕ 5–4–1994 ರಂದು ಶಿವಮೊಗ್ಗದಲ್ಲಿ ಆಯೋಜಿಸಿದ ದಕ್ಷಿಣ ವಲಯ ಚೆಸ್ ಸ್ಪರ್ಧೆಯಲ್ಲಿ ಎಂ. ಎನ್. ಧನಂಜಯ ದ್ವಿತೀಯ ಬಹುಮಾನವನ್ನು ಪಡೆದುಕೊಂಡಿದ್ದಾರೆ
- 25–12–2018 ರಿಂದ 27–12–2008 ರ ವರೆಗೆ ಚಿಕ್ಕಬಳ್ಳಾಪುರದಲ್ಲಿ ನಡೆದ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗಳ ವಿಭಾಗ ಮಟ್ಟದ ಶಾಲಾ ಕಾಲೇಜುಗಳ ಕ್ರೀಡಾಕೂಟದಲ್ಲಿ ಸಾಮಾನ್ಯ ವಿದ್ಯಾರ್ಥಿಗಳೊಡನೆ ಸ್ಪರ್ಧಿಸಿ 200 ಮೀಟರ್ ಓಟ, ಶಾಟ್ ಪುಟ್, ಚೆಸ್ ಮತ್ತು ಯೋಗಾಸನದಲ್ಲಿ ಬಹುಮಾನಗಳಿಸಿದ್ದಾರೆ
- ಚಂಡಿಗಡದ ಪಂಚಕುಲದಲ್ಲಿ ದಿನಾಂಕ 26–12–2010 ರಿಂದ 29–12–10ರ ವರೆಗೆ ನಡೆದ ರಾಷ್ಟ್ರೀಯ ಅಂಧ ಮಕ್ಕಳ ಕ್ರೀಡಾಕೂಟದಲ್ಲಿ ಮೋಹನ್ ಕುಮಾರ್ ಗುಂಡು ಎಸೆತದಲ್ಲಿ ದ್ವಿತೀಯ ಬಹುಮಾನವನ್ನು ಗಳಿಸಿದ್ದಾರೆ ಮತ್ತು ಆಕರ್ಶ 1500 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.
- ಚಿತ್ರದುರ್ಗದಲ್ಲಿ ದಿನಾಂಕ 8–10–2013 ರಿಂದ 10–10–2013 ವರೆಗೆ ನಡೆದ ಜಮೂರ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸಂಜು ಬೆಸ್ಟ್ ವಿಕೆಟ್ ಕೀಪರ್ ಪ್ರಶಸ್ತಿ ಪಡೆದಿದ್ದಾರೆ
- ಸ್ಪೆಷಲ್ ಒಲಂಪಿಕ್ ಸಂಸ್ಥೆಯು ರಾಮನಗರ ತಾಲೂಕಿನ ಅವ್ವೇರಹಳ್ಳಿ ಪ್ರೌಢಶಾಲಾ ಮೈದಾನದಲ್ಲಿ ದಿನಾಂಕ 16 ಮತ್ತು 17–7–2016 ರಂದು ಆಯೋಜಿಸಿದ್ದ ವಿಕಲಚೇತನರ ಕ್ರೀಡಾಕೂಟದಲ್ಲಿ ಶಾಲೆಗೆ ಸಮಗ್ರ ಪ್ರಶಸ್ತಿ ಲಭಿಸಿದೆ.
- ಬೆಂಗಳೂರಿನಲ್ಲಿ ದಿನಾಂಕ 4–8–2017 ರಂದುನಡೆದ ರಾಜಕುಮಾರ ಮೆಮೋರಿಯಲ್ ರಾಷ್ಟಮಟ್ಟದ ಮುಕ್ತ ಯೋಗಸನ ಸ್ಪರ್ಧೆಯಲ್ಲಿ ಯಲ್ಲಪ್ಪ ಪ್ರಥಮ ಸ್ಥಾನ ಗಳಿಸಿದ್ದಾರೆ

**8.12.2. ಶ್ರೀಮತಿ ಪುಟ್ಟ ವೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿನಿಯರ ಕ್ರೀಡಾ ಸಾಧನೆಗಳು :** ಮೈಸೂರಿನಲ್ಲಿರುವ ಶ್ರೀಮತಿ ಪುಟ್ಟ ವೀರಮ್ಮ ಕಿವುಡು ಹೆಣ್ಣು ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿನಿಯರು 'ಜಿಲ್ಲಾ ಅಂಗವಿಕಲರ ಕಲ್ಯಾಣ ಇಲಾಖೆ' ಮೈಸೂರಿನಲ್ಲಿ 'ಚಾಮುಂಡಿ ಕ್ರೀಡಾಂಗಣ'ದಲ್ಲಿ ಆಯೋಜಿಸುವ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಸ್ಪರ್ಧಿಸಿ, ಬಹುಮಾನಗಳನ್ನು ಗಳಿಸಿದ್ದಾರೆ.

ISSN : 2249-2429 ಸಂಶೋಧನೆ RNI REG.NO.KARKAN/2011/38712

**ಪ್ರತಿಫಲನ :** ಕ್ರೀಡೆಗಳು ದಿವ್ಯಾಂಗರ ಬದುಕಿನಲ್ಲಿ ಸಂತೋಷವನ್ನು, ಬದುಕನ್ನು ಆಸ್ವಾದಿಸುವ ಅವಕಾಶವನ್ನು ಕಲ್ಪಿಸಿ ಕೊಡುತ್ತಿವೆ. ಕ್ರೀಡಾಕೂಟಗಳಲ್ಲಿ ಅಂಥ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳೊಡನೆ ಸ್ಪರ್ಧಿಸಿ, ಬಹುಮಾನಗಳಿಸಿರುವುದು ನಿಜಕ್ಕೂ ಪ್ರಶಂಸನೀಯವಾಗಿದೆ. ಇಂತಹ ಸಾಧನೆಗಳು ಅವರ ಆತ್ಮವಿಶ್ವಾಸವನ್ನು ವೃದ್ಧಿಸಲು ಸಹಕಾರಿಯಾಗುತ್ತವೆ.

**8.12.3. ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳ ಕ್ರೀಡಾ ಸಾಧನೆಗಳು**

- ಭದ್ರಾವತಿಯ ಬಿಜಿಎಸ್ ಗುರುಕುಲ ಸ್ವತಂತ್ರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿ ಪ್ರಿಯಲಕ್ಷ್ಮಿ ವಿ. 2020ರಲ್ಲಿ ದೆಹಲಿಯಲ್ಲಿ ನಡೆದ ಟೆಕ್ವಾಂಡೊ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ
- SBG ಪದವಿ ಪೂರ್ವ ಕಾಲೇಜಿನ ಬಾಲಕರು ದಿನಾಂಕ 5-12-2022 ಮತ್ತು 6-12-2022 ರಂದು ಮಾಯಸಂದ್ರದಲ್ಲಿ ನಡೆದ ರಾಜ್ಯಮಟ್ಟದ ಹ್ಯಾಂಡ್ ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಹಾಂಗ್ ಕಾಂಗ್‌ನಲ್ಲಿ 20 ರಿಂದ 22-12-2018 ರವರೆಗೆ ನಡೆದ 27 ನೇ ವಿಶ್ವ ಮೆಮೊರಿ ಚಾಂಪಿಯನ್‌ಶಿಪ್‌ನಲ್ಲಿ, ಬಿಜಿಎಸ್ ವರ್ಲ್ಡ್ ಸ್ಕೂಲ್ ನ ಅನನ್ಯ ಎನ್. ಸ್ವಾಮಿ 'ಇಂಟರ್ನ್ಯಾಷನಲ್ ಮಾಸ್ಟರ್ ಆಫ್ ಮೆಮೊರಿ' ಬಿರುದನ್ನು ಪಡೆದುಕೊಂಡಿದೆ.

**8.13. ಉಪಸಂಹಾರ :** ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಶಿಕ್ಷಣ ಟ್ರಸ್ಟ್ ಪ್ರತಿ ವರ್ಷವೂ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ "ರಾಜ್ಯಮಟ್ಟದ ಕ್ರೀಡಾಕೂಟ"ವನ್ನು ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸುತ್ತಿದೆ. ಅಂತರಾಷ್ಟ್ರೀಯ ಯೋಗ ದಿನಾಚರಣೆ, ಸಾಹಸ ಕ್ರೀಡೆಗಳಿಗೆ ಪ್ರೋತ್ಸಾಹ, ರಾಷ್ಟ್ರೀಯ ಮೆಮೊರಿ ಚಾಂಪಿಯನ್ ಶಿಪ್ ಯೋಜನೆ, ಹೊಸ ಕ್ರೀಡಾಂಗಣಗಳನ್ನು ನಿರ್ಮಿಸುತ್ತಿದ್ದು, ದಿವ್ಯಾಂಗರ ಕ್ರೀಡೆಗೆ ವಿಶೇಷ ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ.

## ಪರಾಮರ್ಶನ ಗ್ರಂಥಗಳು


- ಕ್ರೀಡಾ ದರ್ಶನ 2017-18, ಶ್ರೀ ಆದಿಚುಂಚನಗಿರಿ ಪ್ರಕಾಶನ, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮಂಡ್ಯ ಜಿಲ್ಲೆ ಶ್ರೀ ಆದಿಚುಂಚನಗಿರಿ ಕ್ಷೇತ್ರ.
- **ಗಜೇಂದ್ರ ಸ್ವಾಮಿ (ಸಂ) (2022)** : ರಜತ ಚುಂಚಾದ್ರಿ ಕ್ರೀಡೋತ್ಸವ 2022 ಸ್ಮರಣಿಕೆ, ಶಿವಮೊಗ್ಗ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ).
- **ಪೂಜ್ಯ ಶ್ರೀ ಶ್ರೀ ಪ್ರಸನ್ನ ಸ್ವಾಮೀಜಿಗಳು (ಶ್ರೀ.ಸಂ) (2022) :** ಚುಂಚದ್ರಿ ಅಕ್ಷರದೊಕ್ಕಲು-2, ಶಿವಮೊಗ್ಗ ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ).


■■

*– 62ನೇ ಪುಟದಿಂದ ಮುಂದುವರೆದುದು*

ಬಂದಿತ್ತು ಎನ್ನುವುದನ್ನು ಗುರುತಿಸುವ ತಿಮ್ಮಪ್ಪಯ್ಯನವರು ಭರತ ಬಾಹುಬಲಿಯರಲ್ಲಿನ ಭೋಗದಿಂದ ವಿರಕ್ತಿಯೆಡೆಗಿನ ಪಯಣವನ್ನು 'ರಸಪ್ರವಾಹ' ಎಂದು ಕರೆದಿದ್ದಾರೆ. ತಿಮ್ಮಪ್ಪಯ್ಯನವರು ಆದಿಪುರಾಣದಲ್ಲಿನ ನವರಸಗಳ ಪರಿಶೀಲನೆ ಮಾಡಿ, "ಆದಿಪುರಾಣದ ರಸೋದ್ಗಮ ಸ್ಥಾನ ಯಾವುದು? ಎಂಬ ಪ್ರಶ್ನೆಯನ್ನು ಎತ್ತುವುದರೊಂದಿಗೆ ಅದನ್ನು ಲೌಕಿಕ, ಲೌಕಿಕಾಲೌಕಿಕ ರಸ ಮತ್ತು ಅಲೌಕಿಕ ರಸ(ಸಿದ್ಧರಸ) ಎಂಬ ಸೂಕ್ಷ್ಮ ಪರಿಭಾವನೆಗೆ ಒಡ್ಡಿದ್ದಾರೆ" (ಮಹಾಮಾರ್ಗ, ಪು-439) ಎನ್ನುವುದು ಶ್ರೀಕಂಠ ಕೂಡಿಗೆ ಅವರ ಅಭಿಪ್ರಾಯವಾಗಿದೆ. ಆರಂಭಿಕ ಭವಗಳಾದ ಲಲಿತಾಂಗ ಮತ್ತು ವಜ್ರಜಂಘರದ್ದು ಲೌಕಿಕ ರಸದ ಪರಮೋಚ್ಚ ಸುಖದ ಹಂತವಾದರೆ ಮಧ್ಯದ ಭವಗಳದ್ದು ಲೌಕಿಕಾಲೌಕಿಕ ರಸಾಸ್ವಾದನೆಯ ಹಂತ. ಈ ಪೂರ್ವಭವಗಳ ಸುಖಪರಾಕಾಷ್ಠತೆಯಿಂದಲೇ ವೃಷಭನಾಥನು ಅಲೌಕಿಕ ರಸಸಿದ್ಧಿಯ ಹಂತವನು ಏರಲು ಮತ್ತು ತೀರ್ಥಂಕರತ್ವವನ್ನು ಪಡೆಯಲು ಸಾಧ್ಯವಾಯಿತು ಎಂಬ ರಸಜಿಜ್ಞಾಸೆಯ ವಿವೇಚನೆಯು ವಿಶಿಷ್ಟವಾದುದು. ಆಗಮಿಕ ಕಾವ್ಯಗಳ ಅಧ್ಯಯನದಲ್ಲಿ ತಿಮ್ಮಪ್ಪಯ್ಯನವರ ಈ ಅಧ್ಯಯನದ ಬಗೆ ಮಾದರಿಯಾಗಿ ನಿಲ್ಲಬಲ್ಲದು.

ಮುಳಿಯ ತಿಮ್ಮಪ್ಪಯ್ಯನವರು 'ಸಮಸ್ತಭಾರತ ಶೈಲಿ' ಎಂಬ ಭಾಗದಲ್ಲಿ ವಿಕ್ರಮಾರ್ಜುನವಿಜಯಂ ಕಾವ್ಯವನ್ನು ಪಠ್ಯವಿಶ್ಲೇಷಣೆಯ ಮಾದರಿಗಿಂತ ಭಿನ್ನವಾಗಿ ಕವಿಯೇ ತನ್ನ ಕಾವ್ಯದ ಶ್ರೇಷ್ಠತೆಯನ್ನು ತೋರಿಸುವ ಜಾಡಿನಲ್ಲಿ ಕಾವ್ಯವನ್ನು ವಿಮರ್ಶೆಗೆ ಒಳಪಡಿಸುವರು. ಈ ಮಾತು ಕೇವಲ ಪಂಪಭಾರತಕ್ಕೆ ಮಾತ್ರಕ್ಕೆ ಅನ್ವಯವಾಗದೆ ಆದಿಪುರಾಣಕ್ಕೂ ಅನ್ವಯವಾಗುತ್ತದೆ. ಅವರು ಪಂಪನು ಹೇಳಿದ ತಗುಳ್ಚಿ ಹೇಳಿದ ಕಥೆ, ಸಮಸ್ತಭಾರತ ಎಂಬ ಸುಳಿವಿನಿಂದಲೇ ಅರಿಕೇಸರಿಯ ವಂಶಶಾಖೆಯ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಇಲ್ಲಿ "ಚಲದೊಳ್ ದುರ್ಯೋಧನಂ ನನ್ನಿಯೊಳ್ ಇನತನಯಂ...ಇವರ್ಗಳಿನ್ ಈ ಭಾರತಂ ಲೋಕಪೂಜ್ಯಂ"(ಪಂಭಾ;14-64) ಎಂಬ ಪಂಪಭಾರತ ಕೊನೆಯ ಪದ್ಯದ ಹಿನ್ನೆಲೆಯಲ್ಲಿಯೇ ಪಂಪನ ಭಾರತದ ಲೋಕಪೂಜ್ಯತೆಗೆ ಕಾರಣರಾದ ದುರ್ಯೋಧನ, ಕರ್ಣ, ಭೀಮ, ಶಲ್ಯ, ಭೀಷ್ಮ. ದ್ರೋಣ, ಅರ್ಜುನ ಮತ್ತು ಧರ್ಮರಾಯರ ಪಾತ್ರಗಳ ಗುಣಸ್ವಭಾವಗಳ ವೈಶಿಷ್ಟ್ಯತೆಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಒಟ್ಟಾರೆ, ಮುಳಿಯ ತಿಮ್ಮಪ್ಪಯ್ಯನವರ 'ನಾಡೋಜ ಪಂಪ' ಗ್ರಂಥವು ಕನ್ನಡಿಗರ ಅಸ್ಮಿತೆಯಾದ ಪಂಪನ ಸರಿಯಾದ ನೆಲೆಯನ್ನು ಗುರುತಿಸಿ ತೋರಿಸುವುದರೊಂದಿಗೆ, ಅವನ ಆಶ್ರಿತದಾತನಾದ ಅರಿಕೇಸರಿಯ ಚರಿತ್ರೆಯನ್ನೂ, ಸಮಸ್ತಭಾರತ ಮತ್ತು ಅದರ ಕಾಲವನ್ನೂ, ಅವನ ಕಾವ್ಯಗಳ ವಿವರವಾದ ವಿಶ್ಲೇಷಣೆಯನ್ನೂ ಕಟ್ಟಿಕೊಡುತ್ತದೆ. ಈ ನಿಟ್ಟಿನಲ್ಲಿ, ಒಬ್ಬ ಕವಿ, ಆತನ ಕಾವ್ಯ ಹಾಗೂ ಆಶ್ರಯದಾತನನ್ನು ಕುರಿತು ಇಷ್ಟೊಂದು ವಿಸ್ತಾರವಾಗಿ ಅಧ್ಯಯನ ಮಾಡಿದ ಕೃತಿಗಳು ಕನ್ನಡ ಸಂಶೋಧನಾ ಮತ್ತು ವಿಮರ್ಶಾ ವಲಯದಲ್ಲಿ ಅಪರೂಪ ಎನ್ನಬಹುದು.

## ಪರಾಮರ್ಶನ ಗ್ರಂಥಗಳು


- **ಮುಳಿಯ ತಿಮ್ಮಪ್ಪಯ್ಯ (2011) :** ನಾಡೋಜ ಪಂಪ, ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- **ಒಡೆಯರ್ ಎಸ್. ಎಸ್. ಸಂ. (1969) :** ಮಹಾಕವಿ ಪಂಪ ಹಾಗೂ ಅವನ ಕೃತಿಗಳು, ಆರು ಉಪನ್ಯಾಸಗಳು, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ,
- **ಕನವಳ್ಳಿ ಸದಾನಂದ ಮತ್ತು ರಾಜೂರ ವೀರಣ್ಣ, ಸಂ. (1995) :** ಮಹಾಮಾರ್ಗ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ ಗದಗ ಮತ್ತು ಬೆಳಗಾವಿ ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ.
- **ಶಿವರುದ್ರಪ್ಪ ಜಿ. ಎಸ್. ಸಂ. (2016) :** ಪಂಪ : ಒಂದು ಅಧ್ಯಯನ, ಬೆಂಗಳೂರು ಸಪ್ನ ಬುಕ್ ಹೌಸ್.


■■

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

# ಭಾರತದ ಸಂವಿಧಾನ ಶಿಲ್ಪಿ ಮತ್ತು ಅತ್ಯುತ್ತಮ ಶಿಕ್ಷಣ ಚಿಂತಕರಾಗಿ ಡಾ.ಬಿ.ಆರ್. ಅಂಬೇಡ್ಕರ್

✍ ಡಾ. ರವಿ ಹೆಚ್. ಸಹಾಯಕ ಪ್ರಾಧ್ಯಾಪಕರು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ



ನಮ್ಮ ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವ ಈ ಸುಸಂದರ್ಭದಲ್ಲಿ ದೇಶಕ್ಕಾಗಿ ದುಡಿದು ಮಡಿದ ಹಾಗೂ ನವಭಾರತ ನಿರ್ಮಾಣಕ್ಕಾಗಿ ಶ್ರಮಿಸಿದ ಪ್ರತಿಭಾನ್ವಿತ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಅತ್ಯುತ್ತಮ ಸಂಸದೀಯ ಪಟು ಡಾ. ಬಿ.ಆರ್ ಅಂಬೇಡ್ಕರ್‌ರವರನ್ನು ಕುರಿತು ಓದಿ, ತಿಳಿದು ಅರ್ಥೈಸಿಕೊಳ್ಳುವುದು ಎಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸುತ್ತೇನೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಜನಿಸಿ, ಸ್ವತಂತ್ರ ಭಾರತದ ಭವಿಷ್ಯವನ್ನು ರೂಪಿಸುವಲ್ಲಿ ಮತ್ತು ರಾಷ್ಟ್ರದ ಜೀವನದ ಮೇಲೆ ಮತ್ತು ರಾಜ್ಯ ವ್ಯವಸ್ಥೆಯ ಮೇಲೆ ಅಳಿಸಲಾಗದ ಮುದ್ರೆಯನ್ನು ಅಂಕಿತಗೊಳಿಸಿದ ಮಹಾನುಭಾವರ ತಾರಾಮಂಡಲದಲ್ಲಿ ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರ ಹೆಸರು ಒಂದು ಉಜ್ವಲ ನಕ್ಷತ್ರ. ಅವರು ನಮ್ಮ ಸಂವಿಧಾನದ ರುವಾರಿ. ಸದಾ ದಲಿತರ ಆಂದೋಲನದ ಸೇನಾನಿ. ಸಕಲ ವಿಧದ ಸಾಮಾಜಿಕ ಮತ್ತು ಆರ್ಥಿಕ ವಿಷಮತೆಗಳ ಮತ್ತು ಅನಿಷ್ಟಗಳ ವಿರುದ್ಧ ಹೋರಾಡಿದ ಬಂಡುಗಾರ. ಮಹಾತ್ಮ ಗಾಂಧೀಜಿಯವರಿಂದ "ಅಪ್ಪಟ ದೇಶಾಭಿಮಾನಿ" ಎಂದು ಪ್ರಶಂಸೆಗೆ ಪಾತ್ರರಾದವರು. ಡಾ. ಬಿ. ಆರ್. ಅಂಬೇಡ್ಕರ್ ತಮ್ಮ ಪ್ರಸಿದ್ಧಿಯ ಉತ್ತುಂಗ ಶಿಖರಕ್ಕೇರಿದ್ದು, ಭಾಗ್ಯ ಬಲದಿಂದಾಗಲಿ, ಅಕಸ್ಮಾತ್ ಒದಗಿದ ಸನ್ನಿವೇಶಗಳಿಂದಾಗಲಿ ಅಲ್ಲ. ತಮ್ಮ ವ್ಯಕ್ತಿವಿಶೇಷ, ನಿರಂತರ ಹೋರಾಟ, ಅನುಪಮ ತ್ಯಾಗದ, ಅಪಾರ ನಿಸ್ವಾರ್ಥದ, ಆಳವಾದ ಪಾಂಡಿತ್ಯದ, ಅನನ್ಯ ನಿಷ್ಠೆಯ, ಅಸೀಮ ಏಕನಿಷ್ಠೆಯ ಮತ್ತು ಅಪೂರ್ವ ಬದ್ಧತೆಯ ಬಲದಿಂದಲೇ ಅವರು ಪ್ರಖ್ಯಾತರಾದದ್ದು, ಲೋಕ ವಿಖ್ಯಾತರಾದದ್ದು. ಅವರ ಅಭಿಮಾನಿಗಳೂ ಅನುಯಾಯಿಗಳೂ ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರನ್ನು ಪ್ರೀತಿಯಿಂದ ಬಾಬಾಸಾಹೇಬ್ ಎಂದು ಕರೆಯುತ್ತಾರೆ.

ಅವರು ಹುಟ್ಟಿದ್ದು ಮಧ್ಯಪ್ರದೇಶದ ಮಾಹೌ ಊರಿನಲ್ಲಿ, 1891ನೇ ಇಸವಿ ಏಪ್ರಿಲ್ 14ನೇ ತಾರೀಖಿನಂದು. ತಂದೆ ರಾಮಜಿ ಮಾಲೋಜಿ ಸಕ್ಪಾಲ್, ತಾಯಿ ಭೀಮಾಬಾಯಿ. ಅವರು ಹಿಂದೂ ಅಸ್ಪೃಶ್ಯ ಜಾತಿಗಳ ಪೈಕಿ ಮಹಾರ್ ಜಾತಿಗೆ ಸೇರಿದವರಾಗಿದ್ದರಿಂದ ತಮ್ಮ ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಅಭ್ಯಾಸದಲ್ಲಿ ಅನುಭವಿಸಿದ ನೋವು, ಅಸಮಾಧಾನ ಮತ್ತು ಟೀಕೆಗಳಿಂದಾಗಿ ಸಾಕಷ್ಟು ವಿಚಲಿತರಾಗಿದ್ದರೂ ಎಂದೂ ಎದೆಗುಂದದೇ ತಮ್ಮ ತಂದೆ ತಾಯಿಯರ ಧರ್ಮ ಬೀರುತನ, ಉದಾರತನ, ಸ್ವಾವಲಂಬಿತನ, ಗುರು ಹಿರಿಯರಲ್ಲಿ ಶ್ರದ್ಧೆಯಂತಹ ಗುಣಗಳು ಅವರನ್ನು ಹೆಚ್ಚು ಸದೃಢರನ್ನಾಗಿಸಿದ್ದವು. ಅಲ್ಲದೇ ತಂದೆಯವರು ಹಾಡುತ್ತಿದ್ದ ಭಕ್ತಿಗೀತೆಗಳು, ಹೇಳುತ್ತಿದ್ದ ರಾಮಾಯಣ ಮಹಾಭಾರತದ ಕಥೆಗಳು ಮತ್ತು ಮನೆಯಲ್ಲಿದ್ದ ಪರಿಶುದ್ಧ ಹಾಗೂ ಧಾರ್ಮಿಕ ವಾತಾವರಣವು ಭೀಮರಾವ್‌ರವರ ಎಳೆ ಮನಸ್ಸಿನ ಮೇಲೆ ಸುಧೀರ್ಘವಾದ ಹಾಗೂ ಆಳವಾದ ಪ್ರಭಾವವನ್ನು ಅಚ್ಚೊತ್ತಿರುವಂತೆ ತೋರುತ್ತದೆ. ಆ ಮೂಲಕವೇ ಕಾಲಾಂತರದಲ್ಲಿ ನಿಸ್ವಾರ್ಥ ಸೇವೆಯ, ಸೋದರ ಭಾವನೆಯ, ಎಡಬಿಡದ ಪರಿಶ್ರಮದ ಮತ್ತು ನಿರಂತರ ಪ್ರಯತ್ನದ ಗುಣಗಳು ಭೀಮರಾವ್‌ರವರ ಮನಸ್ಸಿನ ಮೇಲೆ ಆಳವಾಗಿ ಬೇರೂರಿದ್ದವು.

ಅನೇಕ ಕಷ್ಟ ಕಾರ್ಪಣ್ಯಗಳ ನಡುವೆಯೂ ಭೀಮ್‌ರಾವ್ ಅಂಬೇಡ್ಕರ್‌ರವರು ಪಡೆದ ಪದವಿ, ಓದಿದ ಅಧ್ಯಯನಗಳು ಅಗಣಿತ ಮತ್ತು ಅನನ್ಯವಾದುದು. ದೇಶ ವಿದೇಶಗಳಲ್ಲಿ ಅಭ್ಯಾಸ ಮಾಡಿ ಜಗತ್ತಿನ ಎಲ್ಲಾ ಜ್ಞಾನವನ್ನು ಪಡೆದುಕೊಂಡು ಅನ್ಯಾಯಗಳು, ಅಸಮಾನತೆಗಳು ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ಧ ನಿರಂತರ ಹೋರಾಡಿ 'ಸರ್ವರಿಗೂ ಸಮಪಾಲು ಮತ್ತು ಸರ್ವರಿಗೂ ಸಮಬಾಳು' ಕಲ್ಪನೆಗೆ ಪೂರಕವಾಗಿ ದೇಶದ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಮಾಡಿದರಲ್ಲದೇ, ತತ್ವಗಳಿಗೆ ಮತ್ತು ಆದರ್ಶಕ್ಕಾಗಿ ಸಂಘರ್ಷ ನಡೆಸಿದರು. ಬಹುಮಟ್ಟಿಗೆ, ಸಾಮಾಜಿಕವಾಗಿ ಅವಕಾಶ ವಂಚಿತರ ವ್ಯವಸ್ಥೆಗೆ ತಳಹದಿಯನ್ನು ನಿರ್ಮಿಸಿದರು.

## ಸಂವಿಧಾನದ ಪ್ರಧಾನ ಶಿಲ್ಪಿಯಾಗಿ ಡಾ. ಬಿ.ಆರ್ ಅಂಬೇಡ್ಕರ್

ರಾಷ್ಟ್ರೀಯ ಧುರೀಣರಾಗಿ, ನ್ಯಾಯಶಾಸ್ತ್ರ ವಿಶಾರದರಾಗಿ, ಸಂವಿಧಾನ ತಜ್ಞರಾಗಿ ಮತ್ತು ಸಂಸದರಾಗಿ ಬೆಳಗುತ್ತಿದ್ದ ಡಾ. ಅಂಬೇಡ್ಕರ್ ಅವರನ್ನು ಮೊದಲು ಬಂಗಾಲ ವಿಧಾನ ಸಭೆಯಿಂದ, ಆ ತರುವಾಯ ಮುಂಬಯಿ ವಿಧಾನಸಭೆಯಿಂದ ಸಂವಿಧಾನ ರಚನಾ ಸಮಿತಿಗೆ ಚುನಾಯಿಸಿದಾಗ ಅವರನ್ನು 1947ರ ಆಗಸ್ಟ್ 27ರಂದು ಕರಡು ಸಮಿತಿಗೆ ನೇಮಿಸಲಾಯಿತು. ಆಮೇಲೆ ಅಧ್ಯಕ್ಷರಾಗಿ ನೇಮಿಸಲಾಯಿತು. ಸದಸ್ಯತ್ವ ಮತ್ತು ಅಧ್ಯಕ್ಷ ಪದವಿ ಇವೆರಡೂ ಡಾ. ಬಿ. ಆರ್. ಅಂಬೇಡ್ಕರ್‌ರವರಿಗೆ ಅಚ್ಚರಿಯ ಮತ್ತು ಆನಂದದ ಸಂಗತಿಗಳಾಗಿದ್ದವು. ಈ ಕುರಿತು ತಮ್ಮ ಭಾವನೆಯನ್ನು ಸಭೆಯಲ್ಲಿ ಅವರು ನೀಡಿದ ಭಾಷಣದಲ್ಲಿ ಹೀಗೆ ವ್ಯಕ್ತಗೊಳಿಸಿದ್ದುಂಟು.

ಅದರಂತೆ – "ಸಂವಿಧಾನ ಸಭೆಗೆ ಬರುವಾಗ, ಪರಿಶಿಷ್ಟ ಜಾತಿಗಳವರ ಹಿತರಕ್ಷಣೆಯ ಹೊರತಾಗಿ, ಯಾವುದೇ ಆಸೆ ಆಕಾಂಕ್ಷೆಗಳನ್ನು ಅರಸಿ ಬಂದವನಲ್ಲ ನಾನು. ಇದಕ್ಕಿಂತ ಅಧಿಕ ಜವಾಬ್ದಾರಿಯುತ ಕಾರ್ಯಗಳನ್ನು ನಾನು ನಿರ್ವಹಿಸುವ, ಹೊಣೆ ಹೊರುವ ಪ್ರಸಂಗ ಬರಬಹುದೆಂದು ನಾನು ಎಣಿಸಿರಲಿಲ್ಲ. ಆದ ಕಾರಣವೇ ನನ್ನನ್ನು ಕರಡು ರಚನಾ ಸಮಿತಿಗೆ ಆಹ್ವಾನಿಸಿದಾಗ ನನಗೆ ಅತ್ಯಂತ ಆಶ್ಚರ್ಯವಾದದ್ದು, ಕರಡು ಸಮಿತಿಯು ನನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದಾಗಲಂತೂ ಇನ್ನಷ್ಟು ಆಶ್ಚರ್ಯವಾಯಿತು. ಕರಡು ರಚನಾ ಸಮಿತಿಯಲ್ಲಿ ನನಗಿಂತಲೂ ಎಷ್ಟೋ ಪಟ್ಟು ಸಮರ್ಥರಾದವರೂ ಇದ್ದರು".

ಡಾ. ಬಿ. ಆರ್. ಅಂಬೇಡ್ಕರ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕರಡು ರಚನಾ ಸಮಿತಿಯು 1947ರ ಆಗಸ್ಟ್ 30ನೇ ತಾರೀಖಿಗೆ ತನ್ನ ಮೊದಲ ಅಧಿವೇಶನವನ್ನು ಜರುಗಿಸಿತು. ಡಾ. ಅಂಬೇಡ್ಕರ್ ಮತ್ತು ಅವರ ತಜ್ಞರ ತಂಡವು ಒಟ್ಟು 141 ದಿವಸ ಅಧಿವೇಶನ ನಡೆಸಿತು.

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

ಸಂವಿಧಾನದ ಕರಡನ್ನು ರೂಪಿಸಿತು. ಈ ಅಧಿವೇಶನಗಳ ಪೈಕಿ ಅಧಿಕಾಂಶ ಅಧಿವೇಶನಗಳಲ್ಲಿ ಡಾ. ಅಂಬೇಡ್ಕರ್ ಅವರು ಜಂಟಿಯಾಗಿಯೇ ಕೆಲಸ ಮಾಡಬೇಕಾಗುತ್ತಿತ್ತು. ಡಾ. ಅಂಬೇಡ್ಕರ್ ಅರ್ಥಶಾಸ್ತ್ರ ಪ್ರವೀಣರು, ಕಾನೂನು ಪಂಡಿತರು, ಹಾಗೆಯೇ ಸಮಾಜಶಾಸ್ತ್ರಜ್ಞರೂ ಕೂಡ ಹೀಗಾಗಿ, ಸಂವಿಧಾನ ಎಂದರೆ ಕಾನೂನು ದಸ್ತಾವೇಜು ಮಾತ್ರವಲ್ಲದೇ ಕೋಟ್ಯಾಂತರ ಜನರ ಆಶೋತ್ತರಗಳನ್ನು, ಕಷ್ಟಕಾರ್ಪಣ್ಯಗಳನ್ನು ಗಮನಿಸಿ ಅವರ ಒತ್ತಾಸೆಗಳನ್ನು ಅಗತ್ಯಗಳನ್ನು ಪ್ರತಿಬಿಂಬಿಸತಕ್ಕ ಸಾಮಾಜಿಕ ಹಾಗೂ ಆರ್ಥಿಕ ದಾಖಲೆ ವಿಶೇಷ ಎಂದು ಅವರು ಚೆನ್ನಾಗಿ ಅರಿತವರಾಗಿದ್ದರು. ಅವರು ಪ್ರಜಾತಂತ್ರದ ಉತ್ಕಟ ಅಭಿಮಾನಿಗಳಾಗಿದ್ದರಿಂದ, ಭಾರತ ಗಣರಾಜ್ಯಕ್ಕೆ ಒಂದು ಸಂಸದೀಯ ಸ್ವರೂಪದ ಸಂವಿಧಾನವನ್ನು ರೂಪಿಸುವಲ್ಲಿ ತಮ್ಮ ಪ್ರಭಾವವನ್ನು ಬೀರಿದರು. ಅವರೊಬ್ಬರನ್ನೇ ಸಂವಿಧಾನದ ಮುಖ್ಯಶಿಲ್ಪಿ ಎಂದು ಕರೆಯಬೇಕು ಎಂಬ ಬಗ್ಗೆ ಶ್ರೀ ಟಿ. ಟಿ. ಕೃಷ್ಣಮಾಚಾರಿ ಕೆಳಕಂಡಂತೆ ವಿವರಣೆ ನೀಡಿದ್ದಾರೆ.

"ಸದನಕ್ಕೆ ಗೊತ್ತಿರುವಂತೆ, ತಾವು ನಾಮಕರಣ ಮಾಡಿದ್ದ 7 ಸದಸ್ಯರ ಪೈಕಿ ಒಬ್ಬರು ರಾಜೀನಾಮೆ ಸಲ್ಲಿಸಿದ್ದರು. ಅವರ ಸ್ಥಾನದಲ್ಲಿ ಇನ್ನೊಬ್ಬರನ್ನು ನೇಮಿಸಲಾಯಿತು. ಒಬ್ಬರು ತೀರಿಹೋದರು. ಆದರೆ ಅವರ ಸ್ಥಳದಲ್ಲಿ ಯಾರನ್ನೂ ನೇಮಿಸಲಿಲ್ಲ. ಒಬ್ಬರು ದೂರದ ಅಮೇರಿಕಾದಲ್ಲಿದ್ದರು. ಅವರು ತೆರವುಗೊಳಿಸಿದ ಸ್ಥಾನವನ್ನು ಸಹ ತುಂಬಲಿಲ್ಲ, ಇನ್ನೊಬ್ಬರು ರಾಜ್ಯದ ವ್ಯವಹಾರಗಳಲ್ಲಿ ತೊಡಗಿದ್ದರು. ಹಾಗೆ, ಆಸ್ಥಾನವೂ ತೆರವಾಗಿತ್ತು. ಒಬ್ಬೊಬ್ಬರು ದೆಹಲಿಯಿಂದ ದೂರದ ಸ್ಥಳಗಳಲ್ಲಿ ವಾಸ ಮಾಡುತ್ತಿದ್ದರು. ಅನಾರೋಗ್ಯದ ಕಾರಣಕ್ಕಾಗಿಯೇ ಏನೋ ಅವರಿಗೂ ಸಭೆಗಳಿಗೆ ಹಾಜರಾಗುವುದು ಸಾಧ್ಯವಾಗಲಿಲ್ಲ. ಆಖೈರಿನಲ್ಲೆ, ಸಂವಿಧಾನದ ಕರಡು ತಯಾರಿಸುವ ಗುರುತರ ಹೊಣೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ಒಬ್ಬರೇ ಅನಿವಾರ್ಯವಾಗಿ ವಹಿಸಬೇಕಾಯಿತು. ಮತ್ತು ಈ ಮಹತ್ಕಾರ್ಯವನ್ನು ನಿಸ್ಸಂದೇಹವಾಗಿಯೂ ಪ್ರಶಂಸಾರ್ಹ ರೀತಿಯಲ್ಲಿ ಪೂರೈಸಿದ್ದಕ್ಕಾಗಿ ನಾವೆಲ್ಲರೂ, ಡಾ. ಅಂಬೇಡ್ಕರ್‌ರವರಿಗೆ ಕೃತಜ್ಞರಾಗಿರ ಬೇಕೆಂಬ ಬಗ್ಗೆ ಸಂದೇಹಕ್ಕೆ ಎಡೆಯಿಲ್ಲ ಎಂಬುದು ನನ್ನ ಅನಿಸಿಕೆ"ಎಂದರು.

ಸಂವಿಧಾನ ಕರಡು ರಚನಾ ಸಮಿತಿಯು ರೂಪಿಸಿದ ಸಂವಿಧಾನದ ಕರಡನ್ನು, ಡಾ. ಅಂಬೇಡ್ಕರ್‌ರವರು 1948ರ ನವೆಂಬರ್ 4ನೇ ತಾರೀಖು ಸಂವಿಧಾನದ ಸಭೆಯಲ್ಲಿ ಮಂಡಿಸಿದರು. ಆ ತರುವಾಯ, ಕರಡು ಸಂವಿಧಾನದ ಮುಖ್ಯ ಅಂಶಗಳ ಮೇಲೆ ಬೆಳಕು ಚೆಲ್ಲುತ್ತ, ಸ್ಪಷ್ಟವಾದ, ಸವಿಸ್ತಾರವಾದ ಭಾಷಣ ಮಾಡಿದರು.

"ಈ ಕರಡು ರಚನಾ ಸಮಿತಿಯು ಆಖೈರುಗೊಳಿಸಿದ ಈ ಸಂವಿಧಾನವು ಅನುಷ್ಠಾನ ಸಾಧ್ಯವಾದ ಸಂವಿಧಾನ. ಪರಿಸ್ಥಿತಿಗಳು ಬದಲಾದಂತೆ, ಬದಲಾಯಿಸಬಹುದಾದಂಥ ಸಂವಿಧಾನ, ಶಾಂತಿಯ ಕಾಲದಲ್ಲೂ, ಸಮರದ ಸಮಯದಲ್ಲೂ ರಾಷ್ಟ್ರವನ್ನು ಪರಿರಕ್ಷಿಸಬಲ್ಲ ಶಕ್ತಿಯುತ ಸಂವಿಧಾನ. ಹಾಗೆ, ಹೊಸ ಸಂವಿಧಾನದ ಅಡಿಯಲ್ಲಿ, ಏನಾದರೂ ಕೇಡು ಒದಗಿದರೆ, ಅದಕ್ಕೆ ಈ ಸಂವಿಧಾನವು ಕಾರಣ ಎಂದು ಹೇಳುವಂತಿಲ್ಲ, ನಮ್ಮಲ್ಲೇ ಇರುವ ಯಾವುದೇ ಒಂದು ದೋಷದ ಕಾರಣ ಎಂದು ಹೇಳಬಹುದು. ಇದು ನನ್ನ ಅನಿಸಿಕೆ".

ಸದಸ್ಯರೆಲ್ಲರೂ, ಒಬ್ಬರ ಅನಂತರ ಒಬ್ಬರಾಗಿ ಅಧ್ಯಕ್ಷ ಡಾ. ಅಂಬೇಡ್ಕರ್‌ರವರನ್ನು ಕರಡು ರಚನಾ ಸಮಿತಿಯ ಸದಸ್ಯರನ್ನೂ ಅವರೆಲ್ಲರೂ ಪೂರೈಸಿದ ಮಹತ್ಕಾರ್ಯದ ನಿಮಿತ್ತ ಪ್ರಶಂಸಿದರು. ತಮ್ಮ ಮೆಚ್ಚುಗೆಯನ್ನು ದಾಖಲಿಸಿದರು. ಮುಖ್ಯವಾಗಿ ಡಾ. ಅಂಬೇಡ್ಕರ್‌ರವರು, ಸಂವಿಧಾನವನ್ನು ಪರಿಚಯಿಸುತ್ತಾ ನೀಡಿದ ಪ್ರಾಸ್ತಾವಿಕ ಭಾಷಣ ವಾಗ್ವೈಖರಿಗೆ ಮನಸೋತ ಸಕಲರೂ ತಮ್ಮ ಅಮಿತಾನಂದವನ್ನು ವ್ಯಕ್ತಗೊಳಿಸಿದರು. ಸಂವಿಧಾನ ಸಮಿತಿಯ ಸಭೆಗಳು ವರ್ಷದುದ್ದಕ್ಕೂ ನಡೆದವು. ಡಾ. ಅಂಬೇಡ್ಕರ್ ಚರ್ಚೆಗಳ ಪ್ರತಿ ಹಂತದಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಚರ್ಚಾ ಅವಧಿಯಲ್ಲಿ ತಿದ್ದುಪಡಿಗಳನ್ನು ಸೂಚಿಸಲಾಗುತ್ತಿತ್ತು. ವಿಚಾರ ವಿಮರ್ಶೆ ನಡೆಯುತ್ತಿತ್ತು. ಡಾ. ಅಂಬೇಡ್ಕರ್‌ರವರು ಕರಡು ಸಂವಿಧಾನವನ್ನು ಸಮರ್ಥಿಸುತ್ತ, ಮನದಟ್ಟಾಗುವಂಥ ತರ್ಕ ಸಂಗತವಾದ ವಾದಗಳನ್ನು ಸಾದರಪಡಿಸುತ್ತಿದ್ದರು. ಕರಡು ರಚನಾ ಸಮಿತಿಯು ರೂಪಿಸಿದ ಕರಡು ಸಂವಿಧಾನವು ಯಾವುದೇ ಮುಖ್ಯ ತಿದ್ದುಪಡಿಗಳಿಲ್ಲದೆಯೇ ಸಂವಿಧಾನ ಸಭೆಯ ಅಂಗೀಕಾರ ಪಡೆಯಿತು. ಆ ಸಂಬಂಧವಾದ ಸಂಪೂರ್ಣ ಕೀರ್ತಿಯು ಕರಡು ರಚನಾ ಸಮಿತಿಯ ಅಧ್ಯಕ್ಷರಾದ ಬಾಬಾ ಸಾಹೇಬ್ ರವರಿಗೆ ಸಲ್ಲಬೇಕು ಎಂಬ ಅಭಿಪ್ರಾಯದಲ್ಲಿ ಎರಡು ಮಾತಿಲ್ಲ.

ಸಂವಿಧಾನ ಸಭೆಯು ಸಂವಿಧಾನವನ್ನು ಅಂಗೀಕರಿಸಿದ ದಿವಸಕ್ಕೆ ಮುಂಚಿನ ದಿವಸ, ಡಾ. ಅಂಬೇಡ್ಕರ್‌ರವರು ಸಂವಿಧಾನವನ್ನು ರೂಪಿಸುವಲ್ಲಿ ಅವರು ನೀಡಿದ ಕೊಡುಗೆಯ ಬಗ್ಗೆ, ಸದಸ್ಯರು ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತ, ಅವರನ್ನು ಕುರಿತು ಮಿಂಚುನುಡಿಗಳಲ್ಲಿ ತಮ್ಮ ಪ್ರಶಂಸೆಯನ್ನು ದಾಖಲಿಸಿದರು.

ಸಂವಿಧಾನ ಸಭೆಯ ಅಧ್ಯಕ್ಷರಾಗಿದ್ದ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು, ಸಂವಿಧಾನದ ಪಿತನನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಕೆಳಕಂಡಂತೆ ವ್ಯಕ್ತಪಡಿಸಿದ್ದಾರೆ.

"ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡು ಅನುದಿನದ ವ್ಯವಹರಣೆಗಳನ್ನು ವೀಕ್ಷಿಸುತ್ತ, ನನ್ನ ಮನಸ್ಸಿನಲ್ಲಿ ಒಂದು ವಿಚಾರವು ದಟ್ಟವಾಗಿ ಬೇರೂರಿತು. ಕರಡು ರಚನಾ ಸಮಿತಿಯ ಸದಸ್ಯರೂ, ಮುಖ್ಯವಾಗಿ ಅಧ್ಯಕ್ಷರಾದ ಡಾ. ಅಂಬೇಡ್ಕರ್ ತಮ್ಮ ಆರೋಗ್ಯವು ಅಷ್ಟೊಂದು ತೃಪ್ತಿಕರವಾಗಿಲ್ಲದಿದ್ದರೂ, ಯಾವ ಉತ್ಸಾಹದಿಂದ, ಯಾವ ನಿಷ್ಠೆಯಿಂದ ಕೆಲಸ ಮಾಡಿದರೋ, ಆ ರೀತಿ ಇನ್ನಾರಾದರೂ ಮಾಡುವುದು ಸಾಧ್ಯವಿರಲಿಲ್ಲ. ಡಾ. ಅಂಬೇಡ್ಕರ್‌ರವರನ್ನು ಕರೆದು ರಚನಾ ಸಮಿತಿಯ ಸದಸ್ಯರನ್ನಾಗಿ ಮತ್ತು ಆ ತರುವಾಯ ಅಧ್ಯಕ್ಷರನ್ನಾಗಿ ನಾವು ನೇಮಿಸುವಲ್ಲಿ ಕೈಗೊಂಡ ನಿರ್ಣಯವು ಯಥೋಚಿತವೂ, ಫಲಪ್ರದವೂ ಆಯಿತೆಂದು ನನಗನಿಸುತ್ತದೆ. ಡಾ. ಅಂಬೇಡ್ಕರ್‌ರವರು ನಮ್ಮ ಆಯ್ಕೆಗೆ ಶೋಭೆ ತರುವಂತೆ, ಗೌರವ ಬರುವಂತೆ, ತಮಗೆ ಒಪ್ಪಿಸಿದ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಮಾತ್ರವಲ್ಲದೆ, ತಮ್ಮ ಸಾಧನೆಯು ಬೆಳಗುವಂತೆಯೂ ಮಾಡಿದ್ದಾರೆ". ಎಂದು ಪ್ರಶಂಸಿಸಿದ್ದಾರೆ.

ಸಂವಿಧಾನದ ಕರಡನ್ನು ರೂಪಿಸುವ ಮತ್ತು ಆಖೈರಾಗಿ ತೀರ್ಣಗೊಳ್ಳುವ ತನಕ ಅದನ್ನು ಮುನ್ನಡೆಸಿಕೊಂಡು ಹೋಗುವ ಪ್ರಚೇದ ಕಾರ್ಯದಲ್ಲಿ ಡಾ. ಅಂಬೇಡ್ಕರ್ ವಹಿಸಿರುವ ಪಾತ್ರವನ್ನು ಪ್ರಶಂಸಿಸುತ್ತ, ಕರಡು ರಚನಾ ಸಮಿತಿಯ ಇನ್ನೋರ್ವ ಸದಸ್ಯರಾಗಿದ್ದ ಡಾ. ಪಟ್ಟಾಭಿ ಸೀತಾರಾಮಯ್ಯರವರು ಹೀಗೆ ನುಡಿದಿದ್ದಾರೆ.

"ಈ ಒಂದು ಮಹಾನ್ ಕಾರ್ಯಕ್ಕೆ ಅವರು ತಮ್ಮ ಪ್ರಚಂಡ ಬುದ್ಧಿ ಸಾಮರ್ಥ್ಯದ ಬೆಂಬಲವನ್ನು ಕೊಟ್ಟರು. ಅದೆಂಥ ಬುದ್ಧಿಮತ್ತೆ, ಪ್ರತಿರೋಧಿಸಲಾರದ, ದುರ್ದಮ್ಯವಾದ, ಅಜೇಯವಾದ ಮತ್ತು ತನ್ನ ವಿರುದ್ಧವಾಗಿ ಬರತಕ್ಕ ಎಲ್ಲವನ್ನು ನೆಲಸಮಗೊಳಿಸುವ ಸಾಮರ್ಥ್ಯವುಳ್ಳ ಬುದ್ಧಿ ಮತ್ತೆ....... ಪರಿಣಾಮಗಳ ಪರಿಮೆಯಿಲ್ಲದೆ ತಾನು ಸರಿಯೆನಿಸಿದ್ದನ್ನು ದೃಢ ಸಂಕಲ್ಪದಿಂದ ಸಮರ್ಥಿಸಬಲ್ಲ ಧೀಮಂತಿಕೆ" ಎಂದು ಗುಣಗಾನ ಮಾಡಿರುವುದು ಡಾ. ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನ ರಚನೆಯಲ್ಲಿ ತೊಡಗಿರುವ ಮುಖ್ಯ ಪಾತ್ರವನ್ನು ಒತ್ತಿ ಒತ್ತಿ ಹೇಳುತ್ತವೆ. ಹಾಗಾಗಿ ಇವರನ್ನು ಸಂವಿಧಾನದ ಮುಖ್ಯ ಶಿಲ್ಪಿಯಾಗಿ ಕರೆಯುವುದರಲ್ಲಿ ಯಾವ ರೀತಿಯಲ್ಲಿಯೂ ಸಂದೇಹ ಪಡುವ ಅವಶ್ಯಕತೆಯಿಲ್ಲ.

ISSN : 2249-2429 ಶಿಕ್ಷಣ ತಜ್ಞರು RNI REG.NO.KARKAN/2011/38712

## ಶಿಕ್ಷಣ ಚಿಂತಕರಾಗಿ ಡಾ. ಬಿ. ಆರ್. ಅಂಬೇಡ್ಕರ್

ಭಾರತದಲ್ಲಿರುವ "ಅಸ್ಪೃಶ್ಯರಿಗೆ" ಮೂಲ ಶಿಕ್ಷಣದ ಪ್ರಯೋಜನವನ್ನು ನಿರಾಕರಿಸಲಾಗಿತ್ತು ಎಂಬುದು ವಾಸ್ತವ ಸಂಗತಿ. ಜೀವನದಲ್ಲಿ ಶಿಕ್ಷಣದ ಮಹತ್ವವನ್ನು ಮನಗಂಡಿರುವ ಡಾ. ಅಂಬೇಡ್ಕರ್, ತಮ್ಮ ಮಕ್ಕಳಿಗೆ ಶಿಕ್ಷಣದ ಅನುಕೂಲಗಳನ್ನು ಒದಗಿಸಿಕೊಡುವಂತೆ ತಮ್ಮ ಅನುಯಾಯಿಗಳನ್ನು ಕಳಕಳಿಯಿಂದ ಕೋರಿದರು. ಅವರ ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಹೀಗೆ, ಇವರು ತಮ್ಮ ತ್ರಿವಿಧಕ್ರಿಯಾ ಘೋಷಣೆಯಲ್ಲಿ ಶಿಕ್ಷಣಕ್ಕೆ ಅಗ್ರಪೂಜೆ. "ಅಧ್ಯಯನ, ಸಂಘಟನೆ, ಹೋರಾಟ" – ಇವೇ ಅವರ ಆಂದೋಲನದ ತಾರಕಮಂತ್ರವಾಗಿದ್ದವು.

ಅಸ್ಪೃಶ್ಯ ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಲು, ಡಾ. ಅಂಬೇಡ್ಕರ್‌ರವರು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿನಿಲಯಗಳ ನಿವಾಸಿಗಳಿಗೆ ಉಚಿತ ಪುಸ್ತಕಗಳ ಮತ್ತು ಬಟ್ಟೆಬರೆಗಳ ವ್ಯವಸ್ಥೆ ಮಾಡಿದರು. ಇಂಥಹ ನಿಲಯಗಳು ಈ ಜಾತಿಗಳ ವಿದ್ಯಾರ್ಥಿಗಳಲ್ಲಿ ಪ್ರಾಥಮಿಕ ಮತ್ತು ಹೈಸ್ಕೂಲ್ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವಲ್ಲಿ ನೆರವಾದರು.

1945–46 ರಲ್ಲಿ ಡಾ. ಅಂಬೇಡ್ಕರ್ ರವರು ತಮ್ಮದೇ ಆದ ಜನತಾ ವಿದ್ಯಾಸಂಸ್ಥೆ (ಪೀಪಲ್ಸ್ ಎಜುಕೇಷನ್ ಸೊಸೈಟಿ)ಯನ್ನು ಸ್ಥಾಪಿಸಿದರು. ಅಲ್ಲದೆ ಆಗ ಅವರು ವೈಸರಾಯ್ ರವರ ಕಾರ್ಯಕಾರಿ ಕೌನ್ಸಿಲ್ ಮೆಂಬರ್ ಆಗಿದ್ದರಿಂದ ಮೂರು ಲಕ್ಷ ರೂಪಾಯಿಗಳ ಉದಾರ ಅನುದಾನವನ್ನು ಮತ್ತು ಅಷ್ಟೇ ಮೊತ್ತದ ಬಡ್ಡಿರಹಿತ ಸಾಲವನ್ನು ಸರ್ಕಾರದಿಂದ ಪಡೆದುಕೊಳ್ಳಲು ಸಾಧ್ಯವಾಗಿ ತಾವು ಸ್ಥಾಪಿಸಿದ ಸೋಸೈಟಿಯಡಿಯಲ್ಲಿ "ಸಿದ್ಧಾರ್ಥ ಕಾಲೇಜ್ ಆಫ್ ಆರ್ಟ್ಸ್ ಅಂಡ್ ಸೈನ್ಸ್" ಎಂಬ ಪ್ರಥಮ ಕಾಲೇಜನ್ನು ಮುಂಬಯಿಯಲ್ಲಿ ಸ್ಥಾಪಿಸಿದರು.

ಡಾ. ಅಂಬೇಡ್ಕರ್‌ರವರಿಗೆ ಬೋಧನೆಯಲ್ಲಿ ತೀವ್ರ ಆಸಕ್ತಿಯಿತ್ತು. ಅವರು ಮುಂಬಯಿಯ ಸಿಡನ್ ಹ್ಯಾಮ್ ಕಾಲೇಜ್ ಆಫ್ ಕಾಮರ್ಸ್ ಮತ್ತು ಸರ್ಕಾರಿ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು ಹಾಗೂ ಕೆಲವು ವರ್ಷಗಳ ನಂತರ ಪ್ರಿನ್ಸಿಪಾಲರಾಗಿಯೂ ದುಡಿದರು. ಉತ್ತಮ ಪಾಂಡಿತ್ಯಪೂರ್ಣವಾದ ತಮ್ಮ ಪಾಠ ಮತ್ತು ಬೋಧನೆಯಿಂದ ವಿದ್ಯಾರ್ಥಿಗಳ ಅಪಾರ ಮೆಚ್ಚುಗೆಯನ್ನು ಗಳಿಸಿಕೊಂಡಿದ್ದರು. ಸಂವಿಧಾನದ ಮೂಲಕ ಎಲ್ಲಾ ವರ್ಗದ ಮಕ್ಕಳಿಗೆ ಯಾವುದೇ ಬೇಧ – ಭಾವವಿಲ್ಲದೆ ಶಿಕ್ಷಣ ದೊರಕಿಸಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವುದು ಅವರಲ್ಲಿರುವ ಶೈಕ್ಷಣಿಕ ಚಿಂತನೆಯನ್ನು ತೋರಿಸಿಕೊಡುತ್ತದೆ.

ಭಾರತದ ಈ ಸುಪುತ್ರನು 1956ರ ಡಿಸೆಂಬರ್ 6ನೇ ತಾರೀಖು ಮಹಾನಿರ್ವಾಣವನ್ನು ಪಡೆದರು. ಆಧುನಿಕ ಭಾರತದ ಭವ್ಯ ಬುನಾದಿಯನ್ನು ಸ್ಥಾಪಿಸಲು ನೆರವಾದ ಈ ಅಪೂರ್ವ ಹಾಗೂ ಮಹಾನ್ ಚೇತನ ಹಠಾತ್ ನಿಧನದ ವಾರ್ತೆಯನ್ನು ಕೇಳಿ ಇಡೀ ದೇಶವೇ ದುಃಖಸಂತಪ್ತವಾಯಿತು. ಸಂಸತ್ತಿನಲ್ಲಿ ರಾಜ್ಯ ವಿಧಾನ ಸಭೆಗಳಲ್ಲಿ, ಪತ್ರಿಕೆಗಳಲ್ಲಿ – ಎಲ್ಲೆಲ್ಲೂ ದೇಶ ವಿದೇಶಗಳಲ್ಲಿ ಮಿಲಿಯಾಂತರ ಅನುಯಾಯಿಗಳು, ಅಭಿಮಾನಿಗಳು ಅಗಲಿದ ಮಹಾನ್ ಚೇತನವನ್ನು ಸ್ಮರಿಸಿ ಸಂತಾಪ ಸೂಚಿಸಿದರು. ಅವರು ರಾಷ್ಟ್ರಕ್ಕೆ ನೀಡಿದ ಅಪಾರ, ಅಸಾಧಾರಣ ಕೊಡುಗೆಯನ್ನು ಗುರುತಿಸಿ ಭಾರತ ಸರ್ಕಾರವು ದೇಶದ ಅತ್ಯುನ್ನತ ನಾಗರೀಕ ಗೌರವ ಪ್ರಶಸ್ತಿಯಾದ "ಭಾರತ ರತ್ನ"ವನ್ನು ಮರಣೋತ್ತರವಾಗಿ ಪ್ರಧಾನಮಾಡಿ ಗೌರವಿಸಿತು. ಇದಲ್ಲದೆ ಅವರ ಜನ್ಮಶತಾಬ್ಧಿ ವರ್ಷವನ್ನು "ಸಾಮಾಜಿಕ ನ್ಯಾಯದ ವರ್ಷ"ವೆಂದು ಕೂಡಾ ಆಚರಿಸಲಾಯಿತು.

ಅವರು ನಿರ್ವಹಿಸಿದ ಮಹತ್ವಪೂರ್ಣ ಪಾತ್ರವನ್ನು ಕುರಿತು ಶ್ಲಾಘಿಸಿದ ಅಂದಿನ ಪ್ರಧಾನಮಂತ್ರಿಯಾಗಿದ್ದ ಜವಾಹರಲಾಲ್ ನೆಹರುರವರು "ಡಾ. ಅಂಬೇಡ್ಕರ್‌ರವರನ್ನು ಸಂಸತ್ತಿನಲ್ಲಿ ನಾವು ಅನೇಕ ವಿಚಾರಗಳಿಗಾಗಿ ಸ್ಮರಿಸುವುದುಂಟು. ಮುಖ್ಯವಾಗಿ ಸಂವಿಧಾನದ ರಚನೆಯಲ್ಲಿ ಅವರು ವಹಿಸಿದ ಪ್ರಧಾನ ಪಾತ್ರಕ್ಕಾಗಿ. ಆ ಸಂಗತಿಯೇ, ಅವರ ಕೈಗೊಂಡ ಇತರ ಅನೇಕ ಕಾರ್ಯ ಚಟುವಟಿಕೆಗಳಿಗೂ ಮಿಗಿಲಾಗಿ, ಬಹು ಕಾಲದವರೆಗೂ ನಮ್ಮ ಸರಣಿಯಲ್ಲಿ ಜೀವಂತವಾಗಿ ಉಳಿಯುತ್ತಾರೆ" ಎಂದು ಹೇಳಿರುವುದು ಡಾ. ಬಿ. ಆರ್. ಅಂಬೇಡ್ಕರ್ ರವರ ಪ್ರಮುಖ ಪಾತ್ರ ಮತ್ತು ಅವರ ಅಪಾರ ಸಾಧನೆಯನ್ನು ಸೂಚಿಸುತ್ತದೆ.

ಒಟ್ಟಾರೆಯಾಗಿ ಡಾ. ಅಂಬೇಡ್ಕರ್‌ರವರು ಒಂದು ದೊಡ್ಡ ಯಶೋಗಾಥೆಯ ಪ್ರತೀಕ. ಭಾರತದಲ್ಲಿ ಅತ್ಯಂತ ದೀನ ವ್ಯಕ್ತಿಯೂ ಸಹ ಅತ್ಯುನ್ನತ ಸ್ಥಾನಕ್ಕೆ ಏರಬಲ್ಲವೆಂಬುದಕ್ಕೆ ಅವರ ಬದುಕು ಒಂದು ನಿದರ್ಶನ. ಇದಕ್ಕಾಗಿ ಅವರನ್ನು ಶತಮಾನಗಳುರುಳಿದರೂ ದೇಶ ತುಂಬಾ ಕೃತಜ್ಞತೆಯಿಂದ ಸ್ಮರಿಸುತ್ತದೆ.

## ಪರಾಮರ್ಶನ ಗ್ರಂಥಗಳು


- **ಪ್ರತಿಭಾವಂತ ಸಂಸದೀಯ ಪಟುಗಳ ಬದುಕು – ಬರಹ ಮಾಲಿಕೆ (1991):** ನವದೆಹಲಿ ಲೋಕಸಭಾ ಸಚಿವಾಲಯ, .
- **ಪ್ರೊ. ಎಲ್ ಎಸ್ ಶೇಷಗಿರಿರಾವ್ :** ಬಿ.ಆರ್ ಅಂಬೇಡ್ಕರ್
- **ದೇ. ಜವರೇಗೌಡ :** ಕ್ರಾಂತಿಕಾರ ಡಾ. ಅಂಬೇಡ್ಕರ್
- **ಜೆ. ಸು. ನ, ಅಂಬೇಡ್ಕರ್ ಮಹಾಶಯ :** ಐ.ಬಿ.ಹೆಚ್ ಪ್ರಕಾಶನ.
- **Bholay Bhaskar Laxman (2001) :** Dr. Baba Saheb Ambedkar: Anubhav Ani Athavani. Nagpur: Sahitya Akademi.
- **Ahir D. C. :** The Legacy of Dr. Ambedkar. Delhi: B. R. Publishing. ISBN 81-7018-603-X.
- **Gautam C. (May 2000):** Life of Babasaheb Ambedkar (Second ed.). London: Ambedkar Memorial Trust.


■■

ವಿದ್ಯಾನಿಧಿ ಪ್ರಕಾಶನ ®
ಶ್ರೀ ಶಿವಕುಮಾರ ಏಜನ್ಸಿ®
ಶೈಕ್ಷಣಿಕ ಪುಸ್ತಕಗಳ ಪ್ರಕಾಶಕರು ಮತ್ತು ಮಾರಾಟಗಾರರು
ಸ್ಟೇಶನ್ ರೋಡ ಮತ್ತು 'ನನಸು' ಜೆ. ಟಿ. ಮಠ ರೋಡ, ಗದಗ.
ದೂರವಾಣಿ : 08372–200527
e-mail : vidyanidhiprakashana@gmail.com.
www. vidyanidhionline.com

**SHIKSHAN SOUDAH** *Kannada Quarterly* Printer, Publisher, Editor and Owned by : **Jayadev Mailarappa Menasagi** Resi. : Okkalageri Oni, GADAG-582101, Tq. Gadag, Dist.: Gadag. Karnataka State Printed at **Maima Akshara Mudrana,** S.P. Gadag Compound, J.T.Math Road, GADAG 582101, Tq. Gadag, Dist.:Gadag. Karnataka State Phone: 08372-200527, email : shikshansoudha@gmail.com.